Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ವಸ್ತುಪ್ರತಿ ಕ್ರಮಸಂಖ್ಯೆ Accession No.............
ದಿನಾಂಕ Date.................................

Date of Issue: 25-5-1957.

THE MYSORE LEGISLATIVE ASSEMBLY DEBATES

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವಿಷ್ಟಿ ಕ್ರಮಾಂಕ Accession No. 4738
ದಿನಾಂಕ Date........

OFFICIAL REPORT

OF THE

PROCEEDINGS OF THE FOURTH DAY

OF THE

SECOND SESSION

FRIDAY, 22ND MARCH 1957

Vol. II—No. 4

CONTENTS

	Pages
Questions and Answers—213, 215, 234, 292, 239, 240, 262, 245, 191, 241, 289, 172	165—179
Questions for Answers on the day but not taken up—89, 250, 282, 284, 302	179—182
Paper laid on the Table—	
Notification dated 12th February 1957 issued under Mysore Motor Vehicles (Taxation and Tolls) Act, 1951 ;	182
Rules under Section 14 of the Mysore Legislature Salaries Ordinance, 1956—	
(i) The Mysore Legislature Salaries of Members Rules, 1956 ;	183
(ii) The Rule regarding members election to have fully furnished accommodation at the place of meeting ; ...	183
(iii) The Rule regarding the disbursement of travelling and daily allowances to Members of Legislature at the close of each session	183
Members' Representation	183
Budget for 1957-58 Demands for grants "on Account" from 1st April to 31st July 1957 (Discussion not concluded.) ...	183—215

BANGALORE :
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1957

Price: Re. 0—4—0

QUESTIONS AND ANSWERS.

Q. No.	Subject
213	Benni Nala Bridge between Hubli and Shiraguppa Village.
215	Proposal to take up the construction of a Road connecting Dharwar, Raichur and Bellary Districts.
234	Feeding of Budanoor Tank with water from Cauvery river or from Channels running nearby.
292	Estimates for the construction of Feeder Channel in Sothehalla.
239	Estimates for the supply of Power to the Electric Pumps at Yanagalli in Chamarajanagar Taluk.
240	Iron Poles provided for supply of Power to Ummattoor in Chamarajanagar Taluk.
262	Reorganisation of the Educational System in the State.
245	Marketing Committee for Belgaum Taluk.
191	Police Bandobust in Belgaum, Khanapur and Nipani Taluks of Belgaum District.
241	Drinking Water to the Peenya Village in Bangalore North Taluk.
289	Elections to the District Boards.
172	Detail of Survey conducted in Jodichannapura, Kunigal Taluk.
89	Acts to eradicate Social Disability and Untouchability in the State.
250	Kolar Gold Fields Sanitary Board.
282	Applications from the people of Araleri and neighbouring villages for Power for Irrigation Pumps.
284	Estimates for Rural Electrification of Hulimangala and other villages in Malur Taluk.
302	Estimates for the supply of Power for Rural Electrification to Sampangere Village.

Date of Issue: 27-5-1957.

THE MYSORE LEGISLATIVE ASSEMBLY DEBATES

OFFICIAL REPORT
OF THE
PROCEEDINGS OF THE FIFTH DAY
OF THE
SECOND SESSION

SATURDAY, 23RD MARCH 1957

Vol. II—No. 5

CONTENTS

	Pages
Questions and Answers—206, 226, 217, 199, 218, 223, 235, 243 ...	217—229
Papers laid on the Table— Notification under Sales Tax Act, 1948	229
Budget for 1957-58—Demands for Grants "On Account"—(Discussion Continued)	229—249, 268—276
Mysore Tenancy (Amendment and Continuance of Tenancies) Bills, 1957—Passed.	249—259
Coorg Tenants Bill, 1957—Passed as amended	259—264
Hyderabad and Madras Areas Tenancy (Suspension of Provisions and Amendment) Bill, 1957—Passed as amended	264—268

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪುಸ್ತಕ ಕ್ರಮಾಂಕ Accession No (D) 4733
ದಿನಾಂಕ Date..........

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1957

Price: Re. 0—4—0

QUESTIONS AND ANSWERS.

Q. No.	*Subject*
206	Recommendation for opening Dispensaries in Kanakapura and Channapatna Taluks.
226	Combined Dispensary to Hiriyur.
217	Estimate for Constructing a Primary School building at Gannaikanahally in Hiriyur Taluk.
199	Relief provided for the loss of crops in Raichur, Gulbarga and Bidar Districts.
218	Act for the Abolition of Religious Inams (Implementation).
223	Construction of Gokattes to provide Drinking Water in the Draught Areas of Challakere and Molakalmuru Taluks.
235	Pending bills of District Board Contractors of Tumkur District.
243	Remission of Land Revenue in Shimoga Taluk.

Date of Issue: 29-5-1957.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE SIXTH DAY

OF THE

SECOND SESSION

MONDAY, 25TH MARCH 1957

Vol. II—No. 6

CONTENTS

	Pages
Questions and Answers—236, 278, 310	277—280
Questions for Answers on the day but not taken up—244, 247, 248, 253, 254, 268 277, 280, 285, 300, 50, 246, 257, 260, 269, 295, 296, 342, 346, 358, 412	280—290
Budget for 1957-58 (Vote on Account)—Discussion (not concluded) ...	290—325

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. (B) 4737
ದಿನಾಂಕ Date..........

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1957

Price: Re. 0—4—0

QUESTIONS AND ANSWERS.

Q. No.	*Subject*
236	Metalling the road from Holehonnur to Anwari in Bhadravati Taluk.
278	Electric Supply Rates for Domestic and Industrial Purposes.
310	Gadag Co-operative Cotton Sale Society.
244	Incomplete Works in Tunga Anicut Project.
247	District Board roads for inclusion in the list of Public Works Department roads.
248	Scheme for protected water supply in Kolar District.
253	Primary Schools which are upgraded in Malur Taluk.
254	Splitting up the District of South Kanara.
268	Proposal for siting the Major Port at Malpe.
277	Primary Boys' School for Dimmeri Harohally, Malur Taluk.
280	Grievances of the people in Tyakal Hobli, Malur Taluk.
285	Damage done to the Roads and Bridges due to heavy rains in Malur Taluk.
300	Constitution of a Causeway on the District Board Road between Belkali and Upavarapura.
50	Enhancement in the Potgi of the Patels and Shanbhogues.
246	Market Committee at Nipani in Chikodi Taluk of Belgaum District.
257	Dr. Appelby's Report on the Reorganisation of Departments.
260	Kannada Officers Left Back in Madras and Bombay.
269	Railway Lines of Mysore State handed over to the Central Government.
295	Construction of the Bus Stand at Malur.
296	Estimates for the Supply of Drinking Water for Malur Town.
342	Extending N.E.S. Schemes to the remaining Hoblis in Magadi Taluk.
346	Scheme to Extend the area for Cocoanut and Areca Plantations.
358	Officers and Officials Dismissed for Misappropriation of Money in Agricultural Department.
412	Committee appointed for Revision of Pay Structure of Government Owned and Managed Industrial Concerns.

Date of Issue: 4-6-1957.

THE MYSORE LEGISLATIVE ASSEMBLY DEBATES

OFFICIAL REPORT

OF THE

PROCEEDINGS OF THE SEVENTH DAY

OF THE

SECOND SESSION

TUESDAY, 26TH MARCH 1957

Vol. II—No. 7

CONTENTS

	Pages
Questions and Answers—229, 272, 303, 313, 315, 318, 335, 339, 442, 259	327—740
Questions for Answers on the day but not taken up—77, 222, 371 ...	340—341
Demands for Grants "On Account" for 1957-58—Voted ...	341—388
Demands for Supplementary Grants 1956-57—Voted	388—389
Business of the House	390—393

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವಿಷ್ಟಿ ಕ್ರಮಾಂಕ Accession No. 4734
ದಿನಾಂಕ Date.................................

BANGALORE:
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1957

Price: Re. 0—4—0

QUESTIONS AND ANSWERS.

Q. No.	Subject
229	Population of Scheduled Tribes in the State and their Welfare.
272	Report of the Committee appointed to enquire into the Malnad Development Scheme.
303	Rural Industrial Co-operative Societies working in Malur Taluk.
313	Construction of a Dam at Harobele.
315	Water Supply Scheme at Harohalli.
318	Measures to be adopted to check the spreading of Leprosy in Kanakapura Taluk.
335	Hardships and inconveniences to pupils as a result of long-term vacation.
339	Increasing the strength of the Mysore Public Service Commission.
442	Grant of a Middle School to Arsikere Village, Pavagada Taluk.
259	Accounts of the assets and liabilities of the integrated areas.
77	Taking over the Ajjampur Khadi Centre.
222	Maternity section of the Challakere L. F. Dispensary.
371	N.E.S. Block to Chikmagalur Taluk.

Date of Issue : 1-6-1957.

THE MYSORE LEGISLATIVE ASSEMBLY DEBATES

OFFICIAL REPORT
OF THE
PROCEEDINGS OF THE EIGHTH DAY
OF THE
SECOND SESSION

Karnataka State Archive (Departmental Library)
ಕರ್ನಾಟಕ ರಾಜ್ಯ ಪತ್ರಾಗಾರ (ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. 4735
ದಿನಾಂಕ Date.......

WEDNESDAY, 27TH MARCH 1957
Vol. II—No. 8

CONTENTS

	Pages
Questions and Answers—325, 420, 416, 238, 419, 451, 205, 237, 298, 299, 413, 444, 104, 448	395—408
Questions for Answers on the day but not taken up—90, 143, 267, 369	408—410
Report of the Rules Committee—Presented	410
Mysore Appropriation (Vote on Account) Bill, 1957—Passed ...	410—428
Mysore Appropriation Bill, 1957—Passed...	429
Short Notice Question and Answer—5	429—431
Non-official Resolutions—	
No. 1. Conversion of Revenue and Corporation Sites into appropriate Lay-outs—Withdrawn	431—438
No. 2. Construction of water works at Virajpet, Coorg District—Withdrawn	438—439
No. 3. Disposal of records in Government Departments—Withdrawn	439—448
Business of the House-Statistics	448
Valedictory Speeches	448—459
House adjourns Sine Die	459

BANGALORE :
PRINTED BY THE DIRECTOR OF PRINTING, STATIONERY AND PUBLICATIONS AT THE GOVERNMENT PRESS
1957

Price : Re. 0—4—0

QUESTIONS AND ANSWERS.

Q. No.	*Subject*
325	Grievances of Village Officers of erstwhile Mysore.
420	Resolutions passed by the State Village Officers' Association.
416	Reconstitution of Industrial Tribunal.
238	Pollution of Water in Bhadra River.
419	Railway Line Connecting Mysore with Malabar *via* Coorg.
451	School for Pariyarnagar.
205	Supply of Electric Power for Small-Scale and Rural Industries.
237	Estimate for Laying a Road from Bhadravati to Ajjampur.
298	Construction of a Bridge at Thorlakki, Malur Taluk.
299	Construction of a High Level Causeway on the Markandeya River near Kondichettihalli, Malur Taluk.
413	Extension of Enhanced Dearness Allowances to Employees of Industrial Concerns.
444	Taking over Y.N. Hoskote High School to Government Management.
104	Interim Relief to the Persons in Inferior Service.
448	Starting of Health Unit in Bangalore North.
90	Birur-Yagate-Shyanagere Road.
143	Concessions given to the students of the Depressed Class in the former Districts of Bombay, Hyderabad and Madras States.
267	The expenditure incurred in connection with the inauguration of the New Mysore State.
369	Converting the Intermediate College, Chikmagalur into a First Grade College.

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವಿಷ್ಟಿ ಕ್ರಮಾಂಕ Acc. No. 45782
ದಿನಾಂಕ Date..........

MYSORE LEGISLATIVE ASSEMBLY

FOURTH DAY.

Friday, 22nd March 1957.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Benni Nala Bridge Between Hubli and Shiraguppa Village.

Q.—213. SRI C. S. HULKOTI (Gadag-Mundargi).

Will the Government be pleased to state :—

(*a*) whether it is fact that the Benni Nala Bridge between Hubli and the village Shiraguppa in that taluk on Karawar-Bellary Road is a very old one and has become shaky due to its old condition and wooden construction;

(*b*) whether they are aware that it is likely to give in and cause serious accidents;

(*c*) whether they would get the above bridge examined and if it requires re-construction, to get it reconstructed ?

A.—SRI H. K. VEERANNA GOWDH (Minister for Public Works).

(*a*) The bridge is old and is reported to be weak owing to long use.

(*b*) and (*c*) The bridge has been examined and action is being taken to re-construct it. In the meantime, precautions are being taken to avoid the possibility of accidents.

SRI C. S. HULKOTI.—Are the Plan and estimate ready ?

*SRI H. K. VEERANNA GOWDH.—They are being finalised.

DR. R. NAGAN GOWDA.—May I know whether it is proposed to construct this on sound basis ?

SRI H. K. VEERANNA GOWDH.—Yes.

Proposal to take up the construction of a Road connecting Dharwar, Raichur and Bellary Districts.

Q.—215. SRI C. S. HULKOTI (Gadag-Mundargi).

Will the Government be pleased to state :—

(*a*) whether they are aware that there was a proposal to take up the construction of a road connecting Dharwar, Raichur and Bellary Districts area *via* Gadag Taluk area villages—namely Lokkrendi, Horlapur and Mundargi petta area villages Halligudh and Hallikeri, Koppal Taluk area villages—Bannikoppa, Banapur, Ilakal and others in Raichur District area and then connecting Bellary District area near Hospet in that district before re-organisation in the respective States;

(*b*) whether they will take up that proposal and issue necessary orders sanctioning and starting the said work?

A.—SRI H. K. VEERANNA GOWDH (Minister for Public Works).

(*a*) Yes.

(*b*) Preliminary investigations have already been taken up.

SRI C. S. HULKOTI.—Are the plan and estimate ready ?

*SRI H. K. VEERANNA GOWDH.—The plan is also ready and provision is made in the next year's budget.

DR. R. NAGAN GOWDA.—Is it proposed to take up the work immediately ?

SRI H. K. VEERANNA GOWDH.—Certainly.

† Asterisk indicates that the remarks or speeches have not been revised by the Member concerned.

Feeding of Budanoor Tank with water from Cauvery river or from Channels Running nearby.

Q.—234. Sri G. A. THIMMAPPA GOWDA (Arkalgud).

Will the Government be pleased to state :—

(*a*) whether the people of Budanoor village, Ramanathapur Hobli have made any representation to the Agricultural Minister during October 1956, regarding feeding of Budanoor Tank with water from Cauvery river or from channels running nearby ;

(*b*) whether any action has been taken to supply water to the tank ?

A.—Sri H. K VEERANNA GOWDH (Minister for Public Works)

(*a*) Yes.

(*b*) Out of two possible proposals that were investigated, one was found to be not practicable and another costly and prohibitive.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಉತ್ತರದಲ್ಲಿ ಒಂದು ಯೋಜನೆ ಕಾರ್ಯಗತ ಮಾಡಲು ಸಾಧ್ಯವಾಗಿಲ್ಲವೆಂದು ಹೇಳಿದೆ, ಅದು ಯಾವುದು? ಏಕೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲೆಯಿಂದ ನೀರನ್ನು ತೆಗೆದುಕೊಳ್ಳುವುದು, ಅದರಿಂದ ಅಷ್ಟು ಅನುಕೂಲವಾಗುವುದಿಲ್ಲ. ಭೂಮಿಗೆ ಸಾಕಾಗುವಷ್ಟು ನೀರು ನಾಲೆಯಿಂದ ಒದಗುವಂತಿಲ್ಲ, ಆದ್ದರಿಂದ ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ಅಂದಾಜು ಮಾಡಿದ್ದಾರೆಯೆ ? ಮಾಡಿದ್ದರೆ ಯಾವಾಗ ಮಾಡಿದರು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎರಡು ಮೂರು ಆಲ್ಟರ್‌ನೇಟಿವ್ ಮಾಡಬೇಕಾಗಿ ಬಂತು, ಯಾವಾಗ ಮಾಡಿದೆಯೋ ಗೊತ್ತಿಲ್ಲ. 38 ಸಾವಿರ ರೂಪಾಯಿಗಳಿಗೆ ಒಂದು ಅಂದಾಜಾಗಿದೆ, ಕಾವೇರಿ ನದಿಯಿಂದ ನೀರು ತೆಗೆದುಕೊಳ್ಳುವುದಕ್ಕೆ ನಾಲ್ಕು ಲಕ್ಷ ರೂಪಾಯಿಗಳ ಅಂದಾಜಾಗಿದೆ. ಎಕರೆಗೆ 230 ರೂಪಾಯಿಗಳ ಖರ್ಚಾಗುತ್ತದೆ. ನಾಲೆಯಿಂದ ನೀರನ್ನೊದಗಿಸುವುದಾದರೆ ಕೆಲವು ತಿಂಗಳು ನೀರಿರುವುದಿಲ್ಲ, ಅನನುಕೂಲವಾಗುತ್ತದೆ. ಹೀಗೆ ಎರಡು ಯೋಜನೆಗಳಿಂದಲೂ ಬಹಳ ದುಬಾರಿ ಖರ್ಚಾಗುತ್ತದೆ, ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ಕೈಬಿಟ್ಟಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಯಾವ ಇಲಾಖೆ ಈ ಕೆಲಸ ನಡೆಸಬೇಕೆಂಬ ವಿಚಾರದಲ್ಲಿ ಜಿಜ್ಞಾಸೆಯಿದೆಯೆಂದು ನನಗೆ ತಿಳಿದು ಬಂದಿದೆ. ಅದು ನಿಜವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಹೇಳುವುದು ಸಮಾಚಾರ. ಆದರೆ ಅದನ್ನು ನಿಜವೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಸಂಬಂಧಪಟ್ಟ ಇಲಾಖೆ ಈ ಕೆಲಸ ಮಾಡಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಕೆರೆಯ ನೀರಿನಿಂದ ಎಷ್ಟು ಎಕರೆ ನೀರಾವರಿಯಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—135 ಎಕರೆ ತರಿ, 35 ಎಕರೆ ಬಾಗಾಯ್ತು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನೀರು ಬೇಕಾಗಿರುವಾಗ ವರ್ಷಕ್ಕೆ ಒಂದೆರಡು ಸಾರಿ ಮಾತ್ರ ಕೊಟ್ಟರೆ ಸಾಕೆಂದು ಕೇಳುತ್ತಿದ್ದಾರೆ. ಈ ದೃಷ್ಟಿಯಿಂದ ಪುನರ್ವಿಮರ್ಶೆ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪುನರ್ವಿಮರ್ಶೆ ಮಾಡಬೇಕೆಂದು ಅಪೇಕ್ಷೆ ಪಟ್ಟರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಮತ್ತೊಂದು ಸಾರಿ ಈಗ ಸಲಹೆ ಮಾಡಿರುವುದನ್ನು ದೃಷ್ಟಿಯಲ್ಲಿಟ್ಟು ಪರಿಶೀಲಿಸುವಂತೆ ಹೇಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಗ್ರಾಮಸ್ಥರು ಇದಕ್ಕೆ ತಗಲುವ ಖರ್ಚನ್ನು ತಾವೇ ಹೊತ್ತುಕೊಳ್ಳುವುದಾಗಿ ಭರವಸೆ ಕೊಟ್ಟರೆ ಏರ್ಪಾಡು ಮಾಡಬಹುದಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ —ಮಾನ್ಯರಾದ ತಮಗೇ ತಿಳಿದಿರುವಂತೆ, 230 ರೂಪಾಯಿಗಳನ್ನು ಕೊಡಲು ಯಾರೂ ಒಪ್ಪುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಾನು ಹೇಳಿದ ಹಾಗೆ, ನಾಲೆಯಿಂದ ಈ ಕೆರೆಗೆ ವರ್ಷಕ್ಕೆ ಎರಡು ಸಾರಿಯಾದರೂ ನೀರನ್ನು ಬಿಟ್ಟು ಕೆರೆ ತುಂಬಿಸಲು ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಪರಿಶೀಲಿಸುತ್ತೇವೆ.

Estimates for the construction of Feeder Channel in Sothehalla.

Q.—292. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether and if so when has the estimate been prepared for the construction of feeder channel of Sothehalla to feed water to Konanur tank ;

(*b*) whether the estimate has been sanctioned and if not, why ;

(*c*) whether the people concerned (atchkatdars) have agreed to all the conditions laid down by the Government ?

A.—Sri H. K. VEERANNA GOWDH (Minister for Public Works).—

(*a*) Yes; in May 1953.

(*b*) No; because no agreement could be reached by the old Mysore State with the previous Coorg Government regarding the sharing of waters.

(*c*) Yes.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದರ ಪ್ಲಾನ್ ಮತ್ತು ಅಂದಾಜು ತಯಾರಾದ್ದು ಯಾವಾಗ ?

*ಶ್ರೀ ಎಚ್. ಕೆ. ವೀರಣ್ಣಗೌಡ.—1953ನೆಯ ಇಸವಿ ಮೇ ತಿಂಗಳಲ್ಲಿ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೊಡಗು ಸರ್ಕಾರ ಮೈಸೂರಿಗೇ ಸೇರಿರುವುದರಿಂದ ಈ ಅಂದಾಜನ್ನು ಬೇಗ ಮಂಜೂರು ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪುನಃ ಇನ್ನೊಂದು ಸಲ ವಿಚಾರ ಮಾಡಿ ಒಂದೇ ಸರ್ಕಲ್ ಆಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳ ಮುಖಾಂತರ ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಗಲೇ ಎಲ್ಲ ವಿಚಾರ ಮಾಡಿ "ಸಂಬಂಧಪಟ್ಟ ಜನರು ಸರ್ಕಾರದವರಿಂದ ಕೇಳಲ್ಪಟ್ಟ ಎಲ್ಲ ಷರತ್ತುಗಳಿಗೂ ಒಪ್ಪಿಗೆ ಇತ್ತಿರುವರೆ ?" ಎಂದು ಕೇಳಿರುವುದಕ್ಕೆ "ಹೌದು." ಎಂದು ತಿಳಿಸಿದ್ದೀರಿ. ಈ ಕಾರಣದಿಂದ ಈ ಅಂದಾಜನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ ; ಕೊಡಗು ಸರ್ಕಾರ ಬೇರೆ ಇದ್ದಾಗ ಅಲ್ಲಿ ಬೇರೊಂದು ಸಲಹೆಯಿತ್ತು, ಈ ಅಣೆ ಮಾಡಬೇಕೆ ಅಥವಾ ಹಾರಂಗಿ ಹತ್ತಿರ ಮಾಡಬೇಕೆ ಎಂಬುದು ಯೋಚನೆಯಲ್ಲಿತ್ತು. ಈಗ ಸರ್ಕಲ್ ಒಂದೇ ಆಗಿರುವುದರಿಂದ ಇದನ್ನು ಪುನಃ ಪರಿಶೀಲಿಸಬೇಕು.

Estimates for the supply of Power to the Electric Pumps at Yanagalli in Chamarajanagar Taluk.

Q.—239. Sri U. M. MADAPPA (Chamarajanagar).—

Will the Government be pleased to state :—

(*a*) the date on which the estimates pertaining to the supply of power to the Electric Pumps at Yanagalli in Chamarajanagar Taluk were submitted to the office of the Chief Electrical Engineer with a request to sanction the same ;

(*b*) the date on which the above-mentioned estimates were submitted to the Minister Concerned for the approval ;

(*c*) whether they have sanctioned the same ?

A.—Sri H. K. VEERANNA GOWDH (Minister for Public Works).—

(*a*) 17th November 1956.

(*b*) The estimate has been forwarded to Government on 1st March 1957 and is under consideration.

(*c*) Does not arise in view of reply to (*b*).

ಶ್ರೀ ಯು. ಎಂ. ಮಾದಪ್ಪ.—ಇಷ್ಟು ದಿವಸ ನಿಧಾನವಾದರೂ ಮಂಜೂರಾಗದಿರುವುದಕ್ಕೆ ಕಾರಣ ವೇನು ?

*ಶ್ರೀ ಹೆಚ್. ಕೆ. ವೀರಣ್ಣಗೌಡ.—ನಿಧಾನವಾಗಿಲ್ಲ, ಈ ತಿಂಗಳು ಒಂದನೆಯ ತಾರೀಖು ಸರ್ಕಾರಕ್ಕೆ ಬಂತು; ಸೆಕ್ರೆಟೇರಿಯಟ್ಟಿನಲ್ಲಿ ಫೈಲು ಪುಟ್ ಅಪ್ ಆಗಬೇಕು.

ಶ್ರೀ ಯು. ಎಂ. ಮಾದಪ್ಪ.—ಸೆಕ್ರೆಟೇರಿಯಟ್ ಲೆವಲ್‌ಗೆ ಬಂದು ಆರು ತಿಂಗಳಾದರೂ ಮಿನಿಸ್ಟರ್ ಲೆವಲ್‌ಗೆ ಇನ್ನೂ ಬಂದಿಲ್ಲವೆ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಅಷ್ಟು ಕಾಲವಾಗಿಲ್ಲ. ಅದು ಬಂದು 20 ದಿವಸವಾಗಿದೆ ಅಷ್ಟೇ; ಮಂತ್ರಿಗಳ ಬಳಿಗೂ ಬರುತ್ತದೆ. ಒಂದುವೇಳೆ ಈಚೆಗೇನಾದರೂ ಬಂದಿದ್ದರೂ ನಾನು ಅಸೆಂಬ್ಲಿ ಕೆಲಸದಲ್ಲಿ ನಿರತನಾಗಿರುವುದರಿಂದ ನೋಡದಿರಬಹುದು.

ಶ್ರೀ ಯು. ಎಂ. ಮಾದಪ್ಪ.—ಅದಷ್ಟು ಜಾಗ್ರತೆಯಾಗಿ ಮಂಜೂರು ಮಾಡುತ್ತೀರಾ ?

ಶ್ರೀ ಹೆಚ್. ಕೆ. ವೀರಣ್ಣಗೌಡ.—ಮಾಡುತ್ತೇವೆ.

Iron Poles provided for supply of Power to Ummattoor in Chamarajanagar Taluk.

Q.—240. Sri U. M. MADAPPA (Chamarajanagar).—

Will the Government be pleased to state.—

(*a*) the number of iron poles provided from the Central Stores supplies (Electricity), Bangalore for supply of power to Ummattoor in Chamarajanagar Taluk ;

(*b*) the number of such poles requested to be supplied by the Mysore Superintendent's Office to that Village?

A—Sri H. K. VEERANNA GOWDH—(Minister for Public Works)—

(*a*) 14.

(*b*) 147.

ಶ್ರೀ ಯು. ಎಂ. ಮಾದಪ್ಪ.—ಈ ಕೆಲಸ ಯಾವ ಸ್ಟೇಜಿನಲ್ಲಿದೆ ?

*ಶ್ರೀ ಹೆಚ್. ಕೆ. ವೀರಣ್ಣಗೌಡ.—ಇಲಾಖೆ ತನ್ನ ಕೆಲಸಮಾಡಬೇಕಾಗಿದೆ. ಅಲ್ಲಿಂದ ವರದಿ ಬರಬೇಕು. ಯಾರೂ ತೆಗೆದುಕೊಳ್ಳದೆ ಹೋದರೆ ಬಹಳ ಕಷ್ಟ, ಸಂಬಂಧಪಟ್ಟ ವರದಿ ಬಂದ ಕೂಡಲೆ ಮುಂದಿನ ಕೆಲಸ ಮಾಡುತ್ತೇವೆ.

Reorganisation of the Educational System in the State.

Q.—262. Sri S. S. KOLKEBAIL (Brahmavar).—

Will the Government be pleased to state :—

(*a*) whether there is any proposal before them to reorganise the entire

(SRI S. S. KORKEBIAL)

Educational system in the State from Primary Stage to the Collegiate Course with a view to evolving uniformity in methods, system, etc. ;

(*b*) if so, when will it be done;

(*c*) whether they issue a White Paper embodying their recommendations at an early date ?

(*d*) if not, why ?

A—Sri Kadidal MANJAPPA (Minister for Education) —

(*a*) Yes. Government have constituted a Committee to evolve a common pattern at all levels of Education for the new State.

(*b*) The Committee is considering these problems.

(*c*) and (*d*). The question will be considered at the appropriate time.

Sri S. S. KOLKEBAIL.—In the answer it is stated that a Committee has been appointed. May I know the personnel of the Committee ?

Sri Kadidal MANJAPPA.—There are a number of members. If the Hon'ble Member wants, I will read out the names. But it takes some time.

Mr. SPEAKER.—How many names are there in the list ?

Sri Kadidal MANJAPPA.—About thirty names.

Sri S. S. KOLKEBAIL.—We want to know whether the Committee contains members of this House and whether it consists of members from the various parts of the State. If it is not confidential, I want to know that information.

Sri Kadidal MANJAPPA.—Sir, it is not confidential. But it is a big list.

Mr. SPEAKER.—Supposing the list is laid on the Table of the House, will it meet the Hon'ble Member's needs ?

Sri S. S. KOLKEBAIL.—Yes, Sir.

Mr. SPEAKER.—Then a copy of the list may be placed on the Table of the House.

Dr. R. NAGAN GOWDA.—May I know the terms of reference of this ommittee, Sir ?

Sri Kadidal MANJAPPA.—The main purpose of setting up this Committee is to evolve a common pattern which will be applicable for the entire State of Mysore as it has been constituted now. As the Hon'ble Member knows, there are five different areas having their own system of education, even in regard to syllabus, management and other matters. To bring about a uniform system, the Committee has been set up.

Dr. R. NAGAN GOWDA.—Would the Committee also consider technical education like the Engineering, Medical and Agricultural Sciences ?

Sri Kadidal MANJAPPA.—There is not much difference so far that is concerned. But that matter will be gone into at a later stage.

ಶ್ರೀ ಎಸ್. ಗೋಪಾಲಗೌಡ.—ಈ ಸಮಿತಿಯ ರಚನೆ ಯಾವಾಗ ಆಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ತಾರೀಖು 29-12-1956ನೆಯ ದಿವಸ ಈ ಸಮಿತಿಯನ್ನು ರಚನೆ ಮಾಡಿದೆ. ಅನಂತರ ಕೆಲವು ಸದಸ್ಯರನ್ನು ಈ ಸಮಿತಿಗೆ ಸೇರಿಸಲಾಯಿತು.

ಶ್ರೀ ಎಸ್. ಗೋಪಾಲಗೌಡ.—ಈ ಸಮಿತಿಯು ಇದುವರೆಗೂ ಮೀಟಿಂಗ್ ಮಾಡಿಲ್ಲವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಅರ್ಥ ಮಾಡುವುದಕ್ಕಾಗುವುದಿಲ್ಲ. ಈ ಸಮಿತಿಯು ಮೂರು ಬಾರಿ ಸಭೆ ಕೂಡಿಸಿ ಚರ್ಚೆ ಮಾಡಿದೆ. ಒಂದು ಸಬ್ ಕಮಿಟಿಯನ್ನು ಸಹ ನೇಮಿಸಿದ್ದು ಅವರು ಪ್ರೈಮರಿ ಎಜ್ಯೂಕೇಶನ್ ಸಿಲೆಬಸ್ಸಿನ ಸಂಬಂಧದಲ್ಲಿ ಪರಿಶೀಲನೆ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇಷ್ಟು ದಿವಸಗಳ ಅವಧಿಯೊಳಗಾಗಿ ವರದಿಯನ್ನು ಕೊಡಬೇಕೆಂದು ಸಮಿತಿಗೆ ತಿಳಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟು ಮಾತ್ರ ನಾನು ಹೇಳಬಲ್ಲೆ: ಈ ಸಮಿತಿಗೆ ನಾನೇ ಅಧ್ಯಕ್ಷನಾಗಿದ್ದೇನೆ. ಆದಷ್ಟು ಜಾಗ್ರತೆಯಾಗಿ ವರದಿಯನ್ನು ಒಪ್ಪಿಸಲು ಪ್ರಯತ್ನ ಮಾಡಲಾಗುವುದು. ಶಿಕ್ಷಣಕ್ಕೆ ಸಂಬಂಧಪಟ್ಟಂಥ ಎಲ್ಲ ವಿಷಯಗಳನ್ನೂ ವಿಚಾರಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುವುದು.

ಶ್ರೀ ಎಸ್. ಗೋಪಾಲಗೌಡ.—ಸಮಿತಿಯವರು ಈ ವಿಷಯದ ಬಗ್ಗೆ ವರದಿಯನ್ನು ಕೊಟ್ಟಮೇಲೆ ಮತ್ತು ಅದನ್ನು ಪರಿಶೀಲನೆ ಮಾಡುವವರೆಗೆ ಈಗ ಇರತಕ್ಕಂಥ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಎಂಬುದಾಗಿ ಸರ್ಕಾರದವರ ಅಭಿಪ್ರಾಯವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಕೆಲವು ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ. ಒಂದು ಉಪಸಮಿತಿಯನ್ನು ಸಹ ರಚನೆ ಮಾಡಿದ್ದಾರೆ. ಈ ಉಪಸಮಿತಿಯು ಪ್ರೈಮರಿ ಎಜ್ಯುಕೇಶನ್ ಸಿಲೇಬಸ್ಸಿನ ವಿಚಾರವಾಗಿ ಪರಿಶೀಲನೆ ಮಾಡುತ್ತಿದೆ. ಸೆಕೆಂಡರಿ ಸ್ಕೂಲುಗಳಿಗೆ ಸಂಬಂಧಪಟ್ಟ ಸಿಲೆಬಸ್ಸನ್ನು ಪರಿಶೀಲಿಸಲು ಇನ್ನೊಂದು ಉಪಸಮಿತಿಯು ರಚನೆಯಾಗಿದೆ. ಆದಕಾರಣ ಕೆಲಸವನ್ನು ನಿಧಾನ ಮಾಡುವುದಿಲ್ಲ. ಬಹಳ ಜಟಿಲವಾದ ಪ್ರಶ್ನೆಗಳು ಇರುವುದರಿಂದ ಸ್ವಲ್ಪ ಹೆಚ್ಚು ಕಾಲ ಹಿಡಿಯಬಹುದು.

Sri H. S. METGUD.—Sir, supplementary to (*a*): Does this proposal for re-organisation of the entire educational system include the policy of education in the State Sir ?

Sri Kadidal MANJAPPA.—I am not able to follow the question, Sir.

Mr. SPEAKER.—He wants to know whether the policy of the Government as regards education is also involved.

Sri Kadidal MANJAPPA.—To some extent. Whether secondary education should be spread over four years or three years and such questions will have to be decided after consulting the committee. Such matters will naturally come up before the committee for discussion.

Sri H. S. METGUD.—Has the Government taken into account that the policy of education in this State should not be different from the policy of education as adopted by the Central Government ?

Sri Kadidal MANJAPPA.—It cannot be different. We will have as far as possible all over India, to follow uniform pattern as suggested by the Government of India.

Sri H. S. METGUD.—Will there be under the contemplation of Government a vast change from the policy of education as it is ?

Sri Kadidal MANJAPPA.—The Policy has been enunciated by the Government of India in accordance with the advice of the experts in the field. We will have to conform to the pattern suggested by the Government of India as far as possible. They have left certain matters to the discretion of the State Government. In these matters the State Government is free to take their own decision. In regard to other matters, we will have to follow the pattern generally accepted by the Government of India and other States.

ಶ್ರೀ ಬಿ. ಹುಚ್ಚೇಗೌಡ.—ಸರಕಾರದವರು ತೀರ್ಮಾನ ತೆಗೆದುಕೊಂಡು ಅವುಗಳನ್ನು ಜಾರಿಯಲ್ಲಿ ತರುವವರೆಗೆ ಈಗಿರುವ ಪದ್ಧತಿಯನ್ನೇ ಮುಂದು ವರಿಸುತ್ತೀರಾ ?

Mr. SPEAKER.—That is a different thing altogether.

ಶ್ರೀ ಎಸ್. ಗೋಪಾಲಗೌಡ.—ಈ ಸಮಿತಿಯ ವರದಿಯು ಬರುವವರೆಗೆ ಬೇರೆ ಬೇರೆ ಪ್ರದೇಶಗಳಲ್ಲಿ ಈಗಿರತಕ್ಕ ಪರಿಸ್ಥಿತಿಯನ್ನೇ ಮುಂದುವರಿಸಿ ವರದಿ ಬಂದ ಅನಂತರ ಎಲ್ಲಾ ಕಡೆಯಲ್ಲಿ ಒಂದೇ ರೀತಿಯ ವಿದ್ಯಾಭ್ಯಾಸದ ಪದ್ಧತಿಯ ವ್ಯವಸ್ಥೆಯನ್ನು ಮಾಡ ಲಾಗುವುದೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಭಾವಿಸ ಬಹುದು, ಎಲ್ಲಾ ಪ್ರದೇಶಗಳಲ್ಲಿ ಒಂದೇ ರೀತಿಯ ವಿದ್ಯಾಭ್ಯಾಸದ ಪದ್ಧತಿಯನ್ನು ಜಾರಿಗೆ ತರುವವರೆಗೆ ಈಗಿರುವ ವ್ಯವಸ್ಥೆಯು ಮುಂದುವರಿಯುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶ್ರೀ ಹನು ಮಂತಯ್ಯಅವರು ಮುಖ್ಯ ಮಂತ್ರಿಯಾಗಿದ್ದಾಗ ಮೈಸೂರು ಸರಕಾರವು ಒಂದು ಸಮಿತಿಯನ್ನು ರಚನೆ ಮಾಡಿತ್ತು. ಆ ಸಮಿತಿಯು ಸರಕಾರಕ್ಕೆ ತನ್ನ ವರದಿ ಯನ್ನು ಒಪ್ಪಿಸಿದೆ. ಆ ವರದಿಯ ಪ್ರಕಾರ ವಿದ್ಯಾ ಭ್ಯಾಸದ ಪದ್ಧತಿಯಲ್ಲಿ ಏನಾದರೂ ಬದಲಾವಣೆ ಮಾಡುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಎರಡು ಸಮಸ್ಯೆಗಳಿವೆ. ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆ ಗಳನ್ನು ಜಾರಿಗೆ ತರಬೇಕೆಂದಿರುವುದು ಮೊದಲನೆಯ ಸಮಸ್ಯೆ. ವಿವಿಧ ಭಾಗಗಳಲ್ಲಿ ಈಗಿರುವ ವಿವಿಧ ಪದ್ಧತಿಗಳನ್ನು ಸಮನ್ವಯಗೊಳಿಸುವದು ಮತ್ತೊಂದು. ಸುಧಾರಣೆಗಳನ್ನು ಜಾರಿಯಲ್ಲಿ ತರಲು ಕಾಲಾವಕಾಶ ಬೇಕಾಗುವುದು. ಕೇಂದ್ರ ಸರಕಾರದವರು ಯಾವ ಒಂದು ನೀತಿಯನ್ನು ಅನುಸರಿಸಲು ಸೂಚನೆ ಕೊಟ್ಟಿ ದ್ದಾರೆಯೋ ಹಾಗೆ ಮಾಡಲು ಪ್ರಯತ್ನ ಮಾಡಲಾಗು ವುದು. ಇಲ್ಲಿಯ ಸ್ಥಿತಿಗತಿಗಳಿಗೆ ಅನುಗುಣವಾಗಿ ನಾವು ಡಿಸ್ಕ್ರಿಷನ್ ಉಪಯೋಗಿಸಿಕೊಳ್ಳಬಹುದು.

ಶ್ರೀ ಎಸ್. ಗೋಪಾಲಗೌಡ.—ಈಗ ಮೈಸೂರು ರಾಜ್ಯದಲ್ಲಿ ಒಂದೇ ರೀತಿಯ ವಿದ್ಯಾಭ್ಯಾಸದ ಪದ್ಧತಿಯು ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಕಡೆಗೆ ಇರುವ ಪದ್ಧತಿಯು ಮತ್ತೊಂದು ಕಡೆಯಲ್ಲಿ ಇಲ್ಲ. ಭಿನ್ನಭಿನ್ನ ಪದ್ಧತಿಗಳು ಇವೆ.

Dr. R. NAGAN GOWDA.—It is well ecognised that the present system of education all over the country has produced only quill drivers on foolscap paper and that it is necessary that our system of education should be such as to enable our young men to prepare for life. Will this fact be kept in mind by this committee while reorganising our system of education ?

Sri A. BHEEMAPPA NAIK.—It has produced Dr. Nagan Gowda also.

Dr. R. NAGAN GOWDA.—I am not a bad cultivator of crops.

Marketing Committee for Belgaum Taluk.

Q.—245. **Sri N. O. SAMAJI** (Belgaum—Rural).—

Will the Government be pleased to state :—

(*a*) whether it is a fact that a Marketing Committee for Belgaum Taluk has been appointed at Belgaum;

(SRI N. O. SAMAJI)

(*b*) why only 4 Marathi Members are taken on this Committee in spite of the fact that the Marathi speaking people are in majority in Belgaum City and also in Belgaum Taluk;

(*c*) If so, whether Government is aware that the Committee has resolved to carry on its proceedings in Kannada and provision has been made accordingly in the bye-laws also;

(*d*) whether any complaint against this Committee have been received by Government; and if so, what action has been taken; if not, why not;

(*e*) why a representative of the business community has not been taken up on this Committee even though the Marathi-speaking business community is in Majority in Belgaum City?

A.—Sri A. BHEEMAPPA NAIK (Minister for Co-operation).—

(*a*) Yes. The Market Committee at Belgaum in Belgaum Taluka is constituted under Bombay Government Notification No. APM—3055 (a), dated 11th April 1956.

(*b*) The Committee is not constituted on linguistic basis.

(*c*) Yes.

(*d*) No complaints have been received and hence the question of taking action in that behalf does not arise.

(*e*) 4 seats have been given to the Traders, as per Section 6 (ii) of the Bombay Agricultural Produce Markets Act, 1939. But this is not based on linguistic basis.

[†Sri N. O. SAMAJI (*In Marathi*).—In reply to (*d*) it is stated that no complaints have been received. When Sri M. P. Patil met a deputation at Belgaum whether any complaints were received by him?]

[Sri M. P. PATIL (*In Marathi*).—At Belgaum they had come to see me only. No written complaint has been given to me.]

[Sri N. O. SAMAJI (*In Marathi*).—Why the Committee proceedings are in Kannada?]

Sri A. BHEEMAPPA NAIK.—Even those who were Marathi-speaking people agreed to it; they never protested against it.

[Sri N. O. SAMAJI (*In Marathi*).—Why are the records not kept in Marathi?]

ಶ್ರೀ ಎ. ಭೀಮಪ್ಪನಾಯಕ್.—ಅಲ್ಲಿಯ ಕನ್ನಡ ಜನರಿಗೆ ಮರಾಠೀ ಭಾಷೆಯೂ ಬರುತ್ತದೆ. ಮರಾಠಿ ಜನಗಳಿಗೆ ಕನ್ನಡವೂ ಬರುತ್ತದೆ. ಇಲ್ಲಿಯವರೆಗೂ ಆ ವಿಷಯವಾಗಿ ಯಾರೂ ಆರೋಪಣೆಗಳನ್ನೂ ಮಾಡಿಲ್ಲ. ಅವರೆಲ್ಲರೂ ಸೇರಿ ಒಮ್ಮತದಿಂದ ಪ್ರೊಸೀಡಿಂಗ್ಸನ್ನು ಕನ್ನಡದಲ್ಲಿಯೇ ಮಾಡಬಹುದೆಂದು ಒಪ್ಪಿರುವುದರಿಂದ ಆ ರೀತಿ ರಿಕಾರ್ಡು ಮಾಡಲಾಗಿದೆ. ಇಲ್ಲಿಯವರೆಗೂ ಆ ರೀತಿ ಎರಡು ಭಾಷೆಗಳಿದ್ದರೂ ಯಾರಿಗೂ ಇದರಿಂದ ತೊಂದರೆ ಏನೂ ಆಗಿಲ್ಲ.

[Sri N. O. SAMAJI (*In Marathi*).—Is the Government aware that the Marathi-speaking people are put to inconvenience as the records are maintained in Kannada?]

ಶ್ರೀ ಎ. ಭೀಮಪ್ಪನಾಯಕ್.—ಅಲ್ಲಿಯ ವರ್ತಕರೆಲ್ಲರೂ ಮರಾಠಿಯಲ್ಲಿ ಮಾತನಾಡಬಹುದು. ಹಾಗಿದ್ದರೂ ಕನ್ನಡದಲ್ಲಿಯೂ ವ್ಯವಹಾರ ಮಾಡುತ್ತಾರೆ. ಅವರೆಲ್ಲರೂ ಒಪ್ಪಿರುವುದರಿಂದ ಕನ್ನಡದಲ್ಲಿಯೇ ಪ್ರೊಸೀಡಿಂಗ್ಸನ್ನು ಇಡಲಾಗಿದೆ.

ಶ್ರೀ ವಿ. ವಿ. ಪಾಟೀಲ್.—ಅಲ್ಲಿಯ ಮಾರ್ಕೆಟಿಂಗ್ ಕಮಿಟಿಯಲ್ಲಿ ವ್ಯವಹಾರ ಮಾಡುವವರು ಕನ್ನಡದಲ್ಲಿಯೂ ಮಾಡುತ್ತಿದ್ದಾರೆ. ಮರಾಠಿಯಲ್ಲಿಯೂ ಮಾಡುತ್ತಿದ್ದಾರೆ.

ಶ್ರೀ ಎಂ.ಪಿ. ಪಾಟೀಲ್.—ಕನ್ನಡದ ಭಾಗದಲ್ಲಿಯೂ ನಡೆಯುತ್ತಿದೆ.

Police Bandobust in Belgaum, Khanapur and Nipani Taluks of Belgaum District.

Q.—191. Sri N. O. SAMAJI (Belgaum—Rural).—

Will the Government be pleased to state:—

(*a*) the number of Police personnel that were posted on 1st November in Belgaum, Khanapur, Nipani and in other Marathi parts for bandobust duty and the number still remaining on duty there;

(*b*) whether anybody demanded for such Police bandobust; if so, who demanded it and for what reasons; what is the expenditure incurred on the extra bandobust?

A.—Sri M. V. RAMA RAO (Minister for Home Affairs and Law).—

(*a*) The following police personnel were posted on 1st November 1956;

1	Belgaum (including Belgaum Cantonment and Shahapur City).	2 A.S.Ps. of the H.S.R.P. and Mysore Armed Reserve Police. 2 Deputy Superintendents of Police. 8 Police Inspectors. 7 Sub-Inspectors. 121 Un-armed Policemen. 343 Armed Policemen. 128 Men of the H.S.R.P. and M.A.R.P.
2	Khanapur taluka ...	1 Deputy Superintendent of Police. 1 Police Inspector. 3 Sub-Inspectors 106 Police Constables.
3	Nipani ...	2 Sub-Inspectors. 109 Constables.
	Kognolli ...	8 Constables.
	Kurli ...	8 do
	Mankapur ...	4 do
	Bedkihal ...	4 do
	Karadaga ...	7 do
	Mangur ...	4 do

(*b*) There are no police personnel still remaining on duty at any of the places referred to above except at the following two places:

Nipani—2 Head Constables and 8 Constables.

Mangur—1 Head constable and 3 Police Constables.

There was no demand from anybody for such bandobust. Precautionary measures were taken to prevent breach of peace and maintain law and order on the eve of the formation of the new State of Mysore.

Expenditure in respect of travelling and daily allowances to the additional force sent to Belgaum was incurred and information regarding the exact amount so spent is not readily available.

[Sri N. O. SAMAJI (*In Marathi*).—Are the Government aware that police force was kept before private houses ?]

*Sri M. V. RAMA RAO.—That is not so.

[Sri N. O. SAMAJI (*In Marathi*).—Whether is it a fact that 7 or 8 police constables were kept before the house of Sri B. N. Datar ?]

Sri M. V. RAMA RAO.—As the Hon'ble Member is aware, when a Minister of the Government of India goes to any place and stays there it is usual to make security arrangements. I dare say that any police personnel that was present there must have been for security reasons.

Drinking Water to the Peenya Village in Bangalore North Taluk.

Q.—241. Sri. R. MUNISWAMIAH (Bangalore North—Scheduled Castes).—

Will the Government be pleased to state :—

(*a*) the steps they have taken to make available drinking water to the Peenya Village in Bangalore North Taluk (6 miles from Bangalore on Bangalore–Tumkur road);

(*b*) the amount that the Peenya Village people have deposited for the purpose and when they did so ?

A.—Sri R. CHENNIGARAMIAH (Minister for Local Self-Government).—

(*a*) The first stage of the work for providing water to the Peenya Village by tapping water from Soldevanahalli 15″ Raising Main has been completed and four taps have been provided at a distance of one furlong to the village. The proposal for taking up the second stage of the work, *i.e.*, for continuing the pipe line and providing public fountains inside the village is being examined.

(*b*) Rs. 1,670 on 26th November 1953.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಊರಿಗೆ ನೀರು ಸರಬರಾಜು ಮಾಡುವಬಗ್ಗೆ ಪರಿಶೀಲನೆ ಮಾಡಲು ಯಾವ ಅಧಿಕಾರಿಗಳು ಹೋಗಿದ್ದರು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಂಬಂಧಪಟ್ಟ ಅಧಿಕಾರಿಗಳು ಹೋಗಿದ್ದರು.

ಶ್ರೀ ಆರ್. ಮುನಿಸ್ವಾಮಯ್ಯ.—ಯಾವ ಇಲಾಖೆಯ ಅಧಿಕಾರಿಗಳು ಹೋಗಿದ್ದರು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಂಜಿನಿಯರಿಂಗ್ ಇಲಾಖೆಯ ಅಧಿಕಾರಿಗಳು ಹೋಗಿದ್ದರು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಹಳ್ಳಿಯವರಿಂದ 1,670 ರೂಪಾಯಿಗಳನ್ನು ಕಟ್ಟಿಸಿಕೊಂಡದ್ದು ಯಾವ ನಿಯಮದಮೇಲೆ ?

ಶ್ರೀ ಆರ್. ಚೆನ್ನಿಗರಾಮಯ್ಯ—ವಿಲೇಜ್ ಪಂಚಾಯಿತಿಯವರು ಕಟ್ಟಿಸಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸರಕಾರದವರು ಇಷ್ಟು ಹಣವನ್ನು ಕಟ್ಟಬೇಕು ; ಹಾಗೆ ಕಟ್ಟಿದರೆ ನೀರು ಕೊಡುತ್ತೇವೆಂದು ಹೇಳಲಿಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದೇ ನಿಬಂಧನೆಯಮೇಲೆ ಎಂದು ಕಾಣುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದರೆ ಜಾಗ್ರತೆ ಮಾಡುವುದಕ್ಕೆ ಸಿದ್ಧವಾಗಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪ್ರಯತ್ನ ಮಾಡುತ್ತೇವೆ.

Elections to the District Boards.

Q.—289. Sri B. HUTCHE GOWDA (Turuvekere).—

Will the Government be pleased to state :—

(*a*) when the District Boards were placed in charge of the Special Officer and for what period ;

(*b*) whether they contemplate to hold the elections ;

(*c*) if so when ;

(*d*) if not the reasons for postponing the elections indefinitely ;

(*e*) whether they intend to constitute advisory committees ; and if so when ?

A.—Sri R. CHENNIGARAMIAH (Minister for Local Self-Government).—

(*a*) (i) 1st March 1954.

(ii) The period is not specified.

(*b*), (*c*), (*d*) and (*e*) The matter is under consideration.

ಶ್ರೀ ಬಿ. ಹುಚ್ಚೇಗೌಡ.—ಈ ಬಗ್ಗೆ ಯೋಚನೆ ಮಾಡಲು ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಷ್ಟು ದಿವಸ ಬೇಕಾಗುತ್ತದೆಯೋ ಅಷ್ಟು ದಿವಸ ಮಾತ್ರ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಸ್ಪೆಷಲ್ ಆಫೀಸರುಗಳ ಅವಧಿಯನ್ನು ನಿರ್ದಿಷ್ಟಪಡಿಸಿಲ್ಲವೆಂದು ಹೇಳುತ್ತೀರಿ. ಹಾಗಾದರೆ ಜಿಲ್ಲಾ ಬೋರ್ಡ್ ಚುನಾವಣೆಗಳು ನಡೆದು ಎಷ್ಟು ವರ್ಷಗಳಾದುವು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಏಳೆಂಟು ವರ್ಷಗಳಾದುವೆಂದು ಕಾಣುತ್ತದೆ. ಸರಿಯಾದ ತಾರೀಖು ಗೊತ್ತಿಲ್ಲ. ಬೇಕಾದರೆ ತಿಳಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಚುನಾವಣೆಗಳು ನಡೆದು ಸುಮಾರು ಹತ್ತು ವರ್ಷಗಳಾದರೂ ಇನ್ನೂ ಚುನಾವಣೆಗಳನ್ನು ನಡೆಸದೆ ಇರುವುದಕ್ಕೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅನಿವಾರ್ಯವಾಗಿ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾಗಿ ಬಂತು. ಆದಷ್ಟು ಬೇಗನೆ ಚುನಾವಣೆಗಳನ್ನು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಅನಿವಾರ್ಯ ಎಂದರೆ ಏನು ಅನಿವಾರ್ಯಗಳೆಂದು ತಿಳಿಸುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಮಗೆಲ್ಲ ಗೊತ್ತಿದೆ. ಜಿಲ್ಲಾ ಬೋರ್ಡ್ ಕಾನೂನು ಒಂದು ಸಲ ಆಯಿತು. ಅದನ್ನು ಜಾರಿಗೆ ಕೊಡುವುದಕ್ಕೆ ನಾನಾ ತೊಂದರೆಗಳು ಬಂದುವು. ಒಂದು correct system ಮಾಡಬೇಕಾಗಿ ಬಂತು. ಅದರಲ್ಲಿ ಕೆಲವುಕಡೆ objections ಬಂದುವು. ಅವುಗಳನ್ನು ನಿವಾರಣೆಮಾಡಿ ಮತ್ತೆ ಕಾನೂನನ್ನು ಜಾರಿಗೆ ತರಬೇಕೆಂದಿದ್ದಾಗ ಅದಕ್ಕೆ ಪುನಃ ಕೆಲವು ತಿದ್ದುಪಡಿಗಳು ಬಂದುವು. ಅನಂತರ ಜಾರಿಗೆ ಕೊಡಬೇಕಾದರೆ objections ಬಂದುವು. ಹೀಗೆ ಅದನ್ನು ಜಾರಿಗೆ ಕೊಡುವುದಕ್ಕೆ ನಾನಾ ತೊಂದರೆಗಳು ಬಂದುದರಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾಯಿತು.

ಶ್ರೀ ಬಿ. ಹುಚ್ಚೇಗೌಡ.—ಜಿಲ್ಲಾಬೋರ್ಡುಗಳ ಸ್ಥಾನದಲ್ಲಿ ಸಲಹಾ ಸಮಿತಿಗಳನ್ನು ನೇಮಿಸಬೇಕೆಂಬ ಕಾನೂನು ಇದೆಯಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇದೆ.

ಶ್ರೀ ಬಿ. ಹುಚ್ಚೇಗೌಡ.—ಕಾನೂನಾಗಿ ಮೂರು ವರ್ಷವಾಗಲಿಲ್ಲವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆಯಿತು.

ಶ್ರೀ ಬಿ. ಹುಚ್ಚೇಗೌಡ.—ಮೂರು ವರುಷಗಳಾಗಿದ್ದರೂ ಸಲಹಾ ಸಮಿತಿಗಳನ್ನು ನೇಮಿಸಿಲ್ಲ; ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳನ್ನೂ ಮಾಡಲಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾಡದೇ ಇರಲು ಕಾರಣ ಸಲಹಾ ಸಮಿತಿಗಳನ್ನು ಮಾಡಬೇಕೆಂದು ಉದ್ದೇಶವಿರಲಿಲ್ಲ. ಆದರೆ ಈಗ ಮಾಡಬೇಕು ಎಂಬ ಉದ್ದೇಶವಿದೆ.

ಶ್ರೀ ಬಿ. ಹುಚ್ಚೇಗೌಡ.—ಸಲಹಾ ಸಮಿತಿಗಳನ್ನು ನೇಮಕ ಮಾಡಬೇಕೆಂಬ ಉದ್ದೇಶವಿರಲಿಲ್ಲವೆಂದರೆ ಕಾನೂನಿನಲ್ಲಿ ಸೇರಿದ್ದಮೇಲೆ, ಮಂತ್ರಿಗಳು ಹೇಳುವುದರ ಅರ್ಥವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಚುನಾವಣೆಗಳನ್ನು ಮಾಡದೆ ಇದ್ದರೆ ಮಾತ್ರ ಸಲಹಾ ಸಮಿತಿಗಳನ್ನು ನೇಮಕ ಮಾಡಬೇಕೆಂದಿದೆ. ಚುನಾವಣೆಗಳನ್ನು ನಡೆಸಬೇಕು ಎಂಬ ಉದ್ದೇಶವಿದ್ದುದರಿಂದ ಸಲಹಾ ಸಮಿತಿಗಳನ್ನು ನೇಮಕ ಮಾಡಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಮೂರು ವರ್ಷಗಳಿಂದಲೂ ಚುನಾವಣೆಗಳು ಆಗಿಲ್ಲ. ಚುನಾವಣೆಗಳಾಗದಿದ್ದರೂ ಸಲಹಾ ಸಮಿತಿಗಳನ್ನೂ ನೇಮಕ ಮಾಡಲಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪ್ರತಿವರ್ಷವೂ ಚುನಾವಣೆಗಳನ್ನು ಮಾಡಬೇಕೆಂದಿದ್ದೆವು. ಆದರೆ ಹಾಗೆ ಮಾಡಲು ಮತ್ತೆ ಮತ್ತೆ ತೊಂದರೆ ಬಂದುದರಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಲಾಯಿತು.

ಶ್ರೀ ಬಿ. ಹುಚ್ಚೇಗೌಡ.—ಇದಕ್ಕೆ ಯಾರು ಕಾರಣರೆಂದು ಹೇಳುತ್ತೀರಿ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮಾನ್ಯಸದಸ್ಯರಿಗೆ ಗೊತ್ತಿರುವಂತೆ ಪ್ರಜಾಪ್ರಭುತ್ವವೇ ಕಾರಣ.

ಶ್ರೀ ಬಿ. ಹುಚ್ಚೇಗೌಡ.—ಈ ಸಭೆಯಲ್ಲಿ ವಿಷಯ ತೀರ್ಮಾನವಾಗಿ, ಕಾನೂನಾಗಿದ್ದರೂ ಅದಕ್ಕೆ ಬೆಲೆ ಕೊಟ್ಟಿಲ್ಲ. ಹತ್ತು ವರ್ಷಗಳಾಗಿದ್ದರೂ ಚುನಾವಣೆ ಮಾಡುವುದಕ್ಕಾಗಿಲ್ಲ. ಚುನಾವಣೆಗಳನ್ನು ಮಾಡದೆ ಇದ್ದರೆ ಸಲಹಾ ಸಮಿತಿಗಳನ್ನು ಮಾಡಬೇಕೆಂದು ತಿದ್ದುಪಡಿ ಕಾನೂನಿನಲ್ಲಿದ್ದರೂ ಮೂರು ವರ್ಷಗಳಿಂದಲೂ ಸಲಹಾ ಸಮಿತಿಗಳನ್ನು ಮಾಡುವುದಕ್ಕೆ ಬಂದಿರುವ ಆತಂಕವೇನು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಲಹಾ ಸಮಿತಿ ಮಾಡಬೇಕೆಂದು ಸರಕಾರ ಯೋಚಿಸಿತ್ತು. ಈ ಮಧ್ಯೇ ಚುನಾವಣೆಗಳು ಬಂದುದರಿಂದ ಮಧ್ಯೇ ಮಾಡಬಾರದೆಂದು ಮುಂದಕ್ಕೆ ಹಾಕಲಾಗಿದೆ. ಈಗ ಅದಷ್ಟು ಬೇಗನೆ ಮಾಡಬೇಕೆಂದಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಚುನಾವಣೆಗಳು ಬರುವುದಕ್ಕೆ ಮುಂಚೆಯೇ ಮಾಡಬೇಕೆಂದಿದ್ದರೂ ಏನು ಕಾರಣದಿಂದ ನಿಂತು ಹೋಯಿತು ?

ಶ್ರೀ ಆರ್. ಚೆನ್ನಿಗರಾಮಯ್ಯ.—ಏನೇನಾಗಬೇಕಿತ್ತೋ ಎಲ್ಲ ಆಗಿ ಹೋಗಿದೆ. ಅದರ ಯೋಚನೆ ಈಗ ಬೇಡ.

ಶ್ರೀ ಬಿ. ಹುಚ್ಚೇಗೌಡ.—ಹತ್ತು ವರ್ಷಗಳಾದರೂ ಚುನಾವಣೆಗಳನ್ನು ನಡೆಸದೆ ಇರುವುದಕ್ಕೆ ಕಾರಣವೇನೆಂದರೆ, ಕಾರಣವನ್ನು ತಿಳಿಸದೆ ಇದ್ದರೆ ನಾವು ಹೇಗೆ ಒಪ್ಪುವುದಕ್ಕೆ ಸಾಧ್ಯವೆಂದು ತಿಳಿಸುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪ್ರತಿ ಸಲವೂ ಕಾರಣ ಕೇಳುತ್ತಿದ್ದೀರಿ, ಉತ್ತರ ತಿಳಿದು ಕೊಳ್ಳುತ್ತಿದ್ದೀರಿ. ಸಲಹಾ ಸಮಿತಿಗಳನ್ನು ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹೊಸ ಜಿಲ್ಲಾಬೋರ್ಡ್ ಕಾನೂನನ್ನು enforce ಮಾಡುವುದು ಯಾವಾಗ ?

Sri R. CHENNIGARAMIAH.—Notice please.

ಶ್ರೀ ಯು. ಎಂ. ಮಾದಪ್ಪ.—ಸಲಹಾಸಮಿತಿಗಳನ್ನು ನೇಮಕ ಮಾಡುತ್ತೀರೊ ಅಥವಾ ಚುನಾವಣೆಗಳನ್ನು ನಡೆಸಬೇಕೆಂದು ಯೋಚನೆ ಮಾಡುತ್ತೀರೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಲಹಾ ಸಮಿತಿಗಳು ಸದ್ಯಕ್ಕೆ, ಅನಂತರ ಚುನಾವಣೆಗಳು.

ಶ್ರೀ ಯು. ಎಂ. ಮಾದಪ್ಪ.—ಸಲಹಾ ಸಮಿತಿಗಳ ನೇಮಕ ಯಾವಾಗ ಮತ್ತು ಚುನಾವಣೆಗಳನ್ನು ನಡೆಸುವುದು ಯಾವಾಗ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಲಹಾ ಸಮಿತಿಗಳು ಸದ್ಯಕ್ಕೆ, ಚುನಾವಣೆಗಳು ಮುಂದಿನ ವರ್ಷಕ್ಕೆ.

ಶ್ರೀ ಯು. ಎಂ. ಮಾದಪ್ಪ.—ಯಾವಾಗ ಎನ್ನುವುದನ್ನು ತಿಂಗಳು, ದಿವಸಗಳಲ್ಲಿ ಸರಿಯಾಗಿ ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—Calendar of events ಹಾಕಿದ ಮೇಲೆ ತಾರೀಖು ಗೊತ್ತಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಜಿಲ್ಲಾ ಬೋರ್ಡುಗಳನ್ನು ಉಳಿಸಿಕೊಳ್ಳಬೇಕೆಂದು ಯೋಚನೆ ಮಾಡಿದ್ದೀರೋ ಅಥವಾ ತೆಗೆದು ಹಾಕಬೇಕೆಂದು ಯೋಚನೆ ಮಾಡಿದ್ದೀರೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ತೆಗೆದು ಹಾಕಬೇಕೆಂದು ಯೋಚನೆ ಮಾಡಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಜಿಲ್ಲಾ ಬೋರ್ಡ್‌ಗಳು ಬದುಕಿವೆಯೋ, ಸತ್ತಿವೆಯೋ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಬದುಕಿವೆ.

ಶ್ರೀ ಯು. ಎಂ. ಮಾದಪ್ಪ.—ಯಾವರೀತಿ ಬದುಕಿವೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆಯಾ ಜಿಲ್ಲೆಗಳಲ್ಲಿ ಬದುಕಿವೆ.

ಶ್ರೀ ಯು. ಎಂ. ಮಾದಪ್ಪ.—ಜಿಲ್ಲಾಬೋರ್ಡುಗಳ ಚುನಾವಣೆಗಳನ್ನಾಗಲೀ, ಸಲಹಾ ಸಮಿತಿಗಳನ್ನಾಗಲೀ ಮಾಡದೆ ಇರಬೇಕಾಗಿದ್ದರೆ ಹಿಂದೆ ಕೆಲವು ಕಾಂಗ್ರೆಸ್ ಪ್ರೆಸಿಡೆಂಟರುಗಳು ಅನೇಕ ದುರ್‍ವ್ಯವಹಾರ ಮಾಡಿರುವುದನ್ನು ಕೂಡಿಸುವುದಕ್ಕೆ ನಿಧಾನ ಮಾಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕಾಂಗ್ರೆಸೇತರ ಪ್ರೆಸಿಡೆಂಟರೂ ಇದ್ದರು.

ಶ್ರೀ ಯು. ಎಂ. ಮಾದಪ್ಪ.—ಅದರಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರು ಎಷ್ಟು ಮಾಡಿದ್ದಾರೆ ಮತ್ತು ಕಾಂಗ್ರೆಸೇತರ ಪ್ರೆಸಿಡೆಂಟರು ಎಷ್ಟು ಮಾಡಿದ್ದಾರೆಂದು ಹೇಳುತ್ತೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ವಿಷಯ ಈಗ ಬೇಡ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಿಲ್ಲಾ ಬೋರ್ಡುಗಳು ಹೋದಲಾಗಾಯ್ತು ಜಿಲ್ಲಾಬೋರ್ಡು ಕೆಲಸಗಳು ಇವತ್ತಿನವರೆಗೂ ಸಮರ್ಪಕವಾಗಿ ನಡೆದಿಲ್ಲವೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ರೀತಿ ರಿಪೋರ್ಟ್ ಬಂದಿಲ್ಲ. ತಮ್ಮಂಥ ಮಹನೀಯರಿಂದ ಕೇಳಿದ್ದೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಿಲ್ಲಾ ಬೋರ್ಡ್‌ಗಳಿಗೆ ಕೊಟ್ಟ ಹಣ ಸರಿಯಾಗಿ ವಿನಿಯೋಗವಾಗದೆ ದುರುಪಯೋಗವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ದುರುಪಯೋಗವಾಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದುರುಪಯೋಗವಾಗದೆ ಇದ್ದರೆ ಲ್ಯಾಪ್ಸ್ ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಲ್ಯಾಪ್ಸ್ ಆಗಿಲ್ಲ ಹಣ ಸಾಲದು ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಮೂರು ವರ್ಷಗಳಾದರೂ ಚುನಾವಣೆಗಳನ್ನು ನಡೆಸುವುದೇ ಇಲ್ಲವೆಂದು ಹೇಳಿದರೆ popular representation ತಪ್ಪಿಸಬೇಕು ಎನ್ನುವುದು ಸರಕಾರದ ಉದ್ದೇಶವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ಉದ್ದೇಶವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅಂಥ ಉದ್ದೇಶವಿಲ್ಲ; ಚುನಾವಣೆಗಳನ್ನು ನಡೆಸಲಿಲ್ಲ ಎಂದರೆ ಏನು ?

ಅಧ್ಯಕ್ಷರು.—ಉದ್ದೇಶ ಚೆನ್ನಾಗಿದೆ. ಆದರೆ ಚುನಾವಣೆ ನಡೆಸಲಿಕ್ಕೆ ಆಗಲಿಲ್ಲ. ಅದಕ್ಕೇನು ಮಾಡುವುದು.

ಶ್ರೀ ಬಿ. ಹುಚ್ಚೇಗೌಡ.—ಸಲಹಾ ಸಮಿತಿಗಳನ್ನು ಯಾವಾಗ ನೇಮಕ ಮಾಡುತ್ತೀರಿ ಎಂದು ಈಗಲಾದರೂ ಒಂದು ಖಚಿತವಾದ ತಾರೀಖನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸಲಹಾ ಸಮಿತಿಗಳನ್ನು ಅಸೆಂಬ್ಲಿಯ ಅಧಿವೇಶನ ಮುಗಿದ ಕೂಡಲೇ ಆದಷ್ಟು ಬೇಗನೆ ಮಾಡಬೇಕೆಂದು ಏರ್ಪಾಡು ಮಾಡಿದೆ. ಚುನಾವಣೆಗಳನ್ನು ಮುಂದಿನ ವರ್ಷ ಬಹುಶಃ ಫೆಬ್ರುವರಿ, ಮಾರ್ಚಿ ತಿಂಗಳಲ್ಲಿ ಮಾಡಬೇಕೆಂಬ ಉದ್ದೇಶವಿದೆ.

ಶ್ರೀ ಬಿ. ಹುಚ್ಚೇಗೌಡ.—ಅದಷ್ಟು ಬೇಗನೆ ಎಂದರೆ ಯಥಾ ಪ್ರಕಾರ ಹಿಂದೆ ಆದಂತೆಯೇ ಆಗಬಹುದು. ಆದ್ದರಿಂದ ಯಾವಾಗ ಎಂದು ಹೇಳುತ್ತೀರಾ?

ಅಧ್ಯಕ್ಷರು.—ಫೆಬ್ರವರಿ-ಮಾರ್ಚಿ ತಿಂಗಳಲ್ಲಿ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಜಿಲ್ಲಾ ಬೋರ್ಡುಗಳಿಗೆ ರೆವಿನ್ಯೂ ಅಧಿಕಾರಿಗಳನ್ನು ಹಾಕಿರುವುದನ್ನು ತಾವು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ವಾಪಸು ತೆಗೆದುಕೊಳ್ಳತಕ್ಕ ಆವಶ್ಯಕತೆ ಕಂಡು ಬಂದರೆ ಹಾಗೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಸರಕಾರದಿಂದ ಕೊಡತಕ್ಕ ಗ್ರ್ಯಾಂಟ್ ಸಾಲದೆ ಇರುವುದರಿಂದ ಈ ಅಧಿಕಾರಿಗಳಿಗೆ ಕೆಲಸವಿಲ್ಲವೆಂಬುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಈ ಕೆಲಸಕಾರ್ಯಗಳಿಗೆ ಹಣವನ್ನು ವಿನಿಯೋಗ ಮಾಡುವುದಕ್ಕಿಂತ ಅಲ್ಲಿನ ಸಿಬ್ಬಂದಿಗೆ ಹೆಚ್ಚಿಗೆ ಖರ್ಚಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಎಲ್ಲ ಇಲಾಖೆಗಳಲ್ಲಿಯೂ ಸಿಬ್ಬಂದಿಗಾಗಿ ಖರ್ಚಾಗುತ್ತದೆ. ಅದನ್ನು ತಪ್ಪಿಸುವುದಕ್ಕೆ ಹೇಗಾಗುತ್ತದೆ?

ಶ್ರೀ ಜಿ. ಪುಟ್ಟಸ್ವಾಮಿ.—ಅನಾವಶ್ಯಕ ಖರ್ಚನ್ನು ಹೆಚ್ಚಿಗೆ ಮಾಡಿಕೊಂಡು ಹೋಗುವುದು ಮತ್ತು ಆ ರೀತಿ waste ಆಗುತ್ತಿರುವುದರ ಬಗ್ಗೆ ಸರಕಾರದ ಉದ್ದೇಶವೇನು?

ಶ್ರೀ ಆರ್. ಚೆನ್ನಿಗರಾಮಯ್ಯ.—ಅನಾವಶ್ಯಕವಾದ ಖರ್ಚು ಮಾಡಬೇಕೆಂಬ ಉದ್ದೇಶವಿಲ್ಲ. ಸಿಬ್ಬಂದಿ ಅವಶ್ಯವಾಗಿ ಬೇಕಾದ್ದರಿಂದ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಅವರಿಗೆ ಯಾವ ಕೆಲಸವೂ ಇಲ್ಲದೆ ವೃಥಾ ಸಂಬಳ ತೆಗೆದುಕೊಳ್ಳುತ್ತಾ ಇರುವುದನ್ನು ಮುಂದುವರಿಸಿಕೊಂಡುಬರುವುದು ಸರಕಾರದವರ ನೀತಿಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದನ್ನು ಒಪ್ಪಿಕೊಳ್ಳುವುದಿಲ್ಲ. ಕೆಲಸ ನಡೆಯುತ್ತಾ ಇದೆ. ಸಮರ್ಪಕವಾಗಿ ನಡೆಯದೇ ಇರಬಹುದು ಅಷ್ಟೆ.

ಶ್ರೀ ಜಿ. ಪುಟ್ಟಸ್ವಾಮಿ.—ಸಿಬ್ಬಂದಿಗಾಗಿ ಎಷ್ಟೆಷ್ಟು ಖರ್ಚಾಗುತ್ತಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದೆಲ್ಲಾ ಆಕ್ಟಿವಿಟೀಸ್ 'ರೋಲ್'ನಲ್ಲಿ ಸಿಕ್ಕುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಕೆಲಸ ಎಷ್ಟೆಷ್ಟು ನಡೆದಿದೆ ಎಂಬುದರ ವರದಿಯನ್ನು ಕೊಡುತ್ತೀರಾ?

Mr. SPEAKER.—Order, order, this is outside the scope of the main question.

Sri S. SRINIVASA IYENGAR.—The Government were pleased to say that the Committees would be constituted; may I know the composition of the Committees?

Mr. SPEAKER.—The Committees will be attached to every District Local Board, and naturally it will be considered at the exact time.

Sri S. SRINIVASA IYENGAR.—Now the Government were pleased to say that they would constitute a committee immediately. I want to know its composition.

Mr. SPEAKER.—How can he give the names of the personnel?

Sri S. SRINIVASA IYENGAR.—I want to now the principle that they would keep in mind while constituting the committee. I would like to know whether the Committee in question will include the members of the Legislative Assembly of the District or whether they would constitute the members that are existing, because when it was discussed previously, there was a dispute as to whether it should constitute the legislators of that district or whether it should be composed of old members. I want to know the policy of the Government in constituting the committee or the principle the Government would keep in view while constituting this Committee?

Sri R. CHENNIGARAMIAH.—It may be both, Sir.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಳೆಯ ಮೈಸೂರನ್ನು ಬಿಟ್ಟು ಹೊಸ ಪ್ರಾಂತ್ಯದಲ್ಲಿ ಎಲ್ಲೆಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರಚನೆಯಾಗಿದೆ ಸ್ವಾಮಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೊಸದಾಗಿ ಬಂದಿರತಕ್ಕ ಪ್ರದೇಶದಲ್ಲಿ ಕೊಡಗಿನ ವಿನಾ ಬಾಕಿ ಎಲ್ಲ ಕಡೆಗೂ ಡಿಸ್ಟ್ರಿಕ್ಟ್ ಬೋರ್ಡ್ ರಚನೆ ಇದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಾಗಾದರೆ ಈ ಮೈಸೂರಿನ ಕೆಲವು ಭಾಗದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರಚನೆ ಇದ್ದು, ಕೆಲವು ಭಾಗದಲ್ಲಿ ರಚನೆ ಇಲ್ಲದೇ ಇರುವುದರಿಂದ, ಕೆಲವು ಭಾಗದಲ್ಲಿ ಕೆಲಸಕಾರ್ಯಗಳು ಸಮರ್ಪಕವಾಗಿ ಡೆಮೊಕ್ರೆಟಿಕ್ ಪ್ರಿನ್ಸಿಪಲ್ಸ್‌ಗೆ ಅನುಗುಣವಾಗಿ ನಡೆದು ಕೆಲವು ಕಡೆ ನಡೆಯದೇಇರುವಾಗ ಆದಷ್ಟು ಜಾಗ್ರತೆ ಈ ವರ್ಷದೊಳಗೇ ಚುನಾವಣೆ ನಡೆಸುವುದಕ್ಕಾಗುವುದಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆಗುವುದಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಾಗಾದರೆ ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟ ಎಲ್ಲ ಕೆಲಸ ಕಾರ್ಯಗಳೂ ಕೂಡ ಚುನಾವಣೆಯೊಂದರಿಂದಲೇ ನಿಂತಿವೆ ಎನ್ನುವುದು ಸರಕಾರಕ್ಕೂ ದೇಶಕ್ಕೂ ಕೂಡ ಗೊತ್ತಾಗಿದೆಯಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಚುನಾವಣೆಯೊಂದರಿಂದಲೇ ನಿಂತಿಲ್ಲ. ಈಗ ಅದಕ್ಕೇ ಸಲಹಾ ಸಮಿತಿಗಳನ್ನು ಆದಷ್ಟು ಬೇಗ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ನಾನು ಕೇಳತಕ್ಕ ಪ್ರಶ್ನೆ ಸಲಹಾಸಮಿತಿಗೆ ಸಂಬಂಧಪಟ್ಟದ್ದಲ್ಲ. ಈಗಾಗಲೇ ಲೆಜಿಸ್ಲೇಟಿವ್ ಅಸೆಂಬ್ಲಿ ಎಲೆಕ್ಷನಿಂದ ಎಷ್ಟೋ ಕಷ್ಟವನ್ನು ನಾವು ಎದುರಿಸಿದ್ದೇವೆ. ಅದನ್ನು

ಗಮನದಲ್ಲಿಟ್ಟುಕೊಂಡು ಈ ಚುನಾವಣೆ ಜಾಗ್ರತೆ ಮಾಡಿ, ಹೊಸ ಡಿಸ್ಟ್ರಿಕ್ಟ್ ಬೋರ್ಡ್ ರಚನೆ ಮಾಡುವುದು ಉತ್ತಮವಲ್ಲವೇ?

ಅಧ್ಯಕ್ಷರು.—ಮುಂದಿನ ವರ್ಷ ಫೆಬ್ರವರಿ ಅಥವಾ ಮಾರ್ಚಿಯಲ್ಲಿ ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕ್ಯಾಲೆಂಡರ್ ಹಾಕುವುದಕ್ಕೆ 12 ತಿಂಗಳು ಏಕೆ ಬೇಕು ಸ್ವಾಮಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ಮಧ್ಯೇ ಮಳೆಗಾಲ ಬರುತ್ತದೆ. ಅಕ್ಟೋಬರ್, ನವೆಂಬರ್, ಡಿಸೆಂಬರ್‌ನಲ್ಲಿ ಹಾರ್ವೆಸ್ಟ್ ಸೀಸನ್ ಬರುತ್ತದೆ. ಈ ಕೆಲಸ ಆಗ ಕಷ್ಟ. ಮತ್ತು ಕ್ಯಾಲೆಂಡರ್ ಹಾಕಿ, ಓಟರುಗಳ ಲಿಸ್ಟ್ ತಯಾರುಮಾಡಬೇಕು. ಮೊನ್ನೆ ತಾನೆ ಜನರಲ್ ಎಲೆಕ್ಷನ್ ಆಯಿತು. ಬಹಳ ಕಷ್ಟಗಳನ್ನು ಎದುರಿಸಿದ್ದೇವೆ ಎಂದು ಅವರೇ ಹೇಳಿದರು. ಇದನ್ನು ಕೂಡ ಈಗಲೇ ಮಾಡುವುದಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ನಿಧಾನವಾಗಿ ಮುಂದಿನ ಬೇಸಿಗೆಯಲ್ಲಿ ಮಾಡುವುದು ಅನುಕೂಲವಾಗುತ್ತದೆ ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಜನಗಳು ಮಳೆಗಾಲವಾಗಲೀ, ಬೇಸಿಗೆ ಕಾಲವಾಗಲೀ ಡಿಸ್ಟ್ರಿಕ್ಟ್ ಬೋರ್ಡ್ ರಚನೆಯಾಗಬೇಕು, ಸರಕಾರ ಆದಷ್ಟು ಜಾಗ್ರತೆ ಅದನ್ನು ರಚನೆ ಮಾಡುವುದು ಒಳ್ಳೆಯದು ಎಂದು ನಿರೀಕ್ಷಣೆ ಮಾಡಿದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹೌದು.

ಶ್ರೀ ಟಿ. ಹನುಮಯ್ಯ.—ಡಿಸ್ಟ್ರಿಕ್ಟ್ ಬೋರ್ಡ್ ಎಲೆಕ್ಷನ್ ಡೈರೆಕ್ಟ್ ಎಲೆಕ್ಷನ್ನೇ ಅಥವಾ ಇನ್‌ಡೈರೆಕ್ಟ್ ಎಲೆಕ್ಷನ್ನೇ?

ಅಧ್ಯಕ್ಷರು.—ಅದು ಆಕ್ಟಿನಲ್ಲಿಯೇ ಇದೆ.

ಶ್ರೀ ವಿ. ಆರ್. ನಾಯ್ಡು.—ಸ್ವಲ್ಪ ವಿಶ್ರಾಂತಿ ಬೇಕು ಎಂದು ಮಾನ್ಯ ಸಚಿವರು ಹೇಳಿದರು. ಮಾನ್ಯ ಮಂತ್ರಿಗಳಿಗೆ ವಿಶ್ರಾಂತಿ ಬೇಕೋ, ಅಧಿಕಾರಿಗಳಿಗೆ ವಿಶ್ರಾಂತಿ ಬೇಕೋ? ಈ ಎಲೆಕ್ಷನ್ ಮಾಡುವುದಕ್ಕೆ ಕೂಡ ಕಾನೂನಿನಲ್ಲಿ 'Rest' ಎನ್ನುವ ಪದ ಇದೆಯೇ?

Mr. SPEAKER.—That is evident on the face of it.

Dr. R. NAGAN GOWDA.—May I know, Sir, whether the Government will introduce a uniform Act throughout the State before they conduct next elections?

Sri R. CHENNIGARAMIAH.—We have been trying at it.

Dr. R. NAGAN GOWDA.—My question was: whether they will be able to have a new uniform Act before the next election is conducted?

Sri R. CHENNIGARAMIAH.—I cannot definitely promise, but we will try.

ಶ್ರೀ ಎಂ. ಪಳನಿಯಪ್ಪನ್.—(*a*) whether they contemplate to hold the elections (*b*) whether they intend to constitute advisory committees, and if so when; ಎನ್ನುವುದಕ್ಕೆ the matter is under consideration ಎಂದು ಉತ್ತರ ಕೊಟ್ಟಿದ್ದಾರೆ. (B) ಮತ್ತು (C) ಒಂದಕ್ಕೊಂದು ಕಾಂಟ್ರಡಿಕ್ಟರಿ ಆಗಿರುವುದು ಸರಕಾರದವರಿಗೆ ಗೊತ್ತಿದೆಯೇ?

Mr. SPEAKER.—There is no inconsistency.

Sri M. PALANIYAPPAN.—So, the Government is constituting advisory Committees as well as going to hold the elections simultaneously?

Sri R. CHENNIGARAMIAH.—Both are under consideration.

ಶ್ರೀ ಎಂ. ಪಳನಿಯಪ್ಪನ್.—ಯಾವುದು ಮುಂಚೆ ಪರ್ಯಾಲೋಚನೆ ಮಾಡುತ್ತಾರೆ, ಯಾವುದು ಆಮೇಲೆ ಪರ್ಯಾಲೋಚನೆ ಮಾಡುತ್ತಾರೆ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದ್ದಾರೆ: ಸಲಹಾ ಸಮಿತಿ ಮೊದಲು ಮಾಡುತ್ತೇವೆ, ಚುನಾವಣೆ ಮುಂದಿನ ವರ್ಷ ಫೆಬ್ರವರಿ, ಮಾರ್ಚಿನಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಪಳನಿಯಪ್ಪನ್.—ಸಲಹಾ ಸಮಿತಿಗೆ, ಆಯಾ ಡಿಸ್ಟ್ರಿಕ್ಟ್‌ನಿಂದ ಪ್ರಪೋಸಲ್ಸ್ ಬಂದಿರುವುದು ನಿಜವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆ ವಿವರ ಎಲ್ಲಾ ಇಲ್ಲಿ ಹೇಳಬೇಕಾದ್ದು ಅನಾವಶ್ಯಕ ಎಂದು ಕಾಣುತ್ತದೆ.

Sri M. PALANIYAPPAN.—I want to know whether the Government have already called for the names from various districts and it is in the final stage of issue of order. I want to know whether it is a fact or not.

Sri R. CHENNIGARAMIAH.—I am not prepared to answer that point. Government knows how to constitute Advisory Committees; they have got their own agencies.

Mr. SPEAKER.—The point is: if the matter is of a very confidential nature and is not in public interest, I do not press the Minister to reply. I want to know from the Hon. Minister whether the matter is of such a nature that it is not in the interests of the public to disclose it here.

Sri R. CHENNIGARAMIAH.—I think, it is not desirable to disclose this matter at this stage.

Mr. SPEAKER.—I would difinitely like to know whether it is not in public interest.

Sri R. CHENNIGARAMIAH.—Yes Sir, it is not in public interest to disclose it.

Sri M. PALANIYAPPAN.—May I know the public interest which is involved here?

Mr. SPEAKER.—I would like to inform the House that when a matter

(MR. SPEAKER.) cannot be disclosed because it is not in public interest to disclose it, neither I nor any member of this House has any right to compel the Miniser to do so. It is not right to ask what is public interest and what is not. The point has to be decided by the Government and the Minister concerned. Once they have decided that a certain matter is not in public interest to disclose in this House, the matter should end at that.

SRI M. LINGANNA.—May I know whether the District Boards are functioning in parts other than the old ones?

MR. SPEAKER.—A reply to that has been given. The reply is that except Coorg, in other parts of the State outside old Mysore there are District Local Boards.

SRI M. LINGANNA.—I want to know whether District Boards as such are functioning in parts of Mysore other than the old ones?

MR. SPEAKER.—They are functioning much better in other parts.

SRI R. CHENNIGARAMIAH.—The Bombay Karnataka District Boards as such are functioning.

SRI M. LINGANNA.—May I know, Sir, whether these District Boards will be allowed to function under their respective District Boards Act?

SRI R. CHENNIGARAMIAH.—They would be allowed to function till the expiry of their periods.

SRI M. LINGANNA.—May I know when the time would expire for these areas?

SRI R. CHENNIGARAMIAH.—The date varies from district to district.

SRI M. LINGANNA.—Which Act, whether the existing ones or the Mysore Act, would be operative when the present period expires?

SRI R. CHENNIGARAMIAH.—Suitable action is under contemplation.

SRI M. LINGANNA.—In pursuance of the Government's decision to postpone elections, what is the attitude of the Government so far as these District Boards are concerned?

ಅಧ್ಯಕ್ಷರು.—ಉದಕ್ಕೆ ಉತ್ತರ ಕೊಟ್ಟದ್ದಾರೆ.

SRI M. LINGANNA.—I would like to know whether the Government is contemplating postponing elections in these areas also?

MR. SPEAKER.—The reply given is that suitable action would be taken.

So far as the major schemes of electricity are concerned, I want to request the State Government to bring to the pointed attention of the Central Government the necessity to provide adequate finances to develop the present electricity schemes like the Honnemaradu and one or two others that they may have in view. The Karnataka State is blessed by nature with plenty of electricity potential. Even from the point of view of the Central Government, I feel that it is no use trying to develop electricity in every State. It would be better for the Centre to consider the question of regional development as it were, so that all that is best in a region might be developed not only to the advantage of that particular region, but also to the advantage of the other parts of the country. From that point of view there is no reason why the Central Government should not give full assistance to develop the electricity potential which is found to a great extent in this part of the country. It is not only a matter of importance to this State, but also to the entire country. If electricity could be produced in sufficient quantity in this State and the Central Government can give us the assistance needed to develop electricity, it would be possible for us even to sell that

electricity to the neighbouring areas so that they could have it much more economically than what it would cost them to produce in those areas. That will go a long way in adding to the resources of the State also. I would very much like the State Government to make the Central Government appreciate this aspect of the matter.

So far as fisheries are concerned, I am glad that the Government has taken adequate steps. But they are not enough. There is a lot to be done, particularly in the matter of giving salt. If the Government thinks that they are helping the fishermen by selling salt under a subsidised scheme at rates higher than those obtainable in the market, it is no service at all. It would even be better for the Government to dispense with such service, unless it means some actual help really useful to the fishermen. What they want is that loans should be provided for their nets and the fish they catch should be easily marketted.

So far as concessions to N.G.Os. are concerned, in our District, there are a number of elementary school teachers working in a number of aided institutions. It has not been made clear whether the aided institutions also can pay increased salaries to their teachers and this money will be reimbursed by the State Government under the Grant-in-aid code. When asked for clarification, I was told that they could pay it. I find that under the grant-in-aid rules in Madras pay scales are prescribed and the institutions will have to pay it from their funds and they will not get more than what is admissible under the grant-in-aid code. Sir, therefore it would not be possible for the aided school managements to increase the salaries of their teachers and consequently, the concessions and benefits granted by the Government to their employees will be denied to the teachers working in the aided institutions in our district. So far as district boards and local boards are concerned, they have been asked that they should raise the salaries provided their finances permit them to do so. But you know, Sir, a number of district boards are on the deficit side and this permission will mean nothing so far as district boards are concerned. The South Kanara District Board has framed its budget giving effect to these increased salaries and I would request the State Government, if the budget shows any deficit, to accept it, so that, these benefits could be extended to the teachers working in a large number of institutions under the District Board.

I would also request the Housing Board that is working here and which is sponsoring a number of housing schemes to extend its activities to the rest of the State as expeditiously as possible.

So far as Land Reforms are concerned, I want also to point out that credit is an important thing so far as agriculture is concerned Under the Second Five-Year Plan provision is made for giving cheap credit to the agriculturists. Of course a number of co-operative institutions are working in this direction, but ultimately when the credit reaches the borrower, the rate at which that credit is made available is fairly high. It is not cheap by any means. Even the primary borrowers have to borrow at 7 to 7½ per cent. It is very necessary that credit must be made cheaper. But in order to do that, smoother machinery has to be brought into existence. The Central Government has passed a Warehousing Act and under that they have thought of forming warehouses all over the country and they want the State Governments to take it up. It is proposed to construct 100 warehouses in different parts of the country under the Second Five-Year Plan. This costs a lot of money. I think we should consider what is being done in other countries so far as this aspect is concerned. Even in an advanced country like America, there is what is known as the Field Warehousing Scheme instead of what obtains in England, under which goods are taken to warehouses which are at a distance. And when goods are handed out to the warehouse, a warehouse receipt is issued and that becomes even negotiable so far as obtaining credit is

(SRI T. ANANTHA PAI)

concerned and even banks advance moneys on those receipts. But in America, instead of spending a huge capital on constructing warehouses, they have passed what is called "The Field Warehousing Act" under which instead of expecting the goods to be taken to warehouses, warehouse is taken to the goods. That means wherever goods are stored, whether it is an open area or whether it is a suitable building, the Act is made automatically applicable by a Board being hung outside the premises and this has saved a lot of money over capital expenditure.

So far as adequate supervising machinery is concerned, suitable machinery has to be provided. But honesty is a factor which is very important whether the goods is put in a Government building or in a private building. What we have got to see is that honesty forms a part of the national character; but all of us are responsible for maintaining it and not allowing it to deteriorate. All that I can say is that this has to be expedited and the question of investing a lot of money on constructing warehouses has to be considered carefully, particularly when the country is faced with shortage of cement, shortage of iron. Besides, that appears to be ambitious also. All that is necessary is, we should evolve a machinery suitable to the genius of the people and suitable to the conditions of our country and see that the primary needs of the people are met as economically and as efficiently as possible.

Thank you.

*ಶ್ರೀ ಕೆ. ಹನುಮಂತಯ್ಯ (ರಾಮನಗರ).—ಸ್ವಾಮಿ, ಪ್ರತಿಪಕ್ಷದ ನಾಯಕರಾದ ಶ್ರೀಮಾನ್ ಇಮಾಂ ಅವರು ವಿಧಾನ ಸೌಧದ ಪ್ರಸ್ತಾಪವನ್ನು ಮಾಡಿದ ಮೇಲೆ ಅದಕ್ಕೆ ಉತ್ತರ ಕೊಡತಕ್ಕದ್ದು ನನ್ನ ಕರ್ತವ್ಯವಾಯಿತು. ತಾವು ದಯಮಾಡಿ ಕಾಲವನ್ನು ಕೊಟ್ಟದ್ದಕ್ಕಾಗಿ ಕೃತಜ್ಞನಾಗಿದ್ದೇನೆ. ಇಂದು, ಯಾವ ವಿಧಾನಸೌಧವನ್ನು ಕಟ್ಟುವುದಕ್ಕೆ ಕಾರಣಭೂತ ಎಂದು ಹೇಳಿ ನನ್ನನ್ನು ಕರೆಯುತ್ತಾರೋ, ಇದೇ ಮಂದಿರದಲ್ಲಿ ನಿಂತು ನಾನು ಅಪರಾಧ ಮಾಡಿಲ್ಲ ಎಂಬ ಮೊರೆಯನ್ನು ಈ ಸಭೆಯ ಮುಂದೆ ಇಡತಕ್ಕ ಒಂದು ದೌರ್ಭಾಗ್ಯ ನನಗೆ ಬಂದಿದೆ. ಈ ದೌರ್ಭಾಗ್ಯ ಗ್ರಹಗತಿಯ ಫಲ ಎಂದು ಪುರಾಣದಲ್ಲಿ ಹೇಳುತ್ತಾರೆ. ಅನೇಕರು ಪುರಾಣ ಎಂದು ಹೇಳಿದರೆ ಹಾಸ್ಯ ಮಾಡುತ್ತಾರೆ. ನಾನಾದರೋ ಹಾಸ್ಯಮಾಡತಕ್ಕ ಮನೋವೃತ್ತಿಯುಳ್ಳವನಲ್ಲ. ಗ್ರಹಗತಿ ಚೆನ್ನಾಗಿಲ್ಲದೆ ಇರುವಾಗ ಸ್ನೇಹಿತರು ಶತ್ರುಗಳಾಗುತ್ತಾರೆ, ಒಳ್ಳೆಯ ಕೆಲಸ ಅನೇಕರಿಗೆ ಕೆಟ್ಟದಾಗಿ ಕಾಣುತ್ತದೆ. ಮೊದಲು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ, ಸ್ವಾಮಿ, ಹನ್ನೆರಡು ಮಂದಿ ಸದಸ್ಯರು ಎಸ್ಟಿಮೇಟ್ಸ್ ಕಮಿಟಿಯಲ್ಲಿ ಇದ್ದರು. ಆ ಹನ್ನೆರಡು ಮಂದಿಯಲ್ಲಿ ಎಸ್ಟಿಮೇಟ್ಸ್ ಕಮಿಟಿಯ ವರದಿಗೆ ರುಜುಮಾಡಿದಾಗ, ನಾನು ತಿಳಿದುಕೊಂಡಿದ್ದೇನೆ, ಈ ಸಭೆಯಲ್ಲೂ ಕೂಡ ಆ ಸದಸ್ಯರು ಇದ್ದಾರೆ, ಆರುಮಂದಿ ಅದನ್ನು ಓದದೆಯೇ ರುಜು ಹಾಕಿದರು. ಅದರಲ್ಲಿ ಕೆಲವರು ಖಾಯಿಲೆ ಇದ್ದರು, ಕೆಲವರಿಗೆ ಇಂಗ್ಲೀಷು ಬಾರದು. ಈ ರೀತಿ ಅದು ಪ್ರಾರಂಭವಾದಾಗಲೇ ಯಾರು ನನ್ನ ನಿಜವಾದ ಸ್ನೇಹಿತರೋ ಅವರು ಗ್ರಹಗತಿಯ ದೆಸೆಯಿಂದ ಅದನ್ನು ಓದದೆ ರುಜುಮಾಡಿ ಈ ಒಂದು ದೊಡ್ಡ ಹುಣ್ಣು ಆಗುವುದಕ್ಕೆ ಅವಕಾಶವಾಯಿತು.

ಅಧ್ಯಕ್ಷರು.—ವಾಸ್ತವಾಂಶವೇನೇ ಇರಲಿ, ಅವರು ಓದಿ ತಿಳಿದುಕೊಳ್ಳಲಾರದೆ ರುಜು ಹಾಕಿದರೆಂದು ತಾವು ಹೇಳುವುದು ಅಷ್ಟು ಸರಿಯಲ್ಲ. ಆದ್ದರಿಂದ ತಾವು ಎಸ್ಟಿಮೇಟ್ಸ್ ಸಮಿತಿಯ ವರದಿಯ ಮೇಲಾಗಲಿ ವಿಧಾನಸೌಧ ಸಮಿತಿಯ ವರದಿಯ ಮೇಲಾಗಲಿ ಯಾವ ವಿಚಾರದಲ್ಲೇ ಆಗಲಿ ತಮಗೆ ನಿಜವೆಂದು ತೋರುವುದನ್ನು ಹೇಳಬೇಕೇ ಹೊರತು ಸಭಾ ಸದಸ್ಯರ ಮೇಲೆ ಅಥವಾ ಎಸ್ಟಿಮೇಟ್ಸ್ ಸಮಿತಿ ಸದಸ್ಯರ ಮೇಲೆ ಈ ತರಹ ಅಲಿಗೇಷನ್ ಮಾಡುವುದು ಅಷ್ಟು ಯೋಗ್ಯವಾಗುವುದಿಲ್ಲ.

ಶ್ರೀ ಕೆ. ಹನುಮಂತಯ್ಯ.—ಚರ್ಚೆ ಮಾಡುವಾಗ ವಿಷಯಗಳನ್ನೆಲ್ಲ ಹೇಳಬೇಕಾಗುತ್ತದೆ. ತಾವು ಸಾವಧಾನದಿಂದ ಕೇಳಿದರೆ ಉಪಕಾರ ಮಾಡಿದಹಾಗಾಗುತ್ತದೆ. ಈ ದಿವಸ ಎನ್‌ಕ್ವೈರಿ ಕಮಿಟಿ ವರದಿಯೇನಿದೆ ಅದರ ಅಂಶಗಳನ್ನು ಒಂದೊಂದಾಗಿ ಪರಿಶೀಲಿಸುತ್ತೇನೆ. ಮೊದಲು ಸಮಿತಿಯವರು ಮಾಡಿರತಕ್ಕ ದೊಡ್ಡ ಆರೋಪಣೆ ಏನೆಂದರೆ, ಮೊದಲು 50 ಲಕ್ಷ ರೂಪಾಯಿಗಳ ಅಂದಾಜಿತ್ತು, ಅನಂತರ 130 ಲಕ್ಷಕ್ಕೇರಿತು, ಈಗ 160 ಅಥವಾ 180 ಲಕ್ಷ ರೂಪಾಯಿಗಳವರೆಗೆ ಹೋಗಬಹುದು ಎಂದು. ಅದು ವಾಸ್ತವ. ಈ ದಿವಸ ನಾನು ಈ ಸಭೆಯ ಮುಂದಿಡತಕ್ಕ ದೃಷ್ಟಿಯಿದು. ಈಗ ಈ ಸಮಿತಿಯವರೇನು ವರದಿ ಕೊಟ್ಟಿದ್ದಾರೋ ಅದು ಏಕದೃಷ್ಟಿಮಾತ್ರ ಇಟ್ಟುಕೊಂಡು ಕೊಟ್ಟಿರತಕ್ಕದ್ದು; ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ನಿಷ್ಪಕ್ಷಪಾತವಾಗಿ ಬರೆದ ವರದಿಯಲ್ಲ. ಈ ರೀತಿ ಪಿ.ಡಬ್ಲ್ಯು. ಇಲಾಖೆಯಲ್ಲಿ ಮಾಡಿದ ಅಂದಾಜುಗಳನ್ನು ಮೀರಿ ಖರ್ಚಾಗಿರತಕ್ಕ ಸಂದರ್ಭಗಳು ಈ ದಿವಸ ಅನೇಕವಾಗಿವೆ; ಈ ವಿಧಾನ ಸೌಧದ ವಿಚಾರದಲ್ಲಿ ಮಾತ್ರ ಹೀಗಾಗಿಲ್ಲ. ಬಹುಶಃ ಪಿ.ಡಬ್ಲ್ಯು. ಇಲಾಖೆ ಮೈಸೂರು ದೇಶದಲ್ಲಿ ಎಂದು ಹುಟ್ಟಿತೋ ಅಂದಿನಿಂದಲೂ ಇಂತಹದು ನಡೆದುಕೊಂಡುಬಂದಿದೆ; ಇದು ಒಂದು ಅಪರಾಧವೂ, ಒಂದು ನ್ಯಾಯವೂ ಆಗಿದೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀ ಕೆ. ಪಟ್ಟಾಭಿರಾಮನ್ ಅವರು ಸದಸ್ಯರಾಗಿದ್ದ ಒಂದು ಸಮಿತಿಯವರು, ಶ್ರೀ ಮಾಧವರಾಯರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಮೈಸೂರು ಫೈನಾನ್ಸ್ ಎನ್‌ಕ್ವೈರಿ ಕಮಿಟಿಯವರು, ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. 95ನೆಯ ಪುಟದಲ್ಲಿ ಅವರು ಹೀಗೆ ಹೇಳಿದ್ದಾರೆ:—

"The preparation of works estimates has become notoriously

perfunctory. When the relative scheme, after years of incubation, comes within the range of active consideration, the old estimates are dished up and sanction accorded in a hurry. Before work is started no serious attempt is made to verify the original data, to bring the rates to current levels or to compute realistically the cost of items for which provision had been made on a rough and ready basis when the schemes had been only a distant possibility. Subsidiary works, even those of an essential character are left out, to be included later in a separate estimate as for a new work. As a result of this, projects, large and small, have been undertaken without any idea at the outset of the commitments involved. In the case of the irrigation works, moreover, the investigations and formalities enjoined by statute are not attended to—a neglect which might lead to serious embarrassment in determining water rates, rates of acreage, contribution, etc.

Several works for which estimates were prepared long ago have had to be revised more than once with a doubling or even trebling of the originally estimated cost. This is due mainly to lack of care in preparing the original estimates partly also to delays in the execution of works as a result of which much avoidable expenditure has been incurred."

ಹೀಗೆ ಹಿಂದೆ ಬಹಳ ವರ್ಷಗಳಿಂದಲೂ ನಡೆದಿರತಕ್ಕ ಕಾಂಗಾರಿಗಳ ವಿಷಯ ಈ ರೀತಿಯಾಗಿದೆಯೆಂದು ಅವರು ಅಭಿಪ್ರಾಯ ನೀಡಿದ್ದಾರೆ. ಈ ಅಭಿಪ್ರಾಯವನ್ನು ಮಾತ್ರ ಸೂಚಿಸಿ ಇತರ ಅಂಕಿಅಂಶ ಕೊಡದಿದ್ದರೆ ಅಷ್ಟು ಉಪಯೋಗವಾಗುವುದಿಲ್ಲ. ಸಮಿತಿಯವರು ಒಂದುಕಡೆ ಹೀಗೆ ಹೇಳಿದ್ದಾರೆ :—

"*The Bhadra Reservoir Project.*—Administrative sanction was accorded to this project in November 1946, the estimated cost being Rs. 888.48 lakhs. The cost of labour and materials also went up. Consequently, the estimate was revised to Rs. 17.75 crores."

ಮೊದಲು ಸುಮಾರು ಒಂಬತ್ತುಕೋಟಿ ರೂಪಾಯಿಗಳಿಗೆ ಅಂದಾಜಾಗಿದ್ದು ಆಮೇಲೆ ಅದು 17 ಕೋಟಿಯವರೆಗೂ ಏರಿತು. ಇನ್ನೂ ಈ ಕೆಲಸ ನಡೆಯುತ್ತಿದೆ. ಈಗಾಗಲೇ ಈ ಕೆಲಸದ ಅಂದಾಜು ಎರಡರಷ್ಟಕ್ಕೆ ಮೀರಿಹೋಗಿದೆ. ಹಾಗೆಯೇ ತುಂಗಾ ಪ್ರಾಜೆಕ್ಟ್.

"*The Tunga Anicut Project.*—This project was sanctioned in the year 1946, the estimated cost being Rs. 70 lakhs. Subsequently, the estimate has been revised to Rs. 232.00 lakhs."

70 ಲಕ್ಷ ವಿದ್ದುದು 232 ಲಕ್ಷಕ್ಕೆ ರಿವೈಜ್ ಆಗಿದೆ. ಇನ್ನು ನುಗು ಪ್ರಾಜೆಕ್ಟ್ ನೋಡೋಣ.

"*Nugu Project.*—This was also sanctioned in the year 1946 at an estimated cost of Rs. 81 lakhs to irrigate an area of 20,000 acres . . . . Subsequently the design was revised. Mainly on account of the increased cost of labour and materials, the revised estimate went up to Rs. 224.25 lakhs."

ಈ ಮೂರು ಉದಾಹರಣೆಗಳಲ್ಲದೆ, ಈ ಸಮಿತಿಯವರು ಮೈಸೂರು ದೇಶದಲ್ಲಿ ಕನ್ನಂಬಾಡಿಕಟ್ಟೆ, ಕೃಷ್ಣರಾಜಸಾಗರ ರಿಜರ್ವಾಯರ್ ಎಂದೇನು ಹೇಳುತ್ತಾರೋ ಅದನ್ನೂ ಪರಿಶೀಲಿಸಬೇಕಾಗಿತ್ತು. ಈ ರಿಸರ್ವಾಯರ್ ಕಟ್ಟಿದಾಗಿನಿಂದ ಸುಮಾರು 50 ವರ್ಷಗಳವರೆಗೆ ನಡೆದಿರುವ ಪ್ರಾಜೆಕ್ಟುಗಳನ್ನೆಲ್ಲ ದೃಷ್ಟಿಯಲ್ಲಿಟ್ಟು ನೋಡಿದರೆ ಕೊನೆಗೆ ಒಂದಕ್ಕೆ ಎರಡರಷ್ಟಾಗುವುದಲ್ಲದೆ, ಅದಕ್ಕಿಂತಲೂ ಮೀರಿ ಎಸ್ಟಿಮೇಟಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಕಂಡುಬರುತ್ತದೆ. ಈ ಒಂದು ಅಪರಾಧವೇನಾಗಿದೆಯೆಂದು ಕೆಲವರು ಪರಿಗಣಿಸಿದ್ದಾರೋ ಅದು ಮೈಸೂರು ಸಂಸ್ಥಾನಕ್ಕೆ ಮಾತ್ರ ಅನ್ವಯಿಸತಕ್ಕದ್ದಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾಕ್ರ-ನಂಗಲ್, ಹಿರಾಕುಡ್ ಇಂಥ ದೊಡ್ಡದೊಡ್ಡ ಜಲಾಶಯಗಳಿಗಾಗಿ ಏನು ಎಸ್ಟಿಮೇಟ್ ಆಗಿತ್ತೋ ಅದು ರಿವೈಜ್ ಆಗಿ ಒಂದಕ್ಕೆ ಎರಡರಷ್ಟಾಗಿ, ಅನೇಕವೇಳೆ ಮೂರರಷ್ಟು ಆಗಿ, ಕೆಲಸ ನಡೆದಿದೆ. ಭಾಕ್ರ-ನಂಗಲ್ ಪ್ರಾಜೆಕ್ಟಿನ ಅಂಕಿಅಂಶ ಈ ದಿವಸ ನನ್ನ ಹತ್ತಿರ ಇಲ್ಲ. ಆದರೆ ಅದನ್ನು ಓದಿ ತಿಳಿದುಕೊಂಡಿದ್ದೇನೆ. ಮೊದಲು ಸುಮಾರು 100 ಕೋಟಿಗಳಿಗೆ ಅಂದಾಜಾಗಿದ್ದುದು 200-250 ಕೋಟಿ ರೂಪಾಯಿಗಳಿಗೇರಿದೆ. ಇಂಡಿಯಾ ದೇಶದಲ್ಲಿ ಎಲ್ಲೆಲ್ಲಿ ಪಿ.ಡಬ್ಲ್ಯು. ಇಲಾಖೆಯಿದೆಯೋ ಅಲ್ಲೆಲ್ಲಾ ಮೊಟ್ಟಮೊದಲು ಅಂದಾಜೇನು ಮಾಡಿದ್ದಾರೋ ಅದು ಪ್ರಾಜೆಕ್ಟ್ ಮುಗಿಯುವವರೆಗೆ ಈ ರೀತಿ ಅಧಿಕವಾಗಿದೆ. ಹೀಗೆ ಇಂಡಿಯಾ ದೇಶಕ್ಕೆಲ್ಲ ಅನ್ವಯಿಸತಕ್ಕ ಏನೊಂದು ಅಪರಾಧವಿದೆಯೋ ಅದನ್ನು ವಿಧಾನ ಸೌಧದ ವಿಚಾರದಲ್ಲಿ ಮಾತ್ರ ಅನ್ವಯಿಸಿ ಉತ್ಪ್ರೇಕ್ಷಮಾಡಿ ಒಂದೇ ದೃಷ್ಟಿಯಿಂದ ವರದಿ ಕೊಡುವುದು ಸತ್ಯಕ್ಕೆ, ನ್ಯಾಯಕ್ಕೆ ಅನುಗುಣವಾಗಿಲ್ಲ. ಅಕೌಂಟ್ಸ್ ವಿಚಾರ ಇಷ್ಟು. ಈ ಮೈಸೂರು ದೇಶದಲ್ಲಿ ಎಷ್ಟು ಪ್ರಾಜೆಕ್ಟುಗಳು ಇದುವರೆಗೆ ಕಟ್ಟಲ್ಪಟ್ಟಿವೆಯೋ ಅಷ್ಟು ಪ್ರಾಜೆಕ್ಟುಗಳ ವಿಷಯದಲ್ಲೂ ಕೂಡ ವಿಧಾನಸೌಧದ ವಿಚಾರದಲ್ಲಿ ಮಾಡಿರುವ ಒಂದು ಆರೋಪಣೆಯು ಅನ್ವಯಿಸುತ್ತದೆ.

(ಶ್ರೀ ಕೆ. ಹನುಮಂತಯ್ಯ).

4 P.M.

ಈ ಅಪರಾಧಕ್ಕೆ ಏನು ಕಾರಣವೆಂಬುದನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಬಹುದಾಗಿತ್ತು. ವಿಚಾರಣಾಸಮಿತಿಯವರು ಈ ಒಂದು ವಿಷಯವನ್ನು ಪ್ರಸ್ತಾಪಿಸಿ ಅದಕ್ಕೆ ಏನೇನೋ ಕಾರಣಗಳನ್ನು ಕೊಟ್ಟಿದ್ದಾರೆ: ವಿಧಾನ ಸೌಧದ ಕಟ್ಟಡಕ್ಕೆ ಸಂಬಂಧಪಟ್ಟ ಎಲ್ಲ ಅಕೌಂಟ್ಸುಗಳಲ್ಲೂ ಮೊದಲು ಇದ್ದಂಥ ಎಸ್ಟಿಮೇಟಿಗಿಂತ ಹೆಚ್ಚಾಗಿ ಖರ್ಚು ಆಗಿದ್ದರೂ ಯಾವದೇ ಅಕೌಂಟು ಅಪ್‌ಟುಡೇಟಾಗಿ ಇಡಲ್ಪಟ್ಟಿಲ್ಲವೆಂದು ಹೇಳಿದ್ದಾರೆ. ಪ್ರತಿಯೊಂದು ಪ್ರಾಜೆಕ್ಟಿನಲ್ಲೂ ಅದು ಕಾರ್ಯಗತವಾಗುವ ಮುಂಚೆ ಈ ರೀತಿ ಆಗುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ನಾನು ತರುತ್ತಲೇ ಇದ್ದೆನು. ಇಂತಹ ಪ್ರಾಜೆಕ್ಟಿನಲ್ಲಿ ಇಷ್ಟಿಷ್ಟು ಎಸ್ಟಿಮೇಟಿಗಿಂತ ಹೆಚ್ಚು ಖರ್ಚು ಆಗಿದೆ, ಅಕೌಂಟ್ಸು ಈ ರೀತಿಯಾಗಿ ಇವೆ ಎಂದು ಒಂದು ಕಂಪೆರಿಟಿವ್ ಸ್ಟೇಟ್‌ಮೆಂಟನ್ನು ಕೊಟ್ಟು ನಿಷ್ಪಕ್ಷಪಾತವಾಗಿರುವ ಒಂದು ಚಿತ್ರವನ್ನು ಜನತೆಯ ಮುಂದೆ ಇಟ್ಟಿದ್ದರೆ, ಅದು ಸೌಜನ್ಯದಿಂದ ಕೂಡಿದ ಸತ್ಯ ಮಾರ್ಗಕ್ಕೆ ಅನುಗುಣವಾಗುತ್ತಿತ್ತು. ವಿಧಾನ ಸೌಧ ಕಟ್ಟಡ ಕಟ್ಟುವಂಥ ಮಹಾ ಅಪರಾಧ ಮಾಡಬಾರದಾಗಿತ್ತು ಎನ್ನುವಂತಹ ಒಂದು ಚಿತ್ರವನ್ನು ವರದಿಯಲ್ಲಿ ಚಿತ್ರಿಸಿ ಎಲ್ಲರ ಮುಂದೆ ಇಟ್ಟಿದ್ದಾರೆ. ವಿಧಾನ ಸೌಧದ ಕಾರ್ಯವನ್ನು ಕೈಕೊಳ್ಳುವ ಮೊದಲು, ಇದನ್ನು ಕಟ್ಟಿಸಬೇಕೆಂಬ ಬಗ್ಗೆ ಯೋಚನೆ ಬಂದಾಗ ನಾನು ಶಾಸನ ಸಭೆಯಲ್ಲಿ ಈ ಕಟ್ಟಡ ಕಟ್ಟಿಸುವ ಸ್ಥಳ, ಅದರ ಪ್ರಮಾಣ, ಅದರ ಸೌಂದರ್ಯ ಮುಂತಾದುವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಈ ಶಾಸನ ಸಭೆಯು ಪದೇ ಪದೇ ಬಜೆಟ್ಟಿಗೆ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ವಿರೋಧ ಪಕ್ಷದ ನಾಯಕರಾದ ಶ್ರೀ ಇಮಾಮ್ ಸಾಹೇಬರು ಯಾವುದಕ್ಕೂ ಒಪ್ಪಿಗೆ ಕೊಡುತ್ತಿರಲಿಲ್ಲ. ವಿರೋಧ ಪಕ್ಷದವರ ದೃಷ್ಟಿ ಬೇರೆ ರೀತಿಯಾಗಿರುವುದೇ ಇದಕ್ಕೆ ಕಾರಣ. ದೋಷಗಳನ್ನೇ ಎಣಿಸಬೇಕೆಂದಿರುವಾಗ ನ್ಯಾಯವಾದ ಬಗ್ಗೆ ಹೆಚ್ಚು ವಿವರಗಳನ್ನು ಕೊಡುವುದಕ್ಕೆ ಆಗುವದಿಲ್ಲ. ಈಗ ಪ್ರಜಾಪ್ರಭುತ್ವದ ದಿವಸ. ಪ್ರಜಾಪ್ರಭುತ್ವದ ಪ್ರಕಾರ ಯಾವದು ಏನೇ ಪ್ರಶ್ನೆ ಇದ್ದರೂ ಕೂಡ ಅದನ್ನು ನಿರ್ಧರಿಸುವ ಹಕ್ಕು ಜನಗಳಿಗೆ ಸೇರಿದೆ ಎಂಬುದು ಸ್ಪಷ್ಟವಾಗಿ ಇದೆ. ಕಳೆದ ಐದು ವರ್ಷಗಳಲ್ಲಿ ಈ ಸಭೆಯು ಯಾವ ಯಾವ ಕಾರ್ಯಕಲಾಪಗಳನ್ನು ನಡೆಸಿದೆಯೋ ಅದಕ್ಕೆಲ್ಲಾ ಒಪ್ಪಿಗೆ ಕೊಟ್ಟಿದೆ. ಇದನ್ನು ಟೀಕಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಇನ್ನು ಲೆಕ್ಕದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಅಕೌಂಟ್ಸ್ ವಿಷಯದಲ್ಲಿ ತಪ್ಪುಗಳು ಆಗಬಹುದು. ಸ್ಪೆಷಲ್ ಇಂಜಿನಿಯರ್, ಚೀಫ್ ಇಂಜಿನಿಯರ್ ಇವರುಗಳು ಎಷ್ಟೇ ಸಿಬ್ಬಂದಿಯನ್ನು ಕೇಳಿದರೂ ಅದನ್ನು ಕೊಡುವ ಮನಸ್ಸು ಸರ್ಕಾರಕ್ಕೆ ಇತ್ತು. ಅವರು ಕೇಳಿದ ಎಲ್ಲ ಸಿಬ್ಬಂದಿಯನ್ನೂ ಕೊಡುತ್ತಾ ಬಂದರು. ಹೆಚ್ಚು ಸಿಬ್ಬಂದಿಯನ್ನು ಲೆಕ್ಕಬರೆಯಲು ಕೇಳಬೇಕೆಂಬುದು ಅವರ ಗಮನಕ್ಕೆ ಬರಲಿಲ್ಲವೆಂದು ಕಾಣುತ್ತದೆ. ನನ್ನ ಗಮನಕ್ಕೂ ಸಹ ಬರಲಿಲ್ಲ. ಸ್ಪೆಷಲ್ ಇಂಜಿನಿಯರವರ ಗಮನಕ್ಕೂ ಬರಲಿಲ್ಲ. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ; ಗವರ್ನಮೆಂಟ್ ರೂಲ್ಸ್ ಪ್ರಕಾರ ಒಂದು ಡಿವಿಜನ್ನಿಗೆ ಎಷ್ಟು ಸಿಬ್ಬಂದಿ ಕೊಡುತ್ತಾರೆಯೋ ಅಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೆವು. ಅಕೌಂಟ್ಸ್ ವಿಷಯವನ್ನು ಇಡುವುದಕ್ಕೆ ಅಷ್ಟು ಸಿಬ್ಬಂದಿಯು ಸಾಕಾದಷ್ಟು ಆಗುವದೆಂದು ಭಾವಿಸಲಾಗಿತ್ತು. ಅಕೌಂಟೆಂಟ್ ಜನರಲ್ಲರು ಲೆಕ್ಕಪತ್ರಗಳನ್ನು ತಪಾಸು ಮಾಡಿ ನೋಡಿ, ಏನು ಹೆಚ್ಚು ವಿವರಗಳನ್ನು ಇಡಬೇಕೆಂದು ತಿಳಿಸಿದರೋ ಅಷ್ಟನ್ನು ಇಡುವುದಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ತಕ್ಷಣ ಸರ್ಕಾರವು ಮಂಜೂರು ಮಾಡಿದೆ. ನನಗೂ ಹಾಗೆಯೇ ಎನಿಸಿದ್ದರಿಂದ ಅಕೌಂಟೆಂಟ್ ಜನರಲ್ಲರು ಸಿಬ್ಬಂದಿ ಹೆಚ್ಚು ಬೇಕು ಎಂದು ಸೂಚಿಸಿದಾಗ ಸ್ಪೆಷಲ್ ಇಂಜನಿಯರರು ಅಷ್ಟು ಬೇಕು ಎಂದು ಯಾವಾಗ ಕೇಳಿದರೋ ಆಗ ಅಷ್ಟು ಕೊಟ್ಟಿದೆ. ಇದು ನನ್ನ ಅಪರಾಧವೂ ಅಲ್ಲ, ಸರ್ಕಾರದ ಅಪರಾಧವೂ ಅಲ್ಲ. ಅಕೌಂಟ್ಸ್ ವಿಷಯದ ಬಗ್ಗೆ ಇಷ್ಟು ಮಾತ್ರ ನಾನು ಹೇಳಬಲ್ಲೆ. ಏನೂ ಅನ್ಯಾಯ ಆಗಿಲ್ಲ. ಅಚಾತುರ್ಯವು ನಡೆದಿಲ್ಲ. ಅಕೌಂಟ್ಸ್ ಸ್ಟಾಫಿನಲ್ಲಿ ಟ್ರೇನ್ಡ್ ಮತ್ತು ಎಕ್ಸ್‌ಪಿರಿಯನ್ಸ್ ಆದವರು ಇರಲಿಲ್ಲ. ಲೆಕ್ಕಪತ್ರಗಳಲ್ಲಿ ಏನೂ ಅನ್ಯಾಯವಾಗಿಲ್ಲ. ಬಹುಮಟ್ಟಿಗೆ ಇದಕ್ಕೆಲ್ಲ ಪರಿಸ್ಥಿತಿಯೇ ಕಾರಣ. ಲೆಕ್ಕವನ್ನು ಒಂದೇ ಪುಸ್ತಕದಲ್ಲಿ ಬರೆದಿಲ್ಲ. ರಿಜಿಸ್ಟರುಗಳನ್ನು ಅಪ್-ಟು-ಡೇಟಾಗಿ ಇಟ್ಟಿಲ್ಲ. ಖರ್ಚು ಮಾಡಿದ ಹಣಕ್ಕೆ ಏನೇನು ವೌಚರ್ಸ್, ರಸೀತಿಗಳು ಇರಬೇಕೋ ಅವೆಲ್ಲಾ ಇವೆ. ಅವೆಲ್ಲವುಗಳನ್ನು ಸರಿಯಾದ ಪದ್ಧತಿಯಲ್ಲಿ ಅಪ್-ಟು-ಡೇಟಾಗಿ ಪುಸ್ತಕದಲ್ಲಿ ಬರೆಯುವುದಕ್ಕೆ ಸ್ವಲ್ಪ ನಿಧಾನವಾಗುತ್ತದೆ. ಅನಂತರ ನೋಡಿದರೆ ಗೊತ್ತಾಗುವುದು. ಈಗ ಲೆಕ್ಕ ಬರೆಯುವ ಕೆಲಸ ನಡೆಯುತ್ತಲಿದೆ. ಸ್ವಲ್ಪ ಕಾಲದಲ್ಲಿ ಎಲ್ಲ ಲೆಕ್ಕಗಳೂ ಬರೆಯಲ್ಪಟ್ಟ ಮೇಲೆ ಸಮರ್ಪಕವಾಗಿ ಆಗಿದೆ ಎಂಬುದು ಕಂಡುಬರಬಹುದೆಂದು ನಾನು ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಅಕೌಂಟ್ಸ್ ಸರಿಯಾಗಿಲ್ಲ ಎಂಬ ಆಕ್ಷೇಪಣೆಯನ್ನು ಸಮಿತಿಯವರು ಎತ್ತಿದ್ದಾರೆ. ಅಕೌಂಟ್ಸ್‌ನಲ್ಲಿ ಖರ್ಚು ಆದದ್ದು ಸರಿಯಾಗಿ ಇದೆಯೋ ಇಲ್ಲವೋ ಅಥವಾ ಹಣವು ಏನಾದರೂ ದುರ್ವಿನಿಯೋಗ ಆಗಿದೆಯೇ ಎಂಬುದನ್ನು ವಿಚಾರ ಮಾಡದೆ ತಮ್ಮ ವ್ಯಾಪ್ತಿಗೆ ಬಾರದೆ ಇದ್ದ ಮಿಕ್ಕ ಎಲ್ಲ ಕೆಲಸಗಳನ್ನೂ ಮಾಡಿದ್ದಾರೆ. It is outside the scope of the Committee. Any impartial member who reads the Report will find that they have done anything other than what was entrusted to them. ಏಳು ಎಂಟು ಪಟ್ಟಿಗಳನ್ನು ಹಾಕಿ ಎಂಟು ಹತ್ತು ನ್ಯೂನತೆಗಳನ್ನು ಹೇಳಿದ್ದಾರೆ. ಅವುಗಳನ್ನು ಕಂಡುಹಿಡಿಯುವ ಪ್ರಯತ್ನಕ್ಕೆ ಹೋಗಲಿಲ್ಲ. ಅಕೌಂಟೆಂಟ್ ಜನರಲ್ ಅವರು ಕಂಡುಹಿಡಿದು ಕೊಟ್ಟಿರುವ ಪಟ್ಟಿಯನ್ನೇ ಪುನಃ ಸಮಿತಿಯವರು reproduce ಮಾಡಿದ್ದಾರೆ. ಈ ಕೆಲಸವು ದಕ್ಷತೆಯಿಂದಲೂ, ಪ್ರಾಮಾಣಿಕತೆಯಿಂದಲೂ ನಡೆದಿದೆ ಎಂಬುದು ಇಡಿಯ ಪ್ರಪಂಚಕ್ಕೆ ಸ್ಪಷ್ಟವಾಗಿದೆ. ಈ ಲೆಕ್ಕದ ವಿಚಾರದಲ್ಲಿ ಏನಾದರೂ ತಪ್ಪು ಇದೆಯೇ, ಪ್ರತಿಯೊಂದು ಐಟೆಮ್ಮನ್ನೂ ನೋಡಿ ಪರಿಶೀಲಿಸಿ ಅದು ಸರಿಯಾಗಿ ನಮೂದು ಆಗಿದೆಯೇ ಎಂಬುದನ್ನು ಮಾಡಿಲ್ಲ. ಯಾವ ಶ್ರಮವನ್ನೂ ವಹಿಸದೆ ಅಕೌಂಟೆಂಟ್ ಜನರಲ್ಲರು ಬರೆದದ್ದನ್ನು ಕಾಪೀ ಮಾಡಿದ್ದಾರೆ. ಲೆಕ್ಕದಲ್ಲಿ ಏನಾದರೂ ಹಣದ ಧಪಾವಣೆಯು ಆಗಿದೆಯೇ 'mis-appropriation' ದುರ್ವಿನಿಯೋಗವಾಗಿದೆಯೋ ನ್ಯೂನಾತಿರಿಕ್ತಗಳು ಇವೆಯೋ ಎಂಬುದನ್ನು ಕಂಡುಹಿಡಿಯಲು ರಿಟೈಯರ್ಡ್ ಹೈಕೋರ್ಟ್ ನ್ಯಾಯಾಧೀಶರೊಬ್ಬರನ್ನು ಈ ಸಮಿತಿಯ ಚೇರ್‌ಮೆನ್ನರನ್ನಾಗಿ ನೇಮಿಸಲಾಯಿತು. ಏಕೆಂದರೆ ತಪ್ಪುಗಳನ್ನು ಕಂಡ

ಹಿಡಿಯುವುದೇ ಅವರ ಕಸಬು. ಆ ಸಮಿತಿಯಮೇಲೆ ಫೈನಾನ್ಶಿಯಲ್ ಎಕ್ಸ್‌ಪರ್ಟ್ ಆದವರು ಒಬ್ಬರು ಮತ್ತು ಎಂಜಿನಿಯರಾದವರೂ ಒಬ್ಬರು ಹೀಗೆ ಮತ್ತೆ ಇಬ್ಬರು ಸದಸ್ಯರನ್ನು ನೇಮಿಸಲಾಯಿತು. ಇಂತಹ ಆಪಾದನೆಗಳನ್ನು ಹೊರಿಸುವುದಕ್ಕಾಗಿ ಈ ಸಮಿತಿಯನ್ನು ನೇಮಿಸಲಿಲ್ಲ. ಸಮಿತಿಯು ತಮ್ಮ ಎಲ್ಲೆ ಮೀರಿ ಕಾರ್ಯವನ್ನು ಮಾಡಿದೆ.

ಈ ವಿಧಾನಸೌಧದ ಕಟ್ಟಡ ಬಹಳ ದೊಡ್ಡದಾಗಿದೆ ಎನ್ನತಕ್ಕ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮತ್ತು ಅಷ್ಟು ದೊಡ್ಡ ಬಿಲ್ಡಿಂಗು ಅವಶ್ಯಕವಾಗಿತ್ತೆ ಎಂದೂ ಪ್ರಶ್ನಿಸಿದ್ದಾರೆ. ಇಷ್ಟು ದೊಡ್ಡದಾಗಿರತಕ್ಕ ಕಟ್ಟಡವನ್ನು ಏಕೆ ಕಟ್ಟಬೇಕಾಗಿತ್ತು, ಇದು ಅನಾವಶ್ಯಕವಾಗಿತ್ತು ಎನ್ನುವುದು ಇನ್ನೊಂದು ವಿಷಯ. ಈಗ ಕಟ್ಟಡದಲ್ಲಿ ಕಣ್ಣಿಟ್ಟು ನೋಡಿದರೆ ಯಾವ ಭಾಗದ ಕಟ್ಟಡವೂ ಉಪಯೋಗವಾಗದೆ ಖಾಲಿ ಬಿದ್ದಿಲ್ಲ. ಇದರ ಜೊತೆಗೆ ಇನ್ನೂ ಕೆಲವು ಆಫೀಸುಗಳು ಬಾಡಿಗೆ ಮನೆಯಲ್ಲಿಯೇ ಇರಬೇಕಾಗಿ ಬಂದಿದೆ. ಇದರಿಂದ ನಮ್ಮ ಆವಶ್ಯಕತೆಗಳು ಸ್ವಯಂ ವೇದ್ಯವಾಗಿವೆ. ಇಂತಹ ಒಂದು ಕಟ್ಟಡ ಕಟ್ಟಿದ ಮಾತ್ರಕ್ಕೇ ಆರೋಪಣೆ ಮಾಡದೆ, ವಾಸ್ತವಾಂಶಗಳನ್ನು ಪರಿಶೀಲಿಸಿ ಕಣ್ಣಿನಿಂದ ನೋಡಿ ಅಭಿಪ್ರಾಯವನ್ನು ಕೊಡಬೇಕು. ಈ ಬಿಲ್ಡಿಂಗು ಇನ್ನೂ ಉತ್ತರಕ್ಕೆ ಇರಬೇಕಾಗಿತ್ತು ಎಂದು ಕೂಡ ಅವರು ಹೇಳುತ್ತಿದ್ದಾರೆ. ಈ ಕಟ್ಟಡವನ್ನು ಇಲ್ಲಿಯೇ ಕಟ್ಟುವುದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದು ನಮ್ಮ ಪ್ರೈಮ್ ಮಿನಿಸ್ಟರ್ ಅವರು ಈ ಕಟ್ಟಡಕ್ಕೆ ಅಸ್ತಿಭಾರ ಹಾಕಿದ್ದು ಇಲ್ಲಿಯೇ, ಎರಡನೆಯದು ಮುಂದೆಯಿರುವ ಅಠಾರಾ ಕಚೇರಿಗೂ ಮತ್ತು ಈ ಬಿಲ್ಡಿಂಗಿಗೂ ಒಂದು ಸಿಮೆಟ್ರಿ ಮಾದರಿಯಲ್ಲಿ ಪದ್ಯದಲ್ಲಿ ಪ್ರಾಸವಿರುವಂತೆ ಕಟ್ಟಿ ಇದರ ಮಧ್ಯೆ ಓಡಾಡುವುದಕ್ಕೆ ರಸ್ತೆಗಳು ಬಂದರೆ ನೋಡುವುದಕ್ಕೆ ಸುಂದರವಾಗಿ ಕಾಣುತ್ತದೆ ಎಂಬುದು. ಮಾನ್ಯ ಸಭಿಕರು ಹೇಳಿದಂತೆ, ಈ ಕಟ್ಟಡವನ್ನು ಇನ್ನೂ ಉತ್ತರಕ್ಕೆ ಹಾಕಿಬಿಟ್ಟರೆ ಈಗಿರತಕ್ಕ ರೆಸಿಡೆನ್ಸಿಯನ್ನು ಒಡೆದುಹಾಕಬೇಕಾಗುತ್ತಿತ್ತು. ಇದರ ಸುತ್ತಲೂ ಓಡಾಡುವುದಕ್ಕೆ ಅನುಕೂಲವಾಗುವ ಹಾಗೆ ರಸ್ತೆಗಳನ್ನು ಮಾಡಬೇಕಾದದ್ದು ಆವಶ್ಯಕವಾಗಿದೆ. ಆದರೆ ರೆಸಿಡೆನ್ಸಿಯನ್ನು ಒಡೆದುಹಾಕುವುದು ಅಷ್ಟು ಚೆನ್ನಾಗಿರುವುದಿಲ್ಲ ಎಂದು ತಿಳಿದು ಇಲ್ಲಿಯೇ ಕಟ್ಟಲಾಯಿತು. ಇಷ್ಟು ಸುಲಭವಾಗಿರುವುದನ್ನು ಅರ್ಥಮಾಡಿಕೊಳ್ಳದೆ ಏನೋ ಒಂದು ರೀತಿಯ ದೊಡ್ಡ ಆರೋಪಣೆಯನ್ನು ಮಾಡಿದ್ದಾರೆ. ಸಮಿತಿಯವರು ಯಾವುದನ್ನೂ ಪರಿಶೀಲನೆ ಮಾಡಿಲ್ಲ. ಅವರು ಒಂದು ನಿಷ್ಪಕ್ಷಪಾತವಾದ ವರದಿಯನ್ನು ಕೊಡಬೇಕಾಗಿತ್ತು. ಏನೋ ಮನಸ್ಸಿಗೆ ಬಂದಂತೆ ಆರೋಪಣೆಗಳನ್ನು ಮಾಡಬೇಕು ಎನ್ನುವ ಆತುರತೆಯಿಂದ ಮಾಡಿದ್ದಾರೆ ಎನ್ನುವುದು ಇಲ್ಲಿ ಸ್ಪಷ್ಟವಾಗಿದೆ. ಈ ಬಿಲ್ಡಿಂಗಿಗೆ 160 ಲಕ್ಷ ರೂಪಾಯಿಗಳ ದೊಡ್ಡ ಮೊಬಲಗನ್ನು ತೋರಿಸಿ ಇದು ಬಹಳ ದುಂದುವೆಚ್ಚವಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ದುಂದು ವೆಚ್ಚವಾಗಿದೆಯೇ ಇಲ್ಲವೇ ಲೆಕ್ಕಪತ್ರಗಳು ಸರಿಯಾಗಿವೆಯೇ ಇಲ್ಲವೇ, ದುಡ್ಡು ನ್ಯಾಯವಾಗಿ ಖರ್ಚುಮಾಡಲಾಗಿದೆಯೇ ಇಲ್ಲವೇ ಇದನ್ನೆಲ್ಲ ಪರೀಕ್ಷೆ ಮಾಡಿ ಒಂದು ಅಡಿಗಲ್ಲನ್ನು ಇಟ್ಟುಕೊಂಡು ಪರಿಶೀಲನೆ ಮಾಡಿದ್ದರೆ ಒಪ್ಪಬೇಕು. ಈ ತರಹದ ಕಟ್ಟಡಕ್ಕೆ ಚದರ ಅಡಿಗೆ ಎಷ್ಟು ಖರ್ಚು ಆಗುತ್ತದೆ ಎಂಬುದನ್ನು ಯಾವನಾದರೂ ಒಬ್ಬ ಕಂಟ್ರಾಕ್ಟರನ್ನಾಗಲಿ, ಇಂಜನೀಯರನನ್ನಾಗಲಿ ಕೇಳಿದ್ದರೆ ಇಂತಹ ಬಿಲ್ಡಿಂಗಿಗೆ ಖರ್ಚು ಕಡಮೆಯಾಗುತ್ತದೋ ಜಾಸ್ತಿಯಾಗುತ್ತದೋ ತಿಳಿಯುತ್ತಿತ್ತು. ಈ ರೀತಿ ಲೆಕ್ಕ ಮಾಡಿ ಇಂತಹ ಒಂದು ಸೌಂದರ್ಯದಿಂದ ಕೂಡಿದ ಕಟ್ಟಡವನ್ನು ಕಟ್ಟಲು ಬಿದ್ದಿರತಕ್ಕಂಥ ಖರ್ಚು ಒಂದು ಚದರ ಗಜಕ್ಕೆ ಇಪ್ಪತ್ತು ರೂಪಾಯಿಗಳು ಎಂದು ಕೆಲವೆಡೆ ಲೆಕ್ಕಹಾಕಿದ್ದಾರೆ. ಅದೇ ರೀತಿ Architectural features ಇರುವಂತಹದು ಗೌರ್ನಮೆಂಟ್ ಆಫ್ ಇಂಡಿಯಾ ಬಿಲ್ಡಿಂಗ್ ಸುಮಾರು 20 ರಿಂದ 25 ರೂಪಾಯಿಗಳಾಗುತ್ತದೆಂದು ಲೆಕ್ಕಹಾಕಿದ್ದಾರೆ. ಆದರೆ ಈ ಸಮಿತಿಯವರು ಮಾಡುತ್ತಿರುವ ಪರೀಕ್ಷೆಯಲ್ಲಿ ಆ ರೀತಿಯ Touchstone ಅನ್ನು ಅನುಸರಿಸದೆ ಏಕಪಕ್ಷೀಯವಾಗಿ ಬಿಲ್ಡಿಂಗಿಗೆ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದಾರೆ. ನಾನು ಈ ಕಟ್ಟಡವನ್ನು ಕಟ್ಟಿಸುವುದಕ್ಕೆ ಮುಂಚೆ ಬಹಳ ಕಟ್ಟಡಗಳನ್ನು ನೋಡಿದ್ದೆ. ಅದೇನು ದೈವಲೀಲೆಯೋ ಏನೋ, ನಾನು ಪ್ರಪಂಚದಲ್ಲಿ ಇರತಕ್ಕಂಥ ಪ್ರಮುಖವಾದ ಪಾರ್ಲಿಮೆಂಟು ಬಿಲ್ಡಿಂಗ್‌ಗಳನ್ನೆಲ್ಲಾ ನೋಡಿದ್ದೇನೆ. ಲಂಡನ್ನಿನಲ್ಲಿರತಕ್ಕ ಉಭಯಶಾಸನಸಭಾಭವನಗಳನ್ನು ನೋಡಿದ್ದೇನೆ. ಇದಲ್ಲದೆ, ನಾರ್ವೆ ಸ್ವೀಡನ್ನಿಗೂ ಹೋಗಿದ್ದೆ ಮತ್ತು ಇಂಡಿಯಾದೇಶದಲ್ಲಿರತಕ್ಕ ಪ್ರಮುಖ ನಗರಗಳನ್ನೆಲ್ಲ, ಎಂದರೆ, ಮುಂಬಯಿ, ಡೆಲ್ಲಿ ಮುಂತಾದ ಕಡೆಗಳಲ್ಲಿರುವ ಬಿಲ್ಡಿಂಗುಗಳನ್ನು ನೋಡಿಕೊಂಡು ಬಂದೆ. ಈ ರೀತಿ ಎಲ್ಲ ತರಹದ ಕಟ್ಟಡಗಳನ್ನು ನೋಡಿ ನನ್ನ ಮನಸ್ಸಿಗೆ ಬಂದ ಒಂದು ಕಲ್ಪನಾ ಚಿತ್ರವನ್ನು ಕಾರ್ಯರೂಪಕ್ಕೆ ತಂದೆ ಅಷ್ಟೇ. ಒಂದು ಜೇನುಹುಳ ಅನೇಕ ಹೂವುಗಳಿಂದ ಸೌರಭವನ್ನು ಆರಿಸಿ ಒಂದು ಜೇನುತುಪ್ಪದ ಕೊಡವನ್ನು ಹೇಗೆ ಕೊಡುತ್ತದೆಯೋ ಹಾಗೆ ನಾನು ಒಂದು ಸದ್ಭಾವನೆಯಿಂದ ಮಾಡಿದೆ. ಇಂತಹದನ್ನು ಇಲ್ಲಿ ತಂದು ಮಿಕ್ಸ್‌ಮಾಡಿ ಮಾತನಾಡಿರುವುದು ಸರಿಯಾಗಿಲ್ಲ. ಯಾವುದೋ ಒಂದು ಪುಷ್ಪದಿಂದ ತಂದ ಜೇನು ಸಿಹಿಯಾಗಿಲ್ಲ ಎಂದು ಹೇಳುವುದು, ಅದು ಅಭಿರುಚಿಯ ಮಾತು. ಅದು ಹಾಗಿರಲಿ.

ಹಿಂದೆ 1952 ನೆಯ ಇಸವಿಯಲ್ಲಿ ನನ್ನ ಹಿಂದೆ ಇದ್ದ ಶ್ರೀಮಾನ್ ಕೆ. ಸಿ. ರೆಡ್ಡಿಯವರು ಒಂದು ಪ್ಲಾನು ತಯಾರಿಸಿದ್ದರು. ಅದೂ ಬಹಳ ಚೆನ್ನಾಗಿತ್ತು, ಖರ್ಚು ಕಡಮೆಯಾಗಿತ್ತು. ಅದಕ್ಕೂ ಇದಕ್ಕೂ ಹೋಲಿಸಿ, ಈ ಎರಡು ಪ್ಲಾನುಗಳೂ ಯಾವ ಯಾವ ರೀತಿಯಲ್ಲಿ ಚೆನ್ನಾಗಿದ್ದುವು ಎಂಬುದನ್ನು ಪ್ರಸ್ತಾಪಿಸುತ್ತೇನೆ.

The building is said to have cost an enormous amount. Mr. K. C. Reddy Ministry's plan of the building had a floor area of 1,74,600 sq. ft. Its estimated cost was 33 lakhs of rupees. The Vidhana Soudha has nearly five lakhs of sq. ft. of floor area and has cost about 160 lakhs. The former was a brick building with no architectural decorations. The Vidhana Soudha is a dressed stone building with many architectural features. In April 1952, when the estimate for the former building was prepared, the prices and wages were not as high as they were during the time of the construction of Vidhana Soudha. When so compared

(ಶ್ರೀ ಕೆ. ಹನುಮಂತಯ್ಯ)

with the cost of the original plan of Mr. K. C. Reddy's Ministry, it will show to any impartial minid that the cost of the Vidhana Soudha is cheaper. ಇನ್ನೊಂದು ವಿಷಯ. ಈ ವಿಧಾನಸೌಧದಂತಹ ಒಂದು ಕಟ್ಟಡ ಚಂಡಿಘರ್‌ನಲ್ಲಿದೆ. ಈ ಚಂಡಿಘರ್ ಪಂಜಾಬಿನಲ್ಲಿದೆ. ಈ ವಿಧಾನಸೌಧದ ಅರ್ಧಮುಕ್ಕಾಲರಷ್ಟು ಕೆಲಸವಾಗಿದ್ದಾಗ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಸೆಕ್ರೆಟೇರಿಯಟ್ ಬಿಲ್ಡಿಂಗ್ ಮತ್ತು ಪಾರ್ಲಿಮೆಂಟು ಕಟ್ಟಡಗಳನ್ನು ಕಟ್ಟಿಸುತ್ತಿದ್ದರು. ಅವುಗಳನ್ನೆಲ್ಲಾ ನೋಡಿಕೊಂಡುಬರಲು ನಾನೂ ಹೋಗಿದ್ದೆ. ಅಲ್ಲಿಯ ಚೀಫ್ ಮಿನಿಸ್ಟರು ನನಗೆ ಆಮಂತ್ರಣವನ್ನಿತ್ತು ಟೀ ಕೂಡ ಕೊಟ್ಟರು. ಆಗ ಆ ಕಟ್ಟಡಗಳಿಗೆ ಆಗಿದ್ದ ಖರ್ಚನ್ನು ವಿಚಾರಿಸಿದ್ದರಲ್ಲಿ ಬಿಲ್ಡಿಂಗ್ ಕಾಸ್ಟ್ ಮೇಲೆ ಅಲ್ಲಿ ಕಂಟ್ರಾಕ್ಟರುಗಳಿಗೆ ಮೂರು ಪರ್ಸೆಂಟು ಫೀಸನ್ನು ಕೊಡುತ್ತಾರೆ ಎಂದು ಹೇಳಿದರು. ಅದೆಲ್ಲಾ ಸೇರಿ ಸುಮಾರು ಎರಡು ಮೂರು ಕೋಟಿಗಳ ಮೇಲಾಗುತ್ತದೆ. ಎಲ್ಲ ಆರ್ಕಿಟೆಕ್ಚರಲ್ ಫೀಚರುಗಳನ್ನೊಳಗೊಂಡ ಒಂದು ಭವ್ಯವಾದ ಭವನವನ್ನು ಅಲ್ಲಿ ನಿರ್ಮಾಣ ಮಾಡಿದ್ದಾರೆ. ಆದರೆ ಆ ಕಟ್ಟಡಗಳು ಚೆನ್ನಾಗಿವೆಯೋ ಇಲ್ಲವೇ ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಂಜಾಬಿನ ಅಸೆಂಬ್ಲಿ ಸ್ಪೀಕರ್ ಅವರು ಇಲ್ಲಿಯ ಈ ವಿಧಾನ ಸೌಧವನ್ನು ನೋಡಿ ಇಂತಹ ಸುಂದರವಾದ ಕಟ್ಟಡ ಇನ್ನೆಲ್ಲಿಯೂ ಇಲ್ಲ, ಚಂಡಿಘರ್ ಕಟ್ಟಡಗಳಿಗಿಂತ ಉತ್ತಮವಾಗಿದೆ ಎಂದು ಪ್ರಶಂಸೆಮಾಡಿ ಬರೆದಿದ್ದಾರೆ. "ನಮ್ಮ ಭಾರತದ ಇಂಜನಿಯರುಗಳಿಗೆ ಪರಕೀಯ ಇಂಜನಿಯರುಗಳಿಗಿಂತಲೂ ಮೇಲಾದ ಕಟ್ಟಡಗಳನ್ನು ಕಟ್ಟಿಸತಕ್ಕ ಶಕ್ತಿ ಇದೆ. ಈ ವಿಧಾನ ಸೌಧದ ಖರ್ಚು ಕಟ್ಟಡಕ್ಕಿಂತ ಕಡಮೆ ಪ್ರಮಾಣದಲ್ಲಿದೆ" ಎಂದು ಬರೆದಿದ್ದಾರೆ. ನಾನೊಂದು ಸಲ ಚಂಡಿಘರ್ ಹೈಕೋರ್ಟ್ ನೋಡುವುದಕ್ಕೆ ಹೋದೆ. ಅಲ್ಲಿನ ಚೀಫ್ ಜಸ್ಟಿಸ್‌ಅವರು ನನ್ನನ್ನು ಬರಮಾಡಿಕೊಂಡು ಕಟ್ಟಡವನ್ನು ತೋರಿಸಿ "ಈ ಕಟ್ಟಡ ನಮಗೊಬ್ಬರಿಗೂ ಒಪ್ಪಿಗೆ ಇಲ್ಲ," ಎಂದು ಹೇಳಿದರು. ನಾನು ಚಂಡಿಘರ್ ರಾಜಧಾನಿಯನ್ನಾಗಲಿ, ಅಲ್ಲಿನ ಕಟ್ಟಡಗಳನ್ನಾಗಲಿ ಟೀಕಿಸಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ. ಈ ವಿಧಾನಸೌಧ ಕಟ್ಟಡವನ್ನು ಅಲ್ಲಿಯ ಕಟ್ಟಡಗಳೊಡನೆ ಹೋಲಿಸಿ ನೋಡಿದರೆ ನಮ್ಮ ಕಟ್ಟಡವು ಎಲ್ಲ ದೃಷ್ಟಿಯಿಂದಲೂ ಉತ್ತಮ ಮಟ್ಟದ್ದಾಗಿದೆ ಎಂಬ ನಿರ್ವಿವಾದವಾದ ವಿಷಯವನ್ನು ಸಭೆಯ ಮುಂದೆ ಪ್ರತಿಪಾದಿಸುವುದಕ್ಕೋಸ್ಕರ ಹೇಳುತ್ತಿದ್ದೇನೆ. ನನ್ನ ಸ್ನೇಹಿತರಾದ ಶ್ರೀ ಇಮಾಂ ಅವರು ದೆಹಲಿಯ ಲೋಕಸಭೆಗೆ ಹೋಗುತ್ತಾರೆ. ದೆಹಲಿಯಲ್ಲಿ ಅವರ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆಯಲಿ ಎಂದು ಆಶಿಸುತ್ತೇನೆ. ಅವರು ಈ ಕಟ್ಟಡಕ್ಕೆ ತಗುಲಿರುವ ಖರ್ಚುವೆಚ್ಚಗಳೇನು ಇತ್ಯಾದಿ ವಿವರಗಳನ್ನೂ ಮತ್ತು ಕಟ್ಟಡದ ನಕ್ಷೆವಗೈರೆಗಳನ್ನೂ ತಮ್ಮ ಸಂಗಡ ತೆಗೆದುಕೊಂಡು ಹೋಗಿ, ದೆಹಲಿಗೆ ಚಂಡಿಘರ್ ಸಮೀಪವಾಗಿರುವುದರಿಂದ ಅಲ್ಲಿಗೂ ಹೋಗಿ, ಈ ವಿಧಾನ ಸೌಧದ ಖರ್ಚು ಏನು, ಅಲ್ಲಿ ಕಟ್ಟಿರತಕ್ಕ ಕಟ್ಟಡಗಳ ಖರ್ಚು ಏನು, 'ಎಲ್ಲಿ ಮಾಡಿರುವ ಕೆಲಸ ತೃಪ್ತಿಕರವಾಗಿದೆ ಎಂದು ಒಂದು ಹೇಳಿಕೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅವರು ವಿಧಾನಸಭೆಯ ಇನ್ನೊಂದು ಅಧಿವೇಶನ ಕೂಡುವಾಗ ಇರುವುದಿಲ್ಲವಾದ್ದರಿಂದ ಈ ಸಭೆಯಲ್ಲಿ ಭಾಷಣ ಮಾಡುವುದಕ್ಕಾಗುವುದಿಲ್ಲ. ಶ್ರೀ ಇಮಾಂ ಅವರು "ಮೈಸೂರು ದೇಶದ ಸೇವೆ ಮಾಡುವುದು ನನ್ನ ಧ್ಯೇಯ"ವೆಂದು ಹೇಳಿದರು. ಅದಕ್ಕನುಗುಣವಾಗಿ ಅಲ್ಲಿ ಹೋಗಿ ಅಲ್ಲಿಯೂ ನೋಡಿ ಒಂದು ಹೇಳಿಕೆಯನ್ನು ಕೊಟ್ಟರೆ ಎಲ್ಲರಿಗೂ ಉಪಕಾರವಾಗುತ್ತದೆ.

ಮತ್ತೊಂದು ಆಕ್ಷೇಪಣೆ ಏನೆಂದರೆ, ಅನೇಕ architectural features ಏನಿವೆ ಅವು ಬರಿಯ ನೋಟಕ್ಕೋಸ್ಕರ ಆಗಿವೆಯೇ ಹೊರತು ಉಪಯೋಗಕ್ಕೋಸ್ಕರ ಆಗಿಲ್ಲವೆಂದು ವರದಿಯಲ್ಲಿದೆ, ಮತ್ತೆ ಕೆಲವರೂ ಹೇಳಿದ್ದಾರೆ. ನಾನಾದರೂ ಅರಿಕೆ ಮಾಡಿಕೊಳ್ಳುವುದಿಷ್ಟೆ: ಯಾವ ಸ್ಥಳಕ್ಕೆ ಹೋದರೂ ಕೂಡ ಅದನ್ನು ಉಪಯೋಗಿಸಿಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದಲೇ ಸ್ವತಃ ನಾನು ಕಟ್ಟಿಸಿದ್ದೇನೆ. ನಾಲ್ಕು ಗೋಪುರಗಳು ನಾಲ್ಕುಕಡೆ ಇವೆ. ಇವು ಅನಾವಶ್ಯಕ ಎಂದು ಕಮಿಟಿಯವರು ಹೇಳಿದ್ದಾರೆ. ಈ ಗೋಪುರಗಳಲ್ಲಿ ಹೋಗಿ ನೋಡಿದರೆ ನಾಲ್ಕು ಕಡೆ ನಾಲ್ಕು ದೊಡ್ಡ ಹಾಲುಗಳಿವೆ. ಮೊದಲು ಪ್ಲಾನಿನಲ್ಲಿ ಇಂಜನಿಯರುಗಳು ಬರೆದಿದ್ದಾಗ ಈ ನಾಲ್ಕು ಗೋಪುರಗಳು ಮತ್ತು ಮುಂದೆ ಇರತಕ್ಕ foyer, ಹಿಂದೆ ಇರತಕ್ಕ foyer ಇವಕ್ಕೆ ನಾಲ್ಕು ಅಂತಸ್ತಿಗೂ ಛಾವಣಿ ಇಲ್ಲದೆ ಮೇಲ್ಛಾವಣಿಯನ್ನು ಕಟ್ಟುವ ಹಾಗೆ ತೂತು ಬಿಟ್ಟಹಾಗೆ ಬಿಟ್ಟಿದ್ದರು. ನಾನು ಅದನ್ನು ನೋಡಿ, 'ನೀವು ಹೇಳಿರುವ ಪ್ರಕಾರ ಮೇಲ್ಛಾವಣಿಮಾತ್ರ ಹಾಕಿ ಅಂತಸ್ತುಗಳಿಗೆ ಛಾವಣಿ ಹಾಕದೆ ಬಿಟ್ಟರೆ ನೋಡುವುದಕ್ಕೆ ಅಲಂಕಾರವಾಗಿರುತ್ತದೆಯೇ ಹೊರತು ಸ್ಥಳವನ್ನು ಉಪಯೋಗಿಸುವುದಕ್ಕಾಗುವುದಿಲ್ಲ ; ಆದುದರಿಂದ ಅವೆಲ್ಲಕ್ಕೂ ಛಾವಣಿಗಳನ್ನು ಹಾಕಿದರೆ ಅವು ಪ್ರತಿಯೊಂದೂ ಒಂದೊಂದು waiting room ಆಗುತ್ತವೆ' ಎಂದು ಹೇಳಿದೆ. ಬೊಂಬಾಯಿ ಸೆಕ್ರೆಟೇರಿಯೇಟ್ ಕಟ್ಟಡದಲ್ಲಿ—ಬೊಂಬಾಯಿ ವಿಧಾನಸಭೆಯಿಂದ ಬಂದಿರುವ ಮಾನ್ಯ ಸದಸ್ಯರು ನೋಡಿದ್ದಾರೆ—ಪ್ರತಿಯೊಂದು ಅಂತಸ್ತಿನಲ್ಲಿಯೂ ಒಂದೊಂದು waiting room ಇದೆ. ಅದೆ ರೀತಿ ಇಲ್ಲಿಯೂಕೂಡ ಪ್ರತಿಯೊಂದು ಅಂತಸ್ತಿನಲ್ಲಿಯೂ waiting room ಮಾಡುವುದಕ್ಕೆ ಇದನ್ನು ಪರಿವರ್ತಿಸಿ ಎಂದು ಸೂಚನೆ ಕೊಟ್ಟೆ. ತಾವು ಹೋಗಿ ಗೋಪುರಗಳನ್ನೆಲ್ಲ ನೋಡಬಹುದು. ಪ್ರತಿಯೊಂದು ಗೋಪುರದಲ್ಲಿಯೂ ಕೂಡ ಒಂದೊಂದು ರೂಮು ಇದೆ. ಅದರಲ್ಲಿ ಆಫೀಸುಗಳನ್ನು ಮಾಡಬಹುದು. ಈಗಾಗಲೇ wireless station ಗೆ ಒಂದನ್ನು ಕೊಟ್ಟಿದ್ದಾರೆ. ಮುಂದುಗಡೆ ಇರತಕ್ಕ ಮೂರು ಗೋಪುರಗಳಲ್ಲಿ ಒಂದು lift room ಆಗಿದೆ, ಇನ್ನೊಂದು ರೂಮು ಉಪಯೋಗಕ್ಕೆ ಅನುಕೂಲವಾಗಿದೆ ಮತ್ತು ಮಧ್ಯೆ ಇರತಕ್ಕ ಗೋಪುರ ಅಲಂಕಾರಕ್ಕೋಸ್ಕರವಿದೆ. ಸರಕಾರಿ ಕೆಲಸಕ್ಕೆ ಮತ್ತು ನೋಡುವುದಕ್ಕೆ ಬರತಕ್ಕ ಜನರು ಕುಳಿತುಕೊಳ್ಳುವುದಕ್ಕೋಸ್ಕರ foyer ನಲ್ಲಿ ಅವಕಾಶವಿರುವಂತೆ ಮಾಡಿದೆ. ಅಲ್ಲದೆ ನಾನು ನೋಡಿದ ಅನೇಕ ಪಾರ್ಲಿಮೆಂಟ್ ಕಟ್ಟಡಗಳಲ್ಲಿ ಏನು ಮಾಡಿದ್ದಾರೆಂದರೆ, ಆ ಕಟ್ಟಡಗಳಲ್ಲಿ ಆಯಾದೇಶದ ಚರಿತ್ರೆಯನ್ನು ಚಿತ್ರರೂಪದಲ್ಲಿ paint ಮಾಡಿ ಇಟ್ಟಿದ್ದಾರೆ. ಅವರ ಸಂಸ್ಕೃತಿ, ಅವರ ಪ್ರಗತಿ ಮುಂತಾದುವುಗಳನ್ನು ಈ ಕಟ್ಟಡಗಳಲ್ಲಿ ಚಿತ್ರಿಸಿದ್ದಾರೆ. ನನಗಾದರೂ ಅದೇ ರೀತಿಯಾ ಒಂದು ಅಭಿಮಾನ ಬಂದು ನಮ್ಮ ದೇಶದಲ್ಲಿ ಇದುವರೆಗೂ ನಡೆದಿರತಕ್ಕ ಚರಿತ್ರಾರ್ಹವಾದ ಘಟನೆಗಳನ್ನು ಕೂಡ ಒಂದು ಚಿತ್ರರೂಪದಲ್ಲಿ ಎಲ್ಲರ ಕಣ್ಣಿಗೂ ಕಾಣಿಸುವಂತೆ ಬರೆಸಬೇಕು ಎನ್ನುವ ಆಶೆಯಿಂದ ಮುಂದುಗಡೆ ಮತ್ತು ಹಿಂದುಗಡೆ foyer ಅಷ್ಟು ದೊಡ್ಡದಾಗಿ ಮಾಡಿ painting ಗೋಸ್ಕರ ಬಿಟ್ಟ

ದ್ದೇನೆ. ಪಾರ್ಲಿಮೆಂಟ್ ಕಟ್ಟಡದಲ್ಲಿ—statues ಗೋಸ್ಕರ ಗೂಡನ್ನು ಕಟ್ಟಿಸಿಬಿಟ್ಟಿದ್ದಾರೆ. ಇನ್ನೂ ಅನೇಕ statues ಪಾರ್ಲಿಮೆಂಟ್ ಭವನದಲ್ಲಿ ಇಟ್ಟಿಲ್ಲ. ಇಲ್ಲಿಯೂಕೂಡ ನಾಲ್ಕೈದು ಕಡೆ ಆ ರೀತಿ ಸ್ಥಳವನ್ನು ಬಿಟ್ಟಿದೆ. ಹಿಂದೆ ನಮ್ಮ ದೇಶಕ್ಕೋಸ್ಕರ ಬಹಳವಾಗಿ ಕೆಲಸ ಮಾಡಿರತಕ್ಕ ಮುಖ್ಯವ್ಯಕ್ತಿಗಳ statues ಆದರೂ ಇಡಬೇಕು. ಮಹಾತ್ಮ ಗಾಂಧಿ, ನೆಹರೂ, ಪಟೇಲ್ ಮುಂತಾದವರ statues ಇಡಬೇಕೆಂಬ ಉದ್ದೇಶದಿಂದ ಅವಕಾಶಮಾಡಿದ್ದೇನೆ. ಈ ರೀತಿಯ ಯಾವ ಒಂದು ಸಂಪ್ರದಾಯ ಪಾಶ್ಚಾತ್ಯ ದೇಶಗಳಲ್ಲಿ ಮತ್ತು ಈ ದೇಶದಲ್ಲಿ ಇದೆಯೋ ಅದೇ ಸಂಪ್ರದಾಯವನ್ನೇ ಇಲ್ಲಿಯೂಕೂಡ ಸ್ಥಾಪಿಸಲು ಪ್ರಯತ್ನಮಾಡಿದರೆ ಅದನ್ನು ಅವಹೇಳನ ಮಾಡತಕ್ಕದ್ದು—ನಾನು ಕಠಿಣ ಭಾಷೆಯನ್ನು ಉಪಯೋಗಿಸಬಾರದು—ಸರಿಯಲ್ಲ ಎಂದು ಮಾತ್ರ ವಿಜ್ಞಾಪಿಸಿಕೊಳ್ಳುತ್ತೇನೆ.

ಇಲ್ಲಿ ಒಂದು ಪ್ರಸ್ತಾಪವಿದೆ. ಆ ಪ್ರಸ್ತಾಪ ಈ ಇಡಿಯ ಮನೋವೃತ್ತಿ ಯಾವ ದಾರಿಯಲ್ಲಿ ಹೋಯಿತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ರಿಟೈರ್ಡ್ ಚೀಫ್ ಇಂಜಿನಿಯರ್ ಎಂ. ನರಸಿಂಹಯ್ಯನವರು ಕಮಿಟಿಯ ಸದಸ್ಯರಾಗಿದ್ದರು. ಇವರು ಹಿಂದೆ ಮೈಸೂರಿನಲ್ಲಿ ಚೀಫ್ ಇಂಜಿನಿಯರ್ ಆಗಿದ್ದರು. ಮೈಸೂರು ಸರ್ಕಾರದ ರಿಟೈರ್ಡ್ ಚೀಫ್ ಇಂಜಿನಿಯರ್‌ಗಳನ್ನೊಳಗೊಂಡ ಒಂದು Technical Advisory Committee ಎಂದು ನೇಮಿಸಿತ್ತು. ಇವರಿಗೆ ಸ್ವಾಭಿಮಾನ ಎಲ್ಲಿಯವರೆಗೆ ಹೋಯಿತು ಎಂದರೆ, ಈ ವಿಧಾನ ಸೌಧದ ಪ್ಲಾನನ್ನು ನನಗೆ ತೋರಿಸಲಿಲ್ಲವಲ್ಲ ಎಂಬ ಸ್ವಾಭಿಮಾನ ಇವರನ್ನು ಕಾಡುವುದಕ್ಕೆ ಪ್ರಾರಂಭ ಮಾಡಿತು. ಅದನ್ನು ನಮ್ಮ ಕಮಿಟಿ ಮುಂದೆ ಇಡಬೇಕಾಗಿತ್ತು ಎಂದು ಬರೆದಿದ್ದಾರೆ. ನಾಲ್ಕು ವರ್ಷಗಳ ಕಾಲ ಮಾತ್ರ ಅಡ್ಮಿನಿಸ್ಟ್ರೇಷನ್‌ನಲ್ಲಿ ಇದ್ದವನಿಗೆ ನನಗೆ ಗೊತ್ತಿಲ್ಲ. ರಿಟೈರ್ಡ್ ಚೀಫ್ ಇಂಜಿನಿಯರುಗಳಿಂದ ಕೂಡಿರತಕ್ಕ ಒಂದು Technical Advisory ಸಮಿತಿಯು ದೊಡ್ಡ ದೊಡ್ಡ ಜಲಾಶಯಗಳು, ಪ್ರಾಜೆಕ್ಟ್‌ಗಳು ಇಂಥವಕ್ಕೆ ಸಂಬಂಧಪಟ್ಟದ್ದು. ಮೈಸೂರಿನಲ್ಲಿ ಕ್ರಾಫರ್ಡ್ ಹಾಲ್ ಕಟ್ಟಿದ್ದಾರೆ. ಇನ್ನೂ ಅನೇಕ ಕಡೆ ದೊಡ್ಡ ದೊಡ್ಡ ಕಟ್ಟಡಗಳನ್ನು ಹೈಸ್ಕೂಲು, ಕಾಲೇಜು ಮತ್ತು ಇತರ ಕಟ್ಟಡಗಳನ್ನು ಕಟ್ಟಿದ್ದಾರೆ. ಇವುಗಳ ನಕ್ಷೆ ವಗೈರೆ ಈ ಸಮಿತಿಯವರ ಪರಿಶೀಲನೆಗೆ ಹೋಗಿದ್ದುದು . . . .

Sri L. SIDDAPPA (Chennagiri).—It is only for irrigation.

Sri K. HANUMANTHAIYA.—I stand corrected, Sir. My friend Sri Siddappa who has been a Minister and a member of this Legislature for a number of years tells me that this Committee is constituted only in relation to irrigation projects. I am thankful to him for the clarification. ಈ ರೀತಿ ತಮ್ಮ ಸಮಿತಿಯ ವ್ಯಾಪ್ತಿಗೆ ಒಳಪಡದಿದ್ದರೂಕೂಡ ನಮ್ಮ ಸಮಿತಿಗೆ ತೋರಿಸಲಿಲ್ಲವಲ್ಲ ಎಂಬ ಒಂದು ಸ್ವಾಭಿಮಾನದಿಂದ ಉಂಟಾದ ಕೋಪವನ್ನು ನನ್ನ ಮೇಲೆ ತೋರಿಸಿದ ಹಾಗೆ ಕಾಣುತ್ತದೆ.

4-30 P. M.

ಈ ವಿಧಾನಸೌಧವನ್ನು ನಿರ್ಮಿಸುವುಕ್ಕೆ ಮೊದಲು ನನಗಾದರೂ ಪರಿಣತರು, ಅನುಭವಸ್ಥರ ಸಲಹೆಯನ್ನೂ ಸಹಾಯವನ್ನೂ ಪಡೆಯಬೇಕೆಂಬ ಉದ್ದೇಶವಿತ್ತು. ಆದ್ದರಿಂದಲೇ ಇದಕ್ಕೆ ಸಂಬಂಧಪಟ್ಟ ಕಮಿಟಿಯನ್ನು ನಿಯಮಿಸುವುದಕ್ಕೆ ಪ್ರಸ್ತಾಪ ಮಾಡಿದೆ. ಕಮಿಟಿಯವರು rough plan ಮುಂತಾದುವನ್ನು ಮಾಡಿದರು. Even today this building has all the appearances of the original plan. ಒಳಗಡೆ ಸ್ವಲ್ಪ, ಕಂಬಗಳು ಇತ್ಯಾದಿಗಳ ಬದಲಾವಣೆ ಆಯಿತು. ಆದ್ದರಿಂದ ಪ್ಲಾನ್ ಎಲ್ಲವನ್ನೂ ಬದಲಾಯಿಸಿದ್ದೇವೆ ಎಂದು ಹೇಳುವುದು ಸುಳ್ಳು ಎಂದು ಹೇಳುವುದಕ್ಕೆ ರುಜುವಾತು ಅವರ ವರದಿಯಲ್ಲೇ ಇದೆ. ಹಿಂದೆ ಯಾವ ಪ್ಲಾನು ಇತ್ತು, ಮುಂದೆ ಯಾವ ಪ್ಲಾನ್ ಆಯಿತು ಇತ್ಯಾದಿ ವಿವರಗಳನ್ನು ಆ ವರದಿಯಲ್ಲಿ ಮುದ್ರಿಸಿದ್ದಾರೆ. ಅದನ್ನು ನೋಡಿದವರಿಗೆ ಗೊತ್ತಾಗುತ್ತದೆ. ಸಮಿತಿಯವರ ರಫ್ ಪ್ಲಾನು ಫೈನಲೈಸ್ ಆಯಿತು. ಅದರ ಪ್ರಕಾರ ಕಟ್ಟಡ ಕಟ್ಟಲಾಯಿತು. ಇದರಲ್ಲಿ ನಾಲ್ಕು ಗೋಪುರಗಳು ನಾಲ್ಕು ಮೂಲೆಗಳಲ್ಲಿವೆ. ಅವನ್ನು ಕಟ್ಟಬಾರದಾಗಿತ್ತು ಎಂದು ಒಬ್ಬ ಸದಸ್ಯರು ಹೇಳಿದರು. ಚೀಫ್ ಎಂಜಿನಿಯರ್ ಆಗಿ ಆಗ ಇದ್ದ ಶ್ರೀ ಗಂಗಾಧರ್ ಅವರು ಅದನ್ನು ಮುಂದೆ ಆಲೋಚನೆ ಮಾಡೋಣ ಎಂದು ಹೇಳಿದರು. ಆದರೂ ಕೂಡ ಈ ನಾಲ್ಕು ಗೋಪುರಗಳನ್ನು ಕಟ್ಟಲೇ ಬೇಕು ಎಂದು ಹೇಳಿದ್ದು ಒಂದು ದೊಡ್ಡ ಅಪರಾಧವಾಯಿತು. ಈ ನಾಲ್ಕು ಗೋಪುರಗಳು ಈ ಕಟ್ಟಡದ ಸೌಂದರ್ಯವನ್ನು ಎಷ್ಟು ಮಟ್ಟಿಗೆ ಹೆಚ್ಚಿಸಿವೆ ಎಂಬುದು ಅಭಿಪ್ರಾಯದ ಮಾತು ಎಂದೇ ಹೇಳುತ್ತೇನೆ. ಕೆಲವರಿಗೆ ಅವು ಚೆನ್ನಾಗಿರಬಹುದು, ಕೆಲವರಿಗೆ ಚೆನ್ನಾಗಿಲ್ಲದೇ ಇರಬಹುದು. ಆದರೆ ಈ ನಾಲ್ಕು ಗೋಪುರಗಳು ಉಪಯೋಗಕ್ಕೂ ಕೂಡ ಒಳಪಡುತ್ತವೆ ಎಂಬ ಅಂಶವನ್ನು ಆಗಲೇ ನಾನು ಅರಿಕೆ ಮಾಡಿಕೊಂಡೆ. ಅದನ್ನು ಅವರು ಪ್ರಸ್ತಾಪಿಸಲೇ ಇಲ್ಲ.

ಇನ್ನು ಈ ಸಮಿತಿಯವರು ಈ ಕಟ್ಟಡವನ್ನು ಮೊಟ್ಟಮೊದಲು ಪ್ಲಾನ್ ತಯಾರುಮಾಡಿ, ಎಸ್ಟಿಮೇಟ್ ಮಾಡಿ ಪ್ರತಿಯೊಂದು ವಿವರವನ್ನೂ ಕೂಡ ಬರೆದು ಕಟ್ಟಿಸಬೇಕಾಗಿತ್ತು ಎಂದು ಸಾಂಪ್ರದಾಯಕವಾದ ವಾದವನ್ನು ಹೇಳಿದರು. This is what is called red-tapism. ಈ ದಿವಸ ಹೇಳುತ್ತೇನೆ, ಆ ಸಂಪ್ರದಾಯವನ್ನು ಅನುಸರಿಸಿ ಈ ಕಟ್ಟಡ ಕಟ್ಟಲ್ಪಟ್ಟಿದ್ದರೆ ಇನ್ನೂ 8—10 ವರ್ಷಗಳಿಗೂ ಇದು ಮುಗಿಯುತ್ತಾ ಇರಲಿಲ್ಲ. ಇದಕ್ಕೆ ಒಂದು ಸಾಕ್ಷಿ ಹೇಳುತ್ತೇನೆ. ನಾನು ಆಗಸ್ಟ್ 18ನೆಯ ತಾರೀಖಿನ ದಿವಸ ರಾಜೀನಾಮೆ ಕೊಟ್ಟೆ. ಅಲ್ಲಿಂದೀಚೆಗೆ ಎಷ್ಟು ಪ್ರಮಾಣದಲ್ಲಿ ಕೆಲಸನಡೆದಿದೆ, ಅದಕ್ಕಿಂತ ಮೊದಲು ಯಾವ ವೇಗದಲ್ಲಿ ಯಾವ ಪ್ರಮಾಣದಲ್ಲಿ ಕೆಲಸ ನಡೆಯಿತು ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ನೋಡಬಹುದು. ಎಷ್ಟೋ ಸಾರಿ ನನಗೆ ಒಂದು ಅಭಿಮಾನ ಬರುತ್ತದೆ. ಈ ಭವನ, ಸರ್ಕಾರದ ಆಡಳಿತ ನಡೆಯುವ ಮಂದಿರವಾಗುವುದರ ಜೊತೆಗೆ ಇತರ ಪಾರ್ಲಿಮೆಂಟರಿ ಕಟ್ಟಡಗಳ ಹಾಗೆ ಒಂದು ಕಲಾ ಭವನವೂ ಆಗಬೇಕು ಎನ್ನುವ ಉದ್ದೇಶದಿಂದ ಸರ್ಕಾರದ ದುಡ್ಡು ಮಾತ್ರವಲ್ಲದೆ ಅನೇಕ ಕಂಪೆನಿಗಳು ಮತ್ತು ಬ್ಯಾಂಕುಗಳವರನ್ನು ಕೂಡ ನಿಮಗೆ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನು ಕೊಡಿ ಎಂದು ಪ್ರಾರ್ಥಿಸಿಕೊಂಡೆ. ಸುಮಾರು 75 ಸಾವಿರ ರೂಪಾಯಿಗಳಷ್ಟು ಹಣವನ್ನು ಅನೇಕ ಕಂಪೆನಿಗಳವರು ಮತ್ತು ಬ್ಯಾಂಕುಗಳವರು ಕೊಟ್ಟಿದ್ದಾರೆ. ಶ್ರೀ ಪೂಣಚ್ಚ ಅವರು ಆಗ ಕೊಡಗಿನ ಮುಖ್ಯಮಂತ್ರಿಗ

ಶ್ರೀ ಕೆ. ಹನುಮಂತಯ್ಯ)

ಳಾಗಿದ್ದರು. ಅವರನ್ನೂ ಒಂದು ಕಾವೇರಿ ವಿಗ್ರಹ ಮತ್ತು ಫೌಂಟನ್‌ಅನ್ನು ನಿಮ್ಮ ಸಂಸ್ಥಾನದ ಜ್ಞಾಪಕಾರ್ಥವಾಗಿ ಕಟ್ಟಿಸಿಕೊಡಬೇಕೆಂದು ಕೇಳಿದೆ. ಅವರು ಒಪ್ಪಿಕೊಂಡು ಮಂಜೂರು ಮಾಡಿದರು. ಈ ದಿವಸ ಆ ವಿಗ್ರಹವೂ ಇಲ್ಲ, ಫೌಂಟನ್ನೂ ಇಲ್ಲ. ತಾವಾಗಿಯೇ ಕೊಡಲ್ಪಟ್ಟ ದುಡ್ಡಿನಿಂದ ದೊಡ್ಡ ದೊಡ್ಡ ಪೆಯಿಂಟಿಂಗ್ಸ್ ಬರೆಸಿದ್ದೆ. ಅವನ್ನೆಲ್ಲ ಈ ಕಟ್ಟಡದಲ್ಲಿ ಒಂದು ಕಡೆ ಹೊಟೇಲ್ ಸ್ಕ್ರೀನ್ ಆಗಿ ಇಟ್ಟಿದ್ದಾರೆ. ಅದನ್ನು ನೋಡಿ ನನಗೆ ಕಣ್ಣಿನಲ್ಲಿ ನೀರು ಬಂತು. ಯಾವ ಒಂದು ಮಹತ್ವಾಕಾಂಕ್ಷೆಯಿಂದ ಆ ಚಿತ್ರಗಳನ್ನು ಬರೆಸಲಾಯಿತೋ ಅದನ್ನು ಕಡೆಗಣಿಸಿ ಅವುಗಳನ್ನು ಹೊಟೇಲಿನ ಸ್ಕ್ರೀನ್ ಆಗಿ ಉಪಯೋಗಿಸಿದ್ದಾರೆ. ಇದನ್ನು ಯಾರಾದರೂ ನೋಡಬಹುದು. ಒಂದೊಂದು ಚಿತ್ರಕ್ಕೆ 10—15—20 ಸಾವಿರ ರೂಪಾಯಿ ಆಗುತ್ತದೆಯೇನು? ಈ ಒಂದು ಆಕ್ಷೇಪಣೆ ಮಾಡಿದ್ದಕ್ಕೆ, ಶ್ರೀ ಪಟ್ಟಾಭಿರಾಮನ್ ಅವರು ಏನು ಹೇಳಿದರೋ ಆ ಒಳ ವ್ಯಾಜ್ಯ ಹೆಚ್ಚಾಗುತ್ತ ಇದೆಯಲ್ಲಾ ಅದು ಬೇಡ ಎಂದು ಹೇಳಿ, ಈ 7—8 ತಿಂಗಳಿನಿಂದ ನನ್ನ ದುಃಖವನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಒಂದು ಭಾಷಣವನ್ನೂ ಈ ಸಭೆಯಲ್ಲಿ ಮಾಡುವುದಕ್ಕೆ ಹೋಗಿಲ್ಲ. ಏಕೆಂದರೆ ಒಂದು ಚಿತ್ರದಲ್ಲಿರತಕ್ಕ ಸೌಂದರ್ಯ, ಒಂದು ಕಟ್ಟಡದಲ್ಲಿರತಕ್ಕ ಸೌಂದರ್ಯ ಎಷ್ಟು ಹಿತವೋ ಅದೇ ರೀತಿ ನನ್ನ ಸ್ನೇಹಿತರುಗಳ ಮನಸ್ಸಿನಲ್ಲಿ ಸಹೋದ್ಯೋಗಿಗಳ ಮನಸ್ಸಿನಲ್ಲಿ ಉಂಟಾಗತಕ್ಕ ಸ್ನೇಹ ಅದೂ ಮಹತ್ತಾದುದು. ಆ ಮಹತ್ತಾದ್ದನ್ನು ಸಾಧಿಸಬೇಕೆಂದು ನಾನು ಹಗಲೂ ರಾತ್ರಿ ದೇವರನ್ನು ಪ್ರಾರ್ಥಿಸುತ್ತಾ ಇದ್ದೇನೆ. ಎಷ್ಟೇ ಸರಿಯಾಗಿರಲಿ ನನ್ನ ಸ್ನೆಹಿತರಿಗೆ ಸೈರಿಸದೇ ಇರತಕ್ಕ ಕೆಲಸವಾದರೆ ಅದರಲ್ಲಿ ಸಾಮರಸ್ಯ ಇರುವುದಿಲ್ಲ. ಎಲ್ಲಿ ಸಾಮರಸ್ಯತೆ ಇರುವುದಿಲ್ಲವೋ ಅಲ್ಲಿ ಸಹಸ್ರಾರು ರೂಪಾಯಿಗಳಿದ್ದರೂ ಸುಖವಿಲ್ಲ ಎನ್ನುವ ಹಾಗೆ ಆಗಿದೆ. ಈ ದಿವಸ ನಾನು ನನ್ನ ಸ್ನೇಹಿತರಲ್ಲಿ ಭಿಕ್ಷೆ ಬೇಡುವುದು ಯಾಚಿಸುವುದು ಏನೆಂದರೆ, ನನ್ನಲ್ಲಿ ಏನಾದರೂ ದೋಷವಿದ್ದರೆ ಯಾವತ್ತೂ ಖಂಡಿಸಿ. ನಾನು ಏನಾದರೂ ಒಳ್ಳೆಯಕೆಲಸವನ್ನು ಮಾಡಿದ್ದರೆ ಅದನ್ನು ಒಳ್ಳೆಯ ಕೆಲಸ ಎಂದು ಹೇಳದಿದ್ದರೂ ಚಿಂತೆ ಇಲ್ಲ ; ಅದನ್ನು ಮುಂದುವರಿಸಿಕೊಂಡು ಹೋಗಿ ಎಂದು ನನ್ನ ಪ್ರಾರ್ಥನೆ ಈ ಕಟ್ಟಡದ ಮುಂದೆ ಒಂದು ಸರ್ಕಲ್ ಇದೆ. ಆ ರಸ್ತೆಯಲ್ಲಿ ಹೋದರೆ, ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಲ್ಲೂ ಕೂಡ ಅಷ್ಟುಮಟ್ಟಿನ ಕಲ್ಲುಗಳಿರುವುದಿಲ್ಲ. ವಿಪರೀತ ಧೂಳು ಏಳುತ್ತದೆ. ಒಂದು ದಿವಸದಲ್ಲಿ ಸರಿಪಡಿಸತಕ್ಕ ಕೆಲಸವನ್ನು ಆ ರೀತಿ ಅಲಕ್ಷ್ಯಮಾಡಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಈ ವಿಧಾನ ಸೌಧದ ವಿಷಯದಲ್ಲೂ ಇನ್ನೂ ಅನೇಕ ಸಂಗತಿಗಳನ್ನು ಹೇಳಬಲ್ಲೆ. ಆದರೆ ದೇವರಲ್ಲಿ ಹೀಗೆ ಪ್ರಾರ್ಥಿಸುತ್ತೇನೆ. ಕೂಡಲ ಸಂಗಮದೇವ ನನ್ನನ್ನು ರಕ್ಷಿಸಬೇಕೆಂದು ಹೇಳಿದ್ದೇನೆ; ರಕ್ಷಿಸುತ್ತಾನೆ. ಆ ಕಾಲ ಬಂದಾಗ ನಾನು ಅವರನ್ನು ಪ್ರಾರ್ಥಿಸುತ್ತೇನೆ, ಸ್ನೇಹ ವುಂಟಾದಮೇಲೆ ಇಂಥ ಕೆಲಸ ಇಂಥ ಕಡೆಮಾಡಿ ಎಂದು. ಆದಿವಸವಾದರೂ ನನ್ನ ಮಾತನ್ನು ಕೇಳತಕ್ಕ ಒಂದು ವಾತ್ಸಲ್ಯ ಒಂದು ತರಹ ಕರುಣೆ ಉಂಟಾಗತಕ್ಕ ಕಾಲವನ್ನು ಕಾಯುತ್ತೇನೆ.

ಮತ್ತೊಂದು ವಿಷಯವನ್ನು ಈ ಸಮಿತಿಯವರು ಅದ್ಭುತವಾಗಿ ಮಾಡಿದ್ದಾರೆ. ಈ ಕಟ್ಟಡದ ಪ್ಲಾನನ್ನು ಸ್ಪೀಕರ್ ಅವರಿಗೆ ಒಪ್ಪಿಸಿ, ಅವರ ಅಪ್ಪಣೆ ಪಡೆಯಲಿಲ್ಲ ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಅವರ terms of referenceಗೆ ಇದು ಒಳಪಟ್ಟಿದ್ದಲ್ಲ. ಯಾರು ಇದಕ್ಕೆ ಸಂಬಂಧಪಟ್ಟವರೋ ಅವರೂ ಕೂಡ ಇಲ್ಲ. ಹಿಂದೆ ಸ್ಪೀಕರ್ ಆಗಿದ್ದ ಶ್ರೀ ಸಿದ್ದಯ್ಯನವರು ಮತ್ತು ಶ್ರೀ ರುದ್ರಪ್ಪನವರು ಅವರಿಬ್ಬರನ್ನೂ ಎಷ್ಟೋ ಸಾರಿ ನನ್ನ ಜೊತೆಯಲ್ಲಿ ಇನ್‌ಸ್ಪೆಕ್ಷನ್ನಿಗೆ ಕರೆದುಕೊಂಡು ಹೋಗಿದ್ದೇನೆ. ಈ ಕಟ್ಟಡದ ಒಂದು ಡಾಕ್ಯುಮೆಂಟರಿ ಫಿಲ್ಮ್ ಮಾಡಿದ್ದಾರೆ. ಶ್ರೀ ಸಿದ್ದಯ್ಯನವರ ಚಿತ್ರ ಈಗಲೂ ಇದೆ. ಅದನ್ನು ನೋಡಿದಾಗಲೆಲ್ಲ ಶಾಸನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ಸಿದ್ದಯ್ಯ ಅವರನ್ನು ಆ ಚಿತ್ರದಲ್ಲಾದರೂ ಕಾಣಬಹುದಲ್ಲಾ ಎಂದು ಆ ಒಂದು ನೆನಪು ಬರುತ್ತದೆ. ಮತ್ತು ಶ್ರೀ ಭಾಷ್ಯಂ ಅವರು ಚೇರ್ಮನ್ ಆಗಿದ್ದರು. ಅವರೆಲ್ಲರೂ, ಒಂದು ದಿವಸವಾದರೂ ಕೂಡ, ನನ್ನ ಜೊತೆಯಲ್ಲಿ ಬಂದಾಗ ಕಟ್ಟಡ ನೋಡಿ ಸಂತೋಷಪಟ್ಟು ಕಟ್ಟಿಸಿ ಎಂದು ಪ್ರೋತ್ಸಾಹ ಕೊಟ್ಟರೇ ಹೊರತು ನನ್ನನ್ನು consult ಮಾಡಲಿಲ್ಲ ಎನ್ನುವ ಪ್ರಶ್ನೆ ಅವರ ಮನಸ್ಸಿನಲ್ಲಿ ಹೊಳೆಯಲಿಲ್ಲ. ಎರಡನೆಯದಾಗಿ ಹಿಂದೆ ಇದ್ದ ಸ್ಪೀಕರ್ ಶ್ರೀ ರುದ್ರಪ್ಪ ಅವರನ್ನು ಸಾಕ್ಷಿ ಹೇಳಬೇಕೆಂದು ಕೇಳಿದರು. ಅವರು ಆ ಕಮಿಟಿ ಮುಂದೆ ಹೋದರು. ಹಿಂದಿನ ಸ್ಪೀಕರ್ ಆಗಲಿ ಚೇರ್‌ಮನ್ ಆಗಲಿ ಯಾರೂ ಕೂಡ ಅದು ಒಂದು ಅಪರಾಧ ಎಂದು ಹೇಳದೇ ಇದ್ದ ವಿಷಯವನ್ನು ತಾವಾಗಿ ಹುಟ್ಟಿಸಿಕೊಂಡು, ಸ್ಪೀಕರ್ ಅವರನ್ನು consult ಮಾಡಿದ್ದರೆ ಈ ರೀತಿ ಆಗುತ್ತಾ ಇತ್ತು, ಈ ರೀತಿ ಆಗುತ್ತಾ ಇತ್ತು ಎಂದು ಒಂದು ಊಹೆ, ಕಲ್ಪನೆಯನ್ನು ಮಾಡಿ ಆಕ್ಷೇಪಣೆಯನ್ನು ಮಾಡತಕ್ಕದ್ದು ಸುಸಂಸ್ಕೃತರಿಗೆ ಮರ್ಯಾದೆ ತರತಕ್ಕದ್ದೇ ಎಂದು ನನಗೆ ಮನಸ್ಸಿನಲ್ಲಿ ಎನ್ನಿಸುತ್ತದೆ. ಇದು ಎಲ್ಲಿಯ ಸಂಪ್ರದಾಯ? ಸೆಕ್ರೆಟೇರಿಯಟ್ ಕಟ್ಟಡ, ಲೆಜಿಸ್ಲೇಚರ್ ಎಲ್ಲ ಒಂದಾಗಿ ಕಟ್ಟುವಾಗ ಈ ಕಟ್ಟಡ ಚೆನ್ನಾಗಿ ಆಗಬೇಕು, ಅನುಕೂಲವಾಗಿರಬೇಕು ಎನ್ನುವುದೇ ಮನಸ್ಸಿನಲ್ಲಿ ಮುಖ್ಯ ಪ್ರಶ್ನೆಯಾಗಿರುತ್ತದೆಯೇ ಹೊರತು, ನನ್ನನ್ನು ಕೇಳಲಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ಅದಕ್ಕೆ ಒಂದು ದೊಡ್ಡ ಆರೋಪಣೆ ಮಾಡುವುದು ಬಹಳ ಸಂಕುಚಿತವಾದದ್ದು, ಯಾರೂ ಒಪ್ಪದೇ ಇರತಕ್ಕ ಯಾವ ರೂಲ್ಸ್‌ನಲ್ಲೂ ಇಲ್ಲದೇ ಇರತಕ್ಕ ಒಂದು ಆರೋಪಣೆ, ಸ್ಪೀಕರ್‌ನ್ನು consult ಮಾಡಬೇಕಾಗಿತ್ತು ಎನ್ನುವ ಆರೋಪಣೆಯನ್ನು ಅವರು ಮಾಡಬಾರದಾಗಿತ್ತು. ಅನೇಕ ಸಾರಿ ಸ್ಪೀಕರ್ ಅವರನ್ನು ಕರೆದುಕೊಂಡು ಬಂದು, ಲೆಜಿಸ್ಲೇಚರ್ ಸೆಕ್ರೆಟರಿಯವರನ್ನೂ ಕರೆದುಕೊಂಡು ಬಂದು, ನಿಮ್ಮ ಅಸೆಂಬ್ಲಿ ಹಾಲ್ ಹೇಗಿರಬೇಕು ಸ್ಪೀಕರ್ ಅವರ ಸ್ಥಾನ ಎಲ್ಲಿರಬೇಕು, ಯಾವ ಭಾಗ ಬೇಕು ಎಂದು ಹೇಳಿ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿ ಕೇಳಿದ್ದೇನೆ. ಅವರೂ ಕೂಡ ಸಲಹೆಗಳನ್ನು ಕೊಟ್ಟರು. ಇದೊಂದು ನಿದರ್ಶನ.. ಒಂದು ಮಡಕೆಯಲ್ಲಿ ಅನ್ನ ಮಾಡತ್ತಿದ್ದರೆ ಅನ್ನವಾಗಿದೆಯೇ ಇಲ್ಲವೆ ಎಂಬುದನ್ನು ನೋಡಬೇಕಾದರೆ ಒಂದು ಅಗುಳನ್ನು ಮಾತ್ರ ನೋಡಿದರೆ ಸಾಕು. ಹೀಗೆ ಅಪ್ರಾಸಂಗಿಕವಾಗಿ ಆರೋಪಮಾಡುವ ಮನೋಭಾವದಿಂದ ಕೂಡಿ ಮಾಡಿರುವ ವರದಿಯನ್ನು ನೋಡಿ ಸೋಜಿಗವಾಗಿದೆ.

ಅಧ್ಯಕ್ಷರು.—ನಿಮಗಿನ್ನೂ ಎಷ್ಟು ಕಾಲ ಬೇಕು?

Because I have got to accommodate other Members.

Sri K. HANUMANTHAIYA.—I leave it to your judgment, Sir, because I should not be accused of overspending

the time of the House, as I am already accused of overspending money.

Mr. SPEAKER.—The point is, I do not want to stifle the debate. I have got to accommodate other members. If the Hon'ble Member were to finish by 5 o'clock, it will be all right—somewhere by 5 o'clock—he may take five or ten minutes this way or that. It does not matter. But let him finish his speech today.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಮೊದಲು ಈ ಕಟ್ಟಡದ ಪ್ಲಾನ್ ತಯಾರಾದಾಗ ಮೂರು ಅಂತಸ್ತುಗಳಿಗೆ ಮಾತ್ರ ಅವಕಾಶ ಮಾಡಿತ್ತು. ನಾನು ಈ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡಿಸಿದಾಗ 1952ನೆಯ ಇಸವಿಯ ಕೊನೆಯ ಭಾಗದಲ್ಲಿ ಕರ್ಣಾಟಕ , ಏಕೀಕರಣವಾಗುವುದು ಅಸ್ಪಷ್ಟವಾಗಿತ್ತು. ಒಂದನೆಯ ಅಂತಸ್ತನ್ನು - ಕಟ್ಟಿಕೊಂಡು ಬರುವ ಹೊತ್ತಿಗೆ ಕರ್ಣಾಟಕ ಏಕೀಕರಣವಾಗಬೇಕೆಂದು ಎರಡು ಕೋಟಿ ಜನರ ಆಸೆ ಏನಿತ್ತೋ ಅದು ಕಾರ್ಯರೂಪಕ್ಕೆ ಬರುವ ಸನ್ನಿವೇಶ, ಸೂಚನೆ ಕಂಡು ಬಂತು. ಆಗ ನಾನು ಈಗ ಕಟ್ಟಬೇಕೆಂದಿರುವ ಕಟ್ಟಡ ಸಾಲುವುದಿಲ್ಲ. ಇನ್ನೊಂದು ಅಂತಸ್ತು ಕಟ್ಟಿ ಎಂದು ಸೂಚನೆ ಕೊಟ್ಟೆ, ಮೂರು ಅಂತಸ್ತುಗಳ ಸ್ಥಳ ಸಾಲುವುದಿಲ್ಲ, ನಾಲ್ಕಾಗಬೇಕು ಎಂದು ಮುಂದಾಲೋಚನೆಯಿಂದ ಸೂಚನೆ ನೀಡಿದೆ. ಇಂಜಿನಿಯರುಗಳು ಅದರಂತೆ ವರ್ಕೌಟ್ ಮಾಡಿದರು. ಅನಂತರ ಅದಕ್ಕೆ ಆವಶ್ಯಕವಾದ ಮೊಬಲಗನ್ನು ಬಡ್ಜೆಟ್ಟಿನಲ್ಲಿ ಸೇರಿಸಲಾಯಿತು. ಸೆಕ್ರೆಟೇರಿಯಟ್ ಹಿಂದಿದ್ದ ಅಠಾರಾಕಛೇರಿಯ ಕಟ್ಟಡದಲ್ಲಿ ಎಲ್ಲರಿಗೂ ಸಾಕಾಗುವಷ್ಟು ಸ್ಥಳ, ಗ್ಯಾರೇಜುಗಳು, ವಗೈರೆ ಇರಲಿಲ್ಲ. ಅಧ್ಯಕ್ಷರು, ಸಭಾಪತಿಗಳು, ಸಚಿವರುಗಳು ಇವರ ಕಾರುಗಳನ್ನು ಬಿಡುವುದಕ್ಕೆ, ಜಾಗವಿರಲಿಲ್ಲ. ಅವನ್ನು ಎಲ್ಲಾದರೂ ಬಿಡಲಿ ಎಂಬ ಮನೋಭಾವವಿರಬಾರದು, ಸರ್ಕಾರಿ ಕಾರುಗಳಿಗೆ ರಕ್ಷಣೆಯಿರಬೇಕು, ಡ್ರೈವರುಗಳು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಬಿಸಿಲಿನಲ್ಲಿ ಒಣಗಬೇಕು, ಇದು ಸರಿಯಲ್ಲ, ಇದಕ್ಕಾಗಿ 50 ಗ್ಯಾರೇಜುಗಳನ್ನು ಕಟ್ಟಿಸಬೇಕು ಎಂದು ಮನಸ್ಸು ಮಾಡಿ ಅದನ್ನು ನಿರ್ಮಿಸಲು ಅವಕಾಶ ಕೊಟ್ಟೆ. ಅನಂತರ ಮೆಟ್ಟಲುಗಳನ್ನು ಕಟ್ಟುವಾಗ ಮಣ್ಣನ್ನು ಭರ್ತಿ ಮಾಡಿ ಕಟ್ಟುವಂತೆ ಇಂಜಿನಿಯರುಗಳು ತಿಳಿಸಿದರು. ಆದರೆ ನಮ್ಮ ಬಡ ನೌಕರರಿಗೆ ಗುಮಾಸ್ತರಿಗೆ ತಮ್ಮ ಸೈಕಲ್ಲುಗಳನ್ನು ಬಿಡುವುದಕ್ಕೆ ಸ್ಥಳವಿರಲಿಲ್ಲ. ಅವರಲ್ಲಿ ನೂರಾರು ಮಂದಿ ಬೈಸಿಕಲ್ಲುಗಳ ಮೇಲೆ ಬರುತ್ತಾರೆ. ಹಿಂದೆ ಅಠಾರಾಕಛೇರಿಯಲ್ಲಿ ವರಾಂಡಾದಲ್ಲಿ ಬೈಸಿಕಲ್ಲುಗಳನ್ನು ಬಿಡುತ್ತಿದ್ದುದರಿಂದ ಹೋಗಿ ಬರುವವರಿಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಸುಮಾರು 500 ಬೈಸಿಕಲ್ಲುಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ಅವಕಾಶ ಮಾಡಬೇಕೆಂದು ಯೋಚಿಸಿ ಮೆಟ್ಟಲನ್ನು ಕಟ್ಟಲು ಮಣ್ಣು ತುಂಬುವುದು ಬೇಡ, ಸಿಮೆಂಟ್ ಕಾಂಕ್ರೀಟ್ ಹಾಕಿ ಕಟ್ಟಿ ಬೈಸಿಕಲ್ಲುಗಳನ್ನು ಬಿಡಲು ಅದರ ಕೆಳಗೆ ಅವಕಾಶ ಮಾಡಿ ಎಂದು ತಿಳಿಸಿದೆ. ಹಾಗೆಯೇ ರಸ್ತೆಗಳಾಗಬೇಕಾದದ್ದು ಆವಶ್ಯಕ. ರಸ್ತೆಗಳೇ ಇಲ್ಲದಿದ್ದರೆ ಕಟ್ಟಡದ ಬಳಿಗೆ ಹೋಗುವುದು ಹೇಗೆ! ಈ ನಾಲ್ಕು ಬಾಬುಗಳಿಂದ ಮೊದಲೇನು ಅಂದಾಜಾಗಿತ್ತೋ ಅದು ಹೆಚ್ಚಾಯಿತು. ಹೀಗೆ ಇದಕ್ಕೆಲ್ಲ ಖರ್ಚಾಗಿರುವಾಗ ಈ ದಿವಸ ಗ್ಯಾರೇಜ್ ಇರಬಾರದಾಗಿತ್ತು, ರಸ್ತೆ ಬೇಡ, ಸೈಕಲ್ ಸ್ಟ್ಯಾಂಡ್ ಬೇಡ ಎಂದು ಯಾರು ತಾನೆ ಹೇಳಲು ಸಾಧ್ಯ? ಈ ಸೌಕರ್ಯವೇನು ಬೇಕಾಗಿತ್ತೋ ಅದನ್ನು ಮಾಡಿರುವುದನ್ನು ನೋಡಿಯೂ ಕೂಡ ಟೀಕೆಮಾಡುತ್ತಿದ್ದಾರೆ. ಈ ಟೀಕೆ ಎಷ್ಟು ಸಾಧುವಾದುದೆಂಬುದನ್ನು ನೋಡಬೇಕು.

ಇನ್ನೊಂದು ಮಾತು ಹೇಳುತ್ತೇನೆ. ಮಣ್ಣನ್ನು ತೆಗೆಯಲು ಎಷ್ಟೋ ಖರ್ಚಾಯಿತು. ಮೂರು ಮಂದಿ ಮಾನ್ಯ ಸದಸ್ಯರು ಮಣ್ಣು ಏನಾಯಿತೆಂದೂ, ಅದರಿಂದೆಷ್ಟು ಆದಾಯ ಬಂದಿದೆಯೆಂದೂ ಪ್ರಶ್ನೆ ಮಾಡಿ, ಅದನ್ನು ವಿಚಾರ ಮಾಡದೆ, ದುಂದು ವೆಚ್ಚವೆಂದು ಅಪ್ಪಣೆ ಕೊಡಿಸಿದರು. ಬುಲ್‌ಡೋಜರುಗಳು ಮತ್ತು ಸ್ಕ್ರ್ಯಾಪರ್ಸ್ ಇವುಗಳಿಂದ ತೆಗೆದ ಮಣ್ಣು ಎಷ್ಟು ಸದುಪಯೋಗವಾಗಿದೆಯೆಂಬುದು ಬೆಂಗಳೂರಿನ ನಾಗರಿಕರಿಗೆ ಗೊತ್ತು. ಇಂಟರ್ ಕಾಲೇಜ್ ಮತ್ತು ಸೆಂಟ್ರಲ್ ಕಾಲೇಜ್ ಮುಂದೆ ದೊಡ್ಡ ಗುಂಡಿಯಿತ್ತು ಸುಮಾರು 20-30 ಅಡಿ ಆಳವಾಗಿಯೂ ಮತ್ತು ಒಂದು ಕ್ರಿಕೆಟ್ ಫೀಲ್ಡಿನಷ್ಟು ದೊಡ್ಡದಾಗಿಯೂ ಗುಂಡಿಯಿತ್ತು. ಅಲ್ಲೆಲ್ಲ ಕಚ್ಚಡ ಹಾಕುತ್ತಿದ್ದರು. ಈ ದಿವಸ ಅದು ಮಣ್ಣು ಭರ್ತಿ ಮಾಡಿದ ಮೇಲೆ ಆಟದ ಮೈದಾನವಾಗಿದೆ. ಕಸ್ತೂರಿಬಾಯಿ ರಸ್ತೆ ಮತ್ತು ಸಿಟಿ ಮತ್ತು ಕಂಟೋನ್ಮೆಂಟ್ ಲಿಂಕ್ ರಸ್ತೆ ಬಹಳ ಇಕ್ಕಟ್ಟಾಗಿತ್ತು. ಈ ದಿವಸ ಅದೆಷ್ಟು ವಿಶಾಲವಾಗಿದೆ ಎಂದು ನೋಡಿದವರು ಸಂತೋಷಪಡುತ್ತಿದ್ದಾರೆ. ಗಾಂಧಿನಗರದಲ್ಲಿ ಒಂದು ದೊಡ್ಡ ಕಲ್ಯಾಣಿಯಿದ್ದು, ಅದರಲ್ಲಿ ನೀರು ನಿಂತು ಅನಾರೋಗ್ಯಕ್ಕೆ ಕಾರಣವಾಗಿತ್ತು. ಅದಕ್ಕೆ ಮಣ್ಣುಭರ್ತಿ ಮಾಡಿದ ಮೇಲೆ ಎಷ್ಟೋ ಅನುಕೂಲವಾಯಿತು. ಈ ಮಣ್ಣನ್ನು ಒಂದು ಟನ್ನಿಗೆ ಇಷ್ಟು ಎಂದು ಮಾರಿದ್ದರಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ಆದಾಯ ಬಂತು. ಅನೇಕ ಖಾಸಗಿ ಜನರೂ ತೆಗೆದುಕೊಂಡಿದ್ದಾರೆ ಮತ್ತು ಸರ್ಕಾರದ ಇತರ ಇಲಾಖೆಗಳವರೂ ತೆಗೆದುಕೊಂಡಿದ್ದಾರೆ. ಇಷ್ಟು ಮಣ್ಣನ್ನು ಸಾಗಿಸಿದ್ದರಿಂದ ಪಟ್ಟಣದ ಸೌಲಭ್ಯವನ್ನೂ, ಸೌಂದರ್ಯವನ್ನೂ ಹೆಚ್ಚಿಸಿದ್ದರ ಜೊತೆಗೆ ಹಣವೂ ಬಂತು. ಈ ವಿಚಾರಗಳನ್ನು ಪರಿಶೀಲಿಸುವುದಕ್ಕೆ ಮನಸ್ಸು ಮಾಡದೆ ಆರೋಪಣೆ ಮಾಡಿದ್ದಾರೆ.

ಈ ಕೆಲಸ ಮಾಡಿದ ಇಂಜಿನಿಯರುಗಳ ವಿಚಾರದಲ್ಲಿ ಒಂದಂಶವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಈ ಕಟ್ಟಡವನ್ನು ಕಟ್ಟಿದಾಗ ಇದಕ್ಕೆ ಸಂಬಂಧ ಪಟ್ಟ ಪ್ರತಿಯೊಬ್ಬರೂ ಕೂಡ ತಮ್ಮ ಸ್ವಂತ ಕಟ್ಟಡ ಕಟ್ಟಬೇಕಾದರೆ ಎಷ್ಟು ಪ್ರೇಮ, ಎಷ್ಟು ಎಚ್ಚರಿಕೆ ತೋರಿಸುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಪ್ರೇಮ, ಎಚ್ಚರಿಕೆ ತೋರಿಸಿದರು. ಭಾನುವಾರದ ದಿವಸವೂ ಸಹ ಇಂಜಿನಿಯರುಗಳೆಲ್ಲಾ ಕೆಲಸ ಮಾಡಿದ್ದಾರೆ. ಪ್ರತಿದಿನವೂ 5 ಘಂಟೆಗೆ ನಾನು ಕಟ್ಟಡದ ಬಳಿಗೆ ಹೋದರೆ ಎಷ್ಟೋ ವೇಳೆ ಏಳು ಘಂಟೆಯವರೆಗೆ ಇರುತ್ತಿದ್ದೆ. ಆದ್ದರಿಂದ ಇಂಜಿನಿಯರುಗಳೂ ಸಹ ಅಲ್ಲೇ ಇರುತ್ತಿದ್ದರು. ಹೀಗೆ ಮೈಸೂರು ದೇಶದ ಚರಿತ್ರೆಯೊಳಗೆ ಸಂಬಂಧಪಟ್ಟ ಅಧಿಕಾರವರ್ಗದವರು ಇಷ್ಟು ಪ್ರಮಾಣದಲ್ಲಿ ಚೆನ್ನಾಗಿ ಹೆಚ್ಚು ಕೆಲಸ ಮಾಡಿರುವುದನ್ನು ಯಾರಾದರೂ ಕಂಡುಹಿಡಿದರೆ ಅವರಿಗೆ ತಲೆಬಾಗುತ್ತೇನೆ. ಹೀಗೆ ಹೆಚ್ಚು ಕಾಲ ಶ್ರದ್ಧಾಭಕ್ತಿಗಳಿಂದ ಕೆಲಸ ಮಾಡಿದ್ದಾರೆ. ಕಟ್ಟಡದ ಮುಂದೆ " Government work is God's work " " ಸರ್ಕಾರದ ಕೆಲಸ ದೇವರ ಕೆಲಸ. " ಎಂದೇನು ನಾನು ಬರೆಸಿದ್ದೇನೆಯೋ ಅದೇ ರೀತಿ ಭಕ್ತಿಯಿಂದ, ಶ್ರದ್ಧೆಯಿಂದ

(ಶ್ರೀ ಕೆ. ಹನುಮಂತಯ್ಯ)

ಎಲ್ಲರೂ ಕೆಲಸ ಮಾಡಿದ್ದಾರೆಂದು ಧಾರಾಳವಾಗಿ ಹೇಳುತ್ತೇನೆ. ಹೀಗೆ ಕೆಲಸ ಮಾಡಿದವರು "ಸ್ವಾಮಿ, ಭದ್ರಾನದಿ, ನುಗುನದಿ, ಮಹಾತ್ಮಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟುಗಳಲ್ಲಿ ಕೆಲಸಮಾಡಿದವರಿಗೆ ಓವರ್ ಟೈಂ ಅಲೋಯನ್ಸ್ ಕೊಡುವ ಪದ್ಧತಿಯಿದೆ; ನಮಗೂ ಅದರಂತೆ ಕೊಡಬೇಕು." ಎಂದು ಕೇಳಿದರು. ನಾನು "ಕಟ್ಟಡ ಇಷ್ಟು ಕಾಲದಲ್ಲಿ ಕಟ್ಟಿದರೆ ಓವರ್‌ಟೈಂ ಅಲೋಯನ್ಸ್ ಕೊಡುತ್ತೇನೆ, ಇಲ್ಲದಿದ್ದರೆ ಇಲ್ಲ" ಎಂದು ಕಂಡೀಷನ್ ಹಾಕಿ ಹೇಳಿದೆ. ಇದಕ್ಕೆ ಸಂಬಂಧಪಟ್ಟ ಫೈಲು ಹಾಗೆಯೇ ಇದೆ. ಈ ದಿವಸ ನೋಡಿದರೆ ಆಶ್ಚರ್ಯವಾಗುತ್ತಿದೆ. ಸಮಿತಿಯ ಸದಸ್ಯರು ಎರಡು ತಿಂಗಳಿಗೆ ತಲೆಗೆ 5 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಸಂಭಾವನೆ ಪಡೆದಿದ್ದಾರೆ. ಮೂರು ಮಂದಿ ಸಮಿತಿ ಸದಸ್ಯರೂ ಹಣ ತೆಗೆದುಕೊಂಡು ಹೋದರು. ಜೊತೆಗೆ ಅವರ ಸಿಬ್ಬಂದಿಗೆ ಎಂ. ಎಸ್. ಆರ್. ನಲ್ಲಿರುವುದಕ್ಕಿಂತ ಹೆಚ್ಚು ಸಂಭಾವನೆ ಕೊಟ್ಟಿದ್ದಾರೆ. ಇದು ಸರಿಯೆ ಎಂಬುದನ್ನು ಯೋಚನೆ ಮಾಡಬೇಕು. ಹೀಗೆ ಕಟ್ಟಡದಲ್ಲಿ ಕುಳಿತು ಇಷ್ಟ ಬಂದಾಗ ಕೆಲಸ ಮಾಡುತ್ತಿದ್ದ ನೌಕರರಿಗೆ ಮತ್ತು ಸದಸ್ಯರಿಗೆ ಓವರ್-ಟೈಂ ಅಲೋಯನ್ಸ್ ಕೊಡುವುದು, ಯಾವ ಇಂಜಿನಿಯರುಗಳು ಭಾನುವಾರ ಸಹ ಕೆಲಸ ಮಾಡಿ ರಾತ್ರಿ 8-10 ಘಂಟೆಯವರೆಗೆ ಕೆಲಸ ಮಾಡುತ್ತಿದ್ದರೋ ಅವರಿಗೆ ಒಂದು ಕಾಸೂ ಇಲ್ಲ! ಅಷ್ಟೇ ಅಲ್ಲದೆ ಅವರ ಮೇಲೆ ಎಲ್ಲ ಕಡೆಗಳಿಂದಲೂ ಆಕ್ಷೇಪಣೆ, ಆರೋಪಣೆ. ದೇವರಿದ್ದಾನೆಂದು ಹೇಳಿದರೆ ಈ ಅನ್ಯಾಯವಾದ ಆರೋಪವನ್ನು ಅವನು ಸಹಿಸಲಾರನೆಂದು ತಿಳಿದುಕೊಂಡಿದ್ದೇನೆ. ಅನೇಕ ಸಮಿತಿಗಳ ಸದಸ್ಯರಾಗಿದ್ದ ಶ್ರೀಯುತರುಗಳಾದ ಪಟ್ಟಾಭಿರಾಮನ್, ಇಮಾಂ, ಹುಚ್ಚೇಗೌಡ, ಹುಚ್ಚಮಾಸ್ತಿಗೌಡ ಮುಂತಾದವರು ಯಾರಿಗೂ ಐದು ಸಾವಿರ ರೂಪಾಯಿಗಳಷ್ಟು ಲಂಪ್‌ಸಂ ಹಣ ಕೊಟ್ಟಿಲ್ಲ.

I ask in all fairness, where was the necessity to pay Rs. 5,000 to these two members for part-time work spread over one or two months. That too they have not tackled the problem that had been entrusted to them, namely, perusal of the accounts and finding out which item is correct and which item is not.

ಮತ್ತೊಂದು ದುಃಖದ ಸಂಗತಿಯನ್ನು ಹೇಳಬೇಕಾಗಿದೆ. ವಿಧಾನಸೌಧ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಸಲಹೆ ಬಂತು. ಏನೂ ಅನ್ಯಾಯ ಮಾಡಿಲ್ಲ ಎಂದು ನನಗೆ ಗೊತ್ತಿತ್ತು. ಈ ಕಟ್ಟಡದ ಕೆಲಸವು ನಿಷ್ಕಳಂಕವಾಗಿ ನಡೆದಿದೆ ಎಂದು ನನ್ನ ಮನಸ್ಸಿಗೆ ಗೊತ್ತಿತ್ತು. ಯಾವ ರೀತಿಯ ಅನ್ಯಾಯವೂ ಆಗಿಲ್ಲ, ಯಾರೂ ಅಪರಾಧ ಮಾಡಿಲ್ಲ ಎಂಬುದನ್ನು ತೋರಿಸಲಿ ಮತ್ತು ಈ ಮಹಾಕಾರ್ಯವನ್ನು ಸಮಿತಿಯು ಪರಿಶೀಲನೆ ಮಾಡಿದ ಮೇಲೆ ನಿಷ್ಪಕ್ಷಪಾತವಾಗಿ ಪ್ರಶಂಸಿಸಬೇಕಾಗುವುದೆಂದು ಸಮಿತಿಯನ್ನು ನೇಮಿಸಿದಾಗ ಧೈರ್ಯದಿಂದ ಹಾಗೆ ನನಗೆ ಎನಿಸಿತ್ತು. ಸತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬರಬೇಕೆಂದು ನಾನು ಮನಸ್ಸಿನಲ್ಲಿ ನಿರ್ಧರಿಸಿಕೊಂಡಿದ್ದೆನು. ಪ್ರೈವೇಟಾಗಿ ಹೋಗಿ ವರದಿಯನ್ನು ಹಾಗೆ ಬರೆಯಿರಿ, ಹೀಗೆ ಬರೆಯಿರಿ ಎಂದು ಸಮಿತಿಯ ಸದಸ್ಯರಿಗೆ ಹೇಳುವುದು ಅನ್ಯಾಯ, ಅದು ಅಸತ್ಯ; ಅಪ್ರತ್ಯಕ್ಷವಾಗಿ ಹೇಳುವದೂ ಅನ್ಯಾಯ. ಸಮಿತಿಯ ಅಧ್ಯಕ್ಷರನ್ನು ಒಂದು ಬಾರಿ ಮಾತ್ರ ಬಂದು ನೋಡಿದೆನೇ ಹೊರತು ಅನಂತರ ಪುನಃ ಅವರನ್ನು ನೋಡುವ ಗೋಜಿಗೆ ನಾನು ಹೋಗಲಿಲ್ಲ. ರಾಜಕೀಯ ವಾತಾವರಣವು ವಿಷಮಯವೂ ಮೋಸಮಯವೂ ಆಗಿತ್ತು. ನಾನು ರಾಜೀನಾಮೆ ಕೊಟ್ಟಮೇಲೆ ಅವರ ವರ್ತನೆಯಲ್ಲಿ ಬದಲಾವಣೆ ಆದದ್ದು ಕಂಡುಬಂತು. ಈ ಊರಲ್ಲಿ ದೊಡ್ಡ ಮನಷ್ಯರು ಎಂದು ತಿಳಿದುಕೊಂಡವರೊಬ್ಬರ ಸಂಗಡ ಸಮಿತಿಯ ಅಧ್ಯಕ್ಷರು ಸ್ನೇಹಮಾಡಿದರು. ನಾಲ್ಕುವರ್ಷ ಈ ಮಹನೀಯರು ನಾನು ಅಧಿಕಾರದಲ್ಲಿದ್ದಾಗ ಹಿಂಸೆ ಕೊಟ್ಟವರು. ಇವರು ಅಧ್ಯಕ್ಷರನ್ನು ಖಾಸಗೀ ರೀತಿಯಿಂದ ಭೇಟಿಯಾಗುತ್ತಿದ್ದರು. ಇವರ ಸ್ನೇಹವು ಅಧ್ಯಕ್ಷರ ಮನಸ್ಸನ್ನು ಕೆಡಿಸಲು ಕಾರಣವಾಯಿತು.

Sri H. K. VEERANNA GOWDH (Minister for Public Works].—May I know whether the clock is moving ?

Mr. SPEAKER.—It is not moving. I have got another watch here.

Sri K. HANUMANTHAIYA.—Sir, I will take only 20 minutes more.

Mr. SPEAKER.—I would request the Hon'ble Member that, after all, I am personally very much embarrassed on account of the time-limit. I will give him some more time, if he can finish today.

Sri S. S. KOLKEBAIL (Brambhawar).—Let him have his say, because he is the main accused here, Sir.

Mr. SPEAKER.—There is no accused present here. The Hon'ble Member will remember that we are not discussing the Vidhana Soudha Enquiry Committee Report. We are only discussing the Demand Vote on Account, and since there is this item included therein the Hon'ble Member has been allowed to explain his position.

Sri S. S. KOLKEBAIL.—My point is about the discussion of the Budget on Account and to that extent so much money has been spent. Let him explain.

Mr. SPEAKER.—Let the Hon'ble Member please hear me. There is nobody here as an accused person.

Sri S. S. KOLKEBAIL.—That is an ironical term.

Mr. SPEAKER.—Ironical terms should not be used.

Sri K. HANUMANTHAIYA.—I am in the hands of this House and whatever time Chair is pleased to give me, I will confine my remarks to that time-limit, Sir.

Mr. SPEAKER.—I am prepared to sit a little bit longer and if it is not

inconvenient to members. We will sit half-an-hour more.

5 P.M.

ಶ್ರೀ ಕೆ. ಹನುಮಂತಯ್ಯ.—ಅನಂತರ ಒಂದು ದಿವಸ ನಾನು ಸಮಿತಿಯ ಅಧ್ಯಕ್ಷರನ್ನು ಕಾಣಲ ಅವರ ಚೇಂಬರಿನೊಳಗೆ ಹೋದೆನು. ಅಧ್ಯಕ್ಷರು ವಿನಯ ದಿಂದ ಮುಖ ಮೇಲೆ ಸಹ ಮಾಡಿ ನನ್ನ ಕಡೆಗೆ ನೋಡ ಲಿಲ್ಲ. ಅವರ ಮುಖಭಾವ ಭಯಂಕರವಾಗಿದ್ದದ್ದು ನನಗೆ ಕಾಣುತ್ತಿತ್ತು. He did not receive me. ಅಧ್ಯಕ್ಷರ ಮನಸ್ಸನ್ನು ರಾಜಕೀಯ ಉದ್ದೇಶದಿಂದ ಕೆಡಿಸಿದ್ದಾರೆಂದು ನನ್ನ ಮನಸ್ಸಿಗೆ ಗೊತ್ತಾಯಿತು.

ಅನಂತರ ನನ್ನ ಸ್ನೇಹಿತರು "This is a vulgar type of building" ಎಂದು ಏನೇನೋ ಹೇಳಿದ್ದಾರೆ. ಮತ್ತು ಇನ್ನು ಕೆಲವರು ಇಷ್ಟು ದೊಡ್ಡ ಕಟ್ಟಡವನ್ನು ಏಕೆ ಕಟ್ಟಬೇಕಾಗಿತ್ತು ಎಂದು ಮುಂತಾಗಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆಲ್ಲಾ ಸಾಕ್ಷಿ ಬೇಕಾದರೂ ಕೊಡುವುದಕ್ಕೆ ನನಗೆ ಧೈರ್ಯ ವಿದೆ. ಏನಾದರೂ ಆಗಲಿ ಈ ಸಮಿತಿಯವರು ಈ ಒಂದು ಚಿಕ್ಕ ವಿಷಯವನ್ನ ದೊಡ್ಡದು ಮಾಡಿ ಬಹಳ ಅನ್ಯಾಯವಾಗಿದೆ, ಅಕ್ರಮವಾಗಿದೆ ಎಂದು ತೋರಿಸಿ ದ್ದಾರೆ. ನಾನು ಈ ಸಮಿತಿಯ ಮುಂದೆ ಸಾಕ್ಷಿ ಕೊಡುವುದಕ್ಕೆ ಹೋಗಿದ್ದಾಗ ನಾನೇ ಅವರನ್ನು ತಮಗೇನು ಬೇಕೋ ಅದನ್ನೆಲ್ಲ ಕೇಳಿ ಎಂದು ಹೇಳಿ ದ್ದೇನೆ. ಸಾಕ್ಷಿಕೊಡುವುದಕ್ಕೆ ಹೋಗಿ ಸಾಕ್ಷಿ ಕೊಟ್ಟ ದ್ದನ್ನು "I do not take it down" ಎಂದು ಹೇಳಿದರು. ಇದು ಏನಾಗಿದೆ ಎಂದರೆ "ತೋಳ ಹಳ್ಳಕ್ಕೆ ಬಿದ್ದಾಗ ಆಳಿಗೊಂದು ಕಲ್ಲು" ಎನ್ನುವ ಗಾದೆ ಯಂತೆ, ಯಾವುದೋ ಒಂದು ದುರುದ್ದೇಶವನ್ನಿಟ್ಟು ಕೊಂಡು ಈ ರೀತಿ ಮಾಡುವುದು ಸರಿಯಲ್ಲ. ನನ್ನನ್ನು ಪ್ರಶ್ನೆ ಕೇಳಿದ ರೀತಿಯನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿ ತೋರಿತು.

ಮತ್ತೊಂದು ದೊಡ್ಡ ವಿಷಯ, ಸ್ಪೆಷಲ್ ಇಂಜಿನಿ ಯರ್‌ಅವರ ನೇಮಕಕ್ಕೆ ಸಂಬಂಧಿಸಿದ್ದು. ಅವರಿಗೇನು ಕ್ವಾಲಿಫಿಕೇಷನ್ಸ್ ಇತ್ತು ಎಂದು ಕೇಳಿದರು. ರಿಕಾರ್ಡಿ ನಲ್ಲಿ ಏನಿದೆಯೋ ಅದರಂತೆ ಹೇಳಿದ್ದಾಯಿತು. ಆಮೇಲೆ ನಾನು ಅದರ ಮೇಲೆ ಏನನ್ನು ಹೇಳಿದರೂ ಅದನ್ನು ಬರೆದುಕೊಳ್ಳಲಿಲ್ಲ. ಇನ್ನು ಈ ಇಂಜಿನಿಯರ ವಿಷಯ. ಇವರು ಶ್ರೀ ಮುನಿಯಪ್ಪ ಎಂಬುವರು. ಇವರನ್ನು 1952ನೆಯ ಮಾರ್ಚಿಯಲ್ಲಿ ರಿಟೈರು ಮಾಡಬೇ ಕಾಗಿತ್ತು. ಆದರೆ ನನ್ನ ಹಿಂದೆ ಮುಖ್ಯಮಂತ್ರಿ ಗಳಾಗಿದ್ದ ಶ್ರೀ ಕೆ. ಸಿ. ರೆಡ್ಡಿಯವರು ಈ ಸ್ಪೆಷಲ್ ಇಂಜಿನಿಯರಾದ ಶ್ರೀ ಮುನಿಯಪ್ಪನವರು ಪೂನಾ ದಲ್ಲಿದ್ದಾಗ ಬಹಳ ಪ್ರಮುಖವಾದ ಮತ್ತು ಉತ್ತಮ ವಾದ ದೊಡ್ಡ ದೊಡ್ಡ ಕಟ್ಟಡದ ಕೆಲಸಗಳನ್ನು ಮಾಡಿದ್ದಾರೆಂದು ಹೇಳಿ ಬಹಳ ಶ್ಲಾಘನೆ ಮಾಡಿ ದ್ದರು. ನಾನು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಐದು ವರ್ಷಗಳವರೆಗೆ ನೇಮಿಸಿದೆ. ಮತ್ತು ಅವರ ವಿಷಯವಾಗಿ ಬಂದಿದ್ದ ಸರ್ಟಿ ಫಿಕೇಟುಗಳೂ ಕೂಡ ಇವೆ. ಅವುಗಳನ್ನೆಲ್ಲವನ್ನೂ ನೋಡಿ ಈ ಸ್ಪೆಷಲ್ ಇಂಜಿನಿಯರನ್ನು ನೇಮಕ ಮಾಡಿದ್ದು. ಇದರಲ್ಲೇನೂ ದೋಷ ನನಗೆ ಕಂಡುಬರ ಲಿಲ್ಲ. ಅದನ್ನೇಕೆ ಇಲ್ಲಿ ಇಷ್ಟು ದೊಡ್ಡದಾಗಿ ಹೇಳ ಬೇಕಾಗಿತ್ತೋ ನನಗೆ ಗೊತ್ತಾಗಲಿಲ್ಲ. ಅವರೂ ಕೂಡ ಒಳ್ಳೆಯ ಸಹೃದಯದ ಮನೋಭಾವದಿಂದ ಕೆಲಸವನ್ನು ಚೆನ್ನಾಗಿ ಮಾಡಿದರು. ಆದರೆ ಲೆಕ್ಕಾ ಚಾರವನ್ನು ಕ್ರಮವಾಗಿ ಎಂದರೆ ಅಪ್‌ಟುಡೇಟಾಗಿ ಇಡಬೇಕು ಎನ್ನುವುದನ್ನು ಅವರೂ ಮರೆತುಬಿಟ್ಟರು ನನಗೂ ಹೇಳಲಿಲ್ಲ. ಸರ್ಕಾರದವರೂ ಗಮನಿಸಲಿಲ್ಲ. "Accounts are in an unsatisfactory condition; I want more staff" ಎಂದು ಕೂಡ ಕೇಳಲಿಲ್ಲ. ಅವರೂ ಒಂದು ತಪ್ಪು ಮಾಡಿದರು. ಇದನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಿ ದ್ದಾರೆ. ಈ ಸಂದರ್ಭದಲ್ಲಿ ಇಷ್ಟು ಹೇಳುತ್ತೇನೆ; ಸ್ಪೆಷಲ್ ಇಂಜಿನಿಯರಾಗಲಿ, ಅಲ್ಲದ್ದ ಅಸಿಸ್ಟೆಂಟ್ ಇಂಜಿನಿಯರಾಗಲಿ ಎಲ್ಲರೂ ಧೈರ್ಯದಿಂದ ಚೆನ್ನಾಗಿ ಕೆಲಸ ಮಾಡಿದ್ದಾರೆ. ದಕ್ಷತೆಯಿಂದ ಕೆಲಸ ಮಾಡಿ ದ್ದಾರೆ. ಅವರು ತಪ್ಪುಗಳನ್ನೇನೂ ಮಾಡಿಲ್ಲ ಎಂದು ಹೇಳುವುದಿಲ್ಲ. ಅವರೂ ಮಾಡಿದ್ದಾರೆ. ಆದರೆ ಅವರೇನೂ ಅಂತಹ ದೊಡ್ಡ ತಪ್ಪುಗಳನ್ನೇನೂ ಮಾಡಿಲ್ಲ. ತಪ್ಪುಗಳು ಆಗುತ್ತವೆ, ಇಲ್ಲವೆಂದು ಹೇಳು ವುದಕ್ಕಾಗುವುದಿಲ್ಲ. ಅವೆಲ್ಲಾ ಸಾಮಾನ್ಯವಾದ ವು ಗಳು. ಈಗ ನಮ್ಮ ದೇಶದಲ್ಲಿರುವ ಭದ್ರ, ನುಗು, ಲಕ್ಕವಳ್ಳಿ ಮುಂತಾದ ಯಾವುದೇ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಪರಿಶೀಲಿಸಲಿ, ಅಲ್ಲಿಯೂ ಕೂಡ ಇದೇ ತರಹದ ಆರೋಪಣೆಗಳು, ತಪ್ಪುಗಳು ಕಂಡುಬರದೇ ಇದ್ದರೆ ಅದಕ್ಕಾಗಿ ತಾವು ಸಭಿಕರು ಯಾವ ರೀತಿಯ ಶಿಕ್ಷೆ ಕೊಟ್ಟರೂ ತಲೆಬಾಗಿ ವಹಿಸಿಕೊಳ್ಳಲು ಸಿದ್ಧನಾಗಿ ದ್ದೇನೆಂದು ಹೇಳುತ್ತೇನೆ. ಇನ್ನೇನೂ ಹೆಚ್ಚಾಗಿ ಹೇಳ ಲಾರೆ.

ಈ ಕಟ್ಟಡ ಆಗದಿದ್ದರೆ ಏನು ಪರಿಸ್ಥಿತಿ ಉಂಟಾಗು ತ್ತಿತ್ತು ಎನ್ನುವ ವಿಷಯವಲ್ಲಿ ಅನೇಕರು ಇಲ್ಲಿ ಮಾತ ನಾಡಿದ್ದಾರೆ. ಈ ಹಿಂದೆ ಆಂಧ್ರ ರಾಜ್ಯ ಸ್ಥಾಪನೆ ಯಾದ ಸಂದರ್ಭದಲ್ಲಿ ಕರ್ನೂಲನ್ನು ರಾಜಧಾನಿ ಯನ್ನಾಗಿ ಮಾಡುವ ಸಂದರ್ಭದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಕಟ್ಟಡಗಳನ್ನೂ ರೆಸಿಡೆನ್ಷಿಯಲ್ ಕ್ವಾರ್ಟರ್ಸ್‌ಗಳನ್ನೂ ಕಟ್ಟಲು ವೆಚ್ಚ ಮಾಡಿದರು. ಈಗ ಹೈದರಾಬಾದು ರಾಜಧಾನಿಯಾಯಿತು. ಅಲ್ಲಿ ಕಟ್ಟಿದ್ದ ಕಟ್ಟಡಗಳು ಈಗೇನಾಗಿವೆಯೋ ಗೊತ್ತಿಲ್ಲ.

ಕೆಲವರು ಇಂತಹ ಒಂದು ಕಟ್ಟಡವಿಲ್ಲದಿದ್ದರೆ ಏನಾ ಗಿತ್ತು ಮತ್ತು ಇಷ್ಟು ದುಬಾರಿ ವೆಚ್ಚದಲ್ಲಿ ಸರಿಯಾದ ಅಂದಾಜಿಲ್ಲದೆ ಏಕೆಕಟ್ಟಬೇಕಾಗಿತ್ತು ಎಂಬ ಆರೋಪಣೆ ಮಾಡಿದರು. ನಿವೃತ್ತ ಚೀಫ್ ಇಂಜಿನಿಯರುಗಳ ಸಮಿತಿ ಒಪ್ಪಿದ ಮೂಲ ನಕ್ಷೆಯರೀತಿಯಾಗಿ ವಿಧಾನಸೌಧವನ್ನೂ ನಿರ್ಮಾಣಮಾಡಲಾಗಿದೆ. ತಮಗೆ ಪ್ಲಾನನ್ನು ತೋರಿಸ ಲಿಲ್ಲ ಎಂಬ ಸ್ವಾಭಿಮಾನದ ಕೋಪವನ್ನು ಶ್ರೀ ನರ ಸಿಂಹಯ್ಯನವರು (ನಿವೃತ್ತ ಚೀಫ್ ಇಂಜಿನಿಯರು ಹಾಗೂ ವಿಚಾರಣಾ ಸಮಿತಿಯ ಸದಸ್ಯರು) ನನ್ನ ಮೇಲೆ ತೋರಿಸಿದ್ದಾರೆ. ಪ್ರತಿಯೊಂದು ಅಂದಾಜನ್ನು ತಯಾರುಮಾಡಿ ಅದನ್ನು ಪರಿಶೀಲಿಸಿ, ಮಂಜೂರಾದ ಅನಂತರ ಕೆಲಸ ಆರಂಭಿಸುವ ಮಾರ್ಗವನ್ನು ಅನುಸರಿ ಸಿದ್ದರೆ ಈ ಕಟ್ಟಡ ಇನ್ನೂ 8-10 ವರುಷಗಳಾಗಿದ್ದರೂ ಮುಗಿಯುತ್ತಿರಲಿಲ್ಲ. ಈ ಭವನದ ನಿರ್ಮಾಣದಿಂದ ಸರ್ಕಾರ ಸಾಲದ ಹಣಕ್ಕೆ ಬಡ್ಡಿಕೊಡಬೇಕಾಗಿ ಬಂದಿದೆ ಎಂದು ಒಂದು ಆರೋಪಣೆ: ಇದು ಹೇಗಿದೆ ಎಂದರೆ: ಗಂಡ ಹೆಂಡತಿ ಇದ್ದರಂತೆ. ಆ ಗಂಡ ಒಂದು ದಿನ ತನ್ನ ಹೆಂಡತಿಯ ಹತ್ತಿರ ಬಂದು ಈ ವಾರ ನಾನು ಎರಡೂ ವರೆ ಸಾವಿರ ರೂಪಾಯಿಗಳನ್ನು ಮಿಗಿತಾಯ ಮಾಡಿ ದ್ದೇನೆ ಎಂದು ಹೇಳಿದನಂತೆ. ಇದನ್ನು ಕೇಳಿ ಹೆಂಡತಿಗೆ ಬಹುಸಂತೋಷವಾಯಿತು. ಇದಕ್ಕೆ ಕಾರಣವನ್ನು ಕೇಳಿ ದಾಗ ಅವಳ ಗಂಡ ಸುಮಾರು ಒಂದೂವರೆ ಸಾವಿರ ರೂಪಾಯಿ ಬೆಲೆ ಬಾಳುವಂತಹದು ಒಂದು ಚಿನ್ನದ ಅಡ್ಡಿಗೆ ಬೇಡ ಎಂದು ಹೇಳಿದ್ದಕ್ಕಾಗಿ, 200 ರೂಪಾಯಿ

(ಶ್ರೀ ಕೆ. ಹನುಮಂತಯ್ಯ):

ಗಳು ಬಾಳುವ ಸೀರೆಯನ್ನೂ ಬೇಡ ಎಂದು ಹೇಳಿದ್ದಕ್ಕಾಗಿ ಮತ್ತು ಇನ್ನೂ ಕೆಲವು ಒಡವೆಗಳು ಬೇಡವೆಂದದ್ದಕ್ಕಾಗಿ, ಈ ರೀತಿ ಎರಡೂವರೆ ಸಾವಿರ ರೂಪಾಯಿ ಉಳಿತಾಯವಾಯಿತು, ಎಂದು ಹೇಳಿದನಂತೆ. ಈ ಭವನ ನಿರ್ಮಾಣವಾಗದಿದ್ದರೆ ಹೆಚ್ಚು ಬಾಡಿಗೆಯನ್ನು ಸರ್ಕಾರ ಕೊಡಬೇಕಾಗಿ ಬರುತ್ತಿತ್ತು ಎಂಬ ವಿಷಯ ಈ ಅರವತ್ತು ವರ್ಷದ ಅರುಳು ಮರುಳು ಮನಸ್ಸಿಗೆ ಹೊಳೆಯಲಿಲ್ಲವೇ? ಈ ವಿಧವಾದ ಮನಸ್ಸಿನಿಂದ ಒಂದು ಆರೋಪವನ್ನು ಮಾಡಿದ್ದಾರೆ. ಇದನ್ನು ಪರೀಕ್ಷೆಮಾಡಿಲ್ಲ. ಪರೀಕ್ಷೆಮಾಡದೆ ಒಂದು ದೊಡ್ಡ ರಿಮಾರ್ಕ್ಸ್‌ನ್ನು ಪಾಸುಮಾಡಿದ್ದಾರೆ. ಈ ಕಟ್ಟಡಕ್ಕೆ ತಗಲಿದ ವೆಚ್ಚ ಸುಮಾರು 180 ಲಕ್ಷ ರೂಪಾಯಿಗಳನ್ನು ಹೇಗೆ ಒದಗಿಸಿದರು ಎಂದು ಆರೋಪಣೆ ಮಾಡಿದ್ದಾರೆ. ಈ ವರದಿಯಲ್ಲಿ "Where do you get this amount of 180 lakhs of rupees" ಎಂಬ ಪ್ರಶ್ನೆ ಇದೆ. ಇದನ್ನು ಸರಿಯಾಗಿ ಎಕ್ಸಾಮಿನ್ ಮಾಡದೆ ಈ ರೀತಿ ಹೇಳಿರುವುದು ತಪ್ಪು. ಪರೀಕ್ಷೆಮಾಡಿದ್ದರೆ ತಾನೇ ತಾನಾಗಿ ತಿಳಿಯುತ್ತಿತ್ತು. ಈಗ ಪಂಚವಾರ್ಷಿಕ ಯೋಜನೆಯ ಪ್ರಾಜೆಕ್ಟುಗಳಿಗೆ ಸುಮಾರು ಎಂಟು ಕೋಟಿ ನಿಗದಿಯಾಗಿತ್ತು. ಈಗ 5 ಕೋಟಿ ರೂಪಾಯಿಗಳ ಮೇಲೆ ಖರ್ಚಾಗಿದೆ. ಇದರಿಂದ ಹಣವನ್ನು ತೆಗೆದುಕೊಂಡು ಈ ಕಟ್ಟಡವನ್ನು ಕಟ್ಟಲಿಲ್ಲ. ಈಗ ಎರಡನೆ ಪಂಚವಾರ್ಷಿಕ ಯೋಜನೆಯ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ಹೇಳಿದ್ದಾರೆ. ಈ ಪಂಚವಾರ್ಷಿಕ ಯೋಜನೆಯಲ್ಲಿದ್ದ, ಭದ್ರಾ, ನುಗು, ತುಂಗಾ ಮತ್ತು ಇನ್ನೂ ಏನೇನು ಇತರ ಪ್ರಾಜೆಕ್ಟುಗಳಿದ್ದುವೋ ಅವು ನಡೆಯುತ್ತಲೇ ಇದ್ದು ಅವಕ್ಕೆ ನಿಗದಿಯಾದ ಖರ್ಚು ವೆಚ್ಚವಾಗುತ್ತಲೇ ಇದೆ. ಯಾವ ರೀತಿಯಾದ ಅಡಚಣೆಗಳೂ ಆಗಿ ಕೆಲಸ ನಿಂತಿಲ್ಲ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯ ಪ್ರಾಜೆಕ್ಟಿನ ಫಿಗರ್ಸ್‌ನ್ನೂ ತೆಗೆದು ನೋಡಿದರೆ ಈ ವರ್ಕ್ಸ್ ವಿಷಯದಲ್ಲಿ ಸರ್ಕಾರ ಹೇಗೆ ಕೆಲಸಮಾಡಿದೆ, ಹಣ ಹೇಗೆ ಉಪಯೋಗವಾಗಿದೆ ಎನ್ನುವುದು ಗೊತ್ತಾಗುತ್ತದೆ. ಯಾವಾಗಲೂ ಸತ್ಯವನ್ನು ಆಡಬೇಕು. ತಾವು ಪರಿಶೀಲನೆ ಮಾಡುವಾಗ ಮನೆಯಲ್ಲಿ ಕುಳಿತು ಈ ವಿಷಯದಲ್ಲಿ ಏನೂ ಡೆವೆಲಪ್‌ಮೆಂಟು ಆಗಿಲ್ಲ ಎಂದು ಹೇಳತಕ್ಕದ್ದು ಸರಿಯಾದದ್ದಲ್ಲ. ಆ ಸಮಿತಿ ಇದನ್ನೇ ದೊಡ್ಡದು ಮಾಡಿ ಆರೋಪಣೆಯನ್ನು ಮಾಡಿದೆ.

Even today, if you examine the various projects under the First and the Second Five-Year Plans we will find that every project has proceeded according to Plan and the necessary funds are being furnished. ಸ್ವಾಮಿ, ಈಗ ಇನ್ನ ಹೆಚ್ಚಿನ ವಿಷಯಗಳನ್ನು ಈ ಸಭೆಗೆ ಅರಿಕೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಇದೇ ರಿಪೋರ್ಟಿನಲ್ಲಿರುವ ಇತರ ವಿಷಯಗಳನ್ನು ಚರ್ಚಿಸುವುದಕ್ಕೆ ಅವಕಾಶವಿಲ್ಲ. ನ್ಯಾಯವಾಗಿರುವುದನ್ನು ಹೇಳದೆ ಈ ರಿಪೋರ್ಟನ್ನೇ ಹೇಗೆ ದೊಡ್ಡದುಮಾಡಿ ಆರೋಪಿಸಿದ್ದಾರೆಂಬುದನ್ನು ಪ್ರಾಸಂಗಿಕವಾಗಿ ಈ ಸಭೆಯಲ್ಲಿ ನಿಮ್ಮ ಅವಗಾಹನೆಗಾಗಿ ತಂದಿದ್ದೇನೆ. ಈ ವರದಿಯಲ್ಲಿ ಅನೇಕ ಅಧಿಕಾರಿಗಳಮೇಲೆ ಆರೋಪಣೆಗಳಿರುವುದರಿಂದ ಈ ವರದಿಯನ್ನು ಪ್ರಕಟಿಸದೆ ಇದ್ದ ಸಂದರ್ಭದಲ್ಲಿ ನಾನೇ ಹೋಗಿ ಇದನ್ನು ಪ್ರಕಟಿಸಬೇಕೆಂದು ಒತ್ತಾಯ ಮಾಡಿದೆನು. ಶ್ರೀಮಾನ್ ನಿಜಲಿಂಗಪ್ಪ ಅವರನ್ನು ಒಮ್ಮತದಿಂದ ಮುಖ್ಯ ಮಂತ್ರಿಗಳಾಗಿ ಚುನಾವಣೆಯಾಗಲು ನಮ್ಮ ಪಕ್ಷದ ಗುರಿಯಂತೆ ನನ್ನ ಅಳಿಲು ಸೇವೆಯನ್ನು ಮಾಡಿ ನಾನೂ ಸಹಾಯಮಾಡಿದೆ. ಆದರೆ ಮುಖ್ಯ ಮಂತ್ರಿಗಳಾದ ದಿವಸದಿಂದ ನನ್ನೊಂದಿಗೆ ಮಾತನಾಡುವುದಕ್ಕೆ ಕೂಡ ಅವರಿಗೆ ಮನಸ್ಸಿಲ್ಲ. ಅನಂತರ ಒಮ್ಮೆ ಫೋನಿನಲ್ಲಿ ಮಾತನಾಡಿಸಿದರೂ ನನ್ನೊಡನೆ ಮಾತನಾಡಲಿಲ್ಲ. ನಮ್ಮ ಇಂಜಿನಿಯರುಗಳು ಏನು ಸಮಾಧಾನ ಹೇಳುತ್ತಾರೋ ಆ ಸಮಾಧಾನವನ್ನು, ಈ ಆರೋಪಣೆಗಳ ಮಗ್ಗುಲಲ್ಲಿ ಒಂದೊಂದು ಪಬ್ಲಿಷ್‌ಮಾಡುವುದು ಅವಶ್ಯಕ; ಇಂಜಿನಿಯರುಗಳ ಸಮಾಧಾನವನ್ನು ತೆಗೆದುಕೊಂಡು ಅನಂತರ ಅವರು ಮಾಡಿರುವುದು ತಪ್ಪೋ ಸರಿಯೋ ಎಂಬುದನ್ನು ನಿರ್ಧರಿಸಿಕೊಳ್ಳಿ ಎಂದು ಹೇಳಿದೆ. ಅವರಿಗೆ ನನ್ನ ಪ್ರಾರ್ಥನೆಯ ಮೇಲೆ ಕರುಣೆಯುಂಟಾಗಲಿಲ್ಲ. ಹಿಂದೆ ಹೇಳಿದ ಹಾಗೆ, ನಾನು ಯಾರನ್ನೂ ಆಕ್ಷೇಪಣೆ ಮಾಡುವುದಿಲ್ಲ. ಗ್ರಹಗತಿ ಚೆನ್ನಾಗಿಲ್ಲದಿದ್ದರೆ ಹೀಗಾಗುತ್ತದೆ ಎಂದು ಸಮಾಧಾನಪಟ್ಟುಕೊಳ್ಳುತ್ತೇನೆ. ಈ ರೀತಿಯಾಗಿ ಕಷ್ಟಪಟ್ಟು ಕೆಲಸಮಾಡಿದಂಥ ಇಂಜಿನಿಯರುಗಳ ಮೇಲೆ ಆರೋಪಣೆಗಳ ಸುರಿಮಳೆ ಮಾಡಿ ಅವರು ಏನು ಹೇಳುತ್ತಾರೋ ಅದನ್ನು ಪ್ರಕಟಿಸದೆ ಹೋದರೆ ನಿಷ್ಪಕ್ಷಪಾತ ಭಾವನೆಯಾಗುವುದಿಲ್ಲ; ನಿಷ್ಪಕ್ಷಪಾತ ವರ್ತನೆಯಾಗುವುದಿಲ್ಲ.

These members of the Committee have driven out many of these Engineers.

ಇಂಜಿನಿಯರುಗಳು ತಾವು ಇಂಥಿಂಥವರು ಹೋಗಿದ್ದೆವು ಎಂದೂ, explanation ಕೊಡುವುದಕ್ಕೆ ಹೋದರೆ 'ಅದನ್ನು ಬರೆದುಕೊಳ್ಳುವುದಕ್ಕಾಗುವುದಿಲ್ಲ. Say, 'yes or no.' ಎಂದು ಹೇಳಿದರೆಂದೂ ತಿಳಿದು ಬಂದಿದೆ. They have behaved more like overlords than like impartial judges who are interested in ascertaining the truth.

ಈ ಇಂಜಿನಿಯರುಗಳಿಗೆ ಸ್ಟೇಟ್‌ಮೆಂಟ್‌ಗಳನ್ನು ಬರೆದುಕೊಡಿ ಎಂದು ನಾನು ಹೇಳಿದೆ. ಅವರಿಗೆ ಎಷ್ಟು ಭಯವುಂಟಾಗಿದೆ ಎಂದರೆ, ನನ್ನ ಹತ್ತಿರ ಬಂದರೆ ನಮ್ಮ ಮನೆ ಮುಂದೆ C.I.D. ಗಳನ್ನು ಹಾಕಿರುವುದರಿಂದ ಬರುವುದಿಲ್ಲವೆಂದು ಹೇಳುತ್ತಾರೆ. ನನ್ನ ಮನೆಯ ಮುಂದೆ ನಾನು ಎಷ್ಟೋ ಸಲ ಪರೀಕ್ಷೆ ಮಾಡಿದ್ದೇನೆ, ಮನೆಯ ಎದುರುಗಡೆ ಒಂದು compound wall ಇದೆ. ಅಲ್ಲಿ ಪ್ರತಿದಿನವೂ ಒಬ್ಬಿಬ್ಬರು C.I.D. ಗಳು ಇರುತ್ತಾರೆ. ಅವರಿಗೆ ಹಿಂದಿನಿಂದಲೂ ಇದ್ದ ಸ್ವಾಮಿಭಕ್ತಿ ಇದೆ. ನನ್ನನ್ನು ನೋಡಿದ ಕೂಡಲೇ ಎದ್ದು ನಮಸ್ಕಾರ ಮಾಡುತ್ತಾರೆ. ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ ಹೀಗೆ ಮಾಡಿದ್ದಾರೆಂದು ನಾನು ಆರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಇದನ್ನು ಯಾರು ಮಾಡಿದ್ದಾರೆಯೋ ನನಗಾದರೂ ಗೊತ್ತಿಲ್ಲ. ಆದರೆ ಅಲ್ಲಿ ನಡೆಯುತಕ್ಕ ವಿದ್ಯಮಾನಗಳು ಹೀಗಿವೆ. ರಾಜಕೀಯದಲ್ಲಿಯೂ ಅಷ್ಟೆ ನಾನು ಎಲ್ಲಿಗಾದರೂ ಹೋದರೆ ನನ್ನ ಅನೇಕ ಮಾನ್ಯ ಸ್ನೇಹಿತರೇ ಮಾತನಾಡುವುದಕ್ಕೆ ಬರುವುದಿಲ್ಲ. ಅದು ಯಾರ ಏರ್ಪಾಡೋ ಗೊತ್ತಾಗುವುದಿಲ್ಲ. ಬೀದಿಯಲ್ಲಿರುವ ಜನರು, ಕಾಂಗ್ರೆಸ್ಸೇತರರು ಹೂವಿನಹಾರ ಹಾಕುತ್ತಾರೆ. ಆದರೆ ನಮ್ಮವರೇ ಮಾತನಾಡುವುದಿಲ್ಲ. ನಾನು 25 ವರ್ಷಗಳಿಂದಲೂ ಕೈಲಾದ ಸೇವೆಯನ್ನು, ಸೆಂಟ್ರಲ್‌ಜೈಲಿನಿಂದ ಹಿಡಿದು ಅಠಾರಾಕಚೇರಿಯವರೆಗೂ, ಮಾಡಿದ್ದೇನೆ. ಈ ಒಂದು ವಾತಾವರಣ.

ವೇನಿದೆಯೋ ಅದು ವಿಷಮಯ, ಮೋಸಮಯ ವಾತಾವರಣವಾಗಿದೆ. ಹೀಗಾಗಿರುವುದನ್ನು ಹಿಂದೆಂದೂ ನೋಡಿರಲಿಲ್ಲ. ಈ ಒಂದು ವಿಷಮಯ ವಾತಾವರಣದಲ್ಲಿ ಹುಟ್ಟಿದ ಶಿಶು ಈ ವರದಿ. ಈ ವರದಿಯನ್ನು ನಂಬುವುದಕ್ಕಿಂತ ಮೊದಲು, ಒಂದಂಶವನ್ನು ಗಮನಿಸಬೇಕೆಂದು ಈ ಸಭೆಯಲ್ಲಿ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಆಗ ಚೀಫ್ ಇಂಜಿನಿಯರ್ ಆಗಿದ್ದ ಶ್ರೀ ಗಂಗಾಧರ್ ಅವರೂ, ಶ್ರೀ ಅನಂತಾಚಾರ್ ಅವರೂ, ಇದ್ದರು. ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಯಾರಿದ್ದರೋ ಅಸಿಸ್ಟೆಂಟ್ ಇಂಜಿನಿಯರುಗಳು ಯಾರಿದ್ದರೋ ಇವರೆಲ್ಲರೂ ಆರೋಪಣೆಗಳಿಗೆ ಏನು ಸಮಾಧಾನ ಹೇಳುತ್ತಾರೆಯೋ ಅದನ್ನು ಬರವಣಿಗೆಯಲ್ಲಿ ಕೊಡಿ ಎಂದು ಕೇಳಿ. ಈ ವರದಿಯಾದರೂ ಕೂಡ ಈ ಸಭೆಯ ನಿಯಮಗಳ ಪ್ರಕಾರ ರಚಿತವಾದ ಎಸ್ಟಿಮೇಟ್ಸ್ ಕಮಿಟಿಯವರ ವರದಿಯ ಸಲಹೆಗೆ ಅನುಗುಣವಾಗಿರುವುದು. ಆದ್ದರಿಂದ ಈ ಸಭೆಯಲ್ಲಿ ಹೇಳುತ್ತೇನೆ. ಈ ಸಭೆಯವರು ನಿಷ್ಪಕ್ಷಪಾತವಾಗಿ ತೀರ್ಮಾನ ಮಾಡಬೇಕೆಂಬ ಭಾವನೆ ಇರತಕ್ಕವರು. All the technical details I do not know. I am a layman. ಆದುದರಿಂದ ನಾನು ಅದರ ಅಂಶಗಳನ್ನು ಪ್ರಸ್ತಾಪಿಸಿ ಒಂದು ಸಮಾಧಾನದ ಉತ್ತರ ಕೊಡುವುದಕ್ಕೆ ಈ ದಿವಸ ನನಗೆ ಆ ಶಕ್ತಿ ಇಲ್ಲ. ಆ ಕಮಿಟಿಯವರು ಯಾವ ಯಾವುದನ್ನು ಬರೆದುಕೊಳ್ಳುವುದಿಲ್ಲವೆಂದು ನಿರಾಕರಿಸಿದ್ದಾರೋ ಅವೆಲ್ಲವನ್ನೂ ಬರವಣಿಗೆಯಲ್ಲಿ ಕೊಡಿ ಎಂದು ಹೇಳಿ, ಸರ್ಕಾರದವರು ಅದನ್ನು ತೆಗೆದುಕೊಂಡು, ಮುದ್ರಿಸಿ ಈ ಸಭೆಗೆ ಹಂಚಿ ಆಮೇಲೆ ತೀರ್ಮಾನ ಮಾಡಬೇಕು.

ಕೊನೆಯ ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ವರದಿಯಲ್ಲಿ "Military trucks ತೆಗೆದುಕೊಂಡಿದ್ದಾರೆ; ಅದು ಅಕ್ರಮವಾದದ್ದು" ಎಂದು ಬರೆದಿದ್ದಾರೆ. ಇದು ಬಹಳ ದಿವಸಗಳಿಂದ ವಿವಾದದಲ್ಲಿದೆ. ನಮ್ಮ ಪಕ್ಷದ ಅನೇಕ ಮಹನೀಯರು ನಮ್ಮ ಪಕ್ಷದ ದೊಡ್ಡವರಿಗೆ "ಅನ್ಯಾಯಗಳಾಗಿವೆ" ಎಂದು ಬರೆದರು. ಇದಾಗಿ ಎರಡು ವರ್ಷಗಳಾಗಿವೆ. ನಾನು ಹೇಳಿದುದನ್ನೂ ಅವರು ಹೇಳಿದುದನ್ನೂ, ಸರ್ಕಾರದವರು ಹೇಳಿದುದನ್ನೂ ಕೇಳಿ ಎಲ್ಲವನ್ನೂ ಪರಿಶೀಲನೆಮಾಡಿ, ಅವರು "ಈ transaction ಸರ್ಕಾರದ ಹಣವನ್ನುಳಿಸಿದೆ, ದುರ್ವ್ಯಯ ಮಾಡಿಲ್ಲ"ವೆಂದು ಬರೆದಿದ್ದಾರೆ. ಆ ಕಾಗದವನ್ನು ಎಂದಾದರೂ ಒಂದು ದಿವಸ ಪ್ರೊಡ್ಯೂಸ್ ಮಾಡುತ್ತೇನೆ. ಹೀಗೆ ಇಂಥ ಒಂದು transaction ಬಗ್ಗೆ ಒಬ್ಬ ದೊಡ್ಡ ವ್ಯಕ್ತಿ, ಇಂಡಿಯಾ ದೇಶಕ್ಕೆಲ್ಲ ಗೊತ್ತಿರತಕ್ಕ ವ್ಯಕ್ತಿ, ರಿಕಾರ್ಡುಗಳನ್ನು ನೋಡಿ ಈ transaction ಸರ್ಕಾರದ ದುಡ್ಡು ಉಳಿಸಿದೆ ಎಂದು ಬರೆದಿದ್ದಾರೆ. ಅವರ ವಿಷಯದಲ್ಲಿ ಕೂಡ ಆರೋಪಣೆ ಮಾಡಿದ್ದಾರೆ. ಅದನ್ನು ನೋಡಿದರೆ ಅವರ ಮನಸ್ಸಿನ ಮಟ್ಟ ಎಲ್ಲಿಗೆ ಇಳಿದಿದೆ ಎಂದು ಕಾಣುತ್ತದೆ. ಇಷ್ಟು ಹೇಳಿದ್ದೇನೆ. ಇನ್ನು ಸಮಯ ಸಂದರ್ಭ ಬಂದಾಗ ಉಳಿದ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

The terms of reference to the Committee are :—

(i) to examine the state of accounts and to assess the present position ;

(ii) to scrutinise the expenditure on the building, having due regard to its nature, magnitude and purpose, and to examine the procedure adopted in fixing rates and executing works ; and

(iii) to examine the possibility of effecting economies in further expenditure on the work.

There everybody will see except two chapters of this Report, the rest of the Report goes outside the field of the terms of reference.

ಈ ವಿಧಾನ ಸೌಧವನ್ನು ಕಟ್ಟಿದ್ದನ್ನು ಕುರಿತು ಈ ಒಂದು ವಾರದಲ್ಲಿ ನನಗೆ ಸ್ನೇಹಿತರುಗಳಿಂದ ಸುಮಾರು 500 ಕಾಗದಗಳು ಬಂದಿವೆ. ಮತ್ತು ಹಿಂದೆ 800 ಕಾಗದಗಳು ಈ ಕೆಲಸವನ್ನು ಪ್ರಶಂಸೆಮಾಡಿ ಬಂದಿವೆ. ಅಮೇರಿಕದಿಂದ ಒಬ್ಬ ಮಿತ್ರರು ಸ್ವಯಂಪ್ರೇರಿತರಾಗಿ ಕಾಗದ ಬರೆದಿರುತ್ತಾರೆ. ಅದರಲ್ಲಿ ವಿಧಾನಸೌಧ ಕಟ್ಟಿರುವ ಜಾಗವೇ ಲಕ್ಷಣವಾಗಿದೆ ಎಂದು ಬರೆದಿರುತ್ತಾರೆ. ಈ ಮೂರು ಮಂದಿ ಸಮಿತಿಯ ಸದಸ್ಯರು "ಇದು ಚೆನ್ನಾಗಿಲ್ಲ, ಇದನ್ನು ಕಟ್ಟಬಾರದಾಗಿತ್ತು" ಎಂದರೆ ನನಗಾದರೂ ಒಂದುಸಲ ದಿಗ್ಭ್ರಮೆಯಾಗುತ್ತದೆ. ಇವರು ಏಕೆ ಇಷ್ಟುಮಂದಿ ಚೆನ್ನಾಗಿಲ್ಲವೆಂದು ತೆಗಳುತ್ತಾರೆ ಎಂದೆನ್ನಿಸುತ್ತದೆ. "ದೇವರೇ ಅನ್ಯಾಯವೋ ಸುನ್ಯಾಯವೋ ನಿನ್ನ್ಯಾಯವನು ನೀನೇ ಬಲ್ಲೆ" ಎಂದು ಕನಕದಾಸರು ಏನು ಹೇಳಿದ್ದಾರೆಯೋ ಅದನ್ನೇ ನಾನೂ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House now rises and will meet tomorrow at 8-30 A.M.

The House adjourned at Twenty Minutes past Five of the Clock to meet again at Thirty Minutes past Eight of the Clock on Saturday, the 23rd March, 1957.

V. 31 NS7

WD 2286—GPB—900—24-5-57 NS7-2-4-8
(B) 4733

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No.(B)........4732
ದಿನಾಂಕ Date..........................

4733
Karnataka State Archives
(Departmental Library)
ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರತಿ ಕ್ರಮಾಂಕ Accession No. (B)
ದಿನಾಂಕ Date........

MYSORE LEGISLATIVE ASSEMBLY

FIFTH DAY.

Saturday, 23rd March 1957

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS

Recommendation for opening Dispensaries in Kanakapura and Channapatna Taluks.

Q.—206. Sri S. KARIYAPPA (Virupakshapura).—

Will the Government be pleased to state :—

(*a*) whether they have received recommendations for opening dispensaries at Kolliganahalli and Hunasanahalli in Kanakapura Taluk and Kodambally and Sogal in Channapatna Taluk ;

(*b*) whether they propose to make provision in the next budget for opening dispensaries in these places ?

A.—Sri A. B. SHETTY (Minister for Public Health).—

(*a*) Yes, only in respect of Kodambally and Sogal in Channapatna Taluk.

(*b*) No.

ಶ್ರೀ ಎಸ್. ಕರಿಯಪ್ಪ.—ಈ ಕೋಡಂಬಳ್ಳಿ ಗ್ರಾಮದಲ್ಲಿ ಲೋಕಲ್ ಫಂಡಿನಿಂದ ಒಂದು ಡಿಸ್ಪೆನ್‌ಸರಿಯನ್ನು ಏರ್ಪಡಿಸುವುದಕ್ಕೆ ಶಿಫಾರಸುಗಳು ಏನಾದರೂ ಬಂದಿವೆಯೇ ?

ಶ್ರೀ ಎ. ಬಿ. ಶೆಟ್ಟಿ.—ಕೋಡಂಬಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿಯ ಜನರ ಬೇಡಿಕೆಯು ಬಂದಿರುವದು. ಒಂದು ಗ್ರಾಮಕ್ಕೆ ಮಾತ್ರ ಸಲಹೆ ಕೊಟ್ಟಿಲ್ಲ. ಮಾನ್ಯ ಸದಸ್ಯರು ಸಾತನೂರು ಗ್ರಾಮದಲ್ಲಿ ಡಿಸ್ಪೆನ್‌ಸರಿ ಪ್ರಾರಂಭ ಮಾಡಬೇಕೆಂದು ಹೇಳಿದರು. ಆದುದರಿಂದ 19ನೇ ಜನವರಿ 1956 ರಿಂದ ಸಾತನೂರು ಗ್ರಾಮದಲ್ಲಿ ಒಂದು ಡಿಸ್ಪೆನ್‌ಸರಿಯು ಪ್ರಾರಂಭವಾಗಿದೆ.

ಶ್ರೀ ಎಸ್. ಕರಿಯಪ್ಪ.—ಕೋಡಂಬಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿ ಡಿಸ್ಪೆನ್‌ಸರಿಯು ಅವಶ್ಯಕವಾಗಿದೆ ಅಥವಾ ಇಲ್ಲ ಎಂಬುದು ಕಂಡು ಬಂದಿದೆಯೇ ?

ಶ್ರೀ ಎ. ಬಿ. ಶೆಟ್ಟಿ.—ಕೋಡಂಬಳ್ಳಿಯಲ್ಲಿ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದೇ ಸ್ಥಳದಲ್ಲಿ ಅಂದರೆ ಕೋಡಂಬಳ್ಳಿ ಗ್ರಾಮದಲ್ಲಿ ಡಿಸ್ಪೆನ್‌ಸರಿಯು ಇರಬೇಕಾದುದು ಆವಶ್ಯಕವಲ್ಲವೇ ?

ಶ್ರೀ ಎ. ಬಿ. ಶೆಟ್ಟಿ.—ಆ ಊರಿನಲ್ಲಿಯ ಜನರು ವಂತಿಕೆಯನ್ನು ಕೊಟ್ಟಿಲ್ಲ.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಲೋಕಲ್ ಫಂಡಿನಿಂದ ನಡೆಯತಕ್ಕಂಥ ಡಿಸ್ಪೆನ್‌ಸರಿಗಳು ಎಷ್ಟು ಇವೆ ?

Mr. SPEAKER.—It is outside the scope of the qnestion.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣದಂಥ ದೊಡ್ಡ ತಾಲ್ಲೂಕಿಗೆ ಒಂದೇ ಡಿಸ್ಪೆನ್‌ಸರಿಯು ಆಗುವದಿಲ್ಲವೇ ?

Sri A. B. SHETTY.—Notice please.

ಶ್ರೀ ಎಸ್. ಕರಿಯಪ್ಪ.—ಚನ್ನಪಟ್ಟಣವು ದೊಡ್ಡ ತಾಲ್ಲೂಕ ಆಗಿರುವದರಿಂದ ಒಂದು ಡಿಸ್ಪೆನ್‌ಸರಿಯು ಇರತಕ್ಕದ್ದು ಅವಶ್ಯಕ. ಆದುದರಿಂದ ಒಂದು ಡಿಸ್ಪೆನ್‌ಸರಿಯನ್ನು ಮಂಜೂರು ಮಾಡುವಿರಾ ?

ಅಧ್ಯಕ್ಷರು.—ವಂತಿಕೆಯನ್ನು ಕೊಟ್ಟಿಲ್ಲ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಈಗ ವಂತಿಕೆಯನ್ನು ಕೊಡುತ್ತೇವೆಂದು ಜನರು ಬರೆದು ಕೊಟ್ಟಿದ್ದಾರೆ.

ಶ್ರೀ ಎ. ಬಿ. ಶೆಟ್ಟಿ.—ಮಾನ್ಯ ಸದಸ್ಯರು ಸ್ವತಃ ಸಾತನೂರಿನಲ್ಲಿ ಒಂದು ಡಿಸ್ಪೆನ್‌ಸರಿ ಪ್ರಾರಂಭ ಮಾಡಿದರೆ ಸಾಕು ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಅಲ್ಲಿಯ ಜನರು ಈಗ ನಾವು ದುಡ್ಡು ಕೊಡುತ್ತೇವೆ ಡಿಸ್ಪೆನ್‌ಸರಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಸಾತನೂರು ಇದು ಕನಕಾಪುರ ತಾಲ್ಲೂಕಿನಲ್ಲಿ ಇದೆ. ಆದರೆ ಕೋಡಂಬಳ್ಳಿಯು ಚನ್ನಪಟ್ಟಣ ತಾಲ್ಲೂಕಿನಲ್ಲಿ ಇರುವುದರಿಂದ ಕೇಳುತ್ತೇವೆ. ಹಣ ಕೊಡಲು ತಯಾರಿದ್ದಾರೆ.

ಅಧ್ಯಕ್ಷರು.—ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆಯೆ ?

ಶ್ರೀ ಎಸ್. ಕರಿಯಪ್ಪ.—ಗ್ರಾಮಸ್ಥರು ಬರೆದು ಕೊಟ್ಟಿದ್ದಾರೆ. ದೊಡ್ಡ ಗ್ರಾಮಕ್ಕೆ ಡಿಸ್ಪೆನ್‌ಸರಿ ಕೊಡುವದು ನ್ಯಾಯವಾಗುವುದಿಲ್ಲವೇ ?

ಶ್ರೀ ಎ. ಬಿ. ಶೆಟ್ಟಿ.—ವಂತಿಕೆ ಕೊಟ್ಟಿದ್ದರೆ ಇದರ ಸಂಬಂಧವಾಗಿ ವಿಚಾರ ಮಾಡಬಹುದು ?

Combined Dispensary to Hiriyur.

Q.—226. Sri V. MASIYAPPA (Hiriyur).—

Will the Government be pleased to state.—

the reason for not sanctioning the Combined Dispensary to Hiriyurt hough the necessary contributions have been given by the Municipality ?

A.—Sri A. B. SHETTY (Minister for Public Health).—

Sanction has been accorded in Government Order No. M. 14866-68—P.H. 19-56-41, dated 11th December 1956, for the opening of a Combined Dispensary at Hiriyur (copy appended)

PROCEEDINGS OF THE GOVERNMENT OF MYSORE.

READ—

Correspondence ending with letter No. Ac. 3-7-82—56-7, dated 20th October 1956, from the Director of Public Health, stating that an amount of Rs. 47,101 is available for the construction of a Combined Dispensary building at Hiriyur that the Executive Engineer, Chitaldrug, has prepared an estimate for Rs. 69,000 for the construction of a Combined Dispensary building at Hiriyur, that the Local bodies have agreed to meet their share of recurring and initial cost in equal proportion and requesting sanction (i) for starting of a Combined Dispensary at Hiriyur as per the statement of cost furnished, meeting the Government share of cost in this respect out of the sanctioned grants of the Public Health Department, (ii) for the construction of a Combined Dispensary building at Hiriyur at an estimated cost of Rs. 69,000 meeting the expenditure as indicated below, and (iii) for according sanction to the estimate.

		Rs.
Amount available with the Town Municipal Council, Hiriyur.	...	47,101
Government Grant ...	...	21,899
Total	...	69,000

ORDER NO. M. 14866-68—P.H. 19-56-41, DATED BANGALORE, THE 11TH DECEMBER 1956.

Administrative sanction is accorded for the construction of a Combined Dispensary building at Hiriyur at an estimated cost of Rs. 69,000 for meeting the expenditure as indicated below, the Government share of expenditure being met out of the lumpsum provision of Rs. 3,00,000 provided during the current year under "81. Capital Account of Civil Works outside the Revenue Account Original Works—Buildings—Lumpsum provision for construction of Public Health Buildings".

		Rs.
Amount available with the Town Municipal Council, Hiriyur. (Amount realised by sale of sites).	...	47,101
Government Grant ...	...	21,899
Total	...	69,000

Sanction is also accorded for the opening of a Combined Dispensary at Hiriyur as per the statement of cost appended to this order, meeting the Government

share of cost out of the sanctioned grants of the Public Health Department. Administrative sanction is also accorded to the estimate.

S. A. L. RAZVI,
Secretary to Government,
Local Self-Government and Public Health
Departments.

To—The Director of Public Health in Mysore, Bangalore, with the statement of cost, plan and estimate.

The Accountant-General, Mysore, Bangalore, through the Finance Department with the statement of cost.

The Deputy Commissioner, Chitaldrug District, Chitaldrug.

Copy to the Local Board and Municipal Branch.

Sri Y. MASIYAPPA.—I have no supplementaries.

Estimate for Constructing a Primary School building at Gannaikanahally in Hiriyur Taluk.

Q.—217. Sri V. MASIYAPPA (Hiriyur).—

Will the Government be pleased to state :—

(*a*) whether an estimate for Rs. 12,000 for constructing a Primary School building at Gannaikanahally was sanctioned ;

(*b*) if so, whether the work has been taken up ;

(*c*) the stage at which the work is pending ?

A.—Sri Kadidal MANJAPPA (Minister for Educeation).—

(*a*) Yes.

(*b*) No.

(*c*) The villagers are not prepared to make any contribution towards the construction of the school building and the question of waiving the condition of payment by villagers is under consideration.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಈ ಕಟ್ಟಡದ ಎಸ್ಟಿಮೇಟು ಮಂಜೂರು ಮಾಡಿದ್ದು ಯಾವಾಗ ?

Sri Kadidal MANJAPPA.—17th December 1955 subject to the condition that the villagers may be made to pay their usual contribution.

ಶ್ರೀ ವಿ. ಮಸಿಯಪ್ಪ.—ಗ್ರಾಮಸ್ಥರು ಚಂದಾ ಕೊಡಬೇಕೆಂಬ ಪ್ರಶ್ನೆ ಇರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಇತ್ತು.

ಶ್ರೀ ವಿ. ಮಸಿಯಪ್ಪ.—ಗ್ರಾಮಸ್ಥರು ಯಾವುದಕ್ಕೂ ಒಪ್ಪಿಗೆ ಕೊಟ್ಟಿರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದ್ದರು. ಅಂತೆ ಮಂಜೂರ ಮಾಡಿತು.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಈ ಊರಿಗೆ ಮಹಾರಾಜರವರು ಬಂದಾಗ ಕಟ್ಟಡ ಮಂಜೂರು ಮಾಡುತ್ತೇವೆಂದು ಭರವಸೆ ಕೊಟ್ಟದ್ದು ಸರಕಾರದ ಗಮನಕ್ಕೆ ಬಂದಿದೆಯೇ ?

Sri Kadidal MANJAPPA.—I want notice Sir.

ಶ್ರೀ ವಿ. ಮಸಿಯಪ್ಪ.—ಈ ಊರಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಜಾಸ್ತಿಯಾಗಿರುವುದರಿಂದ ಕಟ್ಟಡವಿಲ್ಲದೆ ಶಾಲೆ ನಡೆಸುವುದಕ್ಕೆ ತೊಂದರೆಯಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು. ಮಾನ್ಯ ಸದಸ್ಯರು ಎರಡುಸಾರೆ ನನ್ನಲ್ಲಿಗೆ ಬಂದು, ಕೆಲಸವನ್ನು ಮಂಜೂರುಮಾಡಿಕೊಡಬೇಕೆಂದು ಹೇಳಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಪ್ರಯಮರಿ ಸ್ಕೂಲ್ ಕಟ್ಟಡ ಕಟ್ಟಿಸಲು ಸಬ್‌ಸಿಡಿ ಕೊಡುವಬಗ್ಗೆ ಯಾವ ನೀತಿಯನ್ನು ಸರಕಾರದವರು ಇಟ್ಟುಕೊಂಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ರೂಪಿಗೆ 2,250 ರೂಪಾಯಿ ಕೊಡಬೇಕಾಗುವದು. ಗ್ರಾಮಸ್ಥರು ಕೊಡಬೇಕಾದ ಹಣದ ಕಂಡಿಶನ್ ಬಗ್ಗೆ insist ಮಾಡುತ್ತೇವೆ.

ಶ್ರೀ ವಿ. ಮಸಿಯಪ್ಪ.—ಈ ಕಟ್ಟಡ ಆಗುವ ಬಗ್ಗೆ ವಾಗ್ದಾನಮಾಡಲಾಗಿದೆ. ಜಾಗ್ರತೆ ಕಟ್ಟಡ ಮಾಡಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡಬೇಕು.

Sri V. T. MAGADI.—May I know, Sir, under what circumstances the question of waiving payment arises ;

(SRI V. T. MAGADI). whether it is being done generally or in certain cases and if so, under what circumstance?

Sri Kadidal MANJAPPA.—They are not waiving generally? The Hon'ble Member tells me now that it was a promise made when His Highness the Governor went there when he was the Maharaja at that time.

Sri P. C. UTTAYA.—Is part contribution from the villagers a condition precedent in all cases?

Sri Kadidal MANJAPPA.—Yes.

Sri P. C. UTTAYA.—In the case of villages where the villagers are very poor, will not the Government bear the whole burden, Sir?

Sri Kadidal MANJAPPA.—Under the new circumstances that have arisen on account of the formation of the New State, the whole question is under re-examination.

Sri P. G. SIDHANTI.—What is the amount of contribution by the villagers?

Sri Kadidal MANJAPPA.—Roughly about Rs. 250 to Rs. 300 and Government pays at the rate of Rs. 750 per room.

Sri A. V. NARASIMHA REDDY.—What is the ratio fixed, Sir?

Sri Kadidal MANJAPPA.—There is a type design and they will have to construct the building in accordance with the design and plan given by the Public Works Department.

Sri A. V. NARASIMHA REDDY.—What is the estimated cost of the room?

Sri Kadidal MANJAPPA.—If the villagers themselves undertake the construction of the building, the cost may come to nearly Rs. 1000.

Sri V. T. MAGADI.—What is the cost in the Bombay area, Sir?

Sri Kadidal MANJAPPA.—I do not remember. It may be about Rs. 3,000.

Dr. R. NAGAN GOWDA.—What is the size of the room you are thinking of, Sir?

Sri Kadidal MANJAPPA.—We have got a design. I do not remember the dimension.

Dr. R. NAGAN GOWDA.—Is it about 20 x 60?

Sri Kadidal MANJAPPA.—I do not remember.

Sri V. T. MAGADI.—Is it sufficient to accommodate 40 boys at least?

Sri Kadidal MANJAPPA.—It is sufficient to hold a primary school consisting of a single teacher.

Sri V. T. MAGADI.—Whether it can accommodate 40 boys or girls?

Sri Kadidal MANJAPPA.—If they are over-crowded, even 50 can be accommodated. Ordinarily, 25 to 30 boys can be conveniently accommodated.

Sri V. T. MAGADI.—Is one teacher given for only 25 boys?

Sri Kadidal MANJAPPA.—No, it is about 40 boys.

ಶ್ರೀ ಬಿ. ಹುಚ್ಚೇಗೌಡ.—ಈ ಬಿಲ್ಡಿಂಗ್ ಡಿಸೈನನ್ನು ಕಟ್ಟುವಾಗ ಪಿ. ಡಬ್ಲ್ಯು. ಇಲಾಖೆಯವರು ಅದು ಸರಿಯಾಗಿಲ್ಲ ತೇಗದ ಮರವನ್ನೇ ಹಾಕಬೇಕು, ಹಾಗಿಲ್ಲದಿದ್ದರೆ ಈ ಗ್ರಾಂಟನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದರಿಂದ ಇದರ ಖರ್ಚು ಸಾವಿರ ರೂಪಾಯಿಗಳಿಗೆ ಮೇಲೆ ಆಗುವುದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ವಿಧಾಯುಕ್ತವಾದ ರೀತಿಯಲ್ಲಿ ಪಿ. ಡಬ್ಲ್ಯು. ಇಲಾಖೆಯವರು ನಿಗದಿ ಮಾಡಿರತಕ್ಕ ಡಿಸೈನುಗಳಂತೆ ಅಂತಹ ಮೆಟೀರಿಯಲ್ಸ್‌ಗಳನ್ನು ಹಾಕಬೇಕು.

ಶ್ರೀ ಬಿ. ಹುಚ್ಚೇಗೌಡ.—ಮೆಟೀರಿಯಲ್ಸ್‌ಗಳಿಗೆ ಸಾವಿರಾರು ರೂಪಾಯಿಗಳ ಮೇಲೆ ಆಗುತ್ತದಲ್ಲಾ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಸಾವಿರ ರೂಪಾಯಿ ಎಂದು ಏನೂ ಹೇಳಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಒಂದು ಅಥವಾ ಒಂದುವರೆ ಸಾವಿರ ರೂಪಾಯಿಗಳಷ್ಟು ಹಾಕಬೇಕೆನ್ನುತ್ತೀರಾ?

ಅಧ್ಯಕ್ಷರು.—ಇಂತಹ ಪ್ರಶ್ನೆಗಳಿಗೆ ಅವಕಾಶ ಕೊಡಲು ನಾನು ಇಷ್ಟಪಡುವುದಿಲ್ಲ. ಏನೋ ಮುಂಬಯಿ ಕಡೆಯಿಂದ ಬಂದವರಿಗೆ ಇಲ್ಲಿಯ ರೂಲ್ಸ್‌ಗಳೇನು ಎಂಬುದು ಸರಿಯಾಗಿ ತಿಳಿಯದಿರುವುದರಿಂದ ನಾನು ಈಗ ಈ ರೀತಿಯ ಪ್ರಶ್ನೆಗಳಿಗೆ ಅವಕಾಶ ಕೊಟ್ಟೆ. ಆದರೆ ಈ ರೀತಿಯಾಗಿ ವಿವರಗಳನ್ನು ಪ್ರತಿಯೊಬ್ಬರೂ ಕೇಳುವುದಕ್ಕೆ ಆರಂಭಮಾಡಿದರೆ ಹೇಗೆ? ಬೊಂಬಾಯಿ ಕಡೆ ಒಂದು ಸ್ಕೂಲು ಕಟ್ಟಡಕ್ಕೆ ಸುಮಾರು ಮೂರು ಸಾವಿರ ರೂಪಾಯಿಗಳು ಬೇಕಾಗುತ್ತವೆ. ಇಲ್ಲಿಹೇಗಿದೆ ಎಂದು ಕೇಳಿಕೊಳ್ಳುವ ಸಲುವಾಗಿ ಈ ಪ್ರಶ್ನೆಗಳಿಗೆ ಅವಕಾಶ ಕೊಟ್ಟೆ. ತಮ್ಮಂತಹ ಹಳಬರೂ ಕೂಡ, ಇಲ್ಲಿಯವರೇ ಆಗಿ, ಹೀಗೆ ಪ್ರಶ್ನೆಗಳನ್ನು ಮತ್ತು ವಿವರಗಳನ್ನು ಕೇಳಿದರೆ ಹೇಗೆ?

ಶ್ರೀ ಬಿ. ಹುಚ್ಚೇಗೌಡ.—ಹಾಗಿಲ್ಲ ಸ್ವಾಮಿ, ಒಂದು ಕಟ್ಟಡಕ್ಕೆ 3,000 ದಿಂದ 7,500 ರೂಪಾಯಿಗಳಂತೆ ಈ ಬಿಲ್ಡಿಂಗುಗಳನ್ನು ಕಟ್ಟಲಾಗುತ್ತಿದೆ. ಈ ರೀತಿ ಹೆಚ್ಚು ಖರ್ಚು ಮಾಡಲು ಇದಕ್ಕೆ ಅಷ್ಟೇ ಆಗುತ್ತದೆಯೇ?

ಅಧ್ಯಕ್ಷರು.—ಈ ಬಗ್ಗೆ ಬೇಕಾದರ ತಾವೇ ಬೇರೆ ಒಂದು ಪ್ರಶ್ನೆಯನ್ನು ಕೇಳಬಹುದು.

ಶ್ರೀ ವಿ. ಟಿ. ಮಾಗಡಿ.—ಒಂದು ಒಂದೂವರೆ ಸಾವಿರದಲ್ಲಿ ಕಟ್ಟಿದ ಬಿಲ್ಡಿಂಗ್‌ನ ಲೈಫ್ ಎಷ್ಟು ಆಗುತ್ತದೆ? . . . .

ಅಧ್ಯಕ್ಷರು.—ಈ ಪ್ರಶ್ನೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಅದೂ ಕೂಡ ಏನೋ ಮುಂಬಯಿನವರಿಗೆ ಸ್ವಲ್ಪ ವಿಷಯ ತಿಳಿಯಲಿ ಎಂದು ಹೇಳಿದರೆ, ಈರೀತಿ ಇನ್ನೂ ಪ್ರಶ್ನೆ ಕೇಳಿದರೆ ಹೇಗೆ ?

ಶ್ರೀ ಎನ್. ಬಿ. ಪೂಜಾರ್.—ಈ ಶಾಲಾ ಕಟ್ಟಡಗಳಿಗೆ ಪಿ. ಡಬ್ಲ್ಯು. ಇಲಾಖೆಯವರು ಟೈಪ್ ಡಿಸೈನುಗಳನ್ನು ತಯಾರು ಮಾಡಿಟ್ಟಿದ್ದಾರೆಯೇ ? ಹಾಗಿದ್ದರೆ ಅದರ ವೆಚ್ಚವೇನಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು 750 ರೂಪಾಯಿಗಳನ್ನು ಕೊಡುತ್ತಾರೆ. ಗ್ರಾಮಸ್ಥರು ಅವರ ಕಾಂಟ್ರಿಬ್ಯೂಷನ್ ಕೊಡಬೇಕು. ಅವರೇ ಕನ್‌ಸ್ಟ್ರಕ್ಷನ ಕೆಲಸ ತೆಗೆದುಕೊಂಡರೆ 1,000 ರೂಪಾಯಿಗಳಿಂದ, 1,300 ಅಥವಾ 1,500 ರೂಪಾಯಿಗಳವರೆಗೆ ಹೋಗುತ್ತದೆ. ಅವರ ಷೇರು ಏನಿದೆ ಅದನ್ನು ಗ್ರಾಮಸ್ಥರು ಕೊಟ್ಟರೆ ಟೈಪು ಡಿಸೈನು ಪ್ರಕಾರ ಕಟ್ಟಡ ಕಟ್ಟುತ್ತಾರೆ.

ಶ್ರೀ ಎನ್. ಬಿ. ಪೂಜಾರ್.—ಸರ್ಕಾರದ ಕಾಂಟ್ರಿಬ್ಯೂಷನ್ ಏನು ಎಂಬಲ್ಲ, ಟೈಪ್ ಡಿಸೈನಿನ ಕೂಲಿ ವೆಚ್ಚ ಏನು ಎಂದು ಕೇಳಿದೆ.

Mr. SPEAKER.—That is too general a question. So that is outside the scope of the question.

ಶ್ರೀ ಕಡಿದಾಳ್ ಮಂಜಪ್ಪ.—ಟೈಪು, ಡಿಸೈನು, ಕಾಂಟ್ರಿಬ್ಯೂಷನು ಇವೆಲ್ಲ ವಿಧಾಯಕವಾದ ರೀತಿಯಲ್ಲಿ ಹಾಕಿ ಪಿ ಡಬ್ಲ್ಯು. ಇಲಾಖೆಯವರು ಒಪ್ಪಿದ ನಂತರ, ಗ್ರಾಮಸ್ಥರು ಬೇಕಾದರೆ ತಾವೇ ಕಲ್ಲು ಕೂಲಿ ಕೆಲಸ, ಇವೆಲ್ಲ ಮಾಡಿ ಕೊಟ್ಟರೆ ವೆಚ್ಚ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ವೆಚ್ಚ ಜಾಸ್ತಿಯಾಗುತ್ತದೆ.

Sri K. MALLAPPA.—Does Government know that the type design prepared by Government to accommodate 40 students will cost Rs. 2,700 per room ?

Sri Kadidal MANJAPPA.—I take note of that information.

ಶ್ರೀ ಎ. ಆರ್. ಪಂಚಗವಿ.—ಈ ಯೋಜನೆಯನ್ನು ದೇಶದ ಎಲ್ಲ ಭಾಗಗಳಿಗೂ ತರುವ ವಿಚಾರ ನಡೆದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—750 ರೂಪಾಯಿಗಳ ಗ್ರಾಂಟನ್ನು ಇಷ್ಟು.

Mr. SPEAKER.—That is too general a question. That is outside the scope of the question.

ಈ ಬಗ್ಗೆ ಗವರ್ನ್ಮೆಂಟಿನವರನ್ನು ನಾನು ಕೇಳಿಕೊಳ್ಳುವುದೇನೆಂದರೆ, ಇಂತಹ ವಿಷಯಗಳನ್ನೆಲ್ಲಾ ಸದಸ್ಯರಿಗನುಕೂಲವಾಗುವಂತೆ ಒದಗಿಸಬೇಕು.

That may be placed on the Table of the House; because I find that there are different schemes in different areas. Naturally. members are interested in having a common scheme.

Relief provided for the loss of crops in Raichur, Gulbarga and Bidar Districts.

Q.—199. Sri L. K. SHROFF (Raichur).—

Will the Government be pleased to state :—

(a) whether it is not a fact that due to heavy rains the mungari crops in the Districts of Raichur, Gulbarga and Bidar have failed ;

(b) the steps that have been taken or are being contemplated to be taken to provide relief to the distress ryots ?

A.—Sri M. P. PATIL (Minister for Revenue).—

(a) Yield of Kharif crops in these districts is low this year.

(b) Government have postponed Kharif khist till the harvesting of Rabi crop in 1957. Relief works have been started and a sum of Rs. 75,000 for the whole Division has been sanctioned. Besides this, Agricultural Taccavi to the extent of Rs. 50,000 has been sanctioned for Gulbarga Division. These amounts have been distributed among the three districts of Raichur, Bidar and Gulbarga. Government have also sanctioned the opening of fair price depots in all the three districts.

ಶ್ರೀ ಎಲ್. ಕೆ. ಷರಾಫ್.—ಈ ಪ್ರಶ್ನೆಗೆ ಉತ್ತರವನ್ನು ಮಂತ್ರಿಗಳು ಎಲ್ಲಿಂದ ಯಾವಾಗ ತರಿಸಿಕೊಂಡರು ಅದನ್ನು ತಿಳಿಸುತ್ತಾರೆಯೇ ?

Sri M. P. PATIL.— The letter from the Commissioner is dated 18th February 1957.

ಶ್ರೀ ಎಲ್. ಕೆ. ಷರಾಫ್.—ಮಾನ್ಯ ಮಂತ್ರಿಗಳಿಗೆ ನೆನಪಿದೆ. ಡಿಸೆಂಬರ್ ಕೊನೆಯ ಭಾಗದಲ್ಲಿ ರಾಯಚೂರು ಡಿಸ್ಟ್ರಿಕ್ಟಿನಲ್ಲಿ ಹೆಚ್ಚಿನ ಮಳೆಬಿದ್ದು ಖಿಸ್ತನ್ನು ವಸೂಲು ಮಾಡಕೂಡದೆಂದು ಆರ್ಡರಾಗಿದ್ದರೂ ಕೂಡ ಅಲ್ಲಿಯ ಕಲೆಕ್ಟರು ಮತ್ತು ಅಧಿಕಾರಿಗಳು ವಸೂಲಿಯನ್ನು ಜನವರಿ ನಾಲ್ಕು ಮತ್ತು ಐದನೇ ತಾರೀಖಿನೊಳಗೇನೆ ಮುಗಿಸಿದ್ದಾರಲ್ಲವೇ ?

Sri M. P. PATIL.—The demand made at that time was to postpone the collection of takavi dues and other dues and not land revenue, as a major portion of the land revenue was already collected. Accordingly, I issued orders to postpone the recovery of takavi dues until the end of March.

Sri L. K. SHROFF.—Is it not a fact that the Collector had made a request to clarify the order and state whether the current collection of land revenue also was to be postponed?

Sri M. P. PATIL.—Not to my knowledge.

Sri L. K. SHROFF.—Is it not a fact that when the Hon'ble Minister visited Gangavati on the 7th January the members of the Assembly from Raichur District had clearly stated to him that because of some confusion arising out of the instructions given, the Collector had asked for clarification, but in the meanwhile, the collections had been made and, therefore, there was no necessity of continuing the order issued before?

Sri M. P. PATIL.—I made that point clear at that time. The M.L.A.s and the workers discussed this matter with me and represented to me that, as a major portion of the land revenue had already been collected, no purpose would be served by postponing the collection of land revenue, but the collection of takavi dues should be suspended. Accordingly, I issued orders immediately to suspend the collection of takavi dues.

Sri L. K. SHROFF.—Is the Hon'ble Minister satisfied that the amount sanctioned for agricultural takavi is sufficient?

Mr. SPEAKER.—There is no question of the Minister being satisfied. The Hon'ble Member may ask whether the amount sanctioned is adequate or not.

Sri L. K. SHROFF.—When the whole district of Raichur was affected by heavy rains, is it the opinion of the Government. . . . . .

Mr. SPEAKER.—No opinion can be asked. The Hon'ble Member may put a question in proper form.

Sri L. K. SHROFF.—Is the amount sanctioned as agricultural Takavi sufficient to meet the requirements of the situation?

Sri M. P. PATIL.—Sir, when the amount was sanctioned, no estimate could be made. But, I have issued instructions to the officers and they have told the fact to the M.L.A.s and the workers that this amount would be sufficient in the beginning; if more amounts are necessary in future, the officers should make recommendations to the Government and Government is prepared to sanction more amounts.

Sri L. K. SHROFF.—Because of the heavy rains, the Rabi crop has also failed in many parts of the district. Is Government considering taking steps to suspend collection of land revenue and to start relief works?

Mr. SPEAKER.—When questions are asked, they should be definite. Assumption should not be made. If it is the intention of the Hon'ble Member to say that Ragi crops have failed, he can ask a question "Is it not a fact that the Rabi crops in Raichur district have failed?" Otherwise, it does not appear to be a question; it appears as if it is an argument.

Sri L. K. SHROFF.—Will the Government be pleased to state whether Rabi crops also have failed in many parts of the district?

Sri M. P. PATIL.—Sir, I have learnt from the non-official sources that Rabi crops have failed to some extent in some parts. But, I have not received official reports to that effect. I have called for the report. This question is under the active consideration of the Government.

Dr. R. NAGAN GOWDA.—Since the harvest of the Rabi crop is almost over, is it not late now to suspend the collection?

Sri M. P. PATIL.—Sir, land assessment for the Rabi crop is recovered from April. Therefore, the question whether the harvests are over or not does not arise. Government is actively considering whether recoveries should be made or not and orders would be issued well in time.

Act for the Abolition of Religious Inams (Implementation).

Q.—218. Sri V. MASIYAPPA (Hiriyur).—(4-12-1956)

Will the Government be pleased to state:—

(*a*) when the Act for the Abolition of Religious Inams was passed;

(*b*) whether it has been given effect to; if not why;

(*c*) when are they going to notify the date of vesting ?

A.—Sri M. P. PATIL (Minister for Revenue).—(13-3-1957).

(*a*) 19th August 1955.

(*b*) No. Action will be taken to enforce the provisions of the Act as soon as the rules are finalised.

(*c*) *Vide* reply to (*b*) above.

ಶ್ರೀ ವಿ. ಮಸಿಯಪ್ಪ.—ಈ ವಿಧವಾಗಿರತಕ್ಕ ಭೂಸುಧಾರಣೆಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಜಾರಿಗೆ ತರುತ್ತೇವೆಂದು ಹೇಳಿದ ಮೇಲೆ ಜಾಗ್ರತೆಯಾಗಿ ಜಾರಿಗೆ ತರದೆ ಇದ್ದರೆ ಇನಾಂಗ್ರಾಮಗಳಲ್ಲಿರತಕ್ಕ ರೈತರಿಗೆ ತೊಂದರೆಯಾಗುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಕಾನೂನನ್ನು ಜಾರಿಗೆ ತರುವುದರಲ್ಲಿ ತಡವಾಗಿದೆ. ಆದರೆ ಅದರಿಂದ ಗೇಣಿದಾರರಿಗಾಗಲಿ ರೈತರರಿಗಾಗಲಿ ಏನೂ ತೊಂದರೆಯಾಗುವಂತಿಲ್ಲ. ಏಕೆಂದರೆ ಈ ಕಾನೂನು ಪ್ರಕಾರ ಇನಾಂಗ್ರಾಮಗಳನ್ನು ತೆಗೆದುಕೊಳ್ಳುವವರೆಗೂ, The Mysore Alienated Villages (Protection of Tenants and Miscellaneous Provisions) Act 1950 ಜಾರಿಯಲ್ಲಿದೆ. ಇನಾಂ ರದ್ದಿಯಾತಿ ಕಾನೂನು ಜಾರಿಗೆ ಬರುವವರೆಗೂ ಈ ಕಾನೂನು ಜಾರಿಯಲ್ಲಿರುತ್ತದೆ.

ಶ್ರೀ ವಿ. ಮಸಿಯಪ್ಪ.—ಆ ತರಹ ಯಾವ ಕಾನೂನು ಜಾರಿಯಲ್ಲಿದ್ದರೂ ಕೂಡ ಅದನ್ನು ಗಣನೆಗೆ ತೆಗೆದುಕೊಳ್ಳದೆ ಗ್ರಾಮಗಳಲ್ಲಿರತಕ್ಕ ಜಮೀನುಗಳನ್ನೆಲ್ಲ antedated lease deed ಮಾಡಿ ರೈತರಿಗೆ ವಿಲೆ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದಿಯೇ ?

Sri M. P. PATIL.—Under section 6 of the later Act, alienation of all reserved lands in the alienated villages, by the superior holders, without the previous approval of the Deputy Commissioner shall be void and have no effect. ಹೀಗೆ ಅದರ ಕಾನೂನಿದೆ. ಆದುದರಿಂದ ಇಂಥ ಏನಾದರೂ ಕಷ್ಟ ಒದಗಿದರೆ ಆ ವಿಷಯವನ್ನು ಡೆಪ್ಯುಟಿ ಕಮಿಷನರ್ ಎದುರಿಗೆ ಅಥವಾ ಸರಕಾರದ ಎದುರಿಗೆ ತಂದರೆ ಅದನ್ನು ವಿಚಾರ ಮಾಡುತ್ತೇವೆ.

Sri V. MASIYAPPA.—In spite of that provision, has it come to the notice of the Government that reserve lands are being disposed of without obtaining the previous permission of the Deputy Commissioner and by obtaining anti-dated lease deeds ?

ಶ್ರೀ ಎಂ. ಪಿ. ಪಾಟೀಲ್.—ಸರಕಾರದ ಎದುರಿಗೆ ಬಂದಿಲ್ಲ. ಒಂದುವೇಳೆ ಬಂದರೆ ಆ ವಿಷಯದ ಬಗ್ಗೆ ಒಂದು ವ್ಯವಸ್ಥೆ ಮಾಡಲು ಕ್ರಮವನ್ನು ಸರಕಾರವಾಗಲಿ, ಡೆಪ್ಯುಟಿ ಕಮಿಷನರ್ ಆಗಲಿ ತೆಗೆದುಕೊಳ್ಳಬಹುದು.

Sri V. MASIYAPPA.—How are Government going to dispose of such cases in the event they are bringing into effect this Religious Inams Abolition Act?

Mr. SPEAKER.—How can the Government reply about that now ? Hypothetical questions should not be asked.

Sri V. MASIYAPPA.—Sir, there have been petitions presented to Government in this regard and no action has been taken.

Mr. SPEAKER.—Hon'ble Member may ask if there have been certain petitions in this respect. If the Government replies to the effect that there have been such petitions, then the Hon'ble Member may ask further questions.

Sri V. MASIYAPPA.—Has it come to the notice of the Government that several representations are made to the effect that reserve lands are being disposed of in the way I have already mentioned ?

Sri M. P. PATIL.—Sir, I am not aware of the complaint. If the complaint is in general terms, Government cannot take any action. If anybody brings definite cases to the notice of the Government or the officer concerned, action could be taken.

Sri A. V. NARASIMHA REDDY.—What is the difficulty in the way of Government in framing rules even after such a long time ?

Sri M. P. PATIL.—Sir, as a matter of fact, there is no difficulty. The rules are already notified and they are to be finalised. As soon as they are finalised, necessary steps would be taken. I can assure the Hon'ble Member that early steps would be taken.

Sri A. V. NARASIMHA REDDY.—Is it the view of the Government that framing rules to an Act enacted in this House would require more than $1\frac{1}{2}$ years ?

Sri M. P. PATIL.—Sir, the rules were published on 1-8-1956; not $1\frac{1}{2}$ years ago.

Sri A. V. NARASIMHA REDDY.—What is it that has still to be done for those rules to call them 'finalised' ?

Sri M. P. PATIL.—Sir, I must admit that I cannot give any explanation.

(SRI M. P. PATIL).

There was delay; there is no doubt. But now steps are being taken to finalise the rules as early as possible and Government would take futher steps also.

Construction of Gokattes to Provide Drinking Water in the Draught Areas of Challakere and Molakalmuru Taluks.

Q.—223. **Sri V. MASIYAPPA** (Hiriyur).—(4-12-1956)

Will the Government be pleased to state:—

(*a*) whether it has come to their notice that Challakere, Molakalmuru and portions of Hiriyur Taluk are situated in draught areas;

(*b*) whether the people of these areas are constantly representing to Government to construct Gokattes to provide drinking water for their cattle and people;

(*c*) the action taken in the matter?

A.—**Sri. M. P. PATIL** (Minister for Revenue).—(19-3-1957)

(*a*) The average annual rainfall in these taluks is less than the average for the State.

(*b*) No such applications are pending in Hiriyur and Challakere Taluks. General representations are received for repairing Gokattes in Molakalmuru Taluk.

(*c*) In the year 1951-52, when rains failed, the areas were declared draught affected and relief works were started to provide labour. Application for repairs of Gokattes are being examined and necessary action is taken. In the year 1951-52 repairs to about 23 Gokattes were carried out.

ಶ್ರೀ ವಿ. ಮಸಿಯಪ್ಪ.—ಚಿತ್ರದುರ್ಗ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಮಳೆ ಬಹಳ ಕಡಮೆ ಎನ್ನತಕ್ಕದ್ದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದೀರಿ. ಅಲ್ಲಿ ಪ್ರತಿವರ್ಷವೂ ಈ ಪರಿಸ್ಥಿತಿ ಇದ್ದು ಅಲ್ಲಿ ಆಹಾರಾಭಾವ ಮತ್ತು ನೀರಿನ ಅಭಾವವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri M. P. PATIL.—Sir, the question is about Gokattes.

Mr. SPEAKER.—The Hon'ble Member is enquiring about the annual rainfall. He means to say that every year the rainfall in this District is less.

Sri M. P. PATIL.—It is agreed.

ಶ್ರೀ ವಿ. ಮಸಿಯಪ್ಪ.—ಇಲ್ಲಿ ಪ್ರತಿವರ್ಷವೂ ದನಕರುಗಳಿಗೆ ಮತ್ತು ಜನಗಳಿಗೆ ಕುಡಿಯುವ ನೀರಿನ ಅಭಾವವಿದೆ ಎನ್ನತಕ್ಕದ್ದು ಸರಕಾರದ ಗಮನಕ್ಕೆ ಬಂದಿದೆಯೇ ?

Sri M. P. PATIL.—Sir, the question is only about Gokattes. I can reply as far as Gokattes.

Mr. SPEAKER.—The Hon'ble Member is asking a preliminary question about Gokattes. If the water is not sufficient for cattle, naturally Gokattes will have to be constructed; that is what he is driving at.

ಶ್ರೀ ವಿ. ಮಸಿಯಪ್ಪ.—ಗೋಕಟ್ಟೆಗಳನ್ನು ಕಟ್ಟಿಸುವುದು ದನಕರುಗಳಿಗೆ ಜಾನುವಾರುಗಳಿಗೆ ನೀರನ್ನು ಒದಗಿಸಿಕೊಡುವುದಕ್ಕಾಗಿ. ಅದಕೋಸ್ಕರ ಮಳೆಯ ಅಭಾವವಿರತಕ್ಕ ಈ ಪ್ರದೇಶದಲ್ಲಿ ಪ್ರತಿವರ್ಷವೂ ಜಾನುವಾರುಗಳಿಗೂ ಮತ್ತು ಜನಗಳಿಗೂ ನೀರಿನ ಅಭಾವವಿರುವುದರಿಂದ ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗೋಕಟ್ಟೆಗಳನ್ನು ಕಟ್ಟಿಸಿಕೊಡಬೇಕೆಂದು ಜನತೆ ಪದೇ ಪದೇ ಸರಕಾರವನ್ನು ಕೇಳುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಅಧ್ಯಕ್ಷರು.—'ಬಿ' ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ತಿಳಿಸಿದ್ದಾರೆ.

9 A.M.

Sri V. MASIYAPPA.—My question is regarding construction of new gokattes and also repairing of the existing gokattes.

Mr. SPEAKER.—That has been answered in (*b*).

Sri M. P. PATIL.—In 1951-52 when there was scarcity, some gokattes were repaired by the Government. As a matter of fact it is the responsibility of the people to repair these gokattes. When there is no scarcity, Government cannot take up the work of repairs. When any area is declared as scarcity area, the work would be taken up under the provisions of 'Scarcity works'. But under ordinary circumstances, Government has no provision to take up the work. Recently Government is thinking of having a scheme under which the people should contribute something and Government should also contribute something. But that matter is still under consideration and I cannot give all those details.

Mr. SPEAKER.—What about the construction of Gokattes; whose responsibility is it?

Sri M. P. PATIL.—It is the responsibility of the people mainly to construct or to repair gokattes.

Dr. R. NAGAN GOWDA.—In the reserve forest lands, grazing of cattle is allowed freely in this State; construction of gokattes cannot be undertaken by the people; has that come to the notice of Government?

Sri M. P. PATIL.—It is a hypothetical question Sir. I have already answered that even though according to custom or practice it is the responsibility of the people to construct or repair these gokattes, the Government was considering the issue without sticking to the letter of the law and taking a liberal view. We may have a scheme for construction and repairs of gokattes under which the people should contribute their labour and the Government may also contribute something for the repairs and construction.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಆಗಿನ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು ಪ್ರದೇಶಗಳಲ್ಲಿ ಪ್ರವಾಸಬಂದಿದ್ದಾಗಲೂ ಮತ್ತು ಈಗಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರೂ, ಸಹಕಾರ ಮಂತ್ರಿಗಳಾದ ಭೀಮಪ್ಪನಾಯಕರೂ ಪ್ರವಾಸಬಂದಿದ್ದಾಗಲೂ ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವನ್ನು ಬದಲಾಯಿಸಿ ಗೋಕಟ್ಟೆಗಳನ್ನು ಕಟ್ಟಿಸುವುದೇ ಸರ್ಕಾರದ ಉದ್ದೇಶ ಎಂಬುದಾಗಿ ನಿಯಮವನ್ನು ಬದಲಾವಣೆಮಾಡಿ ಅಭಾವ ಇರತಕ್ಕ ಪ್ರದೇಶಗಳಲ್ಲಿ ಸರ್ಕಾರದವರು ಗೋಕಟ್ಟೆ ಕಟ್ಟತಕ್ಕ ಪ್ರಯತ್ನವನ್ನು ಮಾಡುತ್ತಾರೆ ಎಂದು ಹೇಳಿರುವುದೂ ಮತ್ತು ಶ್ರೀಮಾನ್ ನಿಜಲಿಂಗಪ್ಪನವರು ಕಳೆದ ನವೆಂಬರ್ ತಿಂಗಳಲ್ಲಿ ಚಿತ್ರದುರ್ಗದ ಇಂಗಳಧಾಳ್‌ನಲ್ಲಿ ಈ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ತಾವು ಕೇಳಿರುವುದರಲ್ಲಿ ಎಷ್ಟೋ ಪ್ರಶ್ನೆಗಳನ್ನು ಜೋಡಿಸಿದ್ದೀರಿ. ಒಂದೊಂದಾಗಿ ಕೇಳಿ.

ಶ್ರೀ ವಿ. ಮಸಿಯಪ್ಪ.—ಮಾನ್ಯ ಕಡಿದಾಳ್ ಮಂಜಪ್ಪನವರು ಈ ಬಗ್ಗೆ ಆ ಪ್ರದೇಶದಲ್ಲಿ ಪ್ರವಾಸ ಮಾಡಿದಾಗ ಜನತೆಗೆ ಭರವಸೆ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಆ ಪ್ರದೇಶದಲ್ಲಿ ಪ್ರವಾಸ ಹೋದಾಗ ಗೋಕಟ್ಟೆ ಕಟ್ಟಿಸಬೇಕೆಂದು ಅನೇಕ ಕಡೆಗಳಲ್ಲಿ ಹೇಳಿದರು. ಸರ್ಕಾರದ ಈಗಿರತಕ್ಕ ಪರಿಸ್ಥಿತಿಯಲ್ಲಿ, ಈಗಿರತಕ್ಕ ನಿಯಮದ ಪ್ರಕಾರ ಗೋಕಟ್ಟೆ ಕಟ್ಟಿಸುವುದಕ್ಕಾಗುವದಿಲ್ಲ, ಸರ್ಕಾರದ ನೀತಿಯನ್ನು ಮಾರ್ಪಡಿಸಿದನಂತರ ಮಾಡಬಹುದು ಎಂದು ಹೇಳಿದೆನೇ ಹೊರತು ಗೋಕಟ್ಟೆ ಕಟ್ಟಿಸುತ್ತೇವೆ ಎಂದು ಭರವಸೆ ಹೇಳಲಿಲ್ಲ.

Sri M. P. PATIL.—I would like to add one more word to the answer. I have already replied that the matter was under consideration and the Government would take a sympathetic view of this question.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಈ ಪ್ರದೇಶದಲ್ಲಿ ಮಳೆ ಕಡಿಮೆ ಬೀಳುತ್ತದೆ ಎಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ ತಾನೆ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಉತ್ತರದಲ್ಲಿ ಇದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಆ ಗೋಕಟ್ಟೆಗಳಿಗೆ ನೀರು ಬರುತ್ತದೆಯೇ! (ನಗು!)

ಅಧ್ಯಕ್ಷರು.—ಅದು ಬೇರೆ ಪ್ರಶ್ನೆ ಆಯಿತು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಳೆ ಬೀಳದೆ ಇರತಕ್ಕ ಅಭಾವ ಪ್ರದೇಶಗಳಿಗೆ ಸರ್ಕಾರದವರು ವಿಶೇಷವಾದಂಥ ಏನಾದರೂ ಒಂದು ಪ್ರಯೋಗವನ್ನು ಮಾಡಬೇಕೆಂದು ಇಂಡಿಯಾ ಸರ್ಕಾರದ ರಾಮಮೂರ್ತಿ ಕಮಿಟಿಯವರು 1951-52 ರಲ್ಲಿ ಆ ಪ್ರದೇಶಕ್ಕೆ ಬಂದಾಗ ಸಲಹೆ ಮಾಡಿದ್ದಾರೆಯೇ?

Sri M. P. PATIL.—It is a question of fact.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ರಾಮಮೂರ್ತಿ ಕಮಿಟಿಯವರಿಂದ ಬಂದ ವರದಿಯ ಮೇಲೆ ಸರ್ಕಾರದವರು ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಈ ಸಭೆಯ ಮುಂದೆ ಇಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು.—ಅದು ಗೊತ್ತಿಲ್ಲ ಎಂದು ಹೇಳಿದ್ದಾರೆ, ಎಂದ ಮೇಲೆ ಕಾರ್ಯಕ್ರಮ ತಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸರ್ಕಾರದವರಿಗೆ ಗೊತ್ತಿಲ್ಲವೇ? ಮಂತ್ರಿಗಳಿಗೆ ಗೊತ್ತಿಲ್ಲವೇ?

Sri M. P. PATIL.—I am sorry, I have no knowledge about it.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹಾಗಾದರೆ ಈಗ ನಾನು ಕೊಟ್ಟಿರತಕ್ಕ ನೋಟೀಸನ್ನು ಸರ್ಕಾರದವರು ಗಮನಿಸಿ ಆ ಸಮಿತಿಯವರು ಏನು ವರದಿ ಮಾಡಿದ್ದಾರೆ ಮತ್ತು ಯಾವ ಶಾಶ್ವತವಾದ ಯೋಜನೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಸರ್ಕಾರದವರು ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ?

ಅಧ್ಯಕ್ಷರು.—ರಾಮಮೂರ್ತಿಯವರ ಸಲಹೆ ಏನಿದೆ ಎಂಬುದನ್ನು ನೋಡುತ್ತೇವೆ, ವಿಚಾರ ಮಾಡುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ.

Sri A. BHEEMAPPA NAIK.—That is a committee appointed by the Government of India. That applies to the entire India. It is not a committee appointed by the Government of Mysore. They have given a number of suggestions for implementation such as that electricity must be used for irrigation purposes wherever necessary. But it is not a report made to the Government of Mysore nor was the committee appointed by the Government of Mysore.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮೈಸೂರು ಸರ್ಕಾರದ ಸಹಾಯಕವಾಗಿ ತಾನೆ ಇಂಡಿಯಾ ಸರ್ಕಾರದವರು ಆ ಸಮಿತಿಯನ್ನು ಏರ್ಪಾಡ ಮಾಡಿದ್ದು?

Sri A. BHEEMAPPA NAIK.—For the Government of India's purpose.

Mr. SPEAKER.—This was appointed for the purpose of all States. The reply given by the Hon'ble Minister Sri Patil that he is considering the question sympathetically will satisfy the member.

Pending bills of District Board Contractors of Tumkur District.

Q.—235 Sri B. HUTCHE GOWDA (Turuvekere).—

Will the Government be pleased to state :—

(*a*) the number of contractors undertaking District Board work of Tumkur District Board whose bills are pending payment;

(*b*) whether it is a fact that many contractors are put to great hardship for the past several months since the Board has not paid them;

(*c*) whether it is not a fact that they have not so far adjusted heavy amounts due to District Board on account of land revenue assignments;

(*d*) whether it is a fact that on account of some procedural difficulties this is held up by the Accountant General; if so, what are the difficulties;

(*e*) whether they would arrange payment to the contractors immediately ?

A.—Sri R. CHENNIGARAMIAH (Minister for Local Self-Government).—

(*a*) 65.

(*b*) Representations about delay in payment have been received.

(*c*) Have since been adjusted.

(*d*) Does not arise in view of reply to (*c*) above.

(*e*) Yes.

ಶ್ರೀ ಬಿ. ಹುಚ್ಚೇಗೌಡ.—ಈ ಕಂಟ್ರಾಕ್ಟರುಗಳು 65 ಜನರಲ್ಲಿ ಎಷ್ಟು ಜನಕ್ಕೆ ದುಡ್ಡು ಕೊಟ್ಟಿದ್ದೀರಿ?

ಶ್ರೀ ಆರ್. ಚನ್ನಿಗರಾಮಯ್ಯ.—ಆ ಲೆಕ್ಕ ನಮ್ಮಲ್ಲಿ ಸಿಕ್ಕುವುದಿಲ್ಲ. ಸಾಮಾನ್ಯವಾಗಿ ಎಲ್ಲರಿಗೂ ದುಡ್ಡು ಕೊಟ್ಟಿರಬೇಕು.

ಶ್ರೀ ಬಿ. ಹುಚ್ಚೇಗೌಡ.—ಎಷ್ಟೋ ಜನ ಕಂಟ್ರಾಕ್ಟರುಗಳ ಬಿಲ್ಲು ಪಾಸ್ ಆಗದೇ ಹಣ ಪಾವತಿ ಆಗಿಲ್ಲ. ಅದಕ್ಕೇ ಪ್ರಶ್ನೆ ಹಾಕಿದ್ದೇನೆ. I want a definite answer, Sir.

ಶ್ರೀ ಆರ್. ಚನ್ನಿಗರಾಮಯ್ಯ.—ಆ ಸಮಾಚಾರ ಇಲ್ಲಿ ಸಿಕ್ಕುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿಗೆ ಸಾಕಾದಷ್ಟು ಹಣ ಕೊಟ್ಟಿದ್ದೇವೆ. ಅವರು ಕೊಟ್ಟಿರಬಹುದು. ಮೊದಲು ಬರುತ್ತಾ ಇದ್ದ ದೂರುಗಳು ಈಗ ಬರುತ್ತಾ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈ ಬಗ್ಗೆ ವಿಚಾರಮಾಡಿ ಸಮಾಚಾರ ಕೊಡಲಿಕ್ಕೆ ಆಗುತ್ತದೆಯೇ? 'I want a definite reply, whether they are paid or not.

ಶ್ರೀ ಆರ್. ಚನ್ನಿಗರಾಮಯ್ಯ.—ಅಕ್ಟೋಬರ್ ಕೊನೆಯಲ್ಲಿ ಪೇಮೆಂಟ್ ಆಗದೇ ಹೊಸ ಸಂಸ್ಥಾನ ಬಂದದ್ದರಿಂದ ನವೆಂಬರ್‌ನಲ್ಲಿ ಲ್ಯಾಪ್ಸ್ ಆಯಿತು. ಅಕೌಂಟೆಂಟ್ ಜನರಲ್‌ಅವರು ಕಮ್ಯೂನಿಕೇಟ್ ಮಾಡಿರಲಿಲ್ಲ.

In the month of November, a sum of Rs. 27,500 was paid to the Tumkur District; in the month of January 27,500 was paid; in February 20,000 and very recently Rs. 36,000 have been paid. They have got more than their requirements.

ಶ್ರೀ ಬಿ. ಹುಚ್ಚೇಗೌಡ.—ಈಗ ಇನ್ನೂ ಕೆಲವು ಕಂಟ್ರಾಕ್ಟರರಿಗೆ ಹಣ ಕೊಟ್ಟಿಲ್ಲವೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಕೊಡದೇ ಇದ್ದರೆ ತಕ್ಷಣ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಬೋರ್ಡು ಹಣವನ್ನು ಕೊಡದೆ ಇದ್ದುದರಿಂದ ಎಷ್ಟೋಸಲ ಡೆಪ್ಯುಟೇಷನ್ ಬಂದಿದ್ದರಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಬಂದಿದ್ದರು.

ಶ್ರೀ ಬಿ. ಹುಚ್ಚೇಗೌಡ.—ಬೆಂಗಳೂರಿನಲ್ಲಿ ಒಂದು ತಿಂಗಳು ಕಾದರೆ ಎಷ್ಟು ತೊಂದರೆಯೆಂಬುದು ಗೊತ್ತೆ?

Sri R. CHENNIGARAMIAH.—I have already stated the position, Sir. There were some technical difficulties. At the end of October 1956, payments were made. But on November 1st, the amount lapsed because the new State came into being. Therefore, in the course of November we made necessary arrangements to make payments. There are no difficulties now.

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾದ ಲ್ಯಾಂಡ್ ರೆವೆನ್ಯೂ ಅಸೈನ್‌ಮೆಂಟ್ ಎಷ್ಟು ದಿವಸದಿಂದ ಕೊಟ್ಟಿಲ್ಲ? ಎಷ್ಟು ಬಾಕಿಯಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದನ್ನು ಅಡ್ವಾನ್ಸಾಗಿ ಕೊಟ್ಟಿರುತ್ತದೆ. ಕೆಲವು ಫಾರ್ಮ್ಯಾಲಿಟೀಸ್ ಅಬ್ಸರ್ವ್ ಮಾಡಬೇಕಾಗುವುದು. ಡೆಪ್ಯುಟಿ ಕಮಿಷನರು ಅಕೌಂಟ್ಸ್ ತರಿಸಿ ಎಷ್ಟು ವಸೂಲಾಗಿದೆ, ಎಷ್ಟು ಅಸೈನ್ ಮಾಡಬೇಕು ಎಂಬುದನ್ನು ಅಕೌಂಟೆಂಟ್ ಜನರಲ್‌ರವರಿಗೆ ತಿಳಿಸಬೇಕು. ಅದನ್ನು ತಿಳಿಸದಿರುವುದರಿಂದ ನಿಧಾನವಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ಡೆಪ್ಯುಟಿ ಕಮಿಷನರೇ ಸ್ಪೆಷಲ್ ಆಫೀಸರೂ ಮತ್ತು ಅಸೈನ್ ಮಾಡತಕ್ಕವರೂ ಆಗಿದ್ದರೂ ಸಹ 1955ರಿಂದ ಅಸೈನ್ ಮಾಡಿಲ್ಲವೆಂದು ಹೇಳಿದರೆ ಅದರ ಅರ್ಥವೇನು?

ಶ್ರೀ ಆರ್. ಚೆನ್ನಿಗರಾಮಯ್ಯ.—ಈಚೆಗೆ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ 1952ರಿಂದ ಎಷ್ಟು ಕೊಟ್ಟಿದ್ದಾರೆ?

Sri R. CHENNIGARAMIAH.—For the last one month, I have not been hearing any complaints from the contractors. Formerly they used to complain that they had not been paid, but that is not the case now. For example, they have already got 1 lakh 36 thousand rupees.

ಅಧ್ಯಕ್ಷರು.—ತಮಗೆ ಜಾಸ್ತಿ ಸಮಾಚಾರ ಬೇಕಾಗಿ ರಬಹುದು. ಈಗ ಅವರಿಗೆ ಒಂದು ಅವಕಾಶ ಕೊಡೋಣ. ಬೇಕಾದ ಸಮಾಚಾರ ಬರುವವರೆಗೆ, I will hold over the question.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಉತ್ತರಕ್ಕೆ ಸಹಾಯಕವಾದ ಇನ್ನೂ ಕೆಲವು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು.—ಆಗಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಲ್ಯಾಂಡ್ ರೆವೆನ್ಯು ಅಸ್ಸೆಸ್‌ಮೆಂಟ್ ಮತ್ತು ಇತರ ಸೆಸ್ಸುಗಳೇನು ಡಿಸ್ಟ್ರಿಕ್ ಬೋರ್ಡಿಗೆ ಸರ್ಕಾರದವರು ಕೊಡಬೇಕೋ ಆ ವಿಷಯದಲ್ಲಿ ಹಳೆಯ ಮೈಸೂರಿನ ಅಸೆಂಬ್ಲಿಯಲ್ಲಿ ಚರ್ಚೆ ನಡೆದಿರುವುದು ನಿಜವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ನಡೆದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿರಿ?

ಶ್ರೀ ಆರ್. ಚೆನ್ನಿಗರಾಮಯ್ಯ.—ಲ್ಯಾಂಡ್‌ರೆವೆನ್ಯೂ ಅಸ್ಸೆಸ್‌ಮೆಂಟ್ ಒಂದು ಲಕ್ಷರೂಪಾಯಿ ಅಡ್ವಾನ್ಸಾಗಿ ಕೊಟ್ಟಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಸ್ಪೆಷಲ್ ಆಫೀಸರಿಂದ ಬರಬೇಕಾದ ಸೆಸ್ ಮತ್ತು ಲ್ಯಾಂಡ್‌ರೆವೆನ್ಯು ಅಸ್ಸೆಸ್‌ಮೆಂಟಿಗೆ ರಿಮೈಂಡರ್ ಮೇಲೆ ರಿಮೈಂಡರ್, ಕಾಗದದ ಮೇಲೆ ಕಾಗದ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸೆಸ್ ವಿಚಾರ ನನಗೆ ಗೊತ್ತಿಲ್ಲ; ಅಸ್ಸೆಸ್‌ಮೆಂಟ್ ಆಫ್ ಲ್ಯಾಂಡ್ ರೆವೆನ್ಯೂ ವಿಚಾರದಲ್ಲಿ ಒತ್ತಾಯ ಬಂತು, ಅದಕ್ಕೆ ಏರ್ಪಾಡುಮಾಡಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಡ್ವಾನ್ಸ್ ಯಾವ ಆಧಾರದ ಮೇಲೆ ಕೊಡಲಾಗಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾದ ಲ್ಯಾಂಡ್ ರೆವೆನ್ಯೂ ಅಸ್ಸೆಸ್‌ಮೆಂಟ್‌ಮೇಲೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಡಿಸ್ಟ್ರಿಕ್ಟ್ ಜಿಲ್ಲಾ ಬೋರ್ಡಿಗೆ ಎಷ್ಟು ಕೊಡಲಾಗಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸ್ಪೆಷಲ್ ಆಫೀಸರು ಮತ್ತು ಆಡಳಿತ ವರ್ಗದವರು ಸರಿಯಾದ ನಿಗ ತೆಗೆದುಕೊಳ್ಳದೆ ಡಿಸ್ಟ್ರಿಕ್ಟ್ ಬೋರ್ಡಿಗೆ ಬರಬೇಕಾದಂಥ ಸೆಸ್ ಮತ್ತು ಲ್ಯಾಂಡ್‌ರೆವೆನ್ಯೂ ಅಸ್ಸೆಸ್‌ಮೆಂಟ್ ಸಕಾಲದಲ್ಲಿ ಬಾರದೆ ಅವ್ಯವಸ್ಥೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನಿರ್ದಿಷ್ಟವಾಗಿ ಬೇಗ ಈ ಮೊಬಲಗು ಬಾರದೆ ಜಿಲ್ಲಾಬೋರ್ಡಿನ ಆಡಳಿತ ಹಣಕಾಸಿನ ಅಭಾವದಿಂದ ದುರವಸ್ಥೆಗೀಡಾಗಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ದುರವಸ್ಥೆಗೀಡಾಗಿಲ್ಲ. ಲ್ಯಾಂಡ್‌ರೆವೆನ್ಯೂ ಅಸ್ಸೆಸ್‌ಮೆಂಟ್ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಅವರು ಅಕೌಂಟ್ಸ್ ತರಿಸಿ ಎಷ್ಟು ವಸೂಲಾಗಿದೆಯೆಂದು ನೋಡಿ ಬಿಲ್‌ಮಾಡಿ ಡ್ರಾ ಮಾಡಲು ಅವರಿಗೆ ಅಧಿಕಾರವಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದಿಂದ ಇಷ್ಟು ಹಣ ಅಸ್ಸೆನ್ ಆಗಿದೆಯೆಂದು ನಿಗದಿ ಮಾಡಲ್ಪಡುವವರೆಗೂ ಜಿಲ್ಲಾಧಿಕಾರಿಗಳು ಅಥವಾ ಸ್ಪೆಷಲ್ ಆಫೀಸರು ಖರ್ಚು ಹಾಕಲು ಅವಕಾಶವಿಲ್ಲವಲ್ಲ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸರ್ಕಾರ ಇಷ್ಟು ಕೊಟ್ಟಿದೆಯೆಂಬುದು ಜಿಲ್ಲಾಧಿಕಾರಿಗಳಿಗೆ ಗೊತ್ತಿರುತ್ತದೆ. ಅವರು ಬಿಲ್‌ಮಾಡಿ ಡ್ರಾ ಮಾಡಬೇಕು. ಸರ್ಕಾರ ಹೊಸದಾಗಿ ಆರ್ಡರು ಮಾಡಬೇಕಾಗಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆರೀತಿ ಅವರು ಮಾಡದಿದ್ದರೆ ಹಾಗೆ ಮಾಡುವಂತೆ ಹೇಳುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಆಗಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಸಿರಾ ತಾಲ್ಲೂಕು ಗೌಡಗೆರೆ ಹೋಬಳಿ ಪಟ್ಟನಾಯಕನಹಳ್ಳಿ ರಸ್ತೆ ಕಂಟ್ರಾಕ್ಟನ್ನು ಯಾರಿಗೆ ಕೊಟ್ಟಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ನೋಟೀಸ್.

ಶ್ರೀ ಸಿ. ಟಿ. ಹನುಮಂತಯ್ಯ.—ಹಾಗಾದರೆ ರಸ್ತೆ ಆಗಿಲ್ಲ. ದುಡ್ಡು ಮಾತ್ರ ತೆಗೆದು ಕೊಂಡಿದ್ದಾರೆ. ವಿಚಾರಮಾಡಿ ವಿಷಯ ತಿಳಿಸುತ್ತೀರಾ?

ಅಧ್ಯಕ್ಷರು.—ಆ ಪ್ರಶ್ನೆಯನ್ನು ಕೇಳುವುದಕ್ಕಾಗುವುದಿಲ್ಲ. ಇಲ್ಲಿ ಕೇಳಿರುವುದು ಪೆಂಡಿಗ್ ಬಿಲ್ಸ್ ಮತ್ತು ಲ್ಯಾಂಡ್‌ರೆವೆನ್ಯೂ ವಗೈರೆ ಮಾತ್ರ.

ಶ್ರೀ ಸಿ. ಟಿ. ಹನುಮಂತಯ್ಯ.—ಪಟ್ಟನಾಯಕನ ಹಳ್ಳಿ ರಸ್ತೆಯನ್ನು—

Sri R. CHENNIGARAMIAH.—Road is not a matter in question here.

ಶ್ರೀ ಸಿ. ಟಿ. ಹನುಮಂತಯ್ಯ.—ಪಟ್ಟನಾಯಕನ ಹಳ್ಳಿ ರಸ್ತೆಯನ್ನು ಯಾರಿಗೆ ಕೊಟ್ಟಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ಯಾರು ಎಂದು ನಮಗೆ ಗೊತ್ತಿಲ್ಲ.

ಅಧ್ಯಕ್ಷರು.—ಸುಮಾರು 65 ಕಂಟ್ರಾಕ್ಟರುಗಳು ಇದ್ದಾರೆ. ಹೇಗೆ, ಸ್ವಾಮಿ, ಹೇಳಲಿಕ್ಕೆ ಸಾಧ್ಯ?

ಶ್ರೀ ಬಿ. ಹುಚ್ಚೇಗೌಡ.—ಡಿಸ್ಟ್ರಿಕ್ಟ್ ಬೋರ್ಡಿನಿಂದ ಸರ್ಕಾರಕ್ಕೆ ಬರಬೇಕಾದ ಹಣದ ಲೆಕ್ಕಾಚಾರಕ್ಕೋಸ್ಕರವಾಗಿ, ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾದ ಲ್ಯಾಂಡ್ ರೆವೆನ್ಯು ಅಸ್ಸೆಸ್‌ಮೆಂಟನ್ನು ಫೈನಲ್ ಮಾಡದೆ ಇರುವದು ನಿಜವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರಬಹುದು.

ಶ್ರೀ ಕೆ. ಎಫ್. ಪಾಟೀಲ್.—ಬೇರೆ ಬೇರೆ ಬಾಬ್ತುಗಳಿಂದ ಸರ್ಕಾರಕ್ಕೆ ಹಣ ಬರಬೇಕಾಗಿರುವದಕ್ಕೋಸ್ಕರವಾಗಿ ಒಂದಕ್ಕೊಂದಕ್ಕೆ ತಾಳೆಹಾಕಿ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾದ ಹಣವನ್ನು ಕೊಡದೆ ಇರುವದು ಸರಿಯೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಹಾಗೆ ಒಂದಕ್ಕೊಂದು ವಜಾ ಹಾಕಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡಿಗೆ ಬರಬೇಕಾದ ಲ್ಯಾಂಡ್ ರೆವೆನ್ಯೂ ಹಣದ

(ಶ್ರೀ ಟಿ. ಎಕ್. ಮೂಡಲಗಿರಿಗೌಡ) ಬಗ್ಗೆ ಯಾವ ಕ್ರಮ ತೆಗದುಕೊಳ್ಳಬೇಕೆಂದು ಸರ್ಕಾರದ ಉದ್ದೇಶವಾಗಿದೆ?

ಅಧ್ಯಕ್ಷರು.—ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. I will hold over the question if it is possible for the Government to give the additional information. I think information with regard to the rest of the questions is over. Proper information is to be furnished only to Sri Hutche Gowda's question.

Sri R. CHENNIGARAMIAH.—He wants information about the number of contractors.

Sri B. HUTCHE GOWDA.—I want to know how much money is pending and for how many years.

Remission of Land Revenue in Shimoga Taluk.

Q.—243. Sri R. NAGAPPA SETTY (Shimoga).—

Will the Government be pleased to state :—

(*a*) whether it is a fact that during 1952-53 they have granted half of land revenue as remission in Shimoga Taluk due to the failure of rains in the said year;

(*b*) the reasons for the remission of assessment of land revenue not being given effect to such tenants under Muzrai temples, which are managed by Government;

(*c*) the reasons for not considering the representation given by tenants of Sri Brahmeswara Temple of Kudli Village of Shimoga Taluk for remission of half Gutta amount for the year 1952-53 in spite of repeated requests of these years?

A.—Sri M. P. PATIL (Minister for Revenue).—

(*a*) Yes.

(*b*) According to the rules regarding lease of lands belonging to Muzrai Institutions, the lessee is not entitled to any remission of the rent or to any compensation on account of seasonal conditions or any other cause whatever.

(*c*) Remission of Gutta cannot be sanctioned on the analogy of remission of Land Revenue as the two are governed by separate rules.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—1951ರಲ್ಲಿ ಗುತ್ತಾ ಹಣವನ್ನು ಒಂದಕ್ಕೆ ಮೂರರಷ್ಟು ಹೆಚ್ಚಿಸಿ ಬರೆಸಿಕೊಂಡದ್ದು ನಿಜವೇ ?

Sri M. P. PATIL.—I shall explain the whole position. The lease of lands to the tenants is governed by certain rules. One of the terms of the rules is, the lessee is not entitled to any remission of the rent or to any compensation on account of seasonal conditions or any other cause whatever.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಾನು ಕೇಳಿದ ಪ್ರಶ್ನೆ ಏನೆಂದರೆ, 1951ರಲ್ಲಿ ಮಾಡಿದ ರೂಲ್ಸ್ ಪ್ರಕಾರ ಗುತ್ತಾ ಹಣವನ್ನು ಮೂರರಷ್ಟು ಹೆಚ್ಚಾಗಿ ಕೊಡಬೇಕೆಂದು ಹೊಸ ರೂಲ್ಸ್ ಮಾಡಿ ಬರೆಸಿಕೊಂಡದ್ದು ನಿಜವೇ ?

Sri M. P. PATIL.—These lands are leased on contract and recoveries are made according to that contract. No remission can be given under the rules.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಾನು ಕೇಳಿದ್ದು ರೆಮಿಷನ್ ಪ್ರಶ್ನೆ ಅಲ್ಲ. ಕೆಲವೆಡೆ ರೈತರಿಂದ ಒಂದಕ್ಕೆ ಮೂರರಷ್ಟು ಹೆಚ್ಚು ಗುತ್ತಾ ಹಣ ರೆಕವರ್ ಮಾಡಿದ್ದಾರೆ ಎಂಬುದನ್ನು ಪರಿಶೀಲನೆ ಮಾಡುತ್ತೀರಾ ?

Sri M. P. PATIL.—If the Hon'ble Member brings to notice any particular case I will examine it. But the situation is, if tenant is taken under a contract the recoveries are made according to that contract and no remission can be given.

9-30 A.M.

The matter has been considered and these lands are governed under separate rules. Government has no authority to give remission in respect of these lands. Government have power to give remission to lands which are governed under the Land Revenue Rules. But these lands are governed under separate rules and under those rules, no remission can be given. That is one of the terms of the contract.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಹಾಗಿಲ್ಲದೆ ಈಗ ಮೂರು ಬಾರಿ ಈ ರೀತಿ ಕಂದಾಯ ವಸೂಲು ಮಾಡಿದ್ದಾರೆ. ಈ ಕಂದಾಯವನ್ನು ಮಾಫೀ ಮಾಡಲು ಸರ್ಕಾರ ಪರಿಶೀಲಿಸುತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ.

Sri M. P. PATIL.—If any amount which is beyond the contract is recovered and if the Hon'ble Member brings such cases to my notice, I shall examine them.

Sri K. PUTTASWAMY.—Are not tenants entitled for reduction of rent when seasonal conditions fail, Sir ?

Sri M. P. PATIL.—This is under separate rules. I will repeat what I said just now. Government has laid down certain rules for leasing lands belonging to Muzrai institutions. These rules are not applicable to all other lands. Rule 8 of those Rules says :

> "Lessees are not entitled to remission of rent or any compensation on account of seasonal conditions whatsoever."

Sri K. PUTTASWAMY.—Are not the tenants governed by the Tenancy Act in that area, Sir ?

Sri M. P. PATIL.—At that time, the Tenancy Act was not made applicable in that area. This is a case which relates to the year 1951-52. The Tenancy Act has been made applicable in this area since December 1953. Now that question does not arise. But the question is about remission relating to the year 1951-52 which cannot be given.

Mr. SPEAKER.—Question time is over.

Before we go to the next item, I would like to announce something about questions. The position about the questions is that the present list No. 5 is not exhausted. It will be taken up day after tomorrow. The sixth list is also ready and it contains about 14 questions. This list, namely, fifth List contains 14 questions which have to be taken up. So, 14 *plus* 14, comes to 28 and that is the number of questions we to deal with. Replies to other questions have not as yet been received in this office. The number of questions which have to be answered and replies to which have to be received from Government is 206. I do not think it will be possible for us to get replies to such a large number of questions. If however, if answers to questions are received from Government in time, they will be placed before the House and will be taken up.

Sri B. S. KUSHALAPPA.—So many members may not be here next time.

PAPERS LAID ON THE TABLE.

Notification.

Sri M. P. PATIL (Minister for Revenue).—Sir, under sub-section (4) of Section 6 of the Mysore Sales-Tax Act, 1948, I lay before the House copies of Notification No. RD. 6-STX-57, dated 9th March 1957 issued under sub-section (2) and sub-section (3b) of Section 6 of the Mysore Sales-Tax Act, 1948.

BUDGET FOR 1957-58. DEMANDS FOR GRANTS "ON ACCOUNT"

(*Discussion continued.*)

Mr. SPEAKER.—I would like to say a few words in this connection. The whole of yesterday has been taken for discussion. Only five members have taken part. That means we have been very slow. I would like that the progress would be rather fast today. I do not intend to prescribe a time-limit. However, I would request Hon'ble Members to have some sort of restraint so far as time-limit is concerned.

With these remarks, I initiate the debate. I call upon Sri Hutche Gowda to make his remarks.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಬಜೆಟ್ ಆನ್ ಅಕೌಂಟು ಮೇಲೆ ಇದೇ ಕೊನೆಯ ಸಾರಿಯಾಗಿ ಮಾತನಾಡುವಾಗ ನಾವು ಕಳೆದ ಐದು ವರ್ಷಗಳಿಂದ ಏನು ಸಾಧನೆ ಮಾಡಿದೆವು ಎನ್ನುವ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಈ ಕಳೆದ ಐದು ವರ್ಷಗಳಿಂದ ಏನೇನು ಹೆಮ್ಮೆಯಿಂದ ಸಾಧಿಸಿದೆವು, ಏನೇನು ಕಾರ್ಯಗತವಾದುವು ಎಂಬ ವಿಚಾರಗಳನ್ನು ಸ್ವಲ್ಪ ಮಟ್ಟಿಗೆ ಅದರ ಸವಿನೆನಪುಗಳನ್ನು ನಿವೃತ್ತರಾಗುವಾಗ ಇಟ್ಟುಕೊಂಡು ಹೋಗಬೇಕೆಂಬ ಭಾವನೆಯಿಂದ ಹೇಳುತ್ತಿದ್ದೇನೆ. ಆದರೆ ನಾವು ಈ ವಿಚಾರದಲ್ಲಿ ತುಂಬ ಹಿಂದೆ ಉಳಿದಿದ್ದೇವೆ. ಜನ ಜೀವನದ ಮಟ್ಟವನ್ನು ಹೆಚ್ಚಿಸುವುದಕ್ಕಾಗಲಿ, ಜನತೆಯ ನೈತಿಕ ಮಟ್ಟವನ್ನು, ಜ್ಞಾನದ ಮಟ್ಟವನ್ನು, ಆರ್ಥಿಕ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಯಾವುದಾದರೂ ಕಾರ್ಯಕ್ರಮವನ್ನು ನಿಸ್ಪೃಹತೆಯಿಂದ ಪ್ರಯತ್ನ ಮಾಡಿದ್ದೇವೆಂದು ಹೇಳಿಕೊಳ್ಳಲಾರದ ಸ್ಥಿತಿಯಲ್ಲಿದ್ದೇವೆ. ಇಂತಹ ಭಾವನೆಗಳಿಗೆ ಕಾರಣಗಳೇನೆಂಬುದನ್ನು ನಾನು ಸಭೆಯ ಮುಂದೆ ಇಡುವುದು ಅತ್ಯವಶ್ಯಕ.

ಮೊದಲನೆಯದಾಗಿ ಈ ಕಾಂಗ್ರೆಸ್ಸು ಆಡಳಿತಾಧಿಕಾರ ವಹಿಸಿಕೊಂಡ ಮೇಲೆ ಹಿಂದಿನ ಸರ್ಕಾರಗಳು ಯಾವರೀತಿ ಏನಾದರೂ ಜನೋಪಯುಕ್ತವಾದ ಕಾರ್ಯವಾಗಬೇಕಾದರೆ, ಕಮಿಟಿಗಳು, ಕಮಿಷನ್‌ಗಳು, ಎಂಕ್ವೈರಿ ಇತ್ಯಾದಿಗಳನ್ನು ನೇಮಿಸಿ ಅಲ್ಲಿಂದ ರಿಪೋರ್ಟುಗಳು ಬಂದ ಮೇಲೆ ಅವನ್ನು ಕಸದ ಬುಟ್ಟಿಗೆ ಹಾಕುವ ನೀತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಇದನ್ನು ನಾವು ಕಳೆದ ಕೆಲವು ವರ್ಷಗಳಿಂದಲೂ

---

*Asterisk indicates that the remarks or speeches have not been revised by the Member concerned.

(ಶ್ರೀ ಬಿ. ಹುಚ್ಚೇಗೌಡ)

ಹೇಳುತ್ತಾ ಬಂದಿದ್ದೇವೆ. ಪ್ರಗತಿಪರವಾದ ಮತ್ತು ಜನೋಪಯುಕ್ತವಾದ ಕಾರ್ಯಗಳನ್ನು ಮಾಡುವುದಕ್ಕೆ ಈ ಸರ್ಕಾರ ಪ್ರಯತ್ನ ಪಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಯಾವ ಒಂದು ಮಾರ್ಗದರ್ಶನವಾಗುವ ನೀತಿಯನ್ನಾಗಲಿ ಸುಧಾರಣೆಯನ್ನಾಗಲಿ ಅನುಸರಿಸಿಲ್ಲ. ಹಾಗೆಯೇ ಈ ಭೂಸುಧಾರಣಾ ಸಮಿತಿಯನ್ನು ತೆಗೆದುಕೊಳ್ಳೋಣ. ಈ ಭೂಸುಧಾರಣೆಗಾಗಿ ಹಿಂದೆ 1948ನೇ ಸಾಲಿನಲ್ಲಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಅದರಲ್ಲಿದ್ದ ಮೆಂಬರುಗಳು ಮತ್ತು ಅಧ್ಯಕ್ಷರು ಎಲ್ಲರೂ ಇಂಡಿಯಾದೇಶದ ಅನೇಕ ಭಾಗಗಳನ್ನು ಸುತ್ತಿಕೊಂಡು ಬಂದು ಅಲ್ಲಿಯ ಸ್ಥಿತಿಗತಿಗಳನ್ನು ನೋಡಿಕೊಂಡು ಬಂದು ಇಲ್ಲಿಯ ಸ್ಥಿತಿಗತಿಗಳಿಗೂ ಅನುಕೂಲವಾಗುವ ಹಾಗೆ ಒಂದು ರಿಪೋರ್ಟನ್ನು ಕೊಟ್ಟು ಉಪಕಾರ ಮಾಡಿದರು. ಇದಕ್ಕಾಗಿ ಸರ್ಕಾರದಿಂದ ಸಾವಿರಾರು ರೂಪಾಯಿಗಳೂ ವೆಚ್ಚವಾಯಿತು. ಇದರ ಮೇಲೆ ಆಕ್ಟು ಆಗಿ ಅದು ಪಾಸೂ ಆಯಿತು. ಅದರ ಮೇಲೆ ಪುನಃ ತಿದ್ದುಪಡಿ ಮಾಡುವುದಕ್ಕೆ ಒಂದು ಜಾಯಿಂಟ್ ಕಮಿಟಿ ನೇಮಕ ಮಾಡಿ ಅನಂತರ ಅದನ್ನು ತಿದ್ದುಪಡಿ ಮಾಡಿ ಪಾಸು ಮಾಡಿದ್ದಾರೆ. ಎರಡನೇ ಕಾಂಗ್ರೆಸ್ಸು ಆಡಳಿತ ವಹಿಸಿಕೊಂಡ ಮೇಲೆ ಈ ವಿಚಾರದಲ್ಲಿ ವಿಚಾರ ಮಾಡಲು ಮೂರನೇ ಆಕ್ಟನ್ನು ತಂದರು ಮತ್ತು ಅದನ್ನು 19ನೇ ಆಗಸ್ಟ್ 1955ರಲ್ಲಿ ಆಕ್ಟಾಗಿ ಜಾರಿ ಮಾಡಿ 1ನೇ ಆಗಸ್ಟ್ 1956ರಿಂದ ಜಾರಿಗೆ ತಂದರು. ಅದರಿಂದ ಇನ್ನೂ ಹೆಚ್ಚು ತೊಂದರೆಗಳಾಗಿವೆಯೇ ವಿನಾ ಜನಗಳಿಗೆ ಏನೂ ಅನುಕೂಲವಾಗಲಿಲ್ಲ.

ಇದರಿಂದ ಏನು ಗೊತ್ತಾಗುತ್ತದೆಂದರೆ ಯಾರು ಜಮೀನ್ದಾರರಾಗಿರುತ್ತಾರೆಯೋ ಅವರ ಹಿತದೃಷ್ಟಿಯಿಂದ ಮತ್ತು ಯಾರಿಗೋಸ್ಕರ ಈ ಕಾನೂನು ಮಾಡಿದ್ದಾರೆಯೋ ಅವರಿಗೆ ಅನಾನುಕೂಲ ಮಾಡುವ ಉದ್ದೇಶದಿಂದ ಜಮೀನ್ದಾರರಿಗೆ ಸಾಕಾದಷ್ಟು ವೇಳೆ ಕೊಡುವುದಕ್ಕೆ ಈ ರೀತಿ ಮಾಡಿದ್ದಾರೆ. ಜಮೀನ್ದಾರರು, ಜಮೀನುಗಳನ್ನು ಬೇಕಾದಹಾಗೆ ವಿಲೆ ಮಾಡಿಕೊಳ್ಳಲಿ, ರೈತರಿಗೆ ಅವಕಾಶವಿಲ್ಲದ ಹಾಗೆ ಮಾಡಿಕೊಳ್ಳಲಿ ಅನಂತರ ಕಾನೂನನ್ನು ಜಾರಿಗೆ ಕೊಡೋಣ ಎಂದು ಮಾಡಿರುವ ಹಾಗೆ ಕಾಣುತ್ತದೆ. ಯಾವ ಕಾನೂನನ್ನು ಯಾವ ಉದ್ದೇಶದಿಂದ ಮೊದಲು ಮಾಡಿತ್ತೋ ಆ ಉದ್ದೇಶ ಸಫಲವಾಗ ಬಾರದು ಎಂದು ಸರ್ಕಾರ ನಡೆದು ಕೊಂಡು ಬರುತ್ತಿದೆ.

ಎರಡನೆಯದಾಗಿ ನಾವು ದೇಶದ ಹಿತದೃಷ್ಟಿಯಿಂದ ಸ್ಥಳೀಯ ಸಂಸ್ಥೆಗಳಲ್ಲಿ ಬಹುಮಟ್ಟಿಗೆ ಮಾರ್ಪಾಡು ಮಾಡಬೇಕು, ಜನಗಳಿಗೆ ಸ್ವಯಂ ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ಅನುಭವ ಬರುವ ರೀತಿಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳು ಸರ್ಕಾರದ ಒಂದು ಆತಂಕಕ್ಕೆ ಒಳಪಡದೆ ತಮ್ಮ ಕಾಲ ಮೇಲೆ ನಿಂತು ಆಡಳಿತ ನಡೆಸಬೇಕು, ಜನಗಳು ಸ್ಥಳೀಯ ಸಂಸ್ಥೆಗಳಲ್ಲಿ ಅನುಭವ ಪಡೆಯಬೇಕು, ಮಹಾತ್ಮ ಗಾಂಧಿಯವರು ಯಾವ ರೀತಿ ಗ್ರಾಮರಾಜ್ಯಗಳ ಏರ್ಪಾಡಾಗಬೇಕು, Village Parliaments ಎಂದು ಹಿಂದಿನ ಕಾಲದಲ್ಲಿ ಯಾವ ರೀತಿಯಾಗಿ ಇತ್ತೋ ಆ ರೀತಿ ದೇಶದಲ್ಲಿ ಎಲ್ಲ ಕಡೆಯೂ ಕೂಡ ಆಗಬೇಕು ಎಂದು ಹೇಳುತ್ತಿದ್ದರೋ ಆ ರೀತಿ ಗ್ರಾಮರಾಜ್ಯಗಳು ಏರ್ಪಟ್ಟು ಜನಗಳು ಪ್ರಜಾಪ್ರಭುತ್ವ ತತ್ವದಲ್ಲಿ ಅನುಭವ ಪಡೆಯಬೇಕೆಂಬ ಉದ್ದೇಶವಿಟ್ಟುಕೊಂಡು ಇದರಲ್ಲಿ ಬಹುಮಟ್ಟಿನ ಕಾರ್ಯ ಸಾಧನೆ ಮಾಡುತ್ತಾರೆಂದು ನಾವು ನೆನೆಸಿಕೊಂಡಿದ್ದೆವು. ಈ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಕೆ. ಪಟ್ಟಾಭಿರಾಮನ್ ಅವರು ಬಹಳ ತೀವ್ರತೆಯನ್ನಿಟ್ಟುಕೊಂಡಿದ್ದರು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವುದಕ್ಕೆ ಅವನ್ನು ಸ್ವತಂತ್ರವಾಗಿಮಾಡಿ ಅಲ್ಲಿ ಹೆಚ್ಚು ಜನಗಳಿಗೆ ಆಡಳಿತದ ಅನುಭವ ದೊರೆಯಬೇಕು ಮತ್ತು ದೇಶದ ಆಡಳಿತ ನಡೆಸುವುದರಲ್ಲಿ ಕೂಡ ಅವರಿಗೆ ಸಾಕಾದಷ್ಟು ಪರಿಶ್ರಮವಿರಬೇಕು ಮತ್ತು ಇದಕ್ಕಾಗಿ ಅವರಿಗೆ ಸರಿಯಾದ ತರಪೇತು ದೊರೆಯಬೇಕು, ಹೀಗೆ ತರಪೇತು ಆದವರು ಬರುವ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೆ ತಯಾರಾಗಿರಬೇಕು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೆವು. ಇದರಲ್ಲಿಯೂ ಕೂಡ ನಮ್ಮ ನಿರೀಕ್ಷಣೆ ವಿಫಲವಾಗಿದೆ.

ಮತ್ತೊಂದು ವಿಚಾರವೇನೆಂದರೆ ಈ ಸರ್ಕಾರ ಆಡಳಿತಕ್ಕೆ ಬಂದಕೂಡಲೇ ಯಥಾಪ್ರಕಾರ ಒಂದು ಸಮಿತಿಯನ್ನು ಮಾಡಿದರು. ಆ ಸಮಿತಿಗೆ 25 ಜನರನ್ನು ನೇಮಿಸಿದರು. ವೆಂಕಟಪ್ಪ ಸಮಿತಿಯವರು ಒಂದು ವರ್ಷ ಚರ್ಚೆಮಾಡಿ, ಒಂದು ವರದಿಯನ್ನು ಕಳುಹಿಸಿದರು. ಅದರ ಮೇಲೆ ಜಿಲ್ಲಾ ಬೋರ್ಡ್ ಆಕ್ಟ್ ಹಿಂದಿನ ಮೈಸೂರು ಸಂಸ್ಥಾನದ ಸಭೆಯಲ್ಲಿ ಪಾಸಾಯಿತು. ಅದನ್ನು 1952ನೇ ಇಸವಿ ಫೆಬ್ರವರಿಯಲ್ಲಿ ಜಾರಿಗೆಕೊಟ್ಟರು. ಅನಂತರ ಶಾಸನ ಸಭೆಯಿಂದ ಮಂಜೂರಾಗಿದ್ದ ಮತ್ತು ಜಾರಿಗೆಕೊಟ್ಟಿದ್ದಂಥ ಕಾನೂನನ್ನು ತಡೆಮಾಡಿ ಮತ್ತೊಂದು ಕಮಿಟಿಯನ್ನು ನೇಮಿಸಿದರು. ಅದನ್ನು ಜಾರಿಗೆ ಕೊಟ್ಟರೂ ಕೂಡ ಕಾರ್ಯಗತಮಾಡದೆ, ಅದು ಸರಿಯಲ್ಲವೆಂದು ಮತ್ತೊಂದು ಕಮಿಟಿಯನ್ನು ನೇಮಿಸಿದರು. ಇದರಲ್ಲಿ ಕಾಲಹರಣವಾಗುತ್ತಿದೆ ಮತ್ತು ಶಾಸನ ಬದ್ಧವಾದ ಕಾನೂನುಗಳನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ತಮ್ಮ ಮುಖ್ಯವಾಗಿ ಜನೋಪಯುಕ್ತವಾದ, ಜನಗಳಿಗೆ ಹಿತಕಾರಿಯಾದ ಮತ್ತು ಜನಗಳ ಸ್ಥಿತಿಗತಿಗಳನ್ನು ಅಭಿವೃದ್ಧಿ ಪಡಿಸತಕ್ಕ ಯೋಜನೆಗಳಲ್ಲೆಲ್ಲ ತಮ್ಮ ಕೈವಾಡ ತೋರಿಸುತ್ತಿದ್ದಾರೆ. ಇದಕ್ಕಾಗಿ ಚಂದ್ರಶೇಖರಯ್ಯ ಕಮಿಟಿ ಎಂದು ಮತ್ತೊಂದು ಕಮಿಟಿಯನ್ನು ಮಾಡಿದರು. ಇದರಲ್ಲಿ ಕೂಡ ಜಾತೀಯತೆಯನ್ನು ಉಪಯೋಗಿಸಿದ್ದಾರೆ. ಇನ್ನೊಂದು ಸಲ ಇನ್ನೊಬ್ಬರನ್ನು ಹಾಕುವುದಕ್ಕೆ ತಯಾರಾಗಿದ್ದಾರೆ. ಐದು ವರ್ಷಗಳ ಕಾಲ ಒಂದು ಕಾನೂನು ಜಾರಿಯಲ್ಲಿತ್ತು. ಮುಂದಿನ ಐದು ವರ್ಷಗಳಲ್ಲಿ ಕಾರ್ಯಗತವಾಗುವುದಕ್ಕೆ ಮುಂಚೆಯೇ ಆ ಕಾನೂನಿಗೆ ಮೂರು ಸಲ ತಿದ್ದುಪಡಿಗಳಾದುವು. ಅದಾಗಬೇಕಾದರೂ ಕೂಡ ನಾಚಿಕೆಗೇಡಿನಪರಿಸ್ಥಿತಿ. ಜಿಲ್ಲಾ ಬೋರ್ಡುಗಳಿಗೆ ಭೂಕಂದಾಯದಲ್ಲಿ ಶೇಕಡ $12\frac{1}{2}$ಯಂತೆ ಕೊಡಬೇಕೆಂದಿದ್ದುದನ್ನು ಶೇಕಡ $6\frac{1}{4}$ರಂತೆ ಕೊಡಬೇಕೆಂದು ಈ ಪ್ರತಿಗಾಮಿಸರಕಾರ ಕಾನೂನು ತಂದಿದೆ. ಜನಗಳ ದುರದೃಷ್ಟವೋ ಏನೋ ಎಂಥ ಸರ್ಕಾರವನ್ನು ಪಡೆದುಕೊಂಡಿದೆ ಎಂದು ಹೇಳಬೇಕಾಗಿಲ್ಲ. ಇದೊಂದೇ ಸಾಕು. ಇಷ್ಟಾದರೂ ಸಹ ಕಾನೂನನ್ನು ಜಾರಿಗೆ ಕೊಡುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಏರ್ಪಾಡು ಮಾಡಿಲ್ಲ. ಪಂಚಾಯಿತಿಗಳು ಸ್ವಾವಲಂಬಿಗಳಾಗಿರಬೇಕು, ಅವಕ್ಕೆ ಆಡಳಿತ ನಡೆಸುವುದಕ್ಕೆ ಕಷ್ಟ, ಅವುಗಳ ಸಹಾಯಕ್ಕಾಗಿ ಹಣವನ್ನು ಕೊಡುವುದಕ್ಕೆ ನೇರವಾದ ಸಂಬಂಧ ಕಲ್ಪಿಸಿಕೊಂಡು ಆಕ್ಟ್‌ನಲ್ಲಿ ಪಂಚಾಯಿತಿಗಳಿಗೆ ರೆವೆನ್ಯೂ ಕಂದಾಯದಲ್ಲಿ ಶೇಕಡ $12\frac{1}{2}$ಯಷ್ಟನ್ನು ಮೀಸಲಾಗಿಡಬೇಕು ಎಂದು ಮಾಡಿದರು. ಆದರೂ ಸಹ ಇವೊತ್ತಿನವರೆಗೂ ಯಾವ ಪಂಚಾಯಿತಿಗೂ ಕೊಟ್ಟಿಲ್ಲ. ಕಾನೂನಿಗೆ ವಿರುದ್ಧವಾಗಿ ಸರ್ಕಾರದವರು ನಡೆದು

ಕೊಳ್ಳುತ್ತಿದ್ದಾರೆ. ಸರ್ಕಾರದವರು ತಮ್ಮ ಮನ ಬಂದಂತೆ ಗ್ರಾಂಟುಗಳನ್ನು ಕೊಡುತ್ತಿದ್ದಾರೆ. ಕಾನೂನಿಗೂ ಕೂಡ ಬದ್ಧರಾಗಿಲ್ಲ. ಆಯಾ ಪಂಚಾಯಿತಿಗಳಿಗೆ ಶೇಕಡ 12½ಯಂತೆ ಕೊಡಬೇಕೆಂದು ಕಾನೂನು ಮಾಡಿದ್ದರೂ ಕೂಡ ಈ ಸರ್ಕಾರ ಆ ಹಣವನ್ನು ಒಂದು ಕಡೆ pool ಮಾಡಿಕೊಂಡು ಎಲ್ಲಿಗೆ ಕೊಡಬೇಕೆಂದು ಮನಸ್ಸು ಬರುತ್ತದೆಯೋ ಅಲ್ಲಿಗೆ ಕೊಡುವುದಕ್ಕೂ ಮತ್ತೊಂದು ಕಡೆಗೆ ತಡೆಹಿಡಿಯುವುದಕ್ಕೂ ಉಪಯೋಗಿಸಿಕೊಂಡಿದ್ದಾರೆ. ಎಲ್ಲಿಯವರೆಗೆ ಸರ್ಕಾರ ಈ ರೀತಿ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇಂಥ ಒಂದು ಕೆಲಸವನ್ನು ಮಾಡಿರುವುದರಿಂದ ನಾವು ಹೊರಗಡೆ ತಲೆತಗ್ಗಿಸಬೇಕಾಗಿದೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಯಾವ ರೀತಿ ನಮ್ಮ ಸರ್ಕಾರದವರು ವರ್ತಿಸುತ್ತಿದ್ದಾರೆಂಬುದನ್ನು ಹೇಳುತ್ತೇನೆ. ನಮ್ಮ ರಾಜ್ಯಾಂಗದ ಪ್ರಕಾರ ಪ್ರತಿಯೊಬ್ಬರಿಗೂ 14 ವರ್ಷ ವಯಸ್ಸಿನವರೆಗೂ ಕಡ್ಡಾಯವಾದ ವಿದ್ಯಾಭ್ಯಾಸ ಮಾಡಿಸಬೇಕು ಎಂದಿದೆ. ನಮ್ಮ ದೇಶದಲ್ಲಿ ಹಿಂದೆ ಕಡ್ಡಾಯ ಶಿಕ್ಷಣವಿತ್ತು. ಬೇಜವಾಬ್ದಾರಿ ಸರ್ಕಾರ ಎಂದು ಏನು ಹೇಳುತ್ತಿದ್ದರೋ ಆ ಕಾಲದಲ್ಲೇ ಒಂದು ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳಂತೆ ಹಿಂದಿನ ಮೈಸೂರಿನ 80 ತಾಲ್ಲೂಕುಗಳ ಪೈಕಿ 36 ತಾಲ್ಲೂಕುಗಳಲ್ಲಿ ಕಡ್ಡಾಯವಾದ, ನಿರ್ಬಂಧವಾದ, ಉಚಿತವಾದ ವಿದ್ಯಾಭ್ಯಾಸ ಪದ್ಧತಿ ಜಾರಿಯಲ್ಲಿತ್ತು. ಈ ಮಹನೀಯರು ಬಂದಮೇಲೆ ಅದನ್ನು ವಾಪಸು ತೆಗೆದುಕೊಂಡರು ಮತ್ತು ಅವರು ಇರುವಾಗ ಪ್ರತಿವರ್ಷವೂ, 1947ರವರೆಗೂ ವರ್ಷ ಒಂದಕ್ಕೆ 400 ಸ್ಕೂಲುಗಳಂತೆ ತಪ್ಪದೆ ಪ್ರಾರಂಭ ಮಾಡಿಕೊಂಡು ಬಂದರು. ಕೆಲವು ವೇಳೆಯಂತೂ 40-50 ಸ್ಕೂಲುಗಳನ್ನು ಜಾಸ್ತಿಯಾಗಿಯೇ ಕೊಟ್ಟಿದ್ದಾರೆ. ಇವರು ಬಂದ ತಕ್ಷಣ ಅದೂ ನಿಂತು ಹೋಯಿತು.

Sri H. K. VEERANNA GOWDH (Minister for Public Works).—It is not correct, Sir.

Sri B. HUTCHE GOWDA.—Not correct ಅಂದರೆ I want to be corrected Sir. ಇವರು ಅಧಿಕಾರಕ್ಕೆ ಬಂದ ಮಾರನೆಯ ವರ್ಷ 110 ಶಾಲೆಗಳನ್ನು ಕೊಟ್ಟರು ಅಲ್ಲಿಂದ ಎಲ್ಲಿಗೆ ಬಂತು ಎಂದರೆ 1954 ರಿಂದ ಒಂದು ಶಾಲೆಯನ್ನೂ ಕೊಟ್ಟಿಲ್ಲ. ಇದನ್ನು ಮಾನ್ಯ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಒಂದು ವರ್ಷಕ್ಕೆ ಒಂದು ಪ್ರಾಥಮಿಕ ಶಾಲೆಯನ್ನಾಗಲಿ, ಒಂದು ಮಾಧ್ಯಮಿಕ ಶಾಲೆಯನ್ನಾಗಲಿ ಸ್ಥಾಪನೆ ಮಾಡಲಿಲ್ಲವೆಂದು ನಾನು ಸವಾಲು ಹಾಕುತ್ತೇನೆ. ಅದಕ್ಕೆ ಜವಾಬು ಹೇಳಲಿ. ಇಲ್ಲ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಇವರು ಒಂದೇಒಂದು ಪ್ರಾಥಮಿಕ ಶಾಲೆಯನ್ನೂ ಕೊಟ್ಟಿಲ್ಲ. ವರ್ಷಕ್ಕೆ 400 ಶಾಲೆಗಳನ್ನು ಕೊಡುತ್ತಿದ್ದುದು ಈ ಸ್ಥಿತಿ ಗೆಇಳಿಯಿತು. ಹೀಗಿರುವಾಗ ಸುಮ್ಮನೆ ಬೇಕಾದಷ್ಟು ಹಣ ಖರ್ಚು ಮಾಡುತ್ತಾರೆಂದರೆ ಯಾರಿಗೋಸ್ಕರ ಖರ್ಚು ಮಾಡುತ್ತಿದ್ದಾರೆ? ದೇಶದಲ್ಲಿ ಓನಾಮ ಕಲಿಸುವುದಕ್ಕೆ ಮಾರ್ಗವಿಲ್ಲದೆ ಇರುವಾಗ, ದೇಶದಲ್ಲಿ ಒಂದೇ ಒಂದು ಶಾಲೆಯನ್ನು ಹೊಸದಾಗಿ ಪ್ರಾರಂಭ ಮಾಡದೆ ಇರುವಾಗ ಇವರು ಕಾಲೇಜುಗಳಿಗೆ, ಅಥವಾ ಇತರ ವಿಧವಾಗಿ ಬೇಕಾದಷ್ಟು ಖರ್ಚು ಮಾಡಿದರೆ ಅದರಿಂದ ಸಾಮಾನ್ಯ ಜನಗಳಿಗೆ ಏನು ಅನುಕೂಲ ಮಾಡಿಕೊಟ್ಟಂತೆ ಆಯಿತು ಎಂದು ಕೇಳುತ್ತೇನೆ. ಪ್ರತಿಯೊಬ್ಬರಿಗೂ ಕೂಡ ಯಾವ ಸೌಕರ್ಯ ಒದಗಬೇಕಾಗಿದ್ದರೂ ಕೆಳಮಟ್ಟದಿಂದ ಪ್ರಾರಂಭ ಮಾಡಿಕೊಂಡು ಮುಂದುವರಿಯಬೇಕು. Minimum needs ಒದಗಿಸಿಕೊಡಬೇಕೆಂಬುದೇ ಮೊದಲು ನಮ್ಮ ಒತ್ತಾಯ. ಯಾವ ಮನುಷ್ಯನಿಗೆ ಹೊಟ್ಟೆಗಿಲ್ಲವೋ ಅವನಿಗೆ ಅರ್ಧ ಹೊಟ್ಟೆಗಾದರೂ ಕೊಟ್ಟು ಮುಂದೆ ಕೆಲಸ ಮಾಡಬೇಕು. ಹೊಟ್ಟೆತುಂಬಿರುವವನಿಗೆ, ಅನುಕೂಲವಾಗಿರುವವನಿಗೆ ಇನ್ನೊಂದು ತುತ್ತು ಕೊಡಬೇಕು ಎನ್ನುವ ಪದ್ಧತಿಯನ್ನು ನಾವು ವಿರೋಧಿಸುತ್ತೇವೆ. ಈ ರೀತಿಯ ಆಡಳಿತ ನಡೆಸಿಕೊಂಡು ಬಂದಿದ್ದಾರೆ. ಇದರಲ್ಲಿ ನಾವು ಯಾವ ಸವಿನೆನಪು ಇಟ್ಟುಕೊಂಡು ವಾಪಸು ಹೋಗಿ ಪ್ರಜೆಗಳಿಗೆ ತಿಳಿಸಬೇಕು ಎನ್ನುವುದು ಅರ್ಥವಾಗಿಲ್ಲ. ಜನರನ್ನು ಮುಗ್ಧರನ್ನಾಗಿ ಮಾಡಿ ಅವರ ಓಟುಗಳನ್ನು ಗಳಿಸಿಕೊಂಡು ಆಡಳಿತ ನಡೆಸಿಕೊಂಡು ಹೋಗಬೇಕೆಂಬ ಉದ್ದೇಶ ಇವರಲ್ಲಿ ಇದೆಯೇ ಹೊರತು ಮತ್ತೇನೂ ಇಲ್ಲ. ಇವರು ಮಾಡಿದ ವಿದ್ಯಾಭ್ಯಾಸ ಸುಧಾರಣಾ ಸಮಿತಿಗೆ ಸಾವಿರಾರು ರೂಪಾಯಿ ಖರ್ಚಾಗಿ ಹೋಯಿತು. ಅವರ ಸ್ಕೀಮಿಗೂ, ನಾವು ಹೇಳುತ್ತಿದ್ದ ಸ್ಕೀಮಿಗೂ ವ್ಯತ್ಯಾಸವಿದೆ. ವರ್ಷ ಒಂದಕ್ಕೆ 40 ಲಕ್ಷ ರೂಪಾಯಿ ಜಾಸ್ತಿಯಾಗಿ ಕೊಡುತ್ತೇವೆಂದು ಹೇಳುತ್ತಾರೆ. ನಮ್ಮದು ಏನೆಂದರೆ ವರ್ಷ ಒಂದಕ್ಕೆ 400 ಸ್ಕೂಲುಗಳನ್ನು ಹೆಚ್ಚಿಗೆ ಕೊಡಿ ಎಂಬುದು. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆಗೆ 600 ರೂಪಾಯಿಗಳ ಖರ್ಚನ್ನು ಇಟ್ಟುಕೊಂಡರೂ ಕೂಡ ಹಿಂದಿನ ಮೈಸೂರಿನಲ್ಲಿ 3,000 ಸ್ಕೂಲುಗಳಾದರೆ ಪ್ರತಿಯೊಬ್ಬರಿಗೂ ಶಾಲೆಯ ಸೌಕರ್ಯವನ್ನು ಕೊಟ್ಟಂತಾಗುತ್ತಿತ್ತು. ಈ ಮೂರು ಸಾವಿರ ಶಾಲೆಗಳಿಗೆ ಇವರು ಕೊಡತಕ್ಕ 40 ಲಕ್ಷದಲ್ಲಿ ಅರ್ಧದಷ್ಟನ್ನು ಮಾತ್ರ ಖರ್ಚುಮಾಡಬೇಕಾಗಿತ್ತು. ಹಾಗೆ ಮಾಡಿ ಅನಂತರ ನೀವು ಬೇಕಾದ ಅನುಕೂಲ ಬೇರೆಕಡೆ ಮಾಡಿಕೊಡಿ ಎಂದು ಹೇಳುತ್ತಿದ್ದೆವು.

40 ಲಕ್ಷ ಹೆಚ್ಚು ಮಾಡುವುದರಲ್ಲಿ ನಮಗೆ 20 ಲಕ್ಷ ಕೊಟ್ಟರೆ 3 ಸಾವಿರ ಸ್ಕೂಲುಗಳು ಸ್ಥಾಪನೆಯಾಗುತ್ತವೆ. ದೇಶದಲ್ಲಿರತಕ್ಕ ಪ್ರತಿಯೊಬ್ಬನಿಗೂ ಕೂಡ ಓನಾಮ ಕಲಿಸುವುದಕ್ಕೆ ಸಾಧ್ಯವಾಗುತ್ತದೆ. ಮುಂದಿನ ವಿಚಾರ ನೋಡಿಕೊಳ್ಳೋಣ. ಅದನ್ನು ಬಿಟ್ಟು 2 ಕೋಟಿಯಿಂದ 3 ಕೋಟಿ ಮಾಡಿದ್ದೇವೆ ಎಂದರೆ ನಾಚಿಕೆಗೇಡುತನ. ಯಾವ ಸುಖ ಸಾಮಾನ್ಯ ಮನುಷ್ಯನಿಗೆ ದೊರತೀತು ಎನ್ನುವುದನ್ನು ಅನುಭವ ಪೂರ್ವಕವಾಗಿ ಯಾರಾದರೂ ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಆಮೇಲೆ ವಿದ್ಯಾದಾನ, ಭೂದಾನ ಷುರುವಾಯಿತು. ಒಬ್ಬೊಬ್ಬ ಮಿನಿಸ್ಟರು ಒಂದೊಂದು ಡಿಸ್ಟ್ರಿಕ್ಟ್‌ಗೆ ಹೋದರು. ಎಷ್ಟು ಲಕ್ಷ ರೂಪಾಯಿ ಖರ್ಚಾಯಿತೋ ಏನೋ ದೇವರೇ ಬಲ್ಲ. ಎಷ್ಟು ಜನ ಅಧಿಕಾರಿಗಳಿಗೆ ಕೆಲಸ ಕೇಡೋ ಏನೋ! ಅದು ಎಷ್ಟು ದಿವಸ? ಎರಡು ದಿನ. ಪ್ರತಿಯೊಂದು ಊರಿನಲ್ಲೂ ಆರಂಭಿಸಿದರು. ಅವರಲ್ಲಿ ತೆಗೆದುಕೊಂಡ ಭೂಮಿಗೆ ಕಂದಾಯ ಮಾಲೀಕರೂ ಕೊಟ್ಟಿಲ್ಲ ಸರ್ಕಾರದವರೂ ಕೊಡುವ ಹಾಗಿಲ್ಲ. ಅವರು ಸಾಗು ಮಾಡುವ ಹಾಗಿಲ್ಲ. ಹೀಗೆ ಪಾಳುಬಿದ್ದು ಅವರ ಗತಿ ಮುಂದೆ ಏನು ಎಂಬುದು ಗೊತ್ತಿಲ್ಲ. ಇದರ ಮೇಲೆ ಕಮಿಟಿಗಳ ಮೇಲೆ ಕಮಿಟಿಗಳನ್ನು ಮಾಡಿದರು. ಪ್ರಾಥಮಿಕ ಶಾಲೆಗೆ ಒಂದು ಕಮಿಟಿ, ಸೆಕೆಂಡರಿ ಸ್ಟೇಜಿಗೆ ಒಂದು ಕಮಿಟಿ, ಹೀಗೆಲ್ಲಾ ಆಗಿ ಕೊನೆಗೆ ಎಲ್ಲಿಗೆ ಬಂತು ಎಂದರೆ 4 ತಿಂಗಳು ಒಂದು ವರ್ಷದಲ್ಲಿ ⅓ ಭಾಗ ಕಾಲ ಖಾಯಂರಜಾ, ಇನ್ನು ಎರಡು ತಿಂಗಳುಗಳ ದಿನ ಬಿಟ್ಟು ದಿನ ರಜಾ,

(ಶ್ರೀ ಬಿ. ಹುಚ್ಚೇಗೌಡ.)

ಅಂತೂ ಇಂತೂ ವರ್ಷಕ್ಕೆ 8 ತಿಂಗಳ ರಜಾ ಆಯಿತು. ನಮ್ಮ ಮಕ್ಕಳು ಕೆಟ್ಟು ಹೋಗುವ ಪರಿಸ್ಥಿತಿಗೆ ಬಂದಿದ್ದಾರೆ. ಇಂಥಾ ಶೋಚನೀಯ ಸ್ಥಿತಿ ಯಾವ ದೇಶದಲ್ಲೂ ಬಂದಿಲ್ಲ. ಮೈಸೂರನ್ನು ಬಿಟ್ಟು ಎಂದು ನನಗೆನ್ನಿಸುತ್ತದೆ. ನಮಗಿಂತ ಕೆಟ್ಟಿದ್ದಾರೆ ಎರಡು ಯಾರಾದರೂ ಏನಾದರೂ ತೋರಿಸಿಕೊಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ನಾನು ಟೀಕೆಮಾಡಿದರೆ ವಾಸ್ತವಾಂಶವಲ್ಲ ಎಂದು ಹೇಳುತ್ತಾರೆ. ಸ್ಕೂಲು ಕೊಡದೇ ಇರುವಾಗ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದನ್ನು ಪುಸ್ತಕದಲ್ಲ ತೋರಿಸಿದರೆ ಒಪ್ಪಿಕೋಳ್ಳುತ್ತೇನೆ.

ಇನ್ನೊಂದು ವಿಷಯ, ಸ್ವಾಮಿ. ಮಹಾತ್ಮ ಗಾಂಧಿಯವರ ಶಿಷ್ಯರಾಗಿ ಪಾನನಿರೋಧ ಜಾರಿಗೆ ತರಬೇಕೆಂದು ಹೇಳುತ್ತಾರೆ. ಇಲ್ಲಿ ಜಾರಿಗೆ ತಂದಿರುವುದನ್ನು ನೋಡಿದರೆ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎನ್ನುವ ಹಾಗೆ ಮಾಡಿದ್ದೀರಿ, ಮದರಾಸು, ಬೊಂಬಾಯಿನಲ್ಲಿ ಹೇಗೆ ಇದೆ ಎಂಬುದನ್ನು ತಾವು ನೋಡುತ್ತಿಲ್ಲ, ಡೆಲ್ಲಿ ನೋಡುತ್ತಾ ಹೇಳುತ್ತಿದ್ದೀರಿ. ಮದರಾಸಿನಲ್ಲಿನ 18-20 ಕೋಟಿ ರೂಪಾಯಿಗಳ ಉತ್ಪನ್ನವಾಗುತ್ತಿದ್ದುದನ್ನು ಬಿಟ್ಟು ಬಿಡಬಹುದು. ಬೊಂಬಾಯಿ ಪ್ರಾಂತದಲ್ಲಿ ಪೂರ್ಣ ಜಾರಿಗೆ ತರಬಹುದು, ಇವರು ಮಾತ್ರ ಜಾರಿಗೆ ತರುವುದಕ್ಕಾಗುವುದಿಲ್ಲ ಎಂದರೆ, ಏನು ನೋಡುತ್ತಾ ಇದ್ದೀರಿ? ಕಣ್ಣು ಮುಚ್ಚಿಕೊಂಡು ನೋಡುತ್ತಾ ಇದ್ದೀರಿ ಎಂದು ಹೇಳುತ್ತೇನೆ. ನೋಡುತ್ತಾ ಇರುವುದು ಯಾವುದು! ಡೆಲ್ಲಿಯಲ್ಲ ಹೇಗೆ ಇದೆ ಎನ್ನುವುದನ್ನು. ಇವರಿಗೆ ಏನು ಆಗಬೇಕಾಗಿದೆ ಎಂದರೆ ದೇಶದಲ್ಲಿ ಬೇರೆಯವರು ಕುಡಿಯಬಾರದು; ಇವರು ಮಾತ್ರ ಬೆಂಗಳೂರಿನಲ್ಲಿ ಎರಡು ಹೊತ್ತು ಕಂಟೋನ್ಮೆಂಟಿಗೆ ಹೋಗಿ ಕುಡಿದು ಮಜಾ ಮಾಡಬೇಕು. ನಾವು ಕುಡಿಯ ಬೇಕಾಗಿದ್ದರೆ ಇಲ್ಲಿಗೆ ಬಂದು ದುಡ್ಡು ಖರ್ಚುಮಾಡಿಕೊಂಡು ಹೋಗಬೇಕು: ಇವರುಗಳಿಗೆ ರಾತ್ರಿ ಎಲ್ಲಾ ಸಮಾರಂಭ ನಡೆಯುವುದಕ್ಕೆ ಬೆಂಗಳೂರಿನಲ್ಲಿ ಅವಕಾಶವಿಟ್ಟುಕೊಂಡಿದ್ದಾರೆ ಎಂದು ಹೇಳುತ್ತೇನೆ.

*ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ಚರ್ಚೆಗೆ ಉತ್ತರಕೊಡುತ್ತಿಲ್ಲ. ಅವರು ಹೇಳಿದ್ದು ಸರಿಯಲ್ಲ ಎಂದು ಹೇಳಿದೆನಲ್ಲಾ ಅದಕ್ಕೆ ಉತ್ತರ ಹೇಳುತ್ತಾ ಇದ್ದೇನೆ. ಕಾಂಗ್ರೆಸ್ ಆಡಳಿತ ವನ್ನು ಅವರು ಟೀಕೆ ಮಾಡಿ ಹತ್ತು ವರ್ಷದಲ್ಲಿ ಏನೂ ಮಾಡಿಲ್ಲ ಎಂದು ಹೇಳಿದರು. ಇದರಿಂದ ಅವರೇ ತಿಳಿದುಕೊಳ್ಳಬಹುದು. 1947-48ರಲ್ಲಿ 8,814 ಪ್ರೈಮರಿ ಸ್ಕೂಲುಗಳು ಇದ್ದವು, 1955-56ರಲ್ಲಿ 10,758 ಪ್ರೈಮರಿ ಸ್ಕೂಲುಗಳು ಆಗಿವೆ. ... ಮಿಡ್ಲ್‌ಸ್ಕೂಲುಗಳು 617 ಇದ್ದವು, ಈಗ 1,563 ಆಗಿವೆ. ಹೈಸ್ಕೂಲುಗಳು ಆಗ 127 ಇದ್ದವು, ಈಗ 261 ಆಗಿವೆ.

ಶ್ರೀ ಬಿ. ಹುಚ್ಚೇಗೌಡ.—ಎರಡುಸಾವಿರ ಪ್ರೈಮರಿ ಸ್ಕೂಲುಗಳನ್ನು ಜಾಸ್ತಿಮಾಡಿದ್ದೇವೆ ಎಂದು ಹೇಳಿದರು. ಹಿಂದಿನ ಸರ್ಕಾರದವರು ಹೇಳುತ್ತಾ ಇದ್ದಂತೆ ವರ್ಷಕ್ಕೆ 400 ಸ್ಕೂಲುಗಳಂತೆ ಪ್ರಾರಂಭವಾಡಿದ್ದರೆ ಎಷ್ಟು ಸ್ಕೂಲುಗಳನ್ನು ಕೊಡಬೇಕಾಗಿತ್ತು, ಸ್ವಾಮಿ! ಒಂದು ಯೋಜನೆ ಹಾಕಿಕೊಂಡು ಹಾಗೆ ನಡೆಯುವುದಕ್ಕೆ ಇವರಿಗೆ ಹಣ ಇಲ್ಲ. ಅದರಿಂದ ನಾವು ಇವತ್ತು ಕಷ್ಟ ಅನುಭವಿಸುತ್ತಾ ಇದ್ದೇವೆ. ಇವತ್ತು ಹಿಂದಿನ ಬೇಜವಾಬ್ದಾರಿ ಸರ್ಕಾರಇದ್ದರೆ ಒಳ್ಳೆಯದಾಗಿತ್ತು ಎಂದು ಎನ್ನಿಸುತ್ತದೆ. ಆ ಸರ್ಕಾರದಿಂದ ದೇಶಕ್ಕೆ ಎಷ್ಟು ಉಪಕಾರವಾಯಿತು ಎಂಬುದನ್ನು ಅವರು ನೆನಪಿಗೆ ತೆಗೆದುಕೊಳ್ಳಬೇಕಾಗಿದೆ. 20 ಕೋಟಿ ರೂಪಾಯಿ ಖರ್ಚುಮಾಡುವಾಗ 20 ಲಕ್ಷ ರೂಪಾಯಿ ಕೊಟ್ಟರೆ ಎಲ್ಲಾ ಕಡೆಯಲ್ಲೂ ಸ್ಕೂಲುಗಳಾಗುತ್ತವೆ ಎಂದು ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ತಾವು ಈ ವಾದ ಮಾಡಿರಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ನಾನು ಆಗಲೂ ಕೂಡ ಕಡ್ಡಾಯ ವಿದ್ಯಾಭ್ಯಾಸ ಕೊಡಬೇಕೆಂದು ಒತ್ತಾಯ ಮಾಡಿದ್ದೇನೆ. ಈ ಸರ್ಕಾರ ಅದನ್ನು ತಿರುಗು ಮುರುಗುಮಾಡಿದೆ. ಅವರಿಗೆ ಬೇಕಾದ ಹಾಗೆ ಮಾಡಿಕೊಳ್ಳಲಿ ನಮಗೆ ಬೇಕಾಗಿರುವುದು ಏನೋ ಅದನ್ನು ಬಿಟ್ಟು, ನಿಮ್ಮ ಸುಖವನ್ನು ನೀವು ನೋಡಿಕೊಳ್ಳುತ್ತಾ ಇದ್ದೀರಿ. ಜನಗಳಿಗೆ ಬೇಕಾದ ಸೌಲಭ್ಯಗಳನ್ನು ಕಡಿಮೆಮಾಡುವುದಕ್ಕೆ ನೀವೇಕೆ ಬರಬೇಕಾಗಿತ್ತು?. ಈ ರೀತಿ ಜನಗಳಿಗೆ ಬೇಜಾರು ಹುಟ್ಟಿಸಿದ್ದೀರಿ. ಇವತ್ತಿನ ದಿವಸ ನೀವು ಜನರ ಕಷ್ಟಕಾರ್ಪಣ್ಯವನ್ನು ನೋಡುತ್ತಿಲ್ಲ. ಹೀಗೆ ಜಮೀನು ಸುಧಾರಣೆಯಾಗಲಿ, ವಿದ್ಯಾಭ್ಯಾಸ ಸುಧಾರಣೆಯಾಗಲಿ, ಸ್ಥಳೀಯ ಸಂಸ್ಥೆಗಳ ಸುಧಾರಣೆಯಾಗಲಿ, ಪಾನನಿರೋಧವಾಗಲಿ ಯಾವುದರಲ್ಲಾದರೂ ಕಾರ್ಯಸಾಧನೆಮಾಡಿ ಕೃತಕೃತ್ಯರಾಗಿದ್ದಾರೆ ಎಂದು ಎದೆಮುಟ್ಟಿಕೊಂಡು ಹೇಳುವುದಕ್ಕೆ ಅವರಿಗೆ ಸಾಧ್ಯವೇ ಎನ್ನುವುದನ್ನು ಇಲ್ಲಿಯವರಗೂ ಪ್ರಸ್ತಾಪಮಾಡಿಕೊಂಡು ಬಂದಿದ್ದೇನೆ. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಗ್ರಾಮಾಂತರಗಳಲ್ಲಿ ವಾಸ ಮಾಡತಕ್ಕ ಜನ ಇದ್ದಾರೆ. ಅವರಿಗೆ ತಮ್ಮ ಜೀವನದಲ್ಲಿ ಸುಖಮಯದ ಜೀವನವನ್ನು ಕನಸಿನಲ್ಲಿ ಕಾಣುವುದೂ ಸಾಧ್ಯವಿಲ್ಲವಾಗಿದೆ. ಎಲ್ಲರೂ ನಿರಾಶೆಹೊಂದಿದ್ದಾರೆ. ಅವರಿಗೆ ಮುಂದೆ ಬರುವುದಕ್ಕೆ ಅವಕಾಶವಿದೆ ಎಂಬ ಒಂದು ಆಶೆಯನ್ನು ಆಕಾಂಕ್ಷೆಯನ್ನು ಸರ್ಕಾರ ಕೊಡುತ್ತದೆ ಎಂದು ನಾವು ಭಾವನೆ ಮಾಡಿದ್ದೆವು. ಈ ವರ್ಷದಬಡ್ಜೆಟ್‌ನಲ್ಲಿ ಗ್ರಾಮಾಭಿವೃದ್ಧಿಗೆ 108 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎನ್.ಇ.ಎಸ್ ಬ್ಲಾಕ್‌ಗೆ ಕೊಟ್ಟಿರುವುದೂ ಸೇರಿ 380 ಲಕ್ಷ ರೂಪಾಯಿ ಆಯಿತು. ಇದನ್ನು ಡಿಸ್ಟ್ರಿಕ್ಟ್ ವಾರಾಗಿ ಹಂಚಿದರೆ 19 ಡಿಸ್ಟ್ರಿಕ್ಟ್‌ನಲ್ಲಿ ಒಂದೊಂದು ಡಿಸ್ಟ್ರಿಕ್ಟಿಗೆ ಸುಮಾರು 16 ಲಕ್ಷ ರೂಪಾಯಿ ಬರುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪನ್ನ ಒಂದು-ಎರಡುಲಕ್ಷ ರೂಪಾಯಿ ಇರಬಹುದು. ಅದು ಎಷ್ಟು ಕಾರ್ಯಸಾಧನೆಮಾಡಿದೆ, ಇದು ಎಷ್ಟು ಕಾರ್ಯಸಾಧನೆ ಮಾಡಿದೆ ಎಂಬುದನ್ನು ನೋಡಿದ್ದೇ ಆದರೆ ಬಹಳ ಆಶ್ಚರ್ಯವಾಗುತ್ತದೆ. ಒಂದು ಎನ್.ಇ.ಎಸ್. ಬ್ಲಾಕ್‌ಗೆ ಎರಡು ಜೀಪುಗಳನ್ನು ಕೊಟ್ಟಿದ್ದಾರೆ. ತಾಲ್ಲೂಕು ಅಮಲ್ದಾರರಿಗೆ ಸೌಕರ್ಯವಿಲ್ಲದೆ ಇವತ್ತು ಸಂಚಾರ ಮಾಡಬೇಕಾದವರು ಎಂಟುದಿವಸದ ಮೇಲೆ ಹೋಗೋಣ ಎನ್ನುವ ಸ್ಥಿತಿಯಲ್ಲಿರುತ್ತಾರೆ. ಐದು ಮೈಲಿ ಒಳಗೆ ತಿರುಗಾಡುವುದಕ್ಕೆ ಅವರಿಗೆ ಎರಡು ಜೀಪುಗಳು. ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರು, ಎಷ್ಟೋ ಕಷ್ಟಪಟ್ಟು ಕೆಲಸಮಾಡುತ್ತಾನೆ. ಅವನಿಗೆ 40 ರೂಪಾಯಿ ಸಂಬಳ. ಹತ್ತು ಗ್ರಾಮಗಳಿಗೆ ಒಬ್ಬ

10 A.M.

ಗ್ರಾಮ ಸುಧಾರಕ, ಅವನಿಗೆ 100 ರೂಪಾಯಿ ಸಂಬಳ. ಆದರೆ ಅವನು ಕಾರ್ಯಸಾಧನೆ ಮಾಡುವುದೇನು? ಹಣ ಮಾತ್ರ ಖರ್ಚಾಗುತ್ತದೆ. ಈ ಸರ್ಕಾರ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಚಾರಕ್ಕಾಗಿ ಐದು ಸಾವಿರ ರೂಪಾಯಿ ಕೊಟ್ಟಿದೆ. ಹೀಗೆ ಹಣ ಖರ್ಚುಮಾಡುತ್ತಿದ್ದರೆ ಬಡ ಬೋರೇಗೌಡ ದಿವಸ ದಿವಸಕ್ಕೆ ನಶಿಸಿಹೋಗುತ್ತಾನೆ. ಹೀಗಾದರೆ ದೇಶದ

ಜನರ ವಿದ್ಯಾಭ್ಯಾಸ, ನೀತಿಯಾಮಟ್ಟ ಮತ್ತು ಇತರ ಯಾವ ಸೌಕರ್ಯಗಳೇ ಆಗಲಿ ಹೇಗೆ ಹೆಚ್ಚೀತು? ಹಿಂದೆಷ್ಟು ಸ್ಕೂಲುಗಳನ್ನು ಕೊಟ್ಟಿದೆ, ಆದಾಯ ಹೆಚ್ಚಿರುವ ಈ ಸಂದರ್ಭದಲ್ಲಿ ಎಷ್ಟು ಕೊಡಬಹುದು ಎಂಬುದನ್ನು ಯೋಚನೆಮಾಡಿ, ಸರಿಯಾದ ವ್ಯವಸ್ಥೆಯಿಲ್ಲದೆ ಜನರಿಗೆ ನಿರಾಶೆಯುಂಟಾಗಿದೆ, ಮುಖ್ಯವಾಗಿ ಈ ಸಭೆ ಬಿಟ್ಟು ಹೋಗಬೇಕಾದರೆ ಒಂದೂ ಕೂಡ ಸಾಧನೆ ಮಾಡಿಲ್ಲವೆಂದು ತುಂಬ ನಿರಾಶೆಯಿಂದ ಹೋಗಬೇಕಾಗಿದೆ. ಪ್ರತಿ ಗ್ರಾಮಕ್ಕೂ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಒಂದು ಬಾವಿ ತೆಗೆಸಲು ಸಾಧ್ಯವಾಗಿಲ್ಲ, ಒಂದು ಸ್ಕೂಲು ಕೊಡುವುದಕ್ಕಾಗಿಲ್ಲ, ರೈತರಿಗೆ ಅತ್ಯಾವಶ್ಯಕವಾದ ಭೂ ಸುಧಾರಣೆ ಹತ್ತು ವರ್ಷಗಳಿಂದ ಸಾಧ್ಯವಾಗಿಲ್ಲ, ಕುಡಿತ ನಿಲ್ಲಿಸುವುದಕ್ಕಾಗಲಿಲ್ಲ, ಮುಖ್ಯವಾದ ವಿಚಾರಗಳಕಡೆ ಯಾವುದಕ್ಕೂ ಸರಿಯಾದ ಗಮನ ಕೊಡಲಾಗಲಿಲ್ಲ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

Mr. **SPEAKER**.—The House will now rise for lunch and meet at 10-30 A.M.

The House adjourned for Lunch at Two Minutes past Ten of the Clock and reassembled at Thirty-three Minutes past Ten of the Clock.

[Mr. SPEAKER in the Chair.]

*Sri M. **PALANIYAPPAN** (Ulsoor).—Mr. Speaker, Sir, at the outset, since I am an outgoing member, I should thank the Chair as well as my other friends who have been with me all these years in carrying out the work of this Assembly smoothly. I will be failing in my duty if I do not thank the then Government and also the present Government for having done so many good things to my constituency. For the past five years, I, as the representative of my constituency in particular and as a member of this Assembly, have been doing my best to satisfy the needs of the people as well as my voters.

Now Sir, it is not a final budget on which we have been asked to speak. There are several points on which I want to give out my opinion. After the formation of New Karnataka, a new Cabinet has been formed—a Cabinet which has proved beyond doubt, I should say, its inefficiency because as we could see in most of the Government offices papers do not move quickly and any petition sent to Government or to the officers are made to wait for a number of years. This kind of slackness in the administration, I should say, is due to the inefficient management of the Government.

I should like to say one more thing. Though this beautiful building—Vidhana Soudha—was completed within a very short period of four years, the present Cabinet has not removed the earth near the building. The whole building is covered with dust. A separate section of the Horticultural Department had been created to raise a garden in the surroundings, but nothing has come out till today. Although since November 1st the new Cabinet has come into existence, the central dome work is still moving with a snail's pace. My friend Sri V. M. Mascarenhas has stated that when Sri K. Hanumathaiya was in power, the same Chief Engineer said that he would complete the pavilion in the Stadium within two months. I do not think the Chief Minister or the concerned Minister is taking any interest in this public building. The Government was interested in printing a spiteful report about a building which has been constructed in record time, just to show to the world that the man who initiated this work has squandered public money, has not acted in accordance with public sentiment in spending the Government money. But as you are aware, Sir, the people in the country are aware whether this building is an extravagant one or whether there was no necessity for constructing such a palatial building to house the Government Secretariat or this august House. We are all aware that the necessity was there and the need was keenly felt. In order to mark the dignity of the House and the tradition of the Indian culture and art, it has been designed in such a manner that we see today. Sir, the Report that is given to us says: that it should be strictly confidential.

I have myself heard many people saying this. Possibly the present Chief Minister thought that the man who initiated the herculean task of constructing Vidhana Soudha will never come into power again. But today

(SRI M. PALANIYAPPAN)

God has willed that he should be successful in the recent elections and therefore he would compete with the present Chief Minister for leadership of the party. Therefore the publication of the Vidhana Soudha Report has been so timed as to throw mud on him.

I may bring to your notice, Sir, that Sri M. Narasimhaiah, one of the Committee Members and some other officers were called for Tea at the Architect's Office. On that occasion this gentleman spoke in appreciative terms of the execution of the work. He showered praise on those who were associated with the work. But after Sri Hanumanthaiya gave up his office, we see that in the Report he has taken an entirely different view. What is it due to? Am I to understand that the Chief Minister called Sri M. Narasimhiah to his office and tutored him to write this kind of report? Otherwise, why should a man who was all praise for this building, who was highly appreciative of its execution, a man who gave a glorious certificate to it, suddenly turn round and be a party to write a report that is before us? Therefore I have to come to the conclusion that he has been completely tutored by the Cabinet.

SRI T. MARIAPPA (Minister for Finance).—I take strong objection to the way in which this thing is being put, Sir. I rise on a point of order as to whether the member can make an allegation that the Chief Minister tutored someone?

MR. SPEAKER.—I would inform the Hon'ble Member that it is not proper to make allegations against persons who cannot defend themselves here in this House. One should be very careful in this respect. In the heat of the debate such reckless remarks should not be made. Hon'ble Members should remember that they should try to restrain themselves in making remarks against persons who cannot come to this House and defend themselves.

SRI M. PALANIYAPPAN.—I was just saying that the Chief Minister should have influenced the members of this Committee, because some members who had paid glowing tributes to this building, made quite different remarks afterwards.

(*Mr. Speaker rose*).

SRI M. PALANIYAPPAN.—I am prepared to withdraw my remarks, Sir.

MR. SPEAKER.—The Hon'ble Member will resume his seat. I am glad the Hon'ble Member is willing to withdraw his remarks. I am not talking about the Chief Minister at all, because the Chief Minister is sitting in this House and can defend himself. I am speaking about the members of the Committee who cannot come to this House and defend themselves. It is one thing to say that the Chief Minister has influenced the members of the Committee and it is another to infer that the members of the Committee have been influenced and are led away by the Chief Minister. I took objection so far as the latter statement is concerned. I do not take objection to the first portion, that is, that the Chief Minister might have influenced the members of the Committee. The Chief Minister is here and can take care of himself.

SRI M. PALANIYAPPAN.—I submit to the ruling of the Chair. If, as alleged, public moneys were squandered or if there have been misappropriations or mismanagement of funds, let the Government come into the open and take action against those responsible. As a representative of the people, I am also responsible for any of the taxes that the people have paid. If that money is misappropriated by anyone, may it be the Chief Minister or any other individual, we must take serious cognizance of it. But if the dispute is over matters of taste, it is a different thing. Each man has his own taste; one may like the American type of construction and another the Indian type. But if Indian art and architecture is to be adequately represented, naturally this type of construction is essential.

We hear today an allegation that such a huge building has been constructed instead of mere Legislative Council and Assembly Halls. It is true that but for this building, today the capital city

would not have been Bangalore. But for the foresight of the then Chief Minister, we would not have had the capital city in Bangalore, a place which would house all the Secretariat offices.

The Committee's Report is completely one-sided and spiteful. It does not give a word of thanks to the many officers who worked day and night to execute the building. I have myself seen many times, being a Bangalorean, that the officers worked even on Sundays and during dead of night. A building of this type has been completed within three years. This fact has not found a place in the Report. You can compare this building with other buildings in Mysore State. The Mysore Palace took fourteen years to be completed. Work on another palace went on for eighteen years. A building of this magnitude took only two or three years. How much of time would have been taken, just to work out the designs and models! A major portion of the Report contains misquotations and mis-statements. Most of the officers were compelled to give one version or the other before the Committee. Now the officers are afraid to defend their stand, because Government would take action against them. In order to safeguard their positions, they are keeping quiet. This is the way in which impartiality is being observed.

There is another point, Sir. The Committee's Report should have come to us first. As I understand, the Committee was initiated by the then Chief Minister, because a reference was made in the Estimates Committee, headed by Sri Nagiah Reddy. He said that proper accounts had not been maintained and therefore a Committee should be constituted to go into it. It was the report of the Estimates Committee that was responsible for the constitution of the Committee and therefore the Report should have been circulated to the members of the Legislature first. On the contrary, the Report has been sent to the Press first and soon after that the Director gives instructions to the press to print it. After all, the sessions were due to begin shortly and Government could have waited for one or two days more, and presented it to the House and then allowed it to be discussed. But they did all this, because they thought that this man would be completely ousted out of power. The Government should now inform the House whether the Central Government has given their opinion about the Report. I for one am prepared to look eye to eye with the Government, if there has been mis-handling or misappropriations of public unds. Whydid they not take action against those responsible, within these three or four months when the Report was before Government? What is the idea of the Government? Is it simply to make the public to know that there is a big scandal about it? By publishing it this way the Government has tried to stab the man at the back. That is about the Vidhana Soudha.

Now, coming to some other points, I would like to say about the appointment of the Chairman of the Land Mortgage Bank. Sri R. Anantaraman resigned the Chairmanship because he wanted to contest the elections. Thinking that it was an office of profit he chose to resign to contest the elections. Because he had resigned they have entrusted that work to an officer of the State. But the moment the elections were over, he has been reappointed. What is the idea of this? When a man has resigned for a certain purpose, what is the fun of appointing him again to the place when he does not want this place? This clearly shows that only a few are being favoured by this Government.

There is a great public agitation against the posting of a male doctor to the Vani Vilas Hospital. The posting of a male doctor is the first of its kind. The doctor who has been posted to the Vani Vilas Hospital is an F.R.C.S. in Gynæcology who is asked to look to women's diseases and pregnant women. It was not the convention in Mysore to post male doctors to this hospital.

Sri S. S. KOLKEBAIL (Bramhawar).—We are in new Mysore.

Sri M. PALANIYAPPAN.—So far as the Bangalore City is concerned, it is a convention that only lady doctors will be

(SRI M. PALANIYAPPAN.)
appointed for these women's hospitals. But it is a new idea that the Government has contemplated to post a male doctor for which already there is public agitation which the Government have ignored and have not cared to look into.

The inefficiency of the department is on the increase in that the L.M.P. doctors have waited on a deputation to the Government and they have been pleased to state that new scales of pay would be given as in other parts. Since January they are expecting for the orders. But they have not received any final orders in the matter.

Sri T. MARIAPPA.—My friend is entirely mistaken. In fact the L.M.P. doctors have secured the revised pay scales and they are satisfied.

Sri M. PALANIYAPPAN.—They have not received any increase of pay till now.

Sri T. MARIAPPA.—It is up to the departmental Head to prepare the allocation statement and draw their pay. Kindly refer to the Government Order issued in January 1957.

Mr. SPEAKER.—I am not referring to what has just happened. Hon'ble Member will just remember that I requested the members to be as brief as possible. I find they have not been so and yesterday was a gala day for those who spoke. But, today I do not think so much time could be given. Still I do not want to stifle the debate. Already the Hon'ble Member has taken about 25 minutes. It is time he finishes his speech. He must have consideration for his own speech and also for other speeches. I request the member to finish his speech as early as possible.

Sri M. PALANIYAPPAN.—I shall now refer about the water supply. Sri V. M. Mascarenhas has spoken yesterday about it. It is a pressing need and an urgent matter. We have been repeatedly requesting the Government for the last five or six years for a comprehensive scheme of water supply for the Civil Station Distribution main. But nothing has been done. I do not know whether they have any programme at all and I expect a reply for this.

With regard to the arrack and toddy shops at Seppings road in the Civil Station, I have already made it clear that there are numerous complaints and it has become a nuisance for the people who live there. In spite of repeated requests the Government have not cared to look into the matter. To my interpellations they have stated that they have not received any complaints. If only they go to the police stations having jurisdiction over this area and go through the records they will find as to how many cases the polce have booked and how many complaints they have received. In spite of these facts if the Government think that there is no need to shift these shops to some other place, it only means that they are giving a turning ear to the public demand or closing their eyes. They just sit in their office or at home thinking that everything is all right in spite of the pressing demand of the public to shift these toddy and arrack shopsoutside the town limits because it is causing great nuisance to the public. The Government have not cared to look into this.

With these remarks I close my speech. I thank you for giving me this opportunity.

(*Sri S. Gopala Gowda and others rose*).

Mr. SPEAKER.—I find that a number of speakers are going to speak on the subject. I have received chits in which they mention that since they are retiring members they want to have a chance. Many members who stood up and want to take part in the debate are members who are going to retire shortly. I do not know whether I would be able to give much time. Today we are going to meet at 2-30 P.M. and continue the debate. I have now received information from the Government that Hon'ble the Finance Minister will require one hour for giving reply and the Hon'ble P.W.D. Minister will require half an hour, which comes to 1½ or it may be two hours because there have been hard criticisms in this House and probably they will be tempted or prompted to say more in the matter.

So I would make a firm request to the members that they should try to be as brief as possible.

Sri H. K. VEERANNA GOWDH.—The Chief Minister will also reply.

Mr. SPEAKER.—The Chief Minister also wants to take part in the debate. As I have just now stated, the Government may require about two hours.

Sri H. K. VEERANNA GOWDH.—The practice here, I may submit, was that some of the Ministers whose administration was criticised, were expected to reply.

Mr. SPEAKER.—That is the practice everywhere. The Ministers take part in the debate when the financial matters are being discussed because grants are asked for in respect of all the departments. So far as I have been able to ascertain, two Ministers want to reply and I do not know whether other Ministers are going to take part. If other Ministers want to take part they can inform me or the Secretary as to how much time they require.

An Hon'ble MEMBER.—It is a financial budget. So it would be very kind of you if you extend the time.

11 A.M.

Mr. SPEAKER.—I am sorry I cannot extend the time at present. That will upset the whole time-table, not only of this House but also of the Upper House. So, I do not think it will be possible for me to extend the time. I must also inform the Hon'ble Members that it is not a regular debate on the Demands. It is more or less a debate on the Vote on Account. It should not be so lengthy as Hon'ble Members imagine. Still, it is very difficult for me, at the fag end of the career of this Assembly, to regulate the time for discussion. That is why I have been a little lenient. I have been lenient so far as questions are concerned. There were also some grievances expressed in my chamber that I have been partial to some members, and I have not been just to others. There might have been some such thing, because, after all, I have not to deal with one question, but with so many questions, with the result I cannot undertand to whom I have done injustice. If I have not done justice to any Hon'ble Member, I will be grateful if the concerned Member brings it to my notice. I will try to correct it.

*Sri P. R. RAMAIYA (Basavangudi).—Sir, I wish to make this appeal. This being the last Session of the Assembly, of which many members are retiring, it would be very good of the Chair to give the retiring members an opportunity to speak on this occasion, to place before this House and the electorate, a few of the matters about this House. Therefore, I would appeal to the Chair to be liberal in this matter and see that the Ministers speak on Monday and this whole day may be given to the members to speak. Sir, I would like this position to be considered sympathetically by the Chair.

ಶ್ರೀ ಎನ್: ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).—ಶ್ರೀಮಾನ್ ರಾಮಯ್ಯನವರು ಹೇಳಿದ ಹಾಗೆ, ಹೆಚ್ಚು ಜನ ಸದಸ್ಯರಿಗೆ ಅವಕಾಶ ಕೊಡುವುದು ಅಗತ್ಯ. ಆದುದರಿಂದ ತಾವು ಮತ್ತು ಈ ಸಭೆಯ ಮಾನ್ಯ ಸದಸ್ಯರು ಒಪ್ಪುವುದಾದರೆ ನಾಳೆಯೂ ಕುಳಿತುಕೊಳ್ಳಬಹುದು ಎಂದು ಸಲಹೆ ಮಾಡುತ್ತೇನೆ.

Mr. SPEAKER.—What the Hon'ble Member Sri P. R. Ramaiya said, has some force. But I am helpless in this matter. I would try to accommodate as many members as possible. Unless the members agree that we should also sit tomorrow, it will not be possible for me to extend the time limit.

Some Hon'ble MEMBERS.—Yes.

Mr. SPEAKER.—It should not be a matter of agreement on one side of the House. There should be agreement from all sides. One side saying YES and the other side keeping mum or opposing, would not hlep me at all. If all sections of the House agree that we may also sit tomorrow, I have no objection.

Sri J. MOHAMED IMAM (Jagalur).—Tomorrow some of us have our own programme and we will have to go to some places. Why not extend it to Monday, Sir ? This is the last session. I am sure you will be quite generous. We can even have the session extended by one or two days.

Sri H. K. VEERANNA GOWDH.—So far as the Government is concerned, Government is prepared to sit tomorrow

(SRI H. K. VEERANNA GOWDH.)

also. But if it is inconvenient for certain members, I leave it to the Chair, Sir.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸರಕಾರದವರು ನಿಯಮ ಮಾಡಿರುವ ಹಾಗೆ ಮಾನ್ಯ ಸದಸ್ಯರುಗಳು ಕೂಡ ಅವರವರ ಪ್ರೋಗ್ರಾಂ fix ಮಾಡಿಕೊಂಡಿದ್ದಾರೆ. ಆದುದರಿಂದ ಭಾನುವಾರದ ದಿವಸ ಕುಳಿತುಕೊಳ್ಳುವುದೆಂದರೆ ಸರಿಯಾದದ್ದಲ್ಲ. ಈಗಾಗಲೇ ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರುವ ಹಾಗೆ ಇದು ಕೊನೆಯ ಅಧಿವೇಶನವಾಗಿರುವುದರಿಂದ ಸರಕಾರದವರು ಮನಸ್ಸು ಮಾಡಿ ಒಂದು ದಿವಸ extend ಮಾಡಿದರೆ ಚೆನ್ನಾಗಿರುತ್ತದೆ.

Sri H. S. RUDRAPPA (Minister for Agriculture).—This is a matter which has to be decided in consultation with the Leader of the House according to procedure. Therefore the Speaker may decide the matter in consultation with the Leader of the House in the afternoon session.

Sri J. MOHAMED IMAM.—Before the Hon'ble Minister puts it to the Chief Minister, I submit that it is desirable to extend the session by two days at least, because there are many members who wish to take part in this Debate. I think they should be given opportunities. I am sure many of them are going to give suggestions regarding the future work of the Legislature. I therefore think that the Government should not grudge to extend the Session by two days so that all members desiring to speak may be given an opportunity. I think in fairness to them, Government should not come in the way of extension.

Mr. SPEAKER.—That point will be considered by the Government. In the meanwhile, we will go on. Sri Gopala Gowda may speak.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭೆಯಮುಂದೆ ಮಾನ್ಯ ಹಣಕಾಸಿನ ಮಂತ್ರಿಗಳು ಮಂಡಿಸಿರತಕ್ಕ 1957-58ನೇ ಇಸವಿಗೆ ಸಂಬಂಧಪಟ್ಟ ಆಯವ್ಯಯವನ್ನು ನಾವು ಚರ್ಚಿಸುತ್ತಿದ್ದೇವೆ. ಇಲ್ಲಿ ಎಲ್ಲ ವರ್ಷಗಳಂತೆ 1957-58ನೆ ಇಸವಿಯ ಹಣಕಾಸಿನ ಜವಾಬ್ದಾರಿಯನ್ನು ಪೂರ್ತಿಯಾಗಿ ಈ ಸಭೆ ಹೊತ್ತುಕೊಳ್ಳುತ್ತಿಲ್ಲ. ಕಾರಣ, ಎಲ್ಲರಿಗೂ ತಿಳಿದಿರುವಂತೆ ಈ ಸಭೆ ತನ್ನ ಐದು ವರ್ಷದ ಅವಧಿಯ ಕೊನೆಯಲ್ಲಿದೆ. ಮತ್ತು ಮಹಾ ಚುನಾವಣೆಗಳು ಆಗಿರುವುದರಿಂದ ಹೊಸ ಸಭೆ ಇನ್ನು ಸ್ವಲ್ಪಕಾಲದಲ್ಲಿಯೇ ಅಸ್ತಿತ್ವಕ್ಕೆ ಬರಲಿದೆ. ಆದುದರಿಂದ ಈ ಸಾಲಿನ ಆಯವ್ಯಯವನ್ನು ಪೂರ್ಣವಾಗಿ ನಿರ್ಧರಿಸತಕ್ಕ ಜವಾಬ್ದಾರಿ ಹೊಸದಾಗಿ ಬರತಕ್ಕ ಸಭೆಗೆ ಇರುವುದರಿಂದ ನಾವೀಗ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳಿಗೆ ಬೇಕಾಗಬಹುದಾದ ಹಣವನ್ನು ಮಾತ್ರ ಖರ್ಚಿಗೆ ಒದಗಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಇದುವರೆಗೂ ಈ ಸಭೆಯ ವಿರೋಧಪಕ್ಷದ ನಾಯಕರಾಗಿದ್ದಂಥ ಶ್ರೀಮಾನ್ ಜೆ. ಮಹಮ್ಮದ್ ಇಮಾಂರವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಮುಂದೆ ಈ ಸಭೆಯ ಸದಸ್ಯರಾಗಿರುವುದಿಲ್ಲ. ಅವರು ಪಾರ್ಲಿಮೆಂಟಿಗೆ ಆರಿಸಿ ಹೋಗಿದ್ದಾರೆ. ಅವರು ನಿನ್ನೆ ಭಾಷಣ ಮುಗಿಸಿ ಹೊರಗೆ ಹೋಗುತ್ತಿದ್ದಾಗ, ನಾನು ಅವರನ್ನು ಮಾತನಾಡಿಸಿದಾಗ ಅವರು "ನಾನು 27 ವರ್ಷಗಳಿಂದಲೂ ಜನರ ಪ್ರತಿನಿಧಿಯಾಗಿ ಇಲ್ಲಿರುತ್ತಿದ್ದೆ. ಈಗ ಇಲ್ಲಿಂದ ಹೋಗುತ್ತಿದ್ದೇನೆ" ಎಂದು ಸ್ವಲ್ಪ ದುಃಖದಿಂದಲೇ ಹೇಳಿದರು. ಅವರು ಪ್ರತಿನಿಧಿಯಾಗಿ, ಮಂತ್ರಿಗಳಾಗಿ, ಎಲ್ಲಕ್ಕಿಂತಲೂ ಹೆಚ್ಚಾಗಿ ಜನರ ಒಬ್ಬ ಸ್ನೇಹಿತನಾಗಿ ನಮ್ಮ ಈ ಸಂಸ್ಥಾನಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಆದುದರಿಂದ, ಅವರನ್ನು ಮುಂದೆ ಈ ಸಭೆ ಕಳೆದುಕೊಳ್ಳಬೇಕಾಗಿರುವುದರಿಂದ ನಿಜವಾಗಿಯೂ ಅದು ಒಂದು ವ್ಯಸನಕರವಾದ ಸಂಗತಿ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಹಣಕಾಸಿನ ಬಗ್ಗೆ ಮೊದಲನಿಂದಲೂ ನಾವು ವಿರೋಧ ಪಕ್ಷದವರು ನಮ್ಮ ಅಭಿಪ್ರಾಯಗಳನ್ನು ಇಡುತ್ತಲೇ ಬಂದಿದ್ದೇವೆ. ಆಡಳಿತ ಪಕ್ಷದವರು ಮುಖ್ಯವಾಗಿ ಶ್ರೀಮಾನ್ ಇಮಾಂರವರ ಭಾಷಣವನ್ನು ಅದು ಒಂದು ಗ್ರಾಮಾಫೋನ್ ರೆಕಾರ್ಡ್ ಇದ್ದ ಹಾಗೆ ಪ್ರತಿವರ್ಷವೂ ಹಾಕಿದ ರೆಕಾರ್ಡ್ ಮತ್ತೆ ಹಾಕುತ್ತಾರೆ ಎಂದು ಹೇಳುತ್ತಾ ಇದ್ದರು. ಅದು ನಿಜ. ಏಕೆಂದರೆ ಪದೇ ಪದೇ ಹೇಳಿದ ವಿಷಯವನ್ನೇ ಒತ್ತಿ ಒತ್ತಿ ಮೇಲಿಂದಮೇಲೆ ಹೇಳಿದಾಗ್ಯೂ ಕೂಡ ಆಡಳಿತ ಪಕ್ಷದವರು ತಮ್ಮ ತಪ್ಪುಗಳನ್ನು ಎಂದೆಂದೂ ತಿದ್ದಿಕೊಳ್ಳುವುದಕ್ಕೆ ಪ್ರಯತ್ನಪಡಲೇ ಇಲ್ಲ. ನಾವು ಹೇಳಿದ್ದು ವ್ಯಥಾ ಅನ್ಯಾಯವಾಯಿತು ಎಂದು ನಮಗೂ ಈಗ ಅನ್ನಿಸಿದೆ. ಏಕೆಂದರೆ ತಮ್ಮ ತಪ್ಪುಗಳನ್ನು ಎತ್ತಿ ತೋರಿಸಿ, ತಿದ್ದಿಕೊಳ್ಳಿ ಎಂದು ಹೇಳಿದರೂ ತಿದ್ದಿಕೊಳ್ಳತಕ್ಕ ಪ್ರವೃತ್ತಿಯುಳ್ಳವರಲ್ಲ. ಅವರಿಗೆ ಸಂಖ್ಯಾಬಲ ಏನೋ ಹೆಚ್ಚಾಗುತ್ತಾ ಇದೆ. ಅದರ ದುರುಪಯೋಗದಿಂದ ತಮ್ಮ ಒಂದು ಯೋಚನೆಯನ್ನು ತಮ್ಮ ಮನಸ್ಸಿಗೆ ಬಂದಹಾಗೆ ಮುಂದುವರಿಸಿಕೊಂಡು ಹೋಗುವುದನ್ನು ಅವರು ನಿರ್ಧರಮಾಡಿದ್ದಾರೆ ಎನ್ನುವುದು ನಮಗೆಲ್ಲಾ ಚೆನ್ನಾಗಿ ಮನವರಿಕೆಯಾಗಿದೆ. ಆದ್ದರಿಂದ ಆ ವಿಷಯದ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ.

ಈಗ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಏನಿದೆ ಎನ್ನುವ ಬಗ್ಗೆ ಈ ಒಂದು ಹೇಳಿಕೆಯನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಆರ್ಥಿಕ ಪರಿಸ್ಥಿತಿಯನ್ನು ನೋಡುವುದಕ್ಕೆ, ಆರ್ಥಿಕ ನಿಯೋಗ ಮಂಡಲಿ ಎಂದು ಹೇಳಿ ನಮ್ಮ ದೇಶದಲ್ಲಿ ಒಂದು ಇದೆ. ಅದರ ಅಧ್ಯಕ್ಷರಾಗಿರತಕ್ಕ ಶ್ರೀ ಕೆ. ಸಂತಾನಂ ಅವರು ಈಚೆಗೆ ಒಂದು ಪತ್ರಿಕಾಗೋಷ್ಠಿಯಲ್ಲಿ ಹೀಗೆ ನುಡಿದಿದ್ದಾರೆ. ಪ್ರಾಂತ ಸರ್ಕಾರದವರು ತಮ್ಮ ಸರ್ಕಾರದ ಬಡ್ಜೆಟ್ ಖೋತಾಗಳಿಗೆ ಅವಕಾಶ ಕೊಡುತ್ತಾ ಹೋದರೆ ಬತ್ತಿಯನ್ನು ಎರಡುಕಡೆಯಿಂದಲೂ ಉರಿಸುವ ಪರಿಸ್ಥಿತಿ ಉಂಟಾಗಿ, ರಾಷ್ಟ್ರದ ಆರ್ಥಿಕಪರಿಸ್ಥಿತಿಯೇ ಅವನತಿಗೆ ಈಡಾಗುತ್ತದೆ ಎಂದು ಭಾರತದ ಆರ್ಥಿಕ ನಿಯೋಗ ಮಂಡಲಿಯ ಅಧ್ಯಕ್ಷ ಶ್ರೀ ಸಂತಾನಂ ಅವರು ಪತ್ರಿಕಾಗೋಷ್ಠಿಯೊಂದರಲ್ಲಿ ನುಡಿದಿದ್ದಾರೆ. ಅಂಥ ಜವಾಬ್ದಾರಿ ಹೊತ್ತಿರತಕ್ಕ ಮತ್ತು ಅರ್ಥ ಶಾಸ್ತ್ರದಲ್ಲಿ ಸಾಕಷ್ಟು ಪರಿಣತೆಯನ್ನು ಹೊಂದಿರತಕ್ಕವರು ಹೇಳಿರ

ತಕ್ಕ ಮಾತಿಗೆ ಇಂಡಿಯಾ ದೇಶದ ಎಲ್ಲಾ ಕಾಂಗ್ರೆಸ್ ಸರ್ಕಾರಗಳೂ ಕೊಡಬೇಕಾದ ಒಂದು ಮರ್ಯಾದೆಯನ್ನು ಕೊಟ್ಟು ವಿಚಾರಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

Mr. SPEAKER.—I just now observed that the Hon'ble Member Sri Gopala Gowda was reading from a newspaper. He was reading from the newspaper certain observations made by Sri Santanam. I would like to know from him whether he has ascertained that Sri Santanam really made those remarks that have appeared in the newspaper. The usual rule is that when a member quotes from a newspaper he must be sure about the correctness of what is written in the newspaper. So unless the Hon'ble Member has made himself sure about the correctness of what he is quoting from the newspaper, it is not fair to this House that he should quote from It. I do not say anything against the newspaper. I can say that this rule has been purposely made to ascertain whether what has appeared in a newspaper is correct or not before it is quoted in the House. I do not challenge the correctness of what has appeared in the newspaper so far as Sri Santanam is concerned. What I want to know from the Hon'ble Member when he is quoting from a newspaper, is whether he has ascertained the correctness of the remarks appearing in the newspaper as having been made by Sri Santanam.

Sri S. GOPALA GOWDA.—I have ascertained, Sir.

Sri K. V. BYRE GOWDA (Bangalore North).—Ascertained, from the paper itself.

Sri S GOPALA GOWDA.—Not from the paper, but from the source of the information itself.

ಕೇಂದ್ರ ಸರ್ಕಾರದ ಈ ವರ್ಷದ ಆಯವ್ಯಯದಲ್ಲಿ 365 ಕೋಟಿ ರೂಪಾಯಿಗಳ ಖೋತಾ ಇದೆ. ಡಿಫೆನ್ಸ್ ಶಾಖೆಗೆ 50 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಖರ್ಚುಮಾಡಬೇಕೆಂತಲೂ ಅವರು ಉದ್ದೇಶಿಸಿರುತ್ತಾರೆ. ಎಂದರೆ ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಉತ್ಪತ್ತಿಗಿಂತ ಖರ್ಚು 1 ಕೋಟಿ ರೂಪಾಯಿ ಹೆಚ್ಚಾದಂತೆ ಆಯಿತು. ಇದೇ ರೀತಿ ಖೋತಾ ಮುಂದುವರಿದರೆ ಇನ್ನು 5 ವರ್ಷಕ್ಕೆ 365×5 ಅಷ್ಟು ಕೋಟಿ ರೂಪಾಯಿಗಳ ಖೋತಾ ಕನಿಷ್ಠವಾಗಿ ಆಗುತ್ತದೆ. ನಮ್ಮಲ್ಲಿಯೂ ಕೂಡ ಕಳೆದ ಅನೇಕ ವರ್ಷಗಳಿಂದ ಪ್ರತಿ ಸಾಲಿನಲ್ಲೂ ಖೋತಾ ಹೆಚ್ಚುತ್ತ ಹೋಗುತ್ತಿದೆ. ಒಂದು ಕಡೆ ಖರ್ಚು ಹೆಚ್ಚಾಗುತ್ತಾ ಹೋಗುವುದು, ಇನ್ನೊಂದು ಕಡೆ ಜನತೆಗೆ ತೆರಿಗೆಯನ್ನು ಕೊಡುವ ಶಕ್ತಿ ಇಲ್ಲದೇ ಹೋಗುವುದು ಮತ್ತು ಖರ್ಚುಮಾಡಿದ ಹಣಕ್ಕೆ ತಕ್ಕ ಪ್ರತಿಫಲ, ಉತ್ಪಾದನೆ ಆಗದೇ ಹೋಗುವುದು. ಇದೇ ಶ್ರೀ ಸಂತಾನಂರವರು ಹೇಳಿರುವ ಮಾತಿನ ಅರ್ಥ. ಬತ್ತಿ ಎರಡು ಕಡೆಯಿಂದಲೂ ಉರಿಯುತ್ತಾ ಇದೆ, ಆದ್ದರಿಂದ ಈ ಪರಿಸ್ಥಿತಿ ಬಹಳ ಕಾಲದವರೆಗೆ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ, ಏನಾದರೂ ಮಾಡಿ ಇದನ್ನು ತಡೆಗಟ್ಟಲೇಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯ ತೀರ ವಾಸ್ತವವಾದ ಅಂಶ ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಮಾನ್ಯ ಸಭೆಯಲ್ಲಿ ಅರ್ಥ ಶಾಸ್ತ್ರವನ್ನು ಅರ್ಥಮಾಡಿಕೊಂಡಿರತಕ್ಕಂಥ ಶ್ರೀಮಾನ್ ಹೆಗ್ಡೆರವರು ಮಾತನಾಡಿದರು, ನಾಸಿಕ್ ಪ್ರೆಸ್‌ನಲ್ಲಿ ನಮಗೆ ಪ್ರಿಂಟ್‌ಮಾಡತಕ್ಕ ಅಧಿಕಾರ ಇದೆ, ಅಲ್ಲಿಂದ ನಾವು ಹಣ ಪಡೆದುಕೊಳ್ಳಬೇಕಾಗಿದೆ ಎಂದು. ಇದು ಮತ್ತೊಂದು ಮಾತು, ನಮ್ಮ ನಾಸಿಕ್ ಪ್ರೆಸ್ಸಿನಲ್ಲಿ ನಾವು ಹಣವನ್ನು ಛಪಾಯಿಸುತ್ತೇವೆ. ಇವೊತ್ತು ದೇಶದಲ್ಲಿ ಈಗಾಗಲೇ ಹಣದ ಉಬ್ಬರವಿದೆ. 200 ಕೋಟಿ ರೂಪಾಯಿಗಳಷ್ಟು ಹಣವನ್ನು ಉಬ್ಬರಗೊಳಿಸಿದ್ದಾರೆ. ಇನ್ನೂ ಬರತಕ್ಕಂಥ ವರ್ಷಗಳಲ್ಲಿ, ಎರಡನೇ ಪಂಚವಾರ್ಷಿಕ ಯೋಜನೆ ವ್ಯಾಪ್ತಿಯಿಂದ ಖರ್ಚಿನ ವಿವರವನ್ನು ನೋಡಿದರೆ ಹಣದ ಉಬ್ಬರ 60-62ನೇ ಇಸವಿಯ ಹೊತ್ತಿಗೆ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂದು ಯಾರೂ ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅಂತೂ trend ನೋಡಿದರೆ ಚೈನಾ ದೇಶದಲ್ಲಿ ಚಿಯಾಂಗ್ ಕೈಷೇಕ್‌ರವರು ಫಾರ್ಮೋಸಾಕ್ಕೆ ಬರುವುದಕ್ಕೆ ಮುಂಚೆ ಇದ್ದ ಪರಿಸ್ಥಿತಿ ಬರದೇ ಹೋದರೂ ಹೆಚ್ಚುಕಮ್ಮಿ ಹಣಕಾಸಿನ ಪರಿಸ್ಥಿತಿ ಇಂಡಿಯಾದೇಶದಲ್ಲಿ ಇನ್ನು 5 ವರ್ಷದ, ಆಖೈರಿನಲ್ಲಿ ಅಷ್ಟೇ ಉತ್ಕಟ ಪರಿಸ್ಥಿತಿಗೆ ಬರಬಹುದು ಎಂದು ನಾವು ಸ್ವಲ್ಪ ಊಹೆಮಾಡಿ ಹೇಳಬಹುದು. ಬೇರೆ ವ್ಯವಸ್ಥೆಯನ್ನು ಮಾಡಿ, ಖರ್ಚನ್ನು ಕಡಿಮೆಮಾಡಿಕೊಂಡರೆ, ಇನ್ನೂ ತೀಕ್ಷ್ಣವಾಗಿ ಹಾಕಬೇಕಾದ ಎಲ್ಲಾ ಆರ್ಥಿಕ ತಡೆಗಳನ್ನೂ ಈ ಹಣಕಾಸಿನ ವ್ಯವಸ್ಥೆಯಮೇಲೆ ಹಾಕಿದರೆ ಅದನ್ನು ತಪ್ಪಿಸಬಹುದು ಎನ್ನುವ ಮಾತು ಬೇರೆ.

ಶ್ರೀ ಟಿ. ಮರಿಯಪ್ಪ.—ಪ್ರೊಡಕ್ಷನ್ ಜಾಸ್ತಿ ಆದರೆ! ತಾವು ಅಂಕಿಅಂಶಗಳನ್ನು ನೋಡಿ; 5 ವರ್ಷಗಳಲ್ಲಿ ಎಷ್ಟು ಪ್ರೊಡಕ್ಷನ್ ಆಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈ ಅಂಕಿಅಂಶಗಳನ್ನು ನಾವು ಪರಿಶೀಲನೆಮಾಡಬಹುದು. ಅಂಕಿಅಂಶಗಳು ಇವೆ ಮತ್ತು ವಾಸ್ತವಾಂಶ ಇದೆ. ಅದನ್ನು ನಾವು ಪರಿಶೀಲನೆ ಮಾಡೋಣ. ಈಗ 4 ತಿಂಗಳಿಗೆ ಸರ್ಕಾರದವರು ಹಣವನ್ನು ಕೇಳಿದ್ದಾರೆ. ಕಾಲಾವಕಾಶ ಹೆಚ್ಚು ಇಲ್ಲದೇ ಇರುವುದರಿಂದ ನಾನು ಬಾಬುವಾರು ಯಾವರೀತಿ ಖರ್ಚಾಗಬೇಕು ಅಥವಾ ಅಗತ್ಯವಿದೆ ಎನ್ನುವ ವಿಚಾರಕ್ಕೆ ಹೋಗುತ್ತಾ ಇಲ್ಲ. ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿಲ್ಲ ಎಂದು ಮಾತ್ರ ಹೇಳುತ್ತೇನೆ. ದುಂದುಗಾರಿಕೆ ಹೆಚ್ಚಾಗಿದೆ ಮತ್ತು ಸಾಕಾದಷ್ಟು ಹಣದ ಮೇಲೆ ಹತೋಟಿಯಿಲ್ಲ. ಯಾವ ಹಣವನ್ನು ಖರ್ಚು ಮಾಡುತ್ತಾರೋ ಅದಕ್ಕೆ ತಕ್ಕ ಪ್ರತಿಫಲ ಈ ದಿವಸ ದೊರೆಯುತ್ತಿಲ್ಲ. ಇಂಥ ಒಂದು ಅಭದ್ರ ಮತ್ತು ಅನಿಶ್ಚಿತ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇದು ದೇಶಕ್ಕೆ ಅಪಾಯಕಾರಿಯೆಂದು ನಾನು ಹೇಳುತ್ತೇನೆ.

ವಿಧಾನಸೌಧಕ್ಕೆ ಸಂಬಂಧಪಟ್ಟ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಶ್ರೀ ಇಮಾಂರವರು ತಮ್ಮ ಭಾಷಣದಲ್ಲಿ ಈ ವಿಷಯದ ಬಗ್ಗೆ

(ಶ್ರೀ ಎಸ್. ಗೋಪಾಲಗೌಡ.)

ದುಂದು ವೆಚ್ಚ ನಡೆದಿದೆಯೆಂದು ಒಂದು ಮಾತನ್ನಾಡಿದರು. ಇದೇ ಸಂಧರ್ಭವನ್ನು ಉಪಯೋಗಿಸಿಕೊಂಡು ಶ್ರೀಮಾನ್ ಹನುಮಂತಯ್ಯನವರು ಬಹಳ ಉದ್ದವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಗೆ ಪ್ರತಿಯಾಗಿ ಅಷ್ಟೇಉದ್ದದ ಹೇಳಿಕೆಯನ್ನು ಕೊಡುವುದಕ್ಕೆ ಅಧ್ಯಕ್ಷರು ಕಾಲಾವಕಾಶ ಕೊಟ್ಟರೆ—ಬಹುಶಃ ಕೊಡಲಾರರು—ನನ್ನ ಅಭಿಪ್ರಾಯವನ್ನು ಹೇಳಬೇಕೆಂದು ನಾನು ಆಶೆಪಟ್ಟಿದ್ದೇನೆ. ಶ್ರೀಮಾನ್ ಹನುಮಂತಯ್ಯನವರು ಈಗ ಸಭೆಯಲ್ಲಿಲ್ಲದಿರುವುದು ನನ್ನ ದುರಾದೃಷ್ಟ ಎಂದು ತಿಳಿದುಕೊಂಡಿದ್ದೇನೆ. ಅವರು 'ನನ್ನ ದೌರ್ಭಾಗ್ಯ' ಎಂದು ತಮ್ಮ ಡಿಫೆನ್ಸ್ ಆರಂಭಮಾಡಿದರು. ಒಂದು ವಿಷಯವನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಜವಾಬ್ದಾರಿ ಸ್ಥಾನದಲ್ಲಿದ್ದವರು, ಹಿಂದೆ ಮೈಸೂರಿನ ಮುಖ್ಯಮಂತ್ರಿಯಾಗಿದ್ದವರು, ಇನ್ನು ಮುಂದೆ ಕೂಡ ಜವಾಬ್ದಾರಿ ಸ್ಥಾನದಲ್ಲಿರುವುದಕ್ಕೆ ಆಸೆ ಹೊಂದಿರತಕ್ಕವರು. ಅವರು ಒಂದು ಮಾತನ್ನು ಹೇಳಿದ್ದಾರೆ. ಅದು ಬಹಳ ಗಮನಾರ್ಹವಾದ ವಿಷಯವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ವಿರೋಧಪಕ್ಷದವರು ಹೇಳಿದರೆ ಅವರು ಏನೋ ಒಂದು ಆಪಾದನೆ ಹೊರಿಸುವುದಕ್ಕೆ ಹೇಳುತ್ತಾರೆಂದು ಬೇರೆಯವರೆಲ್ಲ ಭಾವಿಸುತ್ತಾರೆ, ಅದು ಸಂಪ್ರದಾಯ. ಅವರು ಎಸ್ಟಿಮೇಟ್‌ಗಳ ವಿಷಯದಲ್ಲಿ ಮತ್ತು ಎಸ್ಟಿಮೇಟುಗಳನ್ನು ಪುನರ್ವಿಮರ್ಶೆ ಮಾಡುವ ವಿಷಯದಲ್ಲಿ ಬಹಳ ದೊಡ್ಡ ಹೇಳಿಕೆಯನ್ನೇ ಕೊಟ್ಟಿದ್ದಾರೆ. ಇದನ್ನು ಜವಾಬ್ದಾರಿ ಹೊತ್ತಿರುವವರೆಲ್ಲರೂ ಇಂಡಿಯಾ ದೇಶದಾದ್ಯಂತ ಪರೀಕ್ಷೆ ಮಾಡಿ ಪರಿಶೀಲಿಸಬೇಕೆಂದು ನಾನು ಆಶೆಪಡುತ್ತೇನೆ ಎಂದು ಹೇಳಿದರು. ವಿಧಾನಸೌಧದ ಅಂದಾಜು ಸುಮಾರು 50 ಲಕ್ಷಕ್ಕೋ-ಏನೋ-ಆಗಿ—ಅದಕ್ಕಿಂತ ಕಡಮೆಯಿರಬೇಕು—ಕೆಲಸ ಆರಂಭವಾದುದು 180 ಲಕ್ಷ ರೂಪಾಯಿಗಳವರೆಗೆ ಮುಟ್ಟಿದೆ, ಇದು ವಾಸ್ತವ ಎಂದು ಆರಂಭಿಸಿದರು. ಮುಂದೆ ಈ ತಪ್ಪು ಎಲ್ಲಾ ಪಿ. ಡಬ್ಲ್ಯು. ಡಿ. ಕೆಲಸಗಳಲ್ಲೂ ನಡೆದಿದೆಯೆಂದು ಸಮರ್ಥನೆಮಾಡಿಕೊಂಡರು. ಈ ಸಮರ್ಥನೆ ಬಹಳ ಚೆನ್ನಾಗಿದೆ. ಆದಾಯ ತೆರಿಗೆ ಏತಕ್ಕಯ್ಯಾ ಕೊಟ್ಟಿಲ್ಲ ಎಂದು ಕೇಳಿದರೆ ಅವರು ಕೊಟ್ಟಿರುವರೆ, ಇವರನ್ನು ಕೇಳಿದ್ದೀರಾ, ಊರಿನಲ್ಲಿ ಈ ತೆರಿಗೆ ಕೊಡದಿರುವವರ ಹೆಸರನ್ನು ಹೇಳಿ ಎಂದು ಕೇಳಿ, ಅವರೆಲ್ಲಾ ಕೊಡದಿರುವಾಗ ನನ್ನನ್ನು ಬಂದು ಕೇಳುತ್ತೀರಾ ಎಂದು ಹೇಳಿದ ಹಾಗಾಯಿತು ಇದು. ಹೀಗೆ ಬೇಕಾದಷ್ಟು ಇದಕ್ಕೆ ಉದಾಹರಣೆಗಳನ್ನು ಕೊಡಬಹುದು. ಆ ಕೆಲಸಕ್ಕೆ ಹೋಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ; ಎಲ್ಲ ಪಿ. ಡಬ್ಲ್ಯು. ಡಿ. ಕೆಲಸಗಳಲ್ಲೂ ಈ ತಪ್ಪಿದೆಯೆಂದು ಹೇಳುವುದು ಸಮರ್ಥನೆಯೆ? ಶ್ರೀಯುತರುಗಳಾದ ಇಮಾಂ, ಶ್ರೀನಿವಾಸಯ್ಯಂಗಾರ್, ಹುಚ್ಚೇಗೌಡ, ಪಟ್ಟಾಭಿರಾಮನ್ ಮುಂತಾದವರು ಕಳೆದ ಐದು ವರ್ಷಗಳಿಂದೇನು ಹೇಳಿದ್ದರು? ಎಸ್ಟಿಮೇಟುಗಳನ್ನು ಸಾಧ್ಯವಾದಮಟ್ಟಿಗೆ ಕರಾರುವಾಕ್ಕಾಗಿ ಮಾಡಿ, ಶೇಕಡ 5, 10, 20 ರವರೆಗೆ ಬೇಕಾದರೆ ಮಾರ್ಜಿನ್ ಇಟ್ಟುಕೊಳ್ಳಿ, ಅವಶ್ಯಕವಾದರೆ ಸ್ವಲ್ಪ ಹೆಚ್ಚುಕಡಮೆ ಮಾಡಿಕೊಳ್ಳಿ ಎಂದು ಹೇಳಿದ್ದರು. ಈ ಸಂದರ್ಭದಲ್ಲಿ ಹಾಗಾಗಿಲ್ಲ, ಒಂದಕ್ಕೆ ಐದರಷ್ಟು ಜಾಸ್ತಿಯಾಗಿದೆ, ದೊಡ್ಡ ರಿಪೇರ್, ಇದಕ್ಕೆ ಎಸ್ಟಿಮೇಟ್ ಮಾಡಿದವರು ಅಂಡರ್‌ಎಸ್ಟಿಮೇಟ್ ಮಾಡಿದ್ದರೆ ಅದು ಬೇರೆ ವಿಷಯ. ಎಕ್ಸಿಜೆನ್ಸೀಸ್ ಬಂದು ಮುಂದೆ ಕಾರಣಾಂತರದಿಂದ ಹತ್ತೋಟಿ ಮೀರಿ ಬೆಲೆ ಏರಿ ಅಂದಾಜಿನ ವೆಚ್ಚ ದುಬಾರಿಯಾದರೆ ಅದೊಂದು ತರಹ. ಹಾಗಿಲ್ಲದೆ ಅಂದಾಜು ತಯಾರಿಸುವಾಗ ಸರಿಯಾಗಿ ಮಾಡದಿದ್ದರೆ ಅದು ಬಹಳ ತಪ್ಪು. ಯುದ್ಧದ ದೆಸೆಯಿಂದ ಕಬ್ಬಿಣದ ಬೆಲೆ ಅಕಸ್ಮಾತ್ ಏರಿದಾಗ, ಕಾರಣಾಂತರದಿಂದ ಲೇಬರ್ ಛಾರ್ಜಸ್ ಒಂದಕ್ಕೆ ಮೂರರಷ್ಟು ಏರಿದಾಗ ರಿವೈಜ್ ಮಾಡಬೇಕಾಗುತ್ತದೆ. ಹಾಗಿಲ್ಲದೆ ಉದ್ದ, ಅಗಲ ಮುಂತಾದ್ದೆಲ್ಲವನ್ನು ಹೆಚ್ಚುಮಾಡಿ ಎಲ್ಲಾ ರಿವೈಜ್ ಮಾಡುವುದಾದರೆ ಹೇಗೆ ಒಪ್ಪುವುದು? ಶ್ರೀಮಾನ್ ಹನುಮಂತಯ್ಯನವರು ಮೈಸೂರಿನ ಉದಾಹರಣೆ ಮಾತ್ರ ತೆಗೆದುಕೊಂಡಿಲ್ಲ, ಕನ್ನಂಬಾಡಿಯಿಂದ ಆರಂಭ ಮಾಡಿ ತಮ್ಮ ಸಂಗಡ ಕೇವಲವಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರನ್ನೂ ಈಗ ಈಚೆಗೆ ಎಳೆಯುತ್ತಿದ್ದಾರೆ. ಅಲ್ಲಿಂದ ನುಗು, ಭದ್ರ, ತುಂಗಾ ಮೊದಲಾದ ಪ್ರಾಜೆಕ್ಟುಗಳ ವಿಚಾರ ವಿವರಿಸಿ ಇನ್ನೂ ಮೇಲೆ ಹೋಗಿ ಹಿರಾಕುಡ್, ಭಕ್ರಾ-ನಂಗಲ್ ಇತ್ಯಾದಿ ಇತ್ಯಾದಿ ಪ್ರಾಜೆಕ್ಟುಗಳ ವಿಚಾರ ಹೇಳಿ ಎಲ್ಲಕ್ಕೂ ಈ ಮಾತು ಸಲ್ಲುತ್ತದೆ, ಆದ್ದರಿಂದ ನನ್ನ ತಪ್ಪೇನೂ ಇಲ್ಲ ಎಂದು ಸಮರ್ಥನೆ ಮಾಡಿದರು. ಈ ಅಪರಾಧ ಮೈಸೂರಿಗೆ ಮಾತ್ರ ಅನ್ವಯಿಸುವುದಿಲ್ಲ, ಇದು ಭಾರತದ ರೋಗ, ಭಾರತದಲ್ಲೆಲ್ಲಾ ಈ ಅಪರಾಧವಿದೆ ಎಂದು ಹೇಳಿದ ಹಾಗಾಯಿತು. ಇದು ಸಮರ್ಥನೆಯಲ್ಲ. ಇದು ನಡೆಯುವುದು ವಾಸ್ತವ; ಹಾಗಾಗಬಾರದು. ಯಾವುದೇ ಪ್ರಾಜೆಕ್ಟಿನಲ್ಲೂ ಈ ರೀತಿಯಾಗಿ ಹಣ ಪೋಲಾಗಬಾರದು, ಚೆಕ್ ಇರಬೇಕು. ಬಹಳ ಕಳಕಳಿಯಿಂದ ಈ ರೀತಿ ಯಾವುದೇ ಪ್ರಾಜೆಕ್ಟಿನಲ್ಲೂ ಸಾರ್ವಜನಿಕ ಹಣ ಪೋಲಾಗದಂತೆ ನೋಡಿಕೊಳ್ಳುವುದು ಜವಾಬ್ದಾರಿಯನ್ನು ಹೊತ್ತಿರುವ ಸರ್ಕಾರದ ಕರ್ತವ್ಯ. ಪ್ರಗತಿಪರವಾದ ಸರ್ಕಾರವಾಗಲಿ ಅಥವಾ ಪ್ರತಿಗಾಮಿ ಸರ್ಕಾರವಾಗಲಿ ಸರ್ಕಾರ ಅಂದ ಮೇಲೆ ಸಾರ್ವಜನಿಕ ಹಣದ ಪ್ರತಿಯೊಂದು ಕಾಸೂ ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುವಂತೆ ನೋಡಿಕೊಳ್ಳಬೇಕಾದದ್ದು ಅದರ ಜವಾಬ್ದಾರಿ. ಇದರಲ್ಲಿ ವಿವಾದವಿಲ್ಲ; ಇದು ನಿರ್ವಿವಾದವಾದ ಮಾತು.

ಇನ್ನು ಸಮಿತಿ ವರದಿಯ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಮಿತಿ ಶ್ರೀ ಹನುಮಂತಯ್ಯನವರೇ ರಚನೆ ಮಾಡಿದಂಥಾದ್ದು, ಇದು ಏಕಮುಖವಾದ ವರದಿಯನ್ನು ಕೊಟ್ಟಿದೆಯೆಂದು ಹೇಳಿದ್ದಾರೆ; ಇರಬಹುದು. ಇದಕ್ಕೆ ಒಂದು ಉದಾಹರಣೆ ಮಣ್ಣು ಸಾಗಿಸಿದ್ದರಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ಫಾಯಿದೆ ಬಂದಿದೆಯೆಂಬುದು. ಇದನ್ನು ಸಮಿತಿಯವರು ಲೆಕ್ಕಕ್ಕೆ ತೆಗೆದುಕೊಳ್ಳಬಹುದಾಗಿತ್ತು, ವರದಿಯಲ್ಲಿ ಬರೆಯಬಹುದಾಗಿತ್ತು. ಅವರು ಪಾರ್ಷಿಯಲ್ಲಾಗಿ, ಬರೆಯದಿದ್ದರೆ ಅದು ಅವರ ತಪ್ಪು. ವರದಿ ನಿಜವಾಗಿರಬೇಕು; ಯಾರ ಮೇಲೂ ಆಪಾದನೆ ಹೊರಿಸುವ ವರದಿಯಾಗಿರಬಾರದು. ಆ ಮಾತನ್ನು ಒಪ್ಪುತ್ತೇನೆ. ಸಮಿತಿಯವರು ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್ ಕೊಡಬೇಕಾಗಿತ್ತು, ವರದಿ ಪಕ್ಷಪಾತ ದೃಷ್ಟಿಯಿಂದ ಕೂಡಿದೆ ಎಂದು ಹೇಳಿದ್ದಾರೆ. ವಿಧಾನಸೌಧಕ್ಕೆ ಹೆಚ್ಚು ಖರ್ಚಾಗಿಲ್ಲ, ಚದರಡಿಗೆ 24 ರೂಪಾಯಿದೆ, ಸಾಮಾನ್ಯವಾಗಿ 20 ರಿಂದ 25 ರೂಪಾಯಿಗಳವರೆಗೆ ಬೀಳುತ್ತದೆ, ಆರ್ನಮೆಂಟ್ಸ್ ಇಲ್ಲದಿದ್ದರೂ ಅಷ್ಟು ಬೀಳುತ್ತದೆ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ. ಈ ವಿಷಯವನ್ನು ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಚಂಡೀಘರ್‌ನಲ್ಲಿ ಹೊಸದಾಗಿ ಸರ್ಕಾರದವರು ಕಟ್ಟಿರುವ ಕಟ್ಟಡ ನೋಡಿದೆ, ಅದಕ್ಕಿಂತ ನಮ್ಮದು ತೃಪ್ತಿಕರವಾಗಿದೆ ಎಂದು ಕೂಡ

ಸಮರ್ಥನೆ ಮಾಡಿದ್ದಾರೆ. ಇನ್ನು ಅವರು ತಮ್ಮ ಅನುಭವವನ್ನು ಹೇಳುತ್ತಾ, ಇಂಗ್ಲೆಂಡ್, ಪ್ಯಾರಿಸ್, ಡೆನ್ಮಾರ್ಕ್ ಮತ್ತು ಇತರ ಕಡೆಗಳಲ್ಲೂ ಶಾಸನಸಭಾ ಕಟ್ಟಡಗಳನ್ನು ನೋಡಿದ್ದೇನೆ, ಇಂಡಿಯಾ ದೇಶದಲ್ಲೂ ಕೂಡ ಉತ್ತರ ಪ್ರದೇಶ ಮುಂತಾದ ಕಡೆಗಳಲ್ಲಿ ಸುಮಾರು 14 ಕಟ್ಟಡಗಳನ್ನು ನೋಡಿದ್ದೇನೆ, ನನ್ನ ಅನುಭವ ಇಲ್ಲಿ ರೂಪಿಸಿದ್ದೇನೆ ಎಂದು ಹೇಳಿದರು, ಜೇನುಹುಳು ಎಲ್ಲಾ ಕಡೆಯಿಂದ ಮಧುವನ್ನು ತಂದು ಜೇನುತುಪ್ಪ ಮಾಡುವಹಾಗೆ ಮಾಡಿದ್ದೇನೆಂದು ಹೇಳಿದರು; ನಿಜ. ಅವರು ರಸಿಕರು, ಸೌಂದರ್ಯೋಪಾಸಕರು ಮತ್ತು ಭಾವುಕರು, ಭಾರಿ ಭಾರಿ ಕನಸು ಕಾಣುವವರು; ಇದೆಲ್ಲಾ ನಿಜ; ನೋಡಿದರೇ ಗೊತ್ತಾಗುತ್ತದೆ.

11-30 A. M.

ಅವರ ಉದ್ದೇಶವು ತಪ್ಪು ಆಗಿತ್ತೆಂದು ನಾನು ಹೇಳುವದಿಲ್ಲ. ಸದುದ್ದೇಶವನ್ನು ಇಟ್ಟುಕೊಂಡೇ ಈ ಕೆಲಸವನ್ನು ಆರಂಭಮಾಡಿದ್ದಾರೆ. ಅವರು ಹಣವನ್ನು ಪೋಲು ಮಾಡಬೇಕು ಎಂದು ಮೈಸೂರು ಸರ್ಕಾರದ ಬೊಕ್ಕಸದಿಂದ ಈ ಎರಡು ಕೋಟಿ ರೂಪಾಯಿ ಹಣವನ್ನು ದೋಚಿಕೊಂಡು ಹೋಗಿದ್ದಾರೆಂದು ಅವರ ಮೇಲೆ ನಾನು ಆಪಾದನೆ ಮಾಡುವುದಿಲ್ಲ. ಅವರ ಉದ್ದೇಶವು ಒಳ್ಳೆಯದೇ ಆಗಿತ್ತು. ಚನ್ನಾಗಿ ಇತ್ತು. ಈ ಮೊದಲೇ ಹೇಳಿದ ಹಾಗೆ ಅವರೂ ಒಬ್ಬರು ಲೇಮನ್ (layman). ಅವರಿಗೆ ಆರ್ಕಿಟೆಕ್ಟರಿನ ಬಗ್ಗೆ ಸಲಹೆ ಕೊಡಲು ಅಧಿಕಾರವಿಲ್ಲ. ನಾನೂ ಒಬ್ಬ ಲೇಮನ್. ಆರ್ಕಿಟೆಕ್ಟರಿನ ಬಗ್ಗೆ ಸಲಹೆ, ಅಭಿಪ್ರಾಯ ಕೊಡುವದಕ್ಕೆ ನಮಗೆ ಹಕ್ಕು ಇಲ್ಲ. ನನಗೆ ಸಂಗೀತದಲ್ಲಿ ಅಭಿರುಚಿಯು ಇದೆ. ಸಂಗೀತದಲ್ಲಿ ಅಭಿರುಚಿಯು ಇದೆ ಎಂದು ನಾನೇ ಸಂಗೀತ ಹೇಳುವುದಕ್ಕೆ ಪ್ರಾರಂಭಮಾಡಿದರೆ ಚನ್ನಾಗಿ ಇರುವುದಿಲ್ಲ. ಕರ್ನಾಟಕ ಸಂಗೀತ ಹಿಂದುಸ್ತಾನೀ ಸಂಗೀತದಲ್ಲಿ ಅಭಿರುಚಿಯು ಇರುವದರಿಂದ ಸಂಗೀತ ಕೇಳುವಾಗ ತಾಳ ಹಾಕುತ್ತೇನೆ. ಹಾಗೆ ಇದೆ ಎಂದು ನಾನೇ ಹಾಡಲು ಆರಂಭಿಸಿದರೆ ಅಸಂಬದ್ಧವಾಗುತ್ತದೆ. ಶ್ರೀ ಹನುಮಂತಯ್ಯನವರು ಪ್ರಪಂಚ ಪರ್ಯಟನ ಮಾಡಿರಬಹುದು, ಅನುಭವವು ಇರಬಹುದು. ಅದು ಎಲ್ಲಾ ಸರಿ. ಆದರೆ ತಾವೇ ಶಿಲ್ಪಿ ಆಗಬೇಕೆಂಬ ವಿಚಾರವನ್ನು ಇಟ್ಟುಕೊಂಡದ್ದು ಮಾತ್ರ ತಪ್ಪು. ಅವರು ಯಾವ ರೀತಿಯಾಗಿ ಇನ್‌ಸ್ಟ್ರಕ್ಷನ್ಸ್ ಕೊಡುತ್ತಿದ್ದರು ಎಂಬ ಬಗ್ಗೆ ವರದಿಯ ಚಾಪ್ಟರ್ 16 ಪುಟ 12 ರಲ್ಲಿ ವಿವರವಾಗಿ ಹೇಳಿದೆ.

The instructions of the Chief Minister. His directions, for example, were: The window lintels adopted for 'Kumara Krupa' may be adopted for the south quadrangle on the ground floor and the window balcony treatment at 'Kumara Krupa' with side pillars treatment may be adopted ....."
"ಬಾಗಿಲು ಅಲ್ಲಿ ಇರಲಿ, ಕಿಟಕಿ ಇಲ್ಲಿ ಆಗಬೇಕು, 'ಕುಮಾರಕೃಪಾ' ದಲ್ಲಿಯ ಕಿಟಕಿಗಳಲ್ಲಿರುವ ಹಾಗೆ ಹೀಗೆ ಹಾಕು, ಹಾಗೆ ಹಾಕು ಎಂಬುದು ಉದ್ಧಕ್ಕೂ ಹೇಳಿದೆ, ಇದು ಸರಿಯೇ?

"It will be plagiarism, imitation, copycat work, epigonism, falsehood. Great art is created, not taken, lifted, stolen from somewhere else. Great art is made by men and women of our own day. Future generations looking at these buildings of 1956 with fake copies and replicas of work of art done thousand and more years ago, will justly say, slightly paraphrasing Romeo and Juliet: 'A plague upon all your houses'."

ಜೇನು ಮಧು ಶೇಖರಿಸುವ ಹೋಲಿಕೆ ಕೊಡುವುದು ಹಾಗೂ ನಾನೇ ಶಿಲ್ಪಿ. ಎಂದು ಹೇಳಿಕೊಂಡು ಹೋಗುವುದು ಸರಿಯಲ್ಲ. ಈ ವಿಧಾನ ಸೌಧವನ್ನು ಜನ ಬಂದು ನೋಡಿಕೊಂಡು ಹೋಗುತ್ತಾರೆ ಎಂದು ಹೇಳಿದರು. ಜನ ಬಂದು ನೋಡುವಾಗ ಇದರಲ್ಲಿ ತಪ್ಪು ಇದೆಯೋ ಸರಿಯಾಗಿ ಇದೆಯೋ ಎಂದು ಹೋಲಿಕೆ ಕೊಡುವುದಿಲ್ಲ. ಆದಕಾರಣ ಶ್ರೀ ಹನುಮಂತಯ್ಯನವರು ಆರ್ಕಿಟೆಕ್ಚರಿನ ಬಗ್ಗೆ ಏನು ಸಮರ್ಥನೆಯನ್ನು ಮಾಡಿಕೊಂಡರೋ ಅದು ಸರಿಯಲ್ಲ. ಜನ ಬಂದು ನೋಡಿಕೊಂಡು ಹೋಗುತ್ತಿದ್ದಾರೆ ಪ್ರಶಂಸೆ ಮಾಡಿ ಬರೆದ 800 ಕಾಗದಗಳು ಬೇರೆಬೇರೆ ಜನರಿಂದ ನಮಗೆ ಬಂದಿವೆ, ನೀವು ಯಾಕೆ ಟೀಕಿಸುತ್ತಿದ್ದೀರಿ ಎಂದು ಕೇಳಿದರು. ಜನರ ಆಕರ್ಷಣೆಯ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಾಕ್ರೆಟೀಸ್‌ಗೆ ವಿಷ ಕೊಟ್ಟಾಗಲೂ ಜನರು ಬಂದು ಬೆಂಬಲಕೊಟ್ಟರು, ಕ್ರೈಸ್ತನನ್ನು ಶಿಲುಬೆಗೇರಿಸಿದಾಗಲೂ ಅವರ ಹಿಂದೆ ಜನರು ಇದ್ದರು. ಹಿಟ್ಲರನ ಹಿಂದೆಯೂ ಜನರು ಇದ್ದರು. ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರ ಕೊಲೆಯಾದಾಗ ಅವರ ಮನೆಗೆ ಹೋಗಿ ಎಷ್ಟು ಜನ ಬಗ್ಗಿಬಗ್ಗಿ ನೋಡಿದರು! ಯಾವುದು ಅದ್ಭುತವೋ ಯಾವುದು ಅಸಾಮಾನ್ಯವೋ ದೊಡ್ಡದೋ, ಬೇರೆಯುದಕ್ಕಿಂತ, ಭಿನ್ನವಾಗಿ ಕಾಣುವದೋ ಅದಕ್ಕೆಲ್ಲಾ ಮಂಕು ತಿಮ್ಮನು ತಲೆಬಾಗಿಸಿ ನಮಸ್ಕಾರ ಮಾಡುತ್ತಾನೆ. ತನಗೆ ಮಾಡಲು ಸಾಧ್ಯವಿಲ್ಲದೆ ಇರುವಂಥದು ಯಾವದು ವಿಭಿನ್ನವಾಗಿದೆಯೋ ಅದಕ್ಕೆ ನಮಸ್ಕಾರ ಮಾಡುತ್ತಾನೆ ತನ್ನ ಕುತೂಹಲವನ್ನು ತೋರಿಸುತ್ತಾನೆ. ಹಾಗೆಂದ ಮಾತ್ರಕ್ಕೆ ಅವರೆಲ್ಲ ಶಿಲ್ಪಿಗಳು, ಅವರೆಲ್ಲರೂ ಪ್ರಶಂಸಿಸಿದರು ಎಂದು ಹೇಳುವುದು ಸರಿಯಲ್ಲ. ವಿಧಾನಸೌಧದಲ್ಲಿಯ ಆರ್ಕಿಟೆಕ್ಚರ್ ಮೊಗಲರ ಕಾಲದ್ದೋ? ಚೋಳರ ಕಾಲದ್ದೋ? ಪಾಂಡ್ಯರ ಕಾಲದ್ದೋ? ಮೌರ್ಯರ ಕಾಲದ್ದೋ? ಗುಪ್ತರ ಕಾಲದ್ದೋ? ಇದು ಯಾವ ಕಾಲದ ಆರ್ಕಿಟೆಕ್ಚರು? ಎಲ್ಲ ಕಾಲದ ಆರ್ಕಿಟೆಕ್ಚರಿನ ಮಿಶ್ರಣ ಒಳ್ಳೆಯದಲ್ಲ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಯಾವ ಶಿಲ್ಪ ಎಂದು ತಾವು ಹೇಳುವುದು?

ಶ್ರೀ ಎಸ್. ಗೋಪಾಲಗೌಡ.—ಇದು ಯಾವ ಕಾಲದ್ದೂ ಅಲ್ಲ. ಎಲ್ಲವು ಇದೆ ಯಾವುದೂ ಇಲ್ಲ ಹಾಗೆ ಇದೆ.

ಶ್ರೀ ವಿ. ಆರ್. ನಾಯುಡು (ಮಲ್ಲೇಶ್ವರ).—ಮಾನ್ಯ ಸದಸ್ಯರು ಯಾವದೂ ಇಲ್ಲಾ ಎಂದು ಅನ್ನುತ್ತಾರೆ ಎಲ್ಲಾ ಬಗೆಯ ಶಿಲ್ಪ ಈ ಕಟ್ಟಡದಲ್ಲಿ ಇದೆ ನಾನು ನೋಡಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಯಾವ ಶಿಲ್ಪ ಎಂದು ಹೇಳುವಹಾಗಿಲ್ಲ. ಎಲ್ಲಾ ಶಿಲ್ಪಗಳ ಕಿಚಡಿ ಅಂದರೆ ಕಲಸುಮೇಲೋಗರ. ಇದು ಒಂದು ಮ್ಯೂಜಿಯಂ ಇದ್ದಹಾಗೆ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿಟ್ಟಿದ್ದಾರೆ.

(ಶ್ರೀ ಎಸ್. ಗೋಪಾಲಗೌಡ)

ಆದುದರಿಂದ ಶಿಲ್ಪದ ವಿಷಯದ ಬಗ್ಗೆ ಶ್ರೀ ಹನುಮಂತಯ್ಯನವರು ಒಬ್ಬ ಸಾಧಾರಣ ಮನುಷ್ಯರು. ಒಂದು ಭವ್ಯಕಲಾಕೃತಿಯು ಸುಂದರ ದೃಶ್ಯ ಅವರ ಕಣ್ಣಮುಂದೆ ಇರಬಹುದು. ಆ ರೀತಿ ಅನೇಕರ ಮನಸ್ಸಿನಲ್ಲಿ ಅದು ಇರುತ್ತದೆ. ತಾಜ್‌ಮಹಾಲ್ ಕಟ್ಟಿಸಿದವನ ಮನಸ್ಸಿನಲ್ಲಿ ಆ ರೀತಿಯಾಗಿತ್ತು. ಅಂತೆ ಅವನು ಹಾಗೇ ಕಟ್ಟಿಸಿದನು. ಒಬ್ಬೊಬ್ಬರಿಗೆ ಒಂದು ಕಲ್ಪನೆ ಇರುತ್ತದೆ. ವಿಧಾನ ಸೌಧ ಶ್ರೀ ಹನುಮಂತಯ್ಯನವರ grand magnanimous ಸ್ವಪ್ರತಿಷ್ಠೆಯ ಪ್ರತೀಕ ಎಂದು ಹೇಳಬಹುದು. ಆದುದರಿಂದ ಅದನ್ನು ಈ ರೀತಿಯಾಗಿ ಸಮರ್ಥನೆಮಾಡಿಕೊಳ್ಳುವುದು ಸರಿಯಲ್ಲ. ವಿಧಾನ ಸೌಧವು ಬಹಳ ಚನ್ನಾಗಿ ಇದೆ; ಹತ್ತಾರು ಸಾವಿರ ಜನರು ಬಂದು ನೋಡಿಕೊಂಡು ಹೋಗುತ್ತಾರೆ, ಅದರಿಂದ ಸರಿಯಾಗಿದೆ ಎಂಬ ಸಮರ್ಥನೆ ಸರಿಯಲ್ಲ. ಜನರು ಕೆಟ್ಟದ್ದನ್ನೂ ನೋಡುತ್ತಾರೆ; ಒಳ್ಳೆಯದನ್ನೂ ನೋಡುತ್ತಾರೆ. ಯಾವದು ಇದ್ದರೂ ನೋಡುತ್ತಾರೆ ಯಾವುದು ಅದ್ಭುತವಾಗಿ ಇದೆಯೋ ಎಲ್ಲಕ್ಕಿಂತ ಹೆಚ್ಚಿಗೆ ವಿಭಿನ್ನವಾಗಿದೆಯೋ ಅದರ ಬಗ್ಗೆ ಕುತೂಹಲ ಪಡುತ್ತಾರೆ. ಹೀಗೆ ಇರುವುದರಿಂದ ತಾವು ಮಾಡಿದ್ದು ಸರಿಯಾಗಿದೆ ಸಮಂಜಸವಾಗಿದೆ ಎಂದು ಹೇಳುವುದು ತಪ್ಪು.

ವಿಧಾನ ಸೌಧದ ಮುಂದುಗಡೆಯ ಪ್ರವೇಶದ್ವಾರದ ಮೇಲೆ 'ಸರಕಾರದ ಕೆಲಸ ದೇವರ ಕೆಲಸ ಎಂದು ಬರೆದದ್ದಕ್ಕೆ ನಾನು ಒಪ್ಪುವುದಿಲ್ಲ. ಇದೊಂದು ಅವಮಾನಕರವಾದ ಬರಹ ಎಂದು ಪರಿಗಣಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಈ ರೀತಿ ಬರೆಸಿಹಾಕಿಕೊಳ್ಳುವುದು ಅಪಹಾಸ್ಯಕರ. ಅವರ ವೈಯಕ್ತಿಕ ಅಭಿಪ್ರಾಯ ಹಾಗೆ ಇರಬಹುದು; ಅದರಲ್ಲಿ ಅವರಿಗೆ ನಂಬಿಕೆ ಇರಬಹುದು. ದುಡ್ಡು ಕೊಟ್ಟರೂ ಕೆಲಸ ಆಗುವುದಿಲ್ಲ, ದೇವರ ಕೆಲಸ ಅಂದರೆ ಮುಗಿದೇ ಹೋಯಿತು. ಯಾವಾಗ ಬೇಕಾದರೂ ಮಾಡಬಹುದು ಎಂಬ ಭಾವನೆ ಬರುತ್ತದೆ. ಮಾಡಿದರೂ ಆಯಿತು ಮಾಡದಿದ್ದರೂ ಆಯಿತು. ಸಂಬಳ ಕೊಟ್ಟರೇ ಕೆಲಸಮಾಡುವುದು ಕಷ್ಟ, ದೇವರ ಕೆಲಸ ಎಂದು ಹೇಳುವುದು ತಪ್ಪು. ಸಾರ್ವಜನಿಕರ ಕೆಲಸ ಅದು. ಅವರ ದೃಷ್ಟಿಯು ಪಾರಮಾರ್ಥಿಕದ ಕಡೆಗೆ ಇದ್ದರೆ ಇಂಥ ವೈಭವ ಯಾಕೆ ಬೇಕು? ಬುದ್ಧನಂತೆ ಕಣ್ಣುಮುಚ್ಚಿ ಮರದ ಕೆಳಗೆ ಕುಳಿತು ದೇವರ ಧ್ಯಾನ ಅಥವಾ ಪಾರಮಾರ್ಥಿಕ ವಿಚಾರ ಬೇಕಾದರೆ ಮಾಡಲಿ. ಆದುದರಿಂದ ಈ ಕಲ್ಪನೆ ಏನಿದೆ "ಈ ದೇವರ ಕೆಲಸ" ಎಂದು ಬರೆಸಿರುವುದು ಅಂತಹದೇನೂ ಮಹತ್ವದ್ದಲ್ಲವೆಂದು ಹೇಳಬೇಕಾಗಿದೆ.

ಇನ್ನು ಕಳಶ ಹಾಕಿದ್ದು. ಈ ವಿಧಾನ ಸೌಧದ ಮೇಲೆ ಕಳಶ ಹಾಕಿದ ಮೇಲಂತೂ ಈ ಕಟ್ಟಡವನ್ನು ನೋಡುವುದಕ್ಕಾಗುವುದಿಲ್ಲ. ಇಂಡಿಯಾ ದೇಶದಲ್ಲಿ ಎಲ್ಲ ದೇವಸ್ಥಾನಗಳ ಮೇಲೆಯೂ ಕಳಶ ಹಾಕಿದ್ದಾರೆ; ಗೋಪುರಗಳನ್ನು ಕಟ್ಟಿಸಿದ್ದಾರೆ. ಕಳಶ ಹಾಕದೆ ಇರುವ ಭವನಗಳು ಇನ್ನೂ ಎಷ್ಟೋ ಇವೆ. ಇನ್ನು ಕಲ್ಲು ಕಟ್ಟಡಗಳ ಮೇಲೆ ಸಿಮೆಂಟು ಹೂಗಳನ್ನು ಕೆತ್ತಿಸಿರುವುದರ ಬಗ್ಗೆ ಬೇಕಾದರೆ ನನಗೆ ತಿಳಿದಮಟ್ಟಿಗೆ ವಿಮರ್ಶೆ ಹೇಳಬಲ್ಲೆ. ಆದರೆ ಅವರು ಯಾವರೀತಿ ಸಮರ್ಥನೆ ಮಾಡಿಕೊಂಡರೂ ಆ ಸಮರ್ಥನೆ ಸಮಂಜಸವಾದ ಸಮರ್ಥನೆಯಲ್ಲ. ಅವರು ಹೇಳಿದ ರೀತಿಯಲ್ಲಿ ಪರಿಪೂರ್ಣವಾದ ಒಂದು ಕಟ್ಟಡ ಆರ್ಕಿಟೆಕ್ಚರ್ ದೃಷ್ಟಿಯಿಂದ ಹೇಗಿರಬೇಕು ಎಂದು ನಾನು ಹೇಳಬಲ್ಲೆ.

ನಿನ್ನೆ ಅವರು ಮಾತನಾಡುವಾಗ ಜನ ಚಪ್ಪಾಳೆ ಕೂಡ ತಟ್ಟಿಬಿಟ್ಟರು ಅಷ್ಟು convincing ಆಗಿತ್ತು. ಏನೋ ಅವರಿಗೆ ದುರದೃಷ್ಟ ಬಂದಿತು. ಅವರು ಇದನ್ನು ಮುಗಿಸುವುದರೊಳಗಾಗಿ ಮುಖ್ಯ ಮಂತ್ರಿಪದವಿಯನ್ನು ಕಳೆದುಕೊಳ್ಳಬೇಕಾಯಿತು.

Sri P. R. RAMAIYA.—Is there no time-limit for the Hon'ble Member, Sir?

Mr. SPEAKER.—There is no time-limit as such. I have stated already that Members should restrain themselves. I have not laid a time-limit as a matter of course under the Rules. I could have done it, under Rule 151, but I have purposely refrained from doing so. I have requested and I make a request again to the members to be as brief as possible. But when Members are speaking, the House has to bear with them a little bit. During this session I have been more indulgent than I ought to have been. That is because I find that half the members of the House are going to retire. I want to give them the last satisfaction. That is why I have been lenient. The Hon'ble Member Sri Gopala Gowda is going to retire shortly and the Hon ble Member who raised the point of order, Sri Ramaiya, is also going to retire. I may assure him that I will be lenient to him also.

ಶ್ರೀ ಎಸ್. ಗೋಪಾಲಗೌಡ.—ಸ್ವಾಮೀ, ಈ ಒಂದು ಭವನದ ಅವಶ್ಯಕತೆ ಇರಲಿಲ್ಲವೇ ಎನ್ನುವ ಮಾತು ಬಂತು, ಅವಶ್ಯಕತೆಯಿದೆ. ಇನ್ನೂ ಬಹಳ ಮನೆಗಳ ಅವಶ್ಯಕತೆಯಿದೆ. ನಮ್ಮ ದೇಶದಲ್ಲಿ ವಾಸಕ್ಕೂ ಮನೆಗಳು ಬಹಳ ಕಡಮೆಯಿವೆ. ನಮಗೆ ಮನೆಗಳ ಕೊರತೆಯಿದೆ. ಬಹಳ ಮನೆಗಳು ಬೇಕು. ಈಗಲೂ ಈ ಭವನ ಕಟ್ಟಿರುವುದರಿಂದ ಸರ್ಕಾರಕ್ಕೆ ಅಭಾವವಿಲ್ಲ, ಎಲ್ಲ ಕಟ್ಟಡಗಳು ಆಗಿವೆ ಎಂದು ಹೇಳುವುದಿಲ್ಲ. ಇಂತಹ ಕಟ್ಟಡಗಳ ಅವಶ್ಯಕತೆ ಇತ್ತು. ಇನ್ನೂ ಕಟ್ಟಡಗಳು ಆಗಬೇಕು. ಆದರೆ ಇದಕ್ಕೆ ಈಗ 180 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಾಲ್ಕು ಅಂತಸ್ತನ್ನು ಹಾಕಿದ್ದಾರೆ. ಇನ್ನು, ಅವರು ಹೇಳಿರುವ ಪ್ರಕಾರ ರಾಜಮಹಾರಾಜರುಗಳಿಂದ ಪ್ರಭುತ್ವ ಜನತೆಯ ಕೈಗೆ ಬಂದಿದೆ. ಆದ್ದರಿಂದ ಈ ರಾಜಮಹಾರಾಜರುಗಳಿಂದ ಬಂದಿರತಕ್ಕ ಸಾರ್ವಭೌಮಾಧಿಕಾರವನ್ನು ಪ್ರತಿಬಿಂಬಿಸುವಂತಹ ಒಂದು ಲೆಜಿಸ್ಲೇಚರ್ ಕಟ್ಟಡ ಇವೆಲ್ಲ ಇರಬೇಕೆಂದು ಸೂಚಿಸಿದರು. ರಾಜಮಹಾರಾಜರುಗಳ ವಿರುದ್ಧ ನಾವು ಹೋರಾಡಿದುದು ನಾವು ಮಹಾರಾಜರುಗಳಾಗುವುದಕ್ಕಲ್ಲ. ಮಹಾರಾಜರು, ಬೊಟ್ಟಂಗಿ, ಪೇಟ ನವಿಲುಗರಿ ಮುಂತಾದುದನ್ನು ಹಾಕಿಕೊಂಡರೆ ಒಪ್ಪುತ್ತದೆ. ನಾನೂ ಅವರಂತೆ ಈ ಉಡುಪುಗಳನ್ನು ಹಾಕಿಕೊಂಡು ಬಂದರೆ ನನ್ನನ್ನು ಮಹಾರಾಜರೆನ್ನುತ್ತಾರೇನು? ವಿದೂಷಕ ಎಂದು ಕರೆಯುತ್ತಾರೆ. ಈಗ ನಮ್ಮ ಮಹಾರಾಜರು ದಸರಾದಲ್ಲಿ ಆನೆ ಮೇಲೆ

ಅಂಬಾರಿ ಹಾಕಿ ಕುಳಿತು ಜಂಬೂ ಸವಾರಿ ಹೋಗುತ್ತಾರೆ. ಅದನ್ನು ನೋಡಲು ಜನ ಹುಚ್ಚು ಹೊಳೆಯಂತೆ ಹೋಗಿ ನೋಡುತ್ತಾರೆ. ನಾನೂ ಅವರಂತೆ ಅಧಿಕಾರವಿದೆ ಎಂದು ಬೊಟ್ಟಂಗಿ ಮುಂತಾದುವನ್ನು ಹಾಕಿಕೊಂಡು ಜಂಬೂ ಸವಾರಿ ಹೋಗುತ್ತೇನೆಂದರೆ ಅದು ಒಪ್ಪುವಂತಹುದೇ? ಮಹಾರಾಜರ ಬದಲು ಮತ್ತೊಮ್ಮೆ ಮಹಾರಾಜರನ್ನು ಪಡೆಯಲು ನಾವು ಪ್ರಜಾಪ್ರಭುತ್ವಕ್ಕಾಗಿ ಹೋರಾಡಲಿಲ್ಲ. ರಾಜರುಗಳಿಗೂ ಮತ್ತು ಜನಗಳಿಗೂ ಸಮಾನವಾದ ಹಕ್ಕುಗಳು ದೊರೆಯುವಂತಹ ಪ್ರಜಾಪ್ರಭುತ್ವವನ್ನು ಗಳಿಸಲು ನಾವು ಹೋರಾಡಿದೆವು. ಶ್ರೀ ಹನುಮಂತಯ್ಯನವರು ಲಂಡನ್ ಮತ್ತು ಇನ್ನಿತರ ಕಡೆಗಳಲ್ಲಿರುವ ಕಟ್ಟಡಗಳನ್ನೆಲ್ಲಾ ನೋಡಿಕೊಂಡು ಯಾವುದೋ ಒಂದು ಭಾವನೆಯಿಂದ ಇಲ್ಲಿ ಇಷ್ಟು ಹಣ ಖರ್ಚುಮಾಡಿ ಕಟ್ಟಿರುವುದು ಪ್ರಾಮುಖ್ಯವಲ್ಲ. ಮತ್ತು ಹಾಗೆಯೇ ಈ ವರದಿಯ ಕೆಲವು ಆರೋಪಗಳಿಗೆ ಅಸಮಂಜಸವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅದಕ್ಕೆಲ್ಲಾ ನಾನು ಇಲ್ಲಿ ಉತ್ತರಕೊಡುವುದಕ್ಕೆ ಹೋಗುವುದಿಲ್ಲ.

ಅವರು ತಮ್ಮನ್ನು ಜೇನಿಗೆ ಹೋಲಿಸಿಕೊಂಡು ಅದರಂತೆ ಮಧುರವಾಗಿರಬೇಕೆಂದು ಹೇಳಿಕೊಂಡಿದ್ದಾರೆ. ಆದರೆ ಆ ಜೇನಿನಲ್ಲಿರುವ ಕೊಂಡಿಯನ್ನು ಎಂದರೆ ಕಚ್ಚುವ ಕೊಂಡಿಯನ್ನು ಅವರು ಕಾಣಲಿಲ್ಲವೆಂದು ತೋರುತ್ತದೆ. ಜೇನಿಗೆ ಕಚ್ಚುವಂತಹ ಕೊಂಡಿಯಿದೆಯಲ್ಲ ಅದು ಇವರಿಗೆ ಬಹಳವಾಗಿದೆ. ಜೇನು ಮಧುವನ್ನೇನೋ ತಯಾರಿಸುತ್ತದೆ. ಆದರೆ ಕಚ್ಚುತ್ತಾ ಹೋದರೆ ಗತಿಯೇನು? ಹಾಗೆಯೇ ನಾನು ಮತ್ತು ಶ್ರೀ ಮುಲ್ಕಾಗೋವಿಂದರೆಡ್ಡಿಯವರು ಕಚ್ಚಿಸಿಕೊಂಡಿದ್ದೇವೆ. ಭೇಟಿಯ ಕಾರ್ಯಕ್ರಮವನ್ನು ಗೊತ್ತುಮಾಡಿ ಇವರಿದ್ದ "ಕುಮಾರಾ ಕೃಪಾ"ಕ್ಕೆ ಹೋದಾಗ ಏನು ಬಂದಿರಿ ಎಂದು ಮಾತನಾಡಿಸಿ ಕಳುಹಿಸಿದ್ದಾರೆ. ಶ್ರೀ ನಿಜಲಿಂಗಪ್ಪನವರು ನಾಯಕರಾದ ಮೇಲೆ ತಮ್ಮನ್ನು ಮಾತನಾಡಿಸಲಿಲ್ಲ ಎಂದು ಹೇಳಿದರು. ತಾವು ಹೇಗೆ ನಡೆದುಕೊಂಡರೆಂಬುದನ್ನು ಯೋಚಿಸಲಿಲ್ಲ. ವೈಯಕ್ತಿಕವಾಗಿ ಟೀಕೆಮಾಡಿದ್ದಾರೆ. ಅವರ ವಿಷಯವಾಗಿ ನಾನು ಇಷ್ಟು ಹೇಳಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ಅವರು ಹೇಗೆ ವರ್ತಿಸಬೇಕು ಎನ್ನುವುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅವರ ಬಗ್ಗೆ ನನಗೆ ಅಭಿಮಾನವಿದೆ, ಸಹಾನುಭೂತಿಯಿದೆ. ಅದೆಲ್ಲ ನಿಜ. ಆದರೆ ಇಂದು ಈ ರೀತಿ ಅವರು ಮಾಡಿರುವುದೇ ಸರಿ ಎಂದು ಹೇಳಿಕೊಳ್ಳುವುದಕ್ಕೆ ಹೋಗಬಾರದು. ಆದ್ದರಿಂದ ಈ ರೀತಿ ಹೇಳಿಕೆಗಳನ್ನು ಕೊಟ್ಟು ಹಣ ಪೋಲಾಗಿಲ್ಲ ಎಂದು ಹೇಳುವುದು ಅಸಾಧ್ಯವಾದ ಮಾತು. ಅವರೇ ಹೇಳಿದ ಹಾಗೆ, ಇದಕ್ಕೆ ಸಂಬಂಧಪಟ್ಟ ಇಂಜನೀಯರುಗಳಿಂದ ಇನ್ನೂ ವರದಿಯು ಅವರ ಕೈಗೆ ಬಂದಿಲ್ಲ. ಅವರು ಹೇಳಿರುವ ಪ್ರಕಾರ ದೇಶದಲ್ಲಿರುವ ಇತರ ಭದ್ರ ಮುಂತಾದ ಪ್ರಾಜೆಕ್ಟ್‌ಗಳು ಏನೇನು ನಡೆಯುತ್ತಿವೆಯೋ ಅವಕ್ಕೆಲ್ಲ ಎನ್‌ಕ್ವೈರಿ ಕಮಿಟಿಗಳನ್ನು ಸ್ಥಾಪನೆಮಾಡಬೇಕು. ಅಲ್ಲಿ ಯಾವ ರೀತಿ ಎಸ್ಟಿಮೇಟ್ಸ್ ಪ್ರಕಾರ ಖರ್ಚಾಗುತ್ತಿದೆ, ಇಲ್ಲ ಅಲ್ಲಿಯೂ ಹಣ ಪೋಲಾಗುತ್ತಿದೆಯೇ, ಎಂಬುದನ್ನು ಪರಿಶೀಲಿಸಿ, ಹಾಗಿದ್ದರೆ ಅದಕ್ಕೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಪ್ರಜಾಪ್ರಭುತ್ವದಲ್ಲಿ ಯಾವ ಕೆಲಸವೇ ಆಗಲಿ ಅದರ ಮೇಲೆ ಸಂಪೂರ್ಣ ಹತೋಟಿಯಿರಬೇಕು. ಇಷ್ಟೆಲ್ಲ ಹತೋಟಿ ಇದ್ದರೆ ಈ ರೀತಿ ಆಗುತ್ತದೆಯೇ? ನಮಗೆ ಬೇಕಾಗಿರುವುದು ಇಷ್ಟೇ. ಹಣಕಾಸು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿದೆಯೇ ಅಥವಾ ಯಾವ ರೀತಿಯಾದರೂ ಪೋಲಾಗುತ್ತಿದೆಯೇ ಇವೆಲ್ಲ ಬಹಳ ಮುಖ್ಯವಾದ ಅಂಶಗಳು.

ಇನ್ನು ಅವರು ಮಾತನಾಡುತ್ತ ಸಾಲ, ಬಡ್ಡಿ ವಿಷಯ ಎಲ್ಲ ಮಾತನಾಡಿದರು. ಅದನ್ನು defendಮಾಡಿಕೊಂಡರು. ವಿಧಾನ ಸೌಧದ ಬಗ್ಗೆ ದೊಡ್ಡವರು ಕೂಡ ಕಾಗದ ಬರೆದಿದ್ದಾರೆ ಎಂದು ಹೇಳಿದರು. ಇಂಥ ಡಿಫೆನ್ಸನ್ನು ಅವರು ಕೊಡಬಾರದು ಎಂದು ನನಗನ್ನಿಸುತ್ತದೆ. ಕಂಟ್ರಾಕ್ಟ್‌ಗಳ ವಿಷಯಕ್ಕೆ ಹೋದರೆ ಅದು ದೊಡ್ಡ ಕಥೆ. ದೊಡ್ಡವರ ಹತ್ತಿರಕ್ಕೆ ಇವರು ಹೋಗಿ ಆ ರೀತಿ ಬರೆಸಿಕೊಂಡು ಬಂದರು ಎಂದು ನಾನು ಹೇಳಬಹುದೇ ಅಥವಾ ಅವರೇ ತಾನೇ ತಾನಾಗಿ ಬರೆದುಕೊಟ್ಟರೆ. . . .

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರಾದ ಪಳನಿಯಪ್ಪನವರು ಮಾತನಾಡುವಾಗ ತಾವು ಇಲ್ಲಿದ್ದು defend ಮಾಡಿಕೊಳ್ಳುವುದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರಿಲ್ಲ, ಅವರ ವಿಚಾರಗಳನ್ನು ಮಾತನಾಡಕೂಡದೆಂದು ಹೇಳಿದಿರಿ. ಈಗ ಶ್ರೀಮಾನ್ ಕೆ. ಹನುಮಂತಯ್ಯನವರ ವಿಚಾರದಲ್ಲಿ ಅವರು ಇಲ್ಲದೆ ಇರುವಾಗ ಮಾತನಾಡಲು ಅವಕಾಶ ಕೊಡುತ್ತಿದ್ದೀರಿ, ಮಾನ್ಯ ಸದಸ್ಯರು ಹಾಗೆ ಹೇಳಲು ಅವಕಾಶ ಕೊಡಬಹುದೇ ಎಂಬುದು ನನ್ನ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ತಾವು ಹೀಗೆ ಹೇಳುವುದು ಒಳ್ಳೆಯದಲ್ಲ. ಏಕೆಂದರೆ ಇಲ್ಲಿ ನಾನು ಮಾಡುವುದೆಲ್ಲವೂ ಸರಿ ಎಂದು ತಿಳಿದುಕೊಳ್ಳಬೇಕೆಂದು ಸಂಪ್ರದಾಯವಿದೆ. ನಾನು ಸರಿಯಾದದ್ದನ್ನು ಮಾಡಿರಲಿಲ್ಲವೆಂದರೆ ನನ್ನ ಚೇಂಬರ್‌ನಲ್ಲಿ ಬಂದು ನನ್ನ ಹತ್ತಿರ ಮಾತನಾಡಿ, ಇಂಥ ಸಂದರ್ಭದಲ್ಲಿ ಸರಿಯಾದದ್ದು ಮಾಡಲಿಲ್ಲವೆಂದರೆ, ನಾನು ಮತ್ತೆ ಇಲ್ಲಿಗೆ ಬಂದಾಗ ಅದರ ಬಗ್ಗೆ ಸಾಕಷ್ಟು ಉತ್ತರ ಕೊಡುತ್ತೇನೆ. ನಾನು point of order ಬಗ್ಗೆ ಹೇಳಿದುದನ್ನು ತಾವು ವಿಪರ್ಯಾಸವಾಗಿ ತಿಳಿದುಕೊಂಡಿದ್ದೀರಿ. ನಾನು ಹೇಳಿದ್ದೇನೆಂದರೆ, ಶ್ರೀಮಾನ್ ನಿಜಲಿಂಗಪ್ಪನವರು ಈ ಸಭೆಯಲ್ಲಿದ್ದಾರೆ. ಅವರು ತಮಗೆ ಸಂಬಂಧಪಟ್ಟಿರುವುದಕ್ಕೆ ಉತ್ತರ ಹೇಳಲು defend ಮಾಡಿಕೊಳ್ಳಲು ಅವಕಾಶವಿದೆ.. ಆದರೆ ಸಮಿತಿಯ ಸದಸ್ಯರಮೇಲೆ ನೀವೇನಾದರೂ ಅಪಮಾನಕಾರಕವಾಗಿ, ಕಳಂಕ ತರುವ ರೀತಿಯಲ್ಲಿ ಮಾತನಾಡಿದರೆ ಅವರು ಈ ಸಭೆಯ ಸದಸ್ಯರಾಗಿಲ್ಲದೆ ಇರುವುದರಿಂದ defend ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಆದಕಾರಣ, ಆ ಪ್ರಕಾರ ಮಾತನಾಡಕೂಡದೆಂದು ಹೇಳಿದ್ದೇನೆ. ಶ್ರೀಮಾನ್ ಹನುಮಂತಯ್ಯನವರ ವಿಷಯ ಮಾತನಾಡಿದರೆ ಅವರು ಈ ಸಭೆಯ ಸದಸ್ಯರಾಗಿರುವುದರಿಂದ ಬೇಕಾದಹಾಗೆ defend ಮಾಡಿಕೊಳ್ಳಬಹುದು. ಶ್ರೀಮಾನ್ ನಿಜಲಿಂಗಪ್ಪನವರಿದ್ದಾರೆ, ವೀರಣ್ಣಗೌಡರಿದ್ದಾರೆ, ಇತರರು ಇದ್ದಾರೆ. ಅವರು defendಮಾಡಿಕೊಳ್ಳಬಹುದು. ಅದರಲ್ಲಿ ಆಕ್ಷೇಪಣೆ ಇಲ್ಲ. ಆದರೆ ಹೊರಗಡೆಯವರು, ಈ ಸಭೆಯ ಸದಸ್ಯರಲ್ಲದವರು ಇವರುಗಳ ಮೇಲೆ ಆರೋಪಣೆಗಳನ್ನು ಮಾಡಿದರೆ ಅವರು ಇಲ್ಲಿ defend ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದಕಾರಣ, ಅವರ ವಿಷಯದಲ್ಲಿ ಮಾತನಾಡಿದರೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳಿದೆ. ಅದನ್ನು ತಾವು ತಿರುವು ಮುರುವು ತಿಳಿದುಕೊಂಡಿರುವುದು ಬಹಳ ವಿಷಾದಕರ.

ಶ್ರೀ ಎಸ್. ಗೋಪಾಲಗೌಡ.—ನಮಗೆ ಬೇಕಾದುದು ಮುಖ್ಯವಾಗಿ ಹಣಕಾಸಿನ ಮೇಲೆ ಹಿಡಿತ ಮತ್ತು ಲೆಕ್ಕಪತ್ರಗಳು. ಅದನ್ನು ಅವರೇ ಹೇಳುತ್ತಾರೆ,

(ಶ್ರೀ ಎಸ್. ಗೋಪಾಲಗೌಡ.)

Accounts up-to-date ಆಗಿ ಇರುವ ಬಗ್ಗೆ ಶ್ರೀ ಮುನಿಯಪ್ಪನವರು ಅಚಾತುರ್ಯತೆ ತೋರಿಸಿದುದರಿಂದ ಈ ದಿವಸ ಇಷ್ಟು ಕೆಲಸ ಮಾಡಿಯೂ ನಮಗೆ ಬಹಳ ಕಷ್ಟವಾಗಿದೆ defend ಮಾಡಿಕೊಳ್ಳುವುದು ಎಂದು. ಹಗಲಿರುಳೂ ಕೆಲಸ ಮಾಡುತ್ತಿದ್ದರು; ಭಾನುವಾರವೂ ಕೆಲಸಮಾಡುತ್ತಿದ್ದರು; ನಾನೂ ಕೂಡ ಇಲ್ಲಿ ಇರುತ್ತಿದ್ದೆ ಎಂದೂ ಹೇಳಿದ್ದಾರೆ. ಅವರು ಶ್ರಮಪಟ್ಟಿಲ್ಲವೆಂದು ಹೇಳುವುದಿಲ್ಲ. ಶ್ರಮಪಟ್ಟಿದ್ದಾರೆ. ಐದು ವರ್ಷದಲ್ಲಿ ಆಗುವ ಕೆಲಸವನ್ನು ಎರಡುವರ್ಷದಲ್ಲಿ ಮಾಡಿರಬಹುದು. ಬಹಳ ಮುತುವರ್ಜಿ ವಹಿಸಿ, ತಮ್ಮ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಎಷ್ಟು ಮುತುವರ್ಜಿ ವಹಿಸಬೇಕೋ ಅಷ್ಟೆಲ್ಲ ವಹಿಸಿರಬಹುದು. ದೇಶದ ಹಿತದೃಷ್ಟಿಯಿಂದಲೂ ಮಾಡಿದ್ದಾರೆಂದು ಒಪ್ಪಿಕೊಳ್ಳೋಣ. ಅದರ ಬಗ್ಗೆ ಯಾರದೂ ಅಭ್ಯಂತರವಿಲ್ಲ. ಅದನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. We are not questioning their bona fides or intentions. ಆದರೆ ಯಾವ ಮಾರ್ಗದಲ್ಲಿ ಅವರು ಮುಂದುವರಿದರು, ಏನು ಮಾಡಿದರು ಎನ್ನುವುದೇ ಬಹಳ ಮುಖ್ಯ. Accounts ಇಟ್ಟಿಲ್ಲವೆನ್ನುವುದು ದೊಡ್ಡಲೋಪ. Accounts ಇಡದೆ ಇರುವುದು. ಇಂಥದನ್ನೆಲ್ಲ ಮಾಡಿದರೆ ಭಾರಿಭಾರಿ ಕೆಲಸಗಳನ್ನು ಮಾಡುವಾಗ ದೇಶದ ಹಣ ಪೋಲಾಗಿ ಲೆಕ್ಕಸಿಕ್ಕದೆ ಹೋದರೆ, ಅದಕ್ಕಿಂತ ಅಪರಾಧ ಮತ್ತೊಂದಿರುವುದಿಲ್ಲ. ಆದುದರಿಂದ ಇಂಥವುಗಳು ಮುಂದೆ ನಡೆದುಕೊಂಡು ಹೋಗದಂತೆ ಬಹಳ ಎಚ್ಚರಿಕೆಯಿಂದ ಇರಬೇಕು.

ಟ್ರಕ್ಕುಗಳ ವಿಷಯ ಹೇಳುತ್ತಿದ್ದರು. ಈ transaction ಬಗ್ಗೆ ಯಾರೋ ಒಬ್ಬ ದೊಡ್ಡವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದನ್ನು ಈ ಸಮಿತಿಯವರು ಪ್ರಶ್ನೆಮಾಡಿಬಿಟ್ಟಿದ್ದಾರಲ್ಲ ಎಂದು ವಿಷಾದವನ್ನು ಸೂಚಿಸಿದರು. ಅದು ಅಭಿಪ್ರಾಯದ ಮಾತು. ಆ transaction ಬಹಳ ಲಾಭದಾಯಕವಾಗಿತ್ತು ಎಂದು ಯಾರೋ ಒಬ್ಬರು ಹೇಳಿರಬಹುದು. ಲಾಭದಾಯಕವಲ್ಲ ಎಂದು ಮತ್ತೊಬ್ಬರು ಅಭಿಪ್ರಾಯಪಡಬಹುದು. ಮತ್ತೆ, ಸಮಿತಿಯವರು ಒಂದು ಒಳ್ಳೆಯ ಮಾತನ್ನೂ ಆಡಿಲ್ಲ, ಏಕಮುಖವಾದ ಅಭಿಪ್ರಾಯ ಕೊಟ್ಟರು ಎಂದು ಹೇಳಿದರು. ಯಾವಾಗ ಕಮಿಟಿಯವರು ಇಲ್ಲಿ ತಪ್ಪುಗಳು ನಡೆದಿವೆ, ಹುಡುಕಬೇಕು ಎಂದು ಹೊರಟರೋ ಅದರ ಬಗ್ಗೆ ಒಳ್ಳೆಯ ಮಾತನ್ನು ಆಡುವುದೆಂತು? ಇದಕ್ಕೆ ಮತ್ತೆ ಅದೇ ಉದಾಹರಣೆ ಕೊಡಬೇಕಾಗುತ್ತದೆ, ಬೇಲೂರ್ ಶ್ರೀನಿವಾಸಯ್ಯಂಗಾರ್ ಅವರ ಕೊಲೆ ಉದಾಹರಣೆ. ನಾವು ಬಹಳ ಕಷ್ಟಪಟ್ಟು ಕೊಲೆಮಾಡಿ, ಇಷ್ಟೆಲ್ಲಮಾಡಿದರೂ ನೇಣು ಹಾಕುವಾಗ ಒಂದು ಒಳ್ಳೆಯಮಾತು ಆಡಲಿಲ್ಲವಲ್ಲಾ ಎಂದರೆ ಕೊಲೆ ಮಾಡಿದವರ ಬಗ್ಗೆ ಏನು ಹೇಳುವುದಕ್ಕಾಗುತ್ತದೆ? ಸಮಿತಿಯನ್ನು ನೇಮಕ ಮಾಡಿರುವುದು ಹಣ ಪೋಲಾಗಿದೆಯೋ, ಲೆಕ್ಕ ಸರಿಯಾಗಿದೆಯೋ ಇಲ್ಲವೇ, ಇಂಥದನ್ನೆಲ್ಲ ನೋಡಿ ಉಳಿತಾಯ ಮಾಡುವುದಕ್ಕೆ ಸಾಧ್ಯವಿದ್ದರೆ ಉಳಿಸುವ ಮಾರ್ಗಗಳನ್ನು ತಿಳುಹಿಸಲು. ಸಮಿತಿಯವರು ಪ್ರಶಂಸೆ ಮಾಡುವುದಕ್ಕೆ ಹೊರಟರೆ, ಬಹಳ ಚೆನ್ನಾಗಿ ಮಾಡಿದ್ದೀರಿ, ಇದು ಚೆನ್ನಾಗಿದೆ, ಅದು ಚೆನ್ನಾಗಿದೆ, ಖರ್ಚು ಚೆನ್ನಾಗಿದೆ ಎಂದು ಹೇಳುವುದಕ್ಕೆ ಹೊರಟರೆ, ಆಗ ಇದು ಎರಡು ಮುಖವಾದುದೋ ಅಥವಾ ಏಕಮುಖವಾದುದೋ? ಯಾವಾಗ ಇಂಥ ಕೆಲಸ ಮಾಡುವುದಕ್ಕೆ ಅವರನ್ನು ನಿಯಮಿಸಿದ್ದೇವೆಯೋ ಅವರು ಅದನ್ನು ಮಾಡಲೇಬೇಕು.

ಸಮಿತಿಯವರು ತಮ್ಮ ವ್ಯಾಪ್ತಿಮೀರಿ ಹೋಗಿದ್ದಾರೆ, ಮತ್ತು terms of reference ನಲ್ಲಿರುವುದಕ್ಕಿಂತ ಬಹುದೂರ ಹೋಗಿದ್ದಾರೆ ಎಂದು ಹೇಳಿದರು. ಅದು ಅವರ ಒಂದು ತೀರ್ಮಾನ ಒಂದು ಕರ್ತವ್ಯ ಪರಿಪಾಲನೆಯ ಪ್ರಶ್ನೆಯಾಗುತ್ತದೆ. ಆದುದರಿಂದ ನನಗೆ ಸಾರ್ವಜನಿಕ ಹಣಕಾಸನ್ನು ಖರ್ಚುಮಾಡುವ ಬಗ್ಗೆ ಮತ್ತು ಇಂಥ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವ ಬಗ್ಗೆ, ತೋರುವುದು ಏನೆಂದರೆ, ಮುಖ್ಯವಾಗಿ ಹಿಡಿತ ಚೆನ್ನಾಗಿರಬೇಕು. ಯಾವಾಗಲೂ ನಾವು ಯಾವುದೋ ಒಂದು ಕಾಲದಲ್ಲಿದ್ದೇವೆ, ಪ್ರಜಾಪ್ರಭುತ್ವದಲ್ಲಿದ್ದರೂಕೂಡ ಯಾವುದೋ ಒಂದು ಕಾಲದಲ್ಲಿದ್ದೇವೆ ಎಂದು ನೆನಪು ಮಾಡಿಕೊಂಡು ಅದರಂತೆ ಮುಂದುವರಿಯುವುದಕ್ಕೆ ಹೋಗಬಾರದು. ಹಾಗೆ ಮಾಡುವುದರಿಂದ ದೇಶಕ್ಕೂ ಹಾನಿಯನ್ನು ತಂದು ಮತ್ತು ದೇಶದ ಹಿತವನ್ನು ಹಾನಿಮಾಡಿ, ಆ ರೀತಿ ಒಂದು ನಷ್ಟಕ್ಕೆ ದೇಶವನ್ನು ಗುರಿಪಡಿಸಬಾರದು ಎನ್ನುವುದೇ ನಮ್ಮ ಬಹಳ ದೊಡ್ಡ ಆಗ್ರಹವೆಂದು ಹೇಳುತ್ತೇನೆ.

ಇನ್ನೊಂದುಮಾತು ಅವರು ಹೇಳಿದ್ದಾರೆ. ಹಣಕಾಸಿನ ವಿಷಯ ಬಂದಾಗಲೆಲ್ಲ ನೀವು 'yes' ಎಂದು ನಮಗೆ ವೋಟು ಮಾಡುತ್ತಿರಲಿಲ್ಲ, ಅದಕ್ಕಾಗಿ ದೇಶದವರು ಯಾವರೀತಿ ಪಾಠ ಕಲಿಸಿದ್ದಾರೆಂದು ಮುಂತಾಗಿ ಹೇಳಿದರು. ಅದು ನಮಗೆ ಬಹಳ ನೋವನ್ನುಂಟುಮಾಡಿತು. ಅವರ ಬಗ್ಗೆ ನಮಗೆ ಇದ್ದ ಅಲ್ಪಸ್ವಲ್ಪ ಅಭಿಮಾನವೂ ಕೂಡ ಹೋಯಿತು ಎಂದು ಹೇಳುತ್ತೇನೆ. ಅವರು ಹೇಳಿರುವಪ್ರಕಾರ ಚುನಾವಣೆಯಲ್ಲಿ ಜನರು ಶಿಕ್ಷೆಮಾಡಿದ್ದಾರೆನ್ನುವುದು ಅವರ ಅಭಿಪ್ರಾಯವಾಯಿತು. ನಾನು ಬಹಳ ವ್ಯಥೆಯಿಂದ ಹೇಳಬೇಕಾಗುತ್ತದೆ, ಅಂಥ ವಿಷಯ ಏನೂ ಇಲ್ಲ. ಇವತ್ತು ನನ್ನ ಒಂದು ಅನುಭವವನ್ನು ಹೇಳಬೇಕಾದರೆ ನಾನು ಬಡವ, ನನ್ನ ಪಾರ್ಟಿ ಬಡವರದು, ಬಡವರಿಂದ ಆಗಿರುವುದು. ಸರಕಾರದವರು ನಿಯಮಿಸಿರತಕ್ಕ, ಅವಕಾಶ ಕೊಟ್ಟಿರತಕ್ಕ ಐದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಶಕ್ತಿ ನನಗಿಲ್ಲ. ನನಗೆ ಎದುರಾಗಿ ಅವರು ಒಬ್ಬ ಕಾಂಗ್ರೆಸ್ಸಿನವರನ್ನು ನಿಲ್ಲಿಸಿದರು. ಅವರು ಸ್ವತಃ ಶ್ರೀಮಂತರು, ಭಾರಿ ಜಮೀನ್ದಾರರು ಆಗಿರುವರು. ಇಂಥವರನ್ನು ನಿಲ್ಲಿಸಿ ಅವರಿಗೆ ದೇಶದ ಎಲ್ಲ ಜಮೀನ್ದಾರರೂ ಸಹಾಯಮಾಡುವಂತೆ ಮಾಡಿ ಬೇಕಾದಷ್ಟು ಹಣದ ಹೊಳೆ ಹರಿಸಿದರು. . . . .

Sri P. R. RAMAIYA.—On a point of order, Sir. He is referring to an election in which he himself was a party and his main allegation against the opponent. . . . .

Mr. SPEAKER.—I do not see any allegation in this matter. He is only stating a few matters which he believes to be true in his mind. I am just observing whether he is going beyond the limits. If he makes any statement of defamatory character against a person who is not present here, I will certainly stop him.

Sri P. R. RAMAIYA.—I want to make the point of order very clear. He has stated that his opponent has spent *rivers* (lot) of money during the elections. . . .

Mr. SPEAKER.—What he stated was that though the limit of Rs. 5,000 was prescribed for expenditure in an election, and even this much he could not spend. When he could not spend even this amount of Rs. 5,000 the other candidate spent more money—such amount of money may be within the limits prescribed for the election by the Election Commissioner.

12 NOON

ಶ್ರೀ ಎಸ್. ಗೋಪಾಲಗೌಡ.—ನಾನಿಲ್ಲಿ ಅಲಿಗೇಷನ್ ಮಾಡಬೇಕೆಂದು ಇಲ್ಲ. ಶ್ರೀ ಹನುಮಂತಯ್ಯನವರು ಅವರ ಭಾಷಣದಲ್ಲಿ ಏನು ಹೇಳಿದ್ದೇ, ನಮಗೆ ತಕ್ಕ ಶಾಸ್ತಿ ಆಯಿತು ಎಂದು, ಅದು ಗೊತ್ತಿರಬಹುದು. ಕಾರಣಗಳು ಅನೇಕ ಇರಬಹುದು. ಅದಕ್ಕೆ ಅವರು ನಮ್ಮ ಸೋಲನ್ನು ನೀವು ಬಡ್ಜೆಟ್ಟಿಗೆ ಬೆಂಬಲ ಕೊಡದೆ ಇದ್ದದ್ದರಿಂದ ಓಟರುಗಳು ನಿಮಗೆ ಶಿಕ್ಷೆಮಾಡಿದ್ದಾರೆ ನೀವೆಲ್ಲಾ ಸೋತು ಹೋಗಿದ್ದೀರಿ ಎಂದು ಹೇಳಿದರೆ ಅದು ಅಲಿಗೇಷನ್ ಅಲ್ಲವೇ ?

ಅಧ್ಯಕ್ಷರು.—ಅವರ ಪ್ರಶ್ನೆ ಇಷ್ಟಿದೆ. ನೀವು ಅವರು ಹಣವನ್ನು ಹೊಳೆಯಾಗಿ ಹರಿಸಿದರು ಎಂದು ಹೇಳಿದಿರಿ. ಹೊಳೆಯಾಗಿ ಹರಿಸಿದರು ಎಂದರೆ ಎಲೆಕ್ಷನ್ ಕಮಿಷನ್‌ನವರು ಏನೋ ಒಂದು ಲಿಮಿಟ್ ಹಾಕಿದ್ದಾರೋ ಅದರ ಆಚೆಗೆ ಖರ್ಚು ಮಾಡಿದ್ದಾರೆ ಎನ್ನುತ್ತೀರೋ, ಅದರ ಒಳಗೇ ಖರ್ಚು ಮಾಡಿದ್ದಾರೆ ಎನ್ನುತ್ತೀರೋ ? ಆಚೆಗೆ ಎಂದರೆ I shall not allow.

ಶ್ರೀ ಎಸ್. ಗೋಪಾಲಗೌಡ.—ನಾನು ಅದನ್ನೇನೂ ಹೇಳುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅವರು ಸ್ಪಷ್ಟವಾಗಿ ಹೇಳಿದರು: ಎಲೆಕ್ಷನ್ ಕಮಿಷನ್‌ನವರು ಗೊತ್ತು ಮಾಡಿರುವ ಐದು ಸಾವಿರ ರೂಪಾಯಿಗಳನ್ನು ಸಹ ಖರ್ಚು ಮಾಡುವುದಕ್ಕಾಗುವುದಿಲ್ಲ, ಅಂಥಾದ್ದರಲ್ಲಿ ಕಾಂಗ್ರೆಸ್ ಉಮೇದುವಾರರು ಹಣವನ್ನು ಹೊಳೆಯಾಗಿ ಹರಿಸಿದರು ಎಂದರೆ ಸಾಮಾನ್ಯವಾಗಿ ಅದಕ್ಕಿಂತಲೂ ಹೆಚ್ಚಾಗಿ ಖರ್ಚು ಮಾಡಿದರು ಎನ್ನತಕ್ಕ ಅರ್ಥ ಬಂದೇ ಬರುತ್ತದೆ.

Sri Mulka GOVINDA REDDY (Chitaldrug).—When the Chair has already given its ruling, are we having a debate on this, over and over again?

ಅಧ್ಯಕ್ಷರು.—ನಾನು ಕೊಟ್ಟಂಥ ಒಂದು ರೂಲಿಂಗ್ ಏನಿದೆ ಅದರ ಅರ್ಥವನ್ನು ಮಾನ್ಯ ಸದಸ್ಯರಾದ ಶ್ರೀ ಮೂಡಲಗಿರಿಗೌಡರು ಅರ್ಥ ಮಾಡಿಕೊಳ್ಳಲಿಲ್ಲ. ಅವರು ಹೇಳಿದ್ದರಲ್ಲಿ ಎರಡು ಅಂಶಗಳಿವೆ. ಒಂದನೆಯದು ಎಂದರೆ ಎಲೆಕ್ಷನ್ ಕಮೀಷನ್‌ನವರು ಲಿಮಿಟ್ ಹಾಕಿದ್ದಾರೆ, 5-6 ಸಾವಿರ ರೂಪಾಯಿ ಲಿಮಿಟ್ ಏನಿದೆ ಅಷ್ಟುಕೂಡ ತಮಗೆ ಖರ್ಚು ಮಾಡುವುದಕ್ಕೆ ಆಗಿಲ್ಲ ಎಂಬುದು. ಎರಡನೆಯದು, ಇತರರು ಹೊಳೆ ಹರಿಸಿದಂತೆ ಹಣ ಹರಿಸಿದರು ಎಂಬುದು. ಐದು ಸಾವಿರ ರೂಪಾಯಿಗಳ ಒಳಗೆ ಖರ್ಚು ಮಾಡಿದರೋ, ಅದರ ಮೇಲೆ ಖರ್ಚು ಮಾಡಿದರೋ ಎಂದು ಕೇಳಿದ್ದಕ್ಕೆ ಆ ವಿಷಯ ನಾನು ಹೇಳುವುದಿಲ್ಲ ಎಂದು ಹೇಳಿದರು. ಅದಕ್ಕಾಗಿ ಏನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೀಗೆ, ಈ ವಿರೋಧ ಪಕ್ಷದವರ ಸೋಲಿನ ಬಗ್ಗೆ ಶ್ರೀ ಹನುಮಂತಯ್ಯನವರು ಏನು ಅಭಿಪ್ರಾಯ ವ್ಯಕ್ತಪಡಿಸಿದರೋ ಅದು ಸೂಕ್ತವಾದ ಅಭಿಪ್ರಾಯವಲ್ಲ. ನಮ್ಮ ಸೋಲಿಗೆ ನಾನಾ ಕಾರಣಗಳಿರಬಹುದು. ಆದ್ದರಿಂದ ಅವರು ಕಾಂಗ್ರೆಸ್ಸಿನವರು ವರ್ಷೇ ವರ್ಷೇ ಸಭೆಯ ಮುಂದೆ ಮಂಡಿಸುತ್ತ ಇದ್ದಂಥ ಹಣಕಾಸಿನ ಆಯವ್ಯಯ ಅಂದಾಜಿಗೆ ನಾವು, ವಿರೋಧಪಕ್ಷದವರು, ಕೈ ಎತ್ತಲ್ಲಿಲ್ಲ, ಸಮರ್ಥನೆಮಾಡಲಿಲ್ಲ ಎನ್ನುವ ಕಾರಣಕ್ಕಾಗಿ ನಮ್ಮನ್ನು ಸೋಲಿಸಿದ್ದಾರೆ ಎಂದು ಹೇಳುವ ಮಾತು ಸತ್ಯವಾದುದ್ದಲ್ಲ ಎನ್ನುವುದನ್ನು ನಾನು ಧಾರಾಳವಾಗಿ ಅವರಿಗೆ ಹೇಳಬೇಕೆಂದಿದ್ದೇನೆ. ಆದ್ದರಿಂದ ಅವರು ಹಾಗೆ ತಿಳಿದುಕೊಂಡರೆ ಅದು ತಪ್ಪು ಅಭಿಪ್ರಾಯ. ಅದನ್ನು ನಾವು ಯಾವಾಗ ಕಂಡುಕೊಳ್ಳುತ್ತೇವೆ ಎಂದರೆ ಯಾವುದಾದರೂ ಒಂದು ನಿರ್ದಿಷ್ಟವಾದ (specific) ಅಂಶವನ್ನು (issue) ಜನರ ಮುಂದೆ ಇಟ್ಟು, ಇದು ಸರಿಯೋ ತಪ್ಪೋ ಒಂದು ಹೋರಾಟ ಮಾಡಿದಾಗಮಾತ್ರ. ಯಾವುದಕ್ಕೆ ಅವರು ಓಟು ಕೊಟ್ಟಿದ್ದಾರೆ ಎಂದು ನಾವು ಹೇಳಬಹುದು. ಇವತ್ತು ಕಾಂಗ್ರೆಸ್ಸಿಗೆ ಓಟು ಕೊಟ್ಟಿರತಕ್ಕ ಜನರು ನೆಹರೂಗೆ ಕೊಟ್ಟಿದ್ದಾರೋ, ಆ ಉಮೇದುವಾರರಿಗೆ ಕೊಟ್ಟಿದ್ದಾರೋ, ಅಥವಾ ಜಾತಿಗೆ ಕೊಟ್ಟಿದ್ದಾರೋ, ದುಡ್ಡಿಗೆ ಕೊಟ್ಟಿದ್ದಾರೋ. ಯಾವರೀತಿ ಪ್ರಚಾರ ಮಾಡಿದ್ದಾರೋ ಅದಕ್ಕೆ ಕೊಟ್ಟಿದ್ದಾರೋ ಯಾವುದಕ್ಕೆ ಓಟು ಕೊಟ್ಟಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಉಮೇದುವಾರರ ಸಾಮರ್ಥ್ಯಕ್ಕೆ ಕೊಟ್ಟಿರಬಹುದು, ಅದನ್ನು ನಾವು ಹೇಳುವುದಕ್ಕೆ ಹೇಗೆ ಸಾಧ್ಯ? ವಿಧಾನಸೌಧದ ಮೇಲೆ ಒಂದು ಚುನಾವಣೆ ನಡೆದು ಆಗ ಸಮರ್ಥನೆ ಬರದೇ ಇದ್ದರೆ ಆಗ ವಿರೋಧಪಕ್ಷದವರಿಗಾಗಲಿ, ಬೇರೆಯವರಿಗಾಗಲಿ ಅಂಥ ಒಂದು ಶಾಸ್ತಿ ಆಯಿತು ಎನ್ನುವ ಮಾತನ್ನು ಆಡಿದರೆ ಒಪ್ಪಬಹುದು. ತಾವು ಗೆದ್ದಿದ್ದಾರೆ ಎನ್ನುವ ಕಾರಣದಿಂದಲೇ ತಾವು ಮಾಡಿದ್ದೆಲ್ಲಾ ಸರಿ, ಇತರರು ಹೇಳಿದ್ದು ಸರಿಯಿಲ್ಲ ಆದ್ದರಿಂದಲೇ ಸೋತಿದ್ದಾರೆ ಎಂದು ಈ ಸಭೆಯಲ್ಲಿ ಹೇಳುವುದು ಅಷ್ಟು ಉಚಿತವಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ವಿಧಾನಸೌಧದ ಬಗ್ಗೆ ನಾವೇನೋ ಹಣಕ್ಕಾಗಿ ಮಂಜೂರಾತಿ ಮಾಡಲಿಲ್ಲ ಮತ್ತು ಮೊದಲಿನಿಂದಲೂ ಸಾಕಾದಷ್ಟು ವಿರೋಧವನ್ನು ವ್ಯಕ್ತಪಡಿಸುತ್ತಾ ಇದ್ದೇವೆ. ಅದು ಬೇರೆ ಇನ್ನಾವ ಕಾರಣಗಳಿಗೂ ಅಲ್ಲ. ಸರಿಯಾದ ರೀತಿಯಲ್ಲಿ ಪ್ರಜಾ ಪ್ರಭುತ್ವಕ್ಕೆ ತಕ್ಕಹಾಗೆ ಮತ್ತು ಜನತೆ ಮತ್ತು ದೇಶದ ಆರ್ಥಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಹಣವನ್ನು ಯಾವುದೇ ಕೆಲಸಕ್ಕಾದರೂ ಖರ್ಚುಮಾಡಬೇಕು ಎನ್ನತಕ್ಕ ಒಂದು ಉದ್ದೇಶದಿಂದಲೇ ಹೊರತು ಮತ್ತೆ ಯಾವ ವೈಯಕ್ತಿಕ ಉದ್ದೇಶದಿಂದಲೂ ಅಲ್ಲ. ಮತ್ತು ಅದನ್ನು ಯಾರೂ ವೈಯಕ್ತಿಕವಾಗಿ ಟೀಕೆ ಮಾಡಿದ್ದಾರೆ ಎಂತಲೂಕೂಡ ತಿಳಿದುಕೊಳ್ಳಬಾರದು ಎಂದು ಕೊನೆಯದಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹಣಕಾಸಿನ ವಿಷಯದಲ್ಲಿ ನಾನು ಆಗಲೇ ಸೂಕ್ಷ್ಮವಾಗಿ ಹೇಳಿದ್ದೇನೆ. ಹಣವನ್ನು ಖರ್ಚುಮಾಡುವಾಗ ಒಂದು ಪದ್ಧತಿ ಬಂದಿದೆ. ಅದನ್ನು ಚುನಾವಣಾ ಕಾಲದಲ್ಲಿ ಉಪಯೋಗಿಸಿಕೊಂಡು ಶ್ರೀ ಕಡಿದಾಳ್ ಮಂಜಪ್ಪನವರು ಮಂತ್ರಿ ಆಗಿ ತಮ್ಮ ತಾಲ್ಲೂಕಿಗೆ ಎಲ್ಲಾ ಅನುಕೂಲಗಳನ್ನೂ ಮಾಡಿಸಿಕೊಟ್ಟಿದ್ದಾರೆ, ಅದಕ್ಕೆ ಪಕ್ಕದ ತಾಲ್ಲೂಕಾದ ನಮ್ಮ ತಾಲ್ಲೂಕಿನವರು ವಿರೋಧಪಕ್ಷದವರಾದ ನಮ್ಮನ್ನು ಚುನಾಯಿಸಿ ಕಳುಹಿಸಿದ್ದರಿಂದ ಯಾವ ಅನುಕೂಲವೂ ಆಗಿಲ್ಲ ಎನ್ನುವುದು ಒಂದು ಅಂಶ. ಆದ್ದರಿಂದ ನಾವು ಈ ಕ್ಷೇತ್ರದಲ್ಲಿ ಗೆದ್ದುಹೋಗಿ ಮಂತ್ರಿ ಆದರೆ ಅಥವಾ ಕಾಂಗ್ರೆಸ್

(ಶ್ರೀ ಎಸ್. ಗೋಪಾಲ ಗೌಡ,)

ನವರಿಗೆ ಓಟುಕೊಟ್ಟರೆ ನೀವೂ ಮಂತ್ರಿಯಾಗಬಹುದು, ಆಗ ನಿಮ್ಮ ಕೆಲಸಗಳನ್ನು ಮಾಡಿಕೊಳ್ಳಿರಿ ಎಂದು ಈ ಮಾತಿನ ಅರ್ಥ ಬಹಳ ದೂರ ಹೋಗುತ್ತದೆ. ಎಂದರೆ ತಮ್ಮ ಸರ್ಕಾರದ ನೀತಿ ನಮಗೆ ಎಲ್ಲಿ ಅಧಿಕಾರವಿದೆಯೋ ಅದನ್ನು ಉಪಯೋಗಿಸಿಕೊಂಡು ತಮ್ಮವರಿಗೆ, ತಮ್ಮ ಕಾನ್ಸ್ಟಿಟ್ಯುಯನ್ಸಿಗೆ ಅನುಕೂಲಮಾಡಿಕೊಡಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸರ್ಕಾರವನ್ನು ಉಪಯೋಗಿಸಿಕೊಳ್ಳಬೇಕು ಎನ್ನುವುದು ತಮ್ಮ ಅಭಿಪ್ರಾಯವೇ ಎನ್ನುವುದನ್ನು ನಾನಿಲ್ಲಿ ಕೇಳಬೇಕೆಂದು ಇದ್ದೇನೆ. ಹಾಗೇನಾದರೂ ಇದ್ದರೆ ನಾನದಕ್ಕೆ ಉತ್ತರಕೊಡಬಲ್ಲೆ. ಯಾವ ಕ್ಷೇತ್ರದಿಂದ ತಾವು ಗೆದ್ದು ಬಂದಿದ್ದರೋ ಆ ಕ್ಷೇತ್ರದಲ್ಲಿ ಪೊತ್ತ ಕಂದಾಯವನ್ನು ವಸೂಲಿ ಮಾಡಿಕೊಳ್ಳಿ ಬಾಕಿ ಕ್ಷೇತ್ರದಲ್ಲಿ ಕಂದಾಯ ಇತ್ಯಾದಿಗಳನ್ನು ಮಾಫಿಮಾಡಿ. ಆಗ ಪರವಾಗಿಲ್ಲ. ಏಕೆಂದರೆ ಬೇರೆ ಕ್ಷೇತ್ರದವರು ಅವರಿಗೆ ಯಾವ ರೀತಿ ಬೇಕೋ ಆ ರೀತಿ ನಡೆದುಕೊಂಡು ಹೋಗುತ್ತಾರೆ.

ಅಧ್ಯಕ್ಷರು.—ತಾವು ಹನುಮಂತಯ್ಯನವರು ಏನು ಮಾತನಾಡಿದರು ಅದಕ್ಕೆ ಉತ್ತರಕೊಟ್ಟರೆ ಪರವಾಗಿಲ್ಲ. ಆ ಅಂಶ ಮುಗಿದಮೇಲೆ ಈಗ ಏನು ಮಾತನಾಡುತ್ತಾ ಇದ್ದೀರಿ ಇದು ಸ್ವಲ್ಪದೂರ ಹೋದಂತೆ ಆಗುತ್ತದೆ. ಏಕೆಂದರೆ ಬಜೆಟ್ಟಿನಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ, ಕಾರಣ ಮುಖ್ಯ ಅಂಶಕ್ಕೆ ಬಂದು ಮಾತನಾಡಿ ಮುಗಿಸುವುದು ಒಳ್ಳೆಯದು.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿಪದವಿ ದೊರೆತರೆ ತನ್ನ ಕ್ಷೇತ್ರದಲ್ಲಿ ಬೇಕಾದ ಕೆಲಸ ಮಾಡುವುದಾಗಿ ಯಾರೂ ಪ್ರಚಾರಮಾಡಬಾರದು, ಸಾರ್ವಜನಿಕ ಕೆಲಸಗಳಿಗೆ ಎಲ್ಲಿ ಅಗತ್ಯವಿದೆಯೋ ಅಲ್ಲಿ ಮಾಡಲೇಬೇಕು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತೇನೆ. ಕೆಲವುವೇಳೆ ಪ್ರಚಾರಮಾಡದಿದ್ದರೆ ತನಗೆ ಬಹಳ ಗಂಡಾಂತರ ಬರುತ್ತದೆ ಎಂದು ಹೀಗೆ ಆಶ್ವಾಸನೆ ಕೊಡುವುದು ತಪ್ಪಲ್ಲವೆ ?

ಶ್ರೀ ಟಿ. ಎಲ್. ಮೂಡಲಗಿರಿಗೌಡ.—On a point of order, Sir. ಮಾನ್ಯ ಸದಸ್ಯರು ಈ ಸಭೆಯನ್ನು ರಾಜಕೀಯದ ಪ್ಲಾಟ್‌ಫಾರಂ ಆಗಿ ಭಾವಿಸಿ ಮಾತನಾಡುತ್ತಿದ್ದಾರೆ, ಅವರೂ ಕೂಡ ಅವರ ಕ್ಷೇತ್ರದಲ್ಲಿ ವಾಗ್ದಾನ ಮಾಡಿರುತ್ತಾರೆ. ಐದು ವರ್ಷಗಳಿಂದ ಈ ಸಭೆಯ ಸದಸ್ಯರಾಗಿದ್ದು ತಮ್ಮ ಕ್ಷೇತ್ರದ ಕೆಲಸಗಳೇನು ಆಗಬೇಕಾಗಿತ್ತೋ ಅವನ್ನು ಸಾಧಿಸದೆ ಇನ್ನೊಬ್ಬರನ್ನು ದೂರುವುದು ಸರಿಯಲ್ಲ. ಈ ವಿಚಾರ ಬಿಟ್ಟು ಮಾತನಾಡುವುದು ಒಳ್ಳೆಯದು.

ಅಧ್ಯಕ್ಷರು.—ಇದು point of order ಅಲ್ಲ, ಸಲಹೆ ಎಂದು ಹೇಳಬಹುದು. ಮಾನ್ಯ ಸದಸ್ಯರು ಹೇಳುವುದಕ್ಕೆ ಮುಂಚೆಯೇ ನಾನು ಆ ವಿಚಾರದಲ್ಲಿ ವಿನಂತಿ ಮಾಡಿಕೊಂಡಿದ್ದೆ. ಆದರೆ ಈ ಚರ್ಚೆಯಲ್ಲಿ ಹೊರಗಿನ ಸಮಸ್ಯೆ ಬಂದೇಬರುತ್ತದೆ. ಈ ಸಭೆಯಲ್ಲೇ ಅಲ್ಲ, ಎಲ್ಲಾ ಅಸೆಂಬ್ಲಿಗಳಲ್ಲೂ ಈ ಟೆಂಡೆನ್ಸಿ ಇರುತ್ತದೆ. ಒಮ್ಮೊಮ್ಮೆ ಸದಸ್ಯರು ಸಭೆಯನ್ನುದ್ದೇಶಿಸಿ ಮಾತನಾಡುವುದಕ್ಕೆ ಬದಲಾಗಿ ಗ್ಯಾಲರಿಗಳ ಕಡೆ ಅಥವಾ ಪ್ರೆಸ್‌ನವರಕಡೆ ಮಾತನಾಡುತ್ತಿರುತ್ತಾರೆ. ಆದರೆ ಬಹಳವಾಗಿ ಆರೀತಿ ಮಾಡಬಾರದು ; ಬಹಳವಾಗಿ ಮಾಡಿದರೆ ಇದು ವಿಧಾನಸಭೆಯಾಗದೆ ಪಬ್ಲಿಕ್ ಪ್ಲಾಟ್ ಫಾರಂ ಆಗುತ್ತದೆ ; ಹಾಗಾಗಬಾರದು. ಈಗ ಇಲ್ಲಿರುವ ಮಂತ್ರಿಗಳಪೈಕಿ ಯಾರಾದರೂ ತಮ್ಮ ಕ್ಷೇತ್ರಗಳಿಗಾಗಲಿ ಅಥವಾ ತಮಗೆ ಸಂಬಂಧಪಟ್ಟ ಜಿಲ್ಲೆಗಾಗಲಿ ಹೆಚ್ಚಾಗಿ ಅನುಕೂಲಮಾಡಿಕೊಟ್ಟು ಇತರ ಕಡೆಗಳಿಗೆ ಅನುಕೂಲಪಡಿಸಿರದಿದ್ದರೆ ಅದನ್ನು ಅವರಿಗೆ ಹೇಳಬಹುದು.

ಶ್ರೀ ಎಸ್ ಗೋಪಾಲಗೌಡ.—ಈ ಕಾರ್ಯ ನೀತಿಯಲ್ಲಿ ಕಾಂಗ್ರೆಸ್ ಸರ್ಕಾರದವರು ಅಧಿಕಾರಕ್ಕೆ ಬಂದ ಮೇಲೆ ಯಾವುದೋ ಒಂದು ಅಭಿವೃದ್ಧಿ ಕೆಲಸವನ್ನು ಮಾಡುವಾಗ ತಮ್ಮ ಹಿತ, ತಮ್ಮ ಜನರ ಹಿತ, ತಮ್ಮ ಊರು ತಮ್ಮ ಕೇರಿ ಇವುಗಳನ್ನು ದೃಷ್ಟಿಯಲ್ಲಿಟ್ಟು ಸಾರ್ವಜನಿಕರ ಹಣವನ್ನು ಖರ್ಚುಮಾಡುತ್ತಿರುವುದು ಕಂಡುಬರುತ್ತದೆ. ಇದು ಬಹಳ ಕೆಟ್ಟ ಪದ್ಧತಿ ಮತ್ತು ದುಷ್ಟ ಪದ್ಧತಿ ಎಂದು ಬಹಳ ಕಟುವಾಗಿ ಖಂಡಿಸುತ್ತೇನೆ ಇದು ಎಲ್ಲಾಕಡೆಯೂ ನಡೆದಿದೆ. ಶ್ರೀ ಹನುಮಂತಯ್ಯನವರು ಅಧಿಕಾರದಲ್ಲಿದ್ದಾಗ ಆರು ತಿಂಗಳಲ್ಲಿ ಸಾಗರದಲ್ಲಿ ಒಂದು ಆಸ್ಪತ್ರೆ ತೆರೆಯುವುದಾಗಿ ಹೇಳಿದ್ದರೂ ಅದು ಇನ್ನೂ ಆಗಿಲ್ಲ. ಇದಕ್ಕೆ ಕಾರಣವೇನು ? ಹೀಗೆ ಅನೇಕ ಉದಾಹರಣೆಗಳಿವೆ. ಅವರು ಕೊಟ್ಟ ಭರವಸೆ ಈಡೇರಿಸದಿರುವ ಸಂದರ್ಭಗಳು ಒಂದಲ್ಲ, ಎರಡಲ್ಲ, ನೂರಾರಿವೆ. ಇದು ನಡೆಯಬಾರದೆಂದು ಅವರಿಗೆ ಸ್ಪಷ್ಟವಾಗಿ ಹೇಳುತ್ತೇನೆ, ಇದರಿಂದ ಬಹಳ ದೊಡ್ಡ ತಪ್ಪನ್ನು ಮಾಡಿದಂತಾಗುವುದು ಮಾತ್ರವಲ್ಲ, ಸಾರ್ವಜನಿಕರಿಗೆ ದೊಡ್ಡ ಅನ್ಯಾಯವನ್ನು ಮಾಡುತ್ತೀರಿ ಎಂದು ಸರ್ಕಾರಕ್ಕೆ ಹೇಳುತ್ತೇನೆ. ಖರ್ಚು ಮಾಡುವಾಗ ಎಲ್ಲಿ ಆವಶ್ಯಕತೆಯಿದೆಯೋ ಅಲ್ಲಿ ಮಾಡಬೇಕು, ಎಲ್ಲಿ ಆಸ್ಪತ್ರೆಯಾಗಲಿ, ಸ್ಕೂಲು, ಸೇತುವೆ, ರಸ್ತೆ ಅಥವಾ ಯಾವುದೇ ಅಭಿವೃದ್ಧಿ ಕಾರ್ಯವಾಗಲಿ ಆವಶ್ಯಕವೋ ಅಲ್ಲಿ ಮಾಡಬೇಕೇವಿನಾ ನಿಮ್ಮ ನಮ್ಮ ಶಿಫಾರ್ಸಿನಮೇಲೆ ನೀವು ಆವಶ್ಯಕವೆಂದು ಭಾವಿಸಬಹುದಾದ ಕಡೆಗಳಲ್ಲೆಲ್ಲಾ ಅಭಿವೃದ್ಧಿ ಕಾರ್ಯ ಮಾಡುತ್ತೇವೆಂದು ಹೋದರೆ, ನಿಮಗೆ ಆಸಕ್ತಿಯಿರುವ ಕಡೆ ಎಲ್. ಐ. ಎಸ್. ಬ್ಲಾಕನ್ನು ಕೊಡುತ್ತೇವೆಂದು ಹೇಳಿದರೆ, ಅದು ಸಾರ್ವಜನಿಕ ಅಭಿವೃದ್ಧಿ ಕಾರ್ಯವಲ್ಲ, ನಿಮ್ಮ ಅಭಿವೃದ್ಧಿ ಕಾರ್ಯವಾಗುತ್ತದೆ, ಇದರಿಂದ ಅಧಿಕಾರವನ್ನು ಮತ್ತು ದೇಶದ ಹಣವನ್ನು ದುರುಪಯೋಗಪಡಿಸಿಕೊಂಡು ನಿಮ್ಮ ಹಿತ ನೀವು ಸಾಧಿಸಿಕೊಂಡಂತಾಗುತ್ತದೆ. ಇಂಥದಕ್ಕೆ ಅವಕಾಶವನ್ನು ಈ ಸ್ಥಾನದಲ್ಲಿದ್ದು ಖಂಡಿತ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ನನಗೆ ಕೊಟ್ಟಿರುವ ಕಾಲದಲ್ಲಿ ನಾನು ಅತ್ಯಂತ ಸಂಗ್ರಹವಾಗಿ ನನ್ನ ಅಭಿಪ್ರಾಯವನ್ನು ಸೂಚಿಸುತ್ತೇನೆ. ನಾವು 5 ವರ್ಷಗಳ ಹಿಂದೆ ಈ ಅಸೆಂಬ್ಲಿಗೆ ಬಂದ ಕಾಲದಲ್ಲಿ ದೇಶದ ಆಸ್ತಿಪಾಸ್ತಿ ಯಾವರೀತಿಯಿತ್ತು, ಈಗ 5 ವರ್ಷಗಳಾದ ಮೇಲೆ ಯಾವರೀತಿಯಾಗಿ ಅಭಿವೃದ್ಧಿ ಹೊಂದಿದೆ ಎಂಬುದನ್ನು ನಾವು ಚೆನ್ನಾಗಿ ಗಮನಿಸಬೇಕು. ನಮ್ಮ ಕಾಂಗ್ರೆಸ್ ಸರ್ಕಾರ 5 ವರ್ಷಗಳ ಹಿಂದೆ ಅಧಿಕಾರವನ್ನು ವಹಿಸಿದ ಕಾಲದಲ್ಲಿ ಆಹಾರ ಪರಿಸ್ಥಿತಿ ಬಹಳ ತೊಂದರೆಗೀಡಾಗಿ ದೇಶದಲ್ಲಿ ಬಹಳ ಕಷ್ಟವುಂಟಾಗಿತ್ತು. ಆದರೆ ಐದುವರ್ಷಗಳ ನಂತರ ಆಹಾರ ಸಮೃದ್ಧಿ ಸ್ವಲ್ಪ ಮಟ್ಟಿಗೆ ಆಗಿದೆ. ಆದಾಗ್ಯೂ ನಾವು ಪರಿಸ್ಥಿತಿ ಉತ್ತಮವಾಗಿದೆಯೆಂಬುದಾಗಿ ಸಂತೋಷಪಟ್ಟುಕೊಳ್ಳುವಹಾಗಿಲ್ಲ. ಆಹಾರದ ಬೆಲೆ ಜನರಿಗೆ ತೃಪ್ತಿಯನ್ನುಂಟುಮಾಡಿಲ್ಲ. ಆಹಾರದ ಬೆಲೆಯೇರಿದ್ದು ಸಾಮಾನ್ಯ ಜನರ ಹಣಕಾಸಿನ ಸ್ಥಿತಿಗೆ ಮೀರಿದೆ. ಆದ್ದರಿಂದ ಇನ್ನುಮುಂದೆ 5 ವರ್ಷಗಳಲ್ಲಾದರೂ ಆಹಾರದ ಪರಿಸ್ಥಿತಿ ಇನ್ನೂ ಹೆಚ್ಚು ತೃಪ್ತಿಕರವಾಗಿರುವಂತೆ ಮಾಡತಕ್ಕದು ನಮ್ಮ ಸರ್ಕಾರದ ಕರ್ತವ್ಯವಾಗಿದೆ.

ಸ್ವಾಮಿ, ಕಳೆದ 5 ವರ್ಷಗಳಲ್ಲಿ ಪ್ಲಾನಿಂಗ್ ಕಮಿಷನರವರು ಅಭಿಪ್ರಾಯ ಪಟ್ಟ ಹಾಗೆ ಭೂಸುಧಾರಣಾ ಸಮಸ್ಯೆಯನ್ನು ಬಹಳ ಮಟ್ಟಿಗೆ ಈ ಸಭೆ ಸುಧಾರಿಸಿದೆ. ಟೆನೆನ್ಸಿ ಸಂಬಂಧವಾಗಿ ಹಿಂದೆ ಆದಂಥ ಕಾನೂನನ್ನು ಇಡೀ ಸಂಸ್ಥಾನಕ್ಕೇ ಅನ್ವಯಿಸುವ ಹಾಗೆ ಏರ್ಪಾಡು ಮಾಡಲಾಯಿತು. ಆ ಕಾನೂನನ್ನು ತಿದ್ದುಪಡಿ ಮಾಡಲು ಒಂದು ಮಸೂದೆಯನ್ನು ತಂದಿದ್ದರು. ಆದರೆ ಕೆಲವು ಕಾರಣಗಳಿಂದ ಅದನ್ನು ಮುಂದಿನ ಸಭೆಯಲ್ಲಿ ತಂದು ತೃಪ್ತಿಕರವಾಗಿ ಬಗೆ ಹರಿಸಬೇಕಾಗಿದೆ, ಈ ಟೆನೆನ್ಸಿ ಕಾನೂನಿನ ವಿಷಯದಲ್ಲಿರತಕ್ಕ ಲೋಪದೋಷಗಳನ್ನು ಚೆನ್ನಾಗಿ ಮನಗಾಣಬೇಕಾಗಿದೆ. ಮುಖ್ಯೋದ್ದೇಶ, ಯಾವನು ಉಳುತ್ತಾನೋ ಅವನೇ ಉತ್ತ ಭೂಮಿಯ ಫಸಲನ್ನು ಚೆನ್ನಾಗಿ ಅನುಭವಿಸಬೇಕೆಂಬುದು. ಆದರೆ ಭೂಮಿ ಉಳುವವನು ಯಾರು, 2 ಎಕರೆ, 5 ಎಕರೆ, ಒಂದು ಸಾವಿರ ಎಕರೆ ಇರುವವರು ಯಾರು ಎಂದು ವಿಮರ್ಶೆ ಮಾಡಬೇಕು. ಈಗಿರುವ ಕಾನೂನಿನಲ್ಲಿ ಕೆಲವು ನ್ಯೂನಾತಿರಿಕ್ತಗಳಿವೆ. ಭೂಮಿ ವಿಷಯದಲ್ಲಿ ಒಬ್ಬೊಬ್ಬ ಮನುಷ್ಯನಿಗೆ ಇಷ್ಟು ಎಕರೆಯಿರಬೇಕೆಂದು ಪರಿಮಿತಿಯನ್ನಿಟ್ಟು ಒಂದು ಏರ್ಪಾಡು ಮಾಡಿದ ಹೊರತು ಈ ಸಮಸ್ಯೆ ತೃಪ್ತಿಕರವಾಗಿ ಬಗೆಹರಿಯುವುದಿಲ್ಲ. ಆದ್ದರಿಂದ ಮುಂದಿನ 5 ವರ್ಷಗಳಲ್ಲಿ ಸೀಲಿಂಗ್ ಲಿಮಿಟ್ ಎಂಬುದನ್ನು ಏರ್ಪಡಿಸಬೇಕೆಂಬುದು ನನ್ನ ಅಭಿಪ್ರಾಯ.

ಇನ್ನು ಮೂರನೆಯ ವಿಷಯವೇನೆಂದರೆ, ನಾವು ಐದು ವರ್ಷಗಳ ಹಿಂದೆ ಬಂದಾಗ ಯಾವ ಪರಿಸ್ಥಿತಿ ಇತ್ತು? ಈಗ ಹೇಗೆ ಇದೆ ಎಂಬುದನ್ನು ಪರಿಶೀಲಿಸಬೇಕು. ಸರಕಾರದ ಖರ್ಚು ಜಾಸ್ತಿಯಾಗುತ್ತಲೇ ಇದೆ. ಪ್ರತಿ ವರ್ಷ ಬಡ್ಜೆಟ್ ಖೋತಾ ಆಗುತ್ತಲೇ ಇದೆ. ಕೇಂದ್ರ ಸರಕಾರವು 365 ಕೋಟಿ ಖೋತಾ ಬಡ್ಜೆಟ್ಟು ಮಾಡಿದ್ದಾರೆ ಅಂದರೆ ಪ್ರತಿ ಒಂದು ದಿನಕ್ಕೆ ಒಂದು ಕೋಟಿ ಆಗುತ್ತದೆ. ಮೈಸೂರು ಬಡ್ಜೆಟ್ ಅಷ್ಟೇನೂ ಖೋತಾ ಆಗಿಲ್ಲ ಎಂದು ಹೇಳುವದು ಸರಿಯಲ್ಲ. ಒಂದು ಸುವ್ಯವಸ್ಥಿತವಾದ ತೂಕವಾದ ಸಮೃದ್ಧಿ ಇರತಕ್ಕಂಥ ಬಜೆಟ್ಟು ಇರುವಂತೆ ಏರ್ಪಾಡುಗಳನ್ನು ಮಾಡಬೇಕು. ಸದ್ಯಕ್ಕಿರುವ ಆಹಾರ ಪರಿಸ್ಥಿತಿ ಸಮಾಧಾನಕಾರಕವಾಗಿಲ್ಲ. ಅದು ಜನರಿಗೆ ತೃಪ್ತಿಯನ್ನು ಉಂಟು ಮಾಡಿಲ್ಲ. ಆಹಾರ ಪದಾರ್ಥಗಳ ಬೆಲೆಗಳು ಏರುತ್ತಲೇ ಇವೆ. ಸಾಮಾನ್ಯ ಜನರ ಆರ್ಥಿಕ ಸ್ಥಿತಿಗೆ ಮೀರಿದೆ. ಮುಂದಿನ ವರ್ಷದಲ್ಲಿ ಆಹಾರದ ಸ್ಥಿತಿಯನ್ನು ಉತ್ತಮಗೊಳಿಸುವುದು ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಕಳೆದ ಐದು ವರ್ಷಗಳಲ್ಲಿ ವಿದ್ಯಾಭ್ಯಾಸದ ಸುಧಾರಣೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಲೇ ಇದೆ. ಆದರೆ ವಿದ್ಯಾಭ್ಯಾಸದ ಮಟ್ಟದಲ್ಲಿ ಸುಧಾರಣೆಯಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಯೂನಿವರ್ಸಿಟಿಯ ಮಟ್ಟದಲ್ಲಿ ಬಹಳ ಲೋಪದೋಷಗಳು ಇವೆ. ಅವನ್ನೆಲ್ಲಾ ಸರಿಪಡಿಸುವದು ಅತ್ಯಗತ್ಯ. ವಿದ್ಯಾಭ್ಯಾಸದ ಸಮಸ್ಯೆಯ ವಿಷಯದಲ್ಲಿ ನನಗಂತೂ ಬಹಳ ವ್ಯಸನವುಂಟಾಗಿದೆ. ಆರ್ಥಿಕ ಸ್ಥಿತಿ ಸುಧಾರಿಸುವಂತೆ, ನಮ್ಮ ಸಂಸ್ಕೃತಿಗೆ ಅನುಗುಣವಾಗುವಂತೆ, ನಮ್ಮ ದೇಶ ಅಭ್ಯುದಯ ಹೊಂದುವಂತೆ ವಿದ್ಯಾಭ್ಯಾಸ ಕ್ರಮದ ಏರ್ಪಾಡು ಮಾಡಲು ನಾವು ಸಮರ್ಥರಾಗಿಲ್ಲ. ಇದು ಯಾವ ರೀತಿಯಾಗಿ ಇರಬೇಕು ಎಂಬುದನ್ನು ತಿಳಿದುಕೊಂಡು ಕ್ರಮವನ್ನು ತೆಗೆದುಕೊಳ್ಳಬೇಕು. ಆದುದರಿಂದ ಶಿಕ್ಷಣ ಮಟ್ಟ ಇಳಿಯುತ್ತಿರುವುದನ್ನು ತೀವ್ರ ಸರಿಪಡಿಸುವದು ಅತ್ಯಗತ್ಯ.

ಕಳೆದ ಐದು ವರ್ಷಗಳಲ್ಲಿ ದೊಡ್ಡ ದೊಡ್ಡ ಬದಲಾವಣೆಗಳು ಆಗಿವೆ. ಪ್ರಾಂತ ಪುನರ್ವಿಂಗಡಣೆ ಆಯಿತು. ಭಾಷಾವಾರು ಪ್ರಾಂತ ನಿರ್ಮಾಣವಾಯಿತು. ಒಂದೇ ಭಾಷೆಯ ತಳಹದಿಯ ಮೇಲೆ ಮೊದಲು ಆಂಧ್ರ ಪ್ರಾಂತ ರಚನೆ ಆಯಿತು. ಮುಖ್ಯವಾಗಿ ಒಂದು ಭಾಷೆ ಒಂದು ಪ್ರಾಂತ ಎಂಬ ತತ್ವಕ್ಕೆ ಮುಖ್ಯ ಮಂತ್ರಿ ನೆಹರು ಅವರು ಮಾನ್ಯತೆ ಕೊಡಲಿಲ್ಲ. ಈಗ ಮಾಡಲಾಗಿರುವ ಪ್ರಾಂತ ಪುನರ್ವಿಂಗಡಣೆಯ ಸಮಸ್ಯೆಯು ತೃಪ್ತಿಕರವಾಗಿ ಬಗೆ ಹರಿದಿಲ್ಲ. ಯಾಕೆಂದರೆ ಈಗ ನಡೆದ ಚುನಾವಣೆಗಳನ್ನು ನೋಡಿದರೆ; ಮಹಾರಾಷ್ಟ್ರದಲ್ಲಿ ಏನು ಆಗಿದೆ ಗುಜರಾತಿನಲ್ಲಿ ಏನು ಆಗಿದೆ ಎಂಬ ಸಂಗತಿಯನ್ನು ನೋಡಬೇಕು.

ಮೈಸೂರು ಸಂಸ್ಥಾನವು ಮೊದಲು ಚಿಕ್ಕದು ಆಗಿತ್ತು ಈಗ ದೊಡ್ಡದಾಯಿತು. ಹೊಸ ಪ್ರಾಂತ ಬಂದು ಅದರಿಂದ ನಮಗೆ ಎಷ್ಟು ಆನಂದವಾಗಬೇಕೊ ಎಷ್ಟು ಉಲ್ಲಾಸವಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಇದಕ್ಕೇ ಕಾರಣವೇನೆಂದರೆ ಮಂತ್ರಿಮಂಡಲದಲ್ಲಿ ಆಗಿರುವ ಶೀಘ್ರವಾದ ಬದಲಾವಣೆಗಳು. ಮುಂದಿನ ಐದು ವರ್ಷಗಳಲ್ಲಿ ಆದರೂ ಆ ರೀತಿ ಬದಲಾವಣೆಯು ಆಗದಂತೆ ನೋಡಿಕೊಳ್ಳಬೇಕು. ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ, ಕಳೆದ ಆರೇಳು ತಿಂಗಳುಗಳಲ್ಲಿ ಮೈಸೂರಲ್ಲಿ ಸರಕಾರ ಇತ್ತೋ ಇಲ್ಲವೋ ಎಂಬ ಸಂದೇಹವಾಗಿದೆ. ವಿಧಾನಸೌಧ ಸಮಿತಿಯು ರಚನೆ ಆಯಿತು. ಆ ಸಮಿತಿಯು ವರದಿಯನ್ನು ಕೊಟ್ಟಿತು. ಈ ಏಳು ತಿಂಗಳ ಕಾಲದಲ್ಲಿ ಈ ವಿಧಾನಸೌಧ ಕಟ್ಟಡದ ರಚನೆಯ ಕೆಲಸ ಎಷ್ಟರ ಮಟ್ಟಿಗೆ ಮುಂದುವರಿದಿದೆ? ರಸ್ತೆಯಿಂದ ವಿಧಾನ ಸೌಧಕ್ಕೆ ಬರಬೇಕಾದರೆ ಒಂದು ಗುಡ್ಡ ಹತ್ತಿ ಬರಬೇಕಾಗುತ್ತದೆ. ಒಂದು ಸುವ್ಯವಸ್ಥಿತವಾದ ರಸ್ತೆ ರಚನೆಯ ಏರ್ಪಾಡು ಮಾಡಲು ಆಗಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಸರಕಾರ ರಸ್ತೆಯ ಕೆಲಸ ಮಾಡಿಲ್ಲ. ಮುಂದೆ ಮಾಡುವ ಮನಸ್ಸು ಇರಬಹುದು. ಒಂದು ಮಂತ್ರಿಮಂಡಲ ಹೋಗಿ ಮತ್ತೊಂದು ಮಂತ್ರಿಮಂಡಲ ಬರಬಹುದು. ಹಿಂದಿನ ಮಂತ್ರಿ ಮಂಡಲ ಆರಂಭಮಾಡಿ ಅರ್ಧಕ್ಕೆ ಬಿಟ್ಟಿರುವ ಕೆಲಸವನ್ನು ಮುಂದಿನ ಮಂತ್ರಿಮಂಡಲವು ತೃಪ್ತಿಕರವಾಗಿ ಮುಂದುವರಿಸಬೇಕಾಗಿತ್ತು. ಅವರು ಹಾಗೆ ಮಾಡಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಹೇಳುತ್ತೇನೆ.

SRI A. V. NARASIMHA REDDY (Bangalore South).—Sri P. R. Ramaiya just now said that while coming to the Vidhana Soudha, we have to step up the steps and that the subsequent Ministry has not taken sufficient notice and they have not completed the Vidhana Soudha works to the satisfaction of all the members. I should like to know from him, whether it is his contention that the subsequent Ministry has changed the whole plan of the building? I want to know what exactly his contention is.

MR. SPEAKER.—What exactly is the contention of Sri P. R. Ramaiya, we will come to know later on. But I

(MR. SPEAKER.)

would like to inform Sri P. R. Ramaiya that he need not climb up the steps. A lift has been installed there and it is in working order.

Sri P. R. RAMAIYA.—Now it is 12-30 Sir. Shall I continue my speech afterwards ?

Mr. SPEAKER.—I thank him for reminding me of the time. The House will now adjourn and before it adjourns, I would like to announce a few things. The first thing is, the Hon'ble the Chief Minister has been pleased to extend the time of this House by a day ; and ; in fact, there was a cry from this House that they wanted two days, but it was impossible.

Sri K. PUTTASWAMY (Srirangapatna).—It was not a cry, Sir, but it was a request.

Mr. SPEAKER.—Of course 'cry' means many things. Cry includes a request also. Request, of course, is something milder. 'Cry' is not only a request, but it is also more than a request. That is why I used the word 'cry'.

Let us not quarrel about the words.

Sri J. MOHAMED IMAM.—We wanted two days. One day is not sufficient. I represented earlier that there are a number of Hon'ble members who want to take part in the debate. It is but fair that they get a chance. So I requested that at least two days may be given.

Mr. SPEAKER.—The trouble has been that the Leader of the Opposition did not himself go in person and make a request to the Leader of the House. Had he made such a request, I think, we would have got two days. However, the question is still open; let us see what happens. At least we have got the extension by a day which can be made use of. As I have already said, I have been much more lenient, but I have been also chided by some of the members for being lenient. They say that I have been too lenient in some cases and too strict in others. I do not know to whom I have been strict. But I should like to improve myself. If there is any individual case like that, I will certainly attend to it. I have not been consciously partial to some of the members. What happens is : it is very easy for the Hon'ble Members to say that I have been partial to some and not partial to others. If they come and sit here, they will know the difficulties which I have been facing. I have to deal with so many questions and so many matters; naturally so many things happen for which the criticism may be for, or against. I do not quarrel about the criticisms at all. What I am always aiming at is, that I want to improve myself; and if the Hon'ble Members feel that I should do something, they should tell me straightaway.

Another matter that I just now found out is that while putting questions or raising point of orders, what some of the members do is, that they try to cast aspersions on the Chair. I would not personally mind what the Hon'ble Members say, but I do mind when I have to defend the dignity and honour of the Chair. Hon'ble Member Sri K. Prabhakar said. "ಇದು ಅನ್ಯಾಯ ವಲ್ಲವೇ". Instead of saying that, if he had said how the Chair could do this, I would have explained to him. He should have put such a question as the Chair would not have taken it as an aspersion on the chair. I must say that I have been interrupting too many times; I am conscious of it. I have to do that because I find, when the questions are asked, double questions, treble questions and even four questions are put and asked. I have to correct the members because it is not right to put so many questions at a time; and upon assumptions members should not put questions. That is why I have been asking the members to put one question at a time instead of huddling up two or three questions together. Hon'ble Members will excuse me for that. We have to build certain healthy conventions and I am trying to do that. After saying this, I want to know from themembers whether they would like to take up the legislative business today in the evening or the financial matters.

*Sri H. K. VEERANNA GOWDH.—May I make a suggestion Sir ? Since the

legislative business is not going to occupy much time of the House, we shall finish this item. It is likely that members may ask for one day's extension. So the debate on the budget may continue from Monday onwards depending upon the members. I would suggest that we can complete legislative business this evening.

*Sri A. V. NARASIMHA REDDY.—Normally when the session was held in the afternoons, it used to meet at 4 O'clock. To meet again at 2-30 today would be too early, Sir. I therefore request the Chair kindly to permit us to go over here at 3-30 P. M.

Mr. SPEAKER.—Last time we met at 2-30 P. M. If the Hon'ble Members have objection, we can meet at 3 O'clock instead of 2-30. So, we will take up the legislative business this afternoon. The legislative business on hand is not such a controversial matter unless we make it so. We will be finishing it within one hour; afterwards we shall resume the debate on the Budget. I wish to make it clear that we take first of all the legislative matter and then go to the Budget.

The House now rises and meets at 3 P. M. today.

The House adjourned at Forty Minutes past Twelve of the Clock and re-assembled at Three of the Clock.

[Mr. SPEAKER in the Chair]

(*Quorum was formed at* 3-4 P.M)

MYSORE TENANCY (AMENDMENT AND CONTINUANCE OF TENANCIES) BILL, 1957.

Motion to consider (*continued*).

*ಶ್ರೀ ಎಸ್. ಬಿ. ಪೂಜಾರ್ (ರೋಣ).—ಮಾನ್ಯ ಸಭಾಪತಿಗಳೇ, ನಾನೀಗ ಈ ಸಭೆಯ ಮುಂದಿರುವ ದೌರ್ಭಾಗ್ಯ ವಿಧೇಯಕವನ್ನು ವಿರೋಧಿಸಲಕ್ಕೆ ಎದ್ದು ನಿಂತಿದ್ದೇನೆ. ದೌರ್ಭಾಗ್ಯ ವಿಧೇಯಕವೆಂದು ಹೇಳಲಕ್ಕೆ ಎರಡು ಕಾರಣಗಳಿವೆ. ಈ ವಿಧೇಯಕವು ಒಂದು ಸುಗ್ರೀವಾಜ್ಞೆಗೆ ತುತ್ತಾಗಿ ಹೊರಬಂದುದು ಮೊದಲನೆಯ ದೌರ್ಭಾಗ್ಯ. ಕಾರ್ಯಗತವಾಗಲಾರದಂಥ ಕೆಲವು ಅಂಶಗಳನ್ನೊಳಗೊಂಡಿರುವುದು ಎರಡನೆಯ ದೌರ್ಭಾಗ್ಯ. ಮುಂಬೈ ಶಾಸನದ ಕಾಯಿದೆ ತಿದ್ದುಪಡಿ ವಿಧೇಯಕ ಚರ್ಚೆಗೆ ಬಂದಾಗ ಸುಗ್ರೀವಾಜ್ಞೆಯ ಬೇಕು ಬೇಡಗಳ ಬಗ್ಗೆ, ಔಚಿತ್ಯ ಮತ್ತು ಅನೌಚಿತ್ಯಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಆದರೆ ಈಗ ಚರ್ಚೆಗೆ ಇರುವಂಥ ಈ ವಿಧೇಯಕವೂ ಕೂಡ ಮುಂಬೈ ಟೆನೆನ್ಸಿ ಕಾಯಿದೆ ತಿದ್ದುಪಡಿಯ ವಿಧೇಯಕಕ್ಕೆ ಪೂರಕವಾಗಿ ಅದರಲ್ಲಿ ಒಳಗೊಂಡಂಥ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಮಾತ್ರ ಸುಗ್ರೀವಾಜ್ಞೆ ಮುಖಾಂತರ ಮೊದಲನೆಯದಾಗಿ ಜನ್ಮತಾಳಿ ಬಂದು ಅನಂತರ ಈ ಸಭೆಯ ಮುಂದೆ ವಿಧೇಯಕ ರೂಪದಲ್ಲಿ ಇದೆ. ನಿಜವಾಗಿ ನೋಡಿದರೆ ಈ ವಿಧೇಯಕದ ಬಗ್ಗೆ ಸುಗ್ರೀವಾಜ್ಞೆಯ ಅವಶ್ಯಕ, ಅದರ ಅಗತ್ಯ ಎಳ್ಳಷ್ಟೂ ಇರಲಿಲ್ಲ. ಮುಂಬೈ ಟೆನೆನ್ಸಿ ಕಾಯಿದೆ ವಿಷಯದಲ್ಲಾದರೋ ಏಪ್ರಿಲ್ ಒಂದನೆ ತಾರೀಖಿನಿಂದ ರೈತರಿಗೆ ಕೆಲವು ಹಕ್ಕುಗಳು ಲಭ್ಯವಾಗುವುವು ಇದ್ದುವು. ಆ ಹಕ್ಕುಗಳು ಲಭ್ಯವಾಗುವ ಪೂರ್ವದಲ್ಲಿ ತೀರ ಅಗತ್ಯದ ಮಾರ್ಗವೆಂದು ಪರಿಗಣಿಸಿ ಆ ಬಗ್ಗೆ ಸುಗ್ರೀವಾಜ್ಞೆಯನ್ನು ಹೊರಡಿಸಿರುತ್ತಾರೆ. ಆದರೆ ಈ ಮೈಸೂರು ಟೆನೆನ್ಸಿ ವಿಧೇಯಕವೇನಿದೆ ಈ ವಿಧೇಯಕಕ್ಕೆ ಅಂಥ ಅಗತ್ಯವೇನೂ ಇರಲಿಲ್ಲ. ಇದು ಕೇವಲ ಮುಂಬೈ ಟೆನೆನ್ಸಿ ಕಾಯಿದೆ ತಿದ್ದುಪಡಿ ವಿಧೇಯಕ ವೇನಿತ್ತು ಅದರ ಕೈಗೂಸಾಗಿ ಅದರ ಉದ್ದೇಶ ಸಾಫಲ್ಯಕ್ಕೋಸ್ಕರ ಹೊರಬಂದದ್ದಾಗಿದೆ. ಉದ್ದೇಶ ನಿರೂಪಣ ಹೇಳಿಕೆಯಲ್ಲಿ ಈ ರಾಜ್ಯದ ಎಲ್ಲಾ ಭಾಗಗಳಿಗೂ ಸಾಮಾನ್ಯವಾಗಿ ಅನ್ವಯಿಸಬಹುದಾದಂಥ ಒಂದು ಗೇಣಿ ಶಾಸನವನ್ನು ಮಾಡಬೇಕಾಗಿದೆ. ಆ ವಿಷಯವನ್ನು ತಿಳಿದುಕೊಂಡು ordinance ಮೂಲಕ ಹೊರಡಿಸಿದ ಕೆಲವು ಅಂಶಗಳನ್ನು ತಿದ್ದುಪಡಿ ಮಾಡಿ ಈಗ ಈ ವಿಧೇಯಕ ರೂಪದಲ್ಲಿ ಈ ಸಭೆಯ ಮುಂದೆ ಇಡಲಾಗುತ್ತಿದೆ ಎಂದು ಹೇಳಲಾಗಿದೆ. ನಿಜವಾಗಿ ಹೇಳುವುದಾದರೆ ಈ ವಿಧೇಯಕದ ಉದ್ದೇಶ ಒಂದು ಸರ್ವೇ ಸಾಮಾನ್ಯವಾದ, ಇಡೀ ರಾಜ್ಯಕ್ಕೆ ಅನ್ವಯಿಸಬಹುದಾದಂಥ ಶಾಸನವನ್ನು ರಚಿಸುವ ಉದ್ದೇಶವಿರದೆ ಮುಂಬೈ ಶಾಸನವು ಕಾರ್ಯಗತವಾಗಬಾರದು ಎನ್ನುವ ಉದ್ದೇಶದಿಂದ, ಒಂದು ನೆಪವೇನಿದೆ, ತಂತ್ರವೇನಿದೆ, ಆ ತಂತ್ರಕ್ಕೆ ಅನುಗುಣವಾಗಿ ಆ ವಿಧೇಯಕವನ್ನು; ಆ ಮುಂಬೈ ಭಾಗದಲ್ಲಿ ಇದ್ದಂಥ ಶಾಸನದ ಕೆಲವು ಅಂಶಗಳು ಬೇಗ ಪ್ರಚಾರದೊಳಗೆ ಬರಬಾರದು, ರೈತರಿಗೆ ಲಭ್ಯವಾಗುತ್ತಿರುವ ಹಕ್ಕುಗಳು ಲಭ್ಯವಾಗಬಾರದು ಎಂಬ ಉದ್ದೇಶವನ್ನು ಇಟ್ಟುಕೊಂಡು ಈ ವಿಧೇಯಕವನ್ನು ತಂದಿರುವುದು ಬಹಳ ಸ್ಪಷ್ಟವಾಗಿದೆ. ಇಲ್ಲದೆ ಹೋದರೆ ಈ ವಿಧೇಯಕದ ಅವಶ್ಯಕತೆ, ಸುಗ್ರೀವಾಜ್ಞೆಯಬಾಯಿಂದ ಹೊರಬೀಳುವಂಥ ಅವಶ್ಯ, ಅಗತ್ಯ ಎಳ್ಳಷ್ಟೂ ಇರಲಿಲ್ಲ. ಈಗ ಮೈಸೂರಿನಲ್ಲಿರುವಂಥ ಗೇಣಿ ಶಾಸನವೇನಿದೆ ಇದರಲ್ಲಿ 1952ನೆ ಇಸವಿಯೊಳಗೆ ಕೆಲವು ಗೇಣಿಗಳು ಹಿಡಿದವರು ಮತ್ತು ಅದಕ್ಕಿಂತಲೂ ಪೂರ್ವದಲ್ಲಿ ಉಪಸ್ಥಿತವಾದಂಥ ಗೇಣಿಗಳನ್ನು ಐದು ವರ್ಷ ಪೂರ್ವದಲ್ಲಿ ಅವು ಮುಕ್ತಾಯಗೊಳ್ಳಬಾರದು ಮತ್ತೆ ಯಾವ ಗೇಣಿಯೂ 1952ರ ನಂತರ ಹಿಡಿದವರ ಗೇಣಿಗಳಿಗೆ ಐದು ವರ್ಷಕ್ಕಿಂತ ಕಡಮೆ ಆಯುಮಾನವು ಇರಬಾರದು, ಒಂದು ವೇಳೆ ರೈತನು ತಾನು ಸಾಗುವಳಿ ಮಾಡುತ್ತ ಇರತಕ್ಕ ಭೂಮಿಯನ್ನು ಒಡೆಯನಿಗೆ ಬಿಟ್ಟು ಕೊಡುವ ಪ್ರಸಂಗ ಬಂತು ಅಂದರೆ ಆತನ ತನ್ನ ಆತ್ಮ ಸಂತೋಷದಿಂದ ಬಿಟ್ಟು ಕೊಡಬೇಕಾಗಿತ್ತು

(ಶ್ರೀ ಎಸ್. ಬಿ. ಪೂಜಾರ್)

ಅಂದರೆ ಒಡೆಯನ ಒಪ್ಪಿಗೆಯಿಂದ ಅಮಲ್ದಾರರ ಎದುರಿನಲ್ಲಿ ಆ ರೀತಿ ಪ್ರತಿಜ್ಞೆ ಮಾಡಿ ಬಿಟ್ಟು ಕೊಡಬೇಕಾಗುಗಿತ್ತು. ಮತ್ತು ಒಡೆಯ ಆ ಭೂಮಿಯನ್ನು ಸ್ವಂತ ಸಾಗುವಳಿ ಸಲುವಾಗಿ ವಶಪಡಿಸಿಕೊಳ್ಳಬೇಕಾಗಿತ್ತು. ಅಂದರೆ, ಆ ಬಗ್ಗೆ ಸ್ವಂತ ಸಾಗುವಳಿಗೆ ಬೇಕು ಎಂದು ತಿಳಿದುಕೊಂಡು ಅಮಲ್ದಾರರಲ್ಲಿ ಅರ್ಜಿ ಹಾಕಿ ಅದನ್ನು ತನ್ನ ಸ್ವಂತ ಉಪಯೋಗದ ಸಲುವಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು. ಈ ರೀತಿ ಮೊದಲಿನ ಶಾಸನ ಇದೆ. 1952ರಲ್ಲಿ ಮತ್ತು ಅದಕ್ಕೆ ಪೂರ್ವದಲ್ಲಿ ಲಭ್ಯವಾದ, ರೈತರಿಗೆ ಸಿಕ್ಕಂಥ ಕೆಲವು ಗೇಣಿ ಹಕ್ಕುಗಳು 1957ಕ್ಕೆ ಮುಕ್ತಾಯವಾಗುತ್ತವೆ. 1957ಕ್ಕೆ ಮುಕ್ತಾಯವಾಗುವಂಥ ಆ ಗೇಣಿ ಹಕ್ಕುಗಳನ್ನು ಒಂದು ವರ್ಷದವರೆಗೂ ಮುಂದುವರಿಸಬೇಕು, ಆ ಮಧ್ಯೆದಲ್ಲಿ ಯಾರಾದರೂ ರೈತರು ತಾವು ಸಾಗುವಳಿ ಮಾಡುವಂಥ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ತಮ್ಮಿಂದ ಸಾಧ್ಯವಿಲ್ಲ ಎಂದು ತಮ್ಮ ಆತ್ಮ ಸಂತೋಷದಿಂದ ಬಿಟ್ಟು ಕೊಡುವಂಥ ಪ್ರಸಂಗ ಇದ್ದರೆ ಅಂಥ ಭೂಮಿಯನ್ನು ಸರ್ಕಾರ ತನ್ನ ವಶದಲ್ಲಿ ತೆಗೆದುಕೊಂಡು ಅದರ ವ್ಯವಸ್ಥೆಯನ್ನು ಅದು ಮಾಡಬೇಕು ಎಂದು ಹೇಳಿರುವುದು ಈ ವಿಧಾಯಕದ ಅಂಶಗಳಲ್ಲಿ ಪ್ರಾಮುಖ್ಯವಾದುದು. ಕೊನೆಯದಾಗಿ ಹೇಳಿರುವಂಥ ಅಂಶವನ್ನ ನಾನು ಇದೀಗ ಹೇಳಿದ್ದು. ಇದರಲ್ಲಿ ಕಾರ್ಯಗತವಾಗಲಾರದಂಥ ಅಂಶಗಳು ಏನಿವೆ ಇವು ಮುಂಬೈ ಶಾಸನದಲ್ಲೂ ಕೂಡ ಇವೆ. ಮುಂಬೈ ಶಾಸನದ 46—47ನೇ ಕಲಂ ಮೇರೆಗೆ ಕೆಲವೊಂದು ಸಂದರ್ಭಗಳಲ್ಲಿ ಸರ್ಕಾರ ಭೂಮಿಯನ್ನು ವಶಪಡಿಸಿಕೊಂಡು ಅದರ ವ್ಯವಸ್ಥೆಯನ್ನು ತಾನೇ ಮಾಡಬೇಕೆಂದು ಅದರಲ್ಲಿ ಇದೆ. ಅದೇ ಶಾಸನದ ಅಂಶಗಳಿಗನುಗುಣವಾಗಿಯೇ ಈ ಅಂಶಗಳನ್ನೂ ರಚಿಸಲಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮುಂಬೈ ಶಾಸನದಲ್ಲಿ ಇದ್ದಂಥ ಅಂಶಗಳು ಕಾರ್ಯಗತವಾದದ್ದನ್ನು ಇಂದಿನವರೆಗೂ ನೋಡಿದರೆ ಈ ಅಂಶಗಳೂ ಕೂಡ ಅದೇ ವಿಧಿಯನ್ನು ಅನುಭವಿಸುತ್ತವೆ ಎಂದು ಹೇಳಬಹುದು..

ಮುಂಬೈ ಕರ್ನಾಟಕದ ಭಾಗದಲ್ಲಿ ಶಾಸನ ರಚಿತವಾದ ನಂತರ ಈ ಕೆಲವು ವರ್ಷಗಳಲ್ಲಿ ವಾದಕ್ಕೆ ಎದ್ದ ಯಾವ ಪ್ರಸಂಗದಲ್ಲೂ ಕೂಡ ಭೂಮಿಯನ್ನು ವಶಪಡಿಸಿಕೊಂಡು, ಅವುಗಳನ್ನು ತಮ್ಮ ವ್ಯವಸ್ಥೆಗೆ ಒಳಪಡಿಸಿಕೊಂಡಿಲ್ಲ. ಎಷ್ಟೋ ಪ್ರಸಂಗಗಳಲ್ಲಿ ಆ ಕಾಯಿದೆಯ 65ನೇ ಕಲಮ್ ಮೇರೆಗೆ ಪ್ರಸಂಗ ಹೀಗೂ ಬರುತ್ತದೆ, ಯಾವುದಾದರೂ ಒಂದು ಭೂಮಿ, ಆ ಮಾಲಿಕನ ನಿರ್ಲಕ್ಷ್ಯದಿಂದಾಗಲಿ, ಬೇರೆ ಯಾವ ಕಾರಣದಿಂದಾಗಲಿ ಸಾಗುವಳಿ ಆಗದೇ ಬಿದ್ದಿದ್ದರೆ ಅದನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಅದರ ವ್ಯವಸ್ಥೆಯನ್ನು ತನ್ನ ನೇತೃತ್ವದಲ್ಲಿ ನಡೆಸಬೇಕೆಂದು ತಿಳಿದುಕೊಂಡಿದೆ ಎಷ್ಟೋ ಉದಾಹರಣೆಗಳನ್ನು ಹೇಳಬಹುದು. ದೊಡ್ಡ ದೊಡ್ಡ ಭೂಮಿಯ ಮಾಲಿಕರು ತಾವು ಸಾಗುವಳಿ ಮಾಡಲಾರದೆ, ಅದನ್ನು ರೈತರಿಗೂ ಸಾಗುವಳಿಗೆ ಕೊಡಲಾರದೆ ಹಾಗೆಯೇ ಬೀಳು ಬಿಟ್ಟಿರುವ ಉದಾಹರಣೆಗಳನ್ನು ಸರ್ಕಾರದವರ ಗಮನಕ್ಕೆ ಅನೇಕ ಸಂದರ್ಭದಲ್ಲಿ ನಾವು ತಂದು ಕೊಟ್ಟಾಗ್ಯೂ ಕೂಡ ಅಧಿಕಾರಿಗಳು ನಿರ್ಲಕ್ಷ್ಯಭಾವತಾಳಿ ಅಂಥ ಭೂಮಿಗಳನ್ನು ವಶಪಡಿಸಿಕೊಳ್ಳಲಿಲ್ಲ ಮತ್ತು ಅವನ್ನು ಭೂಮಿ ಇಲ್ಲದ ಜನರ ಸಲುವಾಗಿ ಸಾಗುವಳಿಗಾದರೂ ಕೊಡಿರಿ ಎಂದು ಸರ್ಕಾರದವರಿಗೆ ಎಷ್ಟೋ ರೆಪ್ರೆಸೆಂಟೇಷನ್ ಮಾಡಿದ್ದರೂ ಕೂಡ ಸರ್ಕಾರ ಆಗಲಿ ಸರ್ಕಾರದ ಅಧಿಕಾರಿಗಳಾಗಲಿ ಆ ಬಗ್ಗೆ ಗಮನಕ್ಕೆ ತೆಗೆದು ಕೊಂಡು ನೋಡಿಲ್ಲ.

ಅಧ್ಯಕ್ಷರು.—ಯಾವ ಸರ್ಕಾರ !

ಶ್ರೀ ಎಸ್. ಬಿ. ಪೂಜಾರ್.—ಇದೇ ಸರ್ಕಾರ. ಅನೇಕ ಜನರಿಗೆ ಗೊತ್ತಿರಬಹುದು. ಇದೇ ನವಂಬರ್ 19ನೇ ತಾರೀಖಿನ ದಿವಸ ಧಾರವಾಡದ ಜಿಲ್ಲೆಯ ಭೂಮಿ ಇಲ್ಲದ ಕೂಲಿಗಾರರು ಮತ್ತು ಸಣ್ಣ ರೈತರು ಭಾರಿ ಮೆರವಣಿಗೆಯನ್ನು ತೆಗೆದುಕೊಂಡು ಕಲೆಕ್ಟರ ಬಳಿಗೆ ಹೋಗಿ, ಕಲೆಕ್ಟರ ಮುಖಾಂತರವಾಗಿ ಸರ್ಕಾರಕ್ಕೆ ಅರ್ಪಿಸಲಿಕ್ಕೆ ಎಂದು ತಿಳಿದುಕೊಂಡು ಒಂದು ಮನವಿಯನ್ನು ಒಯ್ದಿದ್ದರು. ಆ ಮನವಿಯಲ್ಲಿ ಈ ಅಂಶವನ್ನು ಸರಿಯಾಗಿ ಕಾಣಿಸಲಾಗಿತ್ತು. ಮತ್ತು ಕೆಲವು ಉದಾಹರಣೆಗಳನ್ನು ಸಹ ತೋರಿಸಲಾಗಿತ್ತು. ಆ ಬಗ್ಗೆ ಸರ್ಕಾರವಾಗಲಿ ಅಥವಾ ಜಿಲ್ಲಾ ಮಟ್ಟದ ಅಧಿಕಾರಿಗಳಾಗಲಿ ಯಾವ ಕ್ರಮಗಳನ್ನೂ ಕೈಕೊಂಡಿಲ್ಲ. ಧಾರವಾಡದ ತಾಲ್ಲೂಕಿನಲ್ಲಿ ಮುಮ್ಮಿಗಟ್ಟಿ ಎಂದು ಒಂದು ಇನಾಂ ಗ್ರಾಮ ಇದೆ, ಅಲ್ಲಿ ಒಬ್ಬ ದೊಡ್ಡ ದೇಸಾಯಿಯರು ಇದ್ದಾರೆ. ಆ ದೇಸಾಯರ 400—500 ಎಕರೆ ಭೂಮಿ ಸಾಗುವಳಿ ಆಗದೆ ಬಿದ್ದಿದೆ. ಎಂದಿನಿಂದ ಸಾಗುವಳಿ ಆಗದೆ ಬಿದ್ದಿದೆಯೋ ಅದು ನಮಗಂತೂ ಗೊತ್ತಿಲ್ಲ ಎಂದು ಅಲ್ಲಿಯ ಜನ ಹೇಳುತ್ತಾರೆ. ಸಾಗುವಳಿ ಆಗದೇ ಬಿದ್ದಂಥ ಆ ಜಮೀನನ್ನು 7—8 ವರ್ಷದಿಂದ ಅಲ್ಲಿ ಶಾಸನ ಇದ್ದರೂ ಕೂಡ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿಲ್ಲ. ನಾವು ಹೋಗಿ ಆ ಭೂಮಿಯನ್ನು ಭೂಮಿಹೀನರ ಪರವಾಗಿ, ಕೊಡಿರಿ ಸಾಗುವಳಿ ಮಾಡಿಕೊಳ್ಳಲಿಕ್ಕೆ ತಯಾರಾಗಿದ್ದಾರೆ, ಕೋ-ಆಪರೇಟಿವ್ ಸಂಘ ಮಾಡಿಕೊಂಡು ಆ ಮೂಲಕ ಆದರೂ ಮಾಡಲಿಕ್ಕೆ ಸಿದ್ಧವಾಗಿದ್ದಾರೆ ಎಂದು ಹೇಳಿದರೂ ಕೂಡ ಅಧಿಕಾರಿಗಳು ಅದಕ್ಕೆ ಗಮನ ಕೊಟ್ಟಿಲ್ಲ. ಒಂದೆರಡು ಕಡೆ ಕೇವಲ 27-28 ಎಕರೆ ಜಮೀನು ಇದೆ. ಅದು ದೇಸಾಯರದೂ ಅಲ್ಲ, ಅವರ ಸಂಬಂಧಿಕರದು ಯಾರದೋ, ಆ 27-28 ಎಕರೆ ಭೂಮಿಯನ್ನು ಮಾತ್ರ ಸರ್ಕಾರ ತನ್ನ ವಶದಲ್ಲಿ ತೆಗೆದುಕೊಂಡಿತು ಎಂದು ಆಜ್ಞೆ ಹೊರಡಿಸಿದರು. ಅವುಗಳನ್ನು ಭೂಮಿ ಇಲ್ಲದ ಹರಿಜನರು ಮತ್ತು ಹಿಂದುಳಿದ ವರ್ಗದವರಿಗೆ ಸಾಗುವಳಿ ಮಾಡಲಿಕ್ಕೆ ಕೊಡಿರಿ ಎಂದು ಕೇಳಿದೆವು. ಆ ಮೇರೆಗೆ ಸರ್ಕಾರಕ್ಕೆ ಅರ್ಜಿಯನ್ನು ಕೂಡ ಬರೆದು ಕೊಟ್ಟಿದ್ದೇವೆ. ಆದರೆ ಅಧಿಕಾರಿಗಳು ಅದನ್ನು ಅವರ ವಶಕ್ಕೆ ಕೊಡಲೊಲ್ಲರು. ಏಕೆಂದರೆ ಅವರು ಹೇಳಿದರು ದೇಸಾಯರು ಪ್ರಬಲ ವ್ಯಕ್ತಿಗಳು ಅವರ ವಿರುದ್ಧ ನಾವು ಹೋಗುವುದು ಸ್ವಲ್ಪ ಕಷ್ಟ ಬೇಕಾದರೆ ನಿಮ್ಮ ಶಕ್ತಿ ಸಾಮರ್ಥ್ಯ ಇದ್ದರೆ ನೀವೇ ತೆಗೆದುಕೊಳ್ಳಬಹುದು ಎಂದು, ಅದಕ್ಕೆ ನಾವು ಹೇಳಿದೆವು. . .

ಅಧ್ಯಕ್ಷರು.—ಈ ಮಾತುಗಳನ್ನು ಬೊಂಬಾಯಿ ಅಮೆಂಡ್‌ಮೆಂಟ್ ಬಿಲ್ ಬಂದಾಗ ಏಕೆ ಹೇಳಲಿಲ್ಲ ! ಮೈಸೂರು ಅಮೆಂಡ್‌ಮೆಂಟ್ ಬಿಲ್ ಬಂದಾಗ ಈಗ ಹೇಳುತ್ತಾ ಇದ್ದೀರಿ. ಆಗಲೇ ಹೇಳಿದ್ದರೆ ಸರಿಯಾಗಿತ್ತು. ಈಗ ಆ ಮಾತುಗಳು ಹೊಂದುತ್ತವೆ ಎಂದು ಅನ್ನಿಸುವುದಿಲ್ಲ. ಇದು ಮೈಸೂರು ಟೆನೆನ್ಸಿ ಅಮೆಂಡ್‌ಮೆಂಟ್ ಬಿಲ್ ಇರುವುದರಿಂದ ಮೈಸೂರು ಭಾಗಕ್ಕೆ ಸಂಬಂಧಿಸಿದ ವಿಷಯ ಮಾತ್ರ ಹೇಳಬೇಕೇ ವಿನಾ ಮುಂಬೈ ಟೆನೆನ್ಸಿಗೆ ಸಂಬಂಧಿಸಿದ ಹಾಗೆ ಹೇಳುವುದು ಇಲ್ಲಿ ಅಷ್ಟಾಗಿ ಸರಿಹೊಂದುವುದಿಲ್ಲ. ಆದಕಾರಣ ಈಗ ಹೇಳುವುದು ವಾಸ್ತವಿಕವಾಗುವುದಿಲ್ಲ.

ಶ್ರೀ ಎಸ್. ಬಿ. ಪೂಜಾರ್.—ಸಭಾಪತಿಗಳೇ, ಈಗ ಪ್ರಸಕ್ತವಾಗಿ ಈ ಸಭೆಯ ಮುಂದೆ ಬಂದಂಥ ಈ ವಿಧೇಯಕದ ಆರು-ಏಳನೇ ಕ್ಲಾಸ್‌ಗಳ ಮೇರೆಗೆ

(Departmental Library)
ಕನಾ. ಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
Accession No. 4733

ಭೂಮಿಯನ್ನು ರೈತರು ತಾವಾಗಿಯೇ ಸರಂಡರ್ ಮಾಡಿದರೆ ಸರ್ಕಾರದ ಮ್ಯಾನೇಜ್‌ಮೆಂಟಿಗೆ ವಹಿಸಿಕೊಳ್ಳಬಹುದು ಎಂದಿದೆ. ಈ ಕ್ಲಾಸ್‌ನಲ್ಲಿ ಇದ್ದಂಥ ಅಂಶಗಳೇ ಮುಂಬೈ ವಿಧಾಯಕದ 46-47 ನೇ ಕ್ಲಾಸ್‌ಗೆ ಅನಲೋಗಸ್ ಆಗುತ್ತದೆ.

ಅಧ್ಯಕ್ಷರು.—ಇದೇ ಕಲಮು ಆ ಕಾಲಕ್ಕೆ ಇದ್ದ ಅಮೆಂಡಿಂಗ್ ಬಿಲ್ ನಲ್ಲಿದ್ದಿದ್ದರೆ ಆಗಲೇ ಹೇಳಬೇಕಾಗಿತ್ತು. ಈಗ ಇರುವುದು ಏನಿದೆ ಇದು ಹಳೇ ಮೈಸೂರಿನಲ್ಲಿ ಜಾರಿಯಲ್ಲಿದ್ದಂಥ ಕಾಯಿದೆಯನ್ನು ತಡೆಹಿಡಿಯುವ ಸಲುವಾಗಿ ಮತ್ತು ಇಲ್ಲಿ ಸರಂಡರ್ ಆದ ಜಮೀನನ್ನು ಯಾವ ಪ್ರಕಾರ ಸರ್ಕಾರ ನಡೆಸಬೇಕೆಂಬ ಸಲುವಾಗಿ ಇದೆ. ಆದಕಾರಣ ತಾವು ಹೇಳುವ ಮಾತು ಈಗ ಸರಿಯಾಗುವುದಿಲ್ಲ ಎಂದು ನನಗೆ ಅನ್ನಿಸುತ್ತದೆ.

ಶ್ರೀ ಎನ್. ಬಿ. ಪೂಜಾರ್.—ಆಗಲೇ ಆ ಬಿಲ್ಲಿನ ಮೇಲೆಯೇ ಮಾತನಾಡಬಹುದಾಗಿತ್ತು. ಈಗಲೂ ಕೂಡ ಇಲ್ಲಿ ಒಳಗೊಂಡಂಥ ಕ್ಲಾಸ್‌ಗಳು ಏನಿವೆ ಇವುಗಳ ಮೇರೆಗೆ ಯಾವುದೂ ಕೂಡ ಕಾರ್ಯಗತವಾಗುವುದಿಲ್ಲ. ಒಂದು ವರ್ಷದ ಅವಧಿಯಲ್ಲಂತೂ ಕಾರ್ಯಗತವಾಗುವ ಸಂಭವ ಇಲ್ಲವೇ ಇಲ್ಲ ಎಂದು ಹೇಳಲೇಬೇಕಾಗಿದೆ.

ಅಧ್ಯಕ್ಷರು.—ಹಳೆಯ ಮೈಸೂರಿನ ಟೆನೆನ್ಸಿಗೆ ಸಂಬಂಧಿಸಿದ ವಿಷಯ ಹೇಳಿ, ಆಗ ಹೇಳದೇ ಇದ್ದ ತಪ್ಪಿಗೆ ಈಗ ಹೇಳುತ್ತಾ ಹೋಗುವುದು ಸರಿಕಾಣುವುದಿಲ್ಲ.

I hope the Hon'ble Member will realise that it is not proper to take up matters which do not concern this Bill at all.

ಶ್ರೀ ಎನ್. ಬಿ. ಪೂಜಾರ್.—ಅಧ್ಯಕ್ಷರೇ, ಈಗ ಇಲ್ಲಿ ಚರ್ಚೆಗಿರುವ ಈ ವಿಧೇಯಕ ವರ್ಷದ ಆಯುವ್ಯಯದ್ದು ಮಾತ್ರವಿದೆ. ಇದರೊಳಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಅಧಿಕಾರ ಮತ್ತು ಜವಾಬ್ದಾರಿ ಬಹಳ ದೊಡ್ಡ ಮಟ್ಟದ್ದಾಗಿದೆ. ಅವುಗಳನ್ನು ಸರ್ಕಾರ ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ. ಅನೇಕ ಪ್ರಸಂಗಗಳಲ್ಲಿ ಇತ್ತ ರೈತರೂ ಇಲ್ಲ, ಅತ್ತ ಭೂಮಿ ಒಡೆಯರೂ ಇಲ್ಲ, ಹೀಗಾಗಿ ಭೂಮಿ ಸಾಕಾಗದೆ ಉಳಿಯುವ ಸಂದರ್ಭವಿದೆ. ಸರ್ಕಾರಕ್ಕೆ ಈ ಬಗ್ಗೆ ಯೋಗ್ಯ ಸಿಬ್ಬಂದಿ, ಯೋಗ್ಯ ಧೈರ್ಯ, ಸಾಹಸ ಇದ್ದರೆ ಇಂಥ ವಿಧೇಯಕ ಪಾಸಾದನಂತರ ಕೂಡ ಇದನ್ನು ಜಾರಿಯಲ್ಲಿ ತರುವಂಥ ಶಕ್ತಿ ಅದಕ್ಕೆ ಇರಬಹುದಾಗಿತ್ತು. ಆದರೆ ಈ ವಿಧೇಯಕ ಪಾಸಾಗಿ ರಾಷ್ಟ್ರಪತಿಗಳ ಮನ್ನಣೆಯಾಗಬೇಕಾದರೆ ನಾಲ್ಕೈದು ತಿಂಗಳ ಅವಧಿ ಬೇಕಾಗಬಹುದೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ನಾಲ್ಕೈದು ತಿಂಗಳ ಅವಧಿ ದಾಟಿದನಂತರ ಮ್ಯಾನೇಜ್‌ಮೆಂಟ್ ಸಲುವಾಗಿ ಅಸ್ಯೂಂ ಮಾಡುವ ಭೂಮಿ ಸಿಕ್ಕಬಹುದು, ಸಿಕ್ಕಿದರೆ ಅಸ್ಯೂಂ ಮಾಡಿ ಮ್ಯಾನೇಜ್‌ಮೆಂಟ್ ಮಾಡುವ ಸೌಕರ್ಯ ಈ ಸರ್ಕಾರಕ್ಕಿದೆಯೇ ಎಂಬ ಬಗ್ಗೆ ನನಗೆ ಸಂಶಯವಿದೆ. ಇನ್ನು ಏಕರೂಪದ ಒಂದು ಶಾಸನವನ್ನು ರಚಿಸಲು ಸರ್ಕಾರ ಬಹಳ ಆಸ್ಥೆಯಿಂದಿದೆ ಯೆಂಬುದನ್ನು ಅದೇ ಈಗ ಪ್ರಕಟಿಸಿರುವ ಈ ವಿಧೇಯಕದ ಉದ್ದೇಶ ನಿರೂಪಣೆ ಪಟ್ಟಿಯಲ್ಲಿ ಕಾಣಬಹುದು. ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ತಾವು ತರುವಾಗ ತಮ್ಮ ದೃಷ್ಟಿಯಲ್ಲಿ ಕೇವಲ ಸಣ್ಣ ಹಿಡುವಳಿದಾರರೇನಿದ್ದಾರೆ ಅವರಿಗೆ ರಕ್ಷಣೆ ಕೊಡುವ ಅವಶ್ಯಕತೆ ಬಹಳವಾಗಿದೆ, ತಾವು ಜಮೀನುದಾರರಿರುವ ಯು. ಪಿ., ಪಂಜಾಬು ಮೊದಲಾದ ಕಡೆಗಳ ಶಾಸನ ಸಭೆಗಳಲ್ಲಿ ನಿಂತು ಮಾತನಾಡುವವರಾಗಿ ವಿರೋಧಿ ಪಕ್ಷದ ಮತ್ತು ಸೋಷಿಯಲಿಸ್ಟ್ ಪಕ್ಷದ ಮಿತ್ರರು ಮಾತನಾಡುವುದನ್ನು ನೋಡಿ ಭಾವಿಸುತ್ತಿದ್ದೇನೆ ಎಂದು ಹೇಳಿದರು. ಆದರೆ ಹಳೆಯ ಮೈಸೂರಿನ ಬಗ್ಗೆ ಸಂಗತಿಗಳೇನೂ ಗೊತ್ತಿಲ್ಲ. ಮುಂಬಯಿ ಕರ್ಣಾಟಕದ ವಿಚಾರ ಹೇಳಬೇಕಾದರೆ ಮುಂಬಯಿ ಭಾಗದಲ್ಲಿ ಭೂಮಿ ಕೆಲವರ ಕೈಲೇ ಹೆಚ್ಚಾಗಿ ಕೇಂದ್ರೀಕೃತವಾಗಿತ್ತು. ಆ ಭೂಮಿಯನ್ನು ಹೆಚ್ಚಾಗಿ ಉಳುಮೆದಾರರಿಗೆ ಕೊಡಿಸುವ ಉದ್ದೇಶದಿಂದ ಶಾಸನ ಮಾಡಲಾಗಿದೆ ಎಂದು ಅಲ್ಲಿನ ಸರ್ಕಾರ ಹಿಂದೆ ವ್ಯಕ್ತಪಡಿಸಿದ್ದರು. ಈಗ ಮೊನ್ನೆ ಮಂತ್ರಿಗಳು ಇದನ್ನು ವಿರೋಧಿಸುವಾಗ ಸಣ್ಣ ಉಳುಮೆಗಾರನ ಹೊಣಗಾರಿಕೆಯನ್ನು ವರ್ಣಿಸುತ್ತೇನೆಂದು ಹೇಳಿದರು. ಈ ವಿಷಯದಲ್ಲಿ ಈ ಶಾಸನ ಮುಂಬಯಿ ಶಾಸನ ಸಭೆಯಲ್ಲಿ ಚರ್ಚೆಗೆ ಬಂದಾಗ ಮುಂಬಯಿ ಶಾಸನ ಸಭೆಯ ಮುಂದಿಡುತ್ತಾ ಆಗಿನ ಕಂದಾಯ ಮಂತ್ರಿಗಳಾದ ಮಾನ್ಯ ಹಿರೆಯವರು ಇಲ್ಲಿ ಭೂಮಿ ಕೆಲವೇ ವ್ಯಕ್ತಿಗಳ ಕೈಲಿ ಕೇಂದ್ರೀಕರಣವಾಗಿದೆ ಎಂದು ಹೇಳಿದರು. ಅದನ್ನು ವಿಶದಪಡಿಸುವುದು ಅವಶ್ಯಕವೆಂದು ಕಾಣುತ್ತದೆ. ಮಾನ್ಯ ಹಿರೆಯವರು ಆ ಕಾಲದಲ್ಲಿ ಹೀಗೆ ಹೇಳಿದ್ದಾರೆ :—

"Sri B. S. Hirey.—The uneven distribution of land is to such an extent that today according to figures that are available with us, some 30,000 people are with holdings of 15 acres or less.

* * *

This works out roughly to an average of 5 acres for the number of persons in the lower groups of holdings.

* * *

On the other hand, 929 persons hold on an average about 1,000 acres per person. Another 18,508 persons between them hold on an average of 170 acres. This is what may be termed the highest group of holdings, that is about 100 acres.

This disparity in the holdings is further accentuated when we find roughly three-fourths of land lords have about 40 per cent of the entire occupied land, while some 16 per cent hold roughly half, 5 per cent hold 10 per cent."

ಸಾಗುವಳಿಯಾಗುತ್ತಿರುವ ಭೂಮಿಯಲ್ಲಿ ಶೇಕಡ 40 ಭಾಗವನ್ನು $\frac{3}{4}$ ಪಾಲು ಜನ ಪಡೆದಿದ್ದಾರೆ ಮತ್ತು ಶೇಕಡ ಐದು ಭಾಗವನ್ನು ಶೇಕಡ 10 ಜನ ಹಿಡಿದಿದ್ದಾರೆ. ಹೀಗೆ ಅಲ್ಲಿ ಭೂಮಿ ಬಹಳ ಕೇಂದ್ರೀಕೃತವಾಗಿದೆ, ಆ ಕೇಂದ್ರೀಕರಣವನ್ನು ವಿಫಲಗೊಳಿಸುವುದಕ್ಕೆ ಕಾಯಿದೆ ಮಾಡುತ್ತಿದ್ದೇವೆ ಎಂದು ಆ ಕಂದಾಯ ಮಂತ್ರಿ ಸಾರಿದರು.

Sri M. P. PATIL (Minister for Revenue).—Sir, these figures are for

(ಶ್ರೀ ಎಂ. ಪಿ. ಪಾಟೀಲ್.)

the whole of the Bombay State not for Bombay Karnataka.

ಶ್ರೀ ಎನ್. ಬಿ. ಪೂಜಾರ್.—ಮಾನ್ಯ ಮಂತ್ರಿಗಳಿಗೆ ಮುಂಬಯಿ ಕರ್ಣಾಟಕದ ಅಂಕಿ ಅಂಶ ಬೇಕಾದರೆ ಕೊಡಬಲ್ಲೆ. ಧಾರವಾಡ ಜಿಲ್ಲೆಯ ಅಂಕಿ ಅಂಶಗಳಿಗೆ ನಾನು ಕೈಹಾಕಿಲ್ಲ. ಧಾರವಾಡ ಜಿಲ್ಲೆಯಲ್ಲಿ ಒಟ್ಟು ಸಾಗುವಳಿಯಾಗುತ್ತಿರುವ ಭೂಮಿಯಲ್ಲಿ ಅರ್ಧಭೂಮಿ 500 ಜನ ದೊಡ್ಡ ಭೂವಳಿಗಳ ಕೈಲಿದೆ, ಉಳಿದ ಅರ್ಧ ಸಣ್ಣ ಹಿಡುವಳಿದಾರರ ಕೈಲಿವೆ. ಈ ರೀತಿ ಅಂಕಿ ಸಂಖ್ಯೆಯಿದೆ; ರೋಣದಲ್ಲಿ ಲ್ಯಾಂಡ್ ಸ್ಯಾಂಪಲ್ ಸರ್ವೆ ಮಾಡಿದ್ದೇವೆ, ಒಂದುಸಾವಿರ ಜನರಿರುವ ಎರಡುಮೂರು ಹಳ್ಳಿಗಳಲ್ಲಿ 999 ಜನ ಬಹು ಕುಟುಂಬಗಳಿಗಿದ್ದಂಥ ಭೂಮಿ ಕೇವಲ ಹತ್ತು ಕುಟುಂಬಗಳಿಗೆ ಸೇರಿಹೋಗಿರುವ ಉದಾಹರಣೆ ಸಿಕ್ಕಿದೆ. ಈ ರೀತಿ ಮಾನ್ಯ ಮಂತ್ರಿಗಳು ಕೇವಲ ಸಣ್ಣ ಹಿಡುವಳಿದಾರರಿಂದ ತುಂಬಿದ ಈ ರಾಜ್ಯಕ್ಕೆ ಮುಂಬಯಿಯಲ್ಲಿದ್ದಂಥ ಶಾಸನ ಸರಿಯಲ್ಲವೆಂದು ತಿಳಿವು ಹೇಳಿದ್ದು ತೀರಾ ವಾಸ್ತವದಿಂದ ದೂರವಾದ ಮಾತು ಎಂದು ಹೇಳಬಲ್ಲೆ.

3-30 P.M.

ಅಗ್ರಿಕಲ್ಚರಲ್ ಲೇಬರ್ ಎನ್‌ಕ್ವಯಿರಿ 'ಕಮಿಟಿಯವರು ಹಿಂದಿನ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಭೂಮಿ ಹಿಡುವಳಿದಾರರ ವಿಷಯದ ಬಗ್ಗೆ ನಾನು ಹೇಳುತ್ತೇನೆ. ಉತ್ತರ ಪ್ರದೇಶ, ಪಂಜಾಬ್ ಪಶ್ಚಿಮ ಬಂಗಾಳಗಳಲ್ಲಿ ಜಮೀನುದಾರರಿಗೆ ಹೆಚ್ಚು ಭೂಮಿ ಇರುತ್ತದೆ. ಭೂಮಿಯನ್ನು 'ಮಾರಿಕೊಳ್ಳುವ ಸೌಕರ್ಯವು ರೈತನಿಗೆ ಇರುವದರಿಂದ ಎಷ್ಟೋ ಸಲ ಅಡಚಣೆಯ ಮೂಲಕ ಸಾವುಕಾರರಿಗೆ ಭೂಮಿಯನ್ನು ಮಾರಿಕೊಳ್ಳುತ್ತಾರೆ. ಇತ್ತೀಚೆಗೆ 20-25 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಕೂಲಿಕಾರವರ್ಗವು ಬೆಳೆದುಬಿಟ್ಟಿದೆ. ಉತ್ತರದೇಶಕ್ಕಿಂತಲೂ ನಮ್ಮ ಪ್ರದೇಶದಲ್ಲಿ 100ಕ್ಕೆ 65ರಷ್ಟು ಭೂಮಿಯಲ್ಲಿ ದುಡಿಯುವ ಕೂಲಿಕಾರವರ್ಗವು ಇದೆ ಎಂದು ಆ ವರದಿಯಲ್ಲಿ ಹೇಳಿದೆ. ಇತ್ತೀಚೆಗೆ ಈ ಕೂಲಿಕಾರವರ್ಗದ ಸಂಖ್ಯೆಯು ಹೆಚ್ಚಾಗಿದೆ. ಈಗ ಅನುಸರಿಸುತ್ತಿರುವ ಧೋರಣೆಯು ಪ್ರತಿಗಾಮೀ ಸ್ವರೂಪದ್ದಾಗಿದೆ. ಉತ್ತರದೇಶದ ಪರಿಸ್ಥಿತಿಯ ಕಲ್ಪನೆ ಇಟ್ಟುಕೊಂಡು ನಮ್ಮ ಮೈಸೂರ ರಾಜ್ಯಕ್ಕೆ ಶಾಸನ ರಚಿಸಬಾರದು. ಸಣ್ಣ ಹಿಡುವಳಿದಾರರ, ಹಿತರಕ್ಷಣೆ ಮಾಡಲಾಗುತ್ತದೆಂದು ಮಂತ್ರಿವರ್ಯರು ಹೇಳುತ್ತಾರೆ. ಆದರೆ ಸಣ್ಣ ಹಿಡುವಳಿದಾರರಿಗೆ ಯಾವ ಸೌಕರ್ಯವನ್ನು ಒದಗಿಸಿಕೊಡುವ ಇಚ್ಛೆಇದ್ದಂತೆ ಕಾಣುವದಿಲ್ಲ. ಮಾನ್ಯ ಮಂತ್ರಿಯವರು ಚರ್ಚೆಗೆ ಉತ್ತರ ಕೊಡುವಾಗ ಹೇಳಿದರು ಮುಂಬಯಿ ಭಾಗದಲ್ಲಿಯ ರೈತರಿಗೆ ಏಪ್ರಿಲ್ ಒಂದನೇ ತಾರೀಖಿಗೆ ದೊರೆಯಬೇಕಾದ ಭೂಮಿಯ ಒಡೆತನದ ಹಕ್ಕನ್ನು ಕಾಪಾಡಲು ಆಶ್ವಾಸನ, ಅಭಯ ಕೊಡದೆ ಅದನ್ನು ಪರಿಶೀಲಿಸಲು ಒಂದು ಸಮಿತಿಗೆ ಒಪ್ಪಿಸಿದೆ. ಆ ಸಮಿತಿಯು ಇದನ್ನು ನಿರ್ಧಾರಮಾಡುತ್ತದೆ.

ಅಧ್ಯಕ್ಷರು.—ಈ ಮಸೂದೆಯಮೇಲೆ ಚರ್ಚೆ ಮಾಡುವಾಗ ಮೂಲ ಕಾನೂನಿಗೆ ಸಂಬಂಧಪಟ್ಟ ಕಲಮುಗಳ ವಿಷಯಕ್ಕೆ ಮಾತನಾಡಿದರೆ ಚನ್ನಾಗಿ ಇರುತ್ತದೆ. ಮುಂಬಯಿ ಕರ್ಣಾಟಕದ ವಿಷಯ ಮಂತ್ರಿಯವರಿಗೆ ಗೊತ್ತಿದೆ. ಬೇರೆ ವಿಷಯವನ್ನು ಎತ್ತಿ ಹೇಳುವದು ವ್ಯರ್ಥ ಕಾಲಹರಣ ಮಾಡಿದಂತೆ ಆಗುವದು ಎಂದು ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಎನ್. ಬಿ. ಪೂಜಾರ್.—ಈ ತಿದ್ದುಪಡಿ ಮಸೂದೆಯಿಂದ ಈಗ ಅಮಲಿನಲ್ಲಿ ಇರತಕ್ಕಂಥ ಕಾನೂನು ಒಂದುವರ್ಷದ ಮಟ್ಟಿಗೆ ಮುಂದುವರಿಸಲಾಗುವದೆಂದು ಹೇಳಲಾಗಿದೆ. ಆದರೆ ಹಾಗೆ ಮುಂದುವರಿಸದೆ ಏಪ್ರಿಲ್ ಒಂದನೇ ತಾರೀಖಿಗೆ ಮುಂಬಯಿ ಗೇಣಿ ಶಾಸನ ಪ್ರಕಾರ ರೈತನಿಗೆ ಯಾವ ಒಡೆತನದ ಹಕ್ಕು ದೊರೆಯಬೇಕೆಂದು ಇದೆಯೋ ಅದನ್ನು ಮೈಸೂರ ರಾಜ್ಯದ ಉಳಿದ ಎಲ್ಲಾ ಭಾಗದಲ್ಲಿಯೂ ರೈತರಿಗೆ ಲಭ್ಯವಾಗುವಂತೆ ಮಾಡಿಕೊಡುವ ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ಸೂಚಿಸುತ್ತೇನೆ. ಆದರೆ ಸರ್ಕಾರವು ಒಂದು ಸಮಿತಿಯನ್ನು ರಚನೆಮಾಡಿ ಇದನ್ನು ಸಮಿತಿಯ ನಿರ್ಧಾರಕ್ಕೆ ಒಪ್ಪಿಸಿಬಿಡುವದು ಸಮಾಧಾನಕಾರಕವಾಗಲಾರದು. ಯಾಕೆಂದರೆ ಸರಕಾರಕ್ಕೆ ಕಾನೂನಿನ ಬಗ್ಗೆ ಸಲಹೆಕೊಡುವ ಸಾರ್ವಭೌಮ ಅಧಿಕಾರವು ಈ ಸಭೆಗೆ ಅದೆ ಆದಕಾರಣ ಸಮಿತಿಗೆ ಒಪ್ಪಿಸಿಬಿಡುವುದು ಸರಿಯಲ್ಲ. ಈ ಸಭೆಗೆ ಸಾರ್ವಭೌಮ ಅಧಿಕಾರ ಇರುವುದರಿಂದ ಜವಾಬ್ದಾರಿಯು ಈ ಸಭೆಯಮೇಲೆ ಇದೆ. ಸಭೆಯ ಹೊರಗೆ ಇರತಕ್ಕಂಥ ಸಮಿತಿಯ ಕಡೆಗೆ ಬೆರಳುಮಾಡಿ ತೋರಿಸಿ ಅವರನ್ನು ಕೇಳಿರಿ ಎಂದು ಹೇಳುವುದು ಯೋಗ್ಯವಲ್ಲ, ಸರಕಾರವು ಹಾಗೆಮಾಡದೆ ನೇರವಾದ ಆಶ್ವಾಸನ ಕೊಡಬೇಕು. ರೈತರ ಹಕ್ಕುಗಳನ್ನು ಮುಳುಗಿಸುವುದಿಲ್ಲ ಆದರೆ ಹಕ್ಕುಗಳನ್ನು ದೊರಕಿಸಿಕೊಡುತ್ತೇವೆ ಎಂದು ಸರಕಾರದ ಮನಸ್ಸಿನಲ್ಲಿ ಇದ್ದರೆ ಆ ರೀತಿಯಾಗಿ ಆಶ್ವಾಸನಕೊಟ್ಟು ಒಂದು ಖಂಡಿತವಾದ ಧೋರಣೆಯನ್ನು ಜಾಹೀರಪಡಿಸಬೇಕು ಎಂದು ವಿನಂತಿಮಾಡಿಕೊಂಡು ನಾನು ನನ್ನ ಭಾಷಣ ಮುಗಿಸುತ್ತೇನೆ.

Sri M. P. PATIL.—Sir, I am sorry that the Hon'ble Members in the opposition who opposed the Bill are not here to hear my reply. That shows what interest they are taking in this Bill. Sir, it has been pressed again and again by some members of the Opposition that instead of introducing this Bill, it would have been better if the Government had extended the application of the Bombay Tenancy Act to all parts of the new Mysore State.

ಶ್ರೀ ಬಿ. ಎನ್. ಪೂಜಾರ್.—ಹಾಗೆ ಹೇಳಲಲ್ಲ.

Sri M. P. PATIL.—Not you; some others have raised that question. Sir, in this connection I would like to point out the very object of this Bill. I have told this to this House; but I have to repeat it again and again. Sir, it is stated in the Statement of Objects and Reasons :

> "There is no uniformity in the provisions of the Tenancy laws in force in the areas which have come to the new State of Mysore from the State of Madras and the former States of Mysore, Bombay and Hyderabad. Coorg had no tenancy law at all. The question

of introducing uniform tenancy law to the extent possible, applicable all over the State is under examination. In the meanwhile it has been considered necessary to preserve the *status quo* in areas other than Coorg etc., etc.,"

Sir, the very object of this Bill is to continue the *status quo* and especially, to see that until new legislation is evolved, no tenant is evicted from the land which he is cultivating. Taking this fact into consideration, it would be seen that the question of introducing any tenancy reform in the old Mysore State does not arise at all. Therefore, all arguments advanced in this respect are out of place. I find that some of the members have a false notion about the so-called nature of the Bombay Act. I would like to place some facts before this House.

Sir, I admit that the Bombay Act is, on the whole, a progressive Act. I never said that it is not progressive, nor is it reactionary. But, I have stated that there are some defects in the Act which would come in the way of the interest of the tenants and landlords in its implementation. Sir, much is made about the so-called "Tiller's Day". It was pressed again and again that if the Bombay Act was continued as it was, the tenants would have become owners on First April 1957. Sir, in this connection, I would like to point out that even that Act does not make provision for the full ownership.

Mr. SPEAKER.—I think, we are not concerned with the Bombay Amendment Bill or Bombay Act.

Sri M. P. PATIL.—That is true, Sir. But the Opposition members have pressed that instead of introducing this Bill, it would have been better if the Government had applied the Bombay Act to Mysore State. Therefore, I had to point out the difficulties which would have come in the way of the tenants of the former Mysore State. Sir, according to section 32, it would be seen that the tenant would not become on April First the owner of the land but would be deemed to be the owner of the land which he is cultivating. It is clear from this that it is not the ownership which the tenant will get on that day, but, provided there are no other difficulties, it is the right to ownership and not the ownership itself. Then, the question of litigation starts. Sir, as I have pointed out, about 1,25,000 notices have been given to the tenants in the four districts of Bombay Karnataka. As far as I know, it is only 15 per cent of the population of Bombay Karnataka which is affected by the tenancy reforms. Here also a number of land owners are not affected. For instance, the holdings which are held by the owners which are economic holdings or less than economic holdings and whose income is less than 1,500 rupees are not affected by this provision. Taking all these facts into consideration and taking the number of notices which have been issued, I think, there would be hardly any tenant who would be left without notice. Under the circumstances, even according to the provision of the Bombay Tenancy Act, no tenant would get the right to ownership on the First of April.

Now, the question of litigation. Sir, if the owner of the land applies to the court, what procedure is to be followed and what trouble would be created for the tenant? If the application is made to the court, the court will have to find out the total holdings of the tenant. Sir, these records are not available to-day. Perhaps, the records that are available to-day are regarding the owners who have got total holdings in the same village. But, I know that they have holdings in different villages and the holdings of the tenants are not recorded in the Record of Rights. So, before any suit is taken for consideration, either the Government or the parties will have to find out the total holdings of both the parties to get a judgment in the suit. Sir, the next question is about the income of the holder. Naturally, the land owner may say that his income is not more than Rs. 1,500. It is very easy for him to place evidence to show that his income is not more than Rs. 1,500. Similar difficulty is created here for the tenant.

(SRI M. P. PATIL.)

Now, the tenant will have to go round and produce evidence to show that the land owner—the applicant—has more than 1,500 rupees income. Those who have got some experience of this would clearly admit that it would be very difficult for a poor, ignorant tenant to collect evidence against the land-lord to show that he has got more than 1,500 rupees income. Unless he proves, he will not succeed at all. Even supposing he is able to prove that the applicant has more than the economic holding and at the same time he has proved that the income of the applicant is more than Rs. 1,500. the third obstacle comes in the way and that is, the definition of personal cultivation. Sir, as defined in the Bombay Act, the definition of personal cultivation is this:

> "Personal cultivation means:
> (i) by one's own labour, or,
> (ii) by the labour of any member of one's family, or,
> (iii) under the personal supervision of oneself or any member of one's family by hired labour or by servants on wages payable in cash or kind but not in crop share, ..."

Sir, the whole mischief for the tenant lies here. Taking this definition of personal cultivation, you will see that that definition is very wide. Even though I am a Minister here and supposing my land is situated 300 or 400 miles away, still I can cultivate my land personally because one of the members of my family goes there and cultivates the land. Or I will be cultivating the land through hired labour. Under the circumstances I do not know what prospects are there for a tenant to prove that the applicant is not in a position to cultivate the land personally. I appeal to the Hon'ble Member who is tom-toming the Bombay Act to consider the practical side of the question, and see if the Bombay Act is implemented what sort of litigation will be there and whether the tenant will succeed in this litigation as against the landlord. Sir, I frankly say that the tenant is bound to yield and surrender to the landlord. Even supposing he succeeds, the applicant is not in a position to cultivate the land personally.

There are different courts. Mamlatdar's court, Collector's court, Revenue Board and the Government and ultimately the High Court. Sir, wherever the landlord or the tenant do not succeed, they will go to all these courts and from these things you can imagine what an amount of litigation will continue and what period will be taken to finish all these litigations.

ಎಸ್. ಬಿ. ಪೂಜಾರ್.—ಇದೇ ನೆವದಲ್ಲಿ ಜಮೀನ್ದಾರರ ಸೇವೆ ಚೆನ್ನಾಗಿಯೇ ಮಾಡುತ್ತೀರಿ.

Sri M. P. PATIL.—That has no meaning at all. It will be seen from this that the so called "Tillers' Day" would not be really 'Tillers' Day' for the tenant. I may inform the Hon'ble Member that the so called "Tillers' Day," will be the litigants day and not the tillers' day.

(Suspension of Provisions and Amendment) Act, 1957, filed with the Deputy Collector, in the prescribed manner, a statement of reservation demarcating the lands which he reserves for the exercise of the rights of resumption under this section. On such statement being filed, the Deputy Collector shall, as soon as may be, after making necessary enquiry, issue a certificate to the landholder in the prescribed manner to the effect that the lands have been so reserved. The right to terminate tenancy shall be exercisable only in respect of the lands specified in the certificate as so reserved and shall not extend to any other land."

The motion was adopted.

Mr. SPEAKER.—The question is:

"That Clause 4 as amended stand part of the Bill."

The motion was adopted.

Mr. SPEAKER.—The question is:

"That Clauses 5 to 10, both inclusive, stand part of the Bill."

The motion was adopted.

Clauses 5 to 10, both inclusive, were added to the Bill.

Mr. SPEAKER.—The question is:

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Sri M. P. PATIL.—Sir, I beg to move:

"That the Hyderabad and Madras Areas Tenancy (Suspension of Provisions and Amendment) Bill, 1957, as amended, be passed."

Mr. SPEAKER.—The question is:

"That the Hyderabad and Madras Areas Tenancy (Suspension of Provisions and Amendment) Bill, 1957, as amended, be passed."

The motion was adopted.

BUDGET FOR 1957-58, DEMANDS FOR GRANTS "ON ACCOUNT"

(Discussion continued)

*ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಕಳೆದ ಐದು ವರ್ಷಗಳಿಂದ ಈ ಸಭೆಯು ಮಾಡಿದ ಕೆಲಸ ಕಾರ್ಯಗಳನ್ನು ವಿಮರ್ಶಿಸುತ್ತಾ ಈ ಐದು ವರ್ಷಕಾಲದಲ್ಲಿ ನಡೆದ ಮುಖ್ಯವಾದ ಘಟನೆಗಳನ್ನು ಪ್ರಸ್ತಾಪಮಾಡುತ್ತೇನೆ. ರಾಜ್ಯ ಪುನರ್ವಿಂಗಡಣೆಯ ಸಮಸ್ಯೆಯು ಒದಗಿ ಅದರ ಫಲವಾಗಿ ಉಂಟಾದ ನೂತನ ಪ್ರಾಂತಗಳು ಉದಯವಾಗುವ ಮುನ್ನ ಮತ್ತು ಉದಯವಾದ ಮೇಲೆ ಅದರ ಫಲಿತಾಂಶವು ಚುನಾವಣೆಯಲ್ಲಿ ಯಾವ ರೀತಿಯಾಗಿವೆ ಎಂಬುದನ್ನು ನೋಡಬೇಕು. ಮಹಾರಾಷ್ಟ್ರದಲ್ಲಿ, ಸಂಯುಕ್ತ ಮಹಾರಾಷ್ಟ್ರವಾದಿಗಳು, ಗುಜರಾತಿನಲ್ಲಿ ಮಹಾಗುಜರಾತವಾದಿಗಳು ಚುನಾವಣೆಯಲ್ಲಿ ಯಾವರೀತಿ ಪ್ರಭಾವವನ್ನು ಬೀರಿ ಜಯ ದೊರಕಿಸಿದ್ದಾರೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಈ ಸಂದರ್ಭದಲ್ಲಿ ನೂತನ ಮೈಸೂರ ಪ್ರಾಂತವು ಉದಯವಾಗುವುದಕ್ಕೆ ಮೊದಲು ನಮ್ಮ ಸಂಸ್ಥಾನದಲ್ಲಿ ಮಂತ್ರಿಮಂಡಲದಲ್ಲಿ ಆದಂಥ ತೀವ್ರ ಬದಲಾವಣೆಗಳು ಯಾವರೀತಿ ಪ್ರಭಾವಕ್ಕೆ ಒಳಗಾಗಿದ್ದವು ಎಂಬುದನ್ನು ಪ್ರಸ್ತಾಪ ಮಾಡುತ್ತೇನೆ. ಆಗಸ್ಟ್ 1956ರವರೆಗೆ ಮೂರು ಮಂತ್ರಿಮಂಡಲಗಳು ಬಂದವು. ಈ ಕಾಲದಲ್ಲಿ ಒಂದು ಮಂತ್ರಿ ಮಂಡಲ ಹೋದ ಮೇಲೆ ಇನ್ನೂ ಎರಡು ಮಂತ್ರಿ ಮಂಡಲಗಳು ಬಂದುವು. ಈ ಕಾಲದಲ್ಲಿ ಎಷ್ಟರಮಟ್ಟಿಗೆ ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಯಿತು ಎಂಬುದನ್ನು ವಿಮರ್ಶೆಮಾಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ಶಿಥಿಲವಾದಂಥ ಮಂತ್ರಿ ಮಂಡಲ ಮತ್ತು ತೀವ್ರವಾದ ಬದಲಾವಣೆಯಿಂದ ದೇಶದ ಮೇಲೆ ಎಷ್ಟು ಕೆಟ್ಟ ಪರಿಣಾಮವಾಯಿತು ಎಂಬುದನ್ನು ಪ್ರಸ್ತಾಪ ಮಾಡಿದ್ದೇನೆ. ಈ ಐದು ವರ್ಷ-ಕಾಲ ದೇಶದಲ್ಲಿ ಎಷ್ಟು ಅಭದ್ರ ಸ್ಥಿತಿ ಇತ್ತು ಎಂಬ ನಿಜಸಂಗತಿಯನ್ನು ನಾನು ತೋರಿಸಿಕೊಡುತ್ತೇನೆ. ನನ್ನ ಗಮನಕ್ಕೆ ಬಂದಿರುವ ಹಾಗೆ ಈ ಬದಲಾವಣೆಗಳಿಂದ ಸರ್ಕಾರದ ಯಂತ್ರದಲ್ಲಿ ಶಿಥಿಲತೆಯು ಉಂಟಾಗಿ ಅನೇಕ ಕಾಗದಗಳಿಗೆ ಉತ್ತರವೇ ಬಂದಿಲ್ಲ. ಅನೇಕ ಕೆಲಸಕಾರ್ಯಗಳು ನಿಂತು ಹೋಗಿವೆಎಂಬಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಅವುಗಳಲ್ಲಿ ಒಂದು ದೊಡ್ಡ ಉದಾರಣೆಯು ಇದೆ. ಅದು ಯಾವುದೆಂದರೆ ವಿಧಾನಸೌಧ ಕಟ್ಟಡದ ರಚನೆ. ವಿಧಾನಸೌಧ ರಚನೆಯ ವಿಷಯವಾಗಿ ಒಂದು ಸಮಿತಿ ಏರ್ಪಾಡು ಆಯಿತು. ಸಮಿತಿಯ ವರದಿಯೂ ಬಂದಿದೆ. ಈ ಸಮಿತಿಯ ವರದಿಯ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಸಭೆಯಲ್ಲಿ ಸ್ಪಷ್ಟವಾಗಿ ಹೇಳತಕ್ಕಂಥ ಒಂದು ಮಾತು ಯಾವುದು ಎಂದರೆ ಕಳೆದ ಅಗಸ್ಟ್ ತಿಂಗಳಿನಿಂದ ವಿಧಾನಸೌಧ ಕಟ್ಟಡದ ರಚನೆಯ ಕಾರ್ಯ ಎಷ್ಟರ ಮಟ್ಟಿಗೆ ಮುಂದುವರಿದಿದೆ ಎಷ್ಟರ ಮಟ್ಟಿಗೆ ಕೆಲಸ ಮುಂದುವರಿಸತಕ್ಕದ್ದು ಎಂದು ನೋಡುವುದು ಸರ್ಕಾರದ ಕರ್ತವ್ಯ ಅಲ್ಲವೆ? ಈ ಏಳು ತಿಂಗಳ ಕಾಲದಲ್ಲಿ ಈ ಕೆಲಸ ಎಷ್ಟು ಮಂದವಾಯಿತು ಉದಾಸೀನ ಆಯಿತು ಎಂಬುದು ಸರ್ಕಾರದ ಕರ್ತವ್ಯಲೋಪ ಅಲ್ಲವೇ ಎಂಬುದನ್ನು ಈ ಸಭೆ ವಿಮರ್ಶಿಸಬೇಕು.

ಸ್ವಾಮಿ, ಈ ಸಭೆಯನ್ನೇ ತೆಗೆದುಕೊಳ್ಳೋಣ. ಈ ಕಟ್ಟಡಕ್ಕೆ ಸುತ್ತಮುತ್ತಲೂ ಇರುವ ರಸ್ತೆಗಳನ್ನು ಇನ್ನೂ ಸರಿಯಾಗಿ ಉತ್ತಮಪಡಿಸಿಲ್ಲ. ಈ ಕಟ್ಟಡಕ್ಕೆ

ಬರಬೇಕಾದರೆ ಕೆಳಗಿನಿಂದ ಒಂದು ಗುಡ್ಡ ಹತ್ತಿ ಬರಬೇಕಾಗಿದೆ. ಈ ಕಟ್ಟಡ ಎತ್ತರವಾದ ಸ್ಥಳದಲ್ಲಿರುವಂತಿದೆ. ಈ ಕೆಲಸದಲ್ಲಿ ಸಂಬಂಧಪಟ್ಟ ಇಲಾಖೆಯವರು ಸರಿಯಾಗಿ ಏತಕ್ಕೋಸ್ಕರ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಈ ಕಟ್ಟಡದ ಸುತ್ತಲೂ ಇರುವ ಗುಡ್ಡಗಳನ್ನೆಲ್ಲ ಸರಿಪಡಿಸಿ ಸರಿಯಾದ ರಸ್ತೆಗಳನ್ನು ಮಾಡಿ ಸುಂದರವಾಗಿರುವ ಪಾರ್ಕುಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲವೆ? ಇದನ್ನು ಏತಕ್ಕೋಸ್ಕರ ಮಾಡಲಿಲ್ಲ? ಇದರಲ್ಲಿ ಏನಾದರೂ ಉದ್ದೇಶವಿದೆಯೇ? ನಾನು ತಿಳಿದುಕೊಂಡಿರುವುದು ಆರೀತಿ ಏನೋ ಒಂದು ಉದ್ದೇಶದಿಂದ ಈ ರೀತಿ ಮಾಡಲಿಲ್ಲವೆಂದು ತೋರುತ್ತೆ. ಇದು ಬಹಳ ಸಣ್ಣ ಕೆಲಸ. ಇದರ ಸುತ್ತಲೂ ಈಗಲಾದರೂ ಸರಿಯಾದ ರಸ್ತೆಗಳನ್ನು ಮಾಡಿ ಓಡಾಡಲು ಅನುಕೂಲಪಡಿಸಿಕೊಡಬೇಕು. ಹಾಗೆಯೇ, ಈ ಸಭೆಯಲ್ಲಿರುವ ಆಸನದ ವಿಷಯಗಳು. ಇಲ್ಲಿರುವ ಆಸನಗಳಿಗೆ ಸರಿಯಾಗಿ ವಾರ್ನಿಷ್ ಕೂಡ ಹಾಕಿಲ್ಲ. ಇದೆಲ್ಲವನ್ನು ನೋಡಿ ಸರಿಯಾಗಿ ವಾರ್ನಿಷ್ ಮಾಡತಕ್ಕದ್ದು ಯೋಗ್ಯವಾಗಿದೆ. ಇದಕ್ಕೆ ಸಂಬಂಧಿಸಿದವರು ಯಾರೇ ಆಗಲೀ ಇದನ್ನು ಮಾಡಬೇಕಾಗಿತ್ತು. ಹಾಗೆ ಮಾಡಿಲ್ಲ.

ಇನ್ನು ವಿಧಾನ ಸೌಧದ ವಿಷಯವಾಗಿ ಸ್ವಲ್ಪ ವಿಚಾರ ಮಾಡೋಣ. ಇದು ಒಂದು ವಿಶಾಲವಾದ, ಭವ್ಯ ಕಟ್ಟಡ. ಈ ತರಹ ಕಟ್ಟಡ ಬೇರೆ ಯಾವ ಕಡೆಯಯಲ್ಲಿಯೂ ಇಲ್ಲ. ಇದನ್ನು ಕಟ್ಟಲು ಇಲ್ಲಿಯ ಕೆಲಸಗಾರರು ಬಹಳ ಶ್ರಮವಹಿಸಿದ್ದಾರೆ. ಇಷ್ಟು ವಿಶಾಲವಾಗಿ ಕಟ್ಟಿರುವ ಇಂತಹ ಭವ್ಯವಾದ ಭವನವನ್ನು ಹೊರಗಿನಿಂದ ಬಂದು ನೋಡಿ ಹೋದವರಲ್ಲಿ ಅನೇಕರು ಈ ಕಟ್ಟಡ ಇಷ್ಟು ವಿಶಾಲವಾಗಿರುವುದರಿಂದ ಇಲ್ಲಿ ಪಾರ್ಲಿಮೆಂಟಿನ ಅಧಿವೇಶನವನ್ನು ಕೂಡ ನಡೆಸಬಹುದೆಂದು ಹೇಳಿದರು. ಏಕೆಂದರೆ ಇಲ್ಲಿ 500 ಜನ ಸದಸ್ಯರು ಕೂಡಲು ಅವಕಾಶವಿದೆ ಎಂಬ ಭಾವನೆಯಿಂದ ಹೇಳಿದರು. ಮತ್ತು ಹಿಂದೆ ಇಂಡಿಯಾ ಸರ್ಕಾರದವರು ಇಲ್ಲಿ ಪಾರ್ಲಿಮೆಂಟಿನ ಅಧಿವೇಶನ ಮಾಡಲು ಯೋಚಿಸುತ್ತಿದ್ದಾರೆಂದೂ ಹೇಳುತ್ತಿದ್ದರು. ನಾನು ಕೂಡ ಹಿಂದೆ ಒಂದುಸಲ ಡೆಲ್ಲಿಗೆ ಹೋಗಿದ್ದಾಗ ಅಲ್ಲಿಯ ಪಾರ್ಲಿಮೆಂಟ್ ಭವನ ಮುಂತಾದ ಕಟ್ಟಡಗಳನ್ನು ನೋಡಿ ಬಂದಿದ್ದೇನೆ. ಇದನ್ನು ಇಷ್ಟು ವಿಶಾಲವಾಗಿ ಮಾಡಿರತಕ್ಕದ್ದು ನಮ್ಮ ಮೈಸೂರು ಪ್ರಾಂತಕ್ಕೆ ಕೀರ್ತಿತರುವಂತಹ ಜನೋಪಯುಕ್ತವಾದ ಕಾರ್ಯವಾಗಿಲ್ಲ ಎಂದು ಯಾರೂ ಹೇಳುವ ಹಾಗಿಲ್ಲ. ಏಕೆಂದರೆ ಇದು ದಕ್ಷಿಣ ಹಿಂದೂಸ್ಥಾನದಲ್ಲೇ ಅತ್ಯಂತ ವಿಶಾಲವಾದ ಮತ್ತು ಸುಂದರವಾದ ಕಟ್ಟಡ, ಇದು ಲೋಕಸಭೆಯ ಅಧಿವೇಶನ ನಡೆಸುವುದಕ್ಕೆ ಕೂಡ ಯೋಗ್ಯವಾಗಿದೆ ಎಂದು ಎಷ್ಟೋ ಜನಗಳು ಬಂದು ನೋಡಿ ಹೇಳಿದ್ದನ್ನು ನಾವೆಲ್ಲರೂ ಕೇಳಿದ್ದೇವೆ. ಈ ದಿವಸ ಈ ವಿಧಾನ ಸೌಧದ ಕಟ್ಟಡದಲ್ಲಿ ಸುಮಾರು ಮುಕ್ಕಾಲು ಭಾಗ ಕೆಲಸ ಪೂರ್ಣವಾಗಿದೆ ಇನ್ನು ಕಾಲುಭಾಗ ಮಾತ್ರ ಕೆಲಸ ಉಳಿದಿದೆಯೆಂದು ನಾನು ತಿಳಿದಿದ್ದೇನೆ. ಆದರೆ ಈ ಕಾಲುಭಾಗ ಕೆಲಸವನ್ನೂ ಕೂಡ ಸರಿಯಾಗಿ ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಇದು ಬಹಳ ಶೋಚನೀಯವಾದ ವಿಚಾರ. ಮಾಡಬೇಕಾದ ಕೆಲಸ ಇನ್ನೂ ಸ್ವಲ್ಪ ಇದೆ. ಇದನ್ನು ಆಗಲೇ ಮುಗಿಸಿಬಿಡಬಹುದಾಗಿತ್ತು. ಹಿಂದೆ ಹಳೆಯ ಮೈಸೂರು ಶಾಸನ ಸಭೆಯಲ್ಲಿ ನೂರು ಜನಕ್ಕಿಂತ ಸ್ವಲ್ಪ ಹೆಚ್ಚಾಗಿದ್ದರೂ ಈಗ ನೂತನ ಪ್ರಾಂತವಾದ ಮೇಲೆ 208 ಸದಸ್ಯರಾಗಿದ್ದಾರೆ. ಆದ್ದರಿಂದ ಇವೊತ್ತಿನ ದಿವಸ ಈ ಸಭೆಗೆ ಬರುವುದಕ್ಕೆ ಈ ಭವನದ ಮುಂದಿರುವ ಗುಡ್ಡವನ್ನು ಹತ್ತಬೇಕಾಗಿದೆ, ಈ ರೀತಿ ಗುಡ್ಡವಿಲ್ಲದಿದ್ದರೆ ಎಲ್ಲರೂ ಸುಖವಾಗಿ ಬರುವುದಕ್ಕೆ ಅನುಕೂಲವಾಗುತ್ತಿತ್ತು. ಇದನ್ನು ಸ್ವಲ್ಪ ವಿಚಾರಮಾಡಬೇಕು.

ಹಿಂದೆಯೂ ಕೂಡ ಈ ರೀತಿಯ ಒಂದು ಕಟ್ಟಡವನ್ನು ಶಾಸನಸಭೆಗಾಗಿ ಕಟ್ಟಬೇಕೆಂದಿದ್ದರು. ಆ ಒಂದು ದೃಷ್ಟಿಯನ್ನಿಟ್ಟುಕೊಂಡು ಈ ರೀತಿಯ ಒಂದು ಕಟ್ಟಡವಾದದ್ದು. ಕಾಕತಾಳನ್ಯಾಯವೆಂಬ ಉಕ್ತಿಯಂತೆ ಸಕಾಲಕ್ಕೆ ಆದದ್ದು ಈ ಸಭೆ ಸೇರುವುದಕ್ಕೆ ಅನುಕೂಲವಾಯಿತು. ಆದುದರಿಂದ ಈ ಸಭಾ ಕಟ್ಟಡದಿಂದ ಏನೂ ಅನುಕೂಲವಾಗಿಲ್ಲ ಎಂದರೆ ನಾನು ಒಪ್ಪುವುದಿಲ್ಲ. ಎಲ್ಲರಿಗೂ ಇದರಿಂದ ಮನಸ್ಸು ಸಂತೋಷವಾಗಿದೆ.

ಎರಡನೆಯದು, ಈ ವಿಧಾನ ಸೌಧದ ಕಟ್ಟಡದ ವರದಿ ವಿಷಯವಾಗಿ ನಾನಾರೀತಿಯ ಟೀಕೆಗಳು ಈಗಾಗಲೇ ಬಂದಿವೆ. ಈ ರೀತಿಯ ಒಂದು ಕಟ್ಟಡವನ್ನು ಕಟ್ಟಬೇಕೆಂಬ ಯೋಜನೆಯು ಬಹಳ ದಿವಸಗಳಿಂದಲೂ ಇತ್ತು. ಇವೊತ್ತಿನದಿವಸ ಈ ಕಟ್ಟಡವಾಗಿರುವುದರಿಂದ ಸರ್ಕಾರದ ಕಷ್ಟಗಳು ಬಹಳಮಟ್ಟಿಗೆ ನಿವಾರಣೆಯಾಗಿವೆ ಎಂದು ಹೇಳಬೇಕು. ಕೆಲವರು ಈ ರೀತಿ ಒಂದೇ ಕಟ್ಟಡವನ್ನು ಏಕೆ ಕಟ್ಟಬೇಕಾಗಿತ್ತು ಎಂದು ಹೇಳಿದರು. ದೆಹಲಿಯಲ್ಲಿರುವ ಪಾರ್ಲಿಮೆಂಟು ಭವನ ಸೆಕ್ರೆಟೇರಿಯಟ್ ಕಟ್ಟಡ ಹಿಂದೆ ಬ್ರಿಟಿಷರ ರಾಜ್ಯಭಾರದಕಾಲದಲ್ಲಿ ಕಟ್ಟಿದಂತಹ ಸಿವಿಲಿಯನ್ ಕಟ್ಟಡ ಲೆಜಿಸ್ಲೇಟರ್ಸ್ ಲಾಡ್ಜ್, ಈಗಿರುವ ರಾಷ್ಟ್ರಪತಿ ಭವನ ಇವೆಲ್ಲವುಗಳನ್ನೂ ನೋಡಿದರೆ ಅಲ್ಲಿ ಪಾರ್ಲಿಮೆಂಟು ಭವನಕ್ಕೆ ಹೆಚ್ಚಿಗೆ ಪ್ರಾಮುಖ್ಯತೆ ಕೊಟ್ಟಿಲ್ಲ. ಆದರೆ ಇಲ್ಲಿ ಶಾಸನ ಸಭಾಭವನಕ್ಕೇ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ವಿಧಾನ ಸೌಧವೆಂಬ ಹೆಸರನ್ನು ಕೊಟ್ಟು ಹೆಚ್ಚಿನ ಪ್ರಾಶಸ್ತ್ಯಬರುವ ಹಾಗೆ ಮಾಡಿರುವುದು ನೋಡಿದರೆ ಈ ಕಟ್ಟಡ ನಿರ್ಮಾಣದ ಶ್ರೇಷ್ಠತೆಯನ್ನು ಚೆನ್ನಾಗಿ ತೋರಿಸುತ್ತದೆ. ಆದಕಾರಣ ಇಂತಹುದನ್ನು ನೋಡಿ ಹೆಚ್ಚಾಗಿ ಸಂತೋಷಪಟ್ಟು ಪ್ರಶಂಸೆ ಮಾಡತಕ್ಕ ಅಂಶಗಳಿವೆ ಎಂದು ಗೊತ್ತಾಗುತ್ತದೆ. ಯಾವುದೇ ಕೆಲಸ ಈ ಭೂಲೋಕದಲ್ಲಿ ತೆಗೆದುಕೊಳ್ಳಲಿ ಅದರಲ್ಲಿ ನ್ಯೂನತೆಗಳಿರುತ್ತವೆ. ಈಗ ಈ ಸಮಿತಿಯ ವರದಿಯ ಕಡೆಗೆ ಹೋಗೋಣ. ಈ ವರದಿಯನ್ನು ನಾನು ಆ ಮೂಲಾಗ್ರವಾಗಿ ಪರಿಶೀಲಿಸಿಲ್ಲ. ಈ ಸಮಿತಿಯ ಅಧ್ಯಕ್ಷರು ಹೈಕೋರ್ಟಿನ ಜಡ್ಜು ಆಗಿದ್ದಾರೆ. ಸಾಮಾನ್ಯವಾಗಿ, ಜಬರ್ದಸ್ತಿನಿಂದ ಮತ್ತು ರೋಷಾವೇಶಗಳಿಂದ ಮಾತನಾಡತಕ್ಕ ಸಂಪ್ರದಾಯ ನನ್ನಲ್ಲಿಲ್ಲ. ಒಂದೇ ಸಮನಾಗಿ ಎಲ್ಲ ಅಭಿಪ್ರಾಯಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ, ಬಾಲೆನ್ಸ್ ಮಾಡಿ ಮಾತನಾಡುವ ಸ್ವಭಾವ ನನ್ನದು. ಈ ವರದಿಯನ್ನು ನೋಡಿದರೆ ಇದು ಏನೋ ಒಂದು ರೀತಿಯ ಪೊಲಿಟಿಕಲ್ ಡಾಕ್ಯುಮೆಂಟು ಇದ್ದಂತೆ ತೋರುತ್ತದೆ. ಇದಕ್ಕೆ ಜ್ಯುಡಿಷಿಯಲ್ ಬ್ಯಾಕ್‌ಗ್ರೌಂಡಿದ್ದಂತೆ ಕಾಣಿಸುವುದಿಲ್ಲ. ಸಾಮಾನ್ಯವಾಗಿ ಕೋರ್ಟಿನಲ್ಲಿ ಒಂದು ಜಡ್ಜ್‌ಮೆಂಟು ಬರೆಯಬೇಕಾದರೆ ಅದಕ್ಕೆ ಮೊದಲು ಇದ್ದಂತಹ ಪರಿಸ್ಥಿತಿಯನ್ನು ಯೋಚಿಸಬೇಕು, ಲೆಕ್ಕಗಳನ್ನು ನೋಡಬೇಕು, ಎವಿಡೆನ್ಸ್ ನೋಡಬೇಕು. ಫಾಕ್ಟ್ಸ್‌ಗಳನ್ನು ನೋಡಿ ಪರಿಶೀಲನೆ ಮಾಡಿ ಅನಂತರ ತೀರ್ಪನ್ನು ಬರೆಯಬೇಕು. ಹಾಗೆ ಇಲ್ಲಿ ಮಾಡಿದಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಏನೋ ಒಂದು ತರಹ ಬರೆದಿದ್ದಾರೆ. ಎಸ್ಟಿಮೇಟ್ಸ್ ಎಂದರೆ ಕನ್ನಡದಲ್ಲಿ ಅಂದಾಜು ಎಂದು ಏನು ಹೇಳುತ್ತೇವೆ. ಅವು ಹಿಂದೆ ಮಂಜೂರಾಗಿರುವುವು. ಬದಲಾವಣೆಯಾಗಿರುವುದರಿಂದ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದಾರೆ.

(ಶ್ರೀ ಪಿ. ಆರ್. ರಾಮಯ್ಯ)

ಸಾಮಾನ್ಯವಾಗಿ ಪಿ. ಡಬ್ಲ್ಯು. ಡಿ. ಕೆಲಸಗಳೇ ಹೀಗಾಗುತ್ತವೆ. ಕಟ್ಟುವುದಕ್ಕೆ ಮಾಡತಕ್ಕ ಅಂದಾಜೇ ಒಂದು ರೀತಿಯಿದ್ದರೆ ಕೆಲಸ ಮುಗಿದಮೇಲೆ ಅಂದಾಜು ಬದಲಾವಣೆಯಾಗಿ ಬೇರೆಯಾಗುತ್ತದೆ. ನಾನು ನನ್ನ ಮನೆ ಕಟ್ಟಿಸಿದಾಗ ನನ್ನ ಕಂಟ್ರಾಕ್ಟರು ಕೊಟ್ಟಿದ್ದ ಅಂದಾಜೇ ಬೇರೆ. ಆದರೆ ಮನೆ ಪೂರ್ತಿಯಾಗಿ ಕಟ್ಟುವುದಕ್ಕೆ ಮುಂಚೆಯೇ, ಸುಮಾರು ಅರ್ಧ ಭಾಗ ಕೆಲಸವಾಗಿದ್ದಾಗ, ರೇಟುಗಳು ಹೆಚ್ಚಾದವು. ಅದರಿಂದ 1,000 ರೂಪಾಯಿಗಳಲ್ಲಿ ಆಗುವ ಕೆಲಸ 2,000ಕ್ಕೆ ಏರಿತು. ಹಾಗೆ ರಿವೈಸ್ ಬಿಲ್ಲಾದ ಮೇಲೆ ಅದರಂತೆ ನಾನು ಕೊಡಬೇಕಾಗಿ ಬಂದಿತು. ಯಾವ ಕಟ್ಟಡವೇ ಆಗಲಿ ಅಥವಾ ಇನ್ನಿತರ ನಿರ್ಮಾಣ ಕೆಲಸಗಳೇ ಆಗಲೀ ಅದು ಇಷ್ಟೇ ನಿಖರವಾಗಿ ಆಗುತ್ತದೆಂದು ಹೇಳಲಾಗುವುದಿಲ್ಲ.

"ಮನೆ ಕಟ್ಟಿನೋಡು" ಎಂಬ ಗಾದೆಯಂತೆ ಒಂದು ಮನೆ ಸುಮಾರು 5,000 ರೂಪಾಯಿಗಳಲ್ಲಿ ಕಟ್ಟಬೇಕೆಂದು ಮೊದಲು ನಾವು ಅಂದಾಜು ಇಟ್ಟುಕೊಂಡೇನೋ ಕಟ್ಟುತ್ತೇವೆ. ಆದರೆ ಕೆಲಸ ಆರಂಭವಾಗಿ ಪೂರ್ಣವಾಗುವ ವೇಳೆಗೆ ಅಂದಾಜು ಮಾಡಿರತಕ್ಕ ಪ್ಲಾನಿನಂತಾಗುವುದಿಲ್ಲ. ಸರ್ಕಂಸ್ಟೆನ್‌ಸಸ್ ಕೂಡ ಬದಲಾವಣೆಯಾಗುತ್ತವೆ. ಹೀಗಾಗಿ ಕೊನೆಯಲ್ಲಿ ಮೊದಲಿದ್ದ ಅಂದಾಜು 5,000 ವಾಗಿದ್ದರೆ ಕಟ್ಟಿ ಮುಗಿಯುವ ವೇಳೆಗೆ ಅದರೆರಡರಷ್ಟು ಹೆಚ್ಚಾಗುತ್ತದೆ.

5-30 P.M.

ಕರ್ನಾಟಕ ಪ್ರಾಂತ- ನೂತನ ಮೈಸೂರು ಪ್ರಾಂತ ನಿರ್ಮಾಣವಾಗಬೇಕಾದರೆ; ಹೊರಗಡೆಯಿಂದ ಬರಬಹುದಾದ ಅಧಿಕಾರಿಗಳಿಗೆ ಹೆಚ್ಚಿನ ಸ್ಥಳಾವಕಾಶ ಬೇಕಾಗಿತ್ತು. ಅದಕ್ಕೋಸ್ಕರ ಇನ್ನೊಂದು ಅಂತಸ್ತನ್ನು ಹೆಚ್ಚಿಸಿಎಂದು ಹೇಳಿದರು. ಅದು original plan ನಲ್ಲಿ ಇದ್ದಿರಲಿಲ್ಲ. ಆದುದರಿಂದ ಸಮಯ ಸಂದರ್ಭಗಳನ್ನರಿತು ಎಸ್ಟಿಮೇಟುಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ನಮ್ಮದು 40 ಕೋಟಿ ರೂಪಾಯಿ ವರಮಾನ ವಿರತಕ್ಕ ದೊಡ್ಡ ರಾಜ್ಯ. ಇದರಲ್ಲಿ ವಿಧಾನ ಸೌಧಕ್ಕೋಸ್ಕರ -ಒಂದೂವರೆ ಕೋಟಿ ರೂಪಾಯಿ ಖರ್ಚಾಗಿದೆ. ಇದನ್ನು 1939ರಲ್ಲಿ ಕಟ್ಟಿದ್ದರೆ 50 ಲಕ್ಷ ರೂಪಾಯಿನಲ್ಲಿ ಆಗುತ್ತಿತ್ತು. ಈಗ ಒಂದಕ್ಕೆ ನಾಲ್ಕರಷ್ಟು ಬೆಲೆಗಳು ಜಾಸ್ತಿಯಾಗಿವೆ. ಇಟ್ಟಿಗೆ, ಕಲ್ಲು, ಇವುಗಳ ಬೆಲೆ ಕೂಲಿ ವಗ್ಯೆರೆ ಎಲ್ಲ ಇದ್ದಕ್ಕಿದ್ದ ಹಾಗೆ ಏರಿಹೋಗಿದೆ. ಮತ್ತು ನಾಲ್ಕು ವರ್ಷಗಳಲ್ಲಿ ಮಾಡತಕ್ಕ ಕೆಲಸವನ್ನು ಅಷ್ಟು ಹತೋಟಿಯಿಂದ ಅಂದಾಜಿನ ಮೇರೆಗೆ ಮಾಡುವುದಕ್ಕೆ ಸಾಧ್ಯವಿಲ್ಲ, ಇದರಲ್ಲಿ ಸ್ವಲ್ಪ ವಿಶಾಲವಾದ ದೃಷ್ಟಿ ಇರಬೇಕು ; ಉದಾರವಾದ ಹೃದಯವಿರಬೇಕು.

ಮಿರ್ಜಾ ಸಾಹೇಬರ ಕಾಲದಲ್ಲಿ—ಅವರ ವಿಷಯದಲ್ಲಿ ನನಗೆ ಗೌರವವಿದೆ—ನಾನು ಟೀಕೆಯನ್ನು ಮಾಡಿದ್ದೇನೆ. ಅವರು ಭವನಗಳ ನಿರ್ಮಾಣದಲ್ಲಿ, ಕೆರೆಕಟ್ಟೆಗಳನ್ನು ಕಟ್ಟಿಸುವುದರಲ್ಲಿ ಬಹಳ ಉತ್ಸಾಹ ತೋರಿಸುತ್ತಿದ್ದರು. ನನಗೆ ಗೊತ್ತಿರುವಹಾಗೆ ಬೈರಮಂಗಲದ ರೈತರ ಕಷ್ಟವನ್ನು ಕೇಳಿ ಅಲ್ಲಿ ಒಂದು ಕೆರೆ ಕಟ್ಟಿಸಬೇಕೆಂದು ಆಜ್ಞೆಮಾಡಿದರು. ಇಂಜಿನಿಯರು ಅಂದಾಜುಗಳು ತಯಾರಾಗಿಲ್ಲವೆಂದು ತಿಳಿಸಿದರೆ, ಅಂದಾಜುಗಳಾಗುತ್ತವೆ, ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದರು. ಮಿರ್ಜಾ ಸಾಹೇಬರು ಎಷ್ಟೋ ಮುಖ್ಯ ಕೆಲಸಗಳನ್ನು ಮಾಡಿದರು. ಅವರು ನಿವೃತ್ತರಾದಮೇಲೆ ಶ್ರೀ ಎನ್. ಮಾಧವರಾಯರು ದಿವಾನರಾಗಿ ಬಂದಮೇಲೆ ಶ್ರೀ ಕೆ. ವಿ. ಅನಂತರಾಮನ್ ಅವರು ಮಂತ್ರಿಗಳಾಗಿದ್ದಾಗ ಎಷ್ಟೋ ಕೆಲಸಗಳನ್ನು ಮಾಡಿಸಿದ್ದಾರೆ. ಎಸ್ಟಿಮೇಟುಗಳಿಲ್ಲದೆ ಕೆಲಸಗಳಾಗಿವೆ, ದುಡ್ಡು ಖರ್ಚಾಗಿದೆ. ಇದನ್ನೆಲ್ಲ ratify ಮಾಡಬೇಕೆಂದು ಲೆಜಿಸ್ಲೇಟಿವ್ ಕೌನ್ಸಿಲ್‌ನ ಮುಂದೆ ತಂದರು. ಆದುದರಿಂದ ಇದು ಯಾರೂ ಮಾಡದೇ ಇದ್ದ ಅಪರಾಧವಲ್ಲ.

ಶ್ರೀ ಟಿ ಮರಿಯಪ್ಪ.—ಎಸ್ಟಿಮೇಟುಗಳು ಲೆಜಿಸ್‌ಲೇಟಿವ್ ಕೌನ್ಸಿಲ್‌ಗೆ ಬರುವುದಿಲ್ಲ. Excess grants ratify ಮಾಡುವುದಕ್ಕೆ ಬರುತ್ತಿದ್ದುವು. ಆಗ ನಾನೂ ಸಹ ಸದಸ್ಯನಾಗಿದ್ದೆ.

ಶ್ರೀ ಪಿ. ಆರ್. ರಾಮಯ್ಯ.—Subject to correction. ನಾನು ಮರೆತಿರಬಹುದು.

ಇದರಲ್ಲಿ ಅಂಥ ಮಹಾಪರಾಧವೇನೂ ಇಲ್ಲ . . .

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಾಮಯ್ಯನವರು ಇನ್ನೂ ಎಷ್ಟುಕಾಲ ತೆಗೆದುಕೊಳ್ಳುತ್ತಾರೋ ತಿಳಿಯದು. ಸುಮಾರು ಹನ್ನೆರಡು ಜನ ಚೀಟಿ ಕಳುಹಿಸಿದ್ದಾರೆ; ಅದರಲ್ಲಿ ನಾವುಗಳು ನಿವೃತ್ತಿ ಹೊಂದುವವರಾಗಿದ್ದೇವೆ; ಇದೇ ಕೊನೆಯ ಅಧಿವೇಶನವಾದುದರಿಂದ ನಮಗೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದ್ದಾರೆ. ಅವರಿಗೆಲ್ಲರಿಗೂ ಮಾತನಾಡಲು ಅವಕಾಶಕೊಡಬೇಕು : ಅವರ ಪೈಕಿ ಶ್ರೀ ಎಸ್. ಸಿದ್ದಪ್ಪನವರು ಕಾತುರರಾಗಿ ಕಾದುಕೊಂಡು ಕುಳಿತಿದ್ದಾರೆ. ನಾನು time limit ಹಾಕುವುದಕ್ಕೆ ಹೋಗುವುದಿಲ್ಲ. ನೈತಿಕ ದೃಷ್ಟಿಯಿಂದ ಎಲ್ಲರಿಗೂ accommodate ಮಾಡುವುದು ಒಳ್ಳೆಯದು. ಈ ದೃಷ್ಟಿಯಿಂದ ಪ್ರತಿಯೊಬ್ಬರೂ 15-20 ನಿಮಿಷಗಳವರೆಗೆ ಕಾಲ ತೆಗೆದುಕೊಂಡು ಮಾತನಾಡಿದರೆ ಒಳ್ಳೆಯದು. ಮಾನ್ಯ ಸದಸ್ಯರು ಈಗಾಗಲೇ 20 ನಿಮಿಷಗಳ ಕಾಲ ಮಾತನಾಡಿದ್ದಾರೆ. ಇದಕ್ಕಿಂತ ಮುಂಚೆ ಬೆಳಗ್ಗೆ 20 ನಿಮಿಷ ಮಾತನಾಡಿದ್ದಾರೆ. ಆದಕಾರಣ ತೀವ್ರವಾಗಿ ಮುಗಿಸಿದರೆ ಚೆನ್ನಾಗಿರುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಎಸ್ಟಿಮೇಟುಗಳ ವಿಷಯ ಬಹಳ ಪ್ರಸ್ತಾಪವಾಗಿದೆ. Accounts ವಿಷಯದಲ್ಲಿ ನನಗೆ ಏನೂ ಗೊತ್ತಿಲ್ಲ. ಆದುದರಿಂದ ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಆದರೆ ಕಟ್ಟಡದ ಭವ್ಯತೆ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಬಗ್ಗೆ ಚರ್ಚೆನಡೆದಿದೆ. ನಾನೂ ಸ್ವಲ್ಪ ಅನುಭವವುಳ್ಳವನು. ಸಾಮಾನ್ಯವಾಗಿ ಇಂಥ ಪಾರ್ಲಮೆಂಟರಿ ಸಂಸ್ಥೆಗಳು ಎಂದರೆ, ಇವಕ್ಕೆ ಒಂದು ಕಟ್ಟಡದ ಭವ್ಯತೆ ಬೇಕು. ನಾವು ಇಂಗ್ಲೆಂಡ್ ಪಾರ್ಲಮೆಂಟರಿ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್ ಕಟ್ಟಡವನ್ನು ಒಂದು ಮಾದರಿಯಾಗಿ ಕಟ್ಟಿದ್ದಾರೆ, ಒಂದು tradition ಇಟ್ಟುಕೊಂಡಿದ್ದಾರೆ, ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ ಅವರಲ್ಲಿ ಒಬ್ಬರಕಾಲು ಒಬ್ಬರಿಗೆ ತಗುಲಬಾರದು. ಅವರ ಸಂಪ್ರದಾಯವನ್ನನುಸರಿಸಿ ನಾವು ಜಾಗ ಸ್ವಲ್ಪ ವಿಶಾಲವಾಗಿರಬೇಕೆಂದು ಮಾಡಿಕೊಂಡಿದ್ದೇವೆ. ನಾವು ಅವರ ಸಂಪ್ರದಾಯವನ್ನು ಅನುಸರಿಸಿದ್ದಾಗ್ಯೂ ಕೂಡ, ರಾಜ್ಯಾಂಗಶಾಸನ, ಮುಂತಾದ ಅನೇಕ ಶಾಸನಗಳನ್ನು ಮಾಡಿಕೊಂಡಿದ್ದೇವೆ. ಹಾಗೆಯೇ ಈ ಕಟ್ಟಡವೂ ಕೂಡ. ಇಂಥ ಕಟ್ಟಡಕ್ಕೆ ಒಂದು ರೀತಿಯ ಭವ್ಯತೆ ಇರಬೇಕಾದದ್ದು ಸಹಜವೇ ಆಗಿದೆ. ಈಗ ದೆಹಲಿಯಲ್ಲಿರುವ ಪಾರ್ಲಿಮೆಂಟ್ ಭವನಕ್ಕೆ ಒಂದು ಭವ್ಯತೆ ಇದೆ. ಹಾಗೆಯೇ ಇಲ್ಲಿಯೂ ಭವ್ಯತೆ ಇರಬೇಕು. ಅದು ಬೇಡವೆಂಬರೆ ನಾನು

ಒಪ್ಪುವುದಕ್ಕೆ ಮೊದಲನೆಯವನು. All India Conference ಗಳಲ್ಲಿ ಒಂದು ಚಪ್ಪರದ ಕೆಳಗೆ ಕುಳಿತು ಕೊಳ್ಳುತ್ತೇವೆ. ಅದೇರೀತಿಯಾಗಿ ಮಾಡುವಹಾಗಿದ್ದರೆ ನಾನು ನಿಜವಾಗಿ ಒಪ್ಪುತ್ತೇನೆ. ಆದರೆ ನಮಗೆ ಕುರ್ಚಿಬೇಕು, ಲಾಬಿಬೇಕು, ಲೈಬ್ರರಿ ಆಗಬೇಕು ಅದಾಗಬೇಕು, ಇದಾಗಬೇಕು ಎಂದೂ ಎಲ್ಲ ಇರಬೇಕೆಂದೂ ಅಪೇಕ್ಷೆಪಡುತ್ತೇವೆ. ಇದೆಲ್ಲ ಬೇಕಾದರೆ ಒಂದು ವಿಸ್ತಾರವಾದ ಕಟ್ಟಡಬೇಕು. ಲೆಜಿಸ್‌ಲೇಟಿವ್ ಕೌನ್ಸಿಲ್‌ಗೆ ಅನುಗುಣವಾಗಿರಬೇಕಾದರೆ, ಲೆಜಿಸ್ಲೇಟಿವ್ ಅಸೆಂಬ್ಲಿಗೆ ಅನುಗುಣವಾಗಿರಬೇಕಾದರೆ, ಮತ್ತು ಲಾಬಿ, ಲೌಂಜ್, ಲೈಬ್ರರಿ ಇವೆಲ್ಲ ಇರಬೇಕಾದರೆ ಅದಕ್ಕೆ ಒಂದು ವಿಸ್ತಾರವಾದ ಕಟ್ಟಡ ಬೇಕೇಬೇಕು. ಆದುದರಿಂದ ಇವೆಲ್ಲವನ್ನೂ ಇಲ್ಲಿ ಮಾಡಿದ್ದಾರೆ. ಆದರೆ ಒಂದು ವಿಷಯವೇನೆಂದರೆ, ಕೆಲವರ ದೃಷ್ಟಿಯಲ್ಲಿ ಏಕೆ ಈ ಅಂದಚೆಂದಗಳು ಬೇಕು, ಇವೆಲ್ಲ ಬೇಡ, ಬರೀ bald ಆಗಿ ಇರಬೇಕು ಎಂದು ಇದೆ. ಇದು ಒಬ್ಬೊಬ್ಬರ ಅಭಿಪ್ರಾಯ, ಇಚ್ಛೆ. ಹಿಂದೆ ನಮ್ಮ ಮನೆಗಳಿಗೆ ಬಾಗಿಲು ವಾಡ ಮಾಡಿದರೂ ಕೂಡ ಅದರಲ್ಲಿ ಚಿತ್ರಗಳನ್ನೂ ದೇವರ ವಿಗ್ರಹಗಳನ್ನೂ ಕೆತ್ತಿಸುವುದು ಪದ್ಧತಿ. ಈಗ American system ಬಂದು ಎಲ್ಲ bald flat ಆಗಿವೆ. ನಮ್ಮ ಸಂಸ್ಕೃತಿಯನ್ನು ತೋರಿಸುವುದಕ್ಕೋಸ್ಕರ ನಾವು ಪ್ರಯತ್ನಪಟ್ಟರೆ ಅದರಲ್ಲಿ ತಪ್ಪಿಲ್ಲ. ಅದನ್ನು ತೋರಿಸಬೇಕು. ಪಂಡಿತ ಮದನಮೋಹನ ಮಾಳವೀಯರು ಬೆನಾರೆಸ್ ಹಿಂದೂ ವಿಶ್ವವಿದ್ಯಾನಿಲಯವನ್ನು ಕಟ್ಟುವುದಕ್ಕೆ ಒಂದೂವರೆಕೋಟಿ ರೂಪಾಯಿ ಖರ್ಚಾಯಿತು. ಆಗ ಅನೇಕರು ಬಂದು ಏಕೆ ಇಷ್ಟೊಂದು ಇಟ್ಟಿಗೆ, ಗಾರೆ, ಇವುಗಳಮೇಲೆ ಸುರಿಯುತ್ತೀರಿ. ಎಂದುದಕ್ಕೆ ಅವರು ಇದರಲ್ಲಿ ಒಂದು ಸಂಪ್ರದಾಯ, tradition, ಸಂಸ್ಕೃತಿ ಇವುಗಳನ್ನೆಲ್ಲ ತೋರಿಸಬೇಕು ಎಂದು ಹೇಳಿದರಂತೆ. ಅದಕ್ಕಾಗಿ ವಿಶ್ವನಾಥನ ಗುಡಿಯಂತೆ ಕಟ್ಟಡವನ್ನು ಕಟ್ಟಬೇಕೆಂದು ಒಂದು ನಿರ್ಧಾರವಾಗಿ ಬಿರ್ಲಾರವರು ನಿಧಿಯನ್ನು ಅದಕ್ಕೆ ನೀಡಿ ಗುಡಿಯಂತೆ ಹಿಂದೂ ಯೂನಿವರ್ಸಿಟಿಯ ಕಟ್ಟಡವನ್ನು ಕಟ್ಟಿದ್ದಾರೆ. ನಮ್ಮ ಹಿಂದೂಸ್ತಾನದಲ್ಲಿ ಗುಡಿ, ಗೋಪುರ, ದೇವರು, ಎನ್ನತಕ್ಕದ್ದು ನಮ್ಮ ಸಂಸ್ಕೃತಿಗೆ ಹಿಂದಿನಿಂದ ಬಂದಿದೆ. ಆ ಸಂಸ್ಕೃತಿಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟಿದರೆ ಅದರಲ್ಲಿ ತಪ್ಪು ಇಲ್ಲ. Domes ಏಕೆ, ಕಳಶಗಳು ಏಕೆ ಎಂದು ಹೇಳುತ್ತಾರೆ. ಅದು ಒಬ್ಬೊಬ್ಬರ ಅಭಿರುಚಿ. Domes ಕಟ್ಟಬೇಕಾದ್ದು ಅವಶ್ಯಕವೆಂದು ಕೆಲವರು ಅಭಿಪ್ರಾಯಪಟ್ಟರು. ಒಟ್ಟಿನಲ್ಲಿ ಹೇಳುವುದಾದರೆ ಇಷ್ಟಕ್ಕೂ ನಾವು ಪೂರ್ತಿಯಾಗಿ ಜವಾಬ್ದಾರಿವಹಿಸಬೇಕು. ಈ ವಿಧಾನಸಭೆಯು ಐದುವರ್ಷಗಳಿಂದಲೂ ಆಗಾಗ್ಗೆ ಈ ವಿಷಯವನ್ನು ಚರ್ಚೆಮಾಡಿದೆ. ಈ ವಿಧಾನಸೌಧದ ವಿಷಯ ಚರ್ಚೆಗೆ ಬಂದಿದೆ. ಕೆಲವರು ಭಿನ್ನಾಭಿಪ್ರಾಯವನ್ನು ಕೊಟ್ಟಿದ್ದಾರೆ. ಶ್ರೀ ಟಿ. ಮರಿಯಪ್ಪನವರು ಭಿನ್ನಾಭಿಪ್ರಾಯ ಪಟ್ಟಿದ್ದಾರೆ. ವಿಧಾನಸೌಧಕ್ಕೆ ಈ ಅಲಂಕಾರಗಳೆಲ್ಲ ಬೇಡ, bald ಆಗಿ ಇರಬೇಕು ಎಂದು ಹೇಳಿದ್ದಾರೆ. ಕಟ್ಟಡವೆಲ್ಲ ಪೂರ್ತಿಯಾದಮೇಲೆ ಸಮಿತಿಯವರು ಕೆಲವು ಸಲಹೆಗಳನ್ನು ಮಾಡಿದ್ದಾರೆ ಅವರು. ಒಂದು ರೀತಿಯಾಗಿ ಅದನ್ನು ಬರೆದಿದ್ದಾರೆ. ಆದರೆ. . .

ಅಧ್ಯಕ್ಷರು.—ತಮಗೆ ಮಾತನಾಡಲು ಅವಕಾಶ ಕೊಟ್ಟು ಎಂಟು ನಿಮಿಷ ಗಳಾದುವು. ತೀವ್ರವಾಗಿ ಮುಗಿಸಬೇಕು.

ಶ್ರೀ ಪಿ. ಆರ್. ರಾಮಯ್ಯ.—ಕಡೆಯದಾಗಿ, ಇದು ಈ ಸಭೆಯ ಕಡೆಯ ಅಧಿವೇಶನ. ಈ ಸಭೆಯಲ್ಲಿ ನಾನು ವೈಯಕ್ತಿಕವಾಗಿ ಮಾತನಾಡಬೇಕಾದರೆ, ಇದು ನನಗೆ ಒಂದು ಯೂನಿವರ್ಸಿಟಿ ಹಾಗೆ ವಿದ್ಯಾಭ್ಯಾಸವನ್ನು ಕೊಟ್ಟಿದೆ. ಇಲ್ಲಿ ಅನೇಕ ವಿಷಯಗಳನ್ನು ಕಲಿತಿದ್ದೇನೆ. ಅನೇಕ ಸ್ನೇಹಿತರನ್ನು ಸಂಪಾದಿಸಿದ್ದೇನೆ. ಅನೇಕ ಹೊಸ ಸಂಗತಿಗಳನ್ನು ತಿಳಿದುಕೊಂಡಿದ್ದೇನೆ. ಇದರಲ್ಲಿ ಸಭಿಕರು ಬಹಳ ಗೌರವದಿಂದ ಸಭೆಯ ಮರ್ಯಾದೆಯನ್ನು ಹೆಚ್ಚಿಸುವಂತೆ ವರ್ತಿಸಿದ್ದಾರೆ. ಮಂತ್ರಿಮಂಡಲದವರು ಮತ್ತು ಸ್ಪೀಕರ್ ಆದ ತಾವು ಮತ್ತು ಹಿಂದಿನ ಸ್ಪೀಕರ್‌ಗಳೂ ಸಹ ಸ್ಕೂಲ್ ಆಫ್ ಪಾರ್ಲಿಮೆಂಟರಿ ಎಜುಕೇಷನ್ ಎನ್ನುವಂತೆ ಈ ಸಭೆಯಲ್ಲಿ ಪ್ರತಿಯೊಬ್ಬರಿಗೂ ಮಾತನಾಡಲು ಅವಕಾಶಕೊಟ್ಟು ಪಾರ್ಲಿಮೆಂಟರಿ ಪದ್ಧತಿಯನ್ನು ರೂಢಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ತಾವು ಬಹಳ ಔದಾರ್ಯದಿಂದ ಎಲ್ಲರಿಗೂ ಅವಕಾಶಕೊಟ್ಟು ಪಾರ್ಲಿಮೆಂಟರಿ ಸಂಪ್ರದಾಯವನ್ನು ಬೆಳೆಸಿದ್ದೀರಿ. ಇದಕ್ಕಾಗಿ ತಮಗೆ ವಂದಿಸುತ್ತೇನೆ ಮತ್ತು ಈ ಸಭೆಯ ಎಲ್ಲ ಸದಸ್ಯರಿಗೂ ನನ್ನ ವಂದನೆಗಳು.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೇ ನಾನು ಈಗ ಸಭೆಯ ಮುಂದೆ ಇರತಕ್ಕ ಆಯವ್ಯಯದ ಶ್ವೇತ ಪತ್ರದ ವಿಚಾರದಲ್ಲಿ ಹೆಚ್ಚು ಮಿಮರ್ಶೆ ಮಾಡುವುದಕ್ಕೆ ಹೋಗದೇ ಇದ್ದರೂ ಸಹ ಅದರಲ್ಲಿ ದೇಶದ ವರಮಾನವನ್ನು ಹೆಚ್ಚು ಮಾಡಲು ಅವಕಾಶಮಾಡದೆ ಇರುವ ಬಗ್ಗೆ ಕೆಲವು ವಿಚಾರಗಳನ್ನು ನನ್ನ ಕರ್ತವ್ಯದೃಷ್ಟಿಯಿಂದ ಹೇಳದೇ ಇದ್ದರೆ ಲೋಪವಾಗುತ್ತದೆ ಎಂದು ತಿಳಿದು ನಾನು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ಸ್ವಾಮಿ, ಸುಮಾರು 5 ವರ್ಷಗಳಿಂದಲೂ ನಾನು ಸಮಾಜದಲ್ಲಿರತಕ್ಕಂಥ ಸಮಾಜದ ರೋಗಗಳನ್ನು ಸ್ವಲ್ಪ ಮಟ್ಟಿಗೆ ಸರ್ಕಾರ ನಿವಾರಣೆಮಾಡೀತು ಎಂದು ಭಾವಿಸಿ ಅನೇಕ ಕಷ್ಟಗಳನ್ನು ಸರ್ಕಾರದ ಮುಂದೆ ಇಟ್ಟೆ. ಮೊದಲನೆಯದಾಗಿ ಜಾತಿ ಪದ್ಧತಿ, ವರದಕ್ಷಿಣೆ, ವಧೂದಕ್ಷಿಣೆ ಇತ್ಯಾದಿ ಇತ್ಯಾದಿ ಸಮಸ್ಯೆಗಳನ್ನು ಈ ಸರಕಾರ ಲೆಜಿಸ್ಲೇಷನ್‌ಮೂಲಕ ನಿವಾರಣೆ ಮಾಡಲಿ ಎಂದು ಹೇಳಿ ನನ್ನ ಆತ್ಮ ಪ್ರೇರೇಪಿಸಿತು. ನಾನು ಆ ರೀತಿ ಪ್ರೇರೇಪಣೆಯಂತೆ, ಸರ್ಕಾರವನ್ನು ಒತ್ತಾಯಮಾಡಿ ವಿಫಲನಾದೆ. ಆಮೇಲೆ ಸರ್ಕಾರದವರ ಮಾನವನ್ನು ಹೆಚ್ಚಿಸಬೇಕು ಎಂದು ಹೇಳಿ ನಾನು ಪ್ರಯತ್ನಮಾಡಿದೆ. ಮಲೆನಾಡಿನಲ್ಲಿ ದೈವದತ್ತವಾಗಿ ಬಂದಿರತಕ್ಕ ಅರಣ್ಯ ಸಂಪತ್ತು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡತಕ್ಕ ಅವಕಾಶ ಸರ್ಕಾರಕ್ಕೆ ಇದೆ. ಅದೂ ಅಲ್ಲದೆ ಈ ಉತ್ಪನ್ನದೊಳಗೆ ಬೇಕಾದಷ್ಟು ಹಣ ಪೋಲಾಗುತ್ತಾ ಇದೆ, ಸೋರಿ ಹೋಗುತ್ತಾ ಇದೆ, ಇದನ್ನೂಕೂಡ ಹೇಳಿದೆ. ಅಲ್ಲದೆ ಸರ್ಕಾರದವರಿಗೆ ಬರತಕ್ಕ ಬಾಕಿ ವಸೂಲಿ ವಿಚಾರದಲ್ಲಿ ಹೇಳಿದೆ. ಸುಮಾರು ಲಕ್ಷಾಂತರ ರೂಪಾಯಿ ಬಾಕಿ ವಸೂಲಾಗಬೇಕಾಗಿತ್ತು. ಇದು ದಿನದಿನಕ್ಕೆ ವರ್ಷೇ ವರ್ಷೇ ಏರಿಕೊಂಡು ಬರುತ್ತಾ ಇದೆ. ಅಮೃತಮಹಲ್ ಇಲಾಖೆಯಲ್ಲಿ ಈಗಲೂಕೂಡ ಸುಮಾರು 2 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಣ 10 ವರ್ಷದಿಂದ ವಸೂಲಾಗದೆ ಬಾಕಿ ಇದೆ. ಈ ಬಾಕಿ ವಸೂಲಿಗಾಗಿ ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಿರಲಿಲ್ಲವೆ? ಆ ಅಧಿಕಾರಿಗಳು ಯಾವ ಕಾರಣದಿಂದ ವಸೂಲುಮಾಡದೆ ಬಿಟ್ಟುಕೊಂಡು ಬಂದಿದ್ದಾರೋ ಗೊತ್ತಾಗುವುದಿಲ್ಲ. ಯಾವ ಕಾರಣದಿಂದ ವಸೂಲು ಮಾಡಿಲ್ಲವೋ ಏನೋ ಗೊತ್ತಿಲ್ಲ. ಒಂದೇ ಸಾರಿ ಹೋಗಿ ಅವರು ವಸೂಲಿಕ್ರಮ ಜರುಗಿಸಿದರೆ ರೈತನಿಗೆ ಕೊಡುವುದಕ್ಕೆ ಸಾಧ್ಯವೇ? ಇದಕ್ಕೆ

(ಶ್ರೀ ಜಿ. ಪುಟ್ಟಸ್ವಾಮಿ)

ಜವಾಬ್ದಾರರು ಯಾರೋ ಅವರು ಏಕೆ ಇದನ್ನು ಕಾಲ ಕಾಲಕ್ಕೆ ವಸೂಲುಮಾಡಲಿಲ್ಲ? ಅಧಿಕಾರಿಗಳು ವಸೂಲಿಗೆ ಹೋದಾಗ ರೈತರು ಹಣ ಪಾವತಿಮಾಡಿ ಕೈರಸೀದಿ ಪಡೆದಿಲ್ಲವೇ? ಅಧಿಕಾರಿಗಳು ಗ್ರಾಮುಗಳಿಗೆ ಭೇಟಿ ಇತ್ತು ರೈತರಿಂದ ಬಾಕಿ ವಸೂಲಿ ಮಾಡದೆ ಬಂದಿರುವುದಕ್ಕೆ ಅನೇಕ ಕಾರಣಗಳಿವೆಯೆಂದು ಹೇಳುತಾರೆ. ಈ ರೀತಿ ಕರ್ತವ್ಯ ಲೋಪ ಮಾಡಿದ ಅಧಿಕಾರಿಗಳಮೇಲೆ ಏಕೆ ಸರ್ಕಾರ ಕ್ರಮ ಕೈಕೊಳ್ಳಲಿಲ್ಲ? ಈ ಶಾಸನಸಭೆಯಲ್ಲಿ ನಾವು ಸದಸ್ಯರಾಗಿ ಪ್ರಶ್ನೆ ಮಾಡಿದ್ದು ತಪ್ಪೆ? ಹಾಗಿದ್ದರೆ ಸರ್ಕಾರದ ಗಮನಕ್ಕೆ ಇರತಕ್ಕ ಲೋಪದೋಷಗಳನ್ನು ತಂದರೂಕೂಡ ಸರಿಯಾದ ರೀತಿಯಲ್ಲಿ ಕಾರ್ಯಾಚರಣೆಗೆ ತರದಿದ್ದರೆ ಅದು ಎಷ್ಟುಮಟ್ಟಿಗೆ ಸಮಂಜಸವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡಬೇಕು. ಆದ್ದರಿಂದ ಈ ಎಲ್ಲಾ ವಿಚಾರಗಳನ್ನೂ ಸರ್ಕಾರದವರು ವಿಚಾರ ಮಾಡಿ ಜವಾಬ್ದಾರಿಯನ್ನು ಯಾರ ಮೇಲೆ ಗೊತ್ತುಮಾಡಬೇಕೆಂಬುದನ್ನು ನಿರ್ಧರಿಸಿ ವಸೂಲಿ ತರದೂದು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮೇಲಾಗಿ ದೇಶದ ಉತ್ಪನ್ನಗಳನ್ನು ಹೆಚ್ಚಿಸುವುದಕ್ಕೆ ಬೇಕಾದಷ್ಟು ಮಾರ್ಗಗಳು ಇವೆ. ಆರ್. ಎಂ. ಡಿ. ಸಿ. ಅವರು 'ನಮಗೆ ಎಷ್ಟು ತೆರಿಗೆಯನ್ನು ಹಾಕಿದರೂಕೂಡ ಕೊಡುವುದಕ್ಕೆ ಸಿದ್ಧವಾಗಿದ್ದೇವೆ, ನಮಗೆ ಲೈಸೆನ್ಸ್ ಕೊಡಿ' ಎಂದು ಹೇಳಿದರು. 'ಅಕ್ಕಿಮೇಲೆ ಆಸೆ, ನೆಂಟರಮೇಲೆ ಪ್ರೀತಿ' ಅನ್ನುವಹಾಗೆ ಕೆಲವು ಸಂದರ್ಭಗಳಲ್ಲಿ ವರಮಾನ ಹೆಚ್ಚಿಸಬೇಕೆಂಬ ಆಸೆಯೂ ಇರುತ್ತದೆ, ದೇಶಕ್ಕೆ ಅನುಕೂಲ ಮಾಡಬೇಕೆಂಬ ಆಸೆಯೂ ಇರುತ್ತದೆ. ಆ ತತ್ವ ಇಟ್ಟುಕೊಂಡು ನಮ್ಮ ವರಮಾನ ಇಂತಹ ಸಂದರ್ಭದಲ್ಲಿ ಎಲ್ಲಿ ಜಾಸ್ತಿ ಬರುತ್ತದೋ ಅದನ್ನು ಯಾತಕ್ಕೆ ಪಡೆಯಬಾರದು? ಅಬ್ಕಾರಿ ಇಲಾಖೆಯಿಂದ ತುಂಬ ಲುಕ್ಸಾನು ಆಗುತ್ತಿದೆ. ಪಾನನಿರೋಧದಿಂದ ಪ್ರಜೆಗಳಿಗೆ ಅನುಕೂಲವಾಗಿಲ್ಲ. ಆದ್ದರಿಂದ ಪಾನನಿರೋಧವನ್ನು ವಜಾಮಾಡಿ ದೇಶದ ವರಮಾನವನ್ನು ಜಾಸ್ತಿಮಾಡಬೇಕು . . . . . .

ಶ್ರೀ ಟಿ. ಮರಿಯಪ್ಪ.—ಆರ್. ಎಂ. ಡಿ. ಸಿ. ವಿಚಾರ ಪ್ರಸ್ತಾಪಮಾಡಿದಿರಿ. ಅದು ಯಾವಾಗ ನಿಂತು ಹೋಯಿತು ಹೇಳಿ. ಕಾಲ ಹೇಳಿದರೆ ಚೆನ್ನಾಗಿ ಅರ್ಥವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಾಲ, ಆ ಕಾಲ ಎಂದು ಹೇಳುವುದಿಲ್ಲ. ಸರ್ಕಾರ ಇರತಕ್ಕದ್ದು ಒಂದೇ, ಸರ್ಕಾರದ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಇದ್ದೇ ಇರುತ್ತಾರೆ. ಒಂದು ತತ್ವದ ದೃಷ್ಟಿಯಿಂದ ಯಾವ ಕೆಲಸವನ್ನಾದರೂ ಮಾಡಬೇಕೇ ಹೊರತು ವ್ಯಕ್ತಿಗಳ ಮೇಲೆ ಆರೋಪಣೆ ಮಾಡಬಾರದು. ನಾನು ಆ ರೀತಿ ಆರೋಪಣೆ ಮಾಡುತ್ತಿಲ್ಲ. ಯಾವ ವಿಚಾರಗಳನ್ನೇ ಆಗಲಿ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ದೇಶದ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ, ನಾವು ಮಾತನಾಡಬೇಕು. ಇವತ್ತಿನದಿವಸ ಯಾವ ಉದ್ದೇಶದಿಂದ ನಾವು ಇಲ್ಲಿಗೆ ಚುನಾಯಿತರಾಗಿ ಬಂದಿದ್ದೇವೆಯೋ ಆ ಉದ್ದೇಶವನ್ನು ಸಫಲ ಮಾಡಿಕೊಳ್ಳುವುದಕ್ಕೆ ಹೋರಾಟ ಮಾಡುವವರಲ್ಲಿ ನಾನೂ ಒಬ್ಬ ಎಂದು ತಿಳಿದುಕೊಂಡು ಮಾತನಾಡುತ್ತಾ ಇದ್ದೇನೆ ಸ್ವಾಮಿ. ಈ ಉತ್ಪನ್ನಗಳನ್ನು ಹೆಚ್ಚಿಸಿಕೊಳ್ಳಬೇಕು ಎನ್ನುವುದು ಒಂದು ದೊಡ್ಡ ತತ್ವ ಎಂಬ ಭಾವನೆಯಿಂದ ಮಾತನಾಡುತ್ತಾ ಇದ್ದೇನೆ. ದೇಶದ ವರಮಾನ ಜಾಸ್ತಿ ಆಗದಿದ್ದರೆ, ದೇಶದ ಉತ್ಪನ್ನ ಜಾಸ್ತಿ ಆಗದಿದ್ದರೆ ನಮ್ಮ ದೇಶದ ಭವಿಷ್ಯ ಅಷ್ಟು ತೃಪ್ತಿಕರವಾಗುವುದಿಲ್ಲ ಎಂಬ ತತ್ವದ ಮೇಲೆ ಮಾತನಾಡುತ್ತಾ ಇದ್ದೇನೆ. ದೇಶದಲ್ಲಿ ಎಲ್ಲರೂ ವರ್ತಕರಾಗಬೇಕು, ನೌಕರಿಯನ್ನು ಮಾಡಬೇಕು, ಅಧಿಕಾರಕ್ಕೆ ಬರಬೇಕು, ಅಧಿಕಾರಿಗಳಾಗಬೇಕು ಎಂಬ ಇತ್ಯಾದಿ ಇತ್ಯಾದಿ ಆಶೆಗಳು ಜಾಸ್ತಿ ಆಗುತ್ತಾ ಇವೆ. ಪರಾವಲಂಬನೆಯಿಂದ ಜೀವನ ಮಾಡತಕ್ಕವರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುತ್ತೇನೆ. ದೇಶದಲ್ಲಿ ಇವತ್ತು ಈ ತರಹ ಜೀವನ ಮಾಡುವುದು ಜಾಸ್ತಿಯಾದರೆ ದೇಶದ ಉತ್ಪತ್ತಿ ಜಾಸ್ತಿಯಾಗುವುದಿಲ್ಲ. ದೈವದತ್ತವಾಗಿ ಬಂದಿರತಕ್ಕ ಅನುಕೂಲಗಳೇ ನಮಗೆ ಸಿಕ್ಕದಿದ್ದರೆ ನಮ್ಮ ಮುಂದಿನ ಪರಿಸ್ಥಿತಿ; ಭವಿಷ್ಯ ಏನಾಗಬಹುದು ಎಂಬ ವಿಚಾರದಲ್ಲಿ ನಾನು ಸಂಕಟಪಡುತ್ತೇನೆ, ಸ್ವಾಮಿ. ಇವತ್ತಿನ ದಿವಸ ಕೈಗಾರಿಕಾಭಿವೃದ್ಧಿ ಅಷ್ಟು ತೃಪ್ತಿಕರವಾಗಿಲ್ಲ. ನಾವು ಎಷ್ಟು ಬಂಡವಾಳ ಹಾಕುತ್ತೇವೆ ಅದಕ್ಕೆ ತಕ್ಕಂಥ ಪ್ರತಿಫಲ ಬರುತ್ತಾ ಇಲ್ಲ. ಇನ್ನು ಜಾಸ್ತಿ ಜಾಸ್ತಿಯಾಗಿ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು. ಭೂಮಿ ಇಂತಕ್ಕವನಿಗೆ ಇವತ್ತಿನ ದಿವಸ ಭೂಮಿಯಲ್ಲಿ ಬೇಸಾಯಮಾಡಲಿಕ್ಕೆ ಆಸಕ್ತಿ ಹೆಚ್ಚಾಗುತ್ತಾ ಇಲ್ಲ. ಅವನಿಗೆ ಅದು ಆಕರ್ಷಿತವಾಗಿಲ್ಲ. ಭೂಮಿಯನ್ನು ಬಿಟ್ಟು ಸರ್ಕಾರಿ ನೌಕರಿ ಅಥವಾ ಯಾವುದಾದರೊಂದು ಉದ್ಯೋಗ, ವ್ಯಾಪಾರ ಇತ್ಯಾದಿ ಇತ್ಯಾದಿ ಕೆಲಸಗಳನ್ನು ಮಾಡುವುದಕ್ಕೆ ಬರುತ್ತಾ ಇದ್ದಾರೆ. ಎಂದರೆ ಭೂಮಿ ಲಾಭದಾಯಕವಾಗಿಲ್ಲ ಎಂದು ಅರ್ಥವಾಗುತ್ತದೆ. ಈ ವಿಷಯದಲ್ಲಿ ಸರ್ಕಾರ ಕರ್ತವ್ಯ ಲೋಪ ಮಾಡಿದೆ. ಭೂಮಿಯ ಮಾಲೀಕರಾಗಿ ಭೂಮಿ ಸಾಗುವಳಿ ಮಾಡುವವರಿಗೂ ಕೂಡ ಅದನ್ನು ಆಕರ್ಷಿತವಾಗಿ ಮಾಡುತ್ತಿಲ್ಲ. ನಮ್ಮ ದೇಶದ ಮುಖ್ಯ ಉದ್ಯೋಗ ಕೃಷಿ. ಆದ್ದರಿಂದ ಭೂಮಿಯಿಂದ ಉತ್ಪನ್ನ ಪಡೆಯುವುದಕ್ಕೆ ನಾವು ಹೆಚ್ಚು ನಿಗಾಕೊಡಬೇಕು. ಅದಕ್ಕೆ ನಿಗಾಕೊಟ್ಟಿಲ್ಲ ಎಂದು ನಾನು ಹೇಳುತ್ತೇನೆ.

ಈಗ ಸರ್ಕಾರಿ ನೌಕರಿ ಕೊಡುವುದಕ್ಕೂಕೂಡ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡಿಲ್ಲ. ನೂರಾರು, ಸಾವಿರಾರು ಎಕರೆ ಇರತಕ್ಕವರಿಗೂಕೂಡ ಸರ್ಕಾರಿ ನೌಕರಿ ದೊರೆಯುವುದಕ್ಕೆ ತತ್ಕಾಲಿಕವಾಗಿ ಅವಕಾಶವಿದೆ. ಯಾವಾಗಲೋ ಒಂದು ಕಾಲದಲ್ಲಿ ರಚಿತವಾದ ಪಬ್ಲಿಕ್ ಸರ್ವೀಸ್ ಕಮಿಷನ್ ರೂಲ್ಸ್ ಬದಲಾವಣೆ ಆಗಿಲ್ಲ. ಯಾರಿಗೆ ಸಾವಿರಾರು ಎಕರೆ ಜಮೀನಿದೆಯೋ ಅವರಿಗೂ ನೌಕರಿ ಕೊಡುವುದಕ್ಕೆ ಅವಕಾಶವಿದೆ. ಯಾವನು ಬಡವನಾಗಿ, ನಿರ್ಗತಿಕನಾಗಿದ್ದಾನೋ, ಯಾವನು ಭೂಮಿ ಇಲ್ಲದೆ, ಹಣ ಇಲ್ಲದೆ ಇದ್ದಾನೋ ಅವನಿಗೆ ಸರ್ಕಾರಿ ನೌಕರಿ ದೊರೆಯುವುದಿಲ್ಲ. ಈ ಪರಿಸ್ಥಿತಿಯನ್ನು ಬದಲಾವಣೆ ಮಾಡದಿದ್ದರೆ ನಮ್ಮ ಭವಿಷ್ಯ ತೃಪ್ತಿಕರವಾಗಿ ನಡೆದುಕೊಂಡು ಹೋಗುವಹಾಗಿಲ್ಲ.

ಶ್ರೀ ಟಿ. ಮರಿಯಪ್ಪ.—A word of information, Sir. ಸಾವಿರಾರು ಎಕರೆ ಜಮೀನು ಇರುವವರಿಗೆ ನೌಕರಿ ಸಿಕುತ್ತದೆ, ಬಡವರಿಗೆ ನೌಕರಿ ಸಿಕ್ಕುವುದಿಲ್ಲ ಎಂದು ಹೇಳಿದಿರಿ.

Recruitment by Public Service Commission is governed by a certain principle. I do not think it has got any part to play. ಅರ್ಹತೆ, ಸಾಮರ್ಥ್ಯಗಳಿದ್ದು ಪರಿಣತರಾಗಿದ್ದರೆ ಅವಕಾಶವಿದ್ದೇ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರ ನಿರ್ದಿಷ್ಟವಾದ ನೀತಿಯನ್ನನುಸರಿಸಬೇಕು. ಒಂದು ಕೆಲಸಕ್ಕೆ ನಿರ್ಬಂಧ ಹಾಕುವುದು, ಇನ್ನೊಂದಕ್ಕೆ ಹಾಕದಿರುವುದು ಸರಿಯಲ್ಲ. ನೂರಾರು ಎಕರೆ ಜಮೀನಿರುವವರಿಗೆ ನೌಕರಿ ಕೊಡುವುದು ಸರಿಯೆ? ಸರ್ಕಾರಿ ನೌಕರಿಯಲ್ಲಿ ಹೆಚ್ಚು ಪ್ರಾತಿನಿಧ್ಯವಿರುವ ಜನಾಂಗದವರಿಗೆ ಹೆಚ್ಚು ನೌಕರಿ ಕೊಡುವುದು ಸರಿಯಾದ ನೀತಿಯೆ? ಸರ್ಕಾರ ನೈತಿಕ ದೃಷ್ಟಿಯಿಂದ ಆರ್ಥಿಕ ದೃಷ್ಟಿಯಿಂದ ಸಮಸ್ಯೆಗಳನ್ನು ಪರಿಶೀಲಿಸಬೇಕು. ಈ ರೀತಿ ಮಾಡದಿದ್ದಲ್ಲಿ ಕಾಂಗ್ರೆಸ್ ಸಮತಾವಾದದ ಮಾದರಿ ಸಮಾಜ ಈಗೇನು ರಚಿಸಬೇಕೆಂದಿದೆಯೋ ಅದಕ್ಕೆ ವಿರೋಧ ಬರುತ್ತದೆಯಲ್ಲವೆ? ದೇಶವನ್ನು ಸುಭದ್ರವಾಗಿ ಕಟ್ಟಲು ಏನು ಮಾಡಬೇಕೋ ಅದನ್ನು ಮಾಡದಿದ್ದರೆ ಯಾವ ಸರ್ಕಾರವೇ ಆಗಲಿ ಹೆಚ್ಚು ದಿವಸ ಉಳಿಯುವುದಿಲ್ಲವೆಂದು ಹೇಳದೆ ವಿಧಿಯಿಲ್ಲ. ಭದ್ರವಾದ ಒಂದು ಸರ್ಕಾರ ರಚನೆಯಾಗಬೇಕಾದರೆ ಜನ ಸಾಮಾನ್ಯರಿಗೆ ಅನುಕೂಲವಾಗಬೇಕು. ಎಲ್ಲರಿಗೂ ಹೊಟ್ಟೆಗೆ ಅನ್ನ, ಕುಡಿಯುವುದಕ್ಕೆ ನೀರು, ಉಡುವುದಕ್ಕೆ ಬಟ್ಟೆ, ವಾಸಕ್ಕೆ ಮನೆ, ವಿದ್ಯಾಭ್ಯಾಸ ಸೌಕರ್ಯ ದೇಶದಲ್ಲಿ ದೊರೆಯದಿದ್ದರೆ ಅದು ಬಹಳ ಅಕ್ಷಮ್ಯ ಅಪರಾಧವಾಗುತ್ತದೆ. ದೇಶದಲ್ಲಿ ಜಮೀನಿಲ್ಲದಿರುವ ನಿಮ್ನ ವರ್ಗದವರ ಸಂಖ್ಯೆ ಯೆಷ್ಟಿದೆಯೆಂದು ಕೇಳಿದರೆ ಅಂಕಿ ಅಂಶ ಶೇಖರಣೆ ಮಾಡುವುದಕ್ಕೆ ಬಹಳ ಕಾಲ ಹಿಡಿಯುತ್ತದೆ ಎಂದು ಕೆಲವಾರು ವರ್ಷಗಳಿಂದ ಸರ್ಕಾರ ಹೇಳುತ್ತಲೇ ಇದೆ. ಈ ಅಂಕಿ ಅಂಶ ತಿಳಿದುಕೊಳ್ಳದೆ ಸಾಗುವಳಿ ಮಾಡುವವನಿಗೆ ಸಾಗು ಮಾಡಿದ ಭೂಮಿ ಸೇರಬೇಕೆಂಬ ತತ್ವವನ್ನು ಅನುಷ್ಠಾನಕ್ಕೆ ತರುವುದು ಹೇಗೆ ಸಾಧ್ಯ?

ಶ್ರೀ ಟಿ. ಮರಿಯಪ್ಪ.—ಅಂಕಿ ಅಂಶ ಮುದ್ರಿಸಿ ಮಾನ್ಯ ಸದಸ್ಯರಿಗೆ ಹಂಚಿ ಆರು ತಿಂಗಳಾಯಿತು. ಸಣ್ಣ ಹಿಡುವಳಿದಾರರು, ದೊಡ್ಡ ಜಮೀನುದಾರರು ಎಷ್ಟು ಮಂದಿ ಇದ್ದಾರೆ ಮುಂತಾದ ವಿವರಗಳನ್ನು ಪುಸ್ತಕ ರೂಪದಲ್ಲಿ ಎಲ್ಲ ಸದಸ್ಯರಿಗೂ ಅಚ್ಚು ಹಾಕಿಸಿ ಒದಗಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಒಂದು ಮರದಲ್ಲಿ ಎಲೆಗಳೆಷ್ಟಿವೆಯೆಂದು ಕೇಳಿದರೆ ಶ್ಯಾನುಭೋಗರು ಮನೆಯಲ್ಲೇ ಕುಳಿತು 19 ಸಾವಿರ ಇದೆಯೆಂದು ಬರೆದ ಹಾಗೆ ಜಮೀನುದಾರರ ಲೆಕ್ಕವನ್ನೂ ಒದಗಿಸಲಾಗಿದೆ. ನಾವು ಪ್ರಶ್ನೆ ಕಳುಹಿಸಿದ ಮೇಲೆ 15 ದಿವಸಗಳಲ್ಲಿ ಸರ್ವೆ ಮಾಡಿ ತನಿಖೆ ಮಾಡಿ ವರದಿ ಮಾಡಲು ಸಾಧ್ಯವಾಗುವುದಿಲ್ಲವೆಂಬುದು ಎಲ್ಲರಿಗೂ ವಿದಿತವಾಗಿದೆ. ಸ್ಥಳ ಪರೀಕ್ಷೆ ಮಾಡಿದಾಗ "ಏನ್ರೀ ಮರದಲ್ಲಿ ಎಲೆಗಳು ನೀವು ತಿಳಿಸಿರುವುದಕ್ಕಿಂತ ಜಾಸ್ತಿಯಿದೆಯಲ್ಲಾ" ಎಂದು ಕೇಳಿದರೆ "ನಾನು ಲೆಕ್ಕ ಮಾಡಿದಾಗ ಸರಿಯಾಗಿತ್ತು. ಈಚೆಗೆ ಮರದೆಲೆಗಳು ಚಿಗುರಿ ಜಾಸ್ತಿಯಾಗಿರಬೇಕು" ಎಂದು ಶ್ಯಾನುಭೋಗರು ಜವಾಬು ಹೇಳುತ್ತಾರೆ. "ಏನ್ರಿ, ಮರದೆಲೆ ಕಡಮೆಯಿದೆಯಲ್ಲಾ" ಎಂದರೆ "ಉದುರಿ ಹೋಗಿರಬಹುದು" ಎನ್ನುತ್ತಾರೆ. ಹೀಗೆ ಎಲ್ಲಾ ಶ್ಯಾನುಭೋಗರೂ ಲೆಕ್ಕ ಕೊಡುತ್ತಾರೆಂದು ಹೇಳಲು ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ಸತ್ಯಕ್ಕೆ ದೂರವಾದ ಅಂಕಿ ಅಂಶಗಳಿಂದ ತೊಂದರೆಯಾಗುತ್ತಿದೆ.

ಸ್ವಾಮಿ, ನಾನು ಮಲೆನಾಡಿನಿಂದ ಬಂದಿದ್ದೇನೆ. ಮಲೆನಾಡು ಬಹಳ ಹಿಂದುಳಿದ ಪ್ರದೇಶ. ದೇಶದಲ್ಲಿರುವ ಪ್ರಜಾ ಸಂಖ್ಯೆಯೊಡನೆ ಹೋಲಿಸಿದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ಪತ್ತಿಯಾಗುವಷ್ಟು ವರಮಾನ ಇನ್ನೆಲ್ಲೂ ಆಗುವುದಿಲ್ಲವೆಂದು ಹೇಳುತ್ತಾರೆ. ಸರ್ಕಾರ ಮಲೆನಾಡನ್ನು ಉಪೇಕ್ಷೆ ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ದೈವದತ್ತವಾಗಿ ಬೆಳೆಯುವ ಬದರು ಬೊಂಬು ಹೇರಳವಾಗಿದೆ, ಕಿತ್ತಲೇ ಹಣ್ಣಿನ ಮಾರ್ಕೆಟ್ಟಿನಲ್ಲಿ ಭಾರತದಲ್ಲಿ ಚಿಕ್ಕಮಗಳೂರು ಮಾರ್ಕೆಟ್ ಎರಡನೆಯದಾಗಿದೆ, ಹಣ್ಣುಗಳು ವಿಪರೀತವಾಗಿ ಬೆಳೆಯುತ್ತವೆ. ಇಲ್ಲಿ ಫ್ರೂಟ್‌ಕ್ಯಾನಿಂಗ್ ಫ್ಯಾಕ್ಟರಿ ಸ್ಥಾಪಿಸಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದರೂ ಸರ್ಕಾರ ಸ್ಥಾಪಿಸಿರುವುದಿಲ್ಲ. ಏಲಕ್ಕಿ ಮತ್ತು ಕಾಫಿ ಬೆಳೆಗೆ ಹೆಚ್ಚು ಸೌಕರ್ಯ ಮಾಡಬೇಕೆಂದು ಹೇಳಿದ್ದರೂ ಅದನ್ನು ಮಾಡಿಲ್ಲ. ಇಂಟರ್ ಕಾಲೇಜಿಗಾಗಿ ಕಟ್ಟಡ ಕಟ್ಟಲು ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಡಿಪಾಜಿಟ್ ಮಾಡಿ ಸುಮಾರು ಐದು ವರ್ಷಗಳ ಮೇಲಾದರೂ ಆ ಕಟ್ಟಡವನ್ನು ಕಟ್ಟಿಲ್ಲ. ಇಂಟರ್ ಕಾಲೇಜನ್ನು ಅಪ್ ಗ್ರೇಡ್ ಮಾಡಬೇಕೆಂದು ಕೇಳಿದರೆ ಅದಕ್ಕೆ ಗಮನ ಕೊಟ್ಟಿಲ್ಲ. ಚಿಕ್ಕಮಗಳೂರು ತಾಲ್ಲೂಕು, ಆಲ್ದೂರು ಮತ್ತು ಬೆಳವಾಡಿಗಳಲ್ಲಿ ಹೈಸ್ಕೂಲು ತೆರೆಯಬೇಕೆಂದರೆ ಅದನ್ನು ಮಂಜೂರು ಮಾಡಿಲ್ಲ. ಚಿಕ್ಕಮಗಳೂರಿಗೆ ಹೆಣ್ಣು ಮಕ್ಕಳ ಶಾಲೆ ಕೊಡಬೇಕಾದದ್ದು ಕೊಟ್ಟಿಲ್ಲ. ಚಿಕ್ಕಮಗಳೂರು, ಮಲ್ಲೇಗೌಡ ಜನರಲ್ ಆಸ್ಪತ್ರೆಗೆ ಬಟ್ಟೆ, ಔಷಧಿ, ಬೆಡ್ಸ್ ಕೊಟ್ಟಿಲ್ಲ. ಕಿಚನ್ ಬ್ಲಾಕ್ ಕಟ್ಟಬೇಕೆಂದು ಹೇಳಿದರೆ ಅದನ್ನು ಕಟ್ಟಿಲ್ಲ. ಹೆರಿಗೆ ಆಸ್ಪತ್ರೆಯಲ್ಲಿಯೂ ಇದೇ ರೀತಿ ಸೌಕರ್ಯಗಳಿಲ್ಲ. ಹೀಗೆ ಇನ್ನೂ ಏನೇನು ಅರಿಕೆ ಮಾಡಿತ್ತೋ ಅದೊಂದೂ ಆಗಿರುವುದಿಲ್ಲ. ಮೊಬೈಲ್ ಡಿಸ್ಪೆನ್ಸರಿ ವ್ಯಾನ್‌ನಿಂತು ಎರಡು ತಿಂಗಳಾಯಿತು. ಮಲೆನಾಡಿಗೆ ಹೆಚ್ಚು ಆಸ್ಪತ್ರೆಗಳನ್ನು ಮಂಜೂರು ಮಾಡಬೇಕು. ದೇಶದ ಆರ್ಥಿಕ ಮುಗ್ಗಟ್ಟಿನಿಂದ ಆಸ್ಪತ್ರೆಗಳನ್ನು ಹೆಚ್ಚಾಗಿ ತೆರೆಯಲು ಅವಕಾಶವಿಲ್ಲದ್ದರಿಂದ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಕೊನೆಯ ಪಕ್ಷ ಒಂದು ಮೊಬೈಲ್ ವ್ಯಾನ್ ಆದರೂ ಕೊಟ್ಟು ಅದು ಸರಿಯಾಗಿ ನಡೆಯುವಂತೆ ಅನುಕೂಲ ಮಾಡಬೇಕು. ಹಾಗೆ ಮಾಡಿರುವುದಿಲ್ಲ. ಚಿಕ್ಕಮಗಳೂರು ತಾಲ್ಲೂಕು, ಕಳಸಾಪುರಕ್ಕೆ ಒಂದು ಪಶು ವೈದ್ಯ ಶಾಲೆಯನ್ನು ಕೊಡಬೇಕೆಂದರೆ ಇನ್ನೂ ಕೊಟ್ಟಿರುವುದಿಲ್ಲ. ಬಾಳೆ ಹೊನ್ನೂರಿಗೆ ಒಂದು ಪೇಪರ್ ಫ್ಯಾಕ್ಟರಿ ಮಂಜೂರು ಮಾಡಬೇಕು. ಕೇಂದ್ರ ಸರಕಾರದಿಂದ ಹೆಚ್ಚು ಸಹಾಯವನ್ನು ಪಡೆದುಕೊಂಡು ಬಡವರಿಗೆ ಹೆಚ್ಚು ಹೆಚ್ಚು ಉಪಯೋಗವಾಗುವಂತೆ ಮಾಡಬೇಕು. ಚಿಕ್ಕಮಗಳೂರಿನಲ್ಲಿ ಮನೆಯ ಅಭಾವ ಬಹಳವಾಗಿದೆ. ಚಿಕ್ಕಮಗಳೂರಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳಿಗೆ ಸಾಲ ಕೊಟ್ಟು ಮನೆಗಳನ್ನು ಕಟ್ಟಿಸುವಂತೆ ಮಾಡಿ ಮನೆಗಳ ಅಭಾವವನ್ನು ಹೋಗಲಾಡಿಸಲು ಪ್ರಯತ್ನ ಮಾಡಬೇಕು.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನಲ್ಲಿ ಕುಡಿಯುವ ನೀರಿನ ಏರ್ಪಾಡು ನಲ್ಲಿಗಳ ಮುಖೇನ ಆಗುವಂತೆ ಮಾಡಬೇಕು. ಪೈಪುಗಳನ್ನು ಹಾಕಿ ಕುಡಿಯುವ ನೀರು ದೊರೆಯುವಂತೆ ಮಾಡದಿದ್ದಲ್ಲಿ ಬಹಳ ತೊಂದರೆಯಾಗುತ್ತದೆ, ಬಡ್ಜೆಟ್‌ನಲ್ಲಿ ಈ ಕಾರ್ಯದ ಬಗ್ಗೆ ಹಣ ಒದಗಿಸಿ ಕೊಡಬೇಕು. ಮಲೆನಾಡಿನಲ್ಲಿ ಸಂಚಾರ ಮಾರ್ಗ ಸೌಕರ್ಯ ಸಮರ್ಪಕವಾಗಿಲ್ಲ. ಆದರಿಂದ ಬಹಳ ಕಷ್ಟವಾಗುತ್ತದೆ. ಒಂದು ಊರಿನಿಂದ ಮತ್ತೊಂದು ಊರಿಗೆ ಮಳೆಗಾಲದಲ್ಲಿ ಆರು ತಿಂಗಳು ಹೋಗಲು ಆಗುವುದಿಲ್ಲ ರಸ್ತೆಗಳ ಮೇಲೆ ಸೇತುವೆಗಳು ಇಲ್ಲ. ಸೇತುವೆಗಳನ್ನು ಕಟ್ಟಿಸುವುದು ಅತ್ಯಗತ್ಯ. ಈ ಕೆಲಸ ಕಾರ್ಯಗಳಿಗಾಗಿ ಚಿಕ್ಕಮಗಳೂರು ತಾಲ್ಲೂಕಿಗೆ ಹೆಚ್ಚು ಹಣ ಈ ಸಾಲಿನ ಬಡ್ಜೆಟಿನಲ್ಲಿ ಪ್ರೊವೈಡ್ ಮಾಡಬೇಕು.

(ಶ್ರೀ ಜಿ. ಪುಟ್ಟಸ್ವಾಮಿ.)

ನನ್ನನ್ನು ಯಾವ ಚುನಾವಣಾ ಕ್ಷೇತ್ರದಿಂದ ಜನರು ಆರಿಸಿ ಕಳಿಸಿಕೊಟ್ಟಿದ್ದಾರೆಯೋ ಆ ಪ್ರದೇಶದ ಜನರ ಕಷ್ಟನಷ್ಟಗಳನ್ನು ನನಗೆ ದೊರಕಿಸಿ ಕೊಟ್ಟಿರುವ ಅವಕಾಶವನ್ನು ಉಪಯೋಗಿಸಿಕೊಂಡು ಹೇಳದೆ ಇದ್ದರೆ ನನ್ನ ಕರ್ತವ್ಯದಲ್ಲಿ ಲೋಪ ಮಾಡಿದಂತಾಗುತ್ತದೆಯಲ್ಲವೆ ? ದೇಶದ ನಿಮ್ನ ವರ್ಗದವರ ಸಲುವಾಗಿ ಆರು ಲಕ್ಷ ರೂಪಾಯಿ ಸಿಬ್ಬಂದಿಗಾಗಿ ಖರ್ಚು ಆಗುತ್ತದೆ. ಇದೇ ಹಣವನ್ನು ನಿರ್ಗತಿಕರಾದಂಥ ನಿಮ್ನ ವರ್ಗದವರ ಅಭ್ಯುದಯಕ್ಕಾಗಿ ಉಪಯೋಗಿಸಿದರೆ ನ್ಯಾಯವಾಗಿರುವುದಿಲ್ಲವೇ ? ನಿಮ್ನ ವರ್ಗದವರಿಗಾಗಿ ಹಣ ಮಂಜೂರು ಮಾಡಿದ್ದರೂ ಕೂಡ ಎಷ್ಟು ಕೆಲಸ ಕಾರ್ಯಗಳನ್ನು ಮಾಡಲು ಪ್ರಯತ್ನ ಆಗಿದೆ ಎಂಬುದನ್ನು ವಿಚಾರ ಮಾಡಬೇಕು. ನಿಮ್ನ ವರ್ಗದವರಿಗಾಗಿ ಎಷ್ಟು ಹಣ ಖರ್ಚು ಆಗಬೇಕಾಗಿತ್ತೋ ಅಷ್ಟು ಹಣ ಖರ್ಚಾಗಿಲ್ಲವೆಂದು ತಿಳಿಯುತ್ತೇನೆ. ರಾಜ್ಯಾಂಗದಲ್ಲಿ ನಿಮ್ನ ವರ್ಗದವರಿಗೆ ಏನೇನು ಭರವಸೆಗಳನ್ನು ಕೊಟ್ಟಿದ್ದಾರೆಯೋ ಅವುಗಳನ್ನು ಈಡೇರಿಸಲು ಸರ್ಕಾರ ಸಾಕಾದಷ್ಟು ಪ್ರಯತ್ನ ಪಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಮಾತು ದೇಶದ ಹಿತದೃಷ್ಟಿಯಿಂದ ಹೇಳುತ್ತೇನೆ. ನಿಮ್ನವರ್ಗದವರ ಅಭಿವೃದ್ಧಿ ಬಗ್ಗೆ ನಿರ್ದಿಷ್ಟ ಯೋಜನೆಯನ್ನು ಮಾಡಿದ್ದಾರೆಯೋ ಎಂಬುದು ಮುಖ್ಯ ಪ್ರಶ್ನೆ. ನಿಮ್ನವರ್ಗದ ಪ್ರಜಾಸಂಖ್ಯೆ ಹೆಚ್ಚು ಇದೆ. ಅವರ ಪ್ರಗತಿಯು ಆದರೆ ದೇಶದ ಪ್ರಗತಿಯೂ ಆಗುತ್ತದೆ. ನಿಮ್ನವರ್ಗದ ಅಧಿಕಾರಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಕೇಂದ್ರ ಸರಕಾರವು ಆದೇಶ ಕೊಟ್ಟಿದ್ದರೂ ಕೂಡ ಅದರಂತೆ ಸರ್ಕಾರ ನಡೆದಿಲ್ಲ. ನಿಮ್ನ ವರ್ಗದ ಅಧಿಕಾರಿಗಳಿಗೆ ಪ್ರೊಮೋಷನ್ ಕೊಟ್ಟು ಸರಕಾರವು ತೃಪ್ತಿಕರವಾಗಿ ಕೆಲಸ ಮಾಡಿಲ್ಲವೆಂದು ಹೇಳಬೇಕಾಗಿದೆ. ಐದು ವರ್ಷಗಳಿಂದ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಒಂದು ಸ್ಥಾನವನ್ನು ನಿಮ್ನ ವರ್ಗದವರಿಗೆ ಕೊಡಬೇಕೆಂದು ಕೇಳುತ್ತಲೇ ಬಂದಿದ್ದೇವೆ. ಪಬ್ಲಿಕ್ ಸರ್ವಿಸ್ ಕಮಿಷನ್ ಆದ ಮೇಲೆ ನಿಮ್ನವರ್ಗದವರಿಗೆ ಕಮಿಷನ್‌ನಲ್ಲಿ ಇದುವರೆಗೆ ಸ್ಥಾನ ದೊರೆತಿಲ್ಲ. ಬಹುಸಂಖ್ಯಾತರಾದ ಪ್ರತಿನಿಧಿಗಳು ಇದ್ದಾರೆ. ಆದರೆ ಬಹುಸಂಖ್ಯಾತರಾದ ನಿಮ್ನ ವರ್ಗದ ಪ್ರತಿನಿಧಿಯು ಮಾತ್ರ ಇಲ್ಲ. ಒಂದು ಸ್ಥಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಹಿಂದುಳಿದ ವರ್ಗದವರ ಹಾಗು ನಿಮ್ನವರ್ಗದವರ ಸುಖದುಃಖಗಳು ಅವರಿಗೇ ಚೆನ್ನಾಗಿ ಗೊತ್ತಿರುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಜಾತಿಯ ಆಧಾರದ ಮೇಲೆ ರಚಿತವಾಗಿಲ್ಲ, ಇದು ನಿಜ. ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆ ತತ್ವದ ದೃಷ್ಟಿಯಿಂದ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಿಮ್ನವರ್ಗದ ಪ್ರತಿನಿಧಿಯು ಒಬ್ಬರು ಇರಬೇಕು.

ಸ್ವಾಮಿ, ಅನೇಕ ಸಮಸ್ಯೆಗಳ ವಿಚಾರದಲ್ಲಿ ಮಾತನಾಡಬೇಕಾಗಿತ್ತು, ಆದರೆ ಕಾಲ ಇಲ್ಲ.

(*The bell was rung several times*).

Mr. SPEAKER.—I will not give the member more than five minutes.

A MEMBER.—The Hon'ble Member is in a mood. He may be allowed to continue.

Mr. SPEAKER.—It is not fair. I would like to know if the Hon'ble Members are in a mood to sit for five minutes more, though I do not think Sri Puttaswamy would finish his speech in five minutes.

Sri G. PUTTASWAMY.—If you would allow me, I would like to finish my speech on Monday, Sir.

(*Several members dissented*).

Mr. SPEAKER.—The House is against it. The member may continue for another five minutes, but only five minutes would be allowed.

ಶ್ರೀ ಜಿ. ಪುಟ್ಟಸ್ವಾಮಿ.— ಆದುದರಿಂದ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ತಾವು ಉದಾರ ಮನಸ್ಸಿನಿಂದ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಶಾಸನಸಭೆಯಲ್ಲಿ ಕೆಲಸ ಮಾಡತಕ್ಕಂಥ ಭಾಗ್ಯ ಲಭಿಸಿತ್ತು ಮತ್ತು ಇಲ್ಲಿ ಈ ಹಿಂದಿನ ಮಾನ್ಯ ಸಭಾಧ್ಯಕ್ಷರುಗಳು ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಾರೆ. ಹಿಂದಿನ ಸ್ಪೀಕರರಾಗಿದ್ದ ದಿವಂಗತ ಮಾನ್ಯ ಶ್ರೀ ಸಿದ್ದಯ್ಯನವರು ಬಹಳ ಪ್ರೋತ್ಸಾಹ ಕೊಟ್ಟಿದ್ದಾರೆಂದು ಹೇಳಬಯಸುತ್ತೇನೆ. ಅವರಂತೆಯೇ ಈ ಮೊದಲು ಸ್ಪೀಕರರಾಗಿದ್ದ ಮಾನ್ಯ ಶ್ರೀ ರುದ್ರಪ್ಪನವರು ಸಹ ಬಹಳ ಪ್ರೋತ್ಸಾಹ ಕೊಟ್ಟಿದ್ದಾರೆ. ಎಲ್ಲರನ್ನೂ ಕೃತಜ್ಞತೆಯಿಂದ ನಾನು ವಂದಿಸುತ್ತೇನೆ.

ನಾನು ಹೆಚ್ಚು ಅವಕಾಶ ತೆಗೆದುಕೊಳ್ಳುವುದಿಲ್ಲ. ಕನ್ನಡ ರಾಜ್ಯ ಒಂದಾದಮೇಲೆ ಮಾತನಾಡಲು ನಾನು ಕಾಲಾವಕಾಶಮಾಡಿಕೊಳ್ಳುವುದಕ್ಕೆ ನನಗಾಗಲಿಲ್ಲ. ಆದರೆ ಈಗ ಕೊನೆಯದಾಗಿ ಅವಕಾಶ ಮಾಡಿಕೊಳ್ಳದಿದ್ದರೆ ನಾನು ಕರ್ತವ್ಯಲೋಪ ಮಾಡಿದಂತಾಗುತ್ತದೆ ಎಂದು ಹೇಳಿ ನಿಂತು ತಮ್ಮನ್ನು ಸ್ವಲ್ಪ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇನೆ. ಹಾಗೆ ಅವಕಾಶ ಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಸ್ವಾಮಿ, ಪಬ್ಲಿಕ್ ಸರ್ವಿಸ್ ಕಮಿಷನ್ ವಿಷಯವಾಗಿ . . . .

ಅಧ್ಯಕ್ಷರು.—ಪಬ್ಲಿಕ್ ಸರ್ವಿಸ್ ಕಮಿಷನ್ ವಿಷಯವಾಗಿ ಆಗಲೇ ಹೇಳಿದ್ದೀರಿ ಅದನ್ನು ಪುನಃ ಹೇಳಬೇಡಿ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ನಾನು ಸರ್ಕಾರಿ ನೌಕರರ ವಿಚಾರವಾಗಿ ಹೇಳುತ್ತಾ ಪೋಲೀಸ್ ಇಲಾಖೆಯಲ್ಲಿ ಇನ್‌ಸ್ಪೆಕ್ಟರುಗಳ ಮತ್ತು ಎ.ಎಸ್.ಪಿ. ಗಳ ಪ್ರಮೋಷನ್ ವಿಚಾರದಲ್ಲಿ, ಅಂದರೆ, ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರುಗಳ ಬಡ್ತಿಕೊಡುವಾಗ ನಿಮ್ನವರ್ಗಕ್ಕೆ ನಿಗದಿಯಾಗಿರುವ ರಾಮಾಷಾ ಪ್ರಕಾರ ಸಿಗುತ್ತಿಲ್ಲ. ಪೋಲೀಸು ಇಲಾಖೆಯೊಂದೇ ಅಲ್ಲ, ಅನೇಕ ಇತರ ಇಲಾಖೆಗಳಲ್ಲಿಯೂ, ರೆವಿನ್ಯೂ ಮೊದಲಾದ ಇತರೆ ಇಲಾಖೆಗಳಲ್ಲಿಯೂ ದಕ್ಷರಾದವರು ನಿಷ್ಠರಾದವರು ಮತ್ತು ಸೀನಿಯಾರಿಟಿ ಪಡೆದಿರತಕ್ಕಂಥ ಅಧಿಕಾರಿಗಳಿಗೆ ಈವರೆಗೆ ಸರಿಯಾದ ಪ್ರೋತ್ಸಾಹ ದೊರೆತಿಲ್ಲ. ಆದುದರಿಂದ, ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ನಿಮ್ನವರ್ಗದವರಿಗೆ ಒಬ್ಬರಿಗೆ ಪ್ರಾತಿನಿಧ್ಯ ದೊರಕಿಸಬೇಕಾದ್ದು ಅಗತ್ಯ.

ಅಧ್ಯಕ್ಷರು.—ನಿಮ್ಮ ವರ್ಗಕ್ಕೆ ಸೇರಿದ ಒಬ್ಬ ಕಲೆಕ್ಟರನ್ನೂ ನಿನ್ನೆಯದಿನ ನೇಮಿಸಿದ್ದಾರಂತೆ.

ಶ್ರೀ ಜಿ. ಪುಟ್ಟಸ್ವಾಮಿ.—I thank the Government Sir. ಸ್ವಾಮಿ, $18\frac{2}{3}$ ಭಾಗ ರಿಸರ್ವೇಷನ್‌ನನ್ನು ಡಿಪ್ರೆಸ್ಡ್ ಕ್ಲಾಸ್‌ಗೆ ಸೇರಿದವರಿಗೆ ಪ್ರಮೋಷನಲ್ ವೇಕೆನ್ಸಿಗಳಿಗೂ ಅನ್ವಯ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡಿ ಕೇಳುತ್ತೇನೆ. ಈ ಸರ್ಕಾರಿ ಅಧಿಕಾರಿಗಳ ಮನೋಭಿಪ್ರಾಯವು ಬದಲಾವಣೆಯಾಗದಿದ್ದರೆ ಬಹಳ ತೊಂದರೆಯಾಗುತ್ತದೆ. ಮತ್ತು ಈ ಸರ್ಕಾರಿ ನೌಕರರುಗಳ ಸಂಬಳ ಸಾರಿಗೆ ವಿಷಯದಲ್ಲಿ ಸ್ವಲ್ಪ ಹೇಳಬೇಕಾಗಿದೆ. ಈ ನೌಕರರುಗಳಿಗೆ ಈಗ ಸರಿಯಾಗಿ ಸಂಬಳವನ್ನು (ಸ್ಕೇಲನ್ನು) ಕೊಟ್ಟಿಲ್ಲ. ಈ ನೌಕರರುಗಳಿಗೆ ಸರಿಯಾದ ಪ್ರೋತ್ಸಾಹ ಕೊಡದಿದ್ದರೆ ತೊಂದರೆಯಾಗುತ್ತದೆ, ದಕ್ಷತೆ ಹೋಗುತ್ತದೆ. ಈ ಸರ್ಕಾರಿ ನೌಕರರ ಸಂಬಳ ಸಾರಿಗೆಗಳನ್ನು ಸರಿಯಾದ ರೀತಿಯಲ್ಲಿ ಈಗ ವಿಮರ್ಶೆ ಮಾಡದಿದ್ದರೆ ಸರ್ಕಾರದ ಯಂತ್ರ ಸಡಿಲಿಹೋಗಿ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಅವರಿಗೆ ಕೈತುಂಬಾ ಸಂಬಳಕೊಟ್ಟರೆ ಸರ್ಕಾರಕ್ಕೆ ತುಂಬ ಅನುಕೂಲವಾಗುತ್ತದೆ. ಹಾಗೆ ಕೈತುಂಬಾ ಸಂಬಳ ಕೊಡದಿದ್ದರೆ ಅವರಿಗೆ ತೊಂದರೆಯಾಗುತ್ತದೆ. ಈಗೇನೋ ಅವರಿಗೆ ವಿಮರ್ಶಿಸಿ ಸಂಬಳ ಕೊಟ್ಟಿದ್ದಾರೆಂದು ಹೇಳಬಹುದು. ಆದರೆ ಈಗ ಯಾವ ಎನ್. ಜಿ. ಓ. ಬಡ ನೌಕರರಿಗೂ ಇದರಿಂದ ತೃಪ್ತಿಕರವಾಗಿಲ್ಲವೆಂಬುದು ನನಗೆ ಕೇಳಿಬಂದಿದೆ. ಒಂದೇ ಸಮನಾಗಿ ಕೆಲಸಮಾಡತಕ್ಕ ನೌಕರರಿಗೆ ಒಂದೇ ಸಮನಾದ ಸಂಬಳ ಕೊಡಬೇಕಾದುದು ಅಗತ್ಯವಾಗಿದೆ. ಮಾನ್ಯ ಅರ್ಥಸಚಿವರು ಮೊನ್ನೆ ಒಂದು ಪ್ರಶ್ನೆಗೆ ಉತ್ತರವೀಯುತ್ತಾ ಈ ಎನ್. ಜಿ. ಓ. ಗಳಿಗೆ ಸಂಬಳಸಾರಿಗೆ ತೃಪ್ತಿಯಾಗಿದೆ ಎಂದು ಹೇಳಿದರು. ಆದರೆ ನಾನು ಹೇಳುತ್ತೇನೆ. ಖಂಡಿತ ಅವರಿಗೆ ತೃಪ್ತಿಯುಂಟಾಗಿಲ್ಲ.

ಶ್ರೀ ಟಿ. ಮರಿಯಪ್ಪ.—ಹಾಗಲ್ಲ ಸ್ವಾಮಿ, ಈಗ ಕೊಟ್ಟಿರುವ ಸಂಬಳ ಸಾರಿಗೆಗಳು ಸರಿಯಾಗಿವೆ, ಸಮರ್ಪಕವಾಗಿ ಬರುತ್ತಿವೆ ಎಂದು N.G.O. ಸಂಘದ ಅಧ್ಯಕ್ಷರೇ ಅಧಿಕೃತವಾಗಿ ಬರೆದ ಪತ್ರ ನನ್ನಲ್ಲಿದೆ. ಅವರು ಬರೆದ ಪತ್ರದಲ್ಲಿ ಎಲ್ಲೋ ಕೆಲವು (anomalies) ನ್ಯೂನತೆಗಳಿವೆ, ಅದನ್ನು ಸರಿಪಡಿಸಬೇಕೆಂದು ಬರೆದಿದ್ದಾರೆ.

ಶ್ರೀ ಜಿ. ಪಟ್ಟಸ್ವಾಮಿ.—ಶ್ಯಾನುಭೋಗರು, ತೋಟಿ, ತಳವಾರರು ಬಹಳ ಕಾಲದಿಂದಲೂ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ತೋಟಿ ತಳವಾರರು ಹಳ್ಳಿಗಳಲ್ಲಿರುವ ಜಮೀನುದಾರರ ಅಧೀನಕ್ಕೆ ಒಳಪಟ್ಟಿರುತ್ತಾರೆ, ಮತ್ತು ಈ ಜಮೀನುದಾರರು ಹೇಳಿದಂತೆ ಕೇಳದೆ ಹೋದರೆ ಅವರಿಗೆ ತೊಂದರೆಯಾಗುತ್ತದೆ. ಈ ಜಮೀನುದಾರರಿಗೆ ಯಾವ ಕಾನೂನಿನ ಭಯವೂ ಇಲ್ಲ. ಈ ವಿಲೇಜ್ ಆಫೀಸರುಗಳು ಯಾವದೋ ಒಬಿರಾಯನ ಕಾಲದ ಪದ್ಧತಿಯಿಂದ ಹೀಗೆ ಕೆಲಸ ಮಾಡುತ್ತಾ ಬಂದಿದ್ದಾರೆ. ಈ ಗ್ರಾಮಾಧಿಕಾರಿಗಳು ಎನ್ನತಕ್ಕವರು ಸಮಾಜದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸತಕ್ಕವರು. ಅವರಿಗೂ ಕೂಡ ಸರಿಯಾದ ಪ್ರೋತ್ಸಾಹ ಕೊಡದಿದ್ದರೆ ಅದು ಸರಿಯಾದುದಲ್ಲ. ಅವರಿಗೆ ಈಗ ಪೋಟಿಗೆ ಎಂದು ಕೊಡುತ್ತಿರುವುದು ತೀರಾ ಕಡಿಮೆ. ಹಿಂದಿನಿಂದ ಇವರಿಗೆಲ್ಲ ಜಮೀನುಗಳನ್ನು ಕೊಟ್ಟಿದ್ದರು. ಇವರುಗಳಿಗೆ ಈ ಜಮೀನಿನಿಂದ ಬರುವ ಉತ್ಪತ್ತಿ ಸರಿಯಾಗಿ ಬಾರದಿರುವುದರಿಂದ ಇವರುಗಳಿಗೆ ಬಹಳ ತೊಂದರೆಯುಂಟಾಗಿದೆ. ಅಲ್ಲದೆ ಈ ದೃಷ್ಟಿಯಿಂದ ನೋಡಿದರೆ ಇವರುಗಳು ನೂರಾರು ಮೈಲಿ ದೂರದಲ್ಲಿರುವ ಹಳ್ಳಿಗಳಿಂದ ತಾಲ್ಲೂಕು ಆಫೀಸಿಗೆ ಹೋಗಿ ಕೆಲಸ ಮಾಡತಕ್ಕವರು, ಅವರುಗಳು 3-4 ಮತ್ತು 10 ಮೈಲಿಗಳ ಪಾಸಲೆ ಸಂಚಾರಮಾಡಿ ಗ್ರಾಮಗಳಿಗೆಲ್ಲಾ ಭೇಟಿಕೊಟ್ಟು ತೃಪ್ತಿಕರವಾಗಿ ಕೆಲಸಮಾಡುತ್ತಿದ್ದರೂ ಕೂಡ ಅವರಿಗೆ ಸಾಲಿಯಾನ ದೊರಕುವ ಪೋಟಿಗೆ ನೋಡಿದರೆ ತೀರಾ ಕಡಿಮೆ. ಹೀಗೆ ಅವರು ತಮ್ಮ ಗ್ರಾಮಗಳಿಂದ ಇರಸಾಲಿಗೆ ಬಹಳ ದೂರ ಹೋಗಬೇಕಾದರೆ ಅವರ ಖರ್ಚು ಎಷ್ಟಾಗುತ್ತದೆ ಎಂದು ನೋಡಿದರೆ ಅವರಿಗೆ ಬರುವ ಪೋಟಿಗೆ ಅವರ ಖರ್ಚಿನ ಕಾಲು ಭಾಗಕ್ಕೂ ಸಾಕಾಗುವುದಿಲ್ಲ. ಈಗಿನಕಾಲಕ್ಕೆ ಅನುಗುಣವಾಗಿ ಪೋಟಿಗೆ ಹೆಚ್ಚಿಸಬೇಕಾದದ್ದು ನ್ಯಾಯವಾಗಿದೆ. ಈಗಾಗಲೇ ಈ ಗ್ರಾಮಾಧಿಕಾರಿಗಳೆಲ್ಲ ಸೇರಿ ಸರ್ಕಾರದವರ ಗಮನಕ್ಕೆ ಕೆಲವು ಬೇಡಿಕೆಗಳನ್ನು ಕೊಟ್ಟಿದ್ದಾರೆ. ಆ ಬೇಡಿಕೆಗಳನ್ನೆಲ್ಲಾ ಸಹಾನುಭೂತಿಯಿಂದ ಈಡೇರಿಸಬೇಕಾದುದು ಅಗತ್ಯ.

ಇನ್ನು ಮುನಿಸಿಪಲ್ ಸರಹದ್ದಿನಲ್ಲಿರತಕ್ಕ ಖಾಲಿ ಹಿಡುವಳಿ ಸೈಟುಗಳನ್ನು ಅಕ್ವೈರು ಮಾಡಿಕೊಂಡು ವಾಸಕ್ಕೆ ಮನೆ ಇಲ್ಲದವರಿಗೆ ಮುನಿಸಿಪಾಲಿಟಿಯವರು ಸೈಟು ಮಂಜೂರುಮಾಡಲು ಅನುಕೂಲವಾಗುವಂತೆ ಕಾನೂನು ಮಾಡಬೇಕು.

ಈ ರೀತಿಯಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕಾಗಿ ಮಾನ್ಯ ಸಭೆಯ ಕಾಲವನ್ನು ತೆಗೆದುಕೊಂಡಿದ್ದೇನೆ ಮತ್ತು ಹೀಗೆ ಮಾತಾಡಲು ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಕ್ಕಾಗಿಯೂ, ಕೊನೆಯದಾಗಿ ನಮ್ಮ ಮಾನ್ಯ ಸದಸ್ಯರು ಇಲ್ಲಿ ನನಗೆ ಬೆಂಬಲವಿತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿಯೂ ನಾನು ಚಿರಋಣಿಯಾಗಿರುತ್ತೇನೆ. ಮತ್ತೊಮ್ಮೆ ನನಗೆ ಸಹಕಾರವಿತ್ತ ಸರ್ವರಿಗೆ ವಂದಿಸುತ್ತೇನೆ.

"ಜೈ ಹಿಂದ್"

Mr. SPEAKER.—I must say a word about the retiring members. I am sympathetic towards them. But my sympathy is tried too much especially in the case of the member who has just now spoken. He has defied my warnings; I personally do not mind that. But, the members who are going to continue as members, I hope, will give all heed to the Chair, After all, it is not myself only but all the members who are going to continue as members, have sympathy for the retiring members. When considered in that aspect I am not very much worried. Otherwise I would have been very much worried and would have gone to the extent of making the Hon'ble member to sit down at once. Let that be an exception.

Even in the case of the retiring members, they should try to be as

(MR. SPEAKER)

brief as possible. On Monday we shall sit at 11 A.M. and take up the Budget. Unless the members comply with the time limit, it will be impossible for me to carry on the work.

I have another announcement to make. The House will meet at 11 A.M. instead of at 12 NOON. The Hon'ble Members who are absent may be informed by the Hon'ble Members who are present here to day.

A MEMBER.—We do not get food at 11 o' clock.

MR. SPEAKER.—The Hon'ble member may take food at 1 o'clock. I shall give him the permission.

The House will now rise and meet on Monday at 11 A. M.

The House adjourned at Twenty minutes past Six of the Clock to meet again at eleven of the Clock on Monday, the 25th March 1957.

VD 2285—GPB—900—27-5-57.

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ದಾಖಲೆ ಕ್ರಮಸಂಖ್ಯೆ Accession No. (B)...4733
ದಿನಾಂಕ Date........................

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಗ್ರಂಥ ಕ್ರಮಾಂಕ Accession No. (B) 4737
ದಿನಾಂಕ Date..........

MYSORE LEGISLATIVE ASSEMBLY

SIXTH DAY.

Monday, 25th March 1957.

The House met in the Assembly Hall, Vidhana Soudha, Bangalore, at Eleven of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Metalling the road from Holehonnur to Anwari in Bhadravati Taluk.

Q.—236. SRI B. MADHAVACHAR (Bhadravati).—

Will the Government be pleased to state :—

(*a*) whether representations have been received for metalling the road from Holehonnur to Anwari *via* Samyanikodmaggi in Bhadravati Taluk;

(*b*) whether an estimate has been prepared;

(*c*) whether recommendation has been received by the Deputy Commissioner, Shimoga, for inclusion of the said road in the list of State Fund Roads ?

A.—SRI H. K. VEERANNA GOWDH (Minister for Public Works).—

(*a*) Yes, one representation addressed to the Chief Engineer.

(*b*) No.

(*c*) No.

ಶ್ರೀ ಬಿ. ಮಾಧವಾಚಾರ್.—ಈ ರಸ್ತೆ ಕಾಮಗಾರಿಯ ವಿಷಯವನ್ನು ಬರುವ ವರ್ಷದ ಬಡ್ಜೆಟ್ಟಿನಲ್ಲಾದರೂ ಸೇರಿಸುವುದಕ್ಕೆ ಸಾಧ್ಯವೆ, ಸ್ವಾಮೀ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲ ಡಿಸ್ಟ್ರಿಕ್ಟುಗಳಿಂದಲೂ ಪ್ರಪೋಸಲ್ ಬಂದಮೇಲೆ ಯಾವ ಡಿಸ್ಟ್ರಿಕ್ಟುಗಳ ಪ್ರಪೋಸಲ್ಲಿಗೆ ಮೊದಲು ಲಕ್ಷ್ಯ ಕೊಡಬೇಕು, ಯಾವುದಕ್ಕೆ ಆಮೇಲೆ ಕೊಡಬೇಕು ಎಂಬುದನ್ನು ನೋಡಿಕೊಂಡು ಸಾಧ್ಯವಾದರೆ ಇದನ್ನು ಸೇರಿಸಲು ಯೋಚಿಸಬಹುದು.

Electric Supply Rates for Domestic and Industrial Purposes.

Q.—278. SRI K. P. GADAG (Gadag).—

Will the Government be pleased to state :—

(*a*) what are the electric supply rates for domestic and industrial purposes in old Mysore State and in Dharwar District towns, namely, Dharwar, Hubli, Gadag, Ranibennur, Haveri, Byadgi and other places of the District wherever Jog Electric Power is supplied ;

(*b*) whether there are any complaints from the public of Dharwar District, that the electric supply rates for domestic and industrial purposes are too high and even uneconomic for industrial purposes ;

(*c*) whether they would consider to have uniform policy of introducing the same rates wherever power is supplied from Jog Electric Power.

A.—SRI H. K. VEERANNA GOWDH (Minister for Public Works).—

(*a*) See the Statement given below.

(*b*) Yes.

(*c*) This question of having a uniform tariff system for all hydro-electric supply in the State is under consideration.

*Asterisk indicates that the remarks or speeches have not been revised by the member concerned.

STATEMENT (*a*)

(SRI H. K. VEERANNA GOWDH).

Tariffs for domestic lighting and motive power less than 50 K.W. rates per unit (B.O.T.U.)

	Mysore State	Bombay Electricity Board	Dharwar Licensee	Gadag Licensee	Haveri Licensee	Byadgi Licensee	Ranibennur Licensee	Sirsi Licensee
1	2	3	4	5	6	7	8	9
Domestic consumption. (Lighting)	4 Annas. Tax on consumption is not levied.	$5\frac{1}{3}$ Annas for first 12 units, $4\frac{2}{3}$ annas for next 12 units, 4 annas for all extra consumption.	Same as Bombay Electricity Board.	$6\frac{2}{3}$ Annas.	7 Annas	7 Annas	7 Annas	8 Annas
		Tax at the rate of 6 pies per unit beyond the first 12 units of consumption.	*Tax*: same as in Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.
Motive Power	*L.T. Supply up to 50 H P. (38 K.W.)* $1\frac{1}{4}$ annas for first 100 units per H.P., 1 anna from 101 to 150 units per H.P., 0·9 anna over 150 units per H.P. with monthly minimum charges based on 72 units *i.e.*, Rs. 5-10-0 per H.P. for installations up to 25 H.P. and on 80 units *i.e.*, Rs. 6-4-0 per H.P. for installations above 25 H.P. to 50 H.P. (inclusive).	$2\frac{2}{3}$ annas for first 50 units B.H.P. $1\frac{1}{3}$ annas for next 1,000 units 1 anna for additional consumption. Rs. 5 per month per B.H.P. is the fixed charge.	Same as Bombay Bombay Electricity Board.	Same as Bombay Electricity Board.	Same as Bombay Electricity Board.	Same as Bombay Electricity Board.	Same as Bombay Electricity Board.	2 Annas per unit. Fixed charges Rs. 1-8-0 per B.H.P. per month.
	Tax:—Approximately at 20 per cent of the above rates.	*Tax*:—$\frac{1}{8}$ anna (three pies per two units)	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*:—Same as in Bombay Electricity Board.	*Tax*.—Same as in Bombay Electricity Board.

Sri. C. S. HULKOTI.—May I know whether the licensee of Gadag, Haveri, Byadgi and Ranibennur is one and the same person ?

*Sri H. K. VEERANNA GOWDH.—I want notice.

Sri C. S. HULKOTI.—What is the rate per unit at which Government supplies to the licensee ?

Sri H. K. VEERANNA GOWDH.—The information is not available with me here.

Sri C. S. HULKOTI.—May I know why there is a difference between the rate of the Dharwar licensee and the Gadag licensee ?

Sri H. K. VEERANNA GOWDH.—I want notice.

Gadag Co-operative Cotton Sale Society.

Q.—310. Sri R. NAGAN GOWDA (Hospet).—

Will the Government be pleased to state :—

(*a*) the net profit earned by the Gadag Co-operative Cotton Sale Society during the co-operative years 1953-54, 1954-55 and 1955-56 ;

(*b*) the amount of Dalali collected, the amount realised by the sale of sample cotton, sweepings cotton and sample grain in the above 3 (three) years ;

(*c*) the amount of loans given to non-members in the last 3 (three) years;

(*d*) the amount outstanding against non-members and for what period and how much of it is time-barred and irrecoverable ?

A.—Sri A. BHEEMAPPA NAIK (Minister for Co-operation).—21st March 1957.

(*a*) *Years*		*Amount* Rs.
1953-54	...	48,740
1954-55	...	49,490
1955-56	...	2,00,763

DALALI COLLECTED.

1953-54	...	63,462
1954-55	...	61,707
1955-56	...	1,30,156

SALE OF SAMPLE COTTON.

Years		*Amount* Rs.
1953-54	...	22,417
1954-55	...	12,892
1955-56	...	45,943

SALE OF SWEEPINGS COTTON.

1953-54	...	5,944
1954-55	...	631
1955-56	...	7,299

SALE OF SAMPLE GRAIN (COTTON SEEDS).

1953-54	...	1,767
1954-55	...	720
1955-56	...	3,638

(*c*) 1953-54	...	13,148
1954-55	...	13,812
1955-56	...	20,362

(*d*)) Rs. 77,036.

For more than three years.	...	37,045
For less than three years	...	39,991
Total	...	77,036

Time-barred and irrecoverable amount is Rs. 22,232.

Dr. R. NAGAN GOWDA.—It is noticed from the answer that in 1955-56 there was a sudden rise in the amount of profit earned and also in the amount of collections made as dalali, sale of sample cotton, sweepings and sample grain....

Mr. SPEAKER.—The Hon'ble Member may put a question.

Dr. R. NAGAN GOWDA.—I will put it in the form of a question. Can the Government say whether there is any particular reason for this sudden spurt in the amount of profit earned ?

Sri A. BHEEMAPPA NAIK.—During that year better business was done. Perhaps, the management did the business more briskly and more efficiently.

Dr. R. NAGAN GOWDA.—Supplementary to (*d*).—It is found that the timebarred loans amount to more than Rs. 22,000. May I know whether this

(DR. R. NAGAN GOWDA.)

refers to loans more than three years old or less than three years old ?

Sri A. BHEEMAPPA NAIK.—More than three years old.

Dr. R. NAGAN GOWDA.—Will the Government make any special efforts to see that these time-barred loans are collected and that those who are responsible for giving these loans are made to pay them ?

Sri A. BHEEMAPPA NAIK.—We do not know whether the officers or the management were responsible for giving these loans. These loans were given when this area was in the former Bombay Government. Anyway, Government will try to find out who was responsible for giving these loans and if he is in the service of this Government, Government will do its best to recover the money from him.

QUESTIONS FOR ANSWERS ON THE DAY

(But not taken up)

Incomplete Works in Tunga Anicut Project

Q.—244. Sri S. R. NAGAPPA SETTY (Shimoga).—

Will the Government be pleased to state :—

(*a*) the items of work, which are incomplete in Tunga Anicut Project and are expected to be completed during the current year and that will be taken up during the year 1957-58.

(*b*) the probable establishment of the Tunga Anicut Project Division to complete the remaining work ?

A.—Sri H. K. VEERANNA GOWDH (Minister for Public Works).—

(*a*) *vide* Statement given below.

(*b*) A range with reduced staff till the end of March 1958.

STATEMENT.

1956–57	1957–58
I. HEAD WORKS. (1) Construction of Rest House Building (2) Protective works on the Right Bank	I. HEAD WORKS. (1) Formation of terrace gardens
II. LEFT BANK CHANNEL. (1) Collection of metal for irrigated tract roads—I and II Stages. (2) Construction of relieving weirs—inlets, etc., under II Stage (cross drainage works).	II. LEFT BANK CHANNEL. (1) Consolidation of metal collected in Irrigated Tract Road. (2) Construction of revetment to slopes wherever loose soil is met with. (3) Anti-malaria works in shifting of villages. Canalisation of valleys and strengthening tank bunds.
III. RIGHT BANK CHANNEL. All works—0 to 15 miles and the covered duct in the 17th mile of the channel.	III. RIGHT BANK CHANNEL. 16 to 32 miles (except the covered duct in the 17th mile). (Excavation, Berm raising embankment, cross drainage works, and opening out Branch Channel works, Anti-Malaria Works.)
	IV. MISCELLANEOUS Payment of compensation and balance work.

District Board roads for inclusion in the list of Public Works Department roads.

Q.—247. Sri H. C. LINGA REDDY (Malur).—

Will the Government be pleased to state :—

(*a*) whether they have asked the District Boards in the State to send a list of District Board roads for inclusion in the list of Public Works Department roads for maintenance in the State ;

(*b*) whether the Kolar District Board has sent a list of roads for such inclusion ;

(*c*) the roads sent up for inclusion in the Public Works Department from Malur Taluk ;

(*d*) the action taken by them ?

A.—Sri H. K. VEERANNA GOWDH (Minister for Public Works).—

(*a*) Yes.

(*b*) Yes.

(*c*) 1. Santhehalli-Huidenahalli-Tekal Road.

2. Lakkur Approach Road.
3. Malur-Thornahalli Road.
4. Shivarapatna-Bairanahalli Road.
5. Nasaragere-Marasandra Road.
6. Tekal-Masti Road.
7. Lakkur-Chickthirupathi Road.
8. Kudiyanur-Dadinaikandoddi Rd.
9. Hongenahalli-Sivarapatna Road.

The matter is under consideration.

Scheme for protected water supply in Kolar District.

Q.—248. Sri H. C. LINGA REDDY (Malur).—

Will the Government be pleased to state :—

(*a*) whether any Scheme for protected water supply has been launched in Kolar District ;

(*b*) if so, the places chosen for the introduction of such a scheme in Malur Taluk ;

(*c*) the stage at which the scheme of work is at present in the several places ;

(*d*) when they expect the works to be completed ?

A.—Sri R. CHENNIGARAMIAH (Minister for Local Self-Government)—

(*a*) Yes.

(*b*) 1. Chickthirupathi,
2. Masti,
3. Shivarapatna, and
4. Hongenahalli.

(*c*) 1. *Chickthirupathi.*—Bore-well has been completed. Construction of a pump house and masonry service reservoir has made good progress.

2. *Masti.*—The bore-well work is in progress. Tenders are being invited for the construction of pump house and masonry tank.

The work will be taken up after the bore-well is found successful and yield tested.

3. *Shivarapatna.*—Bore-well work is in progress. Tenders for the construction of a pump house and masonry tank have been accepted. Further work will be taken up when the bore-well is found successful.

4. *Hongenahalli.*—A modified estimate for a bore-well is under preparation. Tender for the masonry tank has been accepted. The work will be taken up after the source is settled.

(*d*) In about one year.

Primary Schools which are upgraded in Malur Taluk.

Q.—253. Sri H. C. LINGA REDDY (Malur).—

Will the Government be pleased to state :—

(*a*) The number of primary schools which are upgraded with the fifth class in Malur Taluk last year ;

(*b*) the number of primary schools which are converted into the new type middle schools or pacca middle schools in Malur Taluk within the last four years?

A.—Sri Kadidal MANJAPPA.—(Minister for Education)—

(*a*) 8 during 1956.

(*b*)—Nil.

Splitting up the District of South Kanara.

Q.—254. Sri S. S. KOLKEBAIL (Brahmavar)—

Will the Government be pleased to state:—

(*a*) whether there is any proposal before the Government to split up the District of South Kanara and add on this area to the neighbouring Districts of Shimoga and Hassan;

(*b*) if so, whether they will expedite the proposal at an early date, so as to facilitate the improvement of Malnad area?

A.—Sri M. P. PATIL (Minister for Revenue).—

(*a*) No.

(*b*) Does not arise in view of reply to clause (*a*) above.

Proposal for siting the Major Port at Malpe.

Q.—268. Sri S. S. KOLKEBAIL (Brahmavar).—

Will the Government be pleased to state:—

(*a*) whether they have sent any proposal to the Central Government for siting the Major Port at Malpe (Udipi Taluk) and a Naval Yard at Bhatkal;

(*b*) if not, whether they intend to take steps to press the Central Government in the matter in view of the fact that this is the only Maritime State in the country without any port;

(*c*) if not, why?

A.—Sri H. K. VEERANNA GOWDH (Minister for Public Works).—

(*a*) Recommendation has been made to Government of India for development of Malpe into a Major Port; but no recommendation has been made for a Naval Yard at Bhatkal.

(*b*) The recommendation as regards Malpe has been made already. But as regards Naval Yard at Bhatkal, it is not a matter coming within the purview of the State Government.

(*c*) Does not arise.

Primary Boys' School for Dimmeri Harohally, Malur Taluk.

Q.—277. Sri H. C. LINGA REDDY (Malur).—

Will the Government be pleased to state:—

(*a*) whether the people of Dimmeri Harohalli, Malur Taluk, are demanding a Government Primary Boys' School;

(*b*) if so, from what period;

(*c*) the action taken by them thereon?

A.—Sri Kadidal MANJAPPA (Minister for Education).—

(*a*) Yes.

(*b*) From this year.

(*c*) The matter is under consideration.

Grievances of the people in Tyakal Hobli, Malur Taluk.

Q.—280. Sri H. C. LINGA REDDY (Malur)—

Will the Government be pleased to state:—

(*a*) whether a Memorandum detailing the grievances of the people in

(SRI H. C. LINGA REDDY.)

Tyakal Hobli, Malur Taluk, was presented to the Chief Minister on 29th November 1956 at Tyakal on the occasion of his visit to open the Local Fund Dispensary;

(*b*) the details of demands made and the action taken by them thereon?

A.—Sri A. B. SHETTY (Minister for Health).—

(*a*) Yes.

(*b*) (i) Provision of electricity.

(ii) Construction of sheds in the shandy maidan.

(iii) Construction of a bridge to Markandeya River.

(iv) Construction of a Bus Stand.

(v) Construction of a building for the Police Station.

(vi) Improvements to the tanks.

(vii) Construction of in-patient wards by Sriyuths Chikkakempanna and Veere Gowda.

Action is being taken to examine each of the requests by the concerned departments.

Damage done to the Roads and Bridges due to heavy rains in Malur Taluk.

Q.—285. Sri H. C. LINGA REDDY (Malur).—

Will the Government be pleased to state:—

(*a*) the damage done to the roads and bridges under the P. W. D. and the District Board in Malur Taluk due to heavy rains during October 1956;

(*b*) the value of the damage;

(*c*) the action taken by them thereon?

A.—Sri R. CHENNIGARAMIAH (Minister for Local Self-Government).—

(*a*), (*b*) & (*c*).—No damages have been caused to the roads and bridges under the control of the Public Works Department in Malur Taluk.

A statement indicating the damages caused to District Board roads, the value of the damages and the action taken is appended.

STATEMENT.

Statement of damages caused to District Board Roads in Malur Taluk during recent heavy rains.

Sl. No.	Name of the road and kind of damage	Value of the damage	Action taken
		Rs.	
1	Santhehalli-Huladenahalli-Tekal Road		
	(a) Breach of either side of embankment to High level Cause way in 4/5, 5/5 and 3/5 (Flood effected area) I Section.	980	An estimate has been sanctioned under special grant and the work got executed and traffic restored.
	(b) Embankment breached and the revetmont of causeway damaged at 3/9 of II Section.	400	An estimate has been sanctioned under S.R. grant and the work got executed and traffic restored.
2	Masti approach Road.		
	The embankment and the revetment on either side of the High level Causeway washed.	2,170	The work is included under L.D. grants and estimate received. The work is being taken up.
3	Tekal-Masti Road. Embankment at 4/11 and 5/11 has been breached.	580	An estimate has been sanctioned under S.R. grant and the work is under progress.
ಸ್ವಾಮಿ, ನಮ್ಮ ಹರಿಜನರ ಏಳಿಗೆಯ ವಿಷಯದಲ್ಲಿ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ. ಎಲ್ಲಿ ಅಸ್ಪೃಶ್ಯತೆಯ ನಿವಾರಣೆ ಆಗಿದೆ ಸ್ವಾಮಿ? ಯಾವ ಊರಿನಲ್ಲಿ ದೇವಸ್ಥಾನಕ್ಕೆ ಬಿಟ್ಟುಕೊಂಡಿದ್ದಾರೆ? ನಾನು ಯಾವುದೋ ಒಂದು ಹೊಟೇಲಿಗೆ ಹೋಗಿದ್ದೆ. ಹೊಡೆಯಲಿಕ್ಕೆ ಬಂದುಬಿಟ್ಟರು ಸ್ವಾಮಿ! ಏಕಯ್ಯಾ, ಕಾನೂನು ಆಗಿದೆಯಲ್ಲಾ ಎಂದದ್ದಕ್ಕೆ ಅದನ್ನೆಲ್ಲ ನಿಮ್ಮ ಜೇಬಿನಲ್ಲಿ ಇಟ್ಟುಕೊಳ್ಳಿ ಎಂದು ಹೇಳಿ ಹೊರಕ್ಕೆ ಕಳುಹಿಸಿಯೇಬಿಟ್ಟ! ನನಗೆಯೇ ಹೀಗೆ ಆಗುತ್ತಿರುವಾಗ ಅಸ್ಪೃಶ್ಯತಾ ನಿವಾರಣೆ ಎಲ್ಲಿ ಆಯಿತು? ಮಾಡಿರತಕ್ಕ ಕಾಯಿದೆಗಳು ತಾಲ್ಲೂಕು ಆಫೀಸಿನಲ್ಲಿ ಇವೆಯೇ, ರೆವಿನ್ಯೂ ಇನ್ಸ್‌ಪೆಕ್ಟರ್ ಜೇಬಿನಲ್ಲಿ ಇವೆಯೋ ಹೊರತು ಕಾರ್ಯತಃ ಜಾರಿಯಲ್ಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಅದನ್ನು ಟಾಂ ಟಾಂ ಹೊಡಿಸಿ ಇಂಥ ಕಾನೂನು ಇದೆ, ಅದನ್ನು ಮೀರಿ ನಡೆದರೆ ಅಂತಹವರಿಗೆ ಶಿಕ್ಷೆಯಾಗುತ್ತದೆ ಎಂದು ತಿಳಿಸಬೇಕು. ಇದೇ ರೀತಿ ಎಲ್ಲೆಲ್ಲೂ ಪ್ರಾಣಿವಧೆ ಮಾಡಕೂಡದು ಎಂದು ಮಾಡಿದ್ದೀರಿ. ಪಟೇಲ್ ಶ್ಯಾನುಭೋಗರ ಎದುರಿನಲ್ಲಿಯೇ ಈ ಕೆಲಸಗಳನ್ನು ಮಾಡಿಸುತ್ತಾರೆ. ಅವರನ್ನು ಕೇಳುವವರೇ ಇಲ್ಲ. ಅನೇಕ ಕಡೆ ಕೋಣ, ಕುರಿ, ವಗೈರೆ ವಧೆಮಾಡುತ್ತಾರೆ. ಹೀಗಾದರೆ ಕಾನೂನು ಎಲ್ಲಿ ಪಾಲಿಸಿದಂತಾಯಿತು? ಇದಕ್ಕೆಲ್ಲ ಅವಕಾಶ ಕೊಡದೆ ಪ್ರಾಣಿವಧೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಹೇಳುತ್ತೇನೆ.

ಮದ್ಯಪಾನನಿರೋಧದ ವಿಚಾರದಲ್ಲಿ ತಮ್ಮ ನೀತಿಯನ್ನು ನಾನು ಒಪ್ಪುವುದಿಲ್ಲ. ಒಂದು ಕಡೆ ಕುಡಿಯಬೇಡಿ ಎನ್ನುವುದು, ಇನ್ನೊಂದು ಕಡೆ ಕುಡಿಯಿರಿ ಎನ್ನುವುದು ಇದು ಯಾವ ನೀತಿ, ಸ್ವಾಮಿ? ಇದು ಒಂದು ಕಡೆ ಮೀಸೆ ಬೋಳಿಸಿ, ಇನ್ನೊಂದು ಕಡೆ ಮೀಸೆ ಬೋಳಿಸದಿದ್ದರೆ ಎಷ್ಟು ಚೆನ್ನಾಗಿರುತ್ತದೆಯೋ ಅಷ್ಟೇ ಚೆನ್ನಾಗಿರುತ್ತದೆ. (ನಗು!)

ಹೆಂಡ, ಸಾರಾಯಿ, ಗಾಂಜ ಮುಂತಾದುವುಗಳನ್ನು ಮಹಾತ್ಮ ಗಾಂಧಿಯವರ ತತ್ತ್ವದಂತೆ ನಿರೋಧ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಎಲ್ಲ ಕಡೆಯೂ ಕಟ್ಟುನಿಟ್ಟಾಗಿ ಪಾನನಿರೋಧವನ್ನು ಜಾರಿಗೆ ತರದಿದ್ದರೆ ಅದರಿಂದ ಕಳ್ಳಬಟ್ಟಿ ಸಾರಾಯಿ ತಯಾರಿಕೆ ಜಾಸ್ತಿಯಾಗುತ್ತದೆ. ಅದರ ಹಾವಳಿಯನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಸರ್ಕಾರದವರು ಗಮನಿಸಿ ಸಂಸ್ಥಾನಾದ್ಯಂತ ಪೂರ್ಣ ಪಾನನಿರೋಧವನ್ನು ಜಾರಿಗೆ ತಂದು ಕುಡಿತವನ್ನು ಎಲ್ಲ ಕಡೆಯೂ ನಿಲ್ಲಿಸಿ ಜನರಿಗೆ ಉಪಕಾರ ಮಾಡಬೇಕು.

ಇದು ಕಡೆಯ ಅಧಿವೇಶನ. ಮುಂದೆ ನಾನು ಈ ಸಭೆಗೆ ಬರಲು ಅವಕಾಶವಿಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲರಿಗೂ ಮತ್ತು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೂ ಅಭಿವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ವೈ. ಸಾಂಬ್ರಾಣಿ (ಹುಬ್ಬಳ್ಳಿ).—ಅಧ್ಯಕ್ಷರೇ, ಈ ದಿವಸ ನಮ್ಮ ಬಜೆಟ್ಟು ಕೊರತೆಯ ಬಜೆಟ್ಟಾಗಿದೆ. ಆದರೂ ಕೂಡ ಹಿಂದುಳಿದವರ ವಿಶೇಷತಃ ಹರಿಜನರ ಏಳಿಗೆಗೆ ಅಷ್ಟಾಗಿ ಗಮನ ಕೊಟ್ಟಿಲ್ಲ. ಹರಿಜನರಿಗೆ ಶಿಕ್ಷಣ ಸೌಕರ್ಯ ಸಾಕಾಗದೆ ಅವರು ಹೆಚ್ಚಾಗಿ ವಿದ್ಯಾವಂತರಾಗದೆ ಪ್ರಗತಿಗೆ ಅವಕಾಶ ತಪ್ಪಿ ಅಧೋಗತಿಗೆ ಇಳಿಯುತ್ತಿದ್ದಾರೆಂದು ವಿನಂತಿ ಮಾಡಬೇಕಾಗಿದೆ. ಈಗಿನ ಕಾಲದಲ್ಲಿ ನಾವೆಲ್ಲರೂ ಹೊಂದಿಕೊಂಡುಹೋಗಬೇಕು. ನಮ್ಮ ದೇಶದ ಏಳಿಗೆಗಾಗಿ ಒಗ್ಗಟ್ಟಾಗಿ ದುಡಿಯಬೇಕು, ಸಮತಾವಾದ ಸಮಾಜ ಸ್ಥಾಪನೆಯಾಗಬೇಕು ಎಂದು ಹೇಳುವಾಗ ಅದಕ್ಕೆ ತಕ್ಕಂತೆ ಬಜೆಟ್ ತಯಾರಾಗುತ್ತಿಲ್ಲ. ದೇಶದ ಏಳಿಗೆಯಾಗಬೇಕಾದರೆ, ನಮ್ಮ ದೇಶದಲ್ಲಿಯೂ ಪರರಾಷ್ಟ್ರಗಳಲ್ಲಿಯಂತೆ ಪ್ರಜಾಪ್ರಭುತ್ವ ಏಳಿಗೆಯಾಗಬೇಕಾದರೆ ವಿದ್ಯಾಪ್ರಸಾರ ಹೆಚ್ಚಾಗಬೇಕು. ಆ ವಿದ್ಯಾಪ್ರಸಾರಕ್ಕೆ ಸರ್ಕಾರ ಇನ್ನೂ ಸಾಕಾದಷ್ಟು ಪ್ರೋತ್ಸಾಹ ನೀಡಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನಮ್ಮ ಹಳ್ಳಿಗಳಲ್ಲಿ ಜನರ ಸ್ಥಿತಿಗತಿ ಹೇಗಿದೆಯೆಂಬುದು ಪ್ರತ್ಯಕ್ಷವಾಗಿ ಹೋಗಿ ನೋಡಿದರೆ ತಾನಾಗಿಯೇ ಗೊತ್ತಾಗುತ್ತದೆ; ಹರಿಜನರ ಸ್ಥಿತಿಯಂತೂ ಬಹಳ ಶೋಚನೀಯವಾಗಿದೆ. ಹರಿಜನರಿಗಾಗಿ ಮತ್ತು ಹಿಂದುಳಿದವರಿಗಾಗಿ ಖರ್ಚು ಮಾಡಬೇಕೆಂದು ನಿರ್ದಿಷ್ಟಗೊಳಿಸಿ ಹಣ ಒದಗಿಸಿದರೂ ಸಹ ಆ ಹಣ ಮುಂದುವರಿದ ವರ್ಗದವರಿಗಾಗಿಯೇ ಖರ್ಚಾಗುತ್ತದೆ. ಹೀಗಾದರೆ ನಮ್ಮ ಸ್ಥಿತಿ ಹೇಗೆ ಯಾವ ಕಾಲಕ್ಕೆ ಸುಧಾರಿಸಬೇಕು? ನಾವು ಹೀಗೆಯೇ ಇರಬೇಕೇ? ನಾವು ಇತರರ ಹಾಗೆ ಮನುಷ್ಯರಾಗಿ ಬಾಳಬೇಡವೇ? ನಾವು ಮುಂದುವರಿಯಬೇಕಾದ್ದು ಅವಶ್ಯಕವೆಂದು ಹೇಳುತ್ತಾರೆ. ಆದರೆ ಕಾರ್ಯತಃ ಆ ರೀತಿ ನಡೆಯುತ್ತಿಲ್ಲ. ವಿದ್ಯೆಯುಳ್ಳದವನು ಹದ್ದಿಗಿಂತ ಕಡೆಯೆಂದು ಹೇಳುತ್ತಾರೆ. ಅದಕ್ಕೆ ಅವಕಾಶಕೊಡದೆ ಮೊದಲು ಎಲ್ಲರಿಗೂ ಸಾಕಷ್ಟು ಶಿಕ್ಷಣ ಕೊಡಬೇಕು, ಅದಾಗದ ಹೊರತು ಆರ್ಥಿಕ ಸ್ಥಿತಿ ಉತ್ತಮವಾಗುವುದಿಲ್ಲ. ಸರ್ಕಾರದವರು ಪ್ರತಿಯೊಂದು ಹಳ್ಳಿಯಲ್ಲಿಯೂ ಹರಿಜನ ವಿದ್ಯಾರ್ಥಿಗಳಿಗೆ ಪುಕ್ಕಟೆ ವಸತಿಗೃಹವನ್ನಿಟ್ಟು ಅವರ ಶಿಕ್ಷಣ ಪ್ರಗತಿಯಾಗುವಂತೆ ಏರ್ಪಾಡು ಮಾಡಬೇಕು ಎಂದು ಬೊಂಬಾಯಿ ಸರ್ಕಾರಕ್ಕೂ ಹೇಳಿದ್ದೆ ಮತ್ತು ಇಲ್ಲಿಗೆ ಬಂದ ಮೇಲೆ ಶ್ರೀಮಾನ್ ಕಡಿದಾಳ್ ಮಂಜಪ್ಪ ಅವರಿಗೂ ಹೇಳಿದೆ. ಆ ವಿಷಯದಲ್ಲಿ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೋ ತಿಳಿಯದು. ನಮ್ಮ ಸ್ಥಿತಿ ನೋಡಿದರೆ ಪರರಾಷ್ಟ್ರಗಳಲ್ಲಿ ನಾವು ಮುಂದುವರಿದವರೆಂದು ಹೇಳುವುದಕ್ಕೆ ಬಾರದು. ನಾವು ಮುಂದುವರಿಯಬೇಕಾದರೆ ಶಿಕ್ಷಣದ ಉಪಾಯ ಹೊರತು ಬೇರೆಯಿಲ್ಲ. ಮೊದಲು ಶಿಕ್ಷಣ ಪ್ರಗತಿಯಾಗುವ ಹಾಗೆ ವ್ಯವಸ್ಥೆ ಮಾಡಬೇಕು. ನಮ್ಮನ್ನು ವಿದ್ಯಾವಂತರನ್ನಾಗಿ ಮಾಡುವವರೆಗೂ ನಮ್ಮ ಹಿಂದೂಸ್ಥಾನಕ್ಕೆ ಕೀರ್ತಿ ಬರುವುದಿಲ್ಲ.

ಮತ್ತೊಂದು ಮಾತು ಹೇಳುತ್ತೇನೆ. ಎಲ್ಲರೂ ಚಹಾಅಂಗಡಿ, ಧರ್ಮಶಾಲೆ, ಗುಡಿಗುಂಡಾರ ಇವುಗಳ ವಿಚಾರ ಬಹಳವಾಗಿ ಹೇಳಿದರು. ಅವೆಲ್ಲಾ ನಮಗೇಕೆ ಬೇಕು? ಅವೊಂದೂ ಮುಖ್ಯವಲ್ಲ. ನಮಗೆ ಸರಿಯಾದ ಶಿಕ್ಷಣ ಕೊಟ್ಟರೆ ನಮ್ಮಲ್ಲಿ ಸ್ವಾಭಿಮಾನ ಹುಟ್ಟಿ ಅರಿವುಂಟಾದರೆ ದೇವರೂ ಸಹ ನಾವಿದ್ದಲ್ಲಿಗೇ ಬಂದಾನು. ಆರ್ಥಿಕ ಪರಿಸ್ಥಿತಿ ಸುಧಾರಿಸಿ ತಿಳಿವಳಿಕೆ

(ಶ್ರೀ ಡಿ. ವೈ. ಸಾಂಬ್ರಾಣಿ)

ಯುಂಟಾದರೆ ದೇವರ ಕೃಪೆ ನಮ್ಮ ಮೇಲೆ ಉಂಟಾಗಲು ಅವಕಾಶ ತಾನೇ ಆಗುತ್ತದೆ. ಮೊದಲು ನಮ್ಮನ್ನು ಮನುಷ್ಯರಹಾಗೆ ಮಾಡಿರಿ; ಶಿಕ್ಷಣ ಕೊಡಿ. ಶಿಕ್ಷಣವೆಂದರೆ ಮೂರುನಾಲ್ಕು ಅಕ್ಷರ ಬಂದರೆ ಸಾಕಾಗದು. ಅಷ್ಟರಿಂದಲೇ ಮುಂದುವರಿಯಲು ಸಾಧ್ಯವಿಲ್ಲ. ಶಿಕ್ಷಣ ಪಡೆದ ಮೇಲೆ ಜಗತ್ತಿನಲ್ಲಿ ನಡೆಯುವುದೆಲ್ಲಾ ನಮಗೆ ಗೊತ್ತಾಗುವಂತಾಗಬೇಕು. ಒಂದು ವೇಳೆ ಸರ್ಕಾರಿ ನೌಕರಿ ಕೊಡದಿದ್ದರೆ ವಂಶಪಾರಂಪರ್ಯವಾಗಿ ಬಂದ ಕೆಲಸಗಳು ಚರ್ಮ ಹದ ಮಾಡುವುದು ಮುಂತಾದವು ಏನಿದ್ದುವೋ ಅದನ್ನೂ ಬೇರೆಯವರು ಕಸಿದುಕೊಂಡಿರುವುದರಿಂದ ಬಹು ಕಷ್ಟವಾಗುತ್ತದೆ. ವಿದ್ಯಾರ್ಹತೆಯೊಂದಿದ್ದರೆ ಹೇಗಾದರೂ ಒದ್ದಾಡಿ ಜೀವನನಿರ್ವಹಣೆ ಮಾಡಬಹುದು. ಅನೇಕರು ವಿದ್ಯಾವಂತರಾಗಿ ಇಂಗ್ಲೆಂಡ್, ಅಮೇರಿಕಾ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಹೋಗಿ ಪ್ರವೀಣರಾಗಿ ಬಂದು ದೊಡ್ಡದೊಡ್ಡ ನೌಕರಿ ಪಡೆಯುತ್ತಾರೆ. ಆದರೆ ನಾವು ಜನ್ಮಜನ್ಮಾಂತರಗಳಿಂದ ವಿದ್ಯೆಯಿಲ್ಲದೆ ಕಷ್ಟಪಟ್ಟುಕೊಂಡು ಒದ್ದಾಡುತ್ತಿದ್ದೇವೆ; ಸುಖಪಡುವ ಯೋಗ ನಮಗಿನ್ನೂ ದೊರೆತಿಲ್ಲ. ನಮಗೆ ಗುಡಿಗುಂಡಾರಗಳಿಂದೇನೂ ಪ್ರಯೋಜನವಿಲ್ಲ; ಅದೆಲ್ಲ ಡಾಂಭಿಕತನ. ಶಿಕ್ಷಣವನ್ನು ಸರಿಯಾಗಿ ಕೊಟ್ಟು ಹರಿಜನರನ್ನು ಮುಂದಕ್ಕೆ ತರದಿದ್ದರೆ ಪರರಾಷ್ಟ್ರಗಳಲ್ಲಿ ನಮ್ಮ ಘನತೆ ಉಳಿಯಲಿಕ್ಕಿಲ್ಲ.

ಇನ್ನು ನೌಕರಿ ಕೊಡುವ ವಿಷಯದಲ್ಲಿ ಸಭಾಸದರು ಮಾತನಾಡಿದ್ದಾರೆ. ಅದರಲ್ಲೇನೂ ವ್ಯತ್ಯಾಸವಿಲ್ಲ, ಅದು ಸರಿಯಾಗಿದೆ. ಅರ್ಜಿ ಯಾರಾದರೂ ಕೊಟ್ಟರೆ ಕೊಡುತ್ತೇವೆಂದು ಬಾಯಲ್ಲಿ ಹೇಳಿ ತಮಗೆ ಸಂಬಂಧಪಟ್ಟವರಾರಿಗೋ ಕೊಟ್ಟುಬಿಡುತ್ತಾರೆ. ಹರಿಜನರಲ್ಲಿ ಶ್ರೇಷ್ಠರಿಗೆ ದೊಡ್ಡ ನೌಕರಿ ಕೊಡುತ್ತಾರೆ. ಆದರೆ ಅವರಲ್ಲಿ ಯೋಗ್ಯರು, ಪಾತ್ರರು ಹೆಚ್ಚಾಗಿಲ್ಲ. ಹಾಗಿರುವಾಗ ಆ ಪಂಗಡದವರಿಗೆ ಅನ್ಯಾಯವಾಗಬಾರದು. ಪಬ್ಲಿಕ್ ಸರ್ವಿಸ್ ಕಮಿಷನ್ ವಿಷಯ ಒಬ್ಬರು ಹೇಳಿದರು, ಅದರ ಅನುಭವ ನನಗೆ ಕಡಮೆ. ಆ ಕಮಿಷನ್ ಸದಸ್ಯರು ಫಸ್ಟ್‌ಕ್ಲಾಸ್, ಸೆಕೆಂಡ್ ಕ್ಲಾಸ್ ಮುಂತಾದ ಉಚ್ಚ ಅರ್ಹತೆಯಿರುವವರನ್ನು ಆರಿಸಿ ಅವರಿಗೆ ಹುದ್ದೆಗಳನ್ನು ಕೊಡುತ್ತಿದ್ದಾರೆ. ನಮ್ಮ ಜನರು ಬಡತನದಿಂದ ನರಳುತ್ತಿದ್ದಾರೆ, ಅವರಿಗೆ ಕೂಳಿಲ್ಲ, ಬಟ್ಟೆಯಿಲ್ಲ. ಹೀಗಾಗಿ ಅವರು ಖರ್ಚು ಮಾಡಿ ವಿದ್ಯಾವಂತರಾಗಿ ಹೆಚ್ಚು ಅರ್ಹತೆ ಪಡೆಯಲು ಬಹಳ ಕಷ್ಟವಾಗಿದೆ. ಹೀಗಿರುವಾಗ ಇಂಥ ಹುದ್ದೆಗಳಿಗೆ ಇಷ್ಟೇ ಅರ್ಹತೆಯಿರಬೇಕೆಂದು ನಿಗದಿಮಾಡಿದರೆ ನಮ್ಮವರು ಮುಂದೆಬರಲು ಹೇಗೆತಾನೆ ಸಾಧ್ಯವಾದೀತು?

ಮತ್ತೊಂದು ಮಹತ್ವದ ವಿಚಾರ.. ಉಮೇದುವಾರರನ್ನು ಆರಿಸುವಾಗ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಹಿಂದುಳಿದವರ್ಗದ ಉಮೇದುವಾರನಿಗೆ personality ಇಲ್ಲ ಎಂದು ಎನ್ನುತ್ತಾರೆ. ಅದು ಅವರಿಗೆ ಹೇಗೆ ಬರಬೇಕು? ಹಾಕಿಕೊಳ್ಳಲು ಸರಿಯಾದ ಡ್ರೆಸ್ ಇರುವುದಿಲ್ಲ. ಬಡತನದ ಮೂಲಕ ಹಿಂದುಳಿದ ವರ್ಗದವರು ಕಡಮೆ ಬೆಲೆಯ ಉಡುಪು ಹಾಕಿಕೊಳ್ಳಬೇಕಾಗುತ್ತದೆ. ಉಮೇದುವಾರರನ್ನು ಆರಿಸುವುದು ಮನಸ್ಸಿನಲ್ಲಿ ಇರದೇಇದ್ದ ಮೂಲಕ ಏನಾದರೂ ಒಂದು ಇಂಥ ಕಾರಣ ಹೇಳುತ್ತಾರೆ.

12-30 P.M.

ಅಧ್ಯಕ್ಷರು.—ಮಾನ್ಯ ಸದಸ್ಯರು ಹಾಗೆ ಹೇಳುವುದು ಉಚಿತವೆನಿಸದು. ಪಬ್ಲಿಕ್ ಸರ್ವಿಸ್ ಕಮಿಷನ್‌ಅನ್ನು ಟೀಕಿಸುವಾಗ ಜಾಗರೂಕತೆಯಿಂದ ಇರಬೇಕು. ಏಕೆಂದರೆ, ಇಲ್ಲಿಗೆ ಬಂದು ಟೀಕೆಗೆ ಉತ್ತರಕೊಡುವ ಅವಕಾಶ ಅವರಿಗಿಲ್ಲ. ಇದನ್ನು ಎರಡುಮೂರು ಸಲ ನಾನು ಹೇಳಿದ್ದೇನೆ. ಆದಕಾರಣ ಆ ಪ್ರಕಾರ ಮಾತನಾಡಲಿಕ್ಕೆ ಬರುವುದಿಲ್ಲ. ಮುಂಬಯಿ ಶಾಸನಸಭೆಯಲ್ಲಿ ಇಂತಹ ಸಂದರ್ಭ ಬಂದದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಜಾಗರೂಕತೆಯಿಂದ ಟೀಕೆಮಾಡಬೇಕು. ಟೀಕೆಯು (ಜನರಲ್ ಕಾರೆಕ್ಟರ್) ಸರ್ವೆಸಾಮಾನ್ಯ ರೂಪದ್ದು ಆಗಿರಬೇಕು. ಅಪಮಾನಕಾರಕವಾದದ್ದನ್ನು ನುಡಿಯಬಾರದು. ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಬಗ್ಗೆ ಟೀಕೆ ಮಾಡುವಾಗ ಈ ಮೊದಲೇ ಕೊಟ್ಟಿರುವ ರೂಲಿಂಗ್ಸ್ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಶ್ರೀ ಡಿ. ವೈ. ಸಾಂಬ್ರಾಣಿ.—ಇದ್ದ ಸಂಗತಿ ಹೇಳಿದೆ.

ಅಧ್ಯಕ್ಷರು.—ಅದು ಇದ್ದ ಸಂಗತಿ ಆಗಿದೆಯೋ ಇಲ್ಲವೋ ಎಂಬುದು ಬೇರೆ ವಿಚಾರ. ಈ ಸಭೆಯಲ್ಲಿ ಮಾತನಾಡುವ ವಿಚಾರದಲ್ಲಿರುವ ನಿಯಮಗಳನ್ನನುಸರಿಸಬೇಕಾಗುತ್ತದೆ.

ಶ್ರೀ ಡಿ. ವೈ. ಸಾಂಬ್ರಾಣಿ.—ಹಿಂದುಳಿದ ವರ್ಗದವರು ಬಹಳ ಬಡವರಾಗಿದ್ದಾರೆ. ಅವರ ಆರ್ಥಿಕ ಸ್ಥಿತಿಯು ಸುಧಾರಣೆಯಾಗಬೇಕು. ಒಂದು ಕೋ-ಆಪರೇಟಿವ್ ಸೊಸೈಟಿ ಮಾಡಿರಿ, ಅದನ್ನು ಮಾಡಿರಿ ಇದನ್ನು ಮಾಡಿರಿ ಎಂದು ಉಪದೇಶ ಮಾಡಿದರೆ ಅವರ ಆರ್ಥಿಕ ಸ್ಥಿತಿ ಸುಧಾರಿಸುವದಿಲ್ಲ. ಈ ಹಿಂದುಳಿದವರ್ಗದವರ ಒಂದು ಉದ್ಯೋಗ ನಡೆದಿರುತ್ತದೆ. ಅದಕ್ಕೆ ಆಸ್ಥೆಯಿಂದ ಪ್ರೋತ್ಸಾಹನೆ ಕೊಡಬೇಕೆಂದು ಸರಕಾರಕ್ಕೆ ಬಿನ್ನವಿಸುತ್ತೇನೆ.

ನಮ್ಮಲ್ಲಿ ಶಿಕ್ಷಣ ಪಡೆದವರು ಬಹಳ ಕಡಮೆ. ನಮ್ಮ ಉದ್ಯೋಗಧಂದೆಗಳಲ್ಲಿ ಉಚ್ಚಶಿಕ್ಷಣ ಪಡೆಯುವದಕ್ಕೆ ಹಿಂದುಳಿದವರ್ಗದವರಿಂದ ಬಂದವರನ್ನೇ ಪರದೇಶಕ್ಕೆ ಕಳಿಸಿಕೊಡಬೇಕು. ಅವರಿಗೆ ಯೋಗ್ಯತೆಯಿಲ್ಲ, ಸೈಯನ್ಸ್ ಪರೀಕ್ಷೆ ಪಾಸಾಗಿಲ್ಲ ಎಂದು ಬಿಡದೆ, ಹರಿಜನರಾಗಿದ್ದರೆ ಅವಕಾಶ ಒದಗಿಸಿಕೊಡಬೇಕು. ಹರಿಜನರು ಮೊದಲಿನಿಂದಲೂ ಚರ್ಮದ ಉದ್ಯೋಗದಲ್ಲಿ ತೊಡಗಿದ್ದಾರೆ. ಚರ್ಮದ ಉದ್ಯೋಗದ ಉಚ್ಚ ಶಿಕ್ಷಣಕ್ಕೆ ಕಾಲೇಜು ಬಿ.ಎಸ್.ಸಿ. ಪರೀಕ್ಷೆಯ ಅವಶ್ಯಕತೆ ಏಕೆ? ಚರ್ಮದ ಉದ್ಯೋಗದ ಜ್ಞಾನ ಅನುಭವ ಹರಿಜನರಿಗೇ ಹೆಚ್ಚು ಇರುವುದು. ಆದಕಾರಣ ನಮ್ಮ ಜನರಿಗೆ ಉಚ್ಚ ಶಿಕ್ಷಣ ಕೊಟ್ಟರೆ ದೇಶದ ಏಳಿಗೆಗೂ ಹರಿಜನರ ಉದ್ಧಾರಕ್ಕೂ ಸಹಾಯವಾಗುವುದು ಎಂದು ನಂಬಿದ್ದೇನೆ.

ಮದ್ಯಪಾನ ನಿರೋಧ ಯಶಸ್ವಿಯಾಗಿದೆ ಎಂದು ಹೇಳಲಾಗುತ್ತಿದೆ. ಮನೆಯೊಳಗೆ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವದು ಒಂದು ಗೃಹಕೈಗಾರಿಕೆಯೇ ಆಗಿದೆ. ಇದಕ್ಕೆ ಸರಕಾರಿ ಅಧಿಕಾರಿಗಳಿಂದ ಪ್ರೋತ್ಸಾಹ ದೊರೆಯುತ್ತಿದೆ ಎಂಬುದು ಜನರ ಕಡೆಯಿಂದ ನನಗೆ ತಿಳಿದುಬಂದಿದೆ. ಕಳ್ಳಭಟ್ಟಿ ಸಾರಾಯಿ ತಯಾರಿಕೆಯನ್ನು ತಡೆಗಟ್ಟಲು ಪೋಲೀಸ್ ಖಾತೆಯವರು ಎಚ್ಚರಿಕೆಯನ್ನು ವಹಿಸಬೇಕು. ಪಾನಪ್ರತಿಬಂಧವು ಯಶಸ್ವಿಯಾಗುವಂತೆ ಮಾಡಬೇಕಾದರೆ ಈ ವಿಷಯವನ್ನು ಕೂಲಂಕಷವಾಗಿ ವಿಚಾರಮಾಡಿ ಯೋಗ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಸಹೋದ್ಯೋಗಿಗಳೇ, ಸನ್ಮಾನ್ಯ ಮಿತ್ರರೇ, ಬಹುಶಃ ಇದು ನನ್ನ ಕೊನೆಯ ಭಾಷಣ ಎಂದು ಕಾಣುತ್ತದೆ. ಈ ಸಭೆಯ ನಿವೃತ್ತರಾಗಲಿರುವ ಸದಸ್ಯರಲ್ಲಿ ನಾನೂ ಒಬ್ಬನ್.

(ಇಲಾಖಾ ಗ್ರಂಥಾಲಯ) Accession No. 4737

ಮೊಟ್ಟ ಮೊದಲನೆಯದಾಗಿ ತಮ್ಮ ಅಪ್ಪಣೆ ಬೇಡಿಕೊಂಡು ಒಂದೆರಡು ವಿಷಯ ಹೇಳಬೇಕೆಂದಿರುವೆನು. ವಿಧಾನ ಸೌಧವನ್ನು ನೋಡಿ ಸಂತೋಷ ಪಟ್ಟವರಲ್ಲಿ ನಾನೂ ಒಬ್ಬನು, ಅದು ಇರಲಿ. ತಾವು ಮುಂಬಯಿ ಶಾಸನ ಸಭೆಯಲ್ಲಿ ಡೆಪ್ಯುಟಿ ಸ್ಪೀಕರ್ ಆಗಿದ್ದಿರಿ ಎಂದು ತಮ್ಮ ಹೆಸರನ್ನು ನಾವು ಕೇಳಿದ್ದೆವು. ತಾವು ಇಲ್ಲಿಗೆ ಸ್ಪೀಕರರಾಗಿ ಬಂದಾಗ ನಮಗೆ ಒಂದು ಭಯ ಇತ್ತು. ಆದರೆ ಅದು ನಿವಾರಣೆಯಾಗಿ ಹೋಯಿತು. ತಮ್ಮಂತಹ ಹೆಚ್ಚಿನ ಅನುಭವಶಾಲಿಗಳಾಗಿದ್ದವರು ಸ್ಪೀಕರರಾಗಿ ನಮಗೆ ದೊರೆತದ್ದು ನಮ್ಮ ಸುದೈವ. ಒಳ್ಳೆಯ ಸತ್ಸಂಪ್ರದಾಯಗಳನ್ನು ಈ ಸಭೆಯಲ್ಲಿ ಹಾಕಿಕೊಟ್ಟಿದ್ದೀರಿ. ಮೊದಲಿಗಿಂತ ಎರಡರಷ್ಟಾಗಿರುವ ಈ ಹೊಸ ಶಾಸನ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ನಮಗೆ ಉಪಪ್ರಶ್ನೆಗಳನ್ನು ಕೇಳಲು ಅವಕಾಶ ದೊರೆಯುತ್ತದೆಯೋ ಇಲ್ಲವೋ ಎಂಬ ಭಯ ಉಂಟಾಗಿತ್ತು. ಈ ಮೊದಲು ಉಪಪ್ರಶ್ನೆಗಳನ್ನು ಕೇಳಲು ಹೆಚ್ಚಾಗಿ ಅವಕಾಶ ಇರಲಿಲ್ಲ. ವಿಶಾಲ ಮೈಸೂರು ಆದ ಮೇಲೆ ಹೆಚ್ಚು ಸದಸ್ಯರು ಈ ಸಭೆಯಲ್ಲಿ ಇದ್ದ ಸಂದರ್ಭದಲ್ಲಿಯೂ ಕೂಡ ಪ್ರಶ್ನೋತ್ತರ ಕಾಲದಲ್ಲಿ ಉಪಪ್ರಶ್ನೆಗಳನ್ನು ಕೇಳಲು ನಮಗೆ ಬೇಕಾದಷ್ಟು ಅವಕಾಶ ದೊರೆಯಿತು. ಒಮ್ಮೊಮ್ಮೆ 20–25 ಉಪಪ್ರಶ್ನೆಗಳನ್ನು ಕೂಡ ನಾವು ಕೇಳಿದ್ದೇವೆ. ಇದರಿಂದ ಎಲ್ಲ ಸದಸ್ಯರಿಗೆ ಸಮಾಧಾನ ಉಂಟಾಗಿದೆ. ಈ ಸಭೆಯ ಘನತೆ ಗೌರವಗಳನ್ನು ತಾವು ಹೆಚ್ಚಿಸಿದ್ದೀರಿ. ತಮ್ಮ ಹೆಸರು ಶ್ರೀ ಎಸ್. ಆರ್. ಕಂಠಿ ಎಂದು ಇರುವುದನ್ನು ಶ್ರೀ ರಣಧೀರ ಕಂಠೀರವ ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲವೆಂದು ನನಗೆ ಎನಿಸುತ್ತದೆ. ಪಾದರಸವು ಹೇಗೆ ಯಾರ ಕೈಗೂ ಸಿಕ್ಕುವದಿಲ್ಲವೋ ಹಾಗೆ ತಾವು ಪಾದರಸದಂತೆ ಬಹಳ ಚುರುಕು ಆಗಿರುತ್ತೀರಿ. ತಾವು ಬಹಳ ದಕ್ಷತೆಯಿಂದ ಸಭಾಧ್ಯಕ್ಷರ ಕೆಲಸವನ್ನು ವಹಿಸಿದ್ದೀರಿ ಎಂದು ಹೇಳಲು ನನಗೆ ತುಂಬ ಸಂತೋಷವಾಗುತ್ತದೆ. ಅಸೆಂಬ್ಲಿಯ ಹೊರಗೆ ತಮ್ಮನ್ನು ಮತ್ತೊಮ್ಮೆ ಕಾಣಬಹುದು. ಆದರೆ ಈ ಸಭೆಯ ಒಳಗಡೆಗೆ ಸದಸ್ಯನಾಗಿ ಇನ್ನು ಐದು ವರ್ಷಕಾಲ ತಮಗೆ ಅಭಿವಂದನೆಗಳನ್ನು ಸಲ್ಲಿಸಲು ನನಗೆ ಸಾಧ್ಯ ಇಲ್ಲದೇ ಇರುವುದರಿಂದ ತಮ್ಮ ಕ್ಷಮೆ ಕೋರುತ್ತೇನೆ. ಶ್ರೀ ವೆಂಕಟೇಶದೇವರು ತಮಗೆ ಸರ್ವಸನ್ಮಂಗಳವನ್ನೂ ದಯಪಾಲಿಸಿ ಈ ಸಭಾಧ್ಯಕ್ಷರ ಸ್ಥಾನವು ಖಾಯಂ ಆಗಿ ತಮಗೆ ದೊರೆಯುವಂತೆ ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಅದೇ ರೀತಿಯಾಗಿ ಈಗ ನಾನು ಹೇಳುವುದೇನೆಂದರೆ, ಈ ವಿಶಾಲ ಮೈಸೂರಿನಲ್ಲಿ ಈ ಒಂದು ಸ್ಥಾನಕ್ಕೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಾದ ಈ ಸ್ಪೀಕರ್ ಸ್ಥಾನಕ್ಕೆ ತಾವು ಖಂಡಿತವಾಗಿಯೂ ಯೋಗ್ಯರು. ಈ ಮಾತನ್ನು ನಾನು ಮನಃಪೂರ್ವಕ ಹೇಳುತ್ತಿದ್ದೇನೆ. ಮೊದಮೊದಲು ನನ್ನ ಸ್ನೇಹಿತರಿಗೆಲ್ಲ ಹೊಸದಾಗಿ ಬರುವ ಸ್ಪೀಕರು ಅವರು ಹೇಗೋ ಏನೋ ಗೊತ್ತಿಲ್ಲ ಎಂದೆನ್ನುತ್ತಿದ್ದೆ. ಆದರೆ ಈಗ ಅವರ ಕಾರ್ಯದಕ್ಷತೆಯನ್ನು ನೋಡಿದ ಮೇಲೆ ನನಗೆ ತುಂಬ ಸಂತೋಷವಾಯಿತು. ಅದೇ ರೀತಿಯಾಗಿ ನಮ್ಮ ಲೆಜಿಸ್ಲೇಟಿವ್ ಅಸೆಂಬ್ಲಿಯ ಸೆಕ್ರೆಟರಿಗಳಾಗಿರುವ ಶ್ರೀಮಾನ್ ವೆಂಕಟರಮಣ ಅಯ್ಯರ್ ಅವರು ಅವರ ಸಹೋದ್ಯೋಗಿಗಳು, ಜನತೆಗೆ ಸುದ್ದಿಯನ್ನು ಪ್ರಚಾರ ಮಾಡುತ್ತಿರುವ ಪತ್ರಿಕೋದ್ಯೋಗಿಗಳು ಮತ್ತು ಸರಕಾರದ ಕೆಳದರ್ಜೆಯ ನೌಕರರಿಂದ ಸ್ಟೇಟ್ ಆಫೀಸರ್ಸ್ ವರೆಗೆ ಎಲ್ಲರೂ ಈ ಹನ್ನೊಂದು ವರ್ಷದ ಅವಧಿಯಲ್ಲಿ ನನಗೆ ಕೊಟ್ಟಂತಹ ಸಹಕಾರ ಸಹಾನುಭೂತಿಗಳಿಗಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ನಮ್ಮ ಮಾನ್ಯ ನಾಯಕರಾದ ಶ್ರೀ ಮರಿಯಪ್ಪ ಅವರು ಈಗ ಆರು ವರ್ಷಗಳಿಂದ ನಮಗೆ ಪರಿಚಿತರಾದವರು. ಅವರ ವಿಷಯವಾಗಿ ಯೋಚನೆ ಮಾಡಬೇಕಾಗಿಲ್ಲ. ಈಗ 1957-58 ನೆಯ ಸಾಲಿನ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ. ಇದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ತಮ್ಮ ಮುಂದೆ ಆಡಲು ಇಚ್ಛೆಪಡುತ್ತೇನೆ. ನನ್ನ ಹಿಂದೆ ಮಾತನಾಡಿದಂತಹ ವಿರೋಧ ಪಕ್ಷದ ಸದಸ್ಯರು ಮತ್ತು ಇನ್ನಿತರ ಪಕ್ಷದ ಸದಸ್ಯರುಗಳು ಈ ರಾಜ್ಯಕ್ಕೆ ಸಂಬಂಧ ಪಟ್ಟಂತೆ ಮುಂದೆ ಸರ್ಕಾರವನ್ನು ಹೇಗೆ ನಡೆಸಿಕೊಂಡು ಹೋಗಬೇಕೆಂಬ ವಿಷಯದಲ್ಲಿ ಕೆಲವು ವಿಷಯಗಳನ್ನು ತಮ್ಮ ಅವಗಾಹನೆಗೆ ಈಗಾಗಲೇ ತಂದಿದ್ದಾರೆ. ಆದರೆ ಇನ್ನೂ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಮುಂಚೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

ಹಿಂದೆ ಇದ್ದಂತಹ ಕಾಂಗ್ರೆಸ್ ಸರಕಾರದಲ್ಲಿ ಸಭಾನಾಯಕರಾಗಿದ್ದ ಶ್ರೀ ಕೆ. ಹನುಮಂತಯ್ಯ ಅವರು ಒಂದು ಕರ್ತವ್ಯಲೋಪ ಮಾಡಿದ್ದಾರೆ. ಯಾವುದು ಎಂದು ತಾವು ಕುತೂಹಲದಿಂದ ಕೇಳಬಹುದು, ಹಿಂದೆ ಈ ವಿಧಾನ ಸೌಧದ ಕಟ್ಟಡವನ್ನು ಕಟ್ಟಲು ಹಿಂದಿನ ಮೈಸೂರು ಸರಕಾರ ಸುಮಾರು ಒಂದೂವರೆ ಕೋಟಿಯಿಂದ ಎರಡು ಕೋಟಿ ರೂಪಾಯಿಗಳ ಖರ್ಚಿನಲ್ಲಿ ಕಟ್ಟಿದ್ದರೂ ಇದರ ಮುಂದೆ ಒಂದು ವಿಗ್ರಹವನ್ನೂ ಇಡುತ್ತೇವೆಂದು ಹೇಳಿದ್ದರು. ಅದೇನು ವಿಧಿಯ ಪ್ರೇರೇಪಣೆಯಿಂದಲೋ ಏನೋ ಅದನ್ನೇಕೆ ಮರೆತು ಬಿಟ್ಟರೋ ಕಾಣೆ. ಏಕೆ ಮರೆತು ಬಿಟ್ಟರೆಂಬುದನ್ನು ತಾವೇ ವಿಚಾರಿಸಬೇಕು. ಎರಡನೆಯದು, ಹಿಂದೆ ತಾವೇ ದಯಪಾಲಿಸಿದ್ದೀರಿ: ಕೆಲವು ಮುಖ್ಯರಾದಂತಹವರ ಚಿತ್ರಗಳನ್ನು ತರಿಸಿ ಈ ಸಭೆಯಲ್ಲಿ ಹಾಕಬೇಕೆಂದು. ನಾವು ಯಾವಾಗಲಾದರೂ ಒಂದು ಸಣ್ಣ ಮನೆಯನ್ನು ಹೊಸದಾಗಿ ಕಟ್ಟಿಸಿದರೂ ಕೂಡ ಅದಕ್ಕೆ ಬರುವ ಮುನ್ನ ಅನ್ನಶಾಂತಿ ಮಾಡಿ ಬರುವ ಪದ್ಧತಿ ರೂಢಿಯಲ್ಲಿದೆ. ಆದರೆ ವಿಧಾನ ಸೌಧದಂತಹ ದೊಡ್ಡ ಭವನವನ್ನು ಕಟ್ಟಿ ಇದಕ್ಕೆ ಏತಕ್ಕೆ ಅನ್ನಶಾಂತಿ ಮಾಡಿ ಗೃಹ ಪ್ರವೇಶ ಏಕೆ ಮಾಡಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಆದುದರಿಂದ ಇದಕ್ಕೆ ಅನ್ನ ಶಾಂತಿಯನ್ನೂ ಮಾಡದೆ ಪ್ರಾರಂಭಿಸಿದ್ದೀರಿ. ಆ ಕಾರ್ಯವನ್ನು ನೆರವೇರಿಸುತ್ತೀರೆಂದು ನನಗೆ ಸಂಪೂರ್ಣ ಭರವಸೆಯಿದೆ. ಹಾಗೆ ಮಾಡಬೇಕಾದದ್ದು ಧರ್ಮ. ನಮ್ಮ ಹಿಂದೂ ಧರ್ಮದಂತೆ ನಾವು ನಡೆದುಕೊಳ್ಳಬೇಕು. ಎರಡನೆಯದು ರಿಟೈರ್ ಆಗುವುದಕ್ಕೆ ಮುನ್ನ ಇದ್ದ ವಿಶಾಲ ಮೈಸೂರಿನ ಸದಸ್ಯರ ಫೋಟೋಗಳನ್ನೂ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಇವರುಗಳ ಫೋಟೋಗಳನ್ನೂ ತೆಗೆಸಬೇಕು. ಇವೆಲ್ಲ ಚರಿತ್ರೆಗೆ ಸಂಬಂಧ ಪಟ್ಟ ವಿಷಯ. ಆದ್ದರಿಂದ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಟ್ಟಿದ್ದೇನೆ. ಆದರೆ ಈ ಕೆಲಸವನ್ನು ಏಕೆ ಮಾಡಲಿಲ್ಲವೋ ತಿಳಿಯದು. ಹಿಂದಿನ ನಾಯಕರು ಮಾಡಿದ ಕೆಲಸಗಳನ್ನು ಈಗಿನ ನಾಯಕರು ತಪ್ಪಿಸುವುದಕ್ಕಾಗುವುದಿಲ್ಲ. ಇದನ್ನೆಲ್ಲ ಕೂಡ ತಾವು ಪರಿಶೀಲನೆ ಮಾಡುವಿರೆಂದು ನಾನು ನಂಬಿಕೊಂಡಿದ್ದೇನೆ. ಮೂರನೆಯದು, ರಾಜ್ಯದಲ್ಲಿರುವ ಬಡಜನರ ಕಡೆ ಕಾಂಗ್ರೆಸ್ ಸರ್ಕಾರದ ಗಮನವೇ ಹರಿದಿಲ್ಲ. ಹಿಂದೆ ಈ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮುನ್ನ ಪರಿಸ್ಥಿತಿ ಚೆನ್ನಾಗಿತ್ತು. ಈಗ ಹೀಗಾಗಿರುವುದನ್ನು ನೋಡಿದರೆ ನಿಜವಾಗಿಯೂ ವ್ಯಥೆಯಾಗುತ್ತದೆ. ಅಸೆಂಬ್ಲಿಯ ಮೆಂಬರುಗಳಾಗುವುದು,

(ಶ್ರೀ ವಿ. ಆರ್. ನಾಯ್ಡು.)

ಮಿನಿಸ್ಟರುಗಳಾಗುವುದು ಹೆಚ್ಚೇನಲ್ಲ. ಪ್ರಜಾ ಪ್ರಭುತ್ವದ ಆಡಳಿತಕ್ಕೆ ಮುನ್ನ ಕಾಂಗ್ರೆಸ್ಸಿನವರು ಬಡ ಜನರಿಗೆ ಏನು ವಚನ ಕೊಟ್ಟಿದ್ದರೋ ಅದರಂತೆ ನಡೆಯಬೇಕು. ಇದರಿಂದ ಜನಗಳಿಗೆ ಸರ್ಕಾರದ ಮೇಲೆ ಪ್ರೀತಿ ವಿಶ್ವಾಸಗಳು ಹುಟ್ಟಿ ಬಡಜನರಿಗೆ ಸಹಾಯ ಮಾಡಿದಂತಾಗುತ್ತದೆ. ಎಂದರೆ ವೈಯುಕ್ತಿಕ ವಾಗಿ ಈ ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲರಿಗೂ ಅನ್ವಯಿಸುವಂತೆ ಆ ರೀತಿಯಲ್ಲಿ ಹೇಳುತ್ತಿಲ್ಲ. ಎಲ್ಲರೂ ಸಮಾನತೆಯಿಂದ ಇರಬೇಕಾದುದು ಅಗತ್ಯ. ನನ್ನ ಹಿರಿಯ ನಾಯಕರು ಇದನ್ನು ಒಪ್ಪುತ್ತಾರೆ. ಮತ್ತು ಮೂಲಭೂತವಾಗಿ ಎಲ್ಲರೂ ಇದನ್ನು ಒಪ್ಪಲೇ ಬೇಕು. ಇತ್ತೀಚೆಗೆ ವೈಯಕ್ತಿಕವಾಗಿಯಾಗಲಿ ಎಲ್ಲಿ ನೋಡಿದರೂ ಆಕ್ಷೇಪಣೆಗಳೇ ಹೇಚ್ಚಾಗುತ್ತಿವೆ ಮತ್ತು ತಮ್ಮಲ್ಲಿ ಯಾರಾದರೂ ಬಂದರೆ ಅವರನ್ನು ಕೂಡ ಮಾತನಾಡಿಸುವುದಿಲ್ಲವಲ್ಲ ಎಂದು ಕೇಳಿದ್ದೇನೆ. ಹಿಂದಿದ್ದಂತಹ ಪರಿಸ್ಥಿತಿ ಈಗಿಲ್ಲ. ಈಗ ಕಾಲ ಬದಲಾವಣೆಯಾಗಿ ಈ ರೀತಿಯಾಗುತ್ತಿರುವುದನ್ನು ನೋಡಿದರೆ ವ್ಯಥೆಯಾಗುತ್ತಿದೆ. ಇದರಿಂದ ಸ್ವಲ್ಪ ಬೇಜಾರು ಪಟ್ಟುಕೊಳ್ಳಬಹುದು. ನಮ್ಮ ಜನರಿಗೆ ಅವಶ್ಯವಾದ ಸೌಕರ್ಯಗಳನ್ನು ಒದಗಿಸುವುದು ಸರಕಾರದ ಕರ್ತವ್ಯ. ಸದ್ಯದ ಅವ್ಯವಸ್ಥೆಯಿಂದ ದೇವರೇ ಕಾಪಾಡಬೇಕು, ನಮ್ಮ ಮನಸ್ಸಿಗೇನೆ ಹೀಗೆ ವ್ಯಥೆಯಾಗುತ್ತಿರುವಾಗ ಸರ್ವೇ ಸಾಮಾನ್ಯ ಜನತೆಯ ಮನಸ್ಸಿನ ಸ್ಥಿತಿ ಹೇಗಿರುತ್ತದೆ ಎಂದು ಸ್ವಲ್ಪ ಯೋಚನೆ ಮಾಡಬೇಕು. ಈ ಪ್ರಜಾ ಪ್ರಭುತ್ವದ ಈ ಯುಗದಲ್ಲಿ ಪ್ರಜೆಗಳಿಗೆ ಅನುಕೂಲವಾದ ಕಾರ್ಯಗಳಾಗಬೇಕೇ ವಿನಾ ಅವರ ಇಷ್ಟಕ್ಕೆ ವಿರೋಧವಾಗಿ ವರ್ತಿಸುವುದು ನ್ಯಾಯವಾಗಲಾರದು. ಇದನ್ನು ನಾವೆಲ್ಲ ಚೆನ್ನಾಗಿ ಆಲೋಚಿಸುವುದು ಅತ್ಯಗತ್ಯ. ಮುಖ್ಯವಾಗಿ, ನಮ್ಮ ರಾಜ್ಯದಲ್ಲಿರುವ ಬಡ ನೌಕರರು ಅಂದರೆ N.G.O. ಗಳ ಸಂಬಳಸಾರಿಗೆಯ ವಿಷಯವನ್ನು ತೃಪ್ತಿಕರವಾಗಿ ಬಗೆಹರಿಸಿಲ್ಲ ಎಂದು ನಾನು ಹೇಳಬೇಕಾಗಿದೆ. ಈ ವಿಷಯದಲ್ಲಿ ಅವರುಗಳೆಲ್ಲ ಮೆಮೊರಾಂಡಂ ಮತ್ತು ಮನವಿಗಳನ್ನೂ ಕೂಡ ಸಲ್ಲಿಸಿದ್ದಾರೆ. ನಮ್ಮ ಮಾನ್ಯ ಫೈನಾನ್ಸಿನ ಸಚಿವರಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ಸಾಧ್ಯವಿದ್ದಷ್ಟಾದರೂ ಇವರ ಕಷ್ಟವನ್ನು ನಿವಾರಣೆ ಮಾಡಿದರೆ ಜನತೆಗೆ ಸಮಾಧಾನವಾಗುತ್ತದೆ. ಪೋಲೀಸು ನೌಕರರು, ಉಪಾಧ್ಯಾಯರು ಮತ್ತು ಇತರ ಬಡ ನೌಕರರ ಕುಂದು ಕೊರತೆಗಳನ್ನು ವಿಚಾರಿಸುವುದಕ್ಕಾಗಿ ಇನ್ನೂ ಹೆಚ್ಚಿನ ಗಮನ ಕೊಡಬೇಕು. ಮತ್ತು ಹಾಗೆಯೇ ನಿವೃತ್ತ ಸೈನಿಕರ ಸಮಸ್ಯೆಗಳನ್ನೂ ಪರಿಹರಿಸಬೇಕು. ಈ ವಿಷಯಗಳನ್ನೆಲ್ಲ ನಮ್ಮ ಹಿರಿಯ ನಾಯಕರಾದ ಶ್ರೀ ನಿಜಲಿಂಗಪ್ಪ ಅವರು ಶ್ರೀಮಾನ್ ಮರಿಯಪ್ಪ ಮುಂತಾದ ಮಹನೀಯರೆಲ್ಲರೂ ಸೇರಿ ನಮ್ಮ ಸಹೋದ್ಯೋಗಿಗಳ ಬೇಡಿಕೆಯನ್ನು ಪೂರೈಸಿಕೊಡುವುದು ಆವಶ್ಯಕ ಎಂದು ಹೇಳದೆ ವಿಧಿಯಿಲ್ಲ. ಇದನ್ನೆಲ್ಲ ಹೇಳುವುದಕ್ಕೆ ಕಾರಣವೇನೆಂದರೆ, ಹಿಂದಿದ್ದ ಬ್ರಿಟಿಷ್ ಸರಕಾರದವರ ಆಜ್ಞೆಯ ಮೇರೆಗೆ ಅವರು ಕೆಲಸಗಳನ್ನು ಮಾಡುತ್ತಿದ್ದರು. ಅವರು ಕಾಂಗ್ರೆಸ್‌ನವರನ್ನು ವಿರೋಧಿಸುತ್ತಿದ್ದರು, ಕಾಂಗ್ರೆಸ್ ಸರಕಾರ ಬರಕೂಡದೆಂದು ಕೆಲಸ ಮಾಡುತ್ತಿದ್ದರು. ಈಚೆಗೆ ಸಂಬಳಗಳು ಪುನರ್ವಿಮರ್ಶೆಯಾದಾಗ ಇವರ ಸಂಬಳಗಳನ್ನು ಸ್ವಲ್ಪ ಮಟ್ಟಿಗೆ ಏರಿಸಿದ್ದೀರಿ. ಆದರೆ ಸೈಕಲ್ ಅಲೋಯನ್ಸ್, ಮನೆ ಬಾಡಿಗೆ ಅಲೋಯನ್ಸ್ ಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದೀರಿ. ಇದನ್ನು ದಯವಿಟ್ಟು ಮಂಜೂರ್ಮಾಡಬೇಕು. ಇವರಂತೆಯೇ ವೈದ್ಯರು, ಉಪಾಧ್ಯಾಯರುಗಳ ಬಗ್ಗೆಯೂ ಸಹಾನುಭೂತಿ ಇರಬೇಕು. ಉಪಾಧ್ಯಾಯರುಗಳಿಗೆ ಗುರುವಿನ ಸ್ಥಾನಮಾನವಿದೆ. ಅವರು ಮುಂದಿನ ಜನಾಂಗವನ್ನು ತಿದ್ದಿ ಅವರಿಗೆ ವಿದ್ಯಾದಾನ ಮಾಡುವವರು. ವೈದ್ಯರು ನಮ್ಮ ಆರೋಗ್ಯವನ್ನು ಕಾಪಾಡುವವರು. ಆತ್ಮಸಂರಕ್ಷಣೆಗೆ ಪೋಲೀಸಿನವರು ಬೇಕು. ಆದುದರಿಂದ ಈ ಮೂರು ವರ್ಗಗಳವರಿಗೆ ಈಗ ಕೊಡುತ್ತಿರುವ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೂರನೆಯ ವಿಚಾರ Ex-servicemen ಎಂದರೆ ನಿವೃತ್ತ ಸೈನಿಕರ ವಿಚಾರ. Ex-servicemen Colony ಎಂದು ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ ಎದುರುಗಡೆ ಇದೆ. ಅಲ್ಲಿ ಸುಮಾರು 500-600 ಸಂಸಾರಗಳು ಇವೆ. ನಮ್ಮ ದೇಶಕ್ಕೋಸ್ಕರ ಪ್ರಾಣ ಕೊಟ್ಟವರು, ಕಷ್ಟಪಟ್ಟವರು, ಕಾಶ್ಮೀರದಲ್ಲಿ ಯುದ್ಧಮಾಡಿದ ಸೈನಿಕರು, ಇವರೆಲ್ಲ ಈ ಕಾಲೋನಿಯಲ್ಲಿ ವಾಸ ಮಾಡುತ್ತಿದ್ದಾರೆ. ಟ್ರಸ್ಟ್ ಬೋರ್ಡಿನವರು ಆ ಪ್ರದೇಶದಲ್ಲಿ ಲೇಔಟ್ ಮಾಡಬೇಕೆಂಬುದ್ದೇಶದಿಂದ ಈಗ ಹಾಲಿ ಅಲ್ಲಿ ಇರುವವರನ್ನು ಸ್ಥಳ ಖಾಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಅಲ್ಲಿ ವಾಸಿಸುವ ನಿವೃತ್ತ ಸೈನಿಕರಿಗೆ ಬಹಳ ಕಷ್ಟವಾಗಿದೆ. ಇದರ ಕಷ್ಟ ಪರಿಸ್ಥಿತಿಯನ್ನ ತಮ್ಮ ಗಮನಕ್ಕೆ ತರಬಯಸುತ್ತೇನೆ. ದೇಶದಲ್ಲಿ ನಿವೃತ್ತ ಸೈನಿಕರುಗಳ ಸಂಖ್ಯೆ ಜಾಸ್ತಿಯಾಗಿದೆ. ಇವರುಗಳು ಹೆಂಡತಿ ಮಕ್ಕಳನ್ನೂ ಬಿಟ್ಟು ಬಹಳ ದೂರ ದೇಶಗಳಿಗೆ ಹೋಗಿ ಕಷ್ಟಪಟ್ಟು ದುಡಿದಿದ್ದಾರೆ. ಇವರಲ್ಲಿ ಕೆಲವರು ಕೈ ಕಾಲುಗಳನ್ನು ಕಳೆದುಕೊಂಡು ಬಂದವರೂ ಇದ್ದಾರೆ. ಕೆಲವರಂತೂ ಅಲ್ಲಿಯೇ ಮೃತರಾದರು. ಇವರುಗಳ ಅನುಕೂಲಕ್ಕಾಗಿ ಒಂದು ಸಣ್ಣ lay-out ಮಾಡಿ ಅವರಿಗೆ ಕೊಡಿ ಎಂದರೆ ಸರ್ಕಾರಕ್ಕೆ ಸಾಧ್ಯವಾಗದೆ ಇದೆ. ಟ್ರಸ್ಟ್ ಬೋರ್ಡಿನವರು ಈ ಭಾಗದಲ್ಲಿ ದೊಡ್ಡ ದೊಡ್ಡ ಬಂಗಲೆಗಳು ಆಗಬೇಕು, ಅದನ್ನು ಚದರ ಗಜಕ್ಕೆ 10-20 ರೂಪಾಯಿಗಳಂತೆ ಮಾರಬೇಕೆಂದಿದ್ದಾರೆ. ಈ ಬೆಲೆಗೆ ಬೇಕಾದರೆ ಸೈಟುಗಳನ್ನು ತೆಗೆದುಕೊಳ್ಳಿ ಎಂದರೆ ಯಾವ ನ್ಯಾಯವೆಂದು ಕೇಳುತ್ತೇನೆ? Common man ಎಂದರೆ ಸಾಮಾನ್ಯ ಪ್ರಜೆಯ ಕಷ್ಟ ಸುಖವೇನಿದೆ ಅದನ್ನು ಪರಿಶೀಲನೆ ಮಾಡಿ ಅವನ ಕಷ್ಟವನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡದೆ ಇದ್ದರೆ ಅದರಿಂದ ಮುಂದೆ ಬಹಳ ತೊಂದರೆಯಾಗುತ್ತದೆ. ದಯವಿಟ್ಟು ಈ ವಿಷಯವನ್ನು ಸರ್ಕಾರ ಬಹಳ ಜಾಗ್ರತೆಯಾಗಿ ಪರಿಶೀಲನೆ ಮಾಡಬೇಕು. ದೇಶಕ್ಕೋಸ್ಕರ ಕಷ್ಟಪಟ್ಟಿರುವ ನಿವೃತ್ತ ಸೈನಿಕರಿಗೆ ವಾಸ ಮಾಡಲು ಕೊಟ್ಟಿರುವ ಸ್ಥಳವನ್ನು ಕಿತ್ತುಕೊಂಡು ಅವರಿಗೆ ಸ್ಥಳವಿಲ್ಲದಂತೆ ಮಾಡಿದರೆ ಅವರ ಸ್ಥಿತಿ ಏನಾಗಬೇಕು ಎಂದು ತಾವು ಯೋಚನೆ ಮಾಡಬೇಕು. ಇವರುಗಳು ನಿರಾಶರಾಗಿ ಯಾವುದನ್ನಾದರೂ ಎದುರಿಸುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳುವ ಗೋಜಿಗೆ ಅವಕಾಶ ಕೊಡಬಾರದೆಂದು ಈ ಮಾನ್ಯ ಸಭೆಯಲ್ಲೂ ಹಣಕಾಸಿನ ಸಚಿವರಲ್ಲೂ ವಿಜ್ಞಾಪನೆ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರ ದಕ್ಷತೆಯ ವಿಷಯವಾಗಿ ಹೇಳುವುದಾದರೆ ಕಷ್ಟ ಬಂದಾಗ ನಾನು ಇವರ ಬಳಿ ಹೋದರೆ ತಕ್ಷಣವೇ ಫೋನ್ ಮಾಡಿ ಆ ಕಷ್ಟಗಳನ್ನು ನಿವಾರಣೆ ಮಾಡಿಕೊಟ್ಟಿದ್ದಾರೆ. ಅವರು ಇದೇ ರೀತಿ ಮುಂದೆಯೂ ಮಾಡುತ್ತಿರುತ್ತಾರೆಂದು ನಂಬಿಕೊಂಡಿದ್ದೇನೆ. ನಾನು ಈಗ ಹೇಳಿರುವ ವಿಷಯದಲ್ಲಿ ಔದಾಸೀನ್ಯ ಮಾಡಬಾರದು. ನಾಳೆ ನಾಯಕರ ಚುನಾವಣೆ

ಯಾಗುವುದಕ್ಕೆ ಜನ ಕಾದಿದ್ದಾರೆ. ಆದುದರಿಂದ ಈಗಿರುವ ಮಾನ್ಯ ಮಂತ್ರಿಗಳು ತಾವು ಅಧಿಕಾರದಲ್ಲಿರುವಾಗಲೇ ನಿವೃತ್ತ ಸೈನಿಕರ ಬಗ್ಗೆ ಕನಿಕರ ತೆಗೆದುಕೊಂಡು ಅವರುಗಳಿಗೆ ಈಗಿರುವ ಜಾಗದಲ್ಲಿಯೇ ಪಣ್ಣಲೇ ಔಟ್ ಮಾಡಿಸಿ ಅಲ್ಲಿ ವಾಸ ಮಾಡಿಕೊಂಡಿರುವ ಜನಗಳಿಗೆಯೇ ಅವುಗಳನ್ನು ಹಂಚಬೇಕೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಲೇಬರ್ ಕಾಲೋನಿಗಳಿವೆ. ಬೆಂಗಳೂರು ನಗರದಲ್ಲಿ ಕಾರ್ಮಿಕರು ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ. ಈ ಕಾರ್ಮಿಕ ವರ್ಗದವರ ಕಷ್ಟಗಳನ್ನೂ ಕೂಡ ಆದಷ್ಟು ಬೇಗ ಪರಿಹಾರ ಮಾಡಬೇಕು. ಕಾರ್ಮಿಕರ ವೇತನಗಳನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆಂದು ಮಾನ್ಯ ಸಚಿವರು ಕೂಡ ಅಪ್ಪಣೆ ಕೊಡಿಸಿದರು. ಮೈಸೂರು ಸರ್ಕಾರಕ್ಕೆ ಸಂಬಂಧಪಟ್ಟಂತೆ ಕಾರ್ಖಾನೆಗಳಿವೆ. ಅವುಗಳಲ್ಲಿ ಕೆಲಸ ಮಾಡುತ್ತಿರತಕ್ಕ ನೌಕರರಿಗೆ ಸರ್ಕಾರದ ಇತರ ಅಧಿಕಾರಿಗಳಿಗೆ ಸಂಬಳವನ್ನು ಹೆಚ್ಚು ಮಾಡಿರುವಂತೆ ಇವರಿಗೂ ಸಹ ಹೆಚ್ಚು ಮಾಡಬೇಕು. ಕಾರ್ಮಿಕರ ಮನಸ್ಸು ನೋಯಬಾರದು. ಆದುದರಿಂದ ಸಮಿತಿಯವರ ಶಿಫಾರಸ್ಸುಗಳನ್ನು ಜಾಗ್ರತೆಯಾಗಿ ಪಡೆದು ಕಾರ್ಮಿಕ ವರ್ಗದವರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಇದರಲ್ಲಿ ವಿದ್ಯಾವಂತರಾದ ನಿರುದ್ಯೋಗಸ್ಥರು ಒಂದು ಕಡೆ, ಅವಿದ್ಯಾವಂತ ನಿರುದ್ಯೋಗಸ್ಥರು ಒಂದು ಕಡೆ ಹೆಚ್ಚಿಗೆ ಕಷ್ಟಪಡುತ್ತಿದ್ದಾರೆ. ಅದರಲ್ಲಿಯೂ ಹೆಣ್ಣುಮಕ್ಕಳು ಹೆಚ್ಚಿನ ವಿದ್ಯಾವಂತರಾಗಿದ್ದಾರೆ. ಅವರಿಗೂ ಕೆಲಸ ಕಾರ್ಯಗಳು ಸಿಕ್ಕಬೇಕಾದದ್ದು ಮುಖ್ಯ. ಈಗ ನಮ್ಮ ರಾಜ್ಯದಲ್ಲಿ ಅವರಿಗೆ ಕೆಲವು ಕೆಲಸಗಳನ್ನು ಕೊಡುತ್ತಿದ್ದಾರೆ. ಪೋಲೀಸ್ ಇಲಾಖೆಯಲ್ಲಿ ಅದರಲ್ಲಿಯೂ ಸಿ. ಐ. ಡಿ. ಹುದ್ದೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಹೆಣ್ಣುಮಕ್ಕಳಿಗೆ ಕೊಡಬಹುದು. ಇದಕ್ಕೆ ಅವಕಾಶವಿದೆ. ಇತ್ತೀಚೆಗೆ ಕಳ್ಳತನಗಳು ಹೆಚ್ಚಾಗುತ್ತಿವೆ. ಇದನ್ನು ಕಂಡುಹಿಡಿಯಲು ಹೆಂಗಸರನ್ನು ಪೋಲೀಸ್ ಇಲಾಖೆಗೆ ತೆಗೆದುಕೊಳ್ಳಬಹುದು. ಇವರ ಸೇವೆಯನ್ನು ನಮ್ಮ ಸರ್ಕಾರ ಪಡೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

Night Universities ಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಪಾಶ್ಚಾತ್ಯ ದೇಶಗಳಲ್ಲಿ ವಿಶ್ವವಿದ್ಯಾನಿಲಯಗಳು ಹಗಲು ಹತ್ತರಿಂದ ಐದು ಘಂಟೆಯವರೆಗೂ ಕೆಲಸ ಮಾಡುತ್ತವೆ. ಪುನಃ ರಾತ್ರಿ ಏಳರಿಂದ ಹತ್ತು ಘಂಟೆಯವರೆಗೂ ಕೆಲಸ ಮಾಡುತ್ತವೆ ಎಂದು ನಾನು ನನ್ನ ಅನೇಕ ಮಾನ್ಯ ಮಿತ್ರರಿಂದ ಕೇಳಿ ತಿಳಿದುಕೊಂಡಿದ್ದೇನೆ. S.S.L.C. ಪಾಸ್ ಆದಂಥ ಬಡ ವಿದ್ಯಾರ್ಥಿಗಳು ತಿಂಗಳಿಗೆ 60-70 ರೂಪಾಯಿ ಸಂಬಳ ತೆಗೆದುಕೊಂಡು ಜೀವನ ಮಾಡುತ್ತಿದ್ದಾರೆ. ಹಣಕಾಸಿನ ಮುಗ್ಗಟ್ಟಿನಿಂದ ಮುಂದೆ ಓದುವುದಕ್ಕೆ ಸಾಧ್ಯವಿಲ್ಲದೆ ಕೆಲಸಕ್ಕೆ ಸೇರಿಕೊಂಡಿರುತ್ತಾರೆ, ಇಂಥವರು ಬೆಳಗ್ಗೆ ಕೆಲಸ ಮಾಡಿಕೊಂಡು Night University ತರಗತಿಗಳಿಗೆ ಹೋದರೆ ಅವರು ರಾತ್ರಿ ವೇಳೆ ವ್ಯಾಸಂಗ ಮಾಡಿ ಡಿಗ್ರಿಗಳನ್ನು ಪಡೆಯುವುದಕ್ಕೆ ಒಂದು ಅವಕಾಶವಾಗುತ್ತದೆ. ಈ ರೀತಿ ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತದೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. Night Universities ಮಾಡುವುದರಿಂದ ಸ್ವಲ್ಪಮಟ್ಟಿಗೆ ನಿರುದ್ಯೋಗ ಸಮಸ್ಯೆಯೂ ನಿವಾರಣೆಯಾಗುತ್ತದೆಂದು ನನ್ನ ಭಾವನೆ. ಆದುದರಿಂದ Night Universities ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಕೊನೆಯದಾಗಿ, ರಾಜ್ಯದ ಜನತೆ ಈ ವಿಧಾನ ಸೌಧದ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟಿದೆ. ಈ ಕಟ್ಟಡ ಪ್ರಪಂಚದಲ್ಲೆಲ್ಲ ದೊಡ್ಡದು ಎಂದು ಒಪ್ಪಿಕೊಳ್ಳುವವರಲ್ಲಿ ನಾನೂ ಒಬ್ಬ, ಎಂದರೆ, ಇಪ್ಪತ್ತು ಮುವ್ವತ್ತು ಸಲ ಪ್ರಪಂಚದಲ್ಲಿರುವ ಕಟ್ಟಡಗಳನ್ನೆಲ್ಲ ನಾನು ಇತ್ತೀಚೆಗೆ ಸಿನಿಮಾದಲ್ಲಿ ನೋಡಿದ್ದೇನೆ. ಅನೇಕರು ನೋಡಿದವರು ಕೂಡ ಹೇಳಿದ್ದಾರೆ. ಈ ಕಟ್ಟಡದ ಬಗ್ಗೆ ಕೆಲವರು ಪರವಾಗಿಯೂ ಮತ್ತೆ ಕೆಲವರು ವಿರೋಧವಾಗಿಯೂ ಮಾತನಾಡಿದ್ದಾರೆ. ಆದರೆ ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಜನ ಏನು ಹೇಳುತ್ತಾರೆಂದು ಕೇಳಿದ್ದೇನೆ. ಇಷ್ಟುಮಟ್ಟಿಗೆ ಇಂಥ ಕಟ್ಟಡವನ್ನು ಕಟ್ಟಿಸಿದ್ದಾರೆಂದು ಹೇಳುತ್ತಾರೆ. ಮಾನ್ಯ ಹಿರಿಯರಾದ ಶ್ರೀಮಾನ್ ಮರಿಯಪ್ಪ ಅವರು ಕೂಡ ಇದೇ ರೀತಿ ಕಷ್ಟಪಟ್ಟಿದ್ದರೆ ಅವರ ಸೇವೆಯನ್ನೂ ನಾನು ಪ್ರಶಂಸಿಸುತ್ತಿದ್ದೆ. ಒಳ್ಳೆಯ ಕೆಲಸ ಮಾಡಿರುವವರನ್ನೂ, ಕಷ್ಟಪಟ್ಟಿರುವವರನ್ನೂ ನಾವು ಹೊಗಳಬೇಕಾದದ್ದು ಅನಿವಾರ್ಯ. ಈ ವಿಷಯದಲ್ಲಿ ರಾಜಕೀಯ ದೃಷ್ಟಿಯಿಂದ ನೋಡಬಾರದು. ಕಮಿಟಿಯವರು ಈ ವಿಷಯದಲ್ಲಿ ಏನು ಹೇಳಿದ್ದಾರೋ ಅದರ ತಂಟೆಗೆ ನಾನು ಹೋಗುವುದಿಲ್ಲ. ಕಮಿಟಿಯ ವರದಿ ಒಂದು ಕಡೆ ಇದೆ. ಅದರಂತೆ ಇದಕ್ಕೆ ಸಂಬಂಧಪಟ್ಟವರ ವಿವರಣೆ ಒಂದು ಕಡೆ ಇದೆ. "ಕಮಿಟಿಯವರು ನನ್ನನ್ನು ಮಾತೇ ಆಡಿಸಲಿಲ್ಲ; ಬಹಳ ವ್ಯಥೆಯಾಗುವ ರೀತಿಯಲ್ಲಿ ವರ್ತಿಸಿದರು" ಎಂದು ಹೇಳಿದರು. ಅದನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ. ಯಾವ ರೀತಿ ವಿಮರ್ಶೆ ಮಾಡಬೇಕೋ ಆ ರೀತಿ ಮಾಡಿ.

ವಿಧಾನ ಸೌಧ ವಿಚಾರಣಾ ಸಮಿತಿಯವರು ಕೊಟ್ಟಿರುವ ವರದಿಯ ಪ್ರಕಾರ ಏನಾಗುತ್ತದೆಯೋ ಎಂದು ಅಧಿಕಾರಿಗಳಿಗೆ ಭಯ ಭೀತಿ ಬಂದಿದೆ. ಸರ್ಕಾರಿ ಅಧಿಕಾರಿಗಳಲ್ಲಿ, ನಾವು ಯಾರ ಮಾತು ಕೇಳಬೇಕು, ಯಾವ ರೀತಿ ನಡೆಯಬೇಕು ಎಂದು ಅನುಮಾನ ಬಂದು ಭಾರಿ ಗೊಂದಲಕ್ಕೆ ಅವಕಾಶವಾಗುವ ಸಂದರ್ಭವಿದೆ. ಒಂದು ಮಂತ್ರಿಮಂಡಲದವರು ಇಂಥ ಕೆಲಸ ಮಾಡು ಎಂದು ಹೇಳಬಹುದು, ಮತ್ತೊಂದು ಮಂತ್ರಿಮಂಡಲ ಬೇರೆ ರೀತಿ ಹೇಳಬಹುದು. ಆದುದರಿಂದ ಅವರಿಗೆ ಒಂದು ಸಂದಿಗ್ಧ ಪರಿಸ್ಥಿತಿ ಬಂದಿದೆ. ನಮ್ಮ ಮೈಸೂರಿನ ಇಂಜಿನಿಯರುಗಳನ್ನು ಪಂಡಿತ ಜವಹರಲಾಲ್ ನೆಹರೂ ಅವರು ಕೂಡ ಪ್ರಶಂಸೆ ಮಾಡಿದ್ದಾರೆ. ಜಲಾಶಯಗಳನ್ನು, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಮತ್ತು ಇಂಡಿಯಾ ದೇಶದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿರುವುದರ ಬಗ್ಗೆ ನಮ್ಮ ಮೈಸೂರು ಇಂಜಿನಿಯರುಗಳ ಬುದ್ಧಿ ಕುಶಲತೆಯನ್ನೂ ಗುಣವನ್ನೂ ಹೊಗಳಿದ್ದಾರೆ. ಇಂಥದರಲ್ಲಿ ಈ ವಿಧಾನ ಸೌಧದ ಕೆಲವರಿಗೆ ಶಿಕ್ಷೆಯಾಗಬೇಕು ಎಂದು ಕಮಿಟಿಯ ರಿಪೋರ್ಟ್‌ನಲ್ಲಿ ಇದೆ. ಇದನ್ನು ನೋಡಿದರೆ ಕಷ್ಟಪಟ್ಟು ಈ ಕಟ್ಟಡದ ಕೆಲಸವನ್ನು ನಿರ್ವಹಿಸಿರುವ ಜನರಿಗೆ ಭಯ ಭೀತಿ ಉಂಟಾಗುತ್ತದೆ. ವಿಧಾನ ಸೌಧವನ್ನು ಕಟ್ಟಿಸಿದಂಥ ಇಂಜಿನಿಯರುಗಳಿಗೆ ನಿಜವಾಗಿ ಸನ್ಮಾನ ಮಾಡಬೇಕಾದದ್ದು ಆವಶ್ಯಕ. ಇವರುಗಳು ರಾತ್ರಿ ಹಗಲು ಕಷ್ಟಪಟ್ಟು ದುಡಿದಿದ್ದಾರೆ. ಆದುದರಿಂದ ಈ ವಿಧಾನ ಸೌಧದ ವ್ಯವಹಾರ ಸರ್ಕಾರದ ಮಟ್ಟದಲ್ಲಿಯೇ ಇರಲಿ. ಜನಸಾಮಾನ್ಯರ ಕೈಗೆ ಬಿಡುವುದು ಬೇಡ ಎಂದು ಹೇಳು

(ಶ್ರೀ ಎ. ಆರ್. ನಾಯ್ಡು.)

1 P. M.

ತ್ತೇನೆ. ಜನಸಾಮಾನ್ಯರು ಅನೇಕರು ಬಂದು ಈ ವಿಷಯದಲ್ಲಿ ಪ್ರವೇಶಮಾಡುವಂಥ ಅವಕಾಶವನ್ನು ತಾವು ಕೊಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ. ಈ ವಿಧಾನ ಸೌಧಕಟ್ಟಡ ಇಂಜಿನಿಯರುಗಳಿಗೆ ಖಂಡಿತ ಸನ್ಮಾನ ಮಾಡಬೇಕು. ಹಿಂದಿನ ಮಂತ್ರಿ ಮಂಡಲದವರಿಗೂ ಈಗಿನ ಮಂತ್ರಿ ಮಂಡಲದವರಿಗೂ ಅಲ್ಲದೆ ಸ್ಪೀಕರ್ ಆದ ತಮಗೂ ಶ್ರೀಮಾನ್ ಜಿ. ಎಸ್. ವೆಂಕಟ ರಮಣ ಅಯ್ಯರ್‌ರವರಿಗೂ, ಹೊಸದಾಗಿ ವಿಶಾಲ ಮೈಸೂರಾದ ಮೇಲೆ ಬಂದಿರತಕ್ಕ ಮಾನ್ಯ ಮಿತ್ರರಿಗೂ ನನ್ನ ವಂದನೆಗಳನ್ನರ್ಪಿಸಿ ಇದೇ ರೀತಿ ನನ್ನ ಮೇಲೆ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಳ್ಳಬೇಕೆಂದು ಕೇಳಿ, ತಮಗೂ ಕೂಡ ಈ ಒಂದೇ ಸ್ಥಾನದಲ್ಲಿದ್ದು ಇನ್ನೂ ಐದು ವರ್ಷಗಳ ಕಾಲ ಮೈಸೂರಿನ ಎರಡು ಕೋಟಿ ಜನತೆಯ ಪ್ರೀತಿ ಸಂಪಾದಿಸಲು ಅವಕಾಶವಾಗಲೆಂದು ದೇವರನ್ನು ಪ್ರಾರ್ಥನೆಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ. 'ಜೈ ಹಿಂದ್.'

ಶ್ರೀ ಎಸ್. ಸಿದ್ದಪ್ಪ (ಮಾಗಡಿ)—ಈ ಸಭೆಯ ಸನ್ಮಾನ್ಯ ಅಧ್ಯಕ್ಷರೆ ಮತ್ತು ಹಣಕಾಸಿನ ಮಂತ್ರಿಗಳೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕ 1957-58 ನೆಯ ವರ್ಷದ 4 ತಿಂಗಳ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಈ ಸಭೆಯ ಮೂಲಕ ಸರ್ಕಾರದವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಈ 5 ವರ್ಷಗಳ ಕಾಲದಲ್ಲಿ ಅನೇಕ ಉಪಯುಕ್ತವಾದ ಕೆರೆಗಳು, ಕಲ್‌ವರ್ಟುಗಳು, ದೊಡ್ಡ ದೊಡ್ಡ ನುಗು, ತುಂಗಾ, ಭದ್ರಾ ವಗೈರೆ ಜಲಾಶಯಗಳು ನಿರ್ಮಾಣವಾಗಿ ಆಹಾರದ ವಿಷಯದಲ್ಲಿ ಇದ್ದಂಥ ಕೊರತೆ ಬಹುಮಟ್ಟಿಗೆ ಸುಧಾರಿಸಿದೆ ಎಂಬುದನ್ನು ಹೇಳುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಪಿ. ಡಬ್ಲ್ಯು. ಇಲಾಖೆಯವರು ಅತಿ ದಕ್ಷತೆಯಿಂದ ರಾಜ್ಯಾದ್ಯಂತವೂ ಸರ್ಕಾರ ಮಾಡತಕ್ಕಂತ ಅಜ್ಞೆಗಳನ್ನು ಕ್ರಮವರಿತು ಕೆಲಸಮಾಡಿ ಒಳ್ಳೆಯ ಹೆಸರನ್ನು ಹೊಂದಿದ್ದಾರೆ ಎನ್ನುವುದನ್ನು ಕೂಡ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಬಹುಕಾಲದಿಂದ ಈ ಪಿ. ಡಬ್ಲ್ಯು. ಇಲಾಖೆಯವರು ಸರ್ಕಾರದವರು ಹೇಳತಕ್ಕ ಎಲ್ಲ ಕೆಲಸಗಳನ್ನು ಬಹಳ ಜಾಗರೂಕತೆಯಿಂದ ಮಾಡಿ ಆಹಾರದ ಕೊರತೆಯನ್ನು ಬಹುಮಟ್ಟಿಗೆ, ಕಡಿಮೆಮಾಡಿದ್ದಾರೆ. ಅದರಲ್ಲಿಯೂ ಪ್ರಜಾರಾಜ್ಯದ ಈ 5 ವರ್ಷಗಳ ನೀತಿಯಾದರೋ ಆಹಾರದ ಅಭಾವವನ್ನು ತಪ್ಪಿಸಿ, ಪ್ರಜೆಗಳಿಗೆ ಅವರ ಅಭಿಪ್ರಾಯಕ್ಕನುಗುಣವಾಗಿ ಅನುಕೂಲಗಳನ್ನು ಏರ್ಪಡಿಸುವುದಕ್ಕೆ ಪ್ರಜಾಪ್ರಭುತ್ವದವರು ಬಹಳವಾಗಿ ಪ್ರಯತ್ನಪಟ್ಟರು. ಅದನ್ನು ಕಾರ್ಯಗತಮಾಡಿ ಈ ಇಲಾಖೆಯವರು ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಎಂಬುದನ್ನು ನಾನು ಬಹಳ ವಿಶ್ವಾಸದಿಂದ ಹೇಳಬೇಕಾಗಿದೆ. ಈ ಪಿ. ಡಬ್ಲ್ಯು. ಇಲಾಖೆಯವರು ನಮ್ಮ ಸಂಸ್ಥಾನದಲ್ಲಷ್ಟೇ ಅಲ್ಲದೇ ನಮ್ಮ ಇತರ ದೊಡ್ಡ ದೊಡ್ಡ ಪ್ರಾಂತಗಳಲ್ಲೂ ಕೂಡ ಕೆಲಸಮಾಡಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾರೆ. ಅಂಥ ಇಂಜಿನಿಯರುಗಳನ್ನು ನಾವು ಈ ರಾಜ್ಯದಲ್ಲಿ ಪಡೆದಿದ್ದೇವೆ. ವಿಶಾಲ ಹೊಂದಿರತಕ್ಕ ಈ ಮೈಸೂರು ದೇಶದಲ್ಲಿ ಇನ್ನು ಮುಂದೆ ಪ್ರಜೆಗಳು ಅಪೇಕ್ಷೆ ಮಾಡತಕ್ಕ ಅನೇಕ ಉಪಯುಕ್ತವಾದ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆ ಅಧಿಕಾರಿಗಳಿಗೆ ಹೆಚ್ಚಿನ ದಕ್ಷತೆಯುಂಟಾಗಲು ಅವಕಾಶವಾಗಲಿ ಎಂದು ಈ ಸಭೆಯ ಮೂಲಕ ಭಗವಂತನನ್ನು ಪ್ರಾರ್ಥಿಸುತ್ತೇನೆ. ಈ ವಿಧಾನ ಸೌಧದ ನಿರ್ಮಾಪಕರ ವಿಚಾರದಲ್ಲಿ ಒಂದು ವರದಿ ಈಗ ಹೊರಬಿದ್ದಿದೆ. ಅದು ಮೊದಲನೆಯ ವರದಿ. ಇನ್ನು ಎರಡನೆಯದು, ಮೂರನೆಯದು ಸದಸ್ಯರ ಹಸ್ತಗತವಾಗುವ ಸಂದರ್ಭ ಇದೆ. ಎರಡು ಕೋಟಿ ಜನಗಳು ಒಂದಾಗಿರತಕ್ಕ ಈ ಸಂದರ್ಭದಲ್ಲಿ, ಕನ್ನಡದಲ್ಲಿಯೇ ಎಲ್ಲಾ ಕಾಗದ ಪತ್ರಗಳು, ಬರವಣಿಗೆ ಮತ್ತು ಕಾರ್ಯಕ್ರಮಗಳು ಆಗಬೇಕೆಂಬ ಒಂದು ನಿರೂಪಣೆ ಇದ್ದಾಗ್ಯೂ ಕೂಡ ಅದನ್ನು ಕನ್ನಡದಲ್ಲಿ ಅಚ್ಚುಹಾಕದೆ ಆಂಗ್ಲ ಭಾಷೆಯಲ್ಲಿ ಅಚ್ಚುಹಾಕಿ ಮೊದಲಿನ ಒಂದು ಪದ್ಧತಿಯನ್ನೇ ಅನುಕರಣೆ ಮಾಡಿದ್ದಾರೆ. ಮುಂದಾದರೂ ಕೂಡ ಅದನ್ನು ತಪ್ಪಿಸಿ, ಈ ವಿಧಾನಸೌಧದ ವರದಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ನಮ್ಮೆಲ್ಲರಿಗೂ ಮತ್ತೆ ಅದರ ಒಂದೊಂದು ಪ್ರತಿಯನ್ನು ಹಂಚಬೇಕಾದದ್ದು ಬಹಳ ಅಗತ್ಯ ಎಂದು ಈ ಸಭೆಯಲ್ಲಿ ತಮಗೆ ಮನವರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಅನೇಕ ಕಡೆ ರಾಷ್ಟ್ರೀಯ ವಿಸ್ತರಣ ಯೋಜನೆಯನ್ನು ಕೈಕೊಂಡಿದ್ದಾರೆ. ಒಂದು ತಾಲ್ಲೂಕಿನಲ್ಲ 6 ಹೋಬಳಿ ಇದ್ದು 3 ಹೋಬಳಿಗೆ ರಾಷ್ಟ್ರೀಯ ವಿಸ್ತರಣ ಯೋಜನೆಯನ್ನು ಕೊಟ್ಟಿದ್ದಾರೆ. ಇನ್ನು ಮೂರು ಹೋಬಳಿಗೆ ಕೊಟ್ಟಿಲ್ಲ. ಆದ್ದರಿಂದ ಎಲ್ಲಿ ಆ ರೀತಿ ಅನಾನುಕೂಲತೆಗಳಾಗಿವೆಯೋ ಅಂಥ ತಾಲ್ಲೂಕುಗಳಿಗೆಲ್ಲ ಪೂರ್ಣವಾಗಿ ಈ ಯೋಜನೆಯ ಸೌಲಭ್ಯವನ್ನು ಒದಗಿಸಿ ಈ ವರ್ಷದಲ್ಲಿ ಎಲ್ಲ ಭಾಗದ ಜನರೂ ಇದರ ಪ್ರಯೋಜನವನ್ನು ಹೊಂದುವಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಅದರಲ್ಲಿಯೂ 2 ಕೋಟಿ ಪ್ರಜೆಗಳು ವಾಸಿಸುತ್ತಿರುವ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ನೇಮಕಮಾಡಬೇಕಾಗಿದ್ದಂಥ ಜಡ್ಜಿಗಳ ಪೈಕಿ 3 ಜನ ಜಡ್ಜಿಗಳು ಮಾತ್ರ ಇದ್ದಾರೆ. ಟೆಂಪರರಿ ಆಗಿ ಒಬ್ಬರನ್ನು ಮಾತ್ರ ನೇಮಕಮಾಡಿದ್ದಾರೆ. ಈ 4 ಜಡ್ಜಿಗಳು 2 ಕೋಟಿ ಜನಗಳ ಕಷ್ಟಸುಖವನ್ನು ಕೇಳಿ ಅವರ ತೀರ್ಮಾನಗಳನ್ನು ಕೊಟ್ಟು ಕೇಸುಗಳನ್ನು ಫೈಸಲು ಮಾಡಬೇಕಾದರೆ ಬಹಳ ಕಷ್ಟವಾದ ಸಂದರ್ಭ ನಮ್ಮ ಹೈಕೋರ್ಟಿಗೆ ಪ್ರಾಪ್ತವಾಗಿರುವಹಾಗೆ ನನಗೆ ಭಾಸವಾಗಿದೆ. ಮುಂದೆ ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಇದಕ್ಕೆ ತಕ್ಕ ವ್ಯವಸ್ಥೆಯನ್ನು ಕೂಡಲೇಮಾಡಿ ಅಲ್ಲಿ ಸಾವಿರಾರುಗಟ್ಟಲೆ ಬಿದ್ದಿರತಕ್ಕ ಫೈಲುಗಳನ್ನು ನೋಡಿ, 400–500 ಮೈಲಿಗಳಿಂದ ಬರತಕ್ಕ ಕಕ್ಷಿಗಾರರು ಯಾರಿದ್ದಾರೋ ಅವರಿಗೆ ಉಂಟಾಗಿರತಕ್ಕ ಕೊರತೆಗಳನ್ನು ನಿವಾರಣೆ ಮಾಡಿಕೊಡಬೇಕೆಂದು ಈ ಸಭೆಯ ಮೂಲಕ ನಿವೇದಿಸಿಕೊಳ್ಳುತ್ತೇನೆ. ಮತ್ತು ಮೈಸೂರು ಸಂಸ್ಥಾನದಲ್ಲಿ ಹಿಂದೆ ಹೈಕೋರ್ಟಿನಲ್ಲಿದ್ದು ನಿವೃತ್ತರಾಗಿರತಕ್ಕ ಶ್ರೀ ಟಿ. ಎನ್. ಮಲ್ಲಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿ ರಚನೆಯಾಗಿ ಆ ಕಮಿಟಿ ವರದಿ ಬಂದಿದೆ. ಎಲ್ಲೆಲ್ಲಿ ಜ್ಯುಡಿಷಿಯಲ್ ಕೋರ್ಟುಗಳ ನಿರ್ಮಾಣವಾಗಬೇಕು ಎಂಬುದನ್ನು ಅವರು ಹೇಳಿದ್ದಾರೆ. ಆ ವರದಿಯ ಪ್ರತಿಗಳು ಈ ಸಭೆಯ ಎಲ್ಲಾ ಸದಸ್ಯರಿಗೂ ಹಂಚಿಕೆಯಾಗಿದೆ. ಆ ವರದಿಯ ಪ್ರಕಾರ ಈತತ್ಕಾಲದವರೆಗೂ ಯಾವುದೂ ಆಗಿಲ್ಲ. ಸಂಸ್ಥಾನದಲ್ಲಿ ಆಗಿಂದಾಗ್ಗೆ ಸಮಿತಿಗಳನ್ನು ರಚನೆ ಮಾಡತಕ್ಕದ್ದು ಆ ಸಮಿತಿಗಳ ವರದಿಯನ್ನು ನಮಗೆ ಹಂಚತಕ್ಕದ್ದು ಅಷ್ಟಾದರೆ ಸಾಕಾಗದು. ಅದರ ಸಹಾಯ ಮಹಾಜನರಿಗೆ ಯಾವರೀತಿ ಒದಗಿಸಬೇಕೆಂಬುದಕ್ಕೆ ಗಮನವುಳ್ಳವರಾಗಿ ನಮ್ಮ ಪ್ರಭುತ್ವದ ಮುಖಂಡರುಗಳು ಜಾಗ್ರತೆಯಾಗಿ ವ್ಯವಸ್ಥೆ ಮಾಡಿಕೊಡಬೇಕಾದದ್ದು ಅತ್ಯಗತ್ಯ. ಇದುವರೆಗೂ ಆ ತರಹದ ವ್ಯವಸ್ಥೆಯಾಗ

ದಿರುವುದರಿಂದ ಜನತೆಗೆ ಆಗಿರತಕ್ಕ ಅನಾನುಕೂಲಗಳನ್ನು ನಾವು ವಿಷಾದದಿಂದ ಈ ಸಭೆಯಲ್ಲಿ ಎತ್ತಿ ತೋರಿಸಬೇಕಾಗಿದೆ.

ಇನ್ನು ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಸುಧಾರಣೆ ಬಹುಮಟ್ಟಿಗೆ ಬದಲಾವಣೆ ಹೊಂದಿದೆ. ರಜಾಕಾಲವನ್ನು ಬಹಳ ಹೆಚ್ಚಿನಮಟ್ಟದಲ್ಲಿ ಮುಂದುವರಿಸಿದ್ದಾರೆ. ವಿದ್ಯಾಭ್ಯಾಸ ಮಾಡತಕ್ಕ ಯುವಕರು ತಮ್ಮ ತಮ್ಮ ಮನೆಗಳಲ್ಲಿ ಆಟಪಾಟಗಳಲ್ಲಿಯೇ ನಾಲ್ಕು ತಿಂಗಳುಕಾಲ ವ್ಯಯಮಾಡಿದರೆ ಜ್ಞಾಪಕವಿದ್ದದ್ದೆಲ್ಲಾ ಮರೆತುಹೋಗಿ ಮತ್ತೆ ಮೊದಲಿನಿಂದ ಎಲ್ಲವನ್ನೂ ಪ್ರಾರಂಭ ಮಾಡಬೇಕಾದುದು ಅನಿವಾರ್ಯವೇ ಸರಿ. ವಿದ್ಯಾಸಂಸ್ಥೆಗಳ ಬೋಧನಮಟ್ಟ ಕೆಳಗಿಳಿದಿದೆ. ಇದರಿಂದ ಯುವಕ ಯುವತಿಯರ ವಿದ್ಯಾಮಟ್ಟಕ್ಕೆ ಬಹು ಧಕ್ಕೆ ತಗಲಿದೆ ಎಂದು ಅನೇಕಕಡೆ ಜನವಾಡುತ್ತಿರುವ ಸಂಗತಿ ಎಲ್ಲರಿಗೂ ಗೊತ್ತಿದೆ. ಇದಕ್ಕೆ ಬಹಳ ದಕ್ಷರಾದ ವಿದ್ಯಾಬೋಧಕರನ್ನು ಮತ್ತು ಅಧ್ಯಾಪಕರನ್ನು ನೇಮಿಸಿ, ಕಾಲೇಜುಗಳಲ್ಲಿಯೂ ಇತರ ವಿದ್ಯಾಸಂಸ್ಥೆಗಳಲ್ಲಿಯೂ ಉತ್ತಮವಾದಂಥ ವಿದ್ಯೆಯನ್ನು ಬೋಧನೆಮಾಡಬೇಕು. ವಿದ್ಯೆಯಿಂದಲೇ ಪ್ರಜೆಗಳು ಪ್ರಗತಿಹೊಂದಬೇಕು ಎನ್ನತಕ್ಕ ಕಾಲದಲ್ಲಿ, ಇಡಿಯ ದೇಶದ ಜನತೆಗೆ ಯಾವ ಯಾವ ಅನುಕೂಲಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ನಾವು ಚುನಾವಣೆಯ ಕಾಲದಲ್ಲಿ ಭರವಸೆಯನ್ನು ಕೊಡುತ್ತೇವೋ, ಅದನ್ನೇ ಸಾಧ್ಯವಾದಮಟ್ಟಿಗೆ ಕಾರ್ಯರೂಪಕ್ಕೆ ತರಲು ಸಾಕಷ್ಟು ಗಮನಕೊಡಬೇಕು. ಅದರಲ್ಲಿ ಅರ್ಧ ಭಾಗವನ್ನಾದರೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾದದ್ದು ನಮ್ಮ ಮೇಲೆ ಬಿದ್ದಿರತಕ್ಕ ಜವಾಬ್ದಾರಿ ಎನ್ನುವುದನ್ನು ಈ ಸಭೆಯ ಮೂಲಕ ಸರಕಾರದ ಗಮನಕ್ಕೆ ನಾನು ತರಲಿಚ್ಛಿಸುತ್ತೇನೆ.

ಈಗಾಗಲೇ ಅನೇಕ ಅನುಕೂಲಗಳನ್ನು 5 ವರ್ಷಗಳಿಂದ ಮಾಡಿರುವುದರಿಂದ ಒಂದಲ್ಲೊಂದು ರೀತಿಯಲ್ಲಿ ಪ್ರಜೆಗಳಿಗೆ ಲಾಭವಾಗಿದೆ. ಒಂದನ್ನು ಗಮನಕ್ಕೆ ತರುತ್ತೇನೆ. ಈ ಸಭೆಯಲ್ಲಿರುವ ಮಾನ್ಯ ಹಣಕಾಸಿನ ಸಚಿವರು ಹಿಂದೆ ಗೃಹಮಂತ್ರಿಗಳಾಗಿದ್ದಾಗ ಮಲ್ಟಿಪರ್ಪಸ್ ಸೊಸೈಟಿಗಳನ್ನು ಸಾವಿರಗಟ್ಟಲೆ ಏಕಕಾಲದಲ್ಲಿ ಸ್ಥಾಪನೆಮಾಡಿದರು. ಆಗ ಆಹಾರದ ಅಭಾವ, ರೈತರಿಗೆ ಬೇಕಾದ ಮುಟ್ಟುಗಳ ಅಭಾವವಿದ್ದುದರಿಂದ ಆ ಸೊಸೈಟಿಗಳ ಸ್ಥಾಪನೆಯಾಯಿತು. ಆದರೆ ಅವು ಹಾಗೆಯೇ ಮಾಯವಾದವು. ಲಕ್ಷಗಟ್ಟಲೆ ತೆಗೆದುಕೊಂಡ ಹಣ ವಾಪಸ್ಸು ಬಾರದೆ ಅವ್ಯವಸ್ಥೆಯಾಯಿತು. ಭದ್ರತೆಯ ದೃಷ್ಟಿಯಿಂದ ಲೋಪದೋಷಗಳಿಗೆ ಅವಕಾಶವಾಗದಂತೆ ನೋಡಿಕೊಂಡು ಪ್ರಜೆಗಳ ಮನಸ್ಸಿಗೆ ನೋವಾಗದಿರುವ ಹಾಗೆ ವ್ಯವಸ್ಥೆ ಮಾಡಬೇಕಾದದ್ದು ಅತ್ಯಗತ್ಯ. ಮಲ್ಟಿಪರ್ಪಸ್ ಸೊಸೈಟಿಗಳಲ್ಲಿ ರೈತರು ಹಣವನ್ನು ವಾಪಸುಕೊಟ್ಟಿಲ್ಲ. ಸಹಕಾರ ಸಂಘಗಳವರು, ಹಣ ವಸೂಲುಮಾಡುವವರು ಅನೇಕ ಖಾಸಗಿ ಜನರಮೇಲೆ ಕ್ರಮ ತೆಗೆದುಕೊಂಡು ಬಂದೋಬಸ್ತುಮಾಡಿಲ್ಲ. ಪ್ರಜಾಪ್ರಭುತ್ವದಲ್ಲ ಜನರ ಹತ್ತಿರ ಸಾಲ ತರುವ ಪದ್ಧತಿ ದಿನೇ ದಿನೇ ಹೋಗಬೇಕು. ಈಗ ಜವಾಬ್ದಾರಿ ಹೊತ್ತಿರುವವರು ಪ್ರಜಾಪ್ರಭುತ್ವದಲ್ಲಿ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿ ಇರುವ ಲೋಪ ದೋಷಗಳನ್ನು ನಿವಾರಣೆಮಾಡಬೇಕಾದದ್ದು ಅವರ ಕರ್ತವ್ಯವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಬೇಲೂರು, ಹಳೇಬೀಡು ಮುಂತಾದ ಬಹಳ ಚೆನ್ನಾಗಿರುವ ಪ್ರೇಕ್ಷಣೀಯ ಸ್ಥಳಗಳಿವೆ. ಮಾನ್ಯ ಸದಸ್ಯರನೇಕರು ಅದನ್ನು ನೋಡಿದ್ದಾರೆ. ಅದರಹಾಗೆಯೇ ವಿಧಾನಸೌಧವೂ ಒಂದು ನೋಡಲು ಅರ್ಹವಾದ ಕಟ್ಟಡ, ಈ ದಿವಸ ಮೈಸೂರೇ ದೇಶದ ಎರಡು ಕೋಟಿ ಪ್ರಜೆಗಳಿಗೆ ಸಂತೋಷವನ್ನುಂಟುಮಾಡುವ ಕಟ್ಟಡ. ಇದು ನಾವು ಸದಸ್ಯರಾಗಿರುವಾಗಲೇ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯ ಅವರಿಂದ ಕಟ್ಟಿಸಲ್ಪಟ್ಟುದು ನಮಗೆಲ್ಲರಿಗೂ ಹೆಮ್ಮೆಯನ್ನುಂಟುಮಾಡತಕ್ಕುದಾಗಿದೆ. ಈ ವಿಶಾಲ ಮೈಸೂರಿನ 208 ಸದಸ್ಯರೂ ಇಲ್ಲಿ ಕುಳಿತು ದೇಶದ ಆಗು ಹೋಗುಗಳನ್ನು ತುಲನ ಮಾಡುವವರಾಗಿದ್ದೇವೆ, ಹಾಗಿರುವಾಗ ಈ ವಿಧಾನಸೌಧದ ವಿಚಾರದಲ್ಲಿ ಮಾಡಿರುವ ವರದಿಯಲ್ಲಿ ಕೆಲವು ಅಂಶಗಳು ಮನಸ್ಸಿಗೆ ನೋವನ್ನುಂಟುಮಾಡುವ ರೀತಿಯಲ್ಲಿವೆ. ಅದನ್ನು ಪರಿಶೀಲಿಸಿ ಅದರಿಂದ ಯಾರೊಬ್ಬರಿಗೂ ನೋವಾಗದಂತೆ ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ ಒಂದು ನಾಣ್ಣುಡಿಯಿದೆ: 'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂದು. ಅದರಂತೆ ಮದುವೆ ಮಾಡಿದವರಿಗೆ ಮತ್ತು ಮನೆ ಕಟ್ಟಿದವರಿಗೆ ಅದರ ಅನುಭವ ಗೊತ್ತಾಗುತ್ತದೆ, ಉಳಿದವರಿಗೆ ಅಷ್ಟಾಗಿ ಗೊತ್ತಾಗುವುದಿಲ್ಲ.

ಮೈಸೂರು ಸಂಸ್ಥಾನದಲ್ಲಿ ಈಗಾಗಲೆ ನೀರಾವರಿ ಅನುಕೂಲತೆಯನ್ನು ಎಲ್ಲ ಮುನಿಸಿಪಾಲಿಟಿಗಳಲ್ಲಿಯೂ ಒದಗಿಸಿದ್ದಾರೆ. ಆದರೆ ಮಾಗಡಿ ಮುನಿಸಿಪಾಲಿಟಿಯವರು ಒದಗಿಸಿರುವುದಿಲ್ಲ. ಮಾಗಡಿ ತಾಲ್ಲೂಕು ಬೆಂಗಳೂರಿಗೆ 30 ಮೈಲಿ ದೂರದಲ್ಲಿದೆ. ಬೆಂಗಳೂರಿಗೆ 20 ಮೈಲಿ ದೂರದಲ್ಲಿರುವ ತಿಪ್ಪಗೊಂಡನಹಳ್ಳಿಯಿಂದ ನೀರು ಸರಬರಾಯಿ ಮಾಡುತ್ತಿದ್ದಾರೆ; ಇನ್ನೂ ಈ ಪಟ್ಟಣಕ್ಕೆ ನೀರಿನ ಅನುಕೂಲ ಹೆಚ್ಚು ಮಾಡಬೇಕೆಂದಿದ್ದಾರೆ. ಹಾಗಿರುವಾಗ, ಮಾಗಡಿ ಕೆಂಪೇಗೌಡ ಸ್ಥಾಪಿಸಿದ ಬೆಂಗಳೂರಿಗೆ ಬೇಕಾದಷ್ಟು ಅನುಕೂಲ ಮಾಡಿರುವಾಗ ಮಾಗಡಿಯನ್ನು ಉದಾಸೀನ ಮಾಡುವುದು ಸರಿಯಲ್ಲ. ಈಗಾಗಲೇ ತಯಾರಾಗಿರುವ ಅಂದಾಜನ್ನು ಗಮನಿಸಿ ಎಲ್ಲರಿಗೂ ಅನುಕೂಲವಾಗುವ ಹಾಗೆ ನನ್ನ ಕ್ಷೇತ್ರವಾದ ಮಾಗಡಿಗೂ ಸಹಾಯ ಮಾಡಬೇಕು. ಮಾಗಡಿ ಕ್ಷೇತ್ರದಿಂದ ನಾನು ಚುನಾಯಿತನಾಗಿ ಪ್ರಜಾಪ್ರತಿನಿಧಿಯಾಗಿ ಇಲ್ಲಿಗೆ ಬಂದು 5 ವರ್ಷಗಳಾದರೂ ಅಲ್ಲಿಗೆ ಬೇಕಾದ ನೀರಿನ ಸೌಕರ್ಯ ಮಾಡಿಸಿ ಕೊಡದಿದ್ದರೆ ಜನರಿಗೆ ಬಹಳ ಅಸಮಾಧಾನವಾಗುವುದರಿಂದ ಈ ಸಂದರ್ಭದಲ್ಲಿ ಅಮಲ್ದಾರರಿಗೆ ಈ ಕೆಲಸ ಮಾಡುವಂತೆ ಅಧಿಕಾರ ವಹಿಸಬೇಕೆಂದೂ ಬೇಕಾದ ಸೌಕರ್ಯ ಕಲ್ಪಿಸಿ ಕೊಡಬೇಕೆಂದೂ ಪ್ರಾರ್ಥಿಸುತ್ತೇನೆ. ಇನ್ನೂ ಆಗಬೇಕಾಗಿರುವ ಅನೇಕ ಕೆರೆಕೆಲಸಗಳನ್ನು ಸಹ ಮಾಡಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೋಲೂರು, ಕುದೂರು, ತಿಪ್ಪಸಂದ್ರ ಈ ಮೂರು ಹೋಬಳಿಗಳಿಗೂ ಏಪ್ರಿಲ್ ಒಂದನೆಯ ತಾರೀಖಿನೊಳಗಾಗಿ ಅನುಕೂಲಪಡಿಸಬೇಕು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗದ ಕೆಲಸಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಿ ಕೆಲಸ ಕೈಗೊಂಡು ಮಾಗಡಿ ತಾಲ್ಲೂಕಿಗೆ ಉಪಕಾರ ಮಾಡಬೇಕೆಂದು ಸರ್ಕಾರಕ್ಕೆ ಜ್ಞಾಪಕ ಕೊಡುತ್ತೇನೆ.

ಹಿಂದೆ ಸರ್ಕಾರದವರು ವಾಗ್ದಾನಮಾಡಿ ಕೆಲವು ಆಜ್ಞೆಗಳನ್ನು ಮಾಡಿದ್ದರು. ಪ್ರಜೆಗಳು ಕೊಡಬೇಕಾದ ಕೋಟಾ ಕೊಟ್ಟರೆ ಜನರಲ್ ಹಾಸ್ಪಲುಗಳನ್ನು ಸ್ಥಾಪಿಸುವುದಾಗಿ ತಿಳಿಸಿದ್ದರು. ಅದರಂತೆ ಎರಡು ಸಾವಿರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಇಪ್ಪತ್ತು ಸಾವಿರ ರೂಪಾಯಿಗಳನ್ನು ವಸೂಲು ಮಾಡಿದರೆ ಸರ್ಕಾರದ ಕೋಟಾ ಕೊಡುವುದಾಗಿ

(ಶ್ರೀ ವಿ. ಆರ್. ನಾಯ್ಡು.)

ಹೇಳಿದ್ದರು. ಸರ್ಕಾರ ಕೊಡಬೇಕಾದ ಹಣ ಕೊಟ್ಟರೆ ನಾವು ಕೊಡಬೇಕಾದ 20 ಸಾವಿರ ರೂಪಾಯಿಗಳನ್ನು ಪ್ರಜೆಗಳಿಂದ ವಸೂಲುಮಾಡಲು ಸಿದ್ಧವಾಗಿದ್ದೇವೆ. ಈ ಅನುಕೂಲವನ್ನು ಇತರ ತಾಲ್ಲೂಕುಗಳಿಗೆ ಮಾಡಿರುವಹಾಗೆ ನಮ್ಮ ತಾಲ್ಲೂಕಿಗೂ ಒದಗಿಸಿ ಹಿಂದುಳಿದ ಪಂಗಡದವರನ್ನು ಉದ್ಧಾರ ಮಾಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಜಮೀನುದಾರಿ ಪದ್ಧತಿ, ಜೋಡಿ ಮತ್ತು ಇನಾಂ ಗ್ರಾಮಗಳು ರದ್ದಾಗುವುದಕ್ಕೆ ಸಂಬಂಧಪಟ್ಟ ಕಾನೂನು ಕಾರ್ಯರೂಪಕ್ಕೆ ಬಂದು ಅದರ ಫಲ ಆಯಾ ಗ್ರಾಮದ ರೈತರು ಅನುಭವಿಸಬೇಕೆಂದು ಹೇಳುವಾಗ ಯೋಜನೆ ಮಾಡಬೇಕೆಂದು ಹೇಳಲಾಯಿತು. ಆ ಕೆಲಸ ಇನ್ನೂ ಪೂರ್ಣವಾಗಿಲ್ಲ, ಅದನ್ನು ಜಾಗ್ರತೆ ಪೂರೈಸಿ ಅನುಕೂಲ ಮಾಡಬೇಕು. ಈ ಸಂದರ್ಭದಲ್ಲಿ ವಿನಂತಿ ಮಾಡಿರುವ ಸಲಹೆಗಳನ್ನು ಗಮನಿಸಿ ಸೂಕ್ತ ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

ಪ್ರಜೆಗಳಿಗೆ ಇನ್ನು ಮುಂದೆಯೂ ಕೂಡ ಉಪಯುಕ್ತವಾಗುವಂಥ ಆಜ್ಞೆಗಳನ್ನು ಮಾಡಿ ಪ್ರಜಾಭಿಪ್ರಾಯದಂತೆ ವರ್ತಿಸಿ ಪ್ರಜಾಪ್ರಭುತ್ವವನ್ನು ಬೆಳೆಸಲಿ. ಮುಂದೆ ದಯಮಾಡಿಸುವ ನಮ್ಮ ಸಹೋದ್ಯೋಗಿಗಳಾದ 208 ಮಾನ್ಯ ಸದಸ್ಯರೂ ಈ ಪ್ರಜಾಪ್ರಭುತ್ವಕ್ಕೆ ಆಶೀರ್ವಾದ ಮಾಡಲಿ. ಪ್ರಜಾಪ್ರಭುತ್ವ ಬಹಳ ದಕ್ಷತೆಯಿಂದ ಜನಪ್ರಿಯವಾಗಿ ಎರಡು ಕೋಟಿ ಪ್ರಜೆಗಳಿಗನುಗುಣವಾಗಿ ನಡೆಯಲಿ, ಎಲ್ಲ ದೇಶಗಳಿಗಿಂತಲೂ ಆದರ್ಶಪ್ರಾಯವಾದ ಪ್ರಜಾಪ್ರಭುತ್ವವೆನಿಸಿಕೊಳ್ಳಲಿ ಎಂದು ಆಶಿಸಿ, ಇಲ್ಲಿರುವ ಎಲ್ಲ ಮಾನ್ಯ ಸಭಾ ಸದಸ್ಯರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ, ಸರ್ಕಾರವನ್ನೂ ಸಹ ಗೌರವಯುತವಾಗಿ ಅಭಿನಂದಿಸುತ್ತೇನೆ. ಅಧ್ಯಕ್ಷರು ಬಹಳ ಸಾವಧಾನದಿಂದ ನನಗೆ ಅವಕಾಶ ಕಲ್ಪಿಸಿದ್ದಕ್ಕಾಗಿ ಅವರಿಗೂ ವಂದನೆಗಳನ್ನರ್ಪಿಸುತ್ತೇನೆ. ಹೇಳಬೇಕಾದಂಥ ಅನೇಕ ವಿಷಯಗಳಿದ್ದುವು. ಆದರೆ ನಾಯಕರಿಗೆ ಕಾಗದದಮೂಲಕ ಅದನ್ನು ತಿಳಿಸಿದರೆ, ಕೊರತೆಯಿರುವುದನ್ನು ಪರಿಹಾರ ಮಾಡಬೇಕೆಂದು ಸೂಚಿಸಿದರೆ ಅದಕ್ಕೆ ಉತ್ತರ ಸಿಕ್ಕುತ್ತದೆಂದು ಭಾವಿಸಿದ್ದೇನೆ. ಇಂದಿನ ಮಂತ್ರಿಗಳೂ ಹಿಂದಿನ ಮಂತ್ರಿಗಳೂ ಪ್ರಜೆಗಳಿಗೆ ಬೇಕಾದ ಅನುಕೂಲನನ್ನು ಸಾಧ್ಯವಾದಷ್ಟು ಮಾಡಿದ್ದಾರೆ, ಮುಂದೆಯೂ ಮಾಡುತ್ತಾರೆಂದು ನಂಬಿದ್ದೇನೆ. ಇನ್ನೂರಎಂಟು ಸದಸ್ಯರ ಪೈಕಿ 150 ಮಂದಿ ಕಾಂಗ್ರೆಸ್ಸಿನವರು ಈ ಬಾರಿ ಚುನಾಯಿತರಾಗಿದ್ದಾರೆ. ಇನ್ನು ಮುಂದಾದರೂ ಚುನಾವಣೆಯಲ್ಲಿ ಪೂರ್ತಿಯಾಗಿ 208 ಸ್ಥಾನಗಳೂ ಕಾಂಗ್ರೆಸ್ಸಿಗೇ ಲಭಿಸಿ ಸುಭದ್ರ ಸರ್ಕಾರ ಸ್ಥಾಪಿಸಲು ಮೈಸೂರು ಸಂಸ್ಥಾನದಲ್ಲಿ ಅವಕಾಶವಿರಲಿ, ಎಲ್ಲರೂ ದಕ್ಷತೆಯಿಂದ ರಾಜ್ಯವಾಳಲು ನೆರವಾಗಲಿ ಎಂದು ಹಾರೈಸಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

Sri S. SRINIVASA IYENGAR (T.-Narasipur).—I rise to place my views before this House on the White Paper. Strictly speaking, our observations should confine to the Vote on Account. But, having listened to the speeches of the Hon'ble Members, I feel that I can also refer to the Budget Estimate of 1957-58 incidentally. The Vote on Account is described as follows. This is only in the nature of an advance subject to regularisation after the Budget for 1957-58 is approved of by the new Legislature; it is purely an advance. I have very little objection to exercise my vote to give an advance to the Government to meet their expenditure as contained in the demands.

Sir, there are two things that are apparent in the White Paper. One is, the Congress Government which is put into office once again for a period of five years promises that the State's resources would be tapped in the coming year to the extent of 5·07 crores. So I do not agree with the Hon'ble Minister that there would not be taxation in the coming year. The White Paper itself has given a definite indication that in the coming year Government would undertake steps to tap State resources to the extent of 5·07 crores. So, in the coming year the people will have to bear further taxation. Secondly, to finance the capital works, the Congress Government will raise a public loan of five crores of rupees in the coming year apart from the loan of Rs. 17 crores to be obtained from the Government of India.

Sir, even though I may not be here to raise a debate on the budget estimates of 1957-58, I take this opportunity of analysing the budget estimates of 1957-58. The revenue receipts as estimated by Government are of the order of 49 crores. This comprises of five items. One is, the taxes that will be shared with the Centre, that comes to nearly 5·29 crores. The Government of India grants come to 1·9 crores. The Government also draws about 16 lakhs from famine relief fund. The remaining items are the sources from the principal heads of revenue and other sources. The revenues from the principal heads of revenue are of the order of 18·08 crores and those from other sources are 23·58 crores. All these put together total 49 crores.

So, the most important item is sources from the principal heads of revenue, that is, about 18·07 crores. Has the Government any way of improving the sources to meet its

deficit of 12 crores? It must be met. The Government must earn as much as they want to spend. Now they will have 12 crores of deficit. The expenditure is in excess of the revenueto the extent of 12 crores. How will they meet it? They must either approach the Government of India for increased percentage of share in taxes to which I have already referred while I was speaking about the budget just about two months back. The items of taxation in which the States have a share are the Income-tax, the Excise Duty and the Estate Duty. If at all the Government can balance their revenue budget, it must be by having increased percentage in these taxations. That can be pressed before the Finance Commission. They have made a reference in the White Paper that the Government have taken necessary steps to place their views before the Santhanam Commission when it meets next month, to impress the dire need of the State to balance its revenue budget. Apart from this, the only two other sources that the Government have are: one; principal heads of revenue and the other non-tax revenue. So, even under the principal heads of revenue, in respect of stamps, we had recently revised the tax structure. We are paying charges in respect of registration as much as any other part A State is paying. Remaining items are the land revenue and sales-tax. I have urged all along that in respect of land revenue, there is possibility of revising the rate in places where it is low. There are certain places where the land revenue is absolutely low—lower than the rates prevailing in other parts. To that extent the Government can revise the rates of land revenue. Then there is very little possibility of enhancing its revenue in respect of Excise. In a State with 19 districts, the excise revenue is of the order of 2·6 crores, with five or six districts wet. The Government must have either the prohibition policy scrapped or, as suggested by the Prohibition Committee of the Centre, enforce it throughout the nation. Then only can you work the prohibition policy successfully. When you know definitely that the prohibition cannot be worked successfully and when you know that you can get a revenue of 2·6 crores with only five or six districts wet, it is high time that the Government sought the assistance of the Government of India to work this prohibition policy or got the necessary compensation from them to make up the loss of revenue by way of increased share in shared taxes and grants-in-aid.

In respect of Sales-tax, there is a possibility of enhancing the revenue. I just read in the newspaper the opinion of the Chamber of Commerce. They feel that a model Sales-tax Act has to be introduced throughout India. Sales-tax varies from State to State. A model Sales-tax Act would go a long way to remedy certain defects. If all these measures are taken, we can improve the revenue position greatly.

The Government is thinking that what has been provided in the Budget may not be spent and therefore the deficit may not be so large as anticipated. Even then there will be deficit. Some way must be found to overcome the deficit or you must reduce the expenditure. I do not think you can continue to have a revenue deficit year by year for all time to come. It is most unsound.

When we finance the capital works we do so by borrowed funds. Payment of interest and provision for discharging of the loan is a charge on the revenue and therefore whenever we raise funds for capital works, it must be judiciously spent; it must be spent on productive schemes. Then we borrow huge funds to finance our irrigation projects. They do not yield revenue immediately; it takes some more years to complete the project,; it takes years to develop the atchkat and then it yields revenue. Till such projects become productive, the Government of India should be urged to waive the interest as we cannot afford to pay interest on loans for schemes which have not begun to yield. Therefore it is very necessary to impress upon the Government of India that in respect of interest towards loan on projects, they should waive the interest so that we could

(SRI S. SRINIVASA IYENGAR.)
at least try to balance the revenue budget. Balancing of budget is purely our concern.

In most of the items under the principal heads of revenue, we have been taxed to the maximum and if any evision is made, such revisions will not yield much.

MR. SPEAKER.—I think it will be convenient to resume the debate after recess. We shall now adjourn and meet again at 1-30 P.M.

The House adjourned at Thirty minutes past One of the Clock and re-assembled at two of the Clock.

[MR. SPEAKER in the Chair.]

SRI S. SRINIVASA IYENGAR.—Sir, from a perusal of the budget estimates, we could definitely see that under 'Forest' as big a percentage as 52·7 is spent for maintenance. By the sale of Government property, we are left with only 43·7 per cent. Possibly by improving the position, we can have increased forest revenue. The methods adopted for the disposal of minor produce of the forests need revision. As it stands, the minor produce yields very little revenue because the right of collection is auctioned. What I would urge is that the material should be collected and disposed of through regulated markets. That would improve the position to a very large extent. In many of the forests, I noticed that the right to collect is almost coming as a vested interest. Therefore it does not fetch much revenue to the Government. Taking the overall picture, the net revenue from the forest is very low and it could be improved.

Sir, the revenue under Sales Tax needs a lot of improvement. There is a wide variation between the preliminary assessment and the final collection. The preliminary assessment, when totalled, comes to a bigger figure, very much more than what is realized. After all, sales-tax is taken from the consumer, but it is the middlemen who collect the tax and it is but right that what is collected should go to the revenues of the State. What is needed is vigilant action. I would even go to the extent of suggesting that we can avoid indirect collection by entrusting the work to the Income Tax Department. After all, there is not much difference between the Central and State Governments. Mysore is a federal unit and the strength of the Union depends on the strength of the federal units. Therefore it would be interesting to examine if we could improve sales-tax revenue by entrusting it to the Income Tax Department and thus reduce the expenditure for its collection.

As I stated earlier, with the existing sources of revenue under the principal heads of Revenue, it would not be possible for any State to balance its budget. These sources cannot be enlarged. There must be some more sources. There must be some decentralisation. The Government of India must see to what extent they can strengthen the revenues of the State. It is no use thrusting development projects on our heads and asking us to find out sources. We have very limited sources. In Mysore, I can go to the extent of saying that we can develop our ports. Hereafter Mysore would be a sea-faring State. We can develop major ports. We have a very long coast-line. That would bring us a lot of revenue. An important port in Mysore State would be a source of encouragement to traders. Our sales-tax will double, perhaps. Trade and commerce will be built up, as they have been built up in Bombay. Therefore, I believe that the Centre should be urged to encourage us to develop our ports. I can say that in all these five years, in Mysore State, not a single railway line has been added. When the railways were the subject of the State, many lines were laid and much progress was registered. Mysore is a hinterland. We could produce a lot of wealth, coffee seeds, minerals, etc. But the development of these things is poor. We have to depend on somebody else. Therefore, it is very necessary that we should have major ports all along the western coast. That would give a lot of encouragement to improve

our industries and to develop commerce.

Sir, I would like to pass on now to the revenues under other sources. I have dealt with so far with the revenue under the principal heads of revenue. So far as the principal heads of revenue is concerned, we invest very little money. The other source is the most important one. To what extent the revenue can be doubled is important. As I stated earlier, the revenue from other sources amounts to 22·58 crores. If at all the State can gap its budget deficit, it is by registering increased receipts from other sources. The other sources include the non-taxable revenue. For example, by working commercial undertakings like hydro-electric projects. Today, the hydro-electric schemes are not contributing anything to the general pool. As the position stands, the State has made a capital investment of Rs. 60 lakhs for hydro-electric schemes. These schemes should contribute something to the general revenues. Instead of contributing something, they demand something from the general pool. It may be, because the provision for depreciation may be more. Depreciations are necessary because fresh machineries have to be purchased. It cannot be avoided. At the same time, the hydro-electric schemes must work in a profitable manner. People may say that they are not working properly because our rates are low. I do not think so. In some respects it may be somewhat low, *i.e.*, electricity charges in respect of agricultural purposes, etc. But that forms a small percentage of the total revenue from hydro-electricity schemes. There must be definite improvement in the working expenses of hydro-electric projects.

I come next to the industrial concerns. Sir, the Kolar Gold Field has been nationalised. We are very happy about it. Supposing we had not fought as one man, it would have taken some 60 to 100 years for us to own the Kolar Gold Mines. About 8 to 10 years back when Gold Duty was levied the general pool used to get as big a sum as 1½ crores of rupees per annum by the levy of Gold Duty. By the abolition of the Gold Duty we lost that amount. Now we own it. We would like to know to what extent the Government have contributed to the general pool as net profits from the revenue of the concern. We would like to know whether the production cost has been reduced so as to give some more money for balancing the revenue budget. It must be worked in a proper manner.

I would like to suggest one or two things more. One is the development of the mineral resources of the State. Many Hon'ble Members have stated that we have huge mineral resources. What is it that is being done? Manganese is mined and exported. What the Government gets is a fraction of the profit, perhaps 5 per cent of the sale. Chromite is mined and marketed; iron ore is mined and marketed; like this so many other minerals are mined and marketed. The revenue that the Government realises is limited. Therefore, would it not be better and proper to nationalise this industry? Would it not be possible to undertake the export of manganese, chromite and other ores, by the State? That is a question that has to be examined. I believe the Government will take up this issue and see that from this source they get good revenue. It is possible to get good revenue because I have seen people engaged in this becoming rich very quickly. In the new State there are unlimited resources of minerals. In addition to the above we have the deposit of sulphate ores near Chitaldrug. As I have said, we must think of these resources seriously.

Next source that holds us some promise of some revenue is the road transport. With so much of investment in the year 1955-56 I notice only a net profit of Rs. 5 lakhs. That is a poor revenue, especially when we are having a monopoly. Greater vigilance is necessary to guard against pilferage and reduce the cost of working.

Sir, I have spoken about the revenue resources of the State. Beyond these resources the State has no other means to improve their revenue. The other

(SRI S. SRINIVASA IYENGAR.)

way of reducing the deficit is to cut down expenditure. Is it practicable? With the revision of pay scales, etc., is it practicable to cut down the expenditure, is the next issue. There are certain departments wherein expenditure can be regularised. I would put it this way: rationalisation of departments is a necessity. In Part A States, take the Police. The system is so well planned that they have one Inspector for one or two taluks. He is well paid. This system is working very well. In the former State of Mysore we have one Inspector for every Taluk. Similarly there are other departments where rationalisation would be very essential. They can re-organise the services in such a manner as to reduce the number.

Sir, from a perusal of the budget figures we see that in 1957-58 the Government will have to pay as big a sum as 2.26 crores on debts services. This amount will increase considerably when liability in respect of the Thungabhadra is also taken into account. Will the State be able to pay this interest? I do not think so. Plenty of money is borrowed and that money is invested in industrial concerns. It is advanced as loans but recovery of interest is very slow. Nearly 1½ crores of rupees have been invested in joint-stock companies. What is the recovery? It is paid out of borrowed funds. Have the Government taken necessary care to see whether they are working satisfactorily, whether the Government is getting dividends, etc. Unless we scrutinise these things and unless we improve the debt services under revenue, it is a hard job and an unjust demand on the public. In respect of the Thungabhadra I think we have the liability of 20 lakhs as interest charges on 20 crores of rupees. Supposing that amount is thrust on us, it is very hard to bear. The project will not yield for some time to come and it takes its own time. Therefore we have to impress on the Government of India the necessity of waiving the interest. They may say, 'Supposing we have to waive the charges for you, don't we have to pay to the man from whom we have borrowed.' Well, the Government of India have plenty of sources. They can afford to have deficit budget. They can always afford to resort to deficit financing. But as a federal unit it is suicidal for us to adopt deficit financing. We should balance our budgets.

Sir, in the year 1957-58, a sum of Rs. 78,80,000 will be spent on the Administration of Justice. In spite of this huge expenditure, has the Government appointed the full quota of Judges in the High Court? There are nearly 5,000 cases pending in the High Court and cases are pending from the year 1950-51. We are spending such huge amounts for the administration of justice and yet the dispensation of justice has not been quick. When you spend such a huge amount, it is but right that we should expect that the administration works properly.

Sir, in the Education Budget, wherein we are spending 10 crores for education, as much as a sum of six crores is being spent on primary education. May I draw the attention of the Government to the condition of languishing primary schools? The Education Department is maintaining a list of languishing schools. We are pointing out that schools are not available in villages. And yet we have a list of languishing schools. How does that position arise? Schools have been opened where there are no teachers and where there are boys, there may be no teachers. So, in respect of the over-all control of the Department, in respect of the strict superintendence, I think the Government should devote some attention.

Sir, there are many more things with which I should deal. But whatever I may say, perhaps may not have the necessary force, because I have lost the confidence of my electors, in my constituency. I would therefore limit my observations at this stage and pass on to the Vidhana Soudha Enquiry Committee Report.

Sir, much discussion has taken place on this Report. The most important architect of this building is Sri K. Hanumanthaiya, ex-Chief Minister. While speaking on this Report, he thought that the Report was entirely directed at him. I believe, it is not

so, Sir. I have gone through every page of this Report. And I would like to place my views on that Report here.

The Committee was constituted by him. He had given the terms of reference. He has said that the Committee should look into the aspect whether any economies were possible in further expenditure. He had also laid down that accounts should be scrutinised keeping in view the dingnity of the building and other things. In the terms of reference it is also said that there must be an opinion in respect of the state of accounts. No doubt an estimate of 23 lakhs has been revisde to 186 lakhs. But the building for which an estimate of 186 lakhs is proposed is entirely different from the building for which 23 lakhs estimate was prepared.

Sri K. HANUMANTHAIYA (Ramanagaram).—It was 33 lakhs.

Sri S. SRINIVASA IYENGAR.—For the central portion only it was 23 lakhs and then the Committee said it might cost 33 lakhs.

It is not as if that for the building that was estimated to cost 23 lakhs, now the expenditure is 186 lakhs. It is not so. The design has been changed. The building has been made bigger and therefore it may have cost that amount. He posed the question: 'Have not estimates in the Public Works Department been revised on several occasions?' I say 'yes'. Revision of estimates is not uncommon in the Public Works Department. They are common. Similarly, the revision of the estimate in the case of Vidhana Soudha may also be thought of. But the question is, for what purpose has it been revised? The Committee says that the architecture, designs and other embellishments cost as much as 45 lakhs. 45 lakhs have been spent on architecture and other embellishments in this building and to that extent, who should be responsible? That was the issue. I hold the Congress Government responsible. The Hon'ble Member Sri Hanumanthaiya says, this architecture, design, and embellishments were necessary to maintain the dignity of the House. I believe this expenditure is a little too much. Certain architectural features are essential; certain embellishments were essential. Whether this expediture should amount to 45 lakhs is a matter that should be scrutinised. That should be examined.

He also spoke about the Committee's observations in respect of location. I believe the Committee were perfectly out of the terms of reference when they spoke of location. The Committee themselves have stated that they were appointed when the building was almost complete. I can say this, Sir, whether the Committee debating on this issue has been out of their terms of reference or not, it is certain that the Committee have devoted their attention to all the terms of reference. I would deal with one or two of these things.

Sir, many of the works have been entrusted to contractors, such as flooring, electric fittings and other things. The authorities that were in power have flouted the codal rules. That is the observation of the Committee. I believe, nobody can deny that. Whether the officers did it at the instance of the Chief Minister, is guess work. What the Committee say is, 'We feel that the officers did it at the instance of the then Chief Minister'. I have very little to say about it. But did the officers act with responsibility in the manner in which they were expected by the Departmental Rules, is the issue. So, whatever may have been said about it, now it is a fact. We have a very fine building. But for

2-30 P.M.

this building, this House would have no place to sit. I would, therefore, like to compliment the then Chief Minister for his forethought in undertaking the construction of this building, but, I am not prepared to support him with request to the irregular expenditure incurred for the construction of this building. The Committee have dealt with the irregularities in detail. There are instances where the works were not entrusted to the lowest tenderer. There are also instances in which large variations were registered in respect on the estimates. For instance, the flooring work which would have beef

(SRI S. SRINIVASA IYENGAR.)

done at a cost of Rs. 3 lakhs would now cost the Government Rs. 9 lakhs. The work of flooring that was entrusted to Boriah & Sons, the Committee say, could have been done much cheaper.' Even though the tender was given to Boriah & Sons, the work was sublet by them to two other contractors, one at Madras and another at Coimbatore. In fact, the whole work was done by these people to whom the work was sub-let by the original contractors. Was it not possible for the authorities to check this? I do not expect the Chief Minister to know every detail of the work going on, nor is it possible for him to know that. But I want to say one thing. On every occasion when grants were demanded before this House, I have said that there must be a sanctioned estimate before a work was undertaken. Perhaps, the then Government thought that whatever was said by the Opposition was said only for the sake of opposition, but, Sir, the Report of the Committee has proved that whatever we said then was perfectly correct and that Government should have adhered to it. Nobody would have been discredited if only the rules of procedure were observed in the construction of this building. There are many instances in which these rules were not at all observed and these can be verified from the Report of the Committee. I did not read the Report solely with the object of discrediting the then Chief Minister. In fact, I compliment him for construction of this building. For, as he himself said, if this building had not been constructed and if a temporary capital had to be put up in Bangalore, then that would have cost the Government very much, as it cost the Andhra Government nearly Rs. 2 crores to put up a temporary capital. So, what he has said in this respect is correct and we have now the necessary building at our disposal. But the money which was spent for the construction of this building was not properly and well spent. That is also the charge of the Committee and this cannot be left at that. Every chapter of this Report should be examined by an expert committee and the responsibility must be fixed for any irregularity.

In Congress Governments, the behaviour of Congressmen generally is such as to show that they are the Government and that whatever is said by them should be obeyed by the authorities. For instance, when a Congressman goes to a taluk office, he thinks he is the Government and that whatever is said by him should be done by the authorities. Unfortunately, our officers also suffer from a feeling of inferiority complex. Whenever a Congressman approaches an officer, the officer seems to think that if he obliges that particular man, then he would be satisfying the Government. Such a tendency must not be there in our officers.

SRI H. K. VEERANNA GOWDH (Minister for Public Works).—Sir, this is not generally the case. I know that in some of the Districts the Congressmen do not count for anything.

SRI S. SRINIVASA IYENGAR.—There may be some instances like that. But on more than one occasion I have noticed this timidity on the part of Government officials. The question is whether it is inborn or it is superficial only. However, I would urge upon Congress members to exercise the utmost restraint and try to work within the rules. That would certainly benefit the State.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, 1957-58ನೆಯ ಸಾಲಿನ ಆಯ ವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಹಣಕಾಸಿನ ಬಡ್ಜೆಟ್ ವಿಷಯದಲ್ಲಿ ಮಾತನಾಡುತ್ತಾ ಶ್ರೀ ಮಹಮದ್ ಇಮಾಂ ಸಾಹೇಬರು 'financial condition of the State will be deplorable' ಎಂದು ಹೇಳಿದ್ದಾರೆ. ಯಾವ ಶೋಚನೀಯ ಪರಿಸ್ಥಿತಿಯನ್ನು ನೋಡಿ ಹೀಗೆ ಹೇಳಿದರೋ ಗೊತ್ತಾಗುವುದಿಲ್ಲ. ವಿಶಾಲ ಮೈಸೂರಾಗುವುದಕ್ಕೆ ಮುಂಚೆ ವಿಶಾಲ ಮೈಸೂರಾದರೆ ಹಣಕಾಸಿನ ಪರಿಸ್ಥಿತಿ ಸರಿಹೋಗುತ್ತದೆಂದು ಹೇಳಿದ್ದರು, ವಿಶಾಲ ಮೈಸೂರಾದೊಡನೆಯೇ ಶೋಚನೀಯವಾಗಿದೆಯೆಂದು ಪುನಃ ಅವರೇ ಹೇಳುತ್ತಾರೆ. ಅವರ ವಾದಸರಣಿ ಅರ್ಥವಾಗುವುದಿಲ್ಲ. ಸಾಲ ತರುತ್ತಿದ್ದಾರೆ, ಹಣವೇ ಇಲ್ಲ ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದಿಂದ ಹಣ ಪಡೆದು ಕೆಲಸ ಕಾರ್ಯ ಮಾಡುವುದನ್ನು ನೋಡಿ ಹಾಗೆ ಹೇಳಬಹುದು. ಆದರೆ ಮೈಸೂರು ಸಂಸ್ಥಾನದ ಉತ್ಪತ್ತಿಯ ಬಾಬುಗಳನ್ನು ಕೇಂದ್ರಕ್ಕೆ ಕೊಟ್ಟಿರುವುದರಿಂದ ಕೇಂದ್ರ ಸರ್ಕಾರದವರು ನಮ್ಮ ಸಂಸ್ಥಾನಕ್ಕೆ ಹಣ ಒದಗಿಸುವ ಜವಾಬ್ದಾರಿ ಹೊತ್ತಿ

ದ್ದಾರೆ. ಪಂಚವಾರ್ಷಿಕ ಯೋಜನೆಯ ಜವಾಬ್ದಾರಿಯೂ ಕೇಂದ್ರ ಸರಕಾರಕ್ಕೆ ಸೇರಿದ್ದು. ಸಂಸ್ಥಾನದಲ್ಲಿ ಖರ್ಚು ಮಾಡಬೇಕಾಗಿರುವ 180 ಕೋಟಿ ರೂಪಾಯಿ ಹಣಕ್ಕೆ ವ್ಯವಸ್ಥೆ ಮಾಡಿ ಯೋಜನೆಯನ್ನು ಪೂರ್ಣಗೊಳಿಸುವ ಜವಾಬ್ದಾರಿ ಕೇಂದ್ರಕ್ಕೆ ಸೇರಿದ್ದು. ಆದ್ದರಿಂದ ಮೈಸೂರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ವಿಶಾಲ ಮೈಸೂರಾದ ಮಾತ್ರಕ್ಕೆ ಶೋಚನೀಯವಾಗಿಲ್ಲ, ಇನ್ನೂ ಉತ್ತಮವಾಗುತ್ತದೆ ಎಂದು ಹೇಳುವುದರಲ್ಲಿ ಅನುಮಾನವೇನೂ ಕಂಡುಬರುವುದಿಲ್ಲ. ನಾವು ಸಾಲ ಎತ್ತುತ್ತಿದ್ದೇವೆಂದು ಹೇಳಿದರು. ಸಾಲ ಎತ್ತಬೇಕಾದರೆ ಅದಕ್ಕೆ ತಕ್ಕಷ್ಟು ಆಧಾರವಾಗಿ ಆಸ್ತಿಯಿದೆ, ಸಾಕಾದಷ್ಟು ಹಣ ಬರಮಾಡಿಕೊಳ್ಳಲು ಚೈತನ್ಯವಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಕೇಂದ್ರ ಸರ್ಕಾರವಾಗಲಿ ಸಾರ್ವಜನಿಕರಾಗಲಿ ಮೈಸೂರು ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಗ್ಗೆ ಅಪನಂಬಿಕೆ ಪಡುವ ಪರಿಸ್ಥಿತಿಯಿಲ್ಲವೆಂದು ಹೇಳುತ್ತೇನೆ.

ಹಿಂದೆ ಸರ್ಕಾರದವರು 3-4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದ ವಿದ್ಯಾಭ್ಯಾಸದ ಇಲಾಖೆಗೆ ಈ ದಿವಸ 10 ಕೋಟಿ ರೂಪಾಯಿಗಳನ್ನೊದಗಿಸಲು ಸಾಧ್ಯವಿದೆ; ಅಭಿವೃದ್ಧಿ ಕಾರ್ಯಗಳಿಗೆ ಸುಮಾರು 23 ಕೋಟಿ ರೂಪಾಯಿಗಳನ್ನೊದಗಿಸಿದ್ದಾರೆ. ಇಷ್ಟು ಹಣ ಒದಗಿಸಿರುವಾಗ ಸಂಸ್ಥಾನದಲ್ಲಿ ಉತ್ಪತ್ತಿಯೆಷ್ಟಿರಬೇಕು, ಪರಿಸ್ಥಿತಿ ಹೇಗಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಹಣ ಉಪಯುಕ್ತ ಕಾರ್ಯಗಳಿಗೆ ಬೇಕಾದಾಗ ತೆರಿಗೆ ಹಾಕಬೇಕು ಅಥವಾ ಸಾಲವೆತ್ತಬೇಕು, ಇಂಥ ಸಂದರ್ಭ ಬರಬಹುದು. ಆದರೆ ಪರಿಸ್ಥಿತಿಯಲ್ಲೇನೂ ವ್ಯತ್ಯಾಸವಾಗಲಿಕ್ಕಿಲ್ಲ.

ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಹಾಗೆ ಒಂದೆರಡು ವಿಷಯ ಹೇಳುತ್ತೇನೆ. ಶಿವಮೊಗ್ಗಾದಲ್ಲಿ ಒಂದು ಬೆಂಕಿಕಡ್ಡಿ ಕಾರ್ಖಾನೆಯಿತ್ತು. ಅದನ್ನು ಸರ್ಕಾರದವರು 10-15 ವರ್ಷ ನಡೆಸುತ್ತಿದ್ದರು; ಒಂದು ಲಕ್ಷ ರೂಪಾಯಿ ಹಣವನ್ನು ಸಾಲದ ರೂಪವಾಗಿ ಸರ್ಕಾರದವರು ಕೊಟ್ಟರು. ಹಿಂದೆ ಕೈಗಾರಿಕಾ ಸಚಿವರು ಈ ಕಾರ್ಖಾನೆಯನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ವ್ಯವಸ್ಥೆ ಮಾಡದೆ ತಾವೇ ಅದನ್ನು ಕೊಂಡುಕೊಳ್ಳುವುದಾಗಿ ಹೇಳಿ ಆ ಕಾರ್ಖಾನೆ ನಡೆಯುವುದನ್ನು ತಪ್ಪಿಸಿದರು. ಕೇಂದ್ರ ಸರ್ಕಾರದವರು ಆ ಕಾರ್ಖಾನೆಗೆ ಸರ್ಕಾರ ಗ್ಯಾರಂಟಿ ಕೊಟ್ಟರೆ 5 ಲಕ್ಷ ರೂಪಾಯಿಗಳ ಸಾಲ ಕೊಡುವುದಾಗಿ ಹೇಳಿದರು. ಶೇಕಡ ಹತ್ತು ಭಾಗದ ಷೇರನ್ನು ಸರ್ಕಾರ ಹಾಕಿ ಸರ್ಕಾರದವರೇ ಛೇರ್ಮನ್ನರಾಗಿ ಸರ್ಕಾರದ ಹಣಕಾಸಿನಲ್ಲೇ ಆಡಳಿತ ನಡೆಸುತ್ತೇವೆ, ಕೇಂದ್ರ ಸರ್ಕಾರ ಕೊಡುವ ಸಾಲ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾ, ಕಾರ್ಖಾನೆ ನಡೆಸುವುದಕ್ಕೆ ಸ್ವಾತಂತ್ರ್ಯ ಕೊಡಲಿಲ್ಲ. ಈ ದಿವಸ ಕಾರ್ಖಾನೆಯನ್ನು ಮುಚ್ಚಿ ಎರಡು ವರ್ಷವಾಗಿದೆ, ಸ್ವತಂತ್ರವಾಗಿ ನಡೆಸುವುದಕ್ಕೆ ಅವಕಾಶ ಕೊಡಿ, ಕೇಂದ್ರ ಸರ್ಕಾರದ ಸಾಲ ಬೇಡ, ಎಷ್ಟಿದೆಯೋ ಅಷ್ಟರಲ್ಲೇ ಕೆಲಸ ಮಾಡುತ್ತೇವೆ ಎಂದು ಸರ್ಕಾರದಲ್ಲಿ ಮನವಿ ಮಾಡಿದರೂ ಅನುಕೂಲ ಮಾಡಿರುವುದಿಲ್ಲ. ಇದರಿಂದ 200-300 ಜನರಿಗೆ ಕೆಲಸವಿಲ್ಲದಂತಾಯಿತು. ಸಂಸ್ಥಾನದಲ್ಲಿದ್ದಂಥ ಒಂದು ಕಾರ್ಖಾನೆ ಕೆಲಸ ಮಾಡುವುದನ್ನು ನಿಲ್ಲಿಸಿ ಅಭಿವೃದ್ಧಿ ಕಾರ್ಯಕ್ಕೆ ಅಡಚಣೆಯಾಗಿರುವುದು ಒಂದು ಶೋಚನೀಯವಾದ ವಿಷಯವೆಂದು ಹೇಳುತ್ತೇನೆ.

ಶಿವಮೊಗ್ಗಾಕ್ಕೆ ಫಸ್ಟ್‌ಗ್ರೇಡ್ ಕಾಲೇಜ್ ಕೊಡಿ ಎಂದು ಹತ್ತು ವರ್ಷಗಳಿಂದ ಕೇಳುತ್ತಿದ್ದೇವೆ, ಮಾನ್ಯ ಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ವಿದ್ಯಾಭ್ಯಾಸ ಸುಧಾರಣೆಗೆ ಸಂಬಂಧಪಟ್ಟಹಾಗೆ ಬದಲಾವಣೆ ಮಾಡಿ ಯೂನಿವರ್ಸಿಟಿ ವಿದ್ಯಾಭ್ಯಾಸ ಮೂರು ವರ್ಷ, ಹೈಸ್ಕೂಲು ವಿದ್ಯಾಭ್ಯಾಸ ನಾಲ್ಕು ವರ್ಷ ಮಾಡುತ್ತೇವೆ ಎಂದು ಎರಡು ವರ್ಷದಿಂದ ಹೇಳುತ್ತಾ ಆ ವಿಷಯ ಚರ್ಚೆ ಮಾಡುತ್ತಿದ್ದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಬೇರೆ ಪ್ರಾಂತಗಳಲ್ಲಿ ವಿದ್ಯಾಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ. ನಮ್ಮ ಸರ್ಕಾರದವರೂ ಆದಷ್ಟು ಬೇಗ ವಿದ್ಯಾಭ್ಯಾಸ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದು ಯೂನಿವರ್ಸಿಟಿ ಕೋರ್ಸನ್ನು ಮೂರು ವರ್ಷವಿರುವಂತೆಯೂ ಹೈಸ್ಕೂಲು ವಿದ್ಯಾಭ್ಯಾಸವನ್ನು ನಾಲ್ಕು ವರ್ಷವಿರುವಂತೆಯೂ ಏರ್ಪಾಡು ಮಾಡಿದರೆ ಎಲ್ಲ ಜಿಲ್ಲೆಗಳಲ್ಲೂ ಹೆಚ್ಚಿನ ವಿದ್ಯಾಭ್ಯಾಸ ಪಡೆಯುವುದಕ್ಕೆ ಅವಕಾಶವಾಗುತ್ತದೆಯೆಂದು ಹೇಳುತ್ತೇನೆ.

ಭದ್ರಾವತಿಯಲ್ಲಿಯ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನಲ್ಲಿ ಉಪಾಧ್ಯಾಯರ ನೇಮಕ M. I. S. D. ಆಡಳಿತದಲ್ಲಿದೆ. ಒಂದೆರಡು ವರ್ಷ ಕೆಲಸ ಮಾಡಿ ಉಪಾಧ್ಯಾಯರುಗಳು ಬಿಟ್ಟು ಹೋಗುತ್ತಾರೆ. ಇವರಿಗೆ ವರ್ಗಮಾಡಿಕೊಳ್ಳಲು ಅವಕಾಶವಿಲ್ಲ. ಬೇರೆ ಇನ್‌ಸ್ಟಿಟ್ಯೂಟ್ ಉಪಾಧ್ಯಾಯರಿಗೆ ದೊರೆಯುವ ಗ್ರೇಡ್ ಮತ್ತು ಸ್ಕೇಲು ದೊರೆಯುತ್ತಿಲ್ಲ. ಸರಕಾರಕ್ಕೂ ಮತ್ತು M.I.S.D. ಆಡಳಿತಕ್ಕೂ ವ್ಯತ್ಯಾಸವಿಲ್ಲದಂತೆ ಉಪಾಧ್ಯಾಯರಿಗೆ ದೊರೆಯಬೇಕಾದ ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಡುವಂತೆ ಮಾಡಬೇಕು. ಅಂದರೆ. ಇನ್‌ಸ್ಟಿಟ್ಯೂಟಿನ ಪ್ರಗತಿಯಾಗುವುದು. ಸಮಾನವಾದ ರೂಲ್ಸುಗಳನ್ನು ಮಾಡಿ ಅವರಿಗೆ ಸಂಬಳ ಪೆನ್‌ಶನ್ ವಗೈರೆ ಎಲ್ಲಾ ಸಿಗುವಂತೆ ಅನುಕೂಲತೆಯನ್ನು ಉಂಟುಮಾಡಬೇಕೆಂದು ಸಲಹೆ ಮಾಡುತ್ತೇನೆ. ಶಿವಮೊಗ್ಗಾದಲ್ಲಿ 1947ರಲ್ಲಿ ಪ್ರಾರಂಭವಾದ ಕಾರ್ಯವು ಹತ್ತು ವರ್ಷಗಳಾದರೂ ಡ್ರೇನೇಜಿನ ಬಗ್ಗೆ ಯಾವ ಪ್ರಗತಿಯಾಗಿಲ್ಲ. ಪೌರಸಭೆಯವರೂ ಸರಕಾರದವರೂ ಪರಿಶ್ರಮ ವಹಿಸಿ ಒಂದೆರಡು ವರ್ಷಗಳಲ್ಲಿ ಡ್ರೇನೇಜ ಸ್ಕೀಮು ಮುಗಿಯುವಂತೆ ಆಗಬೇಕು.

ಇನ್ನು ರೋಡ್‌ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವೆನು. ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್‌ನಲ್ಲಿ ನನಗೆ ನಂಬಿಕೆ ಇಲ್ಲ. ಖಾಸಗಿಯಾಗಿ ಇದ್ದದ್ದು ಒಳಿತಾಗಿತ್ತು. ಎಲ್ಲವನ್ನೂ ಸರಕಾರವೇ ವಹಿಸಿಕೊಂಡು ಇರುವುದು ಸರಿಯಾಗಿ ಕಾಣುವುದಿಲ್ಲ. ಪ್ರತಿಯೊಂದು ಜಿಲ್ಲೆಗೆ ಒಂದು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಸಂಸ್ಥೆ ಮಾಡಿ ಅದರಲ್ಲಿ ಈಗಿರುವ ಎಲ್ಲಾ ಬಸ್ಸುಗಳ ಮಾಲಿಕರನ್ನೂ ಸೇರಿಸಿಕೊಂಡು ಅವರನ್ನು ಡೈರೆಕ್ಟರನ್ನಾಗಿ ಮಾಡಿ, ಸರಕಾರವು ಶೇಕಡ 40ರಷ್ಟು ಷೇರ್ಸ್‌ಗಳನ್ನು ತೆಗೆದುಕೊಂಡು 25ರಷ್ಟು ಅವರಿಗೆ ಕೊಟ್ಟು 10ರಷ್ಟು ದುಡಿಯುವವರಿಗೆ ಕೊಟ್ಟು 25ರಷ್ಟು ಸಾರ್ವಜನಿಕರಿಗೆ ಕೊಟ್ಟು ಜಿಲ್ಲೆಗೆ ಒಂದು ಯೂನಿಟ್ ಮಾಡಿಕೊಟ್ಟರೆ, ಬಸ್ ಟ್ರಾನ್ಸ್‌ಪೋರ್ಟ್ ಬಹಳ ಉತ್ತಮ ಸ್ಥಿತಿಯಲ್ಲಿ ನಡೆಯುವುದು. ಸರ್ಕಾರವು ಬಸ್ ಸರ್ವಿಸ್ ತೆಗೆದುಕೊಂಡ ಮೇಲೆ ಇತ್ತೀಚೆಗೆ ಓವರ್‌ಲೋಡ್ ಮಾಡುವುದಿಲ್ಲ ಮತ್ತು ಸರಿಯಾದ ವೇಳೆಗೆ ಬಸ್ಸು ಹೊರಡುವುದು ಮತ್ತು ಬರುವುದು ಆಗುವುದಿಲ್ಲ. ಆದ ಕಾರಣ ಇದರ ಆಡಳಿತದಲ್ಲಿ ಇರುವ ಲೋಪದೋಷಗಳನ್ನು

(ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ)

ಕಂಡುಹಿಡಿದು ಅವುಗಳನ್ನು ಸರಿಪಡಿಸಬೇಕು. ರಸಿಯಾ ದೇಶದಲ್ಲಿದ್ದಂತೆ ಎಲ್ಲಾ ಉದ್ಯೋಗಗಳನ್ನೂ ಸರಕಾರವು ತಾವೇ ಮಾಡಬೇಕೆಂದು ಇಟ್ಟುಕೊಳ್ಳುವುದು ಸರಿಯಲ್ಲ. ಖಾಸಗೀ ಉದ್ಯೋಗಗಳನ್ನು ಸರಕಾರ ತಾವೇ ವಹಿಸಿಕೊಳ್ಳುವುದರ ಬದಲು ಅಂಥ ಉದ್ಯೋಗಗಳಿಗೆ ಹಣದ ಸಹಾಯ ಮಾಡಿ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮಾಡಬೇಕು. ಬಸ್ ಟ್ರಾನ್ಸ್‌ಪೋರ್ಟಿನಲ್ಲಿ ಬಹಳ ಲೋಪ ದೋಷಗಳು ಇವೆ. ಬಿ. ಟಿ. ಸಿ. ವಹಿಸಿಕೊಂಡ ಮೇಲೆ ಅದರ ವ್ಯವಸ್ಥೆ ಚೆನ್ನಾಗಿಲ್ಲ. ಸರಕಾರ ಎಲ್ಲವನ್ನೂ ತಾವೇ ಮಾಡದೆ, ಸಣ್ಣ ಸಣ್ಣ ಸಂಸ್ಥೆಗಳನ್ನು ಮಾಡಿ ಸಹಾಯ ಮಾಡಿದರೆ ವ್ಯವಸ್ಥೆಯು ಖಂಡಿತವಾಗಿ ಉತ್ತಮವಾಗುತ್ತದೆ.

ಕೇಂದ್ರ ಸರಕಾರದಿಂದ ಖಾದಿ ಮತ್ತು ಗ್ರಾಮ ಉದ್ಯೋಗದ ಮಂಡಲವನ್ನು ರಚಿಸುವುದಕ್ಕೆ ರಾಜ್ಯ ಸರಕಾರಕ್ಕೆ ಸರ್ಕ್ಯುಲರ್ ಬಂದಿದೆ. ಮುಂಬಯಿ, ಹೈದರಾಬಾದ್‌ಗಳಲ್ಲಿ ಇದ್ದಹಾಗೆ ಒಂದು ಬೋರ್ಡು ಖಾದಿ ಮತ್ತು ಗ್ರಾಮೋದ್ಯೋಗ ಎಂದರೆ ಸಣ್ಣ ಸಣ್ಣ ಕೈಗಾರಿಕೆಗಳ ಬಗ್ಗೆ ನಾಲ್ಕೈದು ವರ್ಷಗಳಿಂದ ಒಂದು ಸ್ಟ್ಯಾಚುಟರಿ ಬೋರ್ಡಿನ ರಚನೆಯಾಗಿಲ್ಲ. ಬೋರ್ಡ್ ರಚನೆಯಾಗಿದ್ದರೆ ಮೈಸೂರು ಸಂಸ್ಥಾನಕ್ಕೆ 45 ಲಕ್ಷ ರೂಪಾಯಿ ಹಣ ಗ್ರ್ಯಾಂಟು ದೊರೆಯುತ್ತಿದ್ದಿತು. ಯಾವ ಕಾರ್ಯವೂ ಆಗಿಲ್ಲ. ಬೇರೆ ಪ್ರಾಂತದಲ್ಲಿ ಯಾವ ರೀತಿಯಾಗಿ ಮಾಡಿದ್ದಾರೋ ಅದೇ ರೀತಿಯಾಗಿ ಇಲ್ಲಿಯೂ ಖಾದಿ ಮತ್ತು ಗ್ರಾಮೋದ್ಯೋಗಗಳ ಒಂದು ಸ್ಟ್ಯಾಚುಟರಿ ಬೋರ್ಡು ರಚಿಸಿ ಗ್ರಾಮಾಂತರಗಳಲ್ಲಿಯ ಸಾವಿರಾರು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕೈಗಾರಿಕೆಯ ವಸ್ತುಗಳ ಮಾರಾಟದ ಬಗ್ಗೆ ಇರುವ ಅನಾನುಕೂಲತೆಗಳನ್ನು ತಿಳಿಸಿ ಅನೇಕ ಸಂದರ್ಭಗಳಲ್ಲಿ ಟೀಕೆ ಮಾಡಿದ್ದೇವೆ. ಮಾರಾಟ ಮಾಡುವ ಒಂದು ಸಂಸ್ಥೆಯು ಇರಬೇಕು. ಉತ್ಪನ್ನವಾದ ಎಲ್ಲ ವಸ್ತುಗಳಿಗೂ ಯೋಗ್ಯ ಮಾರಾಟದ ಬೆಲೆಯು ಬರುವಂತೆ ಮಾಡಿದರೆ ಹುಟ್ಟುವಳಿಯು ಹೆಚ್ಚಾಗುತ್ತದೆ. ಮಾರಾಟ ಮಾಡುವ ಸಂಸ್ಥೆಯಲ್ಲಿ ಸರಕಾರ ಬಂಡವಾಳ ಹಾಕಿ ಮಾರಾಟದ ಕಾರ್ಪೋರೇಷನ್ ಒಂದನ್ನು ಮಾಡಬೇಕು. ಮೈಸೂರು ಸರ್ಕಾರದ ಕೈಗಾರಿಕೆಗಳ ಬಗ್ಗೆ ಇಂಡಸ್ಟ್ರಿಯಲ್ ಬಡ್ಜಟ್ ಪ್ರತ್ಯೇಕ ಮಾಡಿ, ನಿವ್ವಳ ನಫೆಯನ್ನು ಮಾತ್ರ ಉತ್ಪತ್ತಿಗೆ ಸೇರಿಸಿಕೊಳ್ಳುವುದು ಉತ್ತಮ, ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಖರ್ಚು ವಜಾ ಜಾತ ಹಣ ಜಮಾತೆಗೆದುಕೊಂಡಿದೆ. ಕೈಗಾರಿಕೆಗಳ ಬಾಬಿನಿಂದ ಹದಿನೈದು ಕೋಟಿ ಮುವತ್ತಾರು ಲಕ್ಷ ಜಮಾ ಹದಿನೈದು ಕೋಟಿ ಹದಿನೆಂಟು ಲಕ್ಷ ಖರ್ಚು ಎಂದು ಹದಿನೆಂಟುಲಕ್ಷ ರೂಪಾಯಿ ಮಾತ್ರ ಉಳಿತಾಯವಾಗುವುದು. ನಮ್ಮ ಕೈಗಾರಿಕಾ ಸಂಸ್ಥೆಗಳು ಕೇಂದ್ರ ಸರ್ಕಾರಕ್ಕೆ ಇನ್‌ಕಮ್ ಟ್ಯಾಕ್ಸ್ ಕೊಡುತ್ತಿಲ್ಲ. ಇನ್‌ಕಮ್ ಟ್ಯಾಕ್ಸ್ ಕೊಡುವುದಾದರೆ ಲಾಭ ಏನೂ ಉಳಿಯುವುದಿಲ್ಲ. ಆದ್ದರಿಂದ ನಮ್ಮ ಕೈಗಾರಿಕೆಗಳಿಂದ ಸಾಕಷ್ಟು ಲಾಭ ಬರುತ್ತದೆಂದು ಒಪ್ಪುವುದಕ್ಕಾಗುವುದಿಲ್ಲ. ಕೋಲಾರದ ಚಿನ್ನದಗಣಿಯಿಂದ ಒಂದು ಕೋಟಿ ರೂಪಾಯಿಗಳಾದರೂ ಉಳಿಯಬಹುದೆಂದು ಅಂದಾಜ ಮಾಡಲಾಗಿತ್ತು. ಆದರೆ ಕೆಲವು ಲಕ್ಷಗಳು ಮಾತ್ರ ಲಾಭ ಕಾಣುವುದು. ಪ್ರತಿಯೊಂದು ಕೈಗಾರಿಕಾ ಸಂಸ್ಥೆಗಳೂ ಸಮರ್ಪಕವಾಗಿ ನಡೆಯುವಂತೆ ಮಾಡಬೇಕು. ಅಲ್ಲದೆ ಈ ಅಮೃತಮಹಲ್‌ಕಾವಲಿಗೆ ಸೇರಿದ ಕೆಲವು ಹಳ್ಳಿಗಳಲ್ಲಿ ಜಮೀನು ಹುರುಳಿ ಸಾಗುವಳಿಗೆ ಕೊಡಲಾಗಿದೆ. ಇದುವರೆಗೆ ಒಂದುವರೆ ಲಕ್ಷ ಬಾಕಿ ಇದೆ. ಎಂದು ಹಿಂದೆ ಅಲ್ಲಿದ್ದ ಆಫೀಸರುಗಳು ಬರೆದಿಟ್ಟಿದ್ದಾರೆ. ಹಿಂದೆ ಒಂದು ಸಲ ಈ ಬಗ್ಗೆ ಕೇಳಿದ್ದಕ್ಕೆ ಈ ವಿಷಯವನ್ನು ಪರಿಶೀಲನೆಮಾಡಿ ವಸೂಲು ಮಾಡುತ್ತೇವೆಂದು ಹೇಳಿದ್ದರು. ಇದನ್ನು ತನಿಖೆ ಮಾಡಿ ವಸೂಲುಮಾಡಲು ಈ ಹಿಂದೆ ಅಲ್ಲಿ ಯಾವ ಆಫೀಸರಿದ್ದರೋ ಅವರನ್ನೇ ಪುನಃ ಇದೇಕೆಲಸಕ್ಕೆ ನೇಮಿಸಿದ್ದಾರೆ. ಆದಕಾರಣ ಈವರೆಗೆ ಒಂದು ಸಾವಿರ ರೂಪಾಯಿ ಕೂಡ ವಸೂಲಾಗಿಲ್ಲ. ಈ ಆಫೀಸರುಗಳಿಗೆ ಸಂಬಳ ಸಾರಿಗೆಗಳಿಗೆ ಇಲ್ಲಿಯವರೆಗೆ ಎಷ್ಟು ಖರ್ಚಾಗಿದೆಯೋ ಅದರಲ್ಲಿ ಕಾಲುಭಾಗದಷ್ಟು ಕೂಡ ವಸೂಲು ಮಾಡಿಲ್ಲ. ಈ ಬಾಕಿ ಒಂದುವರೆ ಲಕ್ಷ ಹಾಗೆಯೇ ನಿಂತಿದೆ. ಇದಕ್ಕೆ ರೈತನು ಕಾರಣನೇ ಅಥವಾ ಇನ್ಯಾರಾದರೂ ಜವಾಬ್ದಾರರೇ ಯಾವುದನ್ನೂ ಪರಿಶೀಲಿಸಿಲ್ಲ. ಇವೊತ್ತಿಗೂ ಒಂದು ಸಾವಿರ ರೂಪಾಯಿಗಳು ಕೂಡ ವಸೂಲಾಗಿಲ್ಲ. ಸರ್ಕಾರದವರು ಯಾವರೀತಿಯಾದರೂ ಸರಿಯಾಗಿ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಈ ಆಫೀಸರುಗಳು ಸರಿಯಾದ ಲೆಕ್ಕವನ್ನು ಬರೆದಿಡುವುದಿಲ್ಲ. ರೈತನಿಂದ ಏನಾದರೂ ಹಣವನ್ನು ಜಮಾ ಮಾಡಿದ್ದರೆ ಅದಕ್ಕೆ ಸರಿಯಾದ ರಸೀದಿ ಕೂಡ ಕೊಡುವುದಿಲ್ಲ. ಇದು ಹೀಗೆ ಇಪ್ಪತ್ತು ವರ್ಷದಿಂದಲೂ ನಡೆದುಕೊಂಡು ಬರುತ್ತಿದೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡಿ ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳ ಎಕ್ಸ್‌ಪ್ಲೇನೇಷನ್ ತರಿಸಿಕೊಂಡು ಅವರನ್ನೇ ಜವಾಬ್ದಾರರನ್ನಾಗಿ ಮಾಡಬೇಕು. ಹೀಗೆ ಮಾಡಿದರೆ ಈರೀತಿಯ ಅವ್ಯವಸ್ಥೆಗಳು ಸರಿಯಾಗುತ್ತವೆ.

ಅಮೃತ್ ಮಹಲ್ ಕಾವಲುಗಳಿಗೆ ಸೇರಿದ ಸುಮಾರು 90 ಸಾವಿರ ಎಕರೆ ಜಮೀನುಗಳನ್ನು ವ್ಯವಸಾಯಕ್ಕೆ ಕೊಡಲು ಸರ್ಕಾರದವರು ತೀರ್ಮಾನಿಸಿದ್ದಾರೆ. ಜಮೀನಿಲ್ಲದ ರೈತರಿಗೆ ಜಮೀನುಗಳನ್ನು ಹಂಚುವ ಮಾರ್ಗ ಸರಿಯಾದದ್ದು. ಆದರೆ ಜಮೀನಿದ್ದವರೆಲ್ಲಾ ಅರ್ಜಿ ಹಾಕಿಕೊಂಡಿರುವರು. ಜಮೀನಿದ್ದವರು, ತಮ್ಮನ ಕೈಲಿ, ಮಗನ ಕೈಲಿ ಅರ್ಜಿಗಳನ್ನು ಹಾಕಿಸಿ ಜಮೀನು ಪಡೆಯಲು ಪ್ರಯತ್ನ ಪಡುತ್ತಿರುವರು. ಈ ಹಿಂದೆ ಬಂದಿರುವ ಅರ್ಜಿಗಳನ್ನು ವಜಾಮಾಡಿ ಹೊಸದಾಗಿ ಅರ್ಜಿಗಳನ್ನು ತೆಗೆದುಕೊಳ್ಳಬೇಕು. ಅರ್ಜಿಗಳನ್ನು ಪರಿಶೀಲನೆಮಾಡಿ ಹಂಚಲು ಸಮಿತಿ ರಚನೆಮಾಡಬೇಕು. ಪ್ರತಿ ಗ್ರಾಮದಲ್ಲಿ ಐದು ಹತ್ತು ವರ್ಷಗಳಿಂದ ಬೇರೆಯವರ ಜಮೀನುಗಳನ್ನು ಸಾಗುವಳಿಮಾಡುತ್ತಿರುವವರಿಗೆ ಮೊದಲು ಕೊಟ್ಟು ಜಮೀನು ಕಡಮೆ ಇರುವವರಿಗೆ ಕೊಡಬಹುದು. ಆದ್ದರಿಂದ ಜಮೀನು ಹಂಚುವಿಕೆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು.

ಐವತ್ತು ವರ್ಷಗಳಿಂದ ಒಂದೇ ಹಳ್ಳಿಯಲ್ಲಿದ್ದು ಬಡವನಾಗಿದ್ದು ವ್ಯವಸಾಯದಿಂದಲೇ ಜೀವಿಸತಕ್ಕ ರೈತನಿಗೆ ಅರ್ಜಿ ಹಾಕುವುದಕ್ಕೆ ಅವಕಾಶವೇ ಇಲ್ಲ. ಈ ರೀತಿ ಜಮೀನಿರುವವರಿಗೆ ಹೆಚ್ಚಿಗೆ ಜಮೀನುಗಳು ಹಂಚಿಕೆಯಾಗಿವೆ. ನ್ಯಾಯವಾಗಿ ವ್ಯವಸಾಯ ಮಾಡುವ ಬಡವನಿಗೆ ಜಮೀನು ಸಿಗುತ್ತಿಲ್ಲ. ಆದುದರಿಂದ ಇದರ ಬಗ್ಗೆ ಸರಿಯಾದ ಪರಿಶೀಲನೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri S. D. KOTHAWALE (Chikodi).—Mr. Speaker, Sir, after going

through the Budget estimates, I find that Hon'ble the Finance Minister has made a very good job in a difficult situation. While judging the debate budget figures, it is necessary to consider that the Budget is one presented by a Care-Taker Government. Though the budget figures are presented for the entire year 1957-58 sanction of this House is sought only for the expenditure for the first four months and the remaining expenditure is left for the future Assembly and the Government that is going to come hereafter. It is said, Sir, by one of the Hon'ble. Members that it is a rupee budget. This is one of the reasons why this Budget appears to be a rupee budget. The present Government is hardly entitled to initiate new policies or introduce any innovation at this stage. Though the Government is a Care-taker Government and has presented the budget policies for the succeeding Government, still we shall find therein many points which are really inspiring. Sir, our country is an under-developed country and it is seeking to have a developed economy and it has to proceed on a planned basis. In India we have started planning since 1951; we have completed the First Plan and we have entered upon the execution of the Second Five-Year Plan. Apart from the ordinary administration, the question is of the economic, social and educational developments; and while considering this question of development, it is necessary in an under-developed country to pool all the resources and to spread the work of development over a number of years in a planned manner so that at the end of that period we could hope to provide to the people the amenities—economic, social and political.

The Second Plan that was prepared in this country, started functioning recently. It is for the Government to make provision every year for its execution. We find in this Budget that provision has been made for the execution of all the items of Second Five-Year Plan included for the New Mysore State. Therefore in a democratic set-up of our country it is not possible to have anything sensational every year, but we have got to proceed in a very peaceful manner to pursue plans which have been considered and conceded in a very scientific manner and try to finish them and execute them during the period for which the plan is prepared. Therefore it is wrong to say that the budget is a rupee one; it is not a rupee budget, but it is a budget which has made provision for the execution of the plan which is very essential for the development of our society and our State.

While saying something about this Plan, Sir, I must bring the notice of this Hon'ble House that the present Plan, so far as the new Mysore State is concerned, is not a plan of an organic type. The Karnatak areas have come into a single unit after the formation of the new State and the Finance Minister has put together all the plans of different areas which have come to the New Mysore State and provision has been made for their development. It was complained that Kannada-speaking areas while they were in different States, were not receiving equal treatment at the hands of the composite State of which they formed parts before the new State came into existence. They were given step-motherly treatment; plans were not properly considered and no money was provided. I personally made this complaint even on the floor of the Bombay Assembly and urged the Government of those days to include plans extending over the entire area for the development of various areas.

3 P. M.

But my personal experience was that sufficient attention was not paid. My request to the new Mysore State Government is to re-cast and revise all the plans, particularly in respect of the areas outside the old Mysore State. Fortunately for the areas of the old Mysore State, they had their own Government and they must have paid sufficient attention to the development of the area. But the same cannot be said with respect to the areas which have

(SRI S. D. KOTHAWALE.)

joined the new Mysore State from outside the old Mysore State. Therefore my request to the Government is to consider the new Mysore State as one unit for development and consider the question of development, whether it be irrigational, educational or industrial from the standpoint of developing the entire State and concieve plans and have a sort of organic plan for the entire State. For instance, in the parts of Bombay-Karnatak there are not sufficient roads, bridges, etc. There is a lot of scope for irrigation ; many rivers are waiting for treatment. I will not go into the details, for want of time. Government can be sure that there is vast scope for irrigation and for promotion of agriculture in these areas. This possibility has to be taken into account for the purpose of development. These four districts of Bombay-Karnatak have lots of possibilities for industrial development also, particularly Karwar district. The work of developing these four Bombay districts should be done in a very equitable manner, so that we can have a kind of regional equality in development. I am not saying anything new, if I say that the members of the Planning Commission have considered development, so far as the Second Five Year plan is concerned, on a sort of regional basis. If that principle is accepted, the principle of regional parity should be applied to our State also. We should proceed with the idea of having all-sided development in the State, giving satisfaction to all the areas and the people of the State. That is the reason why I have risen and taken up the time of the House for pleading for a revision of the plan. I have tried to bring the idea of regional equality in the matter of development, so that justice can be done to all the people of this great State.

It has been said, Sir, that we have a defecit budget. Now, in a developing economy, there is bound to be a deficit. All over India, we find that deficit budgets are presented by the various State Governments as well as the Central Gevernment. The question is whether the deficit is for the purpose of development. Whether they are in the nature of loans or deficit financing, they should be used for productive purposes. If they are used for productive purposes, I am sure it would be possible to curb inflationary tendencies by various methods. It does not matter whether we are having a deficit budget or not. We are entitled to obtain loans from the Central Government and we are bound to make good the deficit in course of time; because of the benefits we shall derive from the various schemes and development that we have brought into existence But the question of deficit, should not come in the way of development of the various areas, particularly of the Bombay-Karnatak districts, which, I am sure, in course of time is bound to be a very great source of income to the State, not only in matters industrial, but in matters of irrigation also. One point in respect of Karwar district. Many suggestions have been made for the development of ports. I do not know whether we are sufficiently aware in this House of the potential of Karwar to develop as a port. They say that it is the best port in the world, but of course it is a matter for technicians to decide. It is even understood that the Government of India are considering the question of establishing another ship-building yard, and it is said that Karwar is being considered for this purpose. Whether the Central Government is considering this or not, this Government should represent the matter to the Central Government.

I once again congratulate the Finance Minister for bringing this Budget, a job which had to be done in a very difficult situation.

*SRI S. S. KOLKEBAIL (Bramhawar).—The white paper issued by the Finance Department has the following passage :

"Within a few months, after reorganisation, Government had to tackle several problems, financial, administrative and allied matters. We have to build up a new State on strong foundations".

This is really a very good statement-whether I should call it a sentiment or a

wish or what not, I fail to understand. Everybody has a wish--probably it may be called a 'philosophy'—that the Government should be able to stand on strong foundations. But what have they done during the last five months ? The Karnatak State was inaugurated on 1st November 1957. Five months have elapsed but still we find that integration has not yet been completed. In various integrated parts, the same old law continues. To substantiate what I am saying, I can give several instances. For example, the Motor Vehicle Act has not been amended or changed. A lorry owner has to pay one tax in Mangalore, another at Coorg and a third tax at Mysore. This difficulty of the people has not been remedied in spite of repeated representations both by the public and the representatives coming from the various areas.

So also the sales tax. In the matter of sales tax we have got different kinds of sales tax. Now, for example a person who purchases a motor car in Coorg need not have to pay any tax whatsoever whereas a person purchasing a motor car in Mangalore has to pay a heavy tax. So also a person purchasing in Mysore. So, many of the persons try to get over the difficulty and are as a matter of fact purchasing their motor vehicles in Coorg through an agent who is having business at Coorg. This has deprived the State Exchequer of its legitimate dues. Further, the levy of sales tax is so incongruous that a person who purchases a radio outside the old Mysore State, at Bangalore he can very well circumvent the payment of sales tax by treating this as an inter-State transaction. By this method the State Exchequer loses heavy amounts. I am making this statement because we find, as already pointed out by my friend Sri S. Srinivasa Iyengar, the deficit of Rs. 5 crores is there and the Finance Minister may come forward with taxation proposals. Even the taxes which could have been collected have not been collected at all. So, instead of going in for new taxation if we make proper attempts, my submission is, the so called deficit may be completely wiped out. It is stated that there is a heavy accumulation of land revenue and sales tax arrears. They have not been collected by the Government. I do not think the Government has taken any steps to recover them—I do not say this of the present Mysore Government. Such a thing is unheard of in the Bombay Government. But in the old Mysore State it is abnormal and to elicit the correct information I have sent in a short notice question for which I am expecting a reply shortly. Therefore it is necessary we should look into this matter. If this sort of administration were to continue, we do not know where it will land us. Collecting taxes from those persons who are honest and not collecting from those who are not honest, will result in a lot of hardship and confusion among the public. Of course we can go on criticising these acts of Government and the Congress people may say that inspite of all this they have come to power with a majority. This is so because the voters do not know all these wrongs or the opposition might not have carried the message to their doors. Anybody can see that here we have not one Government but five Governments. In the same State; there is nothing in common.

As a matter of fact when I spoke last in this House I had clearly stated that the administration should be made efficient. I do not say that the Mysore State officials are inefficient, but somehow or other I feel, as a member of this Assembly for the last five months, the administration is neither efficient nor good. Of course I do not want to use a strong language and our request to the Chief Minister is that he should ask for the loan of five or six I.C.S. officers. This State being a part B State, the officers here are not well versed with the law and administration of Part A States. Many Kannada knowing I.C.S. officers, I am told, are not willing to come down here because they find that in the day-to-day administration Ministers are interfering. But, any way, by this inefficient administration let not the public or the State suffer. So, my appeal to the Ministry is that they must get some I.C.S. officers to man atleast the Secretariat and improve the entire administration.

(Sri S. S. KOLKEBAIL)

Here, anybody who goes to the Secretariat knows that no paper is being looked into. It takes months to pass orders. There are some officers who have not seen papers for the last five months. With this kind of administration in the Secretariat level, can we expect to have a welfare State or a State on strong foundations? That is my submission to this House.

Mr. Speaker, in this connection I also want to point out that under the S.R. Act we find we are entitled to have 11 High Court Judges. It has nearly 1200 old cases, transferred from integrated areas. Not a single High Court Judge has been appointed so far. In Bombay so many Judges have been appointed: within eight days a Judge was promoted to the Supreme Court. Similarly in West Bengal, Kerala and other States, all these vacancies have been filled up so that the litigant public do not suffer. Nothing is done by this Government. These appointments have been held up, we do not know whether it is for political or election reasons. Some how the Mysore High Court is today not manned at all. There are three Judges of the old Mysore State and I think they have not disposed of a single case. Excepting hearing and admission of some petitions they have not disposed of any case. If this state of affairs were to continue, really the litigant public will have to suffer by the creation of the so called Karnataka State for which so many have suffered and gone to jails. My submission is that there is no reason why these apointments should be held up? These appointments could have been made within fifteen days.

Sir, the pay scales have been completely revised. But, who are the persons who stand to benefit by these scales? It is the old Mysore State officials. I have no objection to pay well the ill-paid officers. It is a right thing. Their pay should be enhanced. But at the same time there are two or three sets of officers whose pay should be enhanced and who are suffering the same agony. They are the Police constables and Teachers. The Police Department is the only department which works for 24 hours and all other departments work between 10-30 to 5-30. It is the Police Department which works from morning to morning. It is the officers of this department who are protecting the entire State and sometimes the lives of the Ministers. If these police people, especially the constables and Head constables are ill-paid it is impossible for them even to eke out their livelihood. For example a constable is paid Rs. 30-8-0 with a maximum of Rs. 50. With this meagre pay, I do not think the constable can make a decent living. In that case, certainly he will take up to corruption and other things. If the police people who are the protectors of law are to take up to corruption, my submission is that there will be complete anarchy in the administration.

The other set of persons are teachers. We know that there are teachers working in the District Board Schools, teachers working in Government schools, teachers working in aided schools—all of them have not been properly paid. There are a lot of representations from various teachers' union, teachers' Associations. When some of the Ministers visited my district, they promised that the grievance of teachers will be redressed within a shorttime. I do not know what exactly is meant by 'short-time' or whether anything is meant by that expression. But so far, no action has been taken on these requests and representations made by the teachers.

MR. SPEAKER.—Time is up.

SRI S. S. KOLKEBAIL.—One minute Sir. The other point I want to impress and on which there have been already several interpellations, is the question of establishing a major port at Malpe and the improvement of Railway lines in this State. Sir, I learn that this is the only State which has handed over a good mileage of railway to the Central Government. In answer to an interpellation put by me, the Government have said that they have no information about any new railway line that is going to be taken up in this State. So far as my knowledge goes, I think every Karnataka gentleman knows, that not a furlong of railway line

has been laid in this State. Unless and until this Government at least sends up a recommendation, if necessary by a unanimous resolution of this House, I do not think the Central Government will take care to see that fresh lines are taken up for construction and the scheme regarding the major ports is put into effect in this State. Especially the necessity for a major port at Malpe has been argued by the various Members of this House. It has been canvassed enough and the Government say that it has been recommended. But somehow or other, although it is three or four years since the expert committee made its recommendations, still no action has been taken to set up a major port at Malpe. That is an ideal centre for setting up a major port.

*ಶ್ರೀ ಎಚ್. ವೈ. ಮುಂಬರೆಡ್ಡಿ (ರಾಮದುರ್ಗ).—ಮಾನ್ಯ ಅಧ್ಯಕ್ಷರೆ, ಈ ಹೊತ್ತು ಸಭೆಯ ಮುಂದೆ ಚರ್ಚೆಗಾಗಿ ಬಂದಿರುವ ಬಡ್ಜೆಟ್ಟಿನ ವಿಷಯದಲ್ಲಿ ಮಾತಾಡಲು ಎದ್ದು ನಿಂತಿದ್ದೇನೆ. ರಾಮದುರ್ಗ ತಾಲ್ಲೂಕು ಬೆಳಗಾಂ ಜಿಲ್ಲೆಯಲ್ಲಿದೆ. ಆ ತಾಲ್ಲೂಕು ಅತಿಯಾದ ಬರಗಾಲಕ್ಕೀಡಾಗಿದೆ, ಅಲ್ಲಿ ಮಳೆ ಸರಿಯಾಗಿ ಆಗುವುದಿಲ್ಲ. ಘಟಪ್ರಭ—ಬಲದಂಡಿ ಯೋಜನೆಯಿಂದ ಆ ತಾಲ್ಲೂಕಿನ ಬಹುಭಾಗಕ್ಕೆ ಫಾಯಿದೆಯಾಗುತ್ತದೆಂದು ಜನರು ನಂಬಿದ್ದರು. ಆದರೆ ಈಗ ಸರ್ವೆ ನಡೆದಿರುವ ಹಾಗೆ ಬಲದಂಡಿ ಯೋಜನೆಯಿಂದ ಆ ತಾಲ್ಲೂಕಿನ ಕೇವಲ 8-9 ಹಳ್ಳಿಗಳಿಗೆ ಮಾತ್ರ ಲಾಭವಾಗುತ್ತದೆಂದು ಹೇಳುತ್ತಾರೆ. ಆದರೆ ಮೊದಲಿದ್ದ ಯೋಜನೆಯನ್ನು ಸರ್ಕಾರದವರೇಕೆ ಬಿಟ್ಟರೆಂದು ಕೇಳುತ್ತೇನೆ. ಅದಲ್ಲದೆ ರಾಮದುರ್ಗ ತಾಲ್ಲೂಕಿನಲ್ಲಿ ಮಲಪ್ರಭ ನದಿಗೆ ಒಡ್ಡು ಹಾಕಿ ಕೊಳಚೀ ಅಣೆ ಕಟ್ಟು ಕಟ್ಟುವ ಯೋಜನೆ ಮುಗಿದು ಎರಡು ವರ್ಷಗಳಾದುವು. ಆದರೆ ಇಲ್ಲಿಯವರೆಗೂ ಅದರಿಂದ ನೀರನ್ನು ಕೊಟ್ಟಿಲ್ಲ. ಮಲಪ್ರಭ ನದಿ ದೊಡ್ಡ ಯೋಜನೆಯಿಂದ ಲಾಭವಾಗಿರಬಹುದೆಂದು ಕೊಟ್ಟಿಲ್ಲದಿರಬಹುದು. ಈ ಅಣೆಕಟ್ಟು ತಯಾರಾಗಿ ಎರಡು ವರ್ಷಗಳಾದರೂ ಯಾರ ಜಮೀನು ಅದರಿಂದ ಮುಳುಗಡೆಯಾಗಿದೆಯೋ ಆ ಜಮೀನುದಾರರಿಗೆ ಇನ್ನೂ ಕಾಂಪೆನ್ಸೇಷನ್ ಹಣ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಆ ಕಡೆ ಬಂದಾಗ ಈ ಸಂಗತಿಯನ್ನು ಅವರ ಗಮನಕ್ಕೆ ತರಲಾಗಿದೆ. ಈಗಲಾದರೂ ಮುಳುಗಡೆಯಾದ ಜಮೀನು ಮಾಲೀಕರಿಗೆ ತೀವ್ರವಾಗಿ ಹಣ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ರಾಮದುರ್ಗ ತಾಲ್ಲೂಕಿನಲ್ಲಿ ಹಲಗತ್ತಿ ಹತ್ತಿರ ಬಾಳೆಕೊಳ್ಳ ಎಂಬ ಸಣ್ಣ ಯೋಜನೆಯಿತ್ತು. ಅಲ್ಲಿನ ಜನರಿಂದ ಹಣ ವಸೂಲು ಮಾಡಿ ಆ ಯೋಜನೆ ಮಾಡಬೇಕೆಂದು ಪ್ರಯತ್ನ ಮಾಡಿದ್ದರು. ಈ ಸರ್ಕಾರ ಬಂದ ಮೇಲೆ ಆ ಯೋಜನೆಯನ್ನು ಕೈಬಿಟ್ಟಿದೆ. ಆದ್ದರಿಂದ ಯಾರ ಜಮೀನನ್ನು ಮುಳುಗಡೆಯಾಗುತ್ತದೆಂದು ವಶಪಡಿಸಿಕೊಂಡಿದ್ದರೋ ಅದನ್ನು ಸಂಬಂಧಪಟ್ಟ ಮಾಲೀಕರಿಗೆ ಕೊಡಬೇಕು ಮತ್ತು ವಸೂಲು ಮಾಡಿರುವ ಹಣಕ್ಕಾಗಿ ಕಲೆಕ್ಟರಿಗೆ ಅರ್ಜಿ ಹಾಕಿದರೂ ಆ ಹಣ ಬಂದಿಲ್ಲ. ಅದನ್ನು ಕೊಡಿಸಿಕೊಡಬೇಕು.

ಆಮೇಲೆ ಬನ್ನೂರಿನ ಮೈನರ್ ಇರಿಗೇಷನ್ ಸ್ಕೀಂ ಬಂದಿದೆ. ಅದರ ಅಂದಾಜು ವೆಚ್ಚ 10-12 ಸಾವಿರ ರೂಪಾಯಿಗಳು. ಅದು ಮುಗಿದು ಎರಡು ವರ್ಷಗಳಾದರೂ ನೀರನ್ನು ಕೊಟ್ಟಿಲ್ಲ. ಯೋಜನೆ ತಯಾರಿಸುವಾಗ ಸಾರ್ವಜನಿಕರು ಅರ್ಧ ಹಣ, ಸರ್ಕಾರದವರು ಅರ್ಧ ಹಣ ಕೊಡುವಂತೆ ನಿರ್ಧರವಾಗಿತ್ತು. ಅದು ಡೆವಲಪ್‌ಮೆಂಟ್ ವರ್ಕ್. ಕಾಲುವೆಯನ್ನು ಅಲ್ಲಿಯ ಜನರೇ ಮಾಡಬೇಕೆಂದಿದೆ. ಈಗ ಬಂದಿರುವ ತೊಂದರೆ, ಅಲ್ಲಿ ದೊಡ್ಡ ಬಂಡೆಗಳಿವೆ, ಅವನ್ನು ಒಡೆದು ಕಾಲುವೆ ಮಾಡುವುದು ಕಷ್ಟ, ಸ್ವಲ್ಪ ಖರ್ಚು ಮಾಡಬೇಕಾಗುತ್ತದೆ. ಅದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ತಿಳಿಸಿ ಎಗ್ಜಿಕ್ಯುಟಿವ್ ಇಂಜನಿಯರು ಆ ಅಡಚಣೆಯನ್ನು ತಪ್ಪಿಸುವಂತೆ ಏರ್ಪಡಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು.

ರಸ್ತೆಯ ರಚನೆಯಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆ ಮತ್ತು ಲೋಕಲ್ ಬೋರ್ಡುಗಳ ಆಡಳಿತ ಇರುವುದರಿಂದ ತೊಂದರೆಯಾಗಿದೆ. ಅವೆರಡರ ಕೆಲಸಕಾರ್ಯಗಳಲ್ಲಿಯೂ ವ್ಯತ್ಯಾಸವಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸರ್ಕಾರ ಹೆಚ್ಚು ಹಣ ಕೊಡುತ್ತದೆ. ಲೋಕಲ್ ಬೋರ್ಡಿನ ಕೆಲಸಗಳಿಗೆ ಹಣ ಕಡಮೆ ಕೊಡುತ್ತಾರೆ. ಈಗ ನಮ್ಮ ತಾಲ್ಲೂಕುಗಳಲ್ಲಿ ರಸ್ತೆ ಬಹಳವಾಗಿ ಕೆಟ್ಟಿದೆ. ಲೋಕಲ್ ಬೋರ್ಡಿನವರು ನಮಗೆ ಗ್ರಾಂಟು ಬಂದಿಲ್ಲ, ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಚುನ್ನಾಳ-ಸಾಲಳ್ಳಿ ರಸ್ತೆ, ತುಳ್ಳೂರ-ತೊಂಡೀಕಟ್ಟ ರಸ್ತೆ ಚಂದರಗಿ-ಕೊಪ್ಪ ರಸ್ತೆ, ಕಿತ್ತೂರ-ಸುರೇಬಾನ ರಸ್ತೆ ಈ ರಸ್ತೆಗಳು ತೀರ ಕೆಟ್ಟಿವೆ. ಮಳೆಗಾಲದಲ್ಲಿ ತಿರುಗಾಡುವುದು ಕಷ್ಟ. ಹಣ ಮಂಜೂರು ಮಾಡುವಾಗ ಪಬ್ಲಿಕ್ ವರ್ಕ್ಸ್ ಮತ್ತು ಲೋಕಲ್ ಬೋರ್ಡ್ಸ್‌ಗಳೆಂದು ವ್ಯತ್ಯಾಸ ಮಾಡದೆ ಎರಡಕ್ಕೂ ಸರಿಯಾದ ರೀತಿಯಲ್ಲಿ ಅನುಕೂಲ ಮಾಡಿ ಕೊಟ್ಟರೆ ಈ ತೊಂದರೆ ದೂರವಾಗಬಹುದು.

3-30 P. M.

ಇನ್ನು ಮತ್ತೊಂದು ಸಂಗತಿಯನ್ನು ಹೇಳುತ್ತೇನೆ. 1939ನೆಯ ಇಸವಿಯಲ್ಲಿ ರಾಮದುರ್ಗದಲ್ಲಿ ಒಂದು ದುರಂತವು ಆಯಿತು. ಆಗ ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಜನರ ಆಸ್ತಿಯನ್ನು ವಶಪಡಿಸಿಕೊಂಡು ಲಿಲಾವುಮಾಡಿ ಮಾರಾಟ ಮಾಡಿದ್ದಾರೆ. ನಮಗೆ ಸ್ವರಾಜ್ಯ ಪ್ರಾಪ್ತಿಯಾದ ಅನಂತರ ಹಿಂದಿನ ಚಳವಳಿಯಲ್ಲಿ ವಶಪಡಿಸಿಕೊಂಡ ಆಸ್ತಿಯನ್ನು ಅವರವರಿಗೆ ವಾಪಸ್ಸು ಕೊಡಬೇಕೆಂಬುದಾಗಿ ಒಂದು ಸರ್ಕ್ಯುಲರ್ ಇದೆ. ಮಾರಾಟಮಾಡಿ ಬಂದ ಆಸ್ತಿಯ ಹಣ ಕೆಲವು ಜನರದ್ದು ಇನ್ನು ಟ್ರೆಝರಿಯಲ್ಲಿ ಜಮಾ ಆಗಿಯೇ ಇದೆ. ಅಂಥವರಿಗೆ ತೀವ್ರ ಹಣ ವಾಪಸ್ಸು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಉತ್ತರ ಕರ್ನಾಟಕದಲ್ಲಿ ಮದ್ಯಪಾನ ಪ್ರತಿಬಂಧಕ ಕಾನೂನು ಜಾರಿಯಲ್ಲಿ ಇದೆ. ಆದರೆ ಔಷಧ ತಯಾರಿಸುವುದಕ್ಕೆ ಲಾಯಸೆನ್ಸ್ ಪಡೆದುಕೊಂಡು ಅಮಲು ಏರುವ ಔಷಧಗಳನ್ನು ತಯಾರಿಸಿ ಮಾರುತ್ತಾರೆ. ಬತ್ತೀಸ ಮಸಾಲಾ ಎಂಬುದನ್ನು ಕುಡಿದರೆ ಅಮಲು ಏರುತ್ತದೆ. ಜನರು ಇದನ್ನು ವಿಪುಲವಾಗಿ ಕೊಂಡು ಕುಡಿಯುತ್ತಾರೆ. ಮದ್ಯಪಾನ ಪ್ರತಿಬಂಧಕ ಕಾನೂನು ಯಶಸ್ವಿಯಾಗಬೇಕಾದರೆ ಇಂಥ ಔಷಧಗಳು ಇರುವುದಕ್ಕೆ ಅವಕಾಶ ಇರಕೂಡದು. ಬತ್ತೀಸ ಮಸಾಲಾ ಮುಂತಾದುವುಗಳ ತಯಾರಿಕೆಗೆ ಲಾಯಸನ್ಸ್ ಕೊಡ

(ಶ್ರೀ ಎಚ್. ವೈ. ಮುಂಬರೆಡ್ಡಿ)

ಬಾರದು. ಈ ಬಗ್ಗೆ ಸರ್ಕಾರದವರು ತಕ್ಕ ಕ್ರಮವನ್ನು ಜಾಗ್ರತೆ ಕೈಕೊಳ್ಳುವರೆಂದು ನಾನು ನಂಬುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಉತ್ತಮ ತರಹದ ಹತ್ತಿಯ ಬೆಳೆಯು ಬರುತ್ತದೆ. ಆದರೆ ಇತ್ತೀಚೆಗೆ ಹತ್ತಿಯ ಬೆಳೆಗೆ ಇಲಿಗಳ ಕಾಟವು ಹೆಚ್ಚಾಗಿ, ಒಂದು ನಾಲ್ಕಂಶ ಹತ್ತಿಯ ಪೀಕು ನಾಶವಾಗಿ ಹೋಗುತ್ತಿದೆ. ಮನೆಯೊಳಗೇ ಇಲಿಗಳನ್ನು ನಾಶಮಾಡಲು ಸಾಧ್ಯವಾಗದೆ ಇರುವಾಗ ಹೊಲದಲ್ಲಿ ಇಲಿಗಳನ್ನು ನಾಶಮಾಡುವುದು ದುಸ್ಸಾಧ್ಯವಾಗಿ ಬಿಟ್ಟಿದೆ. ಭೂಮಿಯಲ್ಲಿ ಸೇರಿ ಬೆಳೆಯನ್ನು ನಾಶಮಾಡತಕ್ಕ ಇಲಿಗಳನ್ನು ನಾಶಮಾಡಲು ಏನಾದರೂ ಒಂದು ಉಪಾಯವನ್ನು ಕಂಡು ಹಿಡಿದು ಅವುಗಳನ್ನು ನಾಶಗೊಳಿಸಬೇಕು. ಒಕ್ಕಲುತನ ಇಲಾಖೆಯವರು ಈ ಬಗ್ಗೆ ಒಂದು ಉಪಾಯವನ್ನು ಕಂಡು ಹಿಡಿದು ಜನರಿಗೆ ತಿಳಿಸಬೇಕು.

ನನಗೆ ಮಾತನಾಡಲು ಅವಕಾಶ ಕೊಟ್ಟಬಗ್ಗೆ ಆಭಾರ ಮನ್ನಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—How many more members are going to take part in the debate ?

(*Eight Members rose*).

Mr. SPEAKER.—As there are many members who want to take part in the debate, I would like to cut down the time limit. I would reduce the time limit from 15 minutes to 10 minutes. The Hon'ble Member Smt. Subbamma may speak now.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಸ್ವಾಮಿ, ನಾಲ್ಕು ತಿಂಗಳ ಮಟ್ಟಿಗೆ ಇರುವ ತಾತ್ಕಾಲಿಕವಾದ ಆಯವ್ಯಯ ಪತ್ರವನ್ನು ನಾನು ಅನುಮೋದಿಸುತ್ತೇನೆ. 1951ನೆಯ ಇಸ್ವಿಯ ಅನಂತರ ಈ ಐದು ವರ್ಷಗಳ ಕಾಲದಲ್ಲಿ ಅನೇಕ ಉಪಯುಕ್ತವಾದ ಮಹಾಕಾರ್ಯಗಳನ್ನು ಈ ಶಾಸನ ಸಭೆಯು ಸಾಧಿಸಿದೆ. ರಾಜ್ಯ ಪುನರ್ವಿಂಗಡಣೆಯ ಕಾನೂನು, ವಿಧಾನಸೌಧ ನಿರ್ಮಾಣ ಮುಂತಾದ ಪ್ರಮುಖ ವಿಷಯಗಳನ್ನು ಈ ಸಭೆಯಲ್ಲಿ ಮಂಜೂರ ಮಾಡಲಾಗಿದೆ. ಈಗ ನಮ್ಮ ಮುಂದೆ 1957-58ರ ಆಯವ್ಯಯದ ಮುಂಗಡ ಪತ್ರವನ್ನಿಟ್ಟಿದ್ದಾರೆ. ಈಗ ಇರುವುದು ಖೋತಾ ಬಡ್ಜೆಟ್ಟು ಸರ್ವತೋಮುಖವಾದ ಅಭಿವೃದ್ಧಿಗಾಗಿ ಇರುವ ವಿಷಯಗಳೇ ಬಹಳ ಪ್ರಮುಖವಾದುವುಗಳಾಗಿವೆ. ಇವೆಲ್ಲವುಗಳಲ್ಲಿ ಪ್ರಮುಖವಾದುದೆಂದರೆ ಎಂಜಿನಿಯರಿಂಗ್ ಇಲಾಖೆ. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದು, ರಸ್ತೆಗಳ ನಿರ್ಮಾಣ ಮಾಡುವುದು ಮುಂತಾದ, ಬೇಕಾದಷ್ಟು ಕೆಲಸಕಾರ್ಯಗಳು ಇನ್ನೂ ಇವೆ. ಕಳೆದ ನಾಲ್ಕೈದು ವರ್ಷಗಳಲ್ಲಿ, ಮೂಡಿಗೆರೆಯಲ್ಲಿ ಮಾಡತಕ್ಕಂತ ಕೆಲಸ ಕಾರ್ಯಗಳು ಇನ್ನೂ ಪೂರ್ತಿಯಾಗಿ ಆಗಿಲ್ಲ. ಮೂಡಿಗೆರೆ ಹಾಯಸ್ಕೂಲಿಗೆ 25 ಸಾವಿರ ರೂಪಾಯಿ ಗ್ರಾಂಟು ಕೊಟ್ಟಿದ್ದಾರೆ. ಆದರೆ ಇನ್ನೂ ಬಿಲ್ಡಿಂಗ್ ಆಗಿಲ್ಲ. ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟದಲ್ಲಿ ಕೆಲಸ ಕಾರ್ಯಗಳ ಬಗ್ಗೆ ಜುಗುಪ್ಸೆ ಮನೋಭಾವ ಬಂದಿದೆ. ಹಾಗೆ ಮಾಡದೆ ತೀವ್ರವಾಗಿ ಈ ಕೆಲಸವು ನಡೆಯುವಂತೆ ಆಗಬೇಕು. ಲಕ್ಕವಳ್ಳಿ ಅಣೆಕಟ್ಟಿನ ಕೆಲಸದ ಬಗ್ಗೆ ಸರ್ಕಾರಕ್ಕೆ ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದೇವೆ. ಪ್ಲ್ಯಾನ್ ಎಸ್ಟಿಮೇಟು ಎಲ್ಲ ಮಂಜೂರ ಆಗಿದ್ದರೂ ನೀರಾವರಿ ಕೆಲಸ ಆಗಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ರೈತರ ಸ್ಥಿತಿಯು ಬಹಳ ಚಿಂತಾಜನಕವಾಗಿದೆ. ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವದಕ್ಕೋಸ್ಕರ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೀವ್ರವಾಗಿ ಮಾಡಬೇಕು. ರೈತರ ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರುವುದು ನೀರಾವರಿಯ ಸೌಕರ್ಯ. ನೀರಾವರಿಯ ಸೌಕರ್ಯವನ್ನು ಆದಷ್ಟು ಜಾಗ್ರತೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಈಗ ರೈತರ ಸ್ಥಿತಿ ಬಹಳ ಚಿಂತಾಜನಕವಾಗಿದೆ, ಅದನ್ನು ಆದಷ್ಟು ಮೇಲಕ್ಕೆ ತರುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಕೆರೆಯ ಕೆಳಗಿನ ಜಮೀನುಗಳಿಗೆ ಅತ್ಯಲ್ಪ ಕಾಲ ನೀರು ಒದಗುತ್ತಾ ಇದೆ. ಕೆರೆಯನ್ನು ದುರಸ್ತು ಮಾಡಿ ನೀರು ಸದಾ ಕಾಲದಲ್ಲಿಯೂ ದೊರೆಯುವಂತೆ ಏರ್ಪಾಡು ಮಾಡಬೇಕು. ರೈತರ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸಬೇಕಾದರೆ ರೈತರಿಗೆ ಬೇಕಾದ ಅಭಿವೃದ್ಧಿ ಕೆಲಸಕಾರ್ಯಗಳನ್ನು ಇನ್ನೂ ತ್ವರಿತವಾಗಿ ಮಾಡಬೇಕು.

ಇನ್ನು ಮಲೆನಾಡಿನ ಅಭಿವೃದ್ಧಿ ವಿಷಯ. ನಮ್ಮ ರಾಜ್ಯಕ್ಕೆ ಮಲೆನಾಡಿನ ಅನೇಕ ಭಾಗಗಳು ಬಂದು ಸೇರಿರುವುದರಿಂದ ನಮ್ಮ ರಾಜ್ಯವು ಅರಣ್ಯ ಸಂಪತ್ತಿನಿಂದ ಸಮೃದ್ಧಿಯಾಗಿದೆ. ಮಲೆನಾಡಿನಲ್ಲಿ ಸಿಕ್ಕದೇ ಇರತಕ್ಕಂಥ ಸಾಮಾನು ಯಾವುದೂ ಇಲ್ಲ, ನಮ್ಮಲ್ಲಿ ಬೆಳೆಯದೆ ಇದ್ದಂಥ ಯಾವ ಸಾಮಾನೂ ಇಲ್ಲ. ವ್ಯವಸಾಯ ಮಾಡುವುದಕ್ಕೆ ಬೇಕಾದಷ್ಟು ಭೂಮಿ ಇದೆ. ಆದರೆ ಅಂಥ ಸಂಪತ್ತನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಎಷ್ಟೋ ಅನಾನುಕೂಲಗಳು ಇವೆ. ಮುಖ್ಯವಾಗಿ ಮಲೆನಾಡಿನಲ್ಲಿ ಮಾರ್ಗದ ಸೌಕರ್ಯ ಇಲ್ಲ. ವಿದ್ಯಾಭ್ಯಾಸದ ಸೌಕರ್ಯವೂ ಬಹಳ ಕಡಮೆಯಾಗಿದೆ. ಮಲೆನಾಡಿನ ಜನಸಂಖ್ಯೆಯೂ ಕೂಡ ಬಹಳ ಕಡಮೆ, ಬಹಳ ವರ್ಷಗಳಿಂದ ಇದ್ದವರೇ ಇರುತ್ತಾರೆ ವಿನಾ ಬೇರೆ ಕಡೆಯಿಂದ ಇಲ್ಲಿಗೆ ವಲಸೆ ಬರುವುದಿಲ್ಲ. ಮರುಭೂಮಿಗಾದರೂ ಹೋಗಿ ತಮ್ಮ ಜೀವನೋಪಾಯವನ್ನು ಮಾಡಿಕೊಳ್ಳುತ್ತಾರೆಯೇ ವಿನಾ ನಮ್ಮ ಮಲೆನಾಡಿಗೆ ಬಂದು ಅಲ್ಲಿಯ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಜನರು ಮನಸ್ಸು ಮಾಡುವುದಿಲ್ಲ. ಸರಕಾರದವರು ಮಲೆನಾಡಿನ ಅಭಿವೃದ್ಧಿಗಾಗಿ ಒಂದು ವೇಳೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅದರಿಂದ ಮಲೆನಾಡ ಉದ್ಧಾರವಾಗುವುದಿಲ್ಲವೆಂದು ಹೇಳಬೇಕಾಗಿದೆ ಮಲೆನಾಡು ಉದ್ಧಾರವಾಗಬೇಕಾದರೆ ಮಲೆನಾಡಿನ ಎಲ್ಲ ಭಾಗಗಳನ್ನೂ ಸೇರಿಸಿ ಅದನ್ನು ಒಂದು ಯೂನಿಟ್ಟಾಗಿ ಪರಿಗಣಿಸಿ ಅಲ್ಲಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಚಿಕ್ಕಮಗಳೂರು ಮಲೆನಾಡಿಗೆ ಸೇರಿದ ಭಾಗ. ಅಲ್ಲಿ ಕುಡಿಯುವ ನೀರಿನ ಮತ್ತು ರೈಲ್ವೆ ಸೌಕರ್ಯದ ಅನುಕೂಲತೆ ಇಲ್ಲ. ಮೈಸೂರಿನ ಹಿಂದಿನ ಸರ್ಕಾರವು ಚಿಕ್ಕಮಗಳೂರಿಗೆ ರೈಲ್ವೆ ಲೈನ್ ಹಾಕಬೇಕೆಂದು ಎಷ್ಟೋ ಪ್ರಯತ್ನಪಟ್ಟರು. ಇದುವರೆಗೂ ನಮಗೆ ಅಂತಹ ರೈಲ್ವೆ ಸೌಕರ್ಯವನ್ನು ಒದಗಿಸುವದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈಗಲಾದರೂ ಕೂಡ ನಮ್ಮ ಸರ್ಕಾರದವರು ಚಿಕ್ಕಮಗಳೂರು- ಮಂಗಳೂರು ರೈಲ್ವೆ ಮಾರ್ಗವನ್ನು ಕೂಡಲೇ ಹಾಕಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು. ಒಂದು ಮಲೆನಾಡು ಕಮಿಟಿ

ಯನ್ನು ಏರ್ಪಾಡು ಮಾಡಿದ್ದಾರೆ. ಆ ಕಮಿಟಿಯವರು ಮಲೆನಾಡಿನ ಅಭಿವೃದ್ಧಿ ಕೆಲಸಕಾರ್ಯಗಳನ್ನು ಆದಷ್ಟು ಜಾಗ್ರತೆ ಕೈಗೊಂಡು ತನ್ಮೂಲಕ ಮಲೆನಾಡಿಗೆ ಅನುಕೂಲ ಮಾಡಿಕೊಡುತ್ತಾರೆಂದು ನಂಬಿದ್ದೇನೆ.

ಈ ಮಲೆನಾಡಿನಲ್ಲಿ ಜನಗಳು ಮಲೇರಿಯಾ ರೋಗಕ್ಕೆ ತುತ್ತಾಗಿ ನರಳುತ್ತಿದ್ದಾರೆ. ಈ ಮಲೇರಿಯಾ ರೋಗ ನಿವಾರಣೆಗಾಗಿ ಸರ್ಕಾರದವರೇನೋ ಅನೇಕ ಉಪಯೋಗವಾದ ಕಾರ್ಯಗಳನ್ನು ಮಾಡಿದ್ದಾರೆ. ಆದರೆ ಮಲೆನಾಡಿನ ಕಡೆ ಹೆಚ್ಚು ಆಸ್ಪತ್ರೆಗಳನ್ನು ಕೊಟ್ಟಿಲ್ಲ. ಅಲ್ಲದೆ ಈ ಮಲೆನಾಡಿನ ಗ್ರಾಮಾಂತರ ಪ್ರದೇಶಗಳಲ್ಲಿ ಈ ಮಲೇರಿಯ ರೋಗದಿಂದ ನರಳುವವರೇ ಹೆಚ್ಚು. ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಎಲ್. ಸಿದ್ದಪ್ಪನವರು ಕೂಡ ಒಂದು ಬಾರಿ ಭೇಟಿ ಕೊಟ್ಟು ಇಲ್ಲಿಯ ಸ್ಥಿತಿಗತಿಗಳನ್ನು ಚೆನ್ನಾಗಿ ನೋಡಿಕೊಂಡು ಬಂದಿದ್ದರು. ಇಲ್ಲಿಯ ಆಸ್ಪತ್ರೆಗಳ ಸಂಖ್ಯೆ ಬಹಳ ಕಡಿಮೆ ಆದ್ದರಿಂದ ಇಲ್ಲಿಯ ಜನಗಳಿಗೆ ಆಸ್ಪತ್ರೆಗಳನ್ನ ಹೆಚ್ಚಿಗೆ ಕೊಡಬೇಕು. ಇಲ್ಲದಿದ್ದರೆ ಜನಗಳಿಗೆ ಬಹು ಕಷ್ಟವಾಗುತ್ತದೆ. ನನಗೆ ಬೇಕಾಗಿರುವುದು ಸರ್ಕಾರದ ಗಮನ. ಇಂತಹ ಹಿಂದೆ ಇರುವ ಮಲೆನಾಡಿನ ಕಡೆಗೆ ಹೆಚ್ಚಿನ ಗಮನ ಕೊಟ್ಟು ಮಲೆನಾಡು ಮುಂದುವರಿಯುವಂತೆ ಮಾಡಿದರೆ ಜನತೆಗೆ ಸಹಾಯವಾಗುತ್ತದೆ. ಇವೊತ್ತಿನ ದಿವಸ ನೋಡಿದರೆ ಮಲೆನಾಡಿನಲ್ಲಿ ಕೆಲಸ ಮಾಡಲು ಅಲ್ಲಿಗೆ ಬಂದು ವಾಸಿಸಲು ಯಾರೂ ಇಷ್ಟಪಡುವುದಿಲ್ಲ. ಏಕೆಂದರೆ ಅಲ್ಲಿ ಜನಗಳಿಗೆ ಸಾಕಷ್ಟು ಸೌಲಭ್ಯಗಳು ದೊರೆಯುತ್ತಿಲ್ಲ. ಆದ್ದರಿಂದ ಅವರು ಈ ಮಲೆನಾಡಿಗೆ ಬಂದು ಕಷ್ಟ ಪಡಲು ಇಷ್ಟಪಡುವುದಿಲ್ಲ. ಆದುದರಿಂದ ನಮ್ಮ ಈ ಮಲೆನಾಡಿನ ಹಳ್ಳಿಯ ಜನಗಳಿಗೆ ಸರ್ಕಾರ ಮುಂದೆ ಬಂದು ಸಹಾಯ ಮಾಡುವುದು ಅಗತ್ಯ ಮತ್ತು ಈ ರೀತಿಯಾದ ಸರ್ವತೋಮುಖವಾದ ಕೆಲಸ ಮಾಡುವುದಕ್ಕೆ ಸರ್ಕಾರ ಈ ಪ್ರಾಂತದಲ್ಲಿ ಸರಿಯಾದ ಸ್ಥಳದಲ್ಲಿ ಒಂದ್ ಪೇಪರ್ ಮಿಲ್ಲನ್ನು ತೆರೆದರೆ ಇದರಿಂದ ಎಷ್ಟೋ ಜನಗಳಿಗೆ ಕೂಲಿಯೂ ಸಿಕ್ಕುತ್ತದೆ. ಬಡ ಜನಗಳಿಗೂ ಇದರಿಂದ ಸಹಾಯವಾಗುತ್ತದೆ. ಆದ್ದರಿಂದ ಸರ್ಕಾರವನ್ನು ಪ್ರಾರ್ಥನೆ ಮಾಡುವುದು ಇಷ್ಟೇ. ಇಂತಹ ಉಪಯೋಗಕರವಾದ ಕಾರ್ಯಗಳನ್ನು ಮಾಡಿ ಜನಗಳಿಗೆ ಸಹಾಯ ಮಾಡಬೇಕು.

ನಮ್ಮ ಈ ಮಲೆನಾಡಿನಲ್ಲಿ ಸುಮಾರು ನಲವತ್ತು ಸಾವಿರ ಎಕರೆ ಜಮೀನು ಇದೆ. ಆದರೆ ಇಲ್ಲಿಯ ಜನಗಳು ಮಲೇರಿಯಾ ರೋಗಕ್ಕೆ ಬಲಿಯಾಗಿ ಹೋಗಿ ಈ ನಲವತ್ತು ಸಾವಿರ ಎಕರೆಗಳೂ ಹಾಳಾಗಿ ಹೋಗುತ್ತಿದೆ. ಸರಿಯಾಗಿ ನಲವತ್ತು ಎಕರೆಯಲ್ಲ ವ್ಯವಸಾಯ ಮಾಡುವುದು ಕಷ್ಟವಾಗಿದೆ. ಜನಗಳಿಗೆ ಸಹಕಾರ ದೊರೆತರೆ ಈ ವ್ಯವಸಾಯ ಕ್ರಮವನ್ನು ಉತ್ತಮಪಡಿಸಬಹುದು ಮತ್ತು ಅದರಿಂದ ದೇಶಕ್ಕೆ ಉಪಯೋಗವೂ ಆಗುತ್ತದೆ. ಶಾಸನ ಸಭೆಯಲ್ಲಿ ಎಷ್ಟೋ ಬಾರಿ ಈ ರೀತಿಯಾಗಿ ನಮ್ಮ ಹಳ್ಳಿಗಳ ಕಡೆ ಆರ್ಥಿಕ ಸಹಾಯವನ್ನು ಕೊಟ್ಟು ಮುಂದಕ್ಕೆ ತರಬೇಕೆಂದು ಕೋರಿದ್ದರೂ ಇಲ್ಲಿಯವರೆಗೂ ಏನೂ ನಡೆದಿಲ್ಲ. ಸರ್ಕಾರದ ಗಮನ ಬೆಂಗಳೂರು ಮುಂತಾದ ಪಟ್ಟಣಗಳ ಕಡೆಗೇ ಹೆಚ್ಚಾದರೆ ಹಳ್ಳಿಗಳಲ್ಲಿರುವ ಜನಗಳು ಮುಂದಕ್ಕೆ ಬರುವುದು ಹೇಗೆ? ಆದಕಾರಣ ಇವನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಇಂತಹ ಜನೋಪಯುಕ್ತವಾದ ಕೆಲಸಗಳನ್ನು ಮಾಡಿ, ಜನಗಳ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಿ ಸಹಾಯ ಮಾಡಬೇಕು. ಮಲೆನಾಡನ್ನು ಒಂದು ಬೇರೆಕ್ಷೇತ್ರವೆಂಬುದಾಗಿ ಪರಿಗಣಿಸಿ ಸರ್ವತೋಮುಖವಾಗಿ ಅಭಿವೃದ್ಧಿಗೆ ತರಲು ಸಹಾಯ ಮಾಡಬೇಕು.

ಇದಲ್ಲದೆ ನಮ್ಮ ಚಿಕ್ಕಮಗಳೂರು ಜಿಲ್ಲೆ ಕಾಫಿ ಬೆಳೆಯುತ್ತಿದೆ. ಇದರ ಉತ್ಪನ್ನವನ್ನು ಹೆಚ್ಚಿಸಲು ಸರ್ಕಾರದವರು ಕಾಫೀ ಬೋರ್ಡನ್ನು ಸ್ಥಾಪಿಸಿದ್ದಾರೆ,, ಇದರಿಂದ ಸಾಮಾನ್ಯ ಜನತೆಗೂ ತುಂಬ ತೊಂದರೆಯಾಗುತ್ತಿದೆ. ಇದರ ಕಡೆ ಗಮನ ಕೊಡಬೇಕು. ಈಗ ಈ ಕಾಫೀ ಬೋರ್ಡಿಗೆ ಸರ್ಕಾರದವರು ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ಅಲ್ಲದೆ ಕಾಫಿ ಬೆಳೆಯುವ ವ್ಯವಸಾಯಗಾರರ ಮೇಲೆ ಇನ್ ಕಮ್‌ಟ್ಯಾಕ್ಸ್ ಹಾಕಿದ್ದಾರೆ. ಅಲ್ಲದೆ ಈ ಕಾಫಿಯ ಮೇಲೆ ಬೇಕಾದಷ್ಟು ತೆರಿಗೆಗಳನ್ನೂ ಸರ್ಕಾರದವರು ಹಾಕಿದ್ದಾರೆ. ಇಂತಹ ಉತ್ಕೃಷ್ಟವಾದ ಕಾಫೀ ಬೆಳೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಅಲ್ಲದೆ ಈ ಕಾಫೀ ಬೋರ್ಡಿನಲ್ಲಿರುವ ಕೆಲಸಗಾರರಿಗೆ ಅವರ ಕೆಲಸಕ್ಕನುಗುಣವಾಗಿ ಸಂಬಳ ದೊರೆಯುತ್ತಿಲ್ಲವೆಂದು ತಿಳಿಯಿತು. ಹಾಗೆ ಮಾಡದೆ ಅಲ್ಲಿರುವ ಕೆಲಸಗಾರರ ಸ್ಥಿತಿಯನ್ನು ಉತ್ತಮಪಡಿಸಿ ಅನುಕೂಲ ಮಾಡಿಕೊಡಬೇಕು. ಆದುದರಿಂದ ಜನಗಳಿಗೆ ಅನುಕೂಲವಾದ ಮತ್ತು ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡತಕ್ಕ ಇಂತಹ ಉತ್ತಮವಾದ ಕಾಫೀ ಬೆಳೆಗೆ ಪ್ರೋತ್ಸಾಹ ನೀಡಿದರೆ ದೇಶಕ್ಕೆ ಅನುಕೂಲವಾಗುತ್ತದೆ. ಮೈಸೂರು ಸರ್ಕಾರದವರು ಸಹ ಕಾಫಿ ಬೆಳೆಗೆ ಹೆಚ್ಚಿನ ಬೆಂಬಲ ಕೊಡಬೇಕೆಂದು ಯೋಚನೆ ಮಾಡಿದ್ದಾರೆ. 40 ಸಾವಿರ ಟನ್ನಿನಷ್ಟು ಹೆಚ್ಚಿನ ಬೆಳೆ ಬೆಳೆಯಲು ಅನುಕೂಲವಾಗುವಂತೆ ಸರ್ಕಾರ ಸಹಾಯ ಮಾಡಿದರೆ ಈ ಕಾರ್ಯ ಅಭಿವೃದ್ಧಿಗೆ ಬರುತ್ತದೆ.

ಸರ್ಕಾರದವರು ಮಲೆನಾಡಿನ ಜನಗಳಿಗೆ ಅನುಕೂಲವಾಗುವಂತೆ ಅಲ್ಲಲ್ಲಿ ಹೆಚ್ಚಿಗೆ ಆಸ್ಪತ್ರೆಗಳನ್ನು ತೆರೆಯಬೇಕು. ಆದರೆ ಈಗ ಇರುವ ಕೆಲವು ಆಸ್ಪತ್ರೆಗಳಲ್ಲಿ ನೋಡಿದರೆ ಯಾವುದಾದರೂ ಒಂದು ಕಾಯಿಲೆಯಿಂದ ನರಳುತ್ತಿರುವ ರೋಗಿಗಳನ್ನು ಪರೀಕ್ಷಿಸಲು ತಜ್ಞರಾದ ಡಾಕ್ಟರುಗಳು ಇರುವುದೇ ಕಷ್ಟವಾಗಿದೆ. ಈ ಮಲೆನಾಡಿನ ಹಳ್ಳಿಯ ಕಡೆ ಅವರು ಬಂದು ವಾಸಿಸಲು ಇಷ್ಟಪಡುವುದಿಲ್ಲ. ಹೀಗಾಗಿ ಹಳ್ಳಿಯ ಜನರಿಗೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ ಹೀಗೆ ಉತ್ತಮರಾದ ತಜ್ಞರಾದ ಡಾಕ್ಟರುಗಳ ಕೊರತೆಯಿರುವಾಗ ಸರಿಯಾದ ಯೋಗ್ಯತೆ ಮತ್ತು ಅರ್ಹತೆಯುಳ್ಳವರನ್ನಾರಿಸಿ ಪರದೇಶಕ್ಕೆ ಕಳುಹಿಸಿ ಅವರಿಗೆ ಉಚ್ಚಶಿಕ್ಷಣವನ್ನು ಕೊಡಿಸಿ ಅವರಿಂದ ಜನಗಳಿಗೆ ಉಪಯೋಗವಾಗುವಂತೆ ಸರ್ಕಾರ ಪ್ರಯತ್ನಿಸಬೇಕು. ಅಲ್ಲದೆ ತಜ್ಞರಾದ ಡಾಕ್ಟರುಗಳನ್ನು ತರಬೇತು ಮಾಡಿಸಿ ನಮ್ಮ ಮಲೆನಾಡಿನ ಪ್ರದೇಶಗಳಿಗೆ ಕಳುಹಿಸಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಇಲ್ಲಿ ಸರ್ಕಾರದವರಿಗೆ ತಿಳಿಸ ಬಯಸುತ್ತೇನೆ.

ಮತ್ತೊಂದು ಪ್ರಶ್ನೆ ಏನೆಂದರೆ ನಮ್ಮ ನೂತನ ಮೈಸೂರು ಪ್ರಾಂತ ರಚನೆಯಾದ ಅನಂತರ ಹೊರಗಿನಿಂದ ಬಂದ ನೌಕರರಿಗೂ ಇಲ್ಲಿದ್ದ ಹಳೆಯ ಮೈಸೂರಿನ ನೌಕರರಿಗೂ ಸರ್ಕಾರದವರು ಈಗೇನೋ ಒಂದು ರೀತಿಯ ಸಂಬಳ ಕೊಟ್ಟಿದ್ದಾರೆ. ಆದರೆ ಈ ವಿಷಯದಲ್ಲಿ ಈಗ ನಾನು ಇನ್ನೇನನ್ನೂ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇನ್ನೂ ಅಧಿಕಾರಿಗಳ ಸೀನಿಯಾರಿಟಿ ಪ್ರಶ್ನೆ ಹಾಗೆಯೇ ಉಳಿದಿದೆ ಎಂದು ಕೇಳಿದೆ. ಈ ಸೀನಿಯಾರಿಟಿ ವಿಷಯದಲ್ಲಿ ಒಂದುವೇಳೆ ನ್ಯಾಯವಾಗಿದ್ದು ಸರಿಯಾಗಿದ್ದರೆ ಅವನು ಯಾವ ಜಾತಿಯವನಾಗಲಿ, ಅವನಲ್ಲಿ ತಕ್ಕ ಯೋಗ್ಯತೆ ಅರ್ಹತೆಗಳಿದ್ದರೆ ಅದು ಅವನಿಗೆ ದೊರಕುವಂತೆ ಮಾಡ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಬೇಕು. ಅದಕ್ಕೆ ಯಾರೂ ಅಡ್ಡಿ ಬರಬಾರದು. ನಾನು ಕೇಳಿದ್ದೇನೆ, ಈ ವಿಷಯದಲ್ಲಿ ಸರಿಯಾದ ನೀತಿಯನ್ನು ಸರ್ಕಾರ್ರವರು ಅನುಸರಿಸುತ್ತಿಲ್ಲವೆಂದು. ಈ ರೀತಿ ಸರಿಪಡಿಸದೇ ಹೋದರೆ ಅದು ಚೆನ್ನಾಗಿರುವುದಿಲ್ಲ. ಅಧಿಕಾರಿಗಳ ಮನಸ್ಸಿನಲ್ಲಿ, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ, ರೆವಿನ್ಯೂ ಇಲಾಖೆಯಲ್ಲಿ ಎಜುಕೇಷನ್ ಇಲಾಖೆಯಲ್ಲಿ ಸೆಕ್ರೆಟೇರಿಯಟ್ಟಿನಲ್ಲಿರುವ ಆಫೀಸುಗಳಲ್ಲಿ ಅನ್ಯಾಯವನ್ನು ಮಾಡಿದ್ದಾರೆಂಬ ಒಂದು ಮನೋಭಾವನೆ ಬರುವುದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಅದಕ್ಕಾಗಿ ಇವೆಲ್ಲವನ್ನೂ ನೋಡಿ ಸರಿಯಾಗಿ ಈ ಪ್ರಶ್ನೆಯನ್ನು ಬಗೆಹರಿಸಬೇಕು.

ಇನ್ನು ಡಿಸ್ಟ್ರಿಕ್ಟು ಬೋರ್ಡುಗಳ ವಿಷಯವಾಗಿ ಸ್ವಲ್ಪ ಹೇಳಬೇಕು. ನಾನೂ ಜಿಲ್ಲಾಬೋರ್ಡಿನ ಸದಸ್ಯೆಯಾಗಿರುವುದರಿಂದ ಸರ್ಕಾರದ ಗಮನಕ್ಕೆ ಕೆಲವಂಶಗಳನ್ನು ತಿಳಿಸಬೇಕಾಗಿದೆ. ಈ ಜಿಲ್ಲಾ ಬೋರ್ಡುಗಳಿಂದ ರೈತನಿಗೇನೂ ಅನುಕೂಲವಾಗುತ್ತಿಲ್ಲ. ಈ ಬೋರ್ಡುಗಳಲ್ಲಿ ಸುಮ್ಮನೆ ಸಿಬ್ಬಂದಿಗಾಗಿ ಬೇಕಾದಷ್ಟು ಹಣ ಖರ್ಚಾಗುತ್ತದೆ. ಕೆಲಸವಿಲ್ಲ, ಕಾರ್‍ಯವಿಲ್ಲ ಎಷ್ಟೋ ಕಡೆಗಳಲ್ಲಿ ಹಣ ದುರ್ವಿನಿಯೋಗವಾಗುತ್ತಿದೆ. ವಿದ್ಯಾಭ್ಯಾಸದ ವಿಷಯದಲ್ಲಿ, ಈ ಡಿಸ್ಟ್ರಿಕ್ಟು ಬೋರ್ಡುಗಳು ಕೆಲವು ಹೈಸ್ಕೂಲುಗಳನ್ನು ಸರ್ಕಾರದಿಂದ ಗ್ರಾಂಟು ಪಡೆದು ತಮ್ಮವಶಕ್ಕೆ ತೆಗೆದುಕೊಂಡಿವೆ. ಅಲ್ಲಿರುವ ಉಪಾಧ್ಯಾಯರುಗಳಿಗೆ, ಸಿಬ್ಬಂದಿಗೆ ಸಾಕಷ್ಟು ಹಣವಿಲ್ಲ. ಅವರನ್ನು ದೇವರೇ ಕಾಪಾಡಬೇಕು. ಈಕಡೆ ಸರ್ಕಾರದಿಂದಲೂ ಸಹಾಯ ದೊರಕುವಹಾಗಿಲ್ಲ. ಬೋರ್ಡಿನಿಂದಲೂ ದೊರೆಯುವಂತಿಲ್ಲ. ಮಧ್ಯೆ ತ್ರಿಶಂಕುವಿನಂತಾಗಿದೆ ಅವರ ಪರಿಸ್ಥಿತಿ. ಇಂತಹ ಸಂಸ್ಥೆಗಳಲ್ಲಿ ಸೇವೆ ಮಾಡುವವರಿಗೆ ಸರ್ಕಾರ ಸಹಾಯಮಾಡಿ ಇಂತಹ ತೊಂದರೆಗಳನ್ನೆಲ್ಲ ಸರಿಪಡಿಸಬೇಕು. ಈ ರೀತಿ ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ.

ಮಾನ್ಯ ಅಧ್ಯಕ್ಷರೇ, ಮತ್ತೆ ಈಗ ಕೇಂದ್ರಸರ್ಕಾರ ಮತ್ತು ನಮ್ಮಸರ್ಕಾರ ಎರಡೂ ಬೇಕಾದಷ್ಟು ಸಲಹೆಗಳನ್ನಿತ್ತು ಸಮಾಜ ಕಲ್ಯಾಣಸೇವಾ ಕೇಂದ್ರವೆಂಬ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ಆದರೆ ಇಂತಹ ಕಾರ್‍ಯ ಇಲ್ಲಿರುವವರಿಗೆ ಅನುಕೂಲವಾಗಿದೆ. ನಮ್ಮ ಕಡೆಗಳಲ್ಲಿ ಈ ರೀತಿಯ ಕ್ರಮಗಳನ್ನು ಇನ್ನೂ ಕೈಗೊಂಡಿಲ್ಲ. ಈ ರೀತಿ ಕಮಿಟಿಗಳನ್ನು ಮಾಡಿ ನಮ್ಮ ಜಿಲ್ಲೆಯ ಪರವಾಗಿ ಯಾವರೀತಿ ಕೆಲಸಗಳೂ ನಡೆದಿಲ್ಲ ಎಂದು ಈ ಸಭೆಯ ಮುಂದೆ ಹೇಳಬೇಕಾಗಿದೆ. ನನ್ನನ್ನು ಮಹಿಳೆಯರ ಪರವಾಗಿ ಆ ಕಮಿಟಿಗೆ ಆರಿಸಿದರೂಕೂಡ ನಾನು ಒಪ್ಪಿಕೊಳ್ಳಲಿಲ್ಲ ; ಇಂತಹ ಸಂಸ್ಥೆಗಳಿಂದ ದೀನ ಜನರಿಗೆ ಮತ್ತು ಅನಾಥ ಮಕ್ಕಳಿಗೆ ಸಹಾಯವಾಗುವುದು ಅಗತ್ಯ. ನಿಜವಾಗಿ ಸಮಾಜದಲ್ಲಿ ಜನ ಜೀವನದ ಮಟ್ಟ ಉತ್ತಮವಾಗಬೇಕು. ಹಾಗೆ ಕೆಲವುಕಡೆ ಈ ಸಂಸ್ಥೆಯ ಬೋರ್ಡು ಚೆನ್ನಾಗಿ ಕೆಲಸಮಾಡುತ್ತಿದೆ. ಆದರೆ ಹಳ್ಳಿಗಳ ಕಡೆ ಎಷ್ಟರಮಟ್ಟಿಗೆ ಈ ಬೋರ್ಡುಗಳು ಕೆಲಸ ಮಾಡುತ್ತಾ ಬಂದಿವೆ ಎಂದರೆ ಅದು ಒಪ್ಪುವಂತಹದಲ್ಲ. ಹಳ್ಳಿಗಳ ಕಡೆ ಮುಂದುವರಿಯಲು ಸರ್ಕಾರವಾಗಲಿ ಬೋರ್ಡಾಗಲಿ ಅನುಕೂಲ ಮಾಡುತ್ತಿಲ್ಲ. ಬಡವಿದ್ಯಾರ್ಥಿಗಳಿಗೆ ಈ ಬೋರ್ಡಿನಿಂದ ಸಹಾಯ ಸಿಗುತ್ತಿಲ್ಲ. ಬಡಹುಡುಗನು ಮೆರಿಟ್ ಮೂಲಕ ಅರ್ಹನಾಗಿದ್ದರೂ ಕೂಡ ಅವನಿಗೆ ಸಹಾಯ ಸಿಕ್ಕುವುದಿಲ್ಲ. ಈಗಿರತಕ್ಕಂತೆ ಬಡ ಹುಡುಗರಿಗೆ ಸಹಾಯವಾಗುವಂತೆ ಸ್ಕಾಲರ್‌ಷಿಪ್ಪುಗಳನ್ನು ಕೊಡುತ್ತಿದ್ದಾರೆ. ಅದು ಏನೇನೂ ಸಾಲದು. ಉದಾಹರಣೆಗೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಬಡವರಾದ ಯೋಗ್ಯರಾದ ಎಂಟು-ಹತ್ತು ಮಂದಿ ಗಂಡು ಹುಡುಗರು, ಹುಡುಗಿಯರಿರುವ ಒಂದು ಶಾಲೆಗೆ ನಾಲ್ಕು ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟರೆ ಅದನ್ನು ಹಂಚುವ ಬಗೆಯಾದರೂ ಹೇಗೆ ? ಎಲ್ಲ ಅರ್ಹತೆಯುಳ್ಳ ಪ್ರತಿಯೊಬ್ಬ ವಿದ್ಯಾರ್ಥಿಗೂ ಇದರಿಂದ ಸಹಾಯವಾಗಬೇಕು. ಇದನ್ನು ಕೇಂದ್ರ ಸರ್ಕಾರದವರೂ ನಮ್ಮ ಸರ್ಕಾರದವರೂ ಯೋಚಿಸಿ ಹಳ್ಳಿಗಳ ಜನಜೀವನವನ್ನು ಉತ್ತಮಪಡಿಸಿದರೆ ಅನುಕೂಲವಾಗುತ್ತದೆ. ಸರ್ಕಾರ ಈ ದಿನ ತಂದಿರುವ ಬಡ್ಜೆಟ್ಟನ್ನು ಅನುಮೋದಿಸುತ್ತೇನೆ.

ಮಾನ್ಯ ಅಧ್ಯಕ್ಷರು ನನಗೆ ಕೆಲವು ನಿಮಿಷಗಳ ಕಾಲ ಭಾಷಣಮಾಡಲು ಅವಕಾಶ ಕೊಟ್ಟಿದಕ್ಕಾಗಿ ತುಂಬ ವಂದನೆಗಳು.

Mr. SPEAKER.—There is a slight change in the programme. Yesterday, we had decided that the discussions would end to-day. After discussing with the Leader of the House, I came to the conclusion that the discussion might continue till tomorrow and we can take only half the time and the other half time would be taken for non-official business. Then, for the next day, we will take up the Appropriation Bill and after finishing the Appropriation Bill, we will go to the Non-official Bill. Day after tomorrow would be the last day.

ಶ್ರೀ ಎಚ್ ಕೆ. ವೀರಣ್ಣಗೌಡ.—ಲಂಚ್ ಟೈಮಿನೊಳಗೆ ಈ ಬಡ್ಜೆಟ್ಟಿನ ಚರ್ಚೆಯನ್ನು ಮುಗಿಸಬೇಕೆಂದಿದ್ದೀರಿ ಎಂದು ತೋರುತ್ತದೆ.

ಅಧ್ಯಕ್ಷರು.—ವೇಳೆಯಾದಂತೆಲ್ಲ ಸದಸ್ಯರು ಹೆಚ್ಚು ಹೆಚ್ಚಾಗಿ ನಿಲ್ಲ ತೊಡಗಿದ್ದಾರೆ. ನಾಳೆ ಮಧ್ಯಾಹ್ನ ಮೂರುಘಂಟೆಗೆ ಬಡ್ಜೆಟ್ ಸಂಬಂಧವಾದ ಚರ್ಚೆಮುಗಿಸಿ Vote on Account ಕೂಡ ತೆಗೆದುಕೊಳ್ಳಬೇಕು ಎಂಬ ಇಚ್ಛೆ ಇದೆ. ಎಲ್ಲ ಸದಸ್ಯರೂ ಈ ಬಗ್ಗೆ ನನ್ನ ಜೊತೆಯಲ್ಲಿ ಸಹಕಾರ ಮಾಡುತ್ತಾರೆಂದು ನಂಬುತ್ತೇನೆ. ಮಾತನಾಡಲೇಬೇಕು ಎನ್ನುವವರು, ಇದುವರೆಗೂ ಯಾರೂ ಹೇಳದೆ ಇರುವುದನ್ನು ಹೇಳಿದರೆ ಆಗಬಹುದು. ಹಾಗಿಲ್ಲದೆ ಒಬ್ಬರು ಹೇಳಿದುದನ್ನೇ ಮತ್ತೆ ಹೇಳುವುದೆಂದರೆ ಅದರಲ್ಲಿ ಅರ್ಥವಿಲ್ಲ. ಅದನ್ನು ಹೇಳದೆ ಬಿಟ್ಟರೂ ಏನೂ ಆಗುವುದಿಲ್ಲ. ಇದನ್ನು ತಿಳಿದುಕೊಂಡು ಮಾನ್ಯ ಸದಸ್ಯರು ದಯವಿಟ್ಟು ಬೇಗ ಮುಗಿಸಿದರೆ ಅನುಕೂಲ. ಸರಕಾರದವರಿಗೆ ಉತ್ತರ ಕೊಡಲಿಕ್ಕೆ ಎರಡು ಘಂಟೆಬೇಕು. ಹಣಕಾಸಿನ ಮಂತ್ರಿಗಳಿಗೆ ಒಂದೂವರೆ ಘಂಟೆಬೇಕು. ಮುಖ್ಯ ಮಂತ್ರಿಗಳಿಗೆ ಮತ್ತು ಮರಾಮತ್ತು ಶಾಖೆಯ ಮಂತ್ರಿಗಳಿಗೆ ಕಾಲಬೇಕು. ಹೀಗೆ ಮೂವರು ಮಂತ್ರಿಗಳೂ ಸೇರಿ ಎರಡು ಘಂಟೆಗಿಂತ ಸ್ವಲ್ಪ ಜಾಸ್ತಿ ಸಮಯ ತಗೆದುಕೊಳ್ಳುತ್ತಾರೆಯೋ ಏನೋ ಗೊತ್ತಿಲ್ಲ. ಆದುದರಿಂದ ಮಾನ್ಯ ಸದಸ್ಯರು ಇವೊತ್ತೇ ಈ ವಿಷಯವನ್ನು ಮುಗಿಸಿಬಿಟ್ಟರೆ ಚೆನ್ನಾ

ಗಿರುತ್ತದೆ. ನಾಳೆ ಸರಕಾರದವರು ಉತ್ತರ ಕೊಡುತ್ತಾರೆ.

DEMANDS FOR GRANTS "ON ACCOUNT" FOR 1957-58.

(Debate continued.)

ಅಧ್ಯಕ್ಷರು.—ನಿಮಗೆ ಹತ್ತು ನಿಮಿಷಕಾಲ ಮಾತ್ರ ಸ್ಪೆಷಲ್ಲಾಗಿ ಕೊಟ್ಟಿದ್ದೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ನನ್ನ ಮೇಲೆ ದಯೆಯಿಟ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ತಾವು ಕೊಟ್ಟಷ್ಟು ಕಾಲವನ್ನು ಕೂಡ ತೆಗೆದುಕೊಳ್ಳುವುದಿಲ್ಲ.

ನಾನು ಈ ಬಡ್ಜೆಟ್ಟಿನ ಮೇಲೆ ನಾಲ್ಕು ಮಾತನ್ನಾಡಲು ಇಚ್ಛೆಪಡುತ್ತೇನೆ. ನಾನು ಈ ಬಡ್ಜೆಟ್ಟು ಡಿಮ್ಯಾಂಡನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತೇನೆ. ಕಳೆದ ಐದು ವರ್ಷಗಳಿಂದಲೂ ಈ ಸಭೆಯು ಬಹಳ ಹೆಮ್ಮೆಪಡುವಂಥ ಕೆಲಸಕಾರ್ಯಗಳನ್ನು ಮಾಡಿದೆ. ಅದರಲ್ಲಿಯೂ ನಮ್ಮ ಕಾಲದಲ್ಲಿ ಇನ್ನೂ ಹೆಚ್ಚಿನ ಸಂತೋಷದ ಸಂಗತಿ ಆಗಿದೆಯೆಂದು ನನಗನ್ನಿಸುತ್ತದೆ. ಏಕೆಂದರೆ, ಬಹಳ ದಿವಸಗಳಿಂದಲೂ ನಾವು ಹರಕೆಯನ್ನು ಹೊತ್ತು ಹಾರೈಸಿದಂತಹ ನೂತನ ಕರ್ಣಾಟಕವಾದದ್ದು ನಮ್ಮ ಕಾಲದಲ್ಲಿಯೇ. ಈ ಪ್ರಾಂತನಿರ್ಮಾಣವಾಗುವುದಕ್ಕೆ ಮೊದಲು ಬಾಪೂಜಿಯವರ ಆಶೀರ್ವಾದದಿಂದ ಮತ್ತು ಭಗವಂತನ ಇಚ್ಛೆಯಿಂದ ದೇಶಕ್ಕೆ ಸ್ವಾತಂತ್ರ್ಯ ಬಂತು. ಈ ಮಹತ್ತರವಾದ ಕರ್ಣಾಟಕ ಪ್ರಾಂತ ನಿರ್ಮಾಣ ನಮಗೆ ದೊಡ್ಡ ಕನಸಾಗಿತ್ತು. ಅದು ಈಗ ನನಸಾಯಿತು, ಅದನ್ನು ನಾವು ಅನುಭವಿಸುತ್ತಿರುವುದು ನಮ್ಮ ಸುದೈವವೆಂದು ಹೇಳಬೇಕಾಗಿದೆ ಮತ್ತು ಇವೊತ್ತು ಈ ರೀತಿಯ ನನಸನ್ನು ಕಾಣುತ್ತಾ ಇರುವುದು ನಮ್ಮ ಭಾಗ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ನಾನು ಆ ರೀತಿ ಒಂದು ಸಂತೋಷದಿಂದ ಇಲ್ಲಿ ಮಾತನಾಡಲು ನಿಂತಿದ್ದೇನೆ. ಹಿಂದೆ ನಾವು ಏನು ಒಂದು ಸಂಕುಚಿತ ಭಾವನೆ ಇಟ್ಟುಕೊಂಡಿದ್ದೆವೋ ಅಂತಹ ಒಂದು ಸಂಕುಚಿತ ಭಾವನೆ ಇಲ್ಲದೇಇರುವ ಕಾಲ ಬಂದಿದೆ. ಆದುದರಿಂದ ಇಂದು ಅಂತಹ ಒಂದು ಸಂದರ್ಭಕ್ಕೆ ತಕ್ಕಂತೆ ಅದಕ್ಕೆ ಸರಿಯಾದ ಯೋಜನೆಗಳನ್ನು ನಮ್ಮ ಸರ್ಕಾರದವರು ತಯಾರುಮಾಡುತ್ತಾರೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಬೇಕಾದಷ್ಟು ಭೂಮಿಯಿದೆ. ಭೂಗರ್ಭ ಸಂಪತ್ತು, ಖನಿಜಗಳು ಇವುಗಳಿಂದ ಕೂಡಿ ಸಂಪದ್ಯುಕ್ತವಾಗಿದೆ. ಆದುದರಿಂದ ಇಂತಹ ಕನ್ನಡ ನಾಡನ್ನು ಸಂಪೂರ್ಣವಾಗಿ ಮತ್ತು ಯಶಸ್ವಿಯಾಗಿ ಅಭಿವೃದ್ಧಿಗೆ ತರಬೇಕೆಂಬ ಒಂದು ಆಸೆಯಿಂದ ನಾನು ಇವೊತ್ತು ಇಲ್ಲಿ ಮಾತನಾಡಬೇಕಾಗಿದೆ. ಹಿಂದೆ ನಾವು ಸ್ವಲ್ಪ ಜನರಿದ್ದೆವು, ಈಗ ನಾವೆಲ್ಲ ಸುಮಾರು ಒಟ್ಟು ಎರಡು ಕೋಟಿ ಜನರಿದ್ದೇವೆ. ಸ್ವಲ್ಪವೇನಲ್ಲ. ಗೀತೆಯಲ್ಲಿ ಒಂದು ವಚನವಿದೆ. ಪ್ರತಿಯೊಬ್ಬ ಮಾನವನೂ ಪ್ರತಿಯೊಂದು ಗಿಡದ ಮೂಲಿಕೆಯಿದ್ದ ಹಾಗೆ ಎಂದು ಹೇಳಿದ್ದಾರೆ. ಹೀಗಿರುವುದರಿಂದ ನಮ್ಮ ಈ ಎರಡು ಕೋಟಿ ಜನತೆಯನ್ನು ಅಭಿವೃದ್ಧಿಗೆ ತರಲು ಯತ್ನಿಸಬೇಕು. ಏನೊಂದೂ ಆಲಸ್ಯ ಮಾಡದೆ ಸರ್ಕಾರದವರು ಈ ರೀತಿಯ ಒಂದು ಸಾಹಸದ ಕಾರ್ಯವನ್ನು ಮಾಡಬೇಕೆಂದು ಕೋರುತ್ತೇನೆ. ಒಂದು ದೇಶದ ಆಡಳಿತವನ್ನು ಸುಭದ್ರವಾದ ತಳಹದಿಯ ಮೇಲೆ ಕಟ್ಟುವುದಕ್ಕೆ, ಸರಿಯಾದ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಜನತೆಗೆ ಅನುಕೂಲ ಮಾಡಬೇಕು. ನಮಗೆ ಈಗ ಏನು ತೋರುತ್ತದೆಂದರೆ, ನಾವೆಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡರೂ, ಅಭಾವ ದಿನೇದಿನೇ ಹೆಚ್ಚುತ್ತಿದೆಯಲ್ಲದೆ ಕಡಿಮೆಯಾಗುತ್ತಿಲ್ಲ. ನಾವು ಎಷ್ಟೋ ದೊಡ್ಡದೊಡ್ಡ ಯೋಜನೆಗಳನ್ನು ಹಾಕಿದ್ದೇವೆ. ಆದರೂ ಅನ್ನದ ಅಭಾವ, ಮನೆಯ ಅಭಾವ ಕಡಿಮೆಯಾಗಲಿಲ್ಲ ಮತ್ತು ಬಡವರಿಗೆ ಯಾವ ರೀತಿಯಲ್ಲೂ ಹೆಚ್ಚಿನ ಉಪಯೋಗ ದೊರೆಯಲಿಲ್ಲ. ಆದುದರಿಂದ ನಮ್ಮ ದೇಶದಲ್ಲಿ ಹೆಚ್ಚಿನ ವ್ಯವಸಾಯಾಭಿವೃದ್ಧಿಗೆ ಇವೊತ್ತು ಅವಕಾಶ ಮಾಡಿಕೊಳ್ಳಬೇಕಾಗಿದೆ ಮತ್ತು ಅದಕ್ಕೆ ತಕ್ಕ ಯೋಜನೆಗಳನ್ನು ತಯಾರುಮಾಡಬೇಕಾಗಿದೆ. ಈಗಿರುವ ಯೋಜನೆಯಲ್ಲಿ ಬರಿ ಗಂಡಸರಿಗೇ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿದೆ. ಮುಂದಿನ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯ ಕೊಟ್ಟು ಗೃಹಕೈಗಾರಿಕೆಗಳು ಎಂದರೆ ಮನೆಯಲ್ಲಿಯೇ ಮಾಡುವಂತಹ ಕೆಲಸಗಳಿಗೆ ಪ್ರೋತ್ಸಾಹ ಕೊಡುವ ಯೋಜನೆಗಳನ್ನು ತಯಾರುಮಾಡಿ ಈ ರೀತಿ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ ತಮ್ಮ ಮುಂದೆ ಹೇಳಬೇಕಾಗಿದೆ. ಈಗ ದೊಡ್ಡದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುತ್ತಿದ್ದೀರಿ. ವಿಶ್ವವಿದ್ಯಾನಿಲಯಗಳಿಂದ ಹೊಸದಾಗಿ ಪದವೀಧರರಾಗಿ ಬಂದ ಇಂಜಿನಿಯರುಗಳು ಈ ರೀತಿಯಾದ ಎಷ್ಟೋ ದೊಡ್ಡ ಯೋಜನೆಗಳಲ್ಲಿ ಕೆಲಸಗಳನ್ನು

(ಶ್ರೀಮತಿ ಬಳ್ಳಾರಿ ಸಿದ್ದಮ್ಮ)

ಮಾಡುತ್ತಿದ್ದಾರೆ. ಅವರು ಕೆಲವು ಕಡೆ ಮಾಡಿರುವ ಪ್ಲಾನುಗಳು ಕೆಲವು ಲೋಪದೋಷಗಳಿಂದ ಕೂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬುದು ಎಲ್ಲರೂ ಒಪ್ಪಬೇಕಾದ ವಿಷಯ. ಸಾವಿರಾರು ರೂಪಾಯಿಗಳ ವೆಚ್ಚದಲ್ಲಿ ಅನೇಕ ಕೆರೆಕಟ್ಟೆಗಳಾಗಿವೆ. ನಮಗೆ ತಿಳಿದಂತೆ ತುಂಗಭದ್ರಾ ಪ್ರಾಜೆಕ್ಟಾಗಿದೆ, ಸೂಳೆಕೆರೆ ಮುಂತಾದ ಕಟ್ಟೆಗಳಾಗಿವೆ. ಹೀಗೆ ಪ್ರಾಜೆಕ್ಟುಗಳು ಕಟ್ಟಿ ಎಷ್ಟೋ ದಿನಗಳಾದರೂ ಅವು ಬೀಳುವ ಸ್ಥಿತಿಯಲ್ಲಿಲ್ಲ. ಆದರೆ ಈಗ ಹೊಸದಾಗಿ ಬಂದಂತಹ ಇಂಜಿನಿಯರುಗಳು ಕಟ್ಟುವ ಕಟ್ಟಡಗಳ ಪ್ಲಾನುಗಳು ಲೋಪದೋಷಗಳಿಂದ ಕೂಡಿರುವುದರಿಂದಲೋ ಅಥವಾ ಬೇರೆ ಯಾವ ಕಾರಣಗಳಿಂದಲೋ ದೀರ್ಘ ಕಾಲ ಬಾಳಬೇಕಾದಂತಹ ಕೆರೆಕಟ್ಟಡಗಳು ಸರಿಯಾಗಿ ನಿಲ್ಲದೆ, ತೊಂದರೆಯಾಗುತ್ತಿದೆ. ಈ ರೀತಿ ಕಟ್ಟೆ ಒಡೆದು ಹೋಗುವುದರಿಂದ ಕೋಟ್ಯಂತರ ರೂಪಾಯಿಗಳು ನಷ್ಟವಾಗಿ ನಮ್ಮ ಜನತೆಗೂ ದೇಶಕ್ಕೂ ಅನ್ಯಾಯವಾಗುತ್ತದೆ. ಆದ್ದರಿಂದ ಸರಿಯಾದ ಇಂಜಿನಿಯರುಗಳನ್ನು ನೇಮಿಸಬೇಕು. ಈ ಇಂಜಿನಿಯರುಗಳೇನೋ ದೂರ ದೇಶಗಳಿಗೆ ಹೋಗಿ ಪರೀಕ್ಷೆ ಪಾಸುಮಾಡಿಬಂದಿರಬಹುದು. ಆದರೆ ಅವರಿಗೆ ಸರಿಯಾದ ಶಿಕ್ಷಣ ಎಂದರೆ ಟ್ರೈನಿಂಗ್ ಇಲ್ಲದೆ ಇರುವುದರಿಂದ ಈ ರೀತಿ ತಪ್ಪುಗಳಾಗಿರಬಹುದು. ಹೀಗಾಗಿ ನಮ್ಮ ದೇಶದ ದುಡ್ಡು ಪೋಲಾಗಬಾರದು. ಇದನ್ನೆಲ್ಲಾ ತಾವು ಪರಿಶೀಲನೆ ಮಾಡಿಕೊಂಡು ಯೋಗ್ಯರಾದವರನ್ನು ದೊಡ್ಡದೊಡ್ಡ ಪ್ರಾಜೆಕ್ಟುಗಳ ಮತ್ತು ಕೆರೆಗಳ ಕೆಲಸ ಮಾಡಲು ನೇಮಿಸಿದರೆ, ಆಗ ಇದೆಲ್ಲಾ ಸರಿಹೋಗುತ್ತದೆ. ಹೀಗೆ ಹೇಳುವಾಗ ಈಗಿರುವ ಇಂಜಿನಿಯರುಗಳು ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತಿಲ್ಲ. ಅವರೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಈ ತರಹದ ಕೆಲಸಗಳನ್ನು ಮಾಡುವಾಗ ಸರಿಯಾಗಿ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತೇನೆ. ಹಿಂದೆ ಈ ರೀತಿ ಪರಿಶೀಲನೆ ಮಾಡದೆ ಹೋದುದರಿಂದ ನಮ್ಮ ಚಿತ್ರದುರ್ಗಕ್ಕೆ ಸೇರಿದ ಕೆಲವು ಕೆರೆಗಳು ಎಂದರೆ ಸುಂಕೇನಹಳ್ಳಿ, ತುಪ್ಪದಕೆರೆ, ಇವು ಒಡೆದುಹೋದುದರಿಂದ ಎಷ್ಟು ಅನ್ಯಾಯವಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ರೀತಿಯಾಗಲು ಇನ್ನು ಮುಂದೆ ಅವಕಾಶ ಕೊಡಬಾರದು. ಇದರ ಕಡೆ ಸರ್ಕಾರ ಗಮನಕೊಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ಈಗ ಮಲೇರಿಯಾ ನಿವಾರಣೆ ಬಗ್ಗೆ ಯೋಜನೆ ಎಂದು ಮಲೆನಾಡಿನಲ್ಲಿ ಆರಂಭಿಸಿದ್ದಾರೆ. ಈ ಏರ್ಪಾಡನ್ನು ಮಾಡಿರುವುದನ್ನು ನಾನೇನೋ ಒಪ್ಪುತ್ತೇನೆ. ಮಲೇರಿಯಾ ರೋಗ ನಿವಾರಣೆಗೋಸ್ಕರ ಈಗ ಡಿ. ಡಿ. ಟಿ. ಯನ್ನು ಸರಬರಾಜು ಮಾಡುತ್ತಿದ್ದಾರೆ. ಇದರಿಂದ ಸೊಳ್ಳೆಗಳು ನಾಶವಾಗುತ್ತವೆ, ನಿಜ. ಆದರೆ ಈಗ ಸರಬರಾಜು ಮಾಡುತ್ತಿರುವ ಡಿ.ಡಿ.ಟಿ. ಸಾಕಾಗುವುದಿಲ್ಲ. ಅದನ್ನು ಇನ್ನೂ ಹೆಚ್ಚಿಸಬೇಕಾದ ಅಗತ್ಯವಿದೆ. ಹಾಗೆ ಡಿ. ಡಿ. ಟಿ.ಯನ್ನು ಕೊಡದೆಹೋದರೆ ಮಲೆನಾಡಿನಲ್ಲಿ ಮಲೇರಿಯಾ ರೋಗ ನಿವಾರಣೆಯಾಗುವುದು ಕಷ್ಟವಾಗುತ್ತದೆ. ಈಗ ಮಲೇರಿಯಾ ಹಾವಳಿ ಮಲೆನಾಡಿನಲ್ಲಿ ಜಾಸ್ತಿಯಾಗಿದೆ. ಅದ್ದರಿಂದ ಇದನ್ನು ವಿಚಾರಮಾಡಿ ಈ ಮಲೇರಿಯಾ ಹಾವಳಿಯನ್ನು ತಪ್ಪಿಸುವುದಕ್ಕೆ ಏನು ಬೇಕೋ ಆ ತರಹ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ನಮ್ಮ ಹಳ್ಳಿಗಳಲ್ಲಿ ಗೌಡರ ಮತ್ತು ಶ್ಯಾನುಭೋಗರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. "ಮುಂದೆ ನಾವು ಕೆಲಸಮಾಡುವುದು ಯೋಗ್ಯವಲ್ಲ; ಶ್ಯಾನುಭೋಗರು ಮತ್ತು ಗೌಡರು ಸರ್ಕಾರದ ಅಧಿಕಾರಿಗಳಲ್ಲವೆಂದು ತೀರ್ಮಾನಮಾಡಿದ್ದರೆ ನಾವು ಶಾಸನ ಸಭೆಗಳ ಸದಸ್ಯಸ್ಥಾನಗಳಿಗೆ ನಿಂತು ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದ್ದೆವು. ನಮಗೆ ಸ್ವಲ್ಪ ಹಣವನ್ನು ಸಂಭಾವನೆಯಾಗಿ ಕೊಟ್ಟು ನಮ್ಮನ್ನು ಸರಕಾರಿ ಅಧಿಕಾರಿಗಳೆಂದು ಭಾವಿಸುತ್ತಾರೆ. ಮುಂದೆ ಸತ್ಯಾಗ್ರಹ ಹೂಡಿ ನಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳಬೇಕಾದ ಸಂದರ್ಭ ಬರಬಹುದು" ಎಂಬುದಾಗಿ ಹೇಳುತ್ತಾರೆ. ಈ ಕೂಗು ಬಹಳ ಜೋರಾಗಿ ಕೇಳುತ್ತಿದೆ. ಈ ರೀತಿ ಯಾಗುವುದಕ್ಕೆ ಅವಕಾಶಕೊಡದೆ ಗೌಡರು ಮತ್ತು ಶ್ಯಾನುಭೋಗರ ಬಗ್ಗೆ ಸಹಾನುಭೂತಿ ತೋರಿಸಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದಲ್ಲಿ ಬಹಳ ತೊಂದರೆಯಾಗಿದೆ. ಈಗ ಐದ ವರ್ಷಗಳಲ್ಲಿ ಒಂದು ರೀತಿಯಾಯಿತು. ಇನ್ನು ಮುಂದೆ ಯಾವರೀತಿ ಬರುತ್ತದೆಯೋ ಗೊತ್ತಿಲ್ಲ. ವಿದ್ಯಾಭ್ಯಾಸ ಸುಧಾರಣೆ ಮಾಡುತ್ತೇವೆಂದು ಹಿಂದೆ ಶಾಲೆಗಳು ಜನವರಿಯಲ್ಲಿ ಸರ್ವೋದಯದ ದಿನ ಪ್ರಾರಂಭವಾಗಬೇಕೆಂದು ತೀರ್ಮಾನಮಾಡಿ ಆ ರೀತಿ ನಡೆಸುತ್ತಿದ್ದುದನ್ನು ಈ ಸಲ ಪುನಃ ಮಾಮೂಲಿನಂತೆ ತರಗತಿಗಳು ಮೇ-ಜೂನ್ ತಿಂಗಳಿನಲ್ಲಿ ಪ್ರಾರಂಭವಾಗುವಂತೆ ಮಾಡಿರುವುದರಿಂದ ಹುಡುಗರಿಗೆ ನಾಲ್ಕೈದು ತಿಂಗಳು ರಜ ಕೊಟ್ಟಿದ್ದಾರೆ. ಹೀಗೆ ಬಹಳಕಾಲ ರಜ ಕೊಟ್ಟರೆ ಮಕ್ಕಳಿಗೆ ವಿದ್ಯಾಭ್ಯಾಸ ಹೇಗಾಗಬೇಕು? ವಿದ್ಯೆ ಇಲ್ಲದೆ ಇದ್ದರೆ ಅದರಿಂದ ಬಹಳ ತೊಂದರೆಗಳಿವೆ. ನಾನು ಈಗ ಐದು ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿದ್ದೇನೆ. ನಾನು ಇಲ್ಲಿಗೆ ಬಂದಮೇಲೆ ಪ್ರಶ್ನೆಗಳನ್ನು ಹೇಗೆ ಕೇಳಬೇಕು ಎಂದು ಸ್ವಲ್ಪಮಟ್ಟಿಗೆ ತಿಳಿದುಕೊಂಡೆ. ಆದರೂ ಭಾವಿ ಬೇಕು, ರಸ್ತೆಬೇಕು ಎಂದು ಕೇಳಿದರೂ ಬೇರೆ ವಿಷಯ ಕೇಳಲು ನನಗೆ ಬರುವುದಿಲ್ಲ. ನಮ್ಮ ಮಂತ್ರಿಗಳು ಹೇಳುತ್ತಿದ್ದರು, ನಾನು ಕೇಳುತ್ತಲೇ ಇದ್ದೆ. ನನ್ನ ಕೆಲಸವಾಗಿಲ್ಲ. ಇದಕ್ಕೆ ಕಾರಣ ರೂಲ್ಸ್‌ಪ್ರಕಾರ ನಯವಾಗಿ ಹೇಳುವ ಶಕ್ತಿ ನನಗೆ ಇದ್ದಿದ್ದರೆ ಜಾಗ್ರತೆ ಮಾಡುತ್ತಿದ್ದರೋ ಏನೋ ಗೊತ್ತಿಲ್ಲ. ನಾನಂತೂ, ನನ್ನ ಭಾಷಣದಲ್ಲಿ ಹೇಳಿದ ವಿಷಯಗಳನ್ನು ಇವರು ಕೇಳಲಿಲ್ಲವೇನೋ ಎಂದು ತಿಳಿದುಕೊಂಡೆ. ಇವೊತ್ತೂ ಸಹ ಹೇಳುತ್ತಿದ್ದೇನೆ. ಆದರೆ ಯಾವ ಕಾರಣದಿಂದ ಆಗಲಿಲ್ಲವೆಂಬುದು ಗೊತ್ತಿಲ್ಲ. ಮುಂದಾದರೂ ಕೂಡ ಯಾವ ಊರಿನಲ್ಲಿಯೇ ಆಗಲಿ, ನನ್ನ ಕ್ಷೇತ್ರದಲ್ಲಿ ಮಾತ್ರವಲ್ಲ, ಎಲ್ಲಿಯೇ ಆಗಲಿ ಕುಡಿಯುವ ನೀರಿನ ಭಾವಿ, ರಸ್ತೆ, ಸ್ಕೂಲು, ಆಸ್ಪತ್ರೆ ವಗೈರೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದದ್ದು ನ್ಯಾಯ. ನಮ್ಮ ದೇಶವನ್ನು ಕಟ್ಟಬೇಕಾದರೆ, ಅದನ್ನು ಅಭಿವೃದ್ಧಿಸ್ಥಿತಿಗೆ ತರಬೇಕಾದರೆ ಇಂಥ ದೊಡ್ಡ ಭಾವನೆಗಳಿಂದ ತಾವು ಹೋಗಬೇಕು. ಈ ಕಾರ್ಯಗಳನ್ನು ತಾವು ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಜನರಿಗೆ ಭಾವಿ, ರಸ್ತೆ, ಸ್ಕೂಲು, ಆಸ್ಪತ್ರೆಗಳು ಇರುವಂತೆ ವ್ಯವಸ್ಥೆ ಮಾಡಬೇಕು.

ಹೆಂಗಸರಿಗೂ ಸಹ ವಿದ್ಯಾಭ್ಯಾಸಕ್ಕೆ ಹೆಚ್ಚು ಅವಕಾಶಗಳನ್ನು ಒದಗಿಸಿಕೊಡಬೇಕು. ವಿದ್ಯಾವಂತರಾದ ಹೆಂಗಸರಿಗೆ ನರ್ಸ್ ಕೆಲಸ, ಟೀಚರ್ ಕೆಲಸ, ಮುಂತಾದುವು ಯೋಗ್ಯವಾದುವೆಂದು ಭಾವಿಸುತ್ತೇನೆ. ಹೆಚ್ಚು ವಿದ್ಯಾವಂತರಾಗಿರುವವರಿಗೆ ಡಾಕ್ಟರು ಕೆಲಸಕ್ಕೆ ಅವಕಾಶವಿರಬೇಕು. ಬೇರೆ ಕೆಲಸಮಾಡಲು ಶಕ್ತಿಸಾಲದೆ ಇದ್ದಂಥ

ಹೆಂಗಸರಿಗೋಸ್ಕರ, ಸಂಸಾರದಿಂದ ದೂರವಾಗಿರುವ ಹೆಂಗಸರಿಗೋಸ್ಕರ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿ ಅವರುಗಳಿಗೆ ಡಾಕ್ಟರ್ ಕೆಲಸ, ನರ್ಸ್ ಕೆಲಸ ಟೀಚರ್ ಕೆಲಸ ಮುಂತಾದುವಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು. ಸ್ಕೂಲುಗಳಲ್ಲಿ ಪಾಠ ಹೇಳುವುದಕ್ಕೆ ಗಂಡಸರಿಗಿಂತ ಹೆಂಗಸರನ್ನು ನೇಮಕಮಾಡುವುದು ಉತ್ತಮ. ಹುಡುಗರು ಮಾಡುವ ಗಲಾಟೆಯನ್ನು ಸಹಿಸುವುದಕ್ಕೆ ಗಂಡಸರಿಗೆ ಸಾಧ್ಯವಾಗುವುದಿಲ್ಲ. ಹೆಂಗಸರಿಗೆ ಮಕ್ಕಳನ್ನು ಸಮಾಧಾನಮಾಡಿ ಅವರುಗಳು ಗಲಾಟೆಮಾಡದಂತೆ ನೋಡಿಕೊಳ್ಳುವ ಶಕ್ತಿ ಇದೆ. ಆದುದರಿಂದ ಇಂಥ ಉದ್ಯೋಗಗಳಲ್ಲಿ ಹೆಂಗಸರಿಗೆ ಹೆಚ್ಚು ಸ್ಥಾನಗಳನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕು. ಹೆಣ್ಣುಮಕ್ಕಳಿಗೆ ಇಷ್ಟು ಸ್ಥಾನಗಳನ್ನು ಕೊಡಬೇಕೆಂದು ಕಡ್ಡಾಯವಾಗಿ ನಿರೂಪಣೆ ಇದ್ದರೆ ಹೆಂಗಸರಿಗೆ ಆ ಸ್ಥಾನಗಳಿಗೆ ಬರುವುದಕ್ಕೆ ಅವಕಾಶವಾಗುತ್ತದೆ ಮತ್ತು ಅವರಿಗೆ ಕೆಲಸ ಸಿಕ್ಕಿಯೇ ಸಿಕ್ಕುತ್ತದೆ. ಮಕ್ಕಳ ಜವಾಬ್ದಾರಿ ಹೆಂಗಸರಿಗಿರುವಷ್ಟು ಗಂಡಸರಿಗೆ ಇಲ್ಲವೆಂದು ಹೇಳುತ್ತೇನೆ. ಸಾಮಾನ್ಯವಾಗಿ ಮಕ್ಕಳು ತಮಗೆ ಏನಾದರೂ ಬೇಕಾಗಿದ್ದರೆ ತಾಯಿಯನ್ನು ಕೇಳುತ್ತಾರೆ ; ತಂದೆಯನ್ನು ಕೇಳುವುದಿಲ್ಲ. ಆದುದರಿಂದ ಮಕ್ಕಳ ಜವಾಬ್ದಾರಿ ಹೆಣ್ಣುಮಕ್ಕಳಿಗೆ ಹೆಚ್ಚಾಗಿರುತ್ತದೆ : ಹೆಂಗಸರು ಸಾಮಾನ್ಯವಾಗಿ ಗತಿ ಇಲ್ಲದೆ ಇದ್ದರೆ ಹೊರಗಡೆ ಬಂದು ಸಂಪಾದನೆ ಮಾಡುತ್ತಾರೆಯೇ ವಿನಾ ಮತ್ತೇನೂ ಇಲ್ಲ. ಇಂಥವರಿಗೆ ಕೆಲಸಗಳನ್ನು ಕೊಡಿ. ಆ ರೀತಿ ಇಲ್ಲದವರು ನೀವು ಕೆಲಸ ಕೊಡುತ್ತೇವೆಂದು ಕರೆದರೂ ಯಾರೂ ಬರುವುದಿಲ್ಲ. ನೀವು ಸರಿಯಾದ ಸ್ಥಾನಕೊಟ್ಟರೂ ಅವರು ಬರುವುದಿಲ್ಲ.

ಶ್ರೀ ಪಿ. ಆರ್. ನಾಯ್ಡು (ಮಲ್ಲೇಶ್ವರಂ).—ಒಂದು ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ದೇಶದಲ್ಲಿ ಹೆಣ್ಣುಮಕ್ಕಳಿಗೆ, ಹೆಂಗಸರಿಗೆ ಬಹಳ ಜವಾಬ್ದಾರಿ ಇದೆ ಎಂದರು. ಅವರ ಮಾತು ಗಂಡಸರಿಗೆ ನೋವನ್ನುಂಟುಮಾಡುತ್ತದೆ. ಆದುದರಿಂದ ದಯವಿಟ್ಟು ಅವರು ಆ ರೀತಿ ಮಾತನಾಡಬಾರದು.

ಅಧ್ಯಕ್ಷರು.—ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಾನು ಒಂದು ವಿಷಯ ಹೇಳುತ್ತೇನೆ. ಇದರಲ್ಲಿ ಹೆಂಗಸರೂ ಮತ್ತು ಗಂಡಸರೂ ಸರಿಸಮಾನ ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಗಂಡಸರು, ಇಬ್ಬರೂ ಸರಿಸಮಾನ ಎಂದು ಮಾತಿನಲ್ಲಿ ಮಾತ್ರ ಹೇಳುತ್ತಾರೆ; ಅಕ್ಷರಶಃ ಒಪ್ಪಿಕೊಳ್ಳುತ್ತಾರೆ ; ಆದರೆ ತತ್ವಶಃ ವಿರೋಧಿಸುತ್ತಾರೆ. ಅದಕೋಸ್ಕರ ನಾನು ಆ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು.—ಗಂಡಸರಿಗೆ ನೋವಾದರೆ ಏನೂ ತೊಂದರೆ ಇಲ್ಲ. ತಾವು ಮುಂದೆ ಮಾತನಾಡಿ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅಧ್ಯಕ್ಷರು ಹಾಗೆ ಹೇಳಿದ್ದು ಬಹಳ ಸಂತೋಷ. ಮಕ್ಕಳ ಜವಾಬ್ದಾರಿ ಹೆಣ್ಣುಮಕ್ಕಳಿಗೆ ಹೆಚ್ಚಾಗಿರುತ್ತದೆ. ಅವರೇ ಸಂಸಾರದಲ್ಲಿ ಜವಾಬ್ದಾರಿಯುಳ್ಳವರಾಗಿರುತ್ತಾರೆ. ಹೆಂಗಸರಿಗೆ ಎಲ್ಲ ಸೌಲಭ್ಯಗಳನ್ನೂ ಎಂದರೆ ಅವರಿಗೆ ಕೆಲಸಗಳನ್ನು ಕೊಟ್ಟು ಅವರಿಗೆ ನಿರುದ್ಯೋಗ ಎನ್ನುವ ಪ್ರಶ್ನೆಯೇ ಇಲ್ಲದ ರೀತಿಯಲ್ಲಿ ಮಾಡಬೇಕು. ಇವರಿಗೆ ಟೀಚರ್ ಕೆಲಸ, ಸಂಗೀತದ ಟೀಚರ್ ಕೆಲಸ, ಮಿಡ್ ವೈಫ್ ಕೆಲಸ ಹೀಗೆ ಯಾವುದಾದರೂ ಒಂದು ಕೆಲಸ ದೊರೆಯುವಂತೆ ಮಾಡಬೇಕು. "ಹೆಂಗಸು ತಿರುಗಿ ಕೆಟ್ಟಳು, ಗಂಡಸು ಕುಳಿತು ಕೆಟ್ಟನು" ಎಂದು ಹೇಳುವುದುಂಟು. ಹೆಂಗಸು ತಿರುಗುವುದಕ್ಕೆ ಅವಕಾಶ ಕೊಡಬಾರದು ; ಕೆಲಸ ಕೊಡಬೇಕು. ಯಾವುದಾದರೂ ಕೆಲಸಕೊಟ್ಟರೆ ಒಂದುರೀತಿ ಇರುತ್ತಾರೆ, ಅವರ ಮನೆ ಉದ್ಧಾರವಾಗುತ್ತದೆ ; ಅದರ ಜೊತೆಯಲ್ಲಿ ದೇಶ ಉದ್ಧಾರವಾಗುತ್ತದೆ. ಇಲ್ಲದೆ ಇದ್ದರೆ ಏನೂ ಆಗುವುದಿಲ್ಲ. ಆದುದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹೆಣ್ಣುಮಕ್ಕಳಿಗೆ 'ಸರಿಯಾದ ಅವಕಾಶ' ಕಲ್ಪಿಸಿಕೊಡಬೇಕು, ಮತ್ತು ಅವರನ್ನು ಅವಕಾಶವಿಲ್ಲವೆಂದು ಮನೆಗೆ ಕಳುಹಿಸಬಾರದು. ಈ ರೀತಿ ಹೆಣ್ಣುಮಕ್ಕಳಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೆಂದು ಹೇಳುತ್ತೇನೆ. ಮುಂದೆ ದ್ವಿತೀಯ ಪಂಚವಾರ್ಷಿಕಯೋಜನೆಯಲ್ಲಿ ಕೂಡ ಮನೆಗಳಲ್ಲಿ ಕುಳಿತುಕೊಂಡೇ ಮಾಡತಕ್ಕ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವ ಯೋಜನೆಗಳನ್ನು ಕೈಗೊಂಡು ಹೆಣ್ಣುಮಕ್ಕಳು ಇಂಥ ಕೈಗಾರಿಕೆಗಳಲ್ಲಿ ಕೆಲಸಮಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ಹೆಚ್ಚು ಹೇಳಬಯಸುವುದಿಲ್ಲ. ಈ ವಿಧಾನ ಸೌಧವು ಬಹಳ ಚೆನ್ನಾಗಿದೆ ಎಂದು ಹೇಳಬಹುದು. ಅದರಲ್ಲಿ ಏನೇ ಇರಲಿ ನಮ್ಮ ಕಾಲಕ್ಕೆ ಆಗಬೇಕಾದದ್ದು ಆಯಿತು. ಇದನ್ನು ಕಟ್ಟಿದ್ದರಿಂದ ಹೆಚ್ಚಿನ ಸಂತೋಷವಾಗಿದೆ. ನನಗೆ ನಾಲ್ಕಾರು ಮಾತುಗಳನ್ನು ಆಡಲು ಅವಕಾಶಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ. ಹೆಚ್ಚಿಗೆ ಅವಕಾಶ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೇನೆ. ನಮ್ಮ ದೇಶ ಉನ್ನತವಾದ ದೇಶವಾಗಬೇಕು, ಕರ್ಣಾಟಕ ಹೆಚ್ಚಿಗೆ ಮೆರೆಯಬೇಕು ಎಂಬುದರ ಕನಸು ಕಾಣುತ್ತಿದ್ದೇನೆ. ಇನ್ನು ಐದು ವರ್ಷಗಳಲ್ಲಿ ಆ ಕನಸು ನನಸಾಗಲಿ ಎಂದು ಹಾರೈಸಿ, ಆ ರೀತಿ ಮಾಡಲುಬೇಕಾದ ಶಕ್ತಿ ಎಲ್ಲರಿಗೂ ದೊರೆಯಲಿ, ಮಂತ್ರಿಗಳಿಗೆ ಶಕ್ತಿ ಮತ್ತು ಧೈರ್ಯ ದೊರೆಯಲಿ ಎಂದು ಹಾರೈಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

(*Several Members rose.*)

1 P.M.

Mr. SPEAKER.—Hon'ble Members may please resume their seats. I had announced yesterday and I say it once again, that other members would not be allowed to speak today. It was an exception that I made in the case of Srimathi Bellary Siddamma because she expressed her strong desire to speak. But, I would not like to make an exception in the case of other members. I would request them that they would be kind enough to refrain from speaking today because two hours would be required by the Government to reply. By 3 P.M. the Vote on Account should be finished. So, I once again request Hon'ble Members to refrain from speaking on this occasion so that the Government Benches may have their full say in the matter.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಈ ಸಭೆಯಲ್ಲಿ ಸರ್ಕಾರದವರು ಮಂಡಿಸಿದ ಆಯವ್ಯಯ ಪಟ್ಟಿಯಮೇಲೆ ವಿಶಾಲವಾದಂಥ ಚರ್ಚೆನಡೆದಿದೆ. 1957-58ನೇ ಸಾಲಿನ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಟ್ಟಾಗ ಇಷ್ಟು ವಿಪುಲವಾಗಿ ಚರ್ಚೆನಡೆಯುತ್ತದೆ ಎಂದು ಎನಿಸಿರಲಿಲ್ಲ. ಏಕೆಂದರೆ, ನಾನು ಸಭೆಯಮುಂದೆ ಮಂಡಿಸಿದಂಥ ಬಡ್ಜೆಟ್ಟು, ಸಾಧಾರಣವಾದಂಥ ಬಡ್ಜೆಟ್ಟು. ಸರ್ಕಾರದವರು ಹೊಸ ನೀತಿಯನ್ನೇನೂ ಇಲ್ಲಿ ಮಂಡಿಸಿರಲಿಲ್ಲ. ವೈಟ್ ಪೇಪರ್‌ನಲ್ಲಿ ತಿಳಿಸಿರುವಂತೆ ಯಾವ ಯಾವ ಬಾಬುಗಳಿಗೆ ಹಣವನ್ನು ಒದಗಿಸಬೇಕಾಗಿತ್ತೋ ಆ ಬಾಬುಗಳಿಗೆಲ್ಲಾ ಹಣವನ್ನು ಒದಗಿಸಲಾಗಿದೆ. ನಮ್ಮ ಗಮನಕ್ಕೆ ಬಂದಂಥ ಬಾಬುಗಳಲ್ಲಿ ಎಷ್ಟೆಷ್ಟು ಹಣ ಬರಬಹುದು ಎಂಬ ವಿಷಯವನ್ನು ಸಹ ಅಲ್ಲಿ ತಿಳಿಸಿದ್ದೇವೆ. ಆ ದೃಷ್ಟಿಯಿಂದ ಪ್ರಾಯಶಃ ಹೆಚ್ಚಿನ ಚರ್ಚೆಯಾಗಲಾರದು ಎಂದಿದ್ದೆ. ನೀತಿಯನ್ನು ಪ್ರತಿಪಾದಿಸತಕ್ಕ ಹೊಸ ಬಡ್ಜೆಟ್ಟನ್ನು ಹೊಸ ಸರ್ಕಾರ ತಯಾರುಮಾಡಿ ಹೊಸ ಶಾಸನಸಭೆಯ ಮುಂದೆ ಇಟ್ಟಾಗ ವಿಪುಲವಾದಂಥ ಚರ್ಚೆಯಾಗಬೇಕಾದದ್ದು ಧರ್ಮ. ಆ ದೃಷ್ಟಿಯಿಂದ ಚರ್ಚೆ ಕಡಮೆಯಾಗುತ್ತದೆ ಎಂದು ತಿಳಿದುಕೊಂಡಿದ್ದೆ. ಆದರೆ ಸಭಾಪತಿಗಳ ಅನುಮತಿಯಿಂದ ಅನೇಕ ಮಾನ್ಯ ಮಹನೀಯರು ಮಾತನಾಡಿದ್ದಾರೆ. ಸಾಮಾನ್ಯವಾದಂಥ ಒಂದು ಟೀಕೆ ಏನೆಂದರೆ :— ಸರ್ಕಾರದವರು ಮಂಡಿಸಿರತಕ್ಕ ಬಡ್ಜೆಟ್ಟಿನಲ್ಲಿ ಪ್ರತಿ ವರ್ಷವೂ ಖೋತಾ ಬರತಕ್ಕದ್ದು ಸಾಮಾನ್ಯವಾಗಿ ಕಂಡುಬರುತ್ತಾ ಇದೆ, ಇದು ಸರಿಯಲ್ಲ, ದೇಶದ ಆರ್ಥಿಕ ಭದ್ರತೆಗೆ ಇದು ಅಪಾಯಕರ, ಯಾವ ಯಾವ ಬಾಬುಗಳಲ್ಲಿ ಹೆಚ್ಚು ವರಮಾನ ಬರಬೇಕೋ ಆಯಾ ಬಾಬುಗಳನ್ನೆಲ್ಲಾ ಸವಿಸ್ತಾರವಾಗಿ ಪರಿಶೀಲನೆ ಮಾಡಿ ಹೆಚ್ಚು ಆದಾಯ ಪಡೆಯಬೇಕು, ಯಾವಯಾವ ಬಾಬುಗಳಲ್ಲಿ ಖರ್ಚು ಖೋತಾ ಮಾಡಬೇಕೋ, ಅದಷ್ಟು ಬೇಗನೆ ಆಯಾ ಬಾಬುಗಳಲ್ಲಿ ಹೆಚ್ಚಿಗೆ ಇರತಕ್ಕ ಮತ್ತು ಅನಾವಶ್ಯಕವಾದ ಖರ್ಚನ್ನು ಖೋತಾ ಮಾಡಬೇಕು ಎಂದು ಅನೇಕ ಮಾನ್ಯ ಮಹನೀಯರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲೊಂದು ಕಡೆ, ಇಲ್ಲೊಂದು ಕಡೆ ಬಾಕಿ ವಿಷಯಗಳನ್ನು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಚುನಾವಣೆಯಲ್ಲಿ ಸರ್ಕಾರದವರು ಕೈ ಹಾಕಿದರು ಎಂತಲೂ ಆಪಾದನೆ ಮಾಡಿದ್ದಾರೆ. ಅದಕ್ಕೆ ಇನ್ನೊಂದು ಕಡೆಯಿಂದ ಉತ್ತರವೂ ಬಂದಿದೆ. ಮಾನ್ಯ ಮಹನೀಯರೊಬ್ಬರು ಚುನಾವಣೆಗೆ ಸಂಬಂಧಪಟ್ಟಂತೆ ಈ ಚುನಾವಣೆಗಳಲ್ಲಿ ಮಂತ್ರಿಗಳೇ ಅಪಜಯ ಹೊಂದಿರುವುದನ್ನು ನೋಡಿದರೆ ಸರ್ಕಾರದವರು ನಿಷ್ಪಕ್ಷಪಾತವಾಗಿ ನಡೆದಿದ್ದಾರೆ ಎನ್ನುವುದು ಗೊತ್ತಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಗ್ರಾಮಾಧಿಕಾರಿಗಳು ಮತ್ತು ಗ್ರಾಮ ನೌಕರರ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಬಹಳ ದಿವಸದಿಂದ ನಡೆದಿಲ್ಲ, ಅದಷ್ಟು ಬೇಗ ನಡೆಸಬೇಕೆಂದು ಒತ್ತಾಯ ಮಾಡಿದ್ದಾರೆ. ನಮ್ಮ ದೇಶದಲ್ಲಿ ಅಗಾಧವಾಗಿರತಕ್ಕಂಥ ನೈಸರ್ಗಿಕ ಸಂಪತ್ತನ್ನು ಬೇಗ ಅಭಿವೃದ್ಧಿ ಮಾಡಿ ಆದಾಯ ಪಡೆಯಬೇಕೆಂದೂ ಸೂಚನೆ ಕೊಟ್ಟಿದ್ದಾರೆ. ಕೆಲವರು ಸ್ಕೂಲುಗಳು, ಸೊಸೈಟಿಗಳು, ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇವುಗಳನ್ನು ಸ್ಥಾಪನೆ ಮಾಡಬೇಕು ; ನಿಮ್ನವರ್ಗದವರು ಮತ್ತು ಹಿಂದುಳಿದ ವರ್ಗದವರುಗಳಿಗೆ ಒಂದು ಯೋಜನೆಯನ್ನು ತಯಾರು ಮಾಡಿ ಅವರ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ; ಹೆಣ್ಣು ಮಕ್ಕಳಿಗೆ ಹಕ್ಕುಗಳನ್ನು ಕೊಡುವ ಏರ್ಪಾಡು ಮಾಡಬೇಕು ಎಂದು ಹೇಳಿ ಈ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ನಾನು ಕೆಲವಕ್ಕೆ ಮಾತ್ರ ಉತ್ತರ ಕೊಡುತ್ತೇನೆ. ಏಕೆಂದರೆ, ಮುಂದೆ ಬರತಕ್ಕ ಹೊಸ ಹಣಕಾಸಿನ ಸಚಿವರು ಹೊಸ ಬಡ್ಜೆಟ್ಟಿನ ಮೇಲೆ ಮಾಡತಕ್ಕ ಟೀಕೆಗಳಿಗೆ ಉತ್ತರ ಕೊಡುವುದು ಸಾಧುವಾದದ್ದು. ಆದ್ದರಿಂದ ಸಾಧಾರಣವಾಗಿ ಈ ಆಯವ್ಯಯಕ್ಕೆ ಏನು ಸಂಬಂಧಪಟ್ಟಿದೆಯೋ ಅದನ್ನು ಸ್ಥೂಲವಾಗಿ ಮಾತ್ರ ಪರಿಶೀಲನೆ ಮಾಡಬೇಕು ಎಂದು ಆಲೋಚನೆ ಮಾಡಿದ್ದೇನೆ.

ಈ ಖೋತಾ ಬಡ್ಜೆಟ್ಟಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಶಂಕೆ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಶ್ರೀಮಾನ್ ಬಾಳಿಗಅವರು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಶಂಕೆ ಪಡಬೇಕಾದ ಕಾರಣವೇನೂ ಇಲ್ಲ. ನಮ್ಮ ದೇಶದ ಹಣಕಾಸಿನ ಸ್ಥಿತಿಯಲ್ಲಿ ಇವೊತ್ತು ಖರ್ಚು ಮಾಡಿರತಕ್ಕ ಹಣದಲ್ಲಿ ಬಹು ಭಾಗ ದೇಶದ ಆಸ್ತಿಯನ್ನು ಕಟ್ಟುವುದಕ್ಕೆ ಖರ್ಚಾಗಿದೆ. ಇವೊತ್ತು ನಾಳೆಯಲ್ಲಿ ಆ ಆಸ್ತಿಯಿಂದ ಆದಾಯ ಬಾರದೇ ಇರಬಹುದು, ಆದರೆ ಸ್ವಲ್ಪ ಕಾಲ ಕಳೆದ ನಂತರ ಆದಾಯ ಬಂದೇ ಬರುತ್ತದೆ, ಮತ್ತು ದೇಶವನ್ನು ಪುನರ್‌ನಿರ್ಮಾಣ ಮಾಡುವಾಗ ಕೈ ಕಟ್ಟಿಕೊಂಡು ಕುಳಿತುಕೊಂಡರೆ ಪ್ರಯೋಜನವಿಲ್ಲ. ನಮ್ಮಲ್ಲಿ ಹಣವಿಲ್ಲದೇ ಹೋದರೆ ಹೊರಗಡೆಯಿಂದ ಸಾಲವಾದರೂ ಮಾಡಿ ದೇಶವನ್ನು ಕಟ್ಟಬೇಕು. ಮುಂದಿನ ಪೀಳಿಗೆಯ ಅಭಿವೃದ್ಧಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈಗಿನ ಜನ ತ್ಯಾಗ ಮಾಡುವುದಕ್ಕೆ ತಯಾರಾಗಿರಬೇಕು. ತ್ಯಾಗದಿಂದಲೇ ಏನಾದರೂ ಒಂದು ಸಾಧನೆ ಮಾಡುವುದಕ್ಕೆ ಸಾಧ್ಯ. ಆ ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಅದನ್ನೇ ನಾನು ಒತ್ತಿ ಹೇಳುತ್ತೇನೆ. ಎಷ್ಟು ಹಣ ಬರುತ್ತದೆಯೋ ಅಷ್ಟು ಹಣವನ್ನು ಮಾತ್ರ ಖರ್ಚು ಮಾಡಿ ಎಂದು ಈ ಸಭೆಯಲ್ಲಿ ಸದಸ್ಯರು ಯಾರೂ ಹೇಳಲಿಲ್ಲ. ನೂರಾರು ವರ್ಷಗಳಿಂದ ಆಗದೇ ಇರತಕ್ಕ ಅನೇಕ ಕೆಲಸ ಕಾರ್ಯಗಳು ಆಗಬೇಕೆಂದು ಹೇಳಿದ್ದಾರೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಾಗಬೇಕೆಂದು ಹೇಳಿದ್ದಾರೆ. ನೈಸರ್ಗಿಕ ಸಂಪತ್ತನ್ನು ನಾವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು, ಅದನ್ನು ಅಭಿವೃದ್ಧಿಪಡಿಸಬೇಕೆಂದೂ ಹೇಳಿದ್ದಾರೆ. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿದ್ದಾರೆ. ನೀರಾವರೀ ಜಲಾಶಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಬಂದರುಗಳು ಮತ್ತು ಸಣ್ಣ ಸಣ್ಣ ಬಂದರುಗಳನ್ನು ಕೂಡ ಆದಷ್ಟು ಬೇಗನೆ ಕೇಂದ್ರ ಸರ್ಕಾರದ ಸಹಾಯ ಪಡೆದು ಅಭಿವೃದ್ಧಿ ಪಡಿಸಬೇಕೆಂದು ಸೂಚನೆ ಕೊಟ್ಟಿದ್ದಾರೆ. ಇದರ ಜೊತೆಗೆ ಹೇರಳವಾಗಿ ಸಿಕ್ಕತಕ್ಕ ಸಮುದ್ರದ ಮೀನನ್ನು ಹಿಡಿದು, ಮಾರಿ ಸಂಪಾದನೆ ಮಾಡಬೇಕೆಂದು ಹೇಳಿದ್ದಾರೆ. ಹೀಗೆ ಒಂದು ಧ್ವನಿಯಲ್ಲಿ, ದೇಶದ ಸಂಪತ್ತನ್ನು ಹೆಚ್ಚಿಸಬೇಕು, ಎಲ್ಲರಿಗೂ ಉದ್ಯೋಗ ದೊರೆಯಬೇಕು, ಬಡತನ ಹೋಗಲಾಡಿಸಬೇಕು, ರೈತರಿಗೆ ಹೆಚ್ಚು ಉತ್ಪನ್ನ ಬರಬೇಕು ಎಂದು ಹೇಳಿ, ಇನ್ನೊಂದು ಧ್ವನಿಯಲ್ಲಿ ಖರ್ಚು ಮಾಡಬಾರದು ಎಂದರೆ ಅದು ಸಾಧ್ಯವೇ, ಹೇಗೆ ಎಂಬುದನ್ನು ದಯವಿಟ್ಟು ಆಲೋಚನೆ ಮಾಡಬೇಕು. ಕನಸಿನ ರಾಜ್ಯದಲ್ಲಿ ಆಗಬಹುದೇ ವಿನಾ ಈ ಪ್ರಪಂಚದಲ್ಲಿ ಸಾಧ್ಯವಾಗುವುದಿಲ್ಲ. ನಮ್ಮ ಹಣಕಾಸನ್ನು ನ್ಯಾಯವಾಗಿ ಉಪಯೋಗಿಸಬೇಕೆನ್ನುವುದರಲ್ಲಿ ಅರ್ಥವಿದೆ. ಯಾವುದು ಅಗತ್ಯವೋ ಅದರ

ಪ್ರಯಾರಿಟಿ ನೋಡಿ ಉಪಯೋಗಿಸಬೇಕು ಮತ್ತು ಬಹಳ ಅಗತ್ಯವಾದ ಕೆಲಸ ಕಾರ್ಯಗಳಲ್ಲಿ ಯಾವುದು ತ್ವರಿತವಾಗಿ ಆಗಬೇಕೋ ಅದಕ್ಕೆ ಉಪಯೋಗಿಸ ಬೇಕೆನ್ನುವುದರಲ್ಲಿ ಅರ್ಥವಿದೆ. ಅದನ್ನೆಲ್ಲಾ ಮೊದಲೇ ಆಲೋಚನೆ ಮಾಡಿ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯದ ಉತ್ಪನ್ನಕ್ಕೆ ಹೆಚ್ಚು ಪ್ರಾಮುಖ್ಯವನ್ನು ಕೊಟ್ಟಿದ್ದಾರೆ ಎಂಬುದು ತಮ ಗೆಲ್ಲಾ ನೆನಪಿದೆ. ಹಾಗೆಯೇ ಎರಡನೇ ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ವ್ಯವಸಾಯದ ಉತ್ಪನ್ನದ ಜೊತೆಗೆ, ಕೈಗಾರಿಕೆಗಳನ್ನೂ ಹೆಚ್ಚಾಗಿ ಸ್ಥಾಪನೆ ಮಾಡಬೇಕು ಮತ್ತು ಜನಗಳಿಗೆ ಉದ್ಯೋಗ ಕಲ್ಪನೆ ಯಾಗಬೇಕು, ಗ್ರಾಮಾಂತರಗಳಲ್ಲಿರತಕ್ಕ ಗೃಹ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ಕೊಡಬೇಕು ಎಂದು ಹಣ ಒದಗಿಸಿರುವುದು ತಮಗೆಲ್ಲರಿಗೂ ಗೊತ್ತೇ ಇದೆ. ಆದ್ದರಿಂದ ವಿಧಿಯಿಲ್ಲದೆ ಹಣ ಖರ್ಚು ಮಾಡಬೇಕಾದ ಪ್ರಸಂಗ ಈಗ ಬಂದಿದೆ. ಅದೂ ಈ ದೇಶವನ್ನು ಪುನರ್‌ನಿರ್ಮಾಣ ಮಾಡುವ ದೃಷ್ಟಿಯಿಂದ ಬಹಳ ಅಗತ್ಯವಾಗಿ ಹಣ ಒದಗಿಸಬೇಕಾಗಿದೆ. ಹಣ ಒದಗಬೇಕಾದರೆ, ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಕಂದಾಯ, ಸುಂಕ, ಸಾರಿಗೆ, ಜಾಸ್ತಿಯಾಗಿ ಆ ಮಾರ್ಗ ದಿಂದ ಬರಬೇಕು; ಕೇಂದ್ರದವರು ಸಹಾಯ ಮಾಡ ಬೇಕು; ನಾವು ಹಣವನ್ನು ಸಾರ್ವಜನಿಕರಿಂದ ಸಾಲ ತೆಗೆಯಬೇಕು—ಈ ಮಾರ್ಗಗಳಲ್ಲದೆ ಬೇರೆ ಮಾರ್ಗ ಗಳೇ ಇಲ್ಲ. ಅದನ್ನು ಈ ಸಭೆ ಅನೇಕ ಸಾರಿ ಒಪ್ಪಿದೆ. ಆ ಮೂಲಕವಾಗಿಯೇ ಹಣ ಪಡೆದುಕೊಳ್ಳತಕ್ಕ ವಿಧಾನ ವನ್ನು ಸರ್ಕಾರದವರು ಅನುಸರಿಸಿಕೊಂಡು ಬಂದಿ ದ್ದಾರೆ. ಸಾಲ ತೆಗೆದ ಮೇಲೆ ನಾವು ಬಡ್ಡಿ ಕೊಡಲೇಬೇಕು. ಬಡ್ಡಿ ಜಾಸ್ತಿಯಾಯಿತು ಎಂದು ಯೋಚನೆ ಮಾಡಿದರೆ ಪ್ರಯೋಜನವಿಲ್ಲ. ಅದಕ್ಕೆ ಒಂದೆರಡು ಉಪಯುಕ್ತವಾದ ಸಲಹೆಗಳು ಬಂದಿವೆ. ನೀರಾವರಿ ಕಾಮಗಾರಿಗಳನ್ನು ನಿರ್ಮಾಣ ಮಾಡಿದ ತಕ್ಷಣದಲ್ಲೇ ಪ್ರತಿಫಲ ಬರುವುದಿಲ್ಲ, ಬಹಳ ಕಾಲ ಹಿಡಿಯುತ್ತದೆ. ಕೇಂದ್ರ ಸರ್ಕಾರದವರ ಮುಂದೆ ಇದನ್ನು ಒತ್ತಾಯಪೂರ್ವಕವಾಗಿ ಹೇಳಿ ಪ್ರಾರಂಭದಲ್ಲಿ ಕೆಲವು ವರ್ಷಗಳಾದರೂ ಬಡ್ಡಿ ಕೊಡದೆ ಇರುವ ಹಾಗೆ ಏರ್ಪಾಡು ಮಾಡಿಕೊಳ್ಳುವುದು ಉತ್ತಮ ಎಂದು ಸದಸ್ಯರು ಹೇಳಿದ್ದಾರೆ. ಅದನ್ನು ಕೇಂದ್ರದ ಮುಂದೆ ಇಟ್ಟಿಲ್ಲ ಎಂದು ಅವರು ತಿಳಿದುಕೊಳ್ಳಬಾರದು. ಅವರಾದರೂ ಎಲ್ಲಿಂದ ತರುತ್ತಾರೆ? Open market ನಲ್ಲಿ ಸಾಲ ತೆಗೆದುಕೊಳ್ಳುತ್ತಾರೆ. ಅವರೂ ಬಡ್ಡಿ ಕೊಡಬೇಕು. ಕೆಲವು ಸಂದರ್ಭಗಳಲ್ಲಿ ಬಹಳ ಕಡಮೆ ಬಡ್ಡಿಗೆ ಅವರು ಸಾಲ ಕೊಟ್ಟಿದ್ದಾರೆ. ಆದರೆ ಸಾಮಾನ್ಯವಾಗಿ ಕೇಂದ್ರ ಸರ್ಕಾರದವರು ಬಡ್ಡಿ ಯನ್ನು ಬಿಟ್ಟುಬಿಡುವುದಕ್ಕೆ ಒಪ್ಪುವುದಿಲ್ಲ. ಆ ಅಂಶ ವನ್ನು ಗಮನದಲ್ಲಿಟ್ಟುಕೊಂಡು ಒತ್ತಾಯ ಮಾಡಿ ದ್ದೇವೆ, ಇನ್ನೂ ಒತ್ತಾಯ ಮಾಡುತ್ತೇವೆ. ಆ ದೃಷ್ಟಿಯಿಂದ ಈ ಖೋತಾ ಬಡ್ಜೆಟ್ಟು ಅನಿವಾರ್ಯ. ಆದರೆ ತಮ್ಮಲ್ಲಿ ಒಂದು ಹೇಳುತ್ತೇನೆ. ಈಗಿನ ಸರ್ಕಾರದವರು ಇದರಲ್ಲಿ ಎಷ್ಟು ಮಟ್ಟಿಗೆ ಕಡಮೆ ಮಾಡ ಬಹುದಾಗಿತ್ತೋ ಅಷ್ಟೂ ಕಡಮೆ ಮಾಡುವುದಕ್ಕೆ ಶಕ್ತಿ ಇತ್ತು. ಆದರೆ ಅದು ಸರಿಯಲ್ಲ ಎಂದು ಮಾಡಲಿಲ್ಲ. ಮುಂದೆ ಬರತಕ್ಕ ಸರ್ಕಾರದವರು ಮತ್ತು ಶಾಸನ ಸಭೆಯವರ ಅಭಿಪ್ರಾಯ ಏನಿರುತ್ತದೆಯೋ, ಅವರು ಯಾವ ಯಾವ ಮಾರ್ಗಗಳಲ್ಲಿ ಹಣವನ್ನು ಖರ್ಚು ಮಾಡ ಬೇಕು ಅಥವಾ ಇನ್ನೂ ಜಾಸ್ತಿ ಒದಗಿಸಬೇಕು ಎನ್ನುತ್ತಾರೆಯೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು, ಯಾವ ಯಾವ ಬಾಬುಗಳಿಂದ ಉತ್ಪನ್ನ ಒದಗಿಸಬೇಕು ಎನ್ನುವುದಕ್ಕೆ ಸರ್ಕಾರಿ ಆಜ್ಞೆ ಏನಿದೆ ಅದನ್ನನುಸರಿಸಿ ಹಣವನ್ನು ಒದಗಿಸಿದ್ದೇವೆ. ಮತ್ತು ಎಲ್ಲೆಲ್ಲಿ ಅನಾ ವಶ್ಯಕವಾಗಿ ಖರ್ಚಾಗುತ್ತಿದೆಯೋ ಅದನ್ನು ಖೋತಾ ಮಾಡಬೇಕೆಂಬ ದೃಷ್ಟಿ ನಮಗಿದೆ. ಅದನ್ನು ಆಗಲೇ ಫೈನಾನ್ಸ್ ಇಲಾಖೆಯವರು ಆಲೋಚನೆ ಮಾಡುತ್ತಾ ಇದ್ದಾರೆ. ಮತ್ತು ಯಾವ ಯಾವ ಬಾಬುಗಳಲ್ಲಿ ಬಡವರ ಮೇಲೆ ಹೆಚ್ಚಿನ ಹೊರೆ ಬೀಳದೆ ಹಣವನ್ನು ಅಥವಾ ಆದಾಯವನ್ನು ಹೆಚ್ಚಿಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಆಗಲೇ ಪರಿಶೀಲನೆ ಮಾಡುತ್ತಾ ಇದ್ದೇವೆ.

ನಾನು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಹೇಳಿದ ಹಾಗೆ, ಫೈನಾನ್ಸ್ ಇಲಾಖೆಯಲ್ಲಿ ಒಂದು ರಿಸರ್ಚ್ ಸೆಕ್ಷನ್ ಏರ್ಪಾಡುಮಾಡಿದೆ. ಅಲ್ಲಿ ಕೆಲಸ ಮಾಡು ತ್ತಿರುವ ಆರ್ಥಿಕ ತಜ್ಞರು ಬಹುವಾಗಿ ಪರಿಶೀಲಿಸಿ ಈಗಾಗಲೆ ಅನೇಕ ವಿಷಯಗಳನ್ನು ಸಂಗ್ರಹಿಸಿ ದ್ದಾರೆ. ಹೊಸ ಸರ್ಕಾರ ಬಂದ ತಕ್ಷಣ ಅವರ ಕೆಲಸ ಸುಗಮವಾಗುವಂತೆ ಈಗಾಗಲೆ ಏರ್ಪಾಡು ಮಾಡಿದ್ದೇವೆ. ಆದಷ್ಟು ಬೇಗನೆ ಐದು ಭಾಗ ಗಳಲ್ಲಿರತಕ್ಕ ವಿಧವಿಧವಾದ ಕಾನೂನುಗಳನ್ನು ತೆರಿಗೆ ಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಒಂದೇ ಸಮ ಮಾಡುವುದಕ್ಕೆ ಪೂರ್ವಭಾವಿಯಾಗಿ ಮಾಡಬೇ ಕಾದ ಏರ್ಪಾಡುಗಳನ್ನೆಲ್ಲಾ ಮಾಡಿದ್ದೇವೆ. ಆದ್ದರಿಂದ ಮುಂದಿನವರ ಕೆಲಸ ಬಹಳ ಸುಲಭ. ಇಷ್ಟು ಹೇಳು ತ್ತೇನೆ: ಐದು ಭಾಗಗಳಲ್ಲಿ ವಿಧವಿಧವಾದ ತೆರಿಗೆಯ ಕಾನ ನುಗಳಿವೆ. ಎಲ್ಲ ಕಡೆಗೂ ಅನ್ವಯಿಸುವ ಒಂದೇ ಒಂದು ಕಾನೂನು ಮಾಡಲು ಪ್ರಯತ್ನಮಾಡಿದೆ. ಪ್ರಾಯಶಃ ಹೆಚ್ಚು ಆದಾಯ ಬರುವ ಅನೇಕ ಮೂಲ ಗಳಿವೆ. ಆದ್ದರಿಂದ ಆ ಕಡೆ ಸರ್ಕಾರದವರು ಉಪೇಕ್ಷೆ ಮಾಡಿದ್ದಾರೆಂದು ಹೇಳಿದರೆ ಯಾರೂ ನಂಬಬಾರದು. ನಾವಿದ್ದ ಅಲ್ಪ ಕಾಲದಲ್ಲಿ ಸರ್ಕಾರಿ ನೌಕರರ ಸಂಬಳ ಗಳನ್ನು ವಿಮರ್ಶೆಮಾಡಿ ನಿಷ್ಕರ್ಷೆಮಾಡಿದ್ದೇವೆ. ಅದು ಕಷ್ಟವೆಂದು ತಾವೇ ಹೇಳಿದ್ದೀರಿ. ಅದಕ್ಕೆಷ್ಟು ಕಾಲ ಹಿಡಿಯಿತೆಂಬುದು ತಮಗೇ ಗೊತ್ತಿದೆ. ಅದರ ಜೊತೆಗೆ ಈ ಸಂಬಂಧವಾದ ಅನೇಕ ವಿಷಯಗಳು, ಸಾಕ್ಷ್ಯ, ಸಾಹಿತ್ಯ, ಅಂಕಿ ಅಂಶ ಸಂಗ್ರಹಿಸಿದ್ದೇವೆ. ಮಾಡಿರುವ ಕೆಲಸವೆಲ್ಲಾ ನನಗೆ ಮನವರಿಕೆಯಾಗಿದೆ. ಇದಕ್ಕೆಲ್ಲಾ ಬಹಳ ಕಾಲಬೇಕಾಗುತ್ತದೆ; ಅಹರ್ನಿಶಿ ದುಡಿದರೆ ಮಾತ್ರ ಸಾಧ್ಯ; ಬಹಳ ಕಷ್ಟವಾದ ಕೆಲಸ. ಇದನ್ನು ಮಾಡಲು ಈ ಸರ್ಕಾರಕ್ಕೆ ಈ ಸಭೆಯ ಸಂಪೂರ್ಣ ಬೆಂಬಲವಿದೆ. ಇದೆಲ್ಲಾ ಆದಾ ಗಲೇ ನಿಜವಾದ ವಿಲೀನೀಕರಣವಾಗಬಹುದು. ಇದ ನ್ನೆಲ್ಲಾ ತಿಳಿದು ಎಲ್ಲವನ್ನೂ ಕೂಲಂಕಷವಾಗಿ ಪರ್ಯಾಲೋಚಿಸಿ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿದ್ದೇವೆ. ಆದ್ದರಿಂದ ಈ ಖೋತಾ ಬಡ್ಜೆಟ್ ವಿಷಯದಲ್ಲಿ ಯಾರೂ ಶಂಕೆಯಿಟ್ಟುಕೊಳ್ಳಬೇಕಾಗಿಲ್ಲ. ಮುಂದಿನ ಸರ್ಕಾರದವರು ಇದನ್ನೆಷ್ಟು ಮಟ್ಟಿಗೆ ಕಡಮೆ ಮಾಡಬೇಕೆಂಬುದನ್ನು ಆಲೋಚಿಸುತ್ತಾರೆ. ನಾವೀಗ ಖರ್ಚನ್ನು ಕಡಮೆ ಮಾಡಬಹುದು. ಪ್ರಾಯಶಃ ಸಭೆಯವರು ಒಪ್ಪುವುದಾದರೆ ಒಂದು ರಿಟ್ರೆಂಚ್‌ಮೆಂಟ್ ಕಮಿಟಿ ಅಥವಾ ಆಫೀಸರುಗಳ ಕಮಿಟಿಯನ್ನು ಮಾಡಿ ಬೇಗ ಕೆಲಸ ಕಾರ್ಯಮಾಡಬಹುದು, ಅದು ಸಾಧ್ಯ. ಆದ್ದರಿಂದ ಈ ಖೋತಾ ಬಡ್ಜೆಟ್ ವಿಚಾರದಲ್ಲಿ ಇದು ಇಂಟರಿಂ ಬಡ್ಜೆಟ್ ಆಗಿರುವುದರಿಂದ ಇದೇ ನಾರ್ಮಲ್ ಫೀಚರ್ ಆಗುತ್ತದೆಂದು ಹೇಳಬಾರದು. ಇದರ ಜೊತೆಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಈ ಖೋತಾ ಅನಿವಾರ್ಯವೆಂದು ತಾವೇ ಒಪ್ಪುತ್ತೀರಿ. ಈಗ ನಾವು ಹಣ ಒದಗಿಸಿರುವುದನ್ನು ಬಡ್ಜೆಟ್ಟಿನಲ್ಲಿ

(ಶ್ರೀ ಟಿ. ಮರಿಯಪ್ಪ.)

ನೋಡಿದರೆ ಕೈಗಾರಿಕೆಗೆ ಸಂಬಂಧಪಟ್ಟಂಥ ಅಂಕಿ ಅಂಶಗಳು, ರೆಸೀಟ್ಸ್ ಮತ್ತು ಎಕ್ಸ್‌ಪೆಂಡಿಚರ್ ಸೈಡ್ ಬಿಟ್ಟರೆ ಸಾಮಾನ್ಯ ವರಮಾನ 35·31 ಕೋಟಿ ರೂಪಾಯಿಗಳಾಗುತ್ತದೆ. ಇದರಲ್ಲಿ ನಾವು ಅಭಿವೃದ್ಧಿ ಇಲಾಖೆಗಳಿಗೆ, ಡೆವಲಪ್‌ಮೆಂಟ್ ವರ್ಕ್ಸ್‌ಗೆ 25.48 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ವಿದ್ಯಾಭ್ಯಾಸದ ಇಲಾಖೆಗೆ 11¼ ಕೋಟಿ ರೂಪಾಯಿ; ಸುಮಾರು ಶೇಕಡ 32 ಭಾಗ ವಿದ್ಯಾಭ್ಯಾಸದ ಇಲಾಖೆಗೆ ಕೊಟ್ಟಿದೆ. ಮೆಡಿಕಲ್ ಮತ್ತು ಪಬ್ಲಿಕ್‌ಹೆಲ್ತ್ ಇಲಾಖೆಗೆ ಶೇಕಡ 11; ಪ್ರಾಯಶಃ ಯಾವ ಸ್ಟೇಟಿನಲ್ಲೂ ಇಷ್ಟು ಖರ್ಚುಮಾಡುತ್ತಿಲ್ಲವೆಂದು ಸಂತೋಷಪಡಬಹುದು. ಪಬ್ಲಿಕ್ ವರ್ಕ್ಸ್ ಇಲಾಖೆಗೆ ರೆವೆನ್ಯೂ ಅಕೌಂಟಿನಲ್ಲಿ ಶೇಕಡ 14 ತೆಗೆದಿಟ್ಟಿದೆ, ವೆಲ್‌ಫೇರ್ ಇಲಾಖೆಗೆ ಶೇಕಡ 15 ಭಾಗ ತೆಗೆದಿಟ್ಟಿದೆ. ಮಾನ್ಯ ಮಹಮದ್ ಇಮಾಂರವರು ಇದನ್ನು ಗಮನಿಸಬೇಕು. ಪೋಲೀಸು, ಜೈಲುಗಳು, ಜಸ್ಟಿಸ್, ಈ ಬಾಬುಗಳಿಗೆ ಎಲ್ಲಾ ಸೇರಿ ಶೇಕಡ 13, ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಶೇಕಡ 6 ತೆಗೆದಿಟ್ಟಿದೆ. ಹೀಗೆ ದೇಶದ ಪುನರ್ನಿರ್ಮಾಣ ಕಾರ್ಯಕ್ಕೆ ಮತ್ತು ದೇಶೋದ್ಧಾರ ಕಾರ್ಯಗಳಿಗೆ ಹೆಚ್ಚು ಹಣ ಮೀಸಲಾಗಿಟ್ಟಿದೆ. ಹೊಸ ಶಾಸನ ಸಭಾ ಸದಸ್ಯರು ಇದನ್ನು ಚೆನ್ನಾಗಿ ಪರಿಶೀಲಿಸಿ ಎಷ್ಟರಮಟ್ಟಿಗೆ ಖೋತಾ ಮಾಡಿ ವೆಚ್ಚ ಉಳಿಸಬಹುದು ಮತ್ತು ಆದಾಯವನ್ನು ಹೆಚ್ಚಿಸುವುದಕ್ಕೇನುಮಾರ್ಗಗಳಿವೆ ಎಂಬುದನ್ನು ಸೂಚಿಸಬಹುದು. ಆದ್ದರಿಂದ ನೀವು ಶಂಕೆ ಪಡಬೇಕಾಗಿಲ್ಲ, ಗಾಬರಿಪಡಬೇಕಾಗಿಲ್ಲ. ನಾವು ಕೊಡುವ ಬಡ್ಡಿಯ ಮೊತ್ತ ದಿನೇ ದಿನೇ ಹೆಚ್ಚುತ್ತಿದೆ, ನಿಜ. ವಿಧಿಯಿಲ್ಲದೆ ಅದನ್ನು ತೆರಬೇಕಾಗಿದೆ. ಆದಷ್ಟು ಇನ್ನೂ ಕಡಮೆ ದರದಲ್ಲಿ ಬಡ್ಡಿ ಕೊಟ್ಟು ಹಣ ಸಾಲವಾಗಿ ಪಡೆಯಬೇಕಾದದ್ದು ಅಗತ್ಯ. ಯಾವ ಬಾಬಿನಿಂದಲೂ ತಕ್ಷಣ ಆದಾಯ ಬಾರದಿರುವುದರಿಂದ ಸ್ವಲ್ಪ ಬಡ್ಡಿಯನ್ನು ಡೆಫರ್ ಮಾಡಬೇಕು ಎಂದು ಕೇಂದ್ರದವರಲ್ಲಿ ಪುನಃ ಪ್ರಾರ್ಥನೆ ಮಾಡುತ್ತೇವೆ. ಈ ವಿಷಯವನ್ನು ಇಷ್ಟು ಪ್ರಸ್ತಾಪ ಮಾಡಿ ಅಲ್ಲಿಗೆ ಬಿಡುತ್ತೇನೆ.

ಸರ್ಕಾರಿ ನೌಕರರ ಸಂಬಳದ ವಿಷಯವನ್ನು ಕುರಿತು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ; ಶ್ರೀ ವಿ. ಆರ್. ನಾಯ್ಡುರವರು ಬಹಳ ಒತ್ತಾಯವಾಗಿ ಹೇಳಿದ್ದಾರೆ. ಸರ್ಕಾರದವರು ಸಾದರು ಮಾಡಿರುವ ಸಂಬಳದ ಸ್ಕೇಲುಗಳೇನಿವೆಯೋ, ಅವು ಎಲ್ಲ ವಿಧದಲ್ಲೂ ಎಲ್ಲರಿಗೂ ಸಂತೋಷವನ್ನುಂಟುಮಾಡಿವೆಯೆಂದು ಹೇಳುವುದಿಲ್ಲ; ಆದರೆ ಬಹು ಮಂದಿಗೆ ಸಂತೋಷವನ್ನುಂಟುಮಾಡಿವೆ. ನೌಕರರ ಸಂಘ ಸಂಸ್ಥೆಗಳವರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಪತ್ರಗಳನ್ನು ಬರೆದಿದ್ದಾರೆ. ಕೆಲವು ಅನಾಮಲಿಗಳು ಇವೆ, ಸಂಬಂಧಪಟ್ಟ ಇಲಾಖೆಯವರು ಅದನ್ನು ಪರಿಶೀಲಿಸುತ್ತಿದ್ದಾರೆ. ಒಂದೆರಡು ವಿಷಯಗಳಲ್ಲಿ ಆಗಲೇ ತಿದ್ದುಪಾಟು ಮಾಡಿದೆ. ಆದುದರಿಂದ ವಿಷಯವನ್ನು ಹೆಚ್ಚಾಗಿ ಪ್ರಸ್ತಾಪ ಮಾಡುವುದರಿಂದ ಪ್ರಯೋಜನವಿಲ್ಲ; ಸರ್ಕಾರದವರು ಯಾವಾಗಲೂ ಸಹಾನುಭೂತಿಯಿಂದ ಪರಿಶೀಲಿಸುತ್ತಿದ್ದಾರೆ.

ಗ್ರಾಮಾಧಿಕಾರಿಗಳ ವಿಷಯ ಪ್ರಸ್ತಾಪಮಾಡಿದರು. ಸರ್ಕಾರದವರೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಆ ವಿಷಯದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅದನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. ಸತ್ಯಾಗ್ರಹ ವಗೈರೆ ಮಾಡಲಾಗಿದೆ, ಆ ರೀತಿ ಮಾಡಬಾರದೆಂದು ಹೇಳಿತ್ತು. ಆದರೆ ಅಲ್ಲಲ್ಲಿ ಕೆಲವರು ಸತ್ಯಾಗ್ರಹ ಮಾಡಿದ್ದಾರೆ; ಅದು ತಪ್ಪು; ಆ ರೀತಿ ಮಾಡತಕ್ಕ ಅಗತ್ಯ ಕಂಡು ಬರಲಿಲ್ಲ. ಮಾನ್ಯ ಮಂತ್ರಿಗಳು ಆ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ ಮೇಲೆ ಹಾಗೆ ಮಾಡುವುದು ಬಹಳ ತಪ್ಪು. ಕೆಲವು ಗ್ರಾಮಾಧಿಕಾರಿಗಳ ಸಂಘದವರು ನನ್ನನ್ನು ನೋಡಿದರು. ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ ಮೇಲೆ ಅವರು ಸಂತೋಷದಿಂದ ಹೋಗಿದ್ದಾರೆ. ಆದರೆ ಅದನ್ನು ರಾಜಕೀಯ ಸಮಸ್ಯೆಯಾಗಿ ಯಾರೂ ಭಾವಿಸಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ.

ಗ್ರಾಮ ನೌಕರರ ವಿಚಾರವನ್ನೂ ಪ್ರಸ್ತಾಪಮಾಡಿದ್ದಾರೆ. ಅದು ಬಹಳ ಕಷ್ಟವಾದ ಸಮಸ್ಯೆ. ಈಗಿರತಕ್ಕ ಕಾನೂನಿನ ಪ್ರಕಾರ ಅವರಿಗೆ ಎಷ್ಟು ಸಹಾಯ ಮಾಡಬಹುದೋ ಅಷ್ಟನ್ನು ಮಾಡುತ್ತೇವೆ. ಮಿರಾಸೆ ಸರಿಯಾಗಿ ಸಿಕ್ಕುತ್ತಿಲ್ಲವೆಂಬ ಕೂಗಿದೆ. ಈ ವಿಷಯದಲ್ಲೇನು ಮಾಡಬೇಕು, ಈಗಿನ ಸರ್ಕಾರದ ಹಣಕಾಸಿನ ಪರಿಸ್ಥಿತಿಯಲ್ಲಿ ಸರ್ಕಾರದವರು ಎಷ್ಟು ಮಟ್ಟಿಗೆ ಈ ಜವಾಬ್ದಾರಿಯನ್ನು ಹೊರಬಲ್ಲರು ಎಂಬುದನ್ನು ಕೂಡ ಯೋಚನೆಮಾಡಬೇಕು.

ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ವಿಚಾರದಲ್ಲಿ ಸ್ವಲ್ಪ ಆಕ್ಷೇಪಣೆಮಾಡಿದ್ದಾರೆ. ಅದನ್ನು ಪದೇ ಪದೇ ಹೇಳುತ್ತಿದ್ದಾರೆ. ಮಹಾ ಚುನಾವಣೆ ಬಂತೆಂಬುದನ್ನೂ ಮರೆತು ಪುನಃ ಪುನಃ ಹೇಳುತ್ತಿದ್ದಾರೆ. ರಿಕಾರ್ಡಿಂಗ್ ಇನ್ಸ್ಟ್ರುಮೆಂಟಿನಂತೆ ಈ ವಿಚಾರ ಹೇಳಿದ್ದಾರೆ. ಅದನ್ನು "ಸ್ವಿಚ್ ಬ್ಯಾಕ್" ಮಾಡಿದರೆ ಪುನರಾವರ್ತಿಯಾಗುತ್ತದೆ. ಜಿಲ್ಲಾಬೋರ್ಡ್ ಚುನಾವಣೆಯನ್ನು ನಿಧಾನ ಮಾಡದೆ ಆದಷ್ಟು ಜಾಗ್ರತೆ-ಮಾಡುತ್ತಾರೆ, ಆದರೆ ಈಗ ಕ್ಲಿಷ್ಟ ಪರಿಸ್ಥಿತಿಯಿದೆ, ಮಹಾಚುನಾವಣೆ ಈಗ ತಾನೆ ಆಗಿದೆ, ಎಷ್ಟೋ ಕೆಲಸ ಡಿಸ್‌ಲೊಕೇಟ್ ಆಗಿದೆ. ಇದೆಲ್ಲಾ ಸರಿಹೋಗಬೇಕು. ಜೊತೆಗೆ ಐದು ಭಾಗಗಳಲ್ಲಿರುವ ಕಾನೂನುಗಳನ್ನು ಸ್ವಲ್ಪಮಟ್ಟಿಗೆ ಸಮನ್ವಯ ಮಾಡಬೇಕಾದ ಅಗತ್ಯವಿದೆ. ಆ ದೃಷ್ಟಿಯಿಂದ ಸ್ವಲ್ಪ ಕಾಲಬೇಕು. ಪ್ರಾಯಶಃ ಇನ್ನೊಂದು ವರ್ಷದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಖಂಡಿತ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಇಮಾಂರವರು ಖರ್ಚು ಖೋತಾ ಮಾಡಬೇಕೆಂದೂ ಯಾವ ಯಾವವು ಅನಾವಶ್ಯಕವಾಗಿದೆ ಎಂದು ಕಂಡುಬರುವುವೋ ಅಂಥವುಗಳನ್ನೆಲ್ಲಾ ತಡೆಹಿಡಿದು ಅವಶ್ಯಕವಾಗಿರುವ ಅಭಿವೃದ್ಧಿಕಾರ್ಯಗಳಿಗೆ ಹಣವನ್ನು ಉಪಯೋಗಿಸಬೇಕೆಂದು ತಿಳಿಸಿದರು. ಆದರೆ ಶಾಲೆಗಳ ಕಟ್ಟಡಗಳ ರಚನೆ, ಕೋ-ಆಪರೇಟಿವ್ ಸೊಸೈಟಿಗಳ ಸ್ಥಾಪನೆ ಹಿಂದುಳಿದ ವರ್ಗದವರ ಅಭಿವೃದ್ಧಿಯ ಕಾರ್ಯ ಮುಂತಾದ ಅನೇಕ ಅಗತ್ಯದ ಕಾರ್ಯಗಳನ್ನು ಮಾಡಲೇ ಬೇಕಾಗಿದೆ.

ಶ್ರೀ ಇಮಾಂ ಅವರು ವಿಧಾನ ಸೌಧ ವಿಚಾರಣಾ ಸಮಿತಿಯ ವರದಿಯ ವಿಷಯವನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ಈ ಕಟ್ಟಡದ ರಚನೆಯ ಕಾರ್ಯದಲ್ಲಿ ಸುವ್ಯವಸ್ಥಿತವಾಗಿ ಹಣ ಖರ್ಚಾಗಿಲ್ಲ ಎಂದು ಹೇಳಿದರು. ಆದರೆ ಆ ವಿಷಯವೇ ಚರ್ಚೆಯಲ್ಲಿ ಭೂತಾಕಾರ ತಾಳಿತು. ಶ್ರೀ ಇಮಾಂ ಅವರು ಈ ವರದಿಯ ಬಗ್ಗೆ ಎಷ್ಟು ವಿಷಯವನ್ನು ಎತ್ತಿ ಹೇಳಿದ್ದರೋ ಅಷ್ಟಕ್ಕೆ ಉತ್ತರ ಕೊಟ್ಟಿದ್ದರೆ ಸಾಕಾಗಬಹುದಾಗಿತ್ತು. ಆದರೆ ಶ್ರೀ ಹನುಮಂತಯ್ಯನವರು ಸಮಿತಿಯ ವರದಿ ಮತ್ತು ಸಮಿತಿಯ ಸದಸ್ಯರಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು. ಅವರು ಆ ವಿಷಯಗಳನ್ನು ಪ್ರಸ್ತಾಪ ಮಾಡದೇ ಇದ್ದಿದ್ದರೆ ಚೆನ್ನಾಗಿತ್ತು. ಅದರ ಜೊತೆಗೆ ಅವಶ್ಯಕವಾಗಿ ಇರದೇ ಇದ್ದ ಮತ್ತಿತರ ಕೆಲವು ವಿಷಯಗಳನ್ನು ಅನಾವಶ್ಯಕವಾಗಿ ಪ್ರಸ್ತಾಪಮಾಡಿದರು. ಅವರು ಹಾಗೆ ಪ್ರಸ್ತಾಪಿ

ಸಿದ ಕೆಲವು ಅಂಶಗಳಿಗೆ ಸರಕಾರದ ಪರವಾಗಿ ವಿಧಿಯಿಲ್ಲದೆ ವ್ಯಥೆಯಿಂದ ಉತ್ತರ ಕೊಡಬೇಕಾಗಿದೆ. ಅದು ಸಂತೋಷದ ಸಂಗತಿಯಲ್ಲ. ಕರ್ತವ್ಯ ದೃಷ್ಟಿಯಿಂದ. ನಾನು ಉತ್ತರ ಕೊಡಬೇಕಾಗಿದೆ. ಸಮಿತಿಯವರು ವರದಿಯನ್ನು ತಯಾರುಮಾಡುವಾಗ ಅವರ ಮುಂದೆ ಸರಿಯಾದ ಆಧಾರವಿತ್ತೋ ಇಲ್ಲವೋ ಎಂಬುದನ್ನು ಈ ಮಾನ್ಯ ಸಭೆಗೆ ತಿಳಿಸದೆ ಇದ್ದರೆ ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆ.

Sri J. MOHAMED IMAM.—Can I seek some information, Sir? Are the Government in full concurrence with the Report? Have they adopted it?

Sri H. K. VEERANNA GOWDH (Minister for Public Works).—That will come later on.

ಶ್ರೀ ಟಿ. ಮರಿಯಪ್ಪ.—ನಾನು ಪೂರ್ತಿಯಾಗಿ ಉತ್ತರ ಕೊಡುವವರೆಗೆ ಮಾನ್ಯ ಸದಸ್ಯರು ಕೇಳಿದರೆ ಚೆನ್ನಾಗಿರುತ್ತದೆ. ಶ್ರೀ ಹನುಮಂತಯ್ಯನವರೂ ಮತ್ತು ಅವರ ಸ್ನೇಹಿತರಾದ ಕೆಲವು ಮಾನ್ಯ ಸದಸ್ಯರೂ ಉತ್ತರ ಕೊಡುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. "Rectified Spirit King" ಎಂದು ಶ್ರೀ ಪಳನಿಯಪ್ಪ ಅವರ ಹೆಸರು ಪ್ರಸಿದ್ಧಿಗೆ ಬಂದಿದೆ. ಅವರು ಮುಖ್ಯ ಮಂತ್ರಿಗಳು ಸಮಿತಿಯ ವರದಿಯನ್ನು ಹೇಳಿ ಬರೆಸಿದರು ಎಂದು ಹೇಳಿದರು. ಅದು ಸಲ್ಲದ ಆಕ್ಷೇಪಣೆ. ಆತ್ಮಗೌರವವಿರುವವರು ಯಾರೂ ಅಂಥ ಕೆಲಸ ಮಾಡುವುದಿಲ್ಲ. ಅದಕ್ಕೆ ನಾನು ಬಹಳ ವಿಷಾದ ಪಡುತ್ತೇನೆ. ಶ್ರೀ ಪಿ. ಆರ್. ರಾಮಯ್ಯನವರು ಏಳೆಂಟು ತಿಂಗಳಿಂದ ಸರಕಾರ ಇದೆಯೋ ಇಲ್ಲವೋ ಎಂಬುದು ಗೊತ್ತಾಗುವುದಿಲ್ಲವೆಂದು ಹೇಳಿದರು. ಸರಕಾರವು ಒಂದು ಮೇಳಮಾಡಿ ಶ್ರೀಮಾನ್ ರಾಮಯ್ಯನವರನ್ನು ತೃಪ್ತಿಪಡಿಸಲಿಲ್ಲ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಈ ಸಮಿತಿಯನ್ನು ಯಾರು ರಚನೆ ಮಾಡಿದರು? ಯಾಕೆ ರಚನೆ ಮಾಡಿದರು? ಯಾವಾಗ ಇಂಥ ಸಮಿತಿಯು ರಚನೆಯಾಯಿತು ಎಂಬುದನ್ನು ವಿಚಾರಮಾಡಬೇಕಾಗಿದೆ. ಸಾಮಾನ್ಯವಾದ ಸಂದರ್ಭಗಳಲ್ಲಿ ಇಂಥ ಸಮಿತಿಗಳನ್ನು ರಚಿಸಲಾಗುವುದೇ? ವಿಶೇಷವಾದ ಸಂದರ್ಭಗಳಲ್ಲಿಯೇ ಮಾತ್ರ ಸಮಿತಿಯನ್ನು ರಚಿಸಲಾಗುವುದು. ಈ ಸಮಿತಿಯನ್ನು ರಚನೆ ಮಾಡಿದವರು ಶ್ರೀ ಹನುಮಂತಯ್ಯನವರು. ಅವರು ಮಾಡಿದ ಕೆಲಸಗಳ ಪರಿಶೀಲನೆಮಾಡಲು ಅವರೇ ಸಮಿತಿಯನ್ನು ರಚಿಸಬೇಕಾದ ಸಂದರ್ಭ ಬಂತು; ಪ್ರಾಯಶಃ ಇಂಥ ಸಂದರ್ಭ ಎಲ್ಲಿಯೂ ಒದಗಿಲ್ಲ.

Sri B. NARAYANASWAMY (Mysore South).—Irony of fate!

ಶ್ರೀ ಟಿ. ಮರಿಯಪ್ಪ.—ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ದೇವರ ಹೆಸರನ್ನು ತಂದರು. ದೇವರ ಹೆಸರನ್ನು ತರದೇ ಹೋಗಿದ್ದರೆ ಚೆನ್ನಾಗಿತ್ತು. ಅನಾವಶ್ಯಕವಾಗಿ ದೇವರದಿಂದರ, ಗ್ರಹಗತಿಗಳ ಹೆಸರನ್ನು ಹೇಳಿ ಸ್ವಲ್ಪ ಕನಿಕರ ಪಡೆಯೋಣ ಎಂದು ಭಾವಿಸಿದ್ದರೋ ಏನೋ! ಈಗ ಇರುವ ವಿಷಯ ಏನು? ವಿಧಾನ ಸೌಧ ನಿರ್ಮಾಣದ ಕಾರ್ಯದಲ್ಲಿ ಹಣ ಏನಾದರೂ ಅನ್ಯಾಯವಾಗಿ ಪೋಲು ಆಗಿದೆಯೋ ಇಲ್ಲವೇ ಇಷ್ಟು ವಿಷಯ ಹೇಳಬೇಕಾಗಿತ್ತು. ಇಷ್ಟು ಹೇಳಿದ್ದರೆ ಸಾಕಾಗಿತ್ತು. ಸಮಿತಿಯ ಸದಸ್ಯರು ನಮ್ಮವರೇ? ಅವರನ್ನು ನಾವು ಆರಿಸಿದ್ದೇವೆಯೇ? ಸಮಿತಿಯ ಸದಸ್ಯರನ್ನು ಆರಿಸಿದವರು ಯಾರು? ಅವರೇ ಆರಿಸಿದ್ದಾರೆ. ವಿಧಾನ ಸೌಧ ಕಟ್ಟಿಸುವುದರಲ್ಲಿ ಹೆಚ್ಚು ಹಣ ಖರ್ಚಾಗಿಲ್ಲವೆಂದು ಈಗ ಈ ಸಭೆಯಲ್ಲಿ ಹೇಳುವುದಕ್ಕಿಂತ, ಹಣದ ವಿಚಾರದಲ್ಲಿ ನಷ್ಟ, ದುಂದುಗಾರಿಕೆ, ಅವ್ಯವಸ್ಥೆ ಆಗಿದೆಯೋ ಇಲ್ಲವೋ ಎಂಬುದನ್ನು ವಿಧಾನ ಸೌಧ ವಿಚಾರಣಾ ಸಮಿತಿಯ ಮುಂದೆ ಅಂಕಿ ಅಂಶಗಳನ್ನು ಕೊಟ್ಟು ಹೇಳಬೇಕಾಗಿತ್ತು. ಸಮಿತಿಯ ರಚನೆಯನ್ನು ಯಾಕೆ ಮಾಡಿದ್ದರು ಎಂಬುದು ಅವರಿಗೆ ಗೊತ್ತಿಲ್ಲವೇ? ಹೊರಗಡೆಯಿಂದ ಕಟುವಾದ ಟೀಕೆಗಳು ಬಂದಿವೆ. ಎಸ್ಟಿಮೇಟ್ಸ್ ಕಮಿಟಿಯವರು ಎಲ್ಲವನ್ನೂ ವಿಮರ್ಶೆ ಮಾಡಿ, ಈ ವಿಷಯವು ನಮ್ಮ ಕೈಮೀರಿದ್ದಾಗಿರುವುದರಿಂದ ಇದರಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ರಚಿಸಿ ಈ ವಿಷಯದ ಸಂಪೂರ್ಣ ಪರಿಶೀಲನೆ ಆಗಬೇಕೆಂದು ಸೂಚನೆ ಮಾಡಿದರು. ಎಸ್ಟಿಮೇಟ್ಸ್ ಕಮಿಟಿಯವರು ತಮ್ಮ ವರದಿಯನ್ನು ಶಾಸನ ಸಭೆಯ ಮುಂದೆ ಇಟ್ಟರು. ಹಣಕಾಸಿನ ಪರಿಸ್ಥಿತಿಯನ್ನು ತುಲನಾತ್ಮಕವಾಗಿ ಪರಿಶೀಲನೆ ಮಾಡಲು ಎನ್. ಮಾಧವರಾವ್ ಸಮಿತಿಯ ಏರ್ಪಾಡು ಆಯಿತು. ಅವರೂ ಈ ಸಂಬಂಧವಾಗಿ ಆಕ್ಷೇಪಣೆ ಮಾಡಿದರು. ವಿಧಿ ಇಲ್ಲದೆ ಇದು ಕಾಂಗ್ರೆಸ್ ಹೈಕಮಾಂಡಿನವರೆಗೂ ಹೋಯಿತು. ಹೀಗೆ ಸಾರ್ವಜನಿಕರ ಆಕ್ಷೇಪಣೆಗೆ ಗುರಿಯಾಗಿ ಜನರ ಒತ್ತಾಯದ ಪರಿಣಾಮವಾಗಿ ಶ್ರೀ ಹನುಮಂತಯ್ಯನವರು ತಾವೇ ಮಾಡಿದ ಕೆಲಸ ಕಾರ್ಯಗಳನ್ನು ವಿಮರ್ಶೆ ಮಾಡಲು ಮತ್ತು ಸಮಂಜಸವಾಗಿ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ನೇಮಿಸಿದರು. ಸಮಿತಿಯ ಸದಸ್ಯರನ್ನು ನಾವು ಆರಿಸಿದ್ದೇವೆಯೇ? ಶ್ರೀ ಹನುಮಂತಯ್ಯನವರೇ ಆರಿಸಿದ್ದಾರೆ. ಈ ಸಮಿತಿಯ ಅಧ್ಯಕ್ಷರು ನಾಗಪುರ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು; ಶ್ರೀ ನರಸಿಂಹಯ್ಯನವರೂ ಮತ್ತು ಶ್ರೀ ರಾಘವೇಂದ್ರ ರಾಯರೂ ನಮ್ಮ ಮೈಸೂರು ರಾಜ್ಯದಲ್ಲಿ ಒಳ್ಳೆಯ ಸೇವೆ ಮಾಡಿದ್ದಾರೆ. ಇವರೆಲ್ಲರೂ ಅನ್ಯಾಯ ಮಾಡಿದ್ದಾರೆ ಎಂದು ಹೇಳುವ ಶಬ್ದಗಳು ಅವರ ಬಾಯಿಂದ ಬರಬಾರದಾಗಿತ್ತು. ಅರುವತ್ತು ವರ್ಷ ಮೀರಿದ್ದರಿಂದ ಅವರಿಗೆ ಅರಳುಮರಳು ಆಗಿದೆ ಎಂದು ಹೇಳುವುದು ತುಂಬ ಅನ್ಯಾಯ ಮತ್ತು ತುಂಬ ವಿಷಾದಕರ. ಸಮಿತಿಯನ್ನು ನೇಮಿಸುವಾಗ ಅವರ ವಯಸ್ಸು ಶ್ರೀ ಹನುಮಂತಯ್ಯನವರಿಗೆ ಗೊತ್ತಿರಲಿಲ್ಲವೇ? ಅವರೇನು 20 ವರ್ಷದ ಹುಡುಗರಿದ್ದಾರೆಂದು ತಿಳಿದುಕೊಂಡಿದ್ದರೋ? ದೇಶದಲ್ಲಿಯ ಗಣ್ಯ ವ್ಯಕ್ತಿಗಳನ್ನು ಆರಿಸಿ ಸಮಿತಿಗೆ ನೇಮಿಸಿದ ಮೇಲೆ, ಸಮಿತಿಯ ವರದಿ ತಮಗೆ ವಿರೋಧವಾಗಿ ಆದಾಕ್ಷಣಕ್ಕೇ, ಅವರ ಕಾರ್ಯದ ಬಗ್ಗೆ, ಅವರ ಗೌರವದ ಬಗ್ಗೆ ಅಷ್ಟು ಲಘುವಾಗಿ ಮಾತನಾಡುವುದೂ ಅವಹೇಳನಮಾಡುವುದೂ ಚೀಫ್‌ಮಿನಿಸ್ಟರ್ ಆಗಿದ್ದವರಿಗೆ ಸಲ್ಲುತ್ತದೆಯೇ ಎಂದು ಪ್ರಶ್ನೆ ಮಾಡುತ್ತೇನೆ. ಆದುದರಿಂದ ಆ ವಿಷಯವನ್ನು ಹಾಗೆ ಹೇಳದೆ ಇದ್ದರೆ ಬಹಳ ಚೆನ್ನಾಗಿತ್ತು. ಇದನ್ನು ಬಹಳ ವ್ಯಸನದಿಂದ ಹೇಳುತ್ತೇನೆ, ಸಂತೋಷದಿಂದ ಹೇಳುವುದಿಲ್ಲ. ಬಹಳ ಲಘುವಾಗಿ ಹಾಸ್ಯಾಸ್ಪದ ರೀತಿಯಲ್ಲಿ ಕಲುಷಿತ ಮನಸ್ಸಿನಿಂದ ಹೇಳಿರುವುದು ವಿಷಾದಕರ, ವ್ಯಸನಕರ. ಆ ರೀತಿಯಾಗಿ ಹೇಳಬಾರದಿತ್ತು. ಏನಾದರೂ ಅಂಕಿಅಂಶಗಳನ್ನು ಕೊಟ್ಟು ಸಮರ್ಥಿಸಿದರೇ? ಸಮಿತಿಯನ್ನು ಟೀಕಿಸುವುದರಲ್ಲಿಯೇ ಬಹಳ ಕಾಲ ವಿನಿಯೋಗಿಸಿದರು. ಆ ರೀತಿ ಮಾತನಾಡಬಾರದಾಗಿತ್ತು.

1-30 P.M.

ಹೀಗೆ ದೇಶದ ಮಾಜಿ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿಯ ಯಾವ ಲೋಪದೋಷಗಳೂ

(ಶ್ರೀ ಟಿ. ಮರಿಯಪ್ಪ.)

ಇರಬಾರದು. ಲೆಕ್ಕ ಸರಿಯಾಗಿರಬೇಕು. ಸ್ಟೋರ್ಸ್ ಅಕೌಂಟ್ ಸರಿಯಾಗಿರಬೇಕು. ಮೆಟೀರಿಯಲ್ಸ್ ಅಕೌಂಟ್ ಸರಿಯಾಗಿರಬೇಕು, ನಮ್ಮಲ್ಲಿರುವ ರಿಜಿಸ್ಟರುಗಳನ್ನು ಸರಿಯಾಗಿ ಬರೆದಿಡಬೇಕು. ಅವರು ದಿನದ ಇಪ್ಪತ್ತು ನಾಲ್ಕುಗಂಟೆ ಕಾಲವೂಕೂಡ ವಿಧಾನಸೌಧದಲ್ಲೇ ಕಳೆಯುತ್ತಿದ್ದರು. ಇಷ್ಟುಕಾಲ ಇಲ್ಲೇ ಏಕಿರಬೇಕಾಗಿತ್ತು ? ಅಂತಹ ಅವ್ಯವಸ್ಥೆಗಳಿಲ್ಲದಿದ್ದರೆ ಈ ರೀತಿ ಇನ್ಸ್‌ಪೆಕ್ಷನ್‌ಗಳು ಏತಕ್ಕೆ, ಸ್ವಾಮಿ ? ಇನ್ಸ್‌ಪೆಕ್ಷನ್ನುಗಳನ್ನು ಮಾಡಲು ಇವರೇಕೆ ಜವಾಬ್ದಾರಿ ವಹಿಸಿಕೊಳ್ಳಬೇಕಾಗಿತ್ತೋ ನನಗೆ ಅರ್ಥವಾಗುವುದಿಲ್ಲ. ಒಂದು ಕಟ್ಟಡದ ಅಂದಾಜುಗಳನ್ನು ತನಿಖೆ ಮಾಡಬೇಕಾದರೆ ಅವನ್ನು ಮೊದಲು ಸರಿಯಾಗಿ ಚೆಕ್ಕು ಮಾಡಲು ಇಂಜಿನೀಯರುಗಳಿದ್ದಾರೆ, ಓವರ್‌ಸೀರುಗಳಿದ್ದಾರೆ. ಯಾವಾಗಲೂ ಯಾವುದಾದರೂ ಕೆಲಸವನ್ನು ಕೈಗೊಳ್ಳಬೇಕಾದರೆ ಸರಿಯಾದ ಅಂದಾಜುಗಳನ್ನು ತಯಾರು ಮಾಡಿ ಅವನ್ನು ಮಂಜೂರು ಮಾಡಿದನಂತರ ಕೆಲಸಗಳಿಗಾರಂಭಿಸಬೇಕು. ಇಲ್ಲಿ ನೋಡಿದರೆ ಯಾವಲೆಕ್ಕಗಳೂ ಸರಿಯಾಗಿಲ್ಲ. ಅಲ್ಲದೆ ಕೋಟ್ಯಾಂತರ ರೂಪಾಯಿಗಳ ಜವಾಬ್ದಾರಿಯನ್ನು ಇವರೊಬ್ಬರೇ ಏಕೆ ತೆಗೆದುಕೊಳ್ಳಬೇಕಾಗಿತ್ತು ? ಪಬ್ಲಿಕ್‌ವರ್ಕ್ಸ್ ಇಲಾಖೆಯು ಮಾನ್ಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರ ಕೈಯಲ್ಲಿತ್ತು. ಆದರೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು ಈ ಕಟ್ಟಡದ ಅಂದಾಜುಗಳನ್ನು ಆಗಾಗ್ಗೆ ಬದಲಾಯಿಸುತ್ತ ಬಂದು ಕೊನೆಗೆ 50 ಲಕ್ಷ ರೂಪಾಯಿಗಳಿಗೂ ಮೀರಿ ಅಂದಾಜಿಲ್ಲದೆಯೇ ಮಂಜೂರು ಮಾಡಬೇಕಾಗಿ ಬಂದಿತು. ಆ ಸಂದರ್ಭದಲ್ಲಿ ಅವರು ಈ ಪಿ. ಡಬ್ಲ್ಯು. ಇಲಾಖೆಯನ್ನೇ ಬಿಟ್ಟುಬಿಟ್ಟರು. ಅನಂತರ ಇವರೇ ಆ ಖಾತೆಯನ್ನು ವಹಿಸಿಕೊಂಡರು. ನಾನು ಕೂಡ ಶ್ರೀ ರೆಡ್ಡಿಯವರ ಮಿನಿಸ್ಟ್ರಿಯಲ್ಲಿ 4½ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಯಾವುದಾದರೂ ಕೆಲಸಕ್ಕೆ 50ಸಾವಿರಕ್ಕೂ ಹೆಚ್ಚಿನ ಹಣಬೇಕಾದರೆ, ಅದು ಕ್ಯಾಬಿನೆಟ್ಟಿನಲ್ಲಿ ಪೂರ್ಣವಾಗಿ ಚರ್ಚೆಯಾಗಿ ಸ್ಯಾಂಕ್ಷನ್ ಆಗಬೇಕು. ಇದು ಸೆಕ್ರೆಟೇರಿಯಟ್ಟಿನ ವರಿಗೇ ಅಲ್ಲ, ಎಲ್ಲರಿಗೂ ತಿಳಿದವಿಚಾರ. ರಿಪೋರ್ಟಿನಲ್ಲಿ ಪ್ರಸ್ತಾಪಮಾಡಿರುವಂತೆ 50 ಲಕ್ಷಕ್ಕೂ ಮೀರಿ ಇಲ್ಲಿ ಖರ್ಚಾಗಿದೆ ಮತ್ತು ಅದೂಕೂಡ ದಿನದಿನಕ್ಕೆ ಏರುತ್ತಿದೆ. ಅದುದರಿಂದ ಶ್ರೀ ಹನುಮಂತಯ್ಯನವರು ತಮ್ಮ ಸಹೋದ್ಯೋಗಿಗಳಿಗೆ ತಿಳಿಸದೆ ಇರುವಂತಹ ಕಾರಣವಾದರೂ ಏನಿತ್ತು ? ಅದು ಅವರ ಇಚ್ಛೆಗೇ ಒಳಪಟ್ಟಿತ್ತು. ಆದಕಾರಣ ವಿಷಯಗಳೊಂದನ್ನೂ ಅವರ ಸಹೋದ್ಯೋಗಿಗಳಿಗಾದರೂ ತಿಳಿಸದಿರುವುದಕ್ಕೆ ಏನೋ ಕಾರಣವಿರಬೇಕು. ಆಗಾಗ್ಗೆ ಶಾಸನ ಸಭೆಯಲ್ಲಿ ಈ ಕಟ್ಟಡದ ಬಗ್ಗೆ ಹೆಚ್ಚಿನ ಹಣಕ್ಕೆ ಮಂಜೂರು ಮಾಡಿಸಿಕೊಳ್ಳುವ ಸಂದರ್ಭದಲ್ಲಿ, ಆಗ ಈ ಸಭೆಯ ಸದಸ್ಯರಾಗಿದ್ದ ಮಾನ್ಯ ಶ್ರೀ ವೀರಣ್ಣಗೌಡರೇ ಈ ರೀತಿ ಹೇಳಿದ್ದಾರೆ. "ವಿಧಾನ ಸೌಧದ ಉದಾಹರಣೆ ತೆಗೆದುಕೊಂಡರೆ ಅದಕ್ಕೆ 50 ಲಕ್ಷದ ಮೇಲೆ ಖರ್ಚಾಗುವುದಿಲ್ಲ ಎಂದು ಮೊದಲು ಹೇಳಿದ್ದರು, ಅಮೇಲೆ 60 ಲಕ್ಷ ವಾಯಿತು, ಈ ದಿವಸ 130 ಲಕ್ಷ ರೂಪಾಯಿ ಬೇಕು ಎಂದು ಹೇಳುತ್ತಾರೆ. ಹೀಗೆ ಮನಸ್ಸಿಗೆ ಬಂದ ಹಾಗೆಲ್ಲಾ ಆಗಾಗ್ಗೆ ಬದಲಾವಣೆ ಮಾಡುತ್ತಾ ಹೋದರೆ ಸರ್ಕಾರದ ಮಾತಿಗೆ ಏನಾದರೂ ಬೆಲೆ ಇದೆಯೇ ? ಮೂರು ನಾಲ್ಕು ವರ್ಷಗಳ ಹಿಂದೆ ಹೇಳಿದುದಕ್ಕೂ ಈಗ ಹೇಳುವುದಕ್ಕೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ."

ಈ ವಿಧಾನ ಸೌಧದ ವಿಚಾರದಲ್ಲಿ, ಅಂದಾಜು ಮೊದಲು 50 ಲಕ್ಷವಿದ್ದುದು, 60 ಲಕ್ಷಕ್ಕೇರಿತು. ಅನಂತರ 130 ಲಕ್ಷಕ್ಕೇರಿತು. ಹೀಗೆ ಮನಸ್ಸಿಗೆ ಬಂದ ಹಾಗೆ ಯಾವುದಕ್ಕೂ ಮಿತಿಯಿಲ್ಲದಂತೆ ಏರಿತು. ಹೀಗೆ ಮಾಡುವುದರಿಂದ ಏನು ಫಲವಿಕ್ಕೋ ನನಗೇನೂ ತೋರುವುದಿಲ್ಲ. ಹೀಗೆ ಏರುತ್ತಾ ಅನೇಕ ವಿಧವಾದ ಟೀಕೆಗಳು ಬರಲು ಆರಂಭಿಸಿದವು. ಆಗ ಇವರ ದೂರದೃಷ್ಟವೋ, ದುರ್ದೈವವೋ ಏನೋ ಮಾನ್ಯ ಸದಸ್ಯರಾದ ಶ್ರೀ ನಾಗಯ್ಯರೆಡ್ಡಿಯವರೇ ಆ ಎಸ್ಟಿಮೇಟ್ಸ್ ಸಮಿತಿಯ ಚೇರ್ಮನ್ನಾದರು. ಅವರಿಂದ ಬಂದ ವರದಿಯನ್ನೇ ಶ್ರೀ ಹನುಮಂತಯ್ಯನವರು ಪರಿಶೀಲನೆ ಮಾಡಿಲ್ಲ ಎಂದರೆ, ಅವರಿಗೂ ಈ ಸಮಿತಿಯವರಿಗೂ ಹೇಗಿತ್ತು ಎಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅದರಲ್ಲಿ ಅವರು ಹೀಗೆ ಪ್ರಸ್ತಾಪ ಮಾಡಿದ್ದಾರೆ :

VIDHANA SOUDHA

"While the interpellation on Vidnana Soudha was being answered in the Legislative Assembly, the Chief Minister stated that the Estimates Committee may inspect the Building and examine the accounts. At the very outset we have to point out that apart from the general appraisal of the work, it was not practicable to examine the accounts, as this would involve considerable time and the assistance of financial and technical experts.

In our comments on this work we have therefore relied much on the audit reports as the accounts of this work are subject to audit by the Accountant General. In the initial stages, the Chief Minister stated that the cost of the work would not go beyond Rs. 50 lakhs. Even at that time no detailed estimates had been prepared and sent to audit. Subsequently the estimate has been prepared for Rs. 130 lakhs. It is important to note that this estimate has been prepared after the work had reached stages of completion in many respects. It is stated in reply to the questionnaire that the staff of audit office have inspected the accounts four times and a special inspection has been conducted in March 1955. A copy of the report of this inspection has been made available to us. The following are

the important observations made in the audit report:—

1. Execution of the work without sanction to detailed designs and estimates;
2. Non-maintenance of materials accounts of works including that relating to wood manufacture in proper form and efailure to ffect reconciliation between the Divisional Registers and Sub-Divisional materials returns from month to month;
3. Non-obtaining the statement of unused balance of materials at site of works in the prescribed forms;
4. Non-maintenance of work accounts in the forms prescribed;
5. Payment of part rates in bills;
6. Non-allocation of the cost of maintenance and running of lorries to the works concerned;

It may be seen therefrom that estimate of Rs. 130 lakhs prepared 2 or 2½ years after the commencement of the work cannot be in any sense called an estimate. It can at best be an estimate as per actual execution. This would mean that in a departmental work like this where large public funds are involved, care has not been taken to ensure economy as the work has been executed without a duly sanctioned estimate. In this connection the following remarks of the members of the Public Accounts Committee on the Appropriation Accounts, 1950-51, is worth noticing;

> "The absence of sanctioned estimates gives room for suspicion that they are deliberately kept back to vary the rates and quantities arbitrarily and this is likely to result in corruption and malpractice."

Most of the items come under non-scheduled items. While the Special Engineer has stated that the work has been executed economically, there are no comparative rates to prove the contrary. The audit reports disclose that stores accounts have not been reconciled and agreements have not been secured between the balances in the Divisional registers and those accounted for in the Sub-Divisional returns. The materials accounts kept in the division are imperfect in many respects and work registers have not been maintained in the manner required. The Special Engineer has admitted that the unsatisfactory state of accounts is due to want of qualified staff. It was the responsibility of the highest authority who has taken up this work to have provided suitable safeguards for checking expenditure and maintaining the accounts to satisfy audit and the public. Now, that the work has reached final stages, it would be impracticable to build up the accounts to satisfaction. Even from the point of view of a citizen, it is evident that considering the utility of the building, it was unnecessary to have invested public money for architecture, decorations and other excessive comforts. In our opinion, the same utility could have been secured for half the cost with all the modren appurtenances. We also learn in addition to Rs. 130 lakhs heavy expenditure has to be incurred by other departments for formation of roads, gardens, etc. We suggest that the expenditure incurred on this building has to be thoroughly scrutinised by a small Committee of Engineering and Financial experts so that the wastage which could have been avoided and reasons therefor could be brought out and this may be a guidance for the future administrators to regulate public expenditure with due regard to necessity, financial propriety, resources and economy."

ಈ ಕಮಿಟಿಯಲ್ಲಿದ್ದಂತಹ ಸದಸ್ಯರ ವಿಷಯವನ್ನೂ ಪ್ರಸ್ತಾಪ ಮಾಡಿ, ಈ ಸಭೆಯ ಎಸ್ಟಿಮೇಟ್ಸ್ ಸಮಿ

(ಶ್ರೀ ಟಿ. ಮರಿಯಪ್ಪ).

ಯವರು ಬರೆದಿಟ್ಟಿರುವ ರಿಪೋರ್ಟಿನ ಮೇಲೆ ಅವರು ಪ್ರಸ್ತಾಪಮಾಡಿರುವುದು ಸರಿಯಾಗಿಲ್ಲ ಎಂದು ಬೇರೆ ಹೇಳಿದರು. ಈ ಸಮಿತಿಯವರು ಈ ವಿಚಾರವನ್ನು ಸರಿಯಾಗಿ ಪರಿಶೀಲಿಸಿ ಆಗಿದ್ದ ಎಸ್ಟಿಮೇಟ್ ಮತ್ತು ರೇಟ್ಸ್ ಪ್ರಕಾರ ಸರಿಯಾಗಿ ಖರ್ಚು ಮಾಡಬೇಕಾಗಿತ್ತು ಎಂದು ಬರೆದಿರುವುದು ತಪ್ಪೇ? ಅದನ್ನೇಕೆ ಸರಿಪಡಿಸ ಬಾರದಾಗಿತ್ತು? ಇಂತಹ ಸನ್ಮಾನ್ಯ ಸದಸ್ಯರ ವಿಷಯ ದಲ್ಲಿ ಈ ರೀತಿಯಾಗಿ ಹೇಳುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ಎಸ್ಟಿಮೇಟ್ಸ್ ಸಮಿತಿಯಲ್ಲಿ ಅಧ್ಯಕ್ಷರೇ ಅಲ್ಲದೆ ಇನ್ನೂ ಹನ್ನೆರಡು ಜನ ಸದಸ್ಯ ರಿದ್ದಾರೆ. ಅವರಲ್ಲಿ ಆರು ಜನ ಸದಸ್ಯರು ಕಾಯಿಲೆ ನಿಮಿತ್ತವೋ ಏನೋ ರುಜು ಹಾಕಲಿಲ್ಲವೆಂದು ಬೇರೆ ಹೇಳಿದರು. ಅಂತೂ ಅವರೆಲ್ಲರೂ 1956 ನೆಯ ಇಸ ವಿಯ ಏಪ್ರಿಲ್ ನಾಲ್ಕರೊಳಗೆ ರುಜು ಹಾಕಿದ್ದರು. ಈಗ ಮಾರ್ಚಿ 1957—ಎಂದರೆ ಒಂದು ವರ್ಷವಾದಮೇಲೆ ಈ ರೀತಿ ಪ್ರಸ್ತಾಪಿಸುವುದು ಸರಿಯಾದುದಲ್ಲ. ಅವರಲ್ಲಿ ಕೆಲವರು ಕಾಯಿಲೆ ನಿಮಿತ್ತ ಆಗ ರುಜು ಹಾಕದೆ ಇದ್ದರೆ ಏನು ಮಾಡುವುದು? ಆ ರೀತಿ ಪ್ರಸ್ತಾಪಿಸು ವುದು ಬಹಳ ವ್ಯಸನಕರವಾದ ಸಂಗತಿ.

ಫೈನಾನ್ಷಿಯಲ್ ಎಂಕ್ವೈರಿ ಕಮಿಟಿಯವರು ಹೇಳಿರುವುದನ್ನು ಪ್ರಸ್ತಾಪ ಮಾಡೋಣ. ಶ್ರೀ ಹನು ಮಂತಯ್ಯನವರು, ಸಾಮಾನ್ಯವಾಗಿ ಸಮಿತಿಯವರು ಇರಿಗೇಷನ್ ಪ್ರಾಜೆಕ್ಟ್‌ಗಳ ಸಂಬಂಧದಲ್ಲಿ ಏನು ಹೇಳಿ ದ್ದಾರೆಯೋ ಅಷ್ಟನ್ನು ಮಾತ್ರ ಹೇಳಿದರು. ಇರಿ ಗೇಷನ್ ಪ್ರಾಜೆಕ್ಟ್‌ಗಳಲ್ಲಿ ರಿವೈಸ್ಡ್ ಎಸ್ಟಿಮೇಟ್ ಗಳನ್ನು ಮಾಡುವುದು ಸಾಮಾನ್ಯವಾಗಿದೆ, ಅದನ್ನು ತಪ್ಪಿಸಬೇಕು, ಮತ್ತು check ಇರಬೇಕೆಂದು ವರದಿ ಯಲ್ಲಿ ತಿಳಿಸಿದ್ದಾರೆ. ಆದರೆ ಇದೇ ವಿಧಾನಸೌಧದ ವಿಚಾರದಲ್ಲಿ ಏನು ಹೇಳಿದ್ದಾರೆಂಬುದನ್ನು ಅವರು ಹೇಳಲೇ ಇಲ್ಲ. ಫೈನಾನ್ಸ್ ಎಂಕ್ವೈರಿ ಕಮಿಟಿ ರಿಪೋರ್ಟಿನ 97ನೆ ಪುಟವನ್ನು ನೋಡಿದರೆ ಅವರು financial aspect ಗೆ ಮಾತ್ರ confine ಆಗಿದ್ದಾರೆ. ಶ್ರೀ ಎನ್. ಮಾಧವರಾಯರು ಬಹಳ ಬುದ್ಧಿವಂತರು, ಚತುರರು, ಗೆರೆತಪ್ಪಿ ಹೋಗುವವರಲ್ಲ. ಅವರು ಹೀಗೆ ಹೇಳಿದ್ದಾರೆ:

"8-36-A. Some of the defects mentioned above in the method of estimating for and carrying out public works are markedly noticeable in the construction of the Vidhana Soudha—the largest and most expensive public building in the Mysore State, if not in the whole of South India. Designed initially as a building meant to accommodate the Houses of Legislature at a cost of Rs. 24 lakhs, it was redesigned to house the Government Secretariat and other offices as well. A fresh estimate was accordingly prepared for Rs. 50 lakhs and subsequently revised to Rs. 67½ lakhs exclusive of roads, furniture, electrical fittings, decorations, etc.". (*page 97*)

ಇದೂ ಒಂದು ವೈಶಿಷ್ಟ್ಯ ಇದರ ವಿಚಾರದಲ್ಲಿ. ಎಸ್ಟಿ ಮೇಟುಗಳನ್ನು ಮಾಡಿದ್ದರಲ್ಲಿ ರಸ್ತೆಗಳನ್ನು ಟ್ರಸ್ಟ್ ಬೋರ್ಡಿನವರು ಮಾಡಿದರು, ಗಾರ್ಡನ್‌ಗಳನ್ನು ತೋಟಗಳ ಇಲಾಖೆಯವರಿಗೆ ವಹಿಸಿದರು, ಲಾರಿ ಗಳನ್ನೂ ಬುಲ್‌ಡೋಜರ್‌ಗಳನ್ನೂ ತೆಗೆದುಕೊಂಡು ಅದರ ಖರ್ಚನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಹಾಕಿ ದರು. ಯಾರ ಕಣ್ಣಿಗೆ ಮಣ್ಣೆರಚುವುದಕ್ಕೆ ಹೀಗೆಲ್ಲ ಮಾಡಿದ್ದಾರೆ? ಯಾರಿಗೆ ಮೋಸ ಮಾಡುವುದಕ್ಕೆ ಮಾಡಿ ದ್ದಾರೆ? ಸರಕಾರದ ಮುಖ್ಯ ಮಂತ್ರಿಗಳಾದ ಮೇಲೆ ಎಲ್ಲ ಇಲಾಖೆಗಳಿಗೂ ಮುಖ್ಯ ಮಂತ್ರಿಗಳು. ಹೀಗೆ ಬೇರೆ ಬೇರೆ ಇಲಾಖೆಗಳಿಗೆ ಖರ್ಚುಹಾಕಿ, ವಿಧಾನ ಸೌಧದ ಖರ್ಚು ಕಡಮೆ ಮಾಡತಕ್ಕ ಉದ್ದೇಶವಾದರೂ ಏನು? ಇದನ್ನು ನಾವು ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳು ಪರಿಶೀಲನೆ ಮಾಡಬೇಕಾದಂಥ ವಿಚಾರ. ಇವೊತ್ತು ಶ್ರೀಮಾನ್ ಹನುಮಂತಯ್ಯನವರು ಇರ ಬಹುದು, ಮತ್ತೊಬ್ಬರು ಇರಬಹುದು. ಇದರಲ್ಲಿ ವ್ಯಕ್ತಿ ಮುಖ್ಯವಲ್ಲ. ನಡೆಯತಕ್ಕ ರೀತಿ, ನಡೆಸತಕ್ಕ ವಿಧಾನ ಮತ್ತು ಯಾವ ತತ್ವದ ಆಧಾರದ ಮೇಲೆ ನಡೆಯಬೇಕೆನ್ನುವುದು ಬಹಳ ಪ್ರಾಮುಖ್ಯವಾದುದು. ಪ್ರಜಾಪ್ರಭುತ್ವದಲ್ಲಿ ಪರ್ಮನೆಂಟ್ ಸರ್ವಿಸ್ಸಿಗೂ ಮಂತ್ರಿ ಗಳಿಗೂ ಇರತಕ್ಕ ಸಂಬಂಧ ಇದರಲ್ಲಿ ಬರುತ್ತದೆ. ಅದನ್ನು ಕೆಲವು ಕಡೆ ಪ್ರಸ್ತಾಪ ಮಾಡಿದ್ದಾರೆ. ಮಂತ್ರಿಗಳು ಏನಿದ್ದರೂ ಕೂಡ broad outlines of policy ಹಾಕಿಕೊಟ್ಟು ದಿನಚರಿಯ ಕೆಲಸ ಕಾರ್ಯ ಗಳನ್ನು ತೊಂದರೆ ಇಲ್ಲದೆ ಅಧಿಕಾರಿಗಳು ನಡೆಸಿ ಕೊಂಡು ಹೋಗುವಂತೆ ಮಾಡತಕ್ಕ ವಿಧಾನ ಬಹಳ ಶ್ರೇಷ್ಠವಾದದ್ದು ಎಂದು ಹೇಳಿದ್ದಾರೆ.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸ ನಗರ).—ಮೇಸ್ತ್ರಿ ಕೆಲಸ ಮಾಡುವುದಕ್ಕೆ ಹೋಗ ಬಾರದು. (ನಗು).

ಶ್ರೀ ಟಿ. ಮರಿಯಪ್ಪ.—ಪ್ರಜಾಪ್ರಭುತ್ವ ಈ ದೇಶ ದಲ್ಲಿ ಸ್ಥಾಪನೆಯಾದ ತಕ್ಷಣ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ಮಾಡಿದರು. ಆ ಸಮಿತಿಯ ಅಧ್ಯಕ್ಷರಾದ ಗೋರ್‌ವಾಲ್ ಅವರು ಇಂಡಿಯಾ ದೇಶ ದಲ್ಲೆಲ್ಲ ಸಂಚರಿಸಿ ಮಂತ್ರಿಗಳಿಗೂ ಪರ್ಮನೆಂಟ್ ಸರ್ವಿಸ್ಸಿಗೂ ಏನು ಸಂಬಂಧವಿರಬೇಕು ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಗಾಳಿಗೆ ತೂರಿ ಬಿಟ್ಟು ಎಲ್ಲ ನಾವೇ ಮಾಡುತ್ತೇವೆ, ಇದು ಹೀಗೆ ಆಗ ಬೇಕು, ಅದು ಹಾಗೆ ಆಗಬೇಕು ಎಂದರೆ ಏನು ಕೆಲಸ ಮಾಡುವುದಕ್ಕಾಗುತ್ತದೆ?

"...Including these items the present estimate amounts to Rs. 130 lakhs, of which about a crore has already been spent. Confining ourselves to the financial aspect of this scheme we note that outlay of this magnitude could only be met from borrowed funds and will require a recurring provision under debt service charges of Rs. 6½ lakhs per year in the revenue budget, set off, it is said, by about Rs. 50,000 likely to be saved on rent paid for certain offices now housed in hired buildings."

(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. (D) ...4734
ದಿನಾಂಕ Date............................

ಸ್ವಾಮಿ, ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಬಹಳ ಎಚ್ಚರಿಕೆಯಾಗಿರುವವರು. ಅವರೂ ಏಟು ತಿಂದರು. ನಾವು ಬೆಂಗಳೂರಿನಲ್ಲಿ ಸರಕಾರಿ ಕಚೇರಿಗಳಿಗೆ ಉಪಯೋಗಿಸುತ್ತಿರುವ ಕಟ್ಟಡಗಳಿಗೆ ಕೊಡುವ ಬಾಡಿಗೆ 50 ಸಾವಿರ ರೂಪಾಯಿಗಳಿಗೆ ಜಾಸ್ತಿಯಾಗುವುದಿಲ್ಲ. ಈ ಕಟ್ಟಡವಾದರೆ, ಇಲ್ಲಿಗೆ ಎಲ್ಲ ಆಫೀಸುಗಳನ್ನೂ ಬದಲಾವಣೆಮಾಡಿದರೆ ಬಾಡಿಗೆ ರೂಪದಲ್ಲಿ ಕೊಡುತ್ತಿರುವ ಲಕ್ಷಾಂತರ ರೂಪಾಯಿಗಳು ಉಳಿದು ಹೋಗುತ್ತವೆ ಎಂದು ಹೇಳಿದರು. ಇದಕ್ಕಿಂತ ಸುಳ್ಳು ಬೇರೆ ಇಲ್ಲ. ಇವರಿಗೆ ಅಂಕಿ ಅಂಶಗಳು ಚೆನ್ನಾಗಿ ಗೊತ್ತು. ಶ್ರೀ ಮಾಧವರಾಯರು ಮಾತ್ರ ಇದನ್ನು ಚೆನ್ನಾಗಿ ವಿವರಿಸಿದ್ದಾರೆ. ನಾವು ನಮ್ಮ ಲೆಕ್ಕ ಪತ್ರಗಳನ್ನು check up ಮಾಡಿದ್ದರಲ್ಲಿ ನಾವು ಬಾಡಿಗೆ ರೂಪವಾಗಿ ಕೊಡುತ್ತಿರುವುದು ವರ್ಷಕ್ಕೆ ಐವತ್ತು ಸಾವಿರ ರೂಪಾಯಿ ಮಾತ್ರ. ನಮಗೂ ಏಷ್ಯಾಟಿಕ್ ಬಿಲ್ಡಿಂಗ್‌ನಲ್ಲಿ ಬಾಡಿಗೆ ಬರುತ್ತದೆ. ವರ್ಷಕ್ಕೆ ಐವತ್ತು ಸಾವಿರ ರೂಪಾಯಿಗಳಷ್ಟು ಬಾಡಿಗೆ ಉಳಿಸುವುದಕ್ಕೆ ಹೋಗಿ ಆರೂವರೆ ಲಕ್ಷ, ಏಳು ಲಕ್ಷ ಬಡ್ಡಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಅವರು ಇನ್ನೊಂದು ವಿಷಯ ಹೇಳಿದರು, 'ನಾವು borrowed market loan ತಂದಿದ್ದೇವೆ, ಕೇಂದ್ರ ಸರಕಾರದಿಂದ ದುಡ್ಡು ತಂದಿದ್ದೇವೆ ಎಂದು ಯಾರಾದರೂ ತೋರಿಸಲಿ' ಎಂದು. ಆ ಹಣವನ್ನು ಇದಕ್ಕೆ ಉಪಯೋಗಿಸಿಲ್ಲವೆಂದು ಹೇಳಿದರು. ಸ್ವಾಮಿ, ಇದು ಏನು ಚಮತ್ಕಾರವೋ ಏನೋ ನನಗಂತೂ ಅರ್ಥವಾಗುವುದಿಲ್ಲ. Borrowed market loan, ಕೇಂದ್ರ ಸರಕಾರದ ಹಣ ಉಪಯೋಗಿಸಿಲ್ಲವೆಂದರೆ ನಮ್ಮಹತ್ತಿರ ಇನ್‌ಷೂರೆನ್ಸ್ ಹಣ short term deposits ಮುಂತಾದುವು ಇರಲಿಲ್ಲವೋ? ಅವೆಲ್ಲ ಸಾಲವಲ್ಲವೋ? ಇವರು ಮೊನ್ನೆ ಭಾಷಣ ಮಾಡಿದ ಮೇಲೆ ಪುನಃ ನಾನು ಎಲ್ಲ ಹುಡುಕಿದೆ. ನಮ್ಮಲ್ಲಿ ರಿಸರ್ವ್ ಯಾವುದೂ ಇರಲಿಲ್ಲ. ಅಂಥದರಲ್ಲಿ ಇವರು ಇಷ್ಟೆಲ್ಲ ಹೇಳಬೇಕಾದರೆ ಏನು ಧೈರ್ಯವಿರಬೇಕು! Courage in excess becomes foolhardiness. ಇವರಿಗೆ ಎಷ್ಟು ಧೈರ್ಯವಿದೆ ಹೇಳುವುದಕ್ಕೆ ಎಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಕಾಂಗ್ರೆಸಿನವರಿಗೇ ಹಾಗೆ ಧೈರ್ಯ.—(ನಗು)

ಶ್ರೀ ಟಿ. ಮರಿಯಪ್ಪ.—ನೋಡಿ, ಸ್ವಾಮಿ ಇವರು ಹೇಳುವುದು. ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ ಬಂದರು. (ನಗು) ಅವರು ಹಾಗೆ ಅಭಿಪ್ರಾಯ ಪಟ್ಟಿದ್ದಾರೆ.

"If, as we have recommended elsewhere, capital expenditure on unproductive works is amortised at higher rates than productive loans, enhanced annual contribution to the sinking fund and the relative interest charges may be as much as Rs. 10 lakhs a year, for a period of 15 years."

ಏನು ಅನ್ಯಾಯ, ಎಷ್ಟು burden! ಯಾರನ್ನು ಈ Legislatureನಲ್ಲಿ ನಾವು ಪ್ರತಿನಿಧಿಸುತ್ತಿದ್ದೇವೊ ಅಂಥವರ ಮೇಲೆ ವರ್ಷಕ್ಕೆ ಹತ್ತು ಲಕ್ಷ ರೂಪಾಯಿ ಹೊರೆ!

"The scheme has been the subject of criticism in the State Legislature. From the financial angle, the criticism has, for the most part, taken the form of retrospective doubts as to whether there was any need at all for a new building or, at any rate, such a large and expensive one to accommodate the Houses of Legislature and the Secretariat."

ಈಗ ಆ ವಿಷಯ ಪ್ರಸ್ತಾಪ ಮಾಡಿದರೆ ಏನೂ ಪ್ರಯೋಜನವಿಲ್ಲ. ಇನ್ನೂ ಒಂದು ವಿಷಯವನ್ನು ಹೇಳಿದರು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು, 'ನಾವು temporary structures ಹಾಕಬೇಕಾಗಿತ್ತಾದ್ದರಿಂದ ಈ ಕಟ್ಟಡಬೇಕೇ ಬೇಕು ಎಂದು. ಕಟ್ಟಡವನ್ನು ಯಾರು ಬೇಡವೆನ್ನುವವರು? 1948ನೆ ಇಸವಿಯಲ್ಲಿಯೇ ಒಂದು ಕಟ್ಟಡ ಬೇಕು ಎಂದು ನಾವು ಹೇಳಿದ್ದೇವೆ. ನಾನು ಪಬ್ಲಿಕ್ ವರ್ಕ್ಸ್ ಇಲಾಖೆಯ ಚಾರ್ಜಿನಲ್ಲಿದ್ದಾಗ 'ಕಟ್ಟಡ ಬೇಕು, ಅದಷ್ಟು ಬೇಗ plans and estimates ತಯಾರುಮಾಡಿ' ಎಂದು directions ಕೊಟ್ಟಿದ್ದೇನೆ. ಅದನ್ನು ಓದುತ್ತೇನೆ.

"A new building to house the Legislature was an absolute necessity."

I had said this in the year 1950.

"In view of the pressing necessity for a building for the Houses of Legislature, Government directed the Chief Engineer in March 1948 that a spacious building should be put up for holding the sessions of the Representative Assembly and the Legislative Council and also for the office of the Houses of Legislature. Such a building was considered necessary..."

1948ನೆ ಇಸವಿಯಲ್ಲಿ ಬೇಕು ಎಂದು ಹೇಳಿ ಪುನಃ 1950ನೆ ಇಸವಿಯಲ್ಲೂ ಬೇಕು ಎಂದು ಹೇಳಿದ್ದೇವೆ.

Plans for the Houses of Legislature were ready in 1951. The foundation-stone for the building was laid on 13th July 1951.

ಇನ್ನೊಬ್ಬರು ಹೇಳಿದರು, ಈ ಕಟ್ಟಡವನ್ನು ಕಟ್ಟದೆ ಹೋಗಿದ್ದರೆ ಬೆಂಗಳೂರು ರಾಜಧಾನಿಯಾಗುತ್ತಿರಲಿಲ್ಲ, ಉತ್ತರ ಕರ್ಣಾಟಕದಲ್ಲಾಗುತ್ತಿತ್ತು ಎಂದು. ಎಷ್ಟು ದೂರ flight of imagination ಹೋಯಿತು! ಗೋಪುರ ಕಟ್ಟಿದ್ದರ ಮೇಲೆ ಹೋಗುತ್ತಿತ್ತೋ ಏನೋ? ಗೋಪುರದ ವಿಷಯವನ್ನು ಆಮೇಲೆ ಪ್ರಸ್ತಾಪಮಾಡುತ್ತೇನೆ. ಮಧ್ಯ ಪ್ರದೇಶ ಬಹಳ ವಿಶಾಲವಾದ ದೇಶ. ಇಂಡಿಯಾ ದೇಶದಲ್ಲಿ ವಿಸ್ತಾರದಲ್ಲಿ ದೊಡ್ಡದು. ಅದಕ್ಕೆ ಭೂಪಾಲ್ ರಾಜಧಾನಿಯಾಗಿರಬೇಕು ಎಂದು ಮಾಡಲಿಲ್ಲವೆ? ಅಲ್ಲಿ ಸರಿಯಾದ ಕಟ್ಟಡಗಳಿಲ್ಲದಿದ್ದರೂ ಮಧ್ಯ ಪ್ರದೇಶಕ್ಕೆ ಅದನ್ನು ರಾಜಧಾನಿಯಾಗಿ ಮಾಡಿಕೊಂಡು

(ಶ್ರೀ ಟಿ. ಮರಿಯಪ್ಪ)

ಅಲ್ಲಿ ಕೆಲಸಕಾರ್ಯ ಪ್ರಾರಂಭ ಮಾಡಲಿಲ್ಲವೆ ? ಆದುದರಿಂದ ಬೆಂಗಳೂರು ರಾಜಧಾನಿಯಾಗುವುದಕ್ಕೂ ವಿಧಾನಸೌಧವನ್ನು ಕಟ್ಟಿದ್ದಕ್ಕೂ ಏನೂ ಸಂಬಂಧವಿಲ್ಲ. ಎಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಬೆಂಗಳೂರು ರಾಜಧಾನಿಯಾಗಿ ಇರಬೇಕೆಂದು ಮಾಡಿದ್ದಾಯಿತು. ಆದರೆ ಕಟ್ಟಡದ ಅವಶ್ಯಕತೆ ಸರಕಾರದ ಗಮನಕ್ಕೆ ಬರಲಿಲ್ಲವೆಂದರೆ ನಾನು ಒಪ್ಪಿಕೊಳ್ಳುವುದಿಲ್ಲ. 1948ನೆ ಇಸವಿಯಲ್ಲಿ ಅಂದಾಜು ಆಗಬೇಕೆಂದು ಆಗಿ 1951ನೆ ಇಸವಿಯಲ್ಲಿ ಪ್ಲಾನ್ ಮತ್ತು ಅಂದಾಜು ತಯಾರಾಯಿತು, ಈ ವಿಧಾನಸೌಧಕ್ಕೆ. ಇದನ್ನು ಆ ಹೆಸರಿನಿಂದ ಈಗ ವಿಧಾನಸೌಧ ಎಂದು ಕರೆಯುವುದರಲ್ಲಿ ಪ್ರಯೋಜನವಿಲ್ಲ. ಈಗ ಇದು ಸೆಕ್ರೆಟೆರಿಯಟ್ ಮತ್ತು ವಿಧಾನಮಂಡಲಗಳ ಸಮ್ಮಿಶ್ರ ಕಟ್ಟಡವಾಗಿದೆ. ಯಾವುದು ಪ್ರಶಸ್ತವಾದ ಹೆಸರೋ, ಯಾವ ಕಾರಣಕ್ಕೋಸ್ಕರ ವಿಧಾನಸೌಧ ಎಂದು ಕಟ್ಟಡವನ್ನು ಕಟ್ಟಬೇಕಾಗಿತ್ತೋ ಅದು ಕಣ್ಮರೆಯಾಗಿದೆ. ಅದರ sanctity ಕೂಡ ಇಲ್ಲದಂತಾಗಿದೆ. ಮೊದಲು ವಿಧಾನ ಮಂಡಲದ ಕಾರ್ಯಕಲಾಪಗಳನ್ನು ನಡೆಸಲು ವಿಧಾನಸೌಧವನ್ನು ಕಟ್ಟಬೇಕಾಗಿತ್ತು. ಅನಂತರ ಸೆಕ್ರೆಟೇರಿಯಟ್ಟಿಗೆ ಬೇಕಾಗಿದ್ದರೆ ಮತ್ತೊಂದು ಕಟ್ಟಡವನ್ನು ಕಟ್ಟಿದ್ದರೆ ಯಾರಾದರೂ ಬೇಡವೆಂದು ಹೇಳುತ್ತಿದ್ದರೆ? ವಿಶಾಲವಾದ ದೇಶದಲ್ಲಿ ಜಾಸ್ತಿ ಸ್ಥಳಬೇಕು, ನಿಜ, ಆದರೆ ಸ್ಥಳ ಜಾಸ್ತಿ ಆಗಬೇಕು ಎನ್ನುವ ಉದ್ದೇಶದಿಂದ ಮಾತ್ರ ಕಟ್ಟಿದ್ದರೆ ಈ ಭವನ ಈ ಆಕೃತಿ ತಾಳುತ್ತಿರಲಿಲ್ಲವೆಂದು ಹೇಳುತ್ತೇನೆ. ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಸಂಪೂರ್ಣವಾಗಿ ಜಾಗ ಉಪಯೋಗಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕಟ್ಟಡವನ್ನು ಕಟ್ಟಿರುವುದಕ್ಕೂ ಹೇಗೋ ಕಟ್ಟಡ ದೊಡ್ಡದಾಗಿ ಕಾಣುವುದು ಎಂದು ಕಟ್ಟುವುದಕ್ಕೂ ವ್ಯತ್ಯಾಸವಿದೆ. ಇದರಲ್ಲಿ 42·2% ಪ್ರದೇಶ ಬಳಕೆಗೆ ಬರುತ್ತದೆ. ಅಕಾಂಟೆಂಟ್ ಜನರಲ್ ಆಫೀಸಿನಲ್ಲಿ 57% ಪ್ರದೇಶ ಆಫೀಸುಗಳ ಬಳಕೆಗೆ ಬರುತ್ತದೆ ಎಂದು ಹೇಳಿದರೆ ಅರ್ಥವಾಗುತ್ತದೆ. ಸೆಕ್ರೆಟೇರಿಯಟ್ ಭಾಗಕ್ಕೆ ಹೆಚ್ಚು ಗಮನ ಕೊಡಬೇಕು, ನಮ್ಮ ಸರಕಾರದ ನೌಕರರು ಕುಳಿತುಕೊಳ್ಳುವುದಕ್ಕೆ ಸ್ಥಳ ವಸತಿ ಒದಗಿಸಬೇಕೆಂಬ ದೃಷ್ಟಿಯಿಂದಲೇ ಇದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ನಾವು ಇನ್ನೂ ಹೆಚ್ಚು ಪ್ರದೇಶವನ್ನು ಬಳಸಿಕೊಳ್ಳಬಹುದಾಗಿತ್ತು. ಈ ರೀತಿ ಮಾಡಬೇಕಾಗಿರಲಿಲ್ಲ. ಈಗ ಈ ಕಟ್ಟಡದಲ್ಲಿ ವರಾಂಡಾಕ್ಕೆ ಹೆಚ್ಚು ಜಾಗ ಹೋಗಿದೆ, ಕುಳಿತು ಕೆಲಸ ಮಾಡುವುದಕ್ಕೆ ಸ್ಥಳ ಕಡಿಮೆ ಆಗಿದೆ. ಇದನ್ನು ಏಕೆ ಪ್ರಸ್ತಾಪ ಮಾಡುತ್ತೇನೆ ಎಂದರೆ, ಕಟ್ಟಡದ ಅವಶ್ಯಕತೆ ಮೊದಲು ನಮಗೆ ಯಾರಿಗೂ ತಿಳಿದಿರಲಿಲ್ಲ, ಇದರ ಅವಶ್ಯಕತೆ ಗೊತ್ತಿಲ್ಲ ಎಂದು ಯಾರೂ ತಿಳಿದುಕೊಳ್ಳಬಾರದು. ಅವಶ್ಯಕತೆ ಇತ್ತು. ಇದು ಇಲ್ಲದೆ ಇದ್ದಿದ್ದರೆ ಟೆಂಪೊರೆರಿ ಸ್ಟ್ರಕ್ಚರ್ ಹಾಕಬೇಕಾಗಿತ್ತು ಎಂದು ಹೇಳುವುದು ಅನಾವಶ್ಯಕ. ಮೊದಲೇ ಕಾರ್ಯಕ್ರಮ ಕೈಕೊಂಡಿದ್ದರೆ ಇದೇ ರೀತಿ ಇರುತ್ತಿತ್ತು ಎಂದು ಹೇಳುವುದಕ್ಕಾಗುವುದಿಲ್ಲ. ಜನಗಳಿಗೆ ಹೆಚ್ಚು ಉಪಯೋಗಕರವಾದ, ಯೋಗ್ಯವಾದ ಒಂದು ಕಟ್ಟಡ ಇರುತ್ತಾ ಇತ್ತು ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನೊಂದು ಪ್ರಸ್ತಾಪ ಮಾಡಿದರು ಸ್ವಾಮಿ, ರಾಜಕೀಯ ಉದ್ದೇಶದಿಂದ ಈ ವರದಿಯನ್ನು ಪ್ರಕಟಿಸಿದ್ದಾರೆ ಎಂದು. ಸ್ವಾಮಿ, ನಾನು ಧರ್ಮವಾಗಿ ಹೇಳಬೇಕಾದರೆ ಈ ವರದಿಯನ್ನು ಪ್ರಕಟಿಸುವುದರಲ್ಲಿ ಯಾವ ಉದ್ದೇಶವೂ ಇಲ್ಲ. ಈ ವರದಿ ಸರಕಾರದ ಕೈಗೆ ಬಂದಮೇಲೆ, ನಾವು ಎಷ್ಟು ಬೇಗ ಇದನ್ನು ಯಾವ ತಡೆಯೂ ಇಲ್ಲದೆ ಪ್ರಕಟಮಾಡಬಹುದೋ ಅಷ್ಟು ಬೇಗ ಮಾಡಿದ್ದೇವೆ. ಕೆಲವು ಕಾಲ ಇಲ್ಲಿ ನಾವು ಯಾರೂ ಇರಲಿಲ್ಲ. ಮಹಾ ಚುನಾವಣೆಗಳಿಗೆ ಎಲ್ಲ ಮಂತ್ರಿಗಳೂ ಹೊರಗಡೆ ಹೋಗಿದ್ದುದರಿಂದ ಸರಕಾರ ತೀರ್ಮಾನ ಮಾಡಿ ಅದನ್ನು ಪ್ರಕಟಿಸುವುದಕ್ಕೆ ಕಾಲ ವಿಳಂಬವಾಯಿತು ಅಷ್ಟೆ. ಇದರಲ್ಲಿ ಯಾರಿಗೇ ಆಗಲಿ ಕೆಡಕು ಮಾಡಬೇಕೆಂಬ ಉದ್ದೇಶ ಇಲ್ಲವೇ ಇಲ್ಲ. ಹಿಂದೆ ಸರಕಾರ ನೇಮಿಸಿದ ಅನೇಕ ಸಮಿತಿಗಳು, ಅವು ಕೊಟ್ಟ ವರದಿಗಳು ಅವುಗಳ ವಿಷಯದಲ್ಲಿ ಏನು ಆಗಿದೆಯೋ ಅದನ್ನು ಪ್ರಸ್ತಾಪ ಮಾಡುವುದು ಅನಾವಶ್ಯಕ. ಇದು ಆ ರೀತಿ ಆಗುವುದಕ್ಕೆ ಈ ಸರಕಾರ ಬಿಡಲಿಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನೊಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಸಮಿತಿಯ ಸದಸ್ಯರು ಶ್ರೀಮಾನ್ ಹನಮಂತಯ್ಯನವರಿಗೆ ಆಗದೇ ಇರತಕ್ಕ ಮಹನೀಯರ ಜೊತೆಯಲ್ಲಿ ಒಂದು ಪಿತೂರಿ ಮಾಡಿ ಬರೆದ ಹಾಗಿದೆ ಇದು ಎಂದು. ಅದಕ್ಕೆ ಏನು ಆಧಾರವೋ ನನಗಂತೂ ಗೊತ್ತಿಲ್ಲ ಸ್ವಾಮಿ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅವರು ಸಾಕ್ಷ್ಯ ಕೊಟ್ಟಿದ್ದಾರಲ್ಲಾ!

ಶ್ರೀ ಟಿ. ಮರಿಯಪ್ಪ.—ಈಗ ಆ ವಿಷಯವನ್ನು ಹೇಳುವುದಕ್ಕಿಂತ ಕಮಿಟಿಯ ಮುಂದೆ ವಿಚಾರಣೆ ಆಗುವಾಗ ಹೇಳಿದ್ದರೆ ಚೆನ್ನಾಗಿತ್ತು. ಸಾರ್ವಜನಿಕರ ಗಮನಕ್ಕೆ ಬಂದಮೇಲೆ ಹೇಳಿದರೆ ಅದಕ್ಕೆ ಬೆಲೆ ಕಡಿಮೆ ಎಂದು ಹೇಳುತ್ತೇನೆ. ಜೊತೆಗೆ ಆ ಸಮಿತಿಯ ಸದಸ್ಯರಾಗಿರತಕ್ಕ ನರಸಿಂಹಯ್ಯನವರ ವಿಚಾರದಲ್ಲಿ ಸ್ವಲ್ಪ ಲಘುವಾಗಿ ಹೇಳಿದರು. ಶ್ರೀಮಾನ್ ನರಸಿಂಹಯ್ಯನವರು ಅನೇಕ ಕ್ಷೇತ್ರಗಳಲ್ಲಿ ಸೇವೆ ಮಾಡಿದ್ದಾರೆ. ಅವರು ರಿಟೈರ್ ಆದಮೇಲೆ, ಇತ್ತೀಚೆಗೆ ಕೇಂದ್ರ ಸರಕಾರದವರು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ವಿಮರ್ಶೆ ಮಾಡಲು ನೇಮಿಸಿರತಕ್ಕ ಸಮಿತಿಗಳಲ್ಲಿ ಅವರ ಹೆಸರು ಇದೆ. ಅವರ ವಿಷಯದಲ್ಲಿ ಹೀಗೆ ಒಂದು ಲಘುವಾದ ಅಪಾದನೆಯನ್ನು ಮಾಡಿ ಅವರಿಗೆ ತೊಂದರೆಯಾಗುವುದಾದರೆ ನಿಮಗೆ ಸಂತೋಷವೇ? ಒಂದುವೇಳೆ ಛೇರ್ಮನ್‌ರು ಈ ಸಂಸ್ಥಾನದವರೇ ಆಗಿದ್ದರೆ, ವಿಷಯಗಳು ಅವರ ಗಮನಕ್ಕೆ ಬಂದಿದ್ದರೂ, ಯಾರಾದರೂ ಪ್ರಭಾವ ಬೀರಬಹುದು, ಅವರ ಕಾರ್ಯ ಕೈಗೂಡದೇ ಇರಬಹುದು ಎಂದು ಹೇಳಿ ಈ ಸಂಸ್ಥಾನದವರಲ್ಲದ ಹೊರಗಡೆಯ ರಿಟೈರ್ಡ್ ಜಡ್ಜರನ್ನು ನೇಮಕಮಾಡಿದರು. ಮತ್ತು ಅವರೇ ಅವರನ್ನು ಆರಿಸಿಕೊಂಡರು. ಹಾಗಿರುವಾಗ ಹೀಗೆ ಅವರ ವಿಷಯದಲ್ಲಿ ಲಘುವಾಗಿ ಮಾತನಾಡುವುದು ಸರಿಯಲ್ಲ, ಸ್ವಾಮಿ.

ಇನ್ನು ಅವರು ಏನು ಬರೆದಿದ್ದಾರೋ ಅದರಲ್ಲಿ ತಪ್ಪನ್ನು ಸಾಬೀತು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರಲ್ಲಿರತಕ್ಕ ನ್ಯೂನತೆಗಳನ್ನು ಓದಿ ಓದಿ ಹೇಳಿದ್ದರೆ ಬಹಳ ಚೆನ್ನಾಗಿತ್ತು. ಅದಕ್ಕೆ ಬದಲಾಗಿ ಆಕ್ಷೇಪಣೆಮಾಡಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರುವುದು ಸರಿಯಾದ ವಾದವಲ್ಲ.

ಅಲ್ಲದೆ ಇನ್ನೊಂದು ವಿಷಯ. ತಾವು ಒಂದು ರೂಲಿಂಗ್ ಕೊಟ್ಟಿರಿ. ಯಾರಿಗೆ ಈ ಸಭೆಯಲ್ಲಿ ನಿಂತುಕೊಂಡು ತಮ್ಮನ್ನು ತಾವು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲವೋ ಅಂಥವರ ವಿಷಯದಲ್ಲಿ ಯಾರೂ ಅಪಾದನೆ ಮಾಡಬಾರದು ಎಂದು. ಇದು ಒಂದು ಒಳ್ಳೆಯ ಸ್ಯಾಲ್ಯುಟರಿ ಪ್ರಿನ್ಸಿಪಲ್ ಎಂದು ಹೇಳುತ್ತೇನೆ. ಆ ದೃಷ್ಟಿಯಿಂದ ಈ ಒಂದು

ವಿಷಯವನ್ನು ಶ್ರೀ ಹನುಮಂತಯ್ಯನವರು ಪ್ರಸ್ತಾಪ ಮಾಡದೇ ಇದ್ದಿದ್ದರೆ ಚೆನ್ನಾಗಿತ್ತು. ಪ್ರಸ್ತಾಪಮಾಡಿ, ಸಮಿತಿಯವರಿಗಾಗಲಿ, ಸಮಿತಿಯ ಚೇರ್ಮನ್‌ರಿಗಾಗಲಿ ಅಪಮಾನವುಂಟುಮಾಡತಕ್ಕದ್ದು ನ್ಯಾಯವಲ್ಲ. ಅದು ಶ್ರೀ ಹನುಮಂತಯ್ಯನವರ ಮನೋಧರ್ಮವನ್ನು ಮಾತ್ರ ತೋರಿಸುತ್ತದೆ. ಸ್ವಾಮಿ, ಇದನ್ನೆಲ್ಲಾ ಪ್ರಸ್ತಾಪಮಾಡುವಾಗ ಹಣಕಾಸಿನ ವಿಷಯವನ್ನು ಶ್ರೀ ಹನುಮಂತಯ್ಯನವರು ಪ್ರಸ್ತಾಪಮಾಡಿದ್ದರೆ ಚೆನ್ನಾಗಿತ್ತು. ಈ ಕಟ್ಟಡಕ್ಕೆ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಖರ್ಚಾಯಿತೋ ಅದಕ್ಕೆಲ್ಲಾ ಸರಿಯಾದಂಥ ಅಕೌಂಟಿಂಗ್ ಇತ್ತು, ಚೆಕ್ ಮಾಡುತ್ತಾ ಇದ್ದರು ಎಂದು ಹೇಳಿದ್ದರೆ ಅದು ಸರಿಹೊಂದಿಕೊಳ್ಳುತ್ತಾಯಿತ್ತು. ಮುಖ್ಯವಾದ ಆಪಾದನೆಗಳೆಲ್ಲಾ ಬಂದಿರುವುದು, ಇಷ್ಟು ಹೇರಳವಾದ ಹಣ, ಇಷ್ಟು ಅವ್ಯವಸ್ಥೆಯಲ್ಲಿ ಪೋಲಾಗಿದೆಯಲ್ಲಾ ಇದು ಸರಿಯೇ, ಇಷ್ಟು ಖರ್ಚಾಗಿದೆಯೇ, ಇಲ್ಲ ದುರ್‌ವಿನಿಯೋಗವಾಗಿದೆಯೇ ಎಂದು. ಈ ವಿಚಾರದಲ್ಲಿ ಬೇಕಾದಷ್ಟು ಟೀಕೆ ಬಂದಿದೆ. ಅದನ್ನೆಲ್ಲಾ ಹೆಚ್ಚಾಗಿ ಪ್ರಸ್ತಾಪಮಾಡದೆ ಅಥವಾ ಅದಕ್ಕೆಲ್ಲಾ ಸಮಜಾಯಿಷಿಕೊಡದೆ ಇಷ್ಟನ್ನು ಮಾತ್ರ ಹೇಳುತ್ತೇನೆ. ಈ ವರದಿಯಲ್ಲಿ ಒಂದೊಂದು ವಿಷಯವನ್ನು ಒಂದೊಂದು ದೃಷ್ಟಿಯಲ್ಲಿ ಬರೆದಿದ್ದಾರೆ ಎಂದು ಹೇಳಿದರು. ಸ್ವಾಮಿ, ವರದಿಯನ್ನು ಓದಿದರೆ ಎಲ್ಲ ದೃಷ್ಟಿಯಲ್ಲೂ ಬರೆದು ಚರ್ಚೆಮಾಡಿದ್ದಾರೆ ಮತ್ತು Rules and Procedure ಸರಿಯಾಗಿ follow ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಎಷ್ಟೋ ಜನ ಹೋಗಿ ಅವರಲ್ಲಿ ಸಾಕ್ಷಿ ಕೊಟ್ಟಿದ್ದಾರೆ. ಮೈಸೂರು ಬ್ಯಾಂಕ್ ಜನರಲ್ ಮ್ಯಾನೇಜರ್ ಬಿ. ವಿ. ನಾರಾಯಣ ರೆಡ್ಡಿ, ಅಕೌಂಟೆಂಟ್ ಜನರಲ್ ವಿ. ಟಿ. ಶ್ರೀನಿವಾಸನ್ ಇವರೆಲ್ಲಾ ಸಾಕ್ಷಿ ಕೊಟ್ಟಿದ್ದಾರೆ. ಅದನ್ನೆಲ್ಲಾ ತುಲನ ಮಾಡಿ ಬರೆದಿರತಕ್ಕ ವರದಿ ಇದು.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಡಿಪೋಸಿಷನ್ ಕಾಪಿ ಏಕೆ ಪ್ರಿಂಟ್‌ಮಾಡಿಸಲಿಲ್ಲ, ಸ್ವಾಮಿ?

ಶ್ರೀ ಟಿ. ಮರಿಯಪ್ಪ.—ಅದನ್ನು ಮಾಡಿಸುತ್ತೇನೆ. ಆಮೇಲೆ ಇನ್ನೊಂದು ವಿಷಯ ಪ್ರಸ್ತಾಪಿಸಿದರು, ಅದನ್ನು ಪ್ರಸ್ತಾಪ ಮಾಡದೇ ಇದ್ದಿದ್ದರೆ ಉತ್ತಮವಾಗಿತ್ತು ಎಂದು ಹೇಳದೇ ವಿಧಿಯಿಲ್ಲ. ಚೇರ್ಮನ್‌ರು ಯಾರದಾದರೂ ಪಿತೂರಿಗೆ ಒಳಪಟ್ಟು ಏನಾದರೂ ಬರೆದು ಬಿಡಬಹುದು ಎಂದು ನಾನು ಒಂದು ವಿಷಯವನ್ನು ತಿಳಿಸಬೇಕೆಂದು ಅವರ ಮನೆಗೆ ಹೋಗಿದ್ದೆ ಎಂದು ಹೇಳಿದರು. ನನಗೆ ಬಹಳ ಆಶ್ಚರ್ಯವಾಯಿತು. ಅದೂ ಅಲ್ಲದೆ ಅವರು ಲಾಯರಾಗಿದ್ದವರು; ಲಾಯರು ಕೋರ್ಟಿನಲ್ಲಿ ಕೇಸನ್ನು ವಾದಮಾಡಿ ಮನೆಗೆ ಬಂದು ಮಾರನೇದಿನ ಬೆಳಿಗ್ಗೆ ಜಡ್ಜ್‌ರನ್ನು ನೋಡುವುದಕ್ಕೆ ಹೋದರೆ ಏನು ಅರ್ಥ? ಎಲ್ಲಾದರೂ ಉಂಟೇ ಸ್ವಾಮಿ? ಒಂದು ಹೆಜ್ಜೆ ಮುಂದೆಹೋಗಿ ಇನ್ನೊಂದು ಹೇಳಿದರು, ನನ್ನನ್ನು ಅವರು ಸರಿಯಾಗಿ ರಿಸೀವ್ ಮಾಡಲಿಲ್ಲ ಎಂದು. ಏನು ಸ್ವಾಮಿ ಇದು? ಕಮಿಟಿ ಚೇರ್ಮನ್‌ರು—high handed action, illegal action ಏನಾಗಿದೆಯೋ ಅದನ್ನು ವಿಚಾರಣೆ ಮಾಡತಕ್ಕ ಜಡ್ಜರು. ಅವರ ಮನೆಗೆ ಅವರನ್ನು influence ಮಾಡುವುದಕ್ಕೆ ಹೋದರೋ, ಸಮಮಾತನಾಡಲು ಹೋದರೋ ಯಾರಿಗೆ ಗೊತ್ತು? ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದರೆ ಜನ ಏನೆನ್ನುತ್ತಾರೆ? ಇದು ಖಂಡಿತವಾಗಿಯೂ ಮಾಡಬಾರದ ಕೆಲಸ. ಅದನ್ನು ಇಲ್ಲ ಪ್ರಸ್ತಾಪಮಾಡಿ ಅವರ ಮನೋಧರ್ಮವನ್ನು ತಿಳಿಸಿದಂತಾಯಿತೇ ಹೊರತು ಜಡ್ಜರ ಮೇಲೆ ಹೇಳಿದರೆ ಯಾರು ನಂಬುತ್ತಾರೆ? ಒಂದು ಒಳ್ಳೆಯ ಭಾವನೆಯಿಂದ ಈ ಒಂದು ಕಟ್ಟಡವನ್ನು ಧರ್ಮದ ತಳಹದಿಯಮೇಲೆ ಕಟ್ಟಬೇಕೆಂದಿದ್ದರು. ಆದರೆ ಈಗ ಅದು ಅಧರ್ಮದ ತಳಹದಿಯಾಗಿದೆ. ಅವರು ಮಾಡಬೇಕೆಂದಿದ್ದ ಮಹತ್‌ಕಾರ್ಯ ನಡೆಯದೇಯಿರುವಂತೆ ಇನ್ಯಾರೋ ಅವರಿಗೆ ಆಗದವರು ಪಿತೂರಿ ಮಾಡಿದರಂತೆ! ಅದು ಹೋಗಲಿ ಆ ಸಮಿತಿಯವರು ಮಾಡಿರುವುದಾದರೂ ಏನು? ಎಸ್ಟಿಮೇಟ್ಸ್ ಕಮಿಟಿಯವರು ಮತ್ತು ಎಚ್. ಮಾಧವರಾವ್ ಕಮಿಟಿಯವರು ಪ್ರಸ್ತಾಪಮಾಡಿರುವುದು ಯಾವುದೂ ಹೊಸದಲ್ಲ ಎಂದು ಕೆಲವು ವಿಷಯಗಳನ್ನು ಓದಿ ತೋರಿಸುತ್ತೇನೆ.

ಆಮೇಲೆ ಇನ್ನೊಂದು ವಿಷಯ ಹೇಳಿದರು ಸ್ವಾಮಿ. ಈ ದೇಶದ ಚೀಫ್ ಮಿನಿಸ್ಟರ್ ಆಗಿದ್ದವರಿಗೆ ಅದು ಸಲ್ಲದು, ಒಪ್ಪುವುದಲ್ಲ, ಯೋಗ್ಯವಾದುದಲ್ಲ ಎಂದು ಹೇಳುತ್ತೇನೆ. ತಾವು ಕ್ಷಮಿಸಬೇಕು. ಇಬ್ಬರು ಸದಸ್ಯರ 5,000 ರೂಪಾಯಿಗಳನ್ನು ಜೋಬಿನಲ್ಲಿ ಹಾಕಿಕೊಂಡು ಹೋದರು ಎಂದು ಹೇಳಿದರಲ್ಲಾ ಅದು ಬಹಳ ಅನ್ಯಾಯ ಸ್ವಾಮಿ. ಒಂದು ಪತ್ರಿಕೆಯಲ್ಲಿ ಬರೆದಿದ್ದರು, ಈ ಅವರಣದಲ್ಲಿ ಇದನ್ನು ಕಟ್ಟುವಾಗ ಗೋಡೆಗಳು ಕಿವಿಯಿಂದ ಆಲಿಸಿದುವಂತೆ; ಕಣ್ಣಿನಿಂದ ನೋಡಿದುವಂತೆ; ಐರನ್‌ರಾಡ್ಸ್ ಇಷ್ಯುಮಾಡುವಾಗ, ಪೋಲ್ಸ್ ಇಷ್ಯುಮಾಡುವಾಗ, ಕಲ್ಲು ಬಂಡೆ ಸಪ್ಲೈ ಮಾಡುವಾಗ, ಸಿಮೆಂಟ್ ಬ್ಯಾಗ್ಸ್ ಇಷ್ಯು ಮಾಡುವಾಗ, ಲಾರಿಗಳನ್ನು ತೆಗೆದುಕೊಳ್ಳುವಾಗ ಏನೇನು ನಡೆಯಿತು ಎಂದು ಸೊಗಸಾಗಿ ಒಂದು ದೊಡ್ಡ ಸಾಹಿತ್ಯವನ್ನೇ ಬರೆಯಬಹುದು.

2 P.M.

ಬಹಳ ಸಾವಧಾನದಿಂದ ಕಿವಿಕೊಟ್ಟು ಕೇಳಬೇಕು. ಇಷ್ಟು ಹೇಳಬಹುದು. ಮಹಾತ್ಮ ಗಾಂಧಿಯವರ ಕಾಲದಲ್ಲಿ ಗಾಂಧಿ ಯುಗವೆಂದು ಹೇಳುತ್ತಿದ್ದರು. ಈಗ ಪ್ರಜಾಪ್ರಭುತ್ವದಲ್ಲಿ ಒಳ್ಳೆಯವರ ಕಡೆಯೂ ಹತ್ತು ಜನ, ಕೆಟ್ಟವರ ಕಡೆಯೂ ಹತ್ತು ಜನ ಇರುತ್ತಾರೆ. ಸಮಿತಿಯ ಸದಸ್ಯರ ವಿಚಾರದಲ್ಲಿ ಅಷ್ಟು ಲಘುವಾಗಿ ಮಾತನಾಡಬಾರದು. ಐದು ಸಾವಿರ ರೂಪಾಯಿ ಎಷ್ಟು ತಿಂಗಳಿಗೆ ಕೊಟ್ಟಿರುವುದು? ಆಗಸ್ಟ್ ತಿಂಗಳಿನಲ್ಲಿ ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ಆಗಸ್ಟಿನಿಂದ ಡಿಸೆಂಬರ್ ವರೆಗೆ 5 ತಿಂಗಳು ಕೆಲಸ ಮಾಡಿದ್ದಾರೆ; ನಿಷ್ಠೂರದ ಕೆಲಸ. ಇವರ ಕೈಯಲ್ಲಿ ಬೈಸಿಕೊಳ್ಳುವ ಕೆಲಸ. ನಮ್ಮ ಹಾಗೆಅವರು ಜೈಲಿಗೆಹೋಗಿ ಮಂತ್ರಿಗಳಾದರೆ? ಸಮಿತಿ ಸದಸ್ಯರಿಗೆ ತಿಂಗಳಿಗೆ 500—600 ರೂಪಾಯಿ ಪೆನ್ಷನ್ ಬರುತ್ತದೆ. ಅಂಥ ಗೌರವಸ್ಥರಿಗೆ 5 ತಿಂಗಳಿಗೆ 5 ಸಾವಿರ ರೂಪಾಯಿ ಕೊಟ್ಟಿರುವುದು ಬಹಳ ಜಾಸ್ತಿಯೆ? ಒಂದು ಪ್ಯಾಂಫ್ಲೆಟ್ ಪಬ್ಲಿಷ್ ಮಾಡುವುದಕ್ಕೆ ಎಷ್ಟೋ ಸಾವಿರ ರೂಪಾಯಿ ಕೊಟ್ಟರು. ಅಂಥಾದರಲ್ಲಿ ಕಷ್ಟಪಟ್ಟು ಕೆಲಸ ಮಾಡಿದವರ ವಿಚಾರದಲ್ಲಿ ಇಷ್ಟು ಲೈಟ್ ಹಾರ್ಟ್ಡ್‌ಆಗಿ ಮಾತನಾಡುವುದು ಸರಿಯೇ? ಅವರು ಆರು ರೂಪಾಯಿ ಕಂದಾಯ ಕೊಡುತ್ತಿದ್ದಾರೆಯೇ? ಈ ಸಭೆಯಲ್ಲಿ ಈ ರೀತಿ ಪ್ರಸ್ತಾಪ ಮಾಡಿರುವುದು ನನಗಂತೂ ಬಹಳ ಚಿಂತೆಯನ್ನು ಉಂಟುಮಾಡಿದೆ. ಸಮಿತಿಯ ಸದಸ್ಯರ ಪೈಕಿ ಇಬ್ಬರು ಮೈಸೂರು ಸರ್ಕಾರದಲ್ಲಿ 25-30 ವರ್ಷಗಳ ಸರ್ವಿಸ್ ಮಾಡಿದ್ದಾರೆ, ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಶ್ರೀ ನರಸಿಂಹಯ್ಯನವರು ಮಾಡಿದ್ದಾರೆ. ಶ್ರೀ ಬಿ. ಎಸ್. ರಾಘವೇಂದ್ರರಾಯರು ಇಲ್ಲಿ ರಿಟೈರ್ ಆದಮೇಲೆ ಸಹ ಸೌರಾಷ್ಟ್ರದಲ್ಲಿ ಫೈನಾನ್ಷಿಯಲ್ ಅಡ್ವೈಜರಾಗಿ

(ಶ್ರೀ ಟಿ. ಮರಿಯಪ್ಪ.)

ನೇಮಿಸಲ್ಪಟ್ಟಿದ್ದರು. ಇಂಥವರು most unpleasant duty ಮಾಡಬೇಕಾಗಿ ಬಂತು. ಓವರ್‌ಟೈಂ ಅಲೋಯನ್ಸ್ ಕೆಲವರಿಗೆ ಕೊಡಬೇಕಾಗಿತ್ತೆಂದು ಹೇಳಿದರು. Let them account for every pie of the expenditure incurred. ಸುಮ್ಮನೆ ಏನೇನೋ ಹೇಳಿದರೆ ಪ್ರಯೋಜನವಿಲ್ಲ. ಕಂಡಹಾಗೆ ಕಾಣದಹಾಗೆ ಎಷ್ಟೋ ಹೋಗಿದೆ. ಹೀಗೆ ಹೋಗಿರುವುದನ್ನು ಪತ್ತೆಮಾಡುವ ಕೆಲಸ ಬಹಳ ಕಷ್ಟವಾದದ್ದು. ಅದನ್ನು ಪತ್ತೆ ಮಾಡಿರುವವರನ್ನು ದೂರುವುದು ಬಹಳ ಅಧರ್ಮ.

ಇನ್ನೊಂದು ಹೇಳಿದರು. ಸಮಿತಿಯವರು ಸಾಕ್ಷಿ ವಿಚಾರಣೆ ಮಾಡುವಾಗ ಹೆದರಿಸಿದರೆಂದು ಹೇಳಿದರು. ಈ ದಿವಸವೇ ನಾನು ಅದನ್ನು ಕೇಳಿರುವುದು. ಅಡ್ವೈರ್ಟೈಸ್‌ಮೆಂಟಿನಲ್ಲಿ ನಿಸ್ಸೀಮರಾಗಿರುವವರು ಹೀಗೆ ಹೇಳಬಹುದೆ? ನಮ್ಮ ಮುಂದೆ ಸಿ. ಐ. ಡಿ. ಗಳನ್ನು ಹಾಕಿದ್ದರು, ಅವರೆಲ್ಲಾ ಭಕ್ತಿ ತೋರಿಸುತ್ತಿದ್ದರು ಎಂದು ಹೇಳವುದು ಸರಿಯೆ? ಖಂಡಿತ ನಾವು ಸಿ. ಐ. ಡಿ. ಗಳನ್ನು ಪೋಸ್ಟ್ ಮಾಡಿರಲಿಲ್ಲ. ಹಿಂದೆ ಅವರು ಆ ರೀತಿ ಮಾಡಿದ್ದರು. ಅದನ್ನು ಜ್ಞಾಪಕ ಮಾಡಿಕೊಂಡು ಈಗ ಹೀಗೆ ಹೇಳಿದ್ದಾರೆ. He wanted to raise a cloud of dust. ನಿಜವಾದ ತಿರುಳನ್ನು ಜನರು ನೋಡದೇ ಹೋಗಲಿ, ಲೋಪದೋಷಗಳನ್ನು ಮರೆತು ಬಿಡಲಿ ಎಂದು ಟೀಕೆಗಳಿಗೆ ಉತ್ತರ ಕೊಟ್ಟರು. ಕೆಲವು ವಿಷಯ ಪ್ರಸ್ತಾಪ ಮಾಡಿ ಸಮಿತಿಯ ವರದಿಯನ್ನು ಟೀಕೆ ಮಾಡಿದರು. ಅದಕ್ಕೆ ಉತ್ತರ ಕೊಡಬೇಕಾದದ್ದು ನ್ಯಾಯ ಮತ್ತು ಧರ್ಮ. ಟರ್ಮ್ಸ್ ಆಫ್ ರೆಫರನ್ಸ್ ಆಚೆಹೋಗಿ ಕೆಲವು ವಿಷಯ ಪ್ರಸ್ತಾಪ ಮಾಡಿದ್ದಾರೆಂದು ಹೇಳಿದರು. ಅದು ನಿಜವಾಗಿದ್ದರೆ ಒಪ್ಪಿಕೊಳ್ಳಬೇಕು. ಅದನ್ನು ತಿಳಿದುಕೊಳ್ಳಲು ನಾನು ಕಣ್ಣಿಗೆ ಎಣ್ಣೆ ಹಾಕಿಕೊಂಡು ಹಾಗೆಯೇ ಹುಡುಕಿದೆ. ಸಮಿತಿಯ ಛೇರ್ಮನ್‌ಆದ ಜಡ್ಜಿಗಳು, ನಿವೃತ್ತ ಅಧಿಕಾರಿಗಳಾದ ಶ್ರೀ ನರಸಿಂಹಯ್ಯನವರು ಮತ್ತು ಶ್ರೀ ರಾಘವೇಂದ್ರರಾಯರು ಹಾಗೆ ಮಾಡುತ್ತಾರೆಯೆ ಎಂದು ಎರಡು ಮೂರುಸಲ terms of reference ಓದಿದೆ. ಶ್ರೀ ಹನುಮಂತಯ್ಯನವರು terms of reference draft ಮಾಡಿರುವುದನ್ನು ಓದುತ್ತೇನೆ. ಅದು ಈ ರೀತಿಯಿದೆ :—

> "The Terms of Reference to the Committee are :—
>
> (i) to examine the state of accounts and to assess the present position ;
>
> (ii) to scrutinise the expenditure on the building, having due regard to its nature, magnitude and purpose, and to examine the procedure adopted in fixing rates and executing works ; and
>
> (iii) to examine the possibility of effecting economies in further expenditure on the work."

ಸಮಿತಿಯವರು ತಮಗೆ ವಹಿಸಿದ್ದ ಕೆಲಸವನ್ನು ನಿರ್ವಹಿಸಿದ್ದಾರೆ, ಎಲ್ಲವನ್ನೂ ಪರಿಶೀಲಿಸಿದ್ದಾರೆ, ಪ್ರಸ್ತುತ ಪರಿಸ್ಥಿತಿಯನ್ನು ಅಸೆಸ್ ಮಾಡಿದ್ದಾರೆ. Terms of reference ನಲ್ಲಿರುವ ಎರಡನೆಯ ಐಟಂ ಬಹಳ ಮುಖ್ಯವಾದುದು. ಎಕಾನಮಿ ವಿಚಾರದಲ್ಲಿ ಆಕ್ಷೇಪಣೆ ಇಲ್ಲ. 20 ಲಕ್ಷ ರೂಪಾಯಿಗಳು ಉಳಿಯುವ ಹಾಗೆ ಮಾಡಿದರು. ಎರಡನೆಯದು terms of reference ಗಿಂತ ಒಂದು ಹೆಜ್ಜೆ ಆಚೆ ಹೋಗಿದ್ದಾರೆಂಬ ಅಲಿಗೇಷನ್ ವಿಚಾರವನ್ನು ಶ್ರೀಮಾನ್ ಶ್ರೀನಿವಾಸ ಐಯ್ಯಂಗಾರ್‌ರವರು ಪ್ರಸ್ತಾಪಿಸಿ 'ಹಾಗಿರಲಾರದು, ಸಮಿತಿಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಸಮಿತಿ ಸೂಚಿಸಿರಬೇಕು' ಎಂದು ಹೇಳಿದರು. ಅವರೇಕೆ ಪ್ರಸ್ತಾಪ ಮಾಡಿದ್ದಾರೆಂಬುದನ್ನು ನೋಡಬೇಕು. With a view to save money, from the point of view of economy,—it is not beyond the terms of reference. ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿದ್ದಾರೆ, ಇಡೀ ಜನತೆಯೆಲ್ಲಾ ಸಮಿತಿಯವರಿಗೆ ಚಿರಋಣಿಯಾಗಿರಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ನಾವು trustees of this vast responsibility. ಸಾರ್ವಜನಿಕರ ಹಣವನ್ನು ಹೇಗೆ ವಿನಿಯೋಗಿಸಬೇಕೆಂಬುದನ್ನು ಚೆನ್ನಾಗಿ ತಿಳಿಸಿದ್ದಾರೆ. ಈ ವರದಿಯು ಎಲ್ಲರಿಗೂ ಮಾರ್ಗದರ್ಶಕವಾಗಿ ಎಚ್ಚರಿಕೆ ಕೊಡುತ್ತದೆ; ಮೈಮರೆತು ಕೆಲಸ ಮಾಡುವುದನ್ನು ತಪ್ಪಿಸುತ್ತದೆ. ಆದ್ದರಿಂದ ಅವರೇನೇನು ಪ್ರಸ್ತಾಪ ಮಾಡಿದ್ದಾರೋ ಅದೆಲ್ಲಾ it is not beyond the terms of reference ಎಂದು ಖಚಿತವಾಗಿ ಹೇಳುತ್ತೇನೆ. ಅವರು ಎಲ್ಲರಿಗೂ ಮಾರ್ಗದರ್ಶಕರೂ ಸಹ ಆಗಿದ್ದಾರೆ. ಐದು ವರ್ಷದಿಂದ ಅವರ ಸಹವಾಸದಲ್ಲಿದ್ದು ಎಲ್ಲವನ್ನೂ ತಿಳಿದುಕೊಂಡಿದ್ದೇನೆ. ಈ ವರದಿ ಅವರ ಕಾರ್ಯಕ್ಷೇತ್ರವೇನು ವಿಧಾಯಕವಾಗಿತ್ತೋ ಅದರ ಎಲ್ಲೆ ಮೀರಿಲ್ಲ, ಆ ಎಲ್ಲೆಯೊಳಗೇ ಇರುವ ಅಧಿಕಾರವನ್ನು ಸಂಪೂರ್ಣವಾಗಿ ಉಪಯೋಗಿಸಿ ಸಂಬಂಧಪಟ್ಟ ಕೆಲಸವನ್ನೆಲ್ಲಾ ಮಾಡಿ ಸಮಿತಿಯವರು ಎಲ್ಲರ ಕೃತಜ್ಞತೆಗೂ ಪಾತ್ರರಾಗಿದ್ದಾರೆ. ಆ ಮಾನ್ಯ ಸದಸ್ಯರಿಗೆ ಮನನೊಂದಿದ್ದರೆ ತುಂಬ ವಿಷಾದಿಸುತ್ತೇನೆ. ಅವರು ಹಾಗೆ ನೊಂದುಕೊಳ್ಳಬಾರದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನೊಂದು ವಿಷಯವನ್ನು ಈ ಸಮಿತಿಯವರು ಪ್ರಸ್ತಾಪಮಾಡಿದ್ದಾರೆ. ಸಮಿತಿಯವರಿಗೆ ಸ್ವಾಭಾವಿಕವಾಗಿ ಯಾರೇ ಆಗಲಿ ಎಲ್ಲಿಂದಲೇ ಒತ್ತಾಯ ಬಂದರೂ ಏನು ಸಹಕಾರ ಕೊಡಬೇಕೋ ಅದನ್ನು ಕೊಟ್ಟಿದ್ದರೆ ಅವರು blameworthy ಆಗುವುದಿಲ್ಲ, blameless ಆಗುತ್ತಾರೆ. ಸಮಿತಿಯವರು ಪ್ರಾರಂಭದಲ್ಲಿ ತಮಗುಂಟಾದ ಅಸಹಕಾರವನ್ನು ಈ ರೀತಿ ಸೂಚಿಸಿದ್ದಾರೆ.—

> "The Committee regrets to note that it has not received unstinted co-operation from the officers concerned. In the early stages, it looked as if even the Government was unwilling to place the Secretariat files relating to the Vidhana Soudha at the disposal of the Committee."

ಇದರ ಅರ್ಥವೇನು? ಅನುಮಾನವಿರುವುದಕ್ಕೆ ತಾನೆ ಸಂಪೂರ್ಣ ಸಹಕಾರ ಕೊಡುವುದಕ್ಕೆ ಇಚ್ಛೆಪಟ್ಟಿಲ್ಲ, ಕಾಗದಪತ್ರ ಮುಂದಿಡುವುದಕ್ಕೆ ಇಚ್ಛೆಪಟ್ಟಿಲ್ಲ, ಶ್ರೀ ರಾಮಚಂದ್ರರಾಯರು ಛಾರ್ಜುತೆಗೆದುಕೊಂಡ

ಮೇಲೆ ಸರ್ಕಾರದ ಫೈಲುಗಳು, ಆರ್ಡರುಗಳು ಈಚೆಗೆ ಬಂದುವು ಎಂದು ಹೇಳಿದ್ದಾರೆ.

ವರದಿಯ ಮೂರನೆಯ ಪುಟ ನೋಡಬೇಕು. ಮುನಿಯಪ್ಪನವರನ್ನು ಸ್ಪೆಷಲ್ ಇಂಜನಿಯರನ್ನಾಗಿ ನೇಮಕ ಮಾಡುವುದಕ್ಕೆ ಒಂದು ಕಾರಣವಿದೆ. ಕೇಂದ್ರ ಸರ್ಕಾರದಲ್ಲಿರುವ ಚೆಂಗಲರಾಯ ರೆಡ್ಡಿಯವರ ಸರ್ಟಿಫಿಕೇಟ್‌ನಿಂದ ಅವರನ್ನು ಗೊತ್ತುಮಾಡಿದೆಯೆಂದು ಹೇಳಿದೆ. ಚೆಂಗಲರಾಯರೆಡ್ಡಿಯವರು ಅವರು ಪ್ರಾಮಾಣಿಕರೆಂದು ಹೇಳಿದರೇ ವಿನಾ ವಿಧಾನಸೌಧದ ಕೆಲಸಕ್ಕೆ ಹಾಕಿ ಎಂದು ಹೇಳಲಿಲ್ಲ. ಮುನಿಯಪ್ಪನವರು ಸಣ್ಣ ಪುಟ್ಟ ರಸ್ತೆಮಾಡಿಸಿದ್ದಾರೆ. ಅವರನ್ನು ಡೈಸ್ಟ್ರಿ ಡಿಸ್ಟ್ರಿಕ್ಟ್‌ಗಳಿಗೆ ಹಾಕಿದ್ದರು, ದೊಡ್ಡ ಕಟ್ಟಡಗಳ ಕೆಲಸ ಅವರಿಗೆ ವಹಿಸಿರಲಿಲ್ಲ. ಸಮಿತಿಯು ತನ್ನ ವ್ಯಾಪ್ತಿ ಮೀರಿ ಒಂದು ಹೆಜ್ಜೆಯೂ ಮುಂದೆ ಹೋಗಿಲ್ಲ. ಸ್ಪೆಷಲ್ ಇಂಜಿನಿಯರ್ ಶ್ರೀ ಮುನಿಯಪ್ಪನವರು ದಕ್ಷತೆಯಿಂದ ಕೆಲಸ ಮಾಡುತ್ತಾರೆ, ಪ್ರಾಮಾಣಿಕರು ಎಂದು ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದರು ಅದರಿಂದ ಅವರನ್ನು ಸ್ಪೆಷಲ್ ಇಂಜಿನಿಯರ್ ಆಗಿ ನೇಮಿಸಿತು ಎಂದರು. ದಕ್ಷರು ಪ್ರಾಮಾಣಿಕರು ಎಂದು ಹೇಳಿದರೆ ವಿಧಾನಸೌಧ ಕೆಲಸಕ್ಕೆ ನೇಮಿಸು ಎಂದು ಶ್ರೀ ರೆಡ್ಡಿಯವರು ಹೇಳಿದ್ದಾರೆಯೇ? ಭಾರಿ ನೀರಾವರಿ ಅಥವಾ ಕಟ್ಟಡ ಯೋಜನೆಯಲ್ಲಿ ಅವರು ಎಂದೂ ಕೆಲಸ ಮಾಡಿಲ್ಲ. ಲೆಕ್ಕಗಳನ್ನು ಸರಿಯಾಗಿ ಇಟ್ಟಿಲ್ಲ. ಎಷ್ಟೋಸಾರಿ ಕಣ್ಣು ಮಿಂಚುವುದರೊಳಗೆ ಹಣ ಮಂಜೂರು ಮಾಡಿಸಿಕೊಂಡಿದ್ದಾರೆ. ಈ ವಿಷಯವನ್ನು ಪ್ರಸ್ತಾಪಿಸಿ ವರದಿಯಲ್ಲಿ ಹೀಗೆ ಹೇಳಿದೆ.—

Para 3, para 12.

"The records maintained in the office of the Special Engineer made available to the Committee were not paged and were not even properly arranged. Without the aid of the Secretariat files and the files of the Chief Engineer's Office, it was difficult to get a consistent account of any important subject. Considerable time of the Committee was taken up in compiling facts."

ಸ್ವಾಮಿ, ಇದು ಏನು? ಉದ್ದೇಶ ಪೂರ್ವಕವಾಗಿ ಆ ರೀತಿ ಲೆಕ್ಕ ಇಟ್ಟರೇ? ಎಗ್ಸಿಕ್ಯೂಟಿವ್ ಇಂಜಿನಿಯರ್ ಆದವರಿಗೆ ಲೆಕ್ಕ ಇಡುವದು ಗೊತ್ತಿರಲಿಲ್ಲವೇ? ಖರ್ಚು ಆಯಿತು ಎಂದು ಹೇಳುವುದು ಸುಲಭ. ಪ್ರಾರಂಭದಲ್ಲಿಯೇ ಹೀಗೆ ನಡೆಯಬೇಕಾದರೆ ಲೆಕ್ಕ ಇಡುವದು ಗೊತ್ತಿರಲಿಲ್ಲವೇ? ಲೆಕ್ಕ ಇಡಬೇಕಾಗಿತ್ತು. ಇದನ್ನು ಪರಿಶೀಲನೆ ಮಾಡುವಾಗ ಸಮಿತಿಯು ಮುಂದೆ ಸತ್ಯವನ್ನೂ ಹೇಳಿಲ್ಲ ಎಂಬುದಕ್ಕೆ ಸಭೆಯು ಗಮನ ಕೊಡಬೇಕು. ವರದಿಯಲ್ಲಿ ಈ ರೀತಿ ಅದೆ.—

Page 3, para 13.

"Recording of evidence has also taken a long time as a number of Officer- witnesses were not quite willing to "tell the truth and the whole truth."

This will not redound to the credit of anybody. ಈಗಲೂ ಈ ಸಭೆಯಲ್ಲಿ ಪ್ರಾರ್ಥಿಸುತ್ತೇನೆ. ನಿರ್ಭಯವಾಗಿ ಸತ್ಯವನ್ನು ಹೇಳಿಬಿಡಬೇಕು. ಸತ್ಯ ಇದ್ದುದನ್ನು ಹೇಳಿದರೆ ರಕ್ಷಣೆ ಸಿಗುತ್ತದೆ. ತಪ್ಪು ಆಗಿದ್ದರೆ ತಪ್ಪು ಒಪ್ಪಿಕೊಳ್ಳಲಿ. ಸಮಿತಿಯು ಹಾಗೆ ಮಾಡಿದ್ದು ಸರಿಯಲ್ಲ ಎಂದು ಹೇಳಬಾರದು. ಗಾಬರಿ ಪಡುವ ಅವಶ್ಯಕತೆಯು ಇಲ್ಲ. ಪ್ರತಿಜ್ಞೆಮಾಡಿ ನಿಜವನ್ನು ಹೇಳಬೇಕು. ಸಮಿತಿಯ ಮುಂದೆ ಸತ್ಯವನ್ನು ಹೇಳದೇ ಇದ್ದ ಮೂಲಕ ಎಷ್ಟು ಕಷ್ಟವಾಯಿತು ಎಂಬುದನ್ನು ಸಮಿತಿಯವರು ವರದಿಯಲ್ಲಿ ಪದೇ ಪದೇ ಉದಹರಿಸಿದ್ದಾರೆ.

ಸ್ವಾಮಿ, ಇನ್ನೊಂದು ವಿಷಯವನ್ನು ಒತ್ತಿ ಹೇಳದೆ ಇರಲಾರೆನು. ಮೊದಲು ಏನು ಪ್ಲಾನ್ ತಯಾರು ಆಗಿತ್ತೋ ಅದು ಬದಲಾವಣೆ ಆಗಲಿಲ್ಲ ಎಂದು ಅವರು ಹೇಳಿದರು ಸ್ವಾಮಿ, ಈ ಮಾತು ನಿಜಾಂಶಕ್ಕೆ ಬಹಳ ದೂರವಾಗಿದೆ. ಮೊದಲು ಮಾಡಿದ ಪ್ಲಾನ್ ಬಹಳ modest ಪ್ಲಾನ್ ಆಗಿತ್ತು. ಇದು ಕಮಿಟಿಯ ರಿಪೋರ್ಟು ಚಾಪ್ಟರ್ 2, ಪುಟ 5ರಲ್ಲಿ ಹೀಗಿದೆ.—

Chapter II page 5.

"In view of the acute financial condition of the State however, the Government was unwilling to incur even this expenditure and desired that the plans and estimates might be recast to reduce the cost, keeping in view the modifications suggested by the Speaker."

ವಿಧಾನಸೌಧ ಎಂದ ಮೇಲೆ ಸ್ಪೀಕರರು ಕೌಂಟರ್ ಸೈನ್ ಮಾಡಬೇಡವೇ? P.W.D. ಮಂತ್ರಿಗಳು ಕೌಂಟರ್ ಸೈನ್ ಮಾಡಿದ್ದಾರೆಯೇ? ಹಾಗೆ ಮಾಡದೆ ಇರುವುದು ನ್ಯಾಯವಾದ ಮಾತೇ? ಸ್ಪೀಕರ್‌ರನ್ನು ಬಿಟ್ಟು ಬಿಟ್ಟರು, P.W.D. ಸಚಿವರಾಗಿದ್ದವರೂ ಕೇಳಲಿಲ್ಲ. ಮುಖ್ಯ ಮಂತ್ರಿಗಳೂ ತಾವೇ, ಹಣಕಾಸಿನ ಮಂತ್ರಿಯೂ ತಾವೇ, P.W.D. ಇಲಾಖೆಯೂ, ಅವರದೇ ವಿಧಾನಸೌಧಕ್ಕೆ ಸಂಬಂಧಪಟ್ಟ ಮಂತ್ರಿಯೂ ಅವರೊಬ್ಬರೇ. All the three combined in one. ಪರಿಸ್ಥಿತಿಯು ಹೀಗಿತ್ತು. ಶ್ರೀ ಕಡಿದಾಳ್ ಮಂಜಪ್ಪನವರು ಅದೃಷ್ಟಶಾಲಿಗಳು. ಖರ್ಚು 50 ಲಕ್ಷ ರೂಪಾಯಿ ಮೀರಿದಮೇಲೆ ಅವರು ಬಿಟ್ಟುಬಿಟ್ಟರು. ಶ್ರೀಮಾನ್ ಹನುಮಂತಯ್ಯನವರೇ ಇದನ್ನು ತೆಗೆದುಕೊಂಡರು. P.W.D., ಹಣಕಾಸಿನ ಮಂತ್ರಿ, ಮುಖ್ಯ ಮಂತ್ರಿ ಹೀಗೆ ಮೂರೂ ಶ್ರೀ ಹನುಮಂತಯ್ಯನವರದೇ ಆಗಿದ್ದುದರಿಂದ ಯಾವ ರಿಕಾರ್ಡೂ ಇತರ ಮಂತ್ರಿಗಳ ಗಮನಕ್ಕೆ ಬರುವ ಹಾಗಿರಲಿಲ್ಲ, ಖರ್ಚು 50 ಲಕ್ಷ ಮೀರಿದನಂತರವೂ ಕ್ಯಾಬಿನೆಟ್ಟಿಗೆ ಗೊತ್ತಾಗಲಿಲ್ಲ. ಒಂದು ದಿನವೂ ಕಾಂಗ್ರೆಸ್ ಪಾರ್ಟಿಯ ಸಭೆಯಲ್ಲಿಯೂ ಈ ವಿಷಯವನ್ನು ಎತ್ತಿ ತಿಳಿಸಲಿಲ್ಲ. ಬಡವರ ದುಡ್ಡು ಹೋಗುತ್ತಿದೆಯಲ್ಲಾ ಎಂದೆನಿಸಿ ನಾವು ಪಕ್ಷದ ಶಿಸ್ತು ಬದಿಗಿಟ್ಟು ಟೀಕಿಸಿದ್ದೇವೆ. ದೇವರೇ, ಬಡವರ ಹಣವು ವ್ಯರ್ಥವಾಗಿ ಖರ್ಚಾಗುತ್ತಿದೆಯಲ್ಲಾ ಎಂದು ಬಹಳ ವ್ಯಸನವಾಯಿತು. ನಾವು ಮಾಡಿದ ಟೀಕೆಗಳ ಪೇಪರ್ ಕಟಿಂಗ್‌ಗಳನ್ನು ಹೈಕಮ್ಯಾಂಡಿನವರಿಗೆ ಕೊಟ್ಟು ಕಳಿಸಿದ್ದೇವೆ. ಈ ರೀತಿಯಾಗಿ ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ನಡೆದಿಲ್ಲ. ನಾವು helpless ಆಗಿದ್ದೆವು ಎಂಬದನ್ನು ಒಪ್ಪಿಕೊಳ್ಳುತ್ತೇನೆ. ಪಾರ್ಟಿ ಮೀಟಿಂಗಿನಲ್ಲಿ ಈ ವಿಷಯ ಬರಲಿಲ್ಲ. ಶಾಸನ ಸಭೆಯಲ್ಲಿ ಓಟು ಮಾಡಿದ್ದೇವೆ. ನಾವು ಓಟು ಮಾಡಿದ್ದು

(ಶ್ರೀ ಟಿ. ಮರಿಯಪ್ಪ.)

ಶಿಸ್ತಿಗೋಸ್ಕರ, lump sum ಮಾತ್ರ ಓಟು ಮಾಡಿದ್ದೇವೆ. ಆದರೆ expenditure ರಿಗೆ ಅಲ್ಲ. Working of the party system was responsible for that.

ಆದುದರಿಂದ ನಾವು ಆಗಲೂ ಸಹ ವಿರೋಧಿಸಿ ಟೀಕಿಸಿದ್ದೇವೆ. It may be limited to ten lakhs of rupees in view of the financial stringency ಎಂದು ಹೇಳುತ್ತಲೇ ಬಂದಿದ್ದೇವೆ. ಆ ರೀತಿಮಾಡಿ ಆ ವರ್ಷದಲ್ಲಿ ಇದ್ದ ಪರಿಸ್ಥಿತಿಯನ್ನು ಎರಡನೇ ವರ್ಷವಾದರೂ ಸುಧಾರಿಸಿಕೊಳ್ಳೋಣ ಎಂದಿದ್ದೆವು ಹೀಗೆ ಜಾಸ್ತಿ ಖರ್ಚುಮಾಡುವುದು ಬೇಡ ಎಂದರೂ ಅಧಿಕಾರ ಇದ್ದದ್ದರಿಂದ ಅದನ್ನೆಲ್ಲಾ ಕೂಡಲೇ ಬದಲು ಮಾಡಿಬಿಟ್ಟರು. ವಿಧಾನಸೌಧ ಕಟ್ಟಡ ಕಟ್ಟಬೇಕೆಂದಿದ್ದಾಗ ಇದರಲ್ಲಿ ಸೆಕ್ರೆಟೇರಿಯಟ್ ಸಹ ಇರಬೇಕೆಂದು ಪ್ರಾರಂಭದಲ್ಲಿ ಯೋಚನೆ ಮಾಡಿರಲಿಲ್ಲ. ಏತಕ್ಕಾಗಿ ಇದರಲ್ಲಿ ಸೆಕ್ರೆಟೆರಿಯಟ್ಟನ್ನು ಸಹ ಸೇರಿಸಿದರು ? ಯಾವುದಾದರೂ Procedure ಅನ್ನು ಅನುಸರಿಸ ಬೇಡವೆ ? ಇದು ಏನು ಸ್ವಂತ ಮನೆಯ ಕೆಲಸವೇ ? ಅಧಿಕಾರ ತಮ್ಮ ಕೈಯಲ್ಲಿ ಇದೆ ಎಂದು ಅದನ್ನು ದುರುಪಯೋಗಪಡಿಸಬಹುದೆ ? ಒಂದು ಬಿಲ್ಡಿಂಗ್ ಕಮಿಟಿಯನ್ನು ಗೊತ್ತುಮಾಡಿದ ಮೇಲೆ ಆ ಬಿಲ್ಡಿಂಗ್ ಕಮಿಟಿ ಏನೇನು ಹೇಳಿತೋ ಅದರಂತೆ ಮಾಡಿದರೇ ? ಚೀಫ್ ಇಂಜಿನಿಯರ್ ಆದ ಶ್ರೀಮಾನ್ ಗಂಗಾಧರ ಅವರು ತಕರಾರು ಬರೆದು ಕೊಟ್ಟಿದ್ದಾರೆ. ಅವರ ಮಾತನ್ನು ಕೇಳಲಿಲ್ಲ. 'Ornamentation for a building of this nature is unnecessary' ಎಂದು ಅಭಿಪ್ರಾಯಪಟ್ಟಿದ್ದರೂ ಕೂಡ, ಶ್ರೀ ಹನುಮಂತಯ್ಯನವರು ಏನು ಹೇಳಿದರೋ ಏನು ತೀರ್ಮಾನ ತೆಗೆದುಕೊಂಡರೋ ಅದು ನಡೆದೇ ಹೋಗಬೇಕು. ಇನ್ನೂ ಮುಂದೆ ಸಮಿತಿಯ ವರದಿಯಲ್ಲಿ ಈ ರೀತಿಯಾಗಿ ಹೇಳಿದೆ :

"The Chief Minister should have left the Committee to its deliberations and awaited their plans and report. On their accepting the plans, Government should have adhered to them."

It is a salutary principle.

ಸಮಿತಿಯವರ ವರದಿಯಲ್ಲಿ ಡೋಮ್ಸ್ ಬಗ್ಗೆ ಈ ರೀತಿಯಾಗಿ ಬರೆದಿದ್ದಾರೆ.

". . . . It is to be remembered that 7 out of the 10 members were employees of the State, who could not afford to express any views opposed to those of the Chief Minister. The Chief Minister called these members to his Chamber and gave them directions. Not only that, he finalized the plans and got such plans presented to the Committee. The unanimous suggestion of the Committee to omit the end domes was flouted by the Chief Engineer. These domes have been built at a cost of Rs. 3.84 lakhs without consulting the Committee. Several major deviations in designs and architecture involving a huge additional expenditure of about 35 lakhs have also been effected without reference to the Committee. The Technical Committee formed to decide details that may arise day-to-day-relating to design, construction, art, etc., was also ignored.

The Standing Technical Advisory Commiteee was reconstituted by Government with effect from the 1st December 1953."

Even that was not consulted.

ಹಿಂದೆ ಪಿ. ಡಬ್ಲ್ಯೂ. ಡಿ. ಖಾತೆಯ ಸಚಿವರಾಗಿದ್ದ ಶ್ರೀ ಎಲ್ ಸಿದ್ದಪ್ಪನವರು ಸ್ಟ್ಯಾಂಡಿಂಗ್ ಟೆಕ್ನಿಕಲ್ ಅಡ್ವೈಸರಿ ಕಮಿಟಿ ಎಂಬುದನ್ನು ದೊಡ್ಡ ದೊಡ್ಡ ಇರಿಗೇಷನ್ ವರ್ಕ್ಸ್ ಮುಂತಾದುವುಗಳಿಗೆ ಸಹಾಯಕವಾಗುವಂತೆ ನೇಮಿಸಿದ್ದರು. ಅವರ ಹಾಗೆ ನಾನೂ ಕೂಡ ಸ್ವಲ್ಪ ಕಾಲ ಪಿ. ಡಬ್ಲ್ಯೂ. ಡಿ. ಮಿನಿಸ್ಟರಾಗಿದ್ದೆ. ಇಂತಹ ದೊಡ್ಡ ಪ್ರಾಜೆಕ್ಟುಗಳ ವಿಚಾರದಲ್ಲಿ ಇಂತಹ ಕಮಿಟಿಯವರ ಸಲಹೆ ಪಡೆಯಬೇಕಾಗಿತ್ತು. ಮೇಲೆ ಹೇಳಿದ ಕಮಿಟಿಯ ಕಾರ್ಯಗಳು ಹೀಗಿದ್ದುವು.

"To tender technical advice and opinion on outstanding matters in the Public Works and Electrical Departments in relation to projects and works of large magnitude and in particular of those estimated to cost over Rs. 10 lakhs."

ಹತ್ತು ಲಕ್ಷಕ್ಕೆ ಮೇಲೆ ಬೇಳಬಹುದಾದ ಇರಿಗೇಷನ್ ವರ್ಕ್ಸ್‌ಗಳು ಮತ್ತು ಕಟ್ಟಡಗಳ ವಿಷಯ ಈ ಸಮಿತಿಯ ಮುಂದೆ ಪರಿಶೀಲನೆಗೆ ಬರಬೇಕಾಗಿತ್ತು. ಆದರೆ ಇದು 180 ಲಕ್ಷಕ್ಕೆ ಮೀರಿ ಹೋಗಿದೆ. ಇಂತಹ ವಿಷಯಗಳ ಮೇಲೆ ಸಲಹೆಯನ್ನು ಕೇಳುವ ಅಗತ್ಯವೇ ಇರಲಿಲ್ಲ ಎಂದು ಭಾವಿಸಿದರೆಂದು ತೋರುತ್ತದೆ. ಈ ಸಮಿತಿ ವರದಿಯ ಪ್ಯಾರಾ 13ರಲ್ಲಿ ಈ ರೀತಿ ಇದೆ.

"The Chief Minister constituted himself the final authority in the matter of architectural features including finalizing designs, working drawings, changes and additions to the structure, as will be clear from the extracts of his Inspection notes. The Government Architect, the Chief Engineer and the Special Engineer had to carry out his orders. The statement of the Chief Minister that these changes were being put

up to Government for sanction through the usual channels is not borne out either by the records in the Secretariat all of which, as informed by the Secretary, Public Works Department, were made available to us, or by the records of the Chief Engineer or the Special Engineer. The evidence of these officers is also the other way. His statement that the final word in these matters was of the Government cannot be accepted."

ಸ್ವಾಮೀ, ವಿಷಯ ಹೀಗಿರುವಾಗ ತಾವೇ ಸರ್ವಸ್ವ ವೆಂದು ಭಾವಿಸಿ ಈ ರೀತಿ ಸಮಿತಿಯವರ ಆಕ್ಷೇಪಣೆ ಗಳನ್ನು ವಿರೋಧಿಸುವುದು ಸರ್ವಥಾ ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಷ್ಟೆಲ್ಲ ಆದರೂ ಕಾಂಗ್ರೆಸ್ಸು ಅಸೆಂಬ್ಲಿ ಪಾರ್ಟಿ ಏನು ಮಾಡುತ್ತಿತ್ತು ಅದನ್ನು ಹೇಳಲಿಲ್ಲ.

ಶ್ರೀ ಟಿ. ಮರಿಯಪ್ಪ.—ಒಬ್ಬರು ಸಾಕ್ಷಿಕೊಡುವಾಗ ಸಮಿತಿ ಮುಂದೆ ಈ ರೀತಿ ಹೇಳಿದಾರೆ :—

"The head of the State or the Minister of the Department concerned should not interfere with the day to day execution of the work. Such interference is subversive of discipline and is likely to engender a sense of irresponsibility in the officers concerned."

ಇಷ್ಟೇ ಅಲ್ಲದೆ, ಇವರು ಇನ್ಸ್‌ಪೆಕ್ಷನ್ನಿಗೆ ಬಂದಾಗಲೆಲ್ಲ ಅಲ್ಲಿದ್ದವರೆಲ್ಲ ಇವರಿಗೆ ತ್ರಾಹಿ, ತ್ರಾಹಿ, ಎಂದು ಹೆದರಿ ಕೊಂಡು ಇವರು ಹೇಳಿದಂತೆ ಕೇಳಬೇಕಾಗಿತ್ತು. ಯಾವುದಕ್ಕಾದರೂ ಲೆಕ್ಕವಿಲ್ಲ. ಅಕೌಂಟ್ಸ್ ಚೆಕ್ಕು ಮಾಡುವವರಿಲ್ಲ, ಮೆಟೀರಿಯಲ್ಸ್ ಚೆಕ್ಕು ಮಾಡಿಲ್ಲ, ಕೊನೆಗೆ ಎಷ್ಟು ದೂರ ಹೋಗಿದೆ ಎಂದರೆ ಮಂತ್ರಿಗಳು ಹೇಳಿದಂತೆ, ನಿಯಮಗಳನ್ನು ವಿರೋಧಿಸಿ, ಮನಸ್ಸು ಬಂದಂತೆ ವರ್ತಿಸಿದ್ದಾರೆ. ಸ್ಪೆಷಲ್ ಇಂಜನೀಯರ ತನಕವು ಹೋಗದೆ ಎಷ್ಟೋ ಹಣವನ್ನು ಇವರೇ ಮಂಜೂರು ಮಾಡಿಸಿ ಕೊಡಿಸಿದ್ದಾರೆ.

"As will be shown hereafter, there has been a sense of irresponsibility and a failure on the part of these officers to discharge their respective duties."

ಸ್ವಾಮೀ, ಆಮೇಲೆ ಬಿಲ್ಡಿಂಗು ಮತ್ತು ಆರ್ಕಿಟೆಕ್ಚರ್ ವಿಷಯದಲ್ಲಿ ಅವರು ಹೇಳಿದರು "ಭವ್ಯವಾದ ಭವನ" ಎಂದು. ಪ್ರಪಂಚದಲ್ಲಿರುವ ಅನೇಕ ಭಾಗಗಳನ್ನು ಮತ್ತು ಅಲ್ಲಿಯ ಸುಂದರವಾದ ಕಟ್ಟಡಗಳನ್ನು ನೋಡಿ ಬಂದೆ. ಮತ್ತು ಇಂಡಿಯಾ ದೇಶದಲ್ಲಿ ಚಂಡೀಘರ್ ವಗೈರೆ ಸ್ಥಳಗಳನ್ನು ನೋಡಿ ಬಂದೆ ಎಂದು ಹೇಳಿದರು. ನಾನೂ ಕೂಡ ನೋಡಿದ್ದೇನೆ. ಇಂಡಿಯಾ ದೇಶದಲ್ಲಿ ನಾನು ಅನೇಕ ಕಟ್ಟಡಗಳನ್ನು ನೋಡಿದ್ದೇನೆ. ಆದರೆ ಪರದೇಶಕ್ಕೆ ಹೋಗುವ ಅದೃಷ್ಟ ನನಗಿರಲಿಲ್ಲ. ಸ್ವಾಮೀ, ಈಗಾಗಲೇ ಶ್ರೀಮಾನ್ ಗೋಪಾಲಗೌಡರು ಈ ವಿಚಾರದಲ್ಲಿ ಹೇಳಿದರು ಆದರೆ ನಾನು ಅಷ್ಟು ದೂರ ಹೋಗುವುದಿಲ್ಲ. ಪರದೇಶಕ್ಕೆ ಹೋಗಿ ಅಲ್ಲಿ ನಿಜವಾಗಿ ಎಷ್ಟೋ ಚೆನ್ನಾಗಿ ಇರುವುದನ್ನು ನೋಡಿ ಅದನ್ನು ಅರ್ಥ ಮಾಡಿಕೊಂಡು ಅದರಂತೆಯೇ ಇಲ್ಲಿಯೂ ಮಾಡಲು ಸಾಧ್ಯವೇ ? ಹಾಗಲ್ಲ. ಜೈಲಿಗೆ ಹೋಗಿ ಸ್ವಲ್ಪ ರಾಜಕೀಯವನ್ನು ಅರ್ಥ ಮಾಡಿಕೊಂಡಿರುವ ನಾವು ಟೆಕ್ನಿಕಲ್ ಕೆಲಸ ಕಾರ್ಯಗಳನ್ನು ಅರ್ಥ ಮಾಡಿಕೊಂಡು ಇಂಜಿನೀಯರುಗಳು ಮಾಡುವ ಡಿಸೈನ್ಸ್ ಮುಂತಾದವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ನಾವು ಲೇಮ್ಯಾನ್ ತರಹ ಇರುವಾಗ ಈ ರೀತಿಯಾದ ವಿಷಯಗಳಲ್ಲಿ ಇನ್ಸ್ಟ್ರಕ್ಷನ್ ಕೊಟ್ಟಿರುವುದನ್ನು ನೋಡಿದರೆ ಗೊತ್ತಾಗುತ್ತದೆ.

"The instruction of the Chief Minister issued from time to time direct the executive to imitate the architectural features found in different buildings in the State."

ಯಾವುದಾದರೂ ಒಂದು ಕೆಲಸ ಮಾಡಿದ್ದರೆ ಅದು ಚಿಕ್ಕದು ಎಂದು ತಿಳಿಸುವುದು, ಹೆಚ್ಚು ಕಡಿಮೆ ಮಾಡುವುದು ಹೀಗೆಲ್ಲಾ ಆಗಿ ಈ ಆರ್ಕಿಟೆಕ್ಚರಲ್ ಫೀಚರ್ಸ್ ಖರ್ಚು ಒಂದು ಲಕ್ಷವಿದ್ದುದ್ದು ಎರಡು ಲಕ್ಷವಾಯಿತು. ಇಂತಹ ಅನಾವಶ್ಯಕವಾದ ಖರ್ಚು ಸುಮಾರು 44 ಲಕ್ಷ ರೂಪಾಯಿಗಳಾಗುತ್ತಿದ್ದುದ್ದನ್ನು ಬೇರೆ ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸಿದ್ದರೆ ಸಾವಿರಾರು ಎಕರೆ ತರಿ ಜಮೀನು ಸಾಗುವಳಿಯಾಗುತ್ತಿತ್ತು. ಈ ಬಿಲ್ಡಿಂಗಿನಲ್ಲಿ ಒಂದು ಕಡೆ ಸಿಮೆಂಟಿನ ಗೋಡೆ ಮೇಲೆ ಒಂದು ನವಿಲನ್ನು ಕೆತ್ತಿಸಿದ್ದಾರೆ. ಇನ್ನೂ ಈ ಕಟ್ಟಡವಾಗಿ ಬಹಳ ಸ್ವಲ್ಪವೇ ದಿನವಾಗಿದೆ. ಈಗಾಗಲೇ ಅಲ್ಲಿ ಕೆತ್ತಿಸಿರುವ ನವಿಲು ಹಾಳಾಗುತ್ತಾ ಬಂದಿದೆ. ಇಂತಹ ಭಾರಿ ಬಿಲ್ಡಿಂಗಿನಲ್ಲಿ ಈ ರೀತಿ ಆರ್ಕಿಟೆಕ್ಚರಲ್ ಫೀಚರ್ಸ್ ಮಾಡಿದರೆ ಚೆನ್ನಾಗಿರುತ್ತದೆಯೇ ಎಂಬುದನ್ನು ಈ ಸಭೆಯವರೇ ಯೋಚಿಸಬೇಕು. ಈಗಾಗಲೇ ನನ್ನ ಮಾನ್ಯ ಮಿತ್ರರಾದ ಶ್ರೀ ವೀರಣ್ಣಗೌಡರು ಹೇಳುತ್ತಿದ್ದರು. ಈ ಬಾಬಿನ ಬಿಲ್ಲುಗಳ ಅರಿಯರ್ಸ್ಸು ಸುಮಾರು 10 ಸಾವಿರ ರೂಪಾಯಿಗಳ ಮೇಲೆ ಬಾಕಿ ಇದೆ ಎಂದು. ಆದ್ದರಿಂದ ಇದಕ್ಕೆಲ್ಲ ಖರ್ಚಾಗಿರುವುದು ಉಚಿತವೇ ಎಂದು ಯೋಚಿಸಬೇಕು.

ಅನಂತರ ಈ ಭಾರಿ ಕಟ್ಟಡದಲ್ಲಿ ಎಷ್ಟು ಸ್ಪೇಸ್ ಇತ್ತು ಎಂಬ ವಿಷಯದ ಮೇಲೆ ಸಮಿತಿಯವರು ಸುಮಾರು ಎರಡು ಸಾವಿರ ಜನಗಳು ಕೂಡಲು ಅವಕಾಶವುಳ್ಳ ಈ ಕಟ್ಟಡದಲ್ಲಿ ಶೇಕಡ 42 ರಷ್ಟು ಭಾಗ ಉಪಯೋಗವಾಗಿದೆ ಎಂದು ಹೇಳಿದ್ದಾರೆ. ಆದರೆ ಇದಕ್ಕಿಂತ ಚಿಕ್ಕದಾದ ಅಕೌಂಟೆಂಟ್ ಜನರಲ್ ಆಫೀಸು ಕಟ್ಟಡದಲ್ಲಿ ಶೇಕಡ 57ರಷ್ಟು ಭಾಗ ಉಪಯೋಗವಾಗಿದೆ. ಆದ್ದರಿಂದ ಇಷ್ಟೊಂದು ಹಣ ಖರ್ಚು ಮಾಡಿಯೂ ಇರುವ ಭಾಗವನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಹಾಗೆಯೇ ಇವರು ಇನ್ಸ್ಟ್ರಕ್ಷನ್ ಕೊಟ್ಟಿರುವ ರೀತಿ ನೋಡಿ :—Para 16 page 12

"The window lintels adopted for 'Kumara Krupa' may be adopted for the South quadrangle on the ground floor and the window balcony treatment at

(ಶ್ರೀ ಟಿ. ಮರಿಯಪ್ಪ).

'Kumara Krupa' with side pillars treatment may be adopted for the second and third floors with modifications. The Kotethene on the south side being too plain, carving may be done in the sama manner as is done at Snbramanya Swamy Temple. . . . . "

'ಇಂಡಿಯನ್ ಬಿಲ್ಡರ್' ಎಂಬ ಒಂದು ಇಂಜಿನೀಯರಿಂಗ್ ಮ್ಯಾಗಸೀನ್ ಈ ಬಿಲ್ಡಿಂಗ್ ವಿಷಯದಲ್ಲಿ ಬರೆಯುತ್ತಾ ಈ ರೀತಿಯಾದ ಇಂಗ್ಲಿಷ್ ಸ್ಟೈಲುಗಳು ಬೇಡ, ಇಂಡಿಯನ್ ಸ್ಟೈಲ್‌ನಲ್ಲಿರುವಂತಿರಬೇಕೆಂದು ಹೇಳಿದ್ದಾರೆ. ಕಮಿಟಿಯ ಮುಂದೆ ಸರ್ಕಾರದ ಆರ್ಕಿಟೆಕ್ಟ್ ಹೇಳಿದ್ದು ಹೀಗಿದೆ:

"I then considered ornamentation unnecessary for a building of this nature. At that time, my view was that the architecture should be suitable to the function of the Houses of Legislature and should not look like a temple."

ಇನ್ನೊಬ್ಬರು ಸಾಕ್ಷಿ ಹೀಗೆ ಹೇಳಿದ್ದಾರೆ:

"For Secretariat and other offices, I would prefer a plain building without any ornamentation. This heavy expenditure on ornamentation of the building is a criminal waste of money..."

ಅವರು ಹೀಗೆ ಸರ್ಕಾರದ ಹಣದಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿ, ಊರಿಂದೂರಿಗೆ ಹೋಗಿ, ಈ ರೀತಿ ಅವರೇ ಮಾಡುವುದು ಸಾಧುವೇ ಎಂಬುದನ್ನು ತಾವೇ ಯೋಚಿಸಬೇಕು.

ಇನ್ನೊಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಮೊದಲು ಬೇರೆ ಬೇರೆ ಕಟ್ಟಡಗಳಾಗಬೇಕೆಂದು ಏನು ಮಾಡಿದ್ದರೋ ಅದು ಸಾಧುವಾಗಿತ್ತು, ಅದನ್ನು ಮಾಡಿದ್ದರೆ ಹಣ ಕೂಡ ಉಳಿತಾಯವಾಗುತ್ತಿತ್ತು ಎಂದು ಪ್ರಸ್ತಾಪಮಾಡಿದ್ದಾರೆ. ಹಾಗೆ ಮಾಡಿದ್ದರೆ ಸ್ವಲ್ಪ ಜಾಸ್ತಿ ಹಣ ಉಳಿಯುತ್ತಿತ್ತು, space ಚೆನ್ನಾಗಿ ಉಪಯೋಗಿಸಿಕೊಳ್ಳಬಹುದಾಗಿತ್ತು, ornamentation and embellishments ಇದ್ದರೆ ಅದನ್ನೂ Legislature buildingಗೆ ಮಾಡಿಕೊಂಡು ಕಟ್ಟಬಹುದಾಗಿತ್ತು ಎಂದು ಹೇಳಿರುತ್ತಾರೆ. ನಮ್ಮ ಆರ್ಕಿಟೆಕ್ಟರವರು ಪ್ಲಾನುಗಳನ್ನು ತಯಾರು ಮಾಡುವಾಗ ಮದರಾಸಿನಿಂದ ಪ್ಲಾನು ಮತ್ತು ಎಸ್ಟಿಮೇಟು ಗಳನ್ನು ತರಿಸಿ ಎಂದು ನಾನು ಹೇಳಿದ್ದೆ. ಅದು ಫೈಲಿನಲ್ಲಿದೆ.

Page 16 Para 7

"7. It is seen from a perusal of the drawings made available to the Committee that the Assembly House at Madras is of a practical or utilitarian type, without extravagant architecture, and unnecessary embellishments. The Assembly Hall therein provides for greater accommodation than in the Vidhana Soudha."

ನಾನು ಅದನ್ನು ಸಾಧ್ಯವಾದ ಮಟ್ಟಿಗೆ utilitarian type ಇರಬೇಕು ಎಂದು ತೀರ್ಮಾನಮಾಡಿ ಅದರಂತೆ ತರಿಸಿ ಮಾಡಿಸಿದ್ದೆ. ನಾನಾಗಲೇ ಪ್ರಸ್ತಾಪಮಾಡಿದ್ದೇನೆ, location of buildingನಲ್ಲಿ ಒಂದು ಅಂಶವನ್ನು ನಾವು ಯಾವಾಗಲೂ ಗಮನಿಸಬೇಕು ಎಂದು. ಒಂದು ದಿನ ಡಾಕ್ಟರ್ ಕ್ರುಂಬಿಗಲ್ ಅವರನ್ನು ಕರೆದುಕೊಂಡು ಬಂದು, ನಾನು, ಮಾಣಿಕ್ಯಂ ಮತ್ತು ಡಾಕ್ಟರ್ ಕ್ರುಂಬಿಗಲ್ ಮೂವರೂ ಸಹ ಕಟ್ಟಡವನ್ನು ಎಲ್ಲಿ ಕಟ್ಟಬೇಕೆಂದು ಸ್ಥಳ ಪರಿಶೀಲನೆ ಮಾಡಿದೆವು. ಮುಂದಿನ ಲೇಔಟ್‌ನಲ್ಲಿ ಸ್ವಲ್ಪವೂ ಬದಲಾವಣೆಯಾಗದೆ ಇರುವಹಾಗೆ, ಹೆಚ್ಚು ದುಡ್ಡು ವಿನಾಕಾರಣ ಖರ್ಚಾಗದೆ ಇರುವಹಾಗೆ, ಒಂದು ಅಭಿಪ್ರಾಯವನ್ನು ಡಾಕ್ಟರ್ ಕ್ರುಂಬಿಗಲ್ ಅವರು ಸೂಚಿಸಿದ್ದರು. ಅವರ ಅಭಿಪ್ರಾಯದ ಸ್ವಲ್ಪ ಭಾಗವನ್ನು ಈ ವರದಿಯಲ್ಲಿ ಬರೆದಿದ್ದಾರೆ:

Para 18 Page 3

"3. Dr. Krumbiegel, a renowned architect of this State and a member of the Committee appointed to evolve a suitable design, had suggested the location of the building further North and opposite the vacant area between the Old Secretariat and the Insurance Office. By such a location, the entire building would have commanded a good view from the Cubbon Park on the East. This location would have also resulted in more spacious area round the building, affording suitable approaches without affecting the importance of the Residency building which has its main approach on the South. The structure would also have been at a higher and imposing level, and would not have involved heavy earthwork clearance and formation."

ಅಲ್ಲಿಯೂ ಕೂಡ ಬೇಕಾದಷ್ಟು ಹಣ ಉಳಿತಾಯವಾಗುತ್ತಿತ್ತು. ಸುಮಾರು ಆರು ಲಕ್ಷ ರೂಪಾಯಿ ಉಳಿತಾಯವಾಗುತ್ತಿತ್ತು ಎಂದು ಹೇಳಿದ್ದಾರೆ. ಮಣ್ಣು ತೆಗೆದಿರುವುದರಲ್ಲಿ ಅಲ್ಲಿ ಗುಂಡಿ ಮುಚ್ಚಿದ್ದೇವೆ, ರಸ್ತೆ ಸರಿಮಾಡಿಸಿದ್ದೇವೆ ಎಂದು ಹೇಳಿದರು. ಇದು ಖಂಡಿತವಾಗಿಯೂ ಸಕಾರಣವಲ್ಲ. ಯಾರ ದುಡ್ಡು ತೆಗೆದುಕೊಂಡು ಹೋಗಿ ಯಾರಿಗೋಸ್ಕರ ಖರ್ಚು ಮಾಡಿದರು? ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಮಣ್ಣಿಗೆ ದುಡ್ಡು ಕೊಡಬೇಕೆಂದು ಬರೆದರು. ಅದಕ್ಕೆ ಅವರು 'ನಾವು ಕೊಡುವುದಿಲ್ಲ; ನಿಮ್ಮ ಇಷ್ಟಬಂದ ಕಡೆ ಮಣ್ಣು ಹಾಕಿಕೊಳ್ಳಿ' ಎಂದು ಜವಾಬು ಕೊಟ್ಟರು.

ಗುಂಡಿಯನ್ನು ಮುಚ್ಚಿಸಿದ್ದೇವೆ ಎಂದು ಹೇಳಿರುವುದಕ್ಕೆ ಎಸ್ಟಿಮೇಟ್ ಮಾಡಿಲ್ಲ. ಇಲ್ಲಿ ವಿಧಿಯಿಲ್ಲದೆ ತೆಗೆಯ ಬೇಕಾದಂಥ ಮಣ್ಣನ್ನು ತೆಗೆದುಕೊಂಡು ಹೋಗಿ ಹಾಕಿಸಿ ಅಲ್ಲಿ credit ತೆಗೆದುಕೊಳ್ಳುವುದಲ್ಲ. ಇಲ್ಲಿ ಮಣ್ಣು ತೆಗೆಯಲು ಖರ್ಚಾದ ಹಣ ಬಂದಿದ್ದರೆ ಇದರಲ್ಲಿ ಉಳಿತಾಯವಾಗುತ್ತಿತ್ತು. ಅದಿಲ್ಲದೆ ಮಣ್ಣನ್ನು ಇಲ್ಲಿ ಉಪಯೋಗಿಸಿದ್ದೇವೆ, ಅಲ್ಲಿ ಉಪಯೋಗಿಸಿದ್ದೇವೆ ಎಂದು ಹೇಳುವುದು ಸರಿಯಾದ ಕಾರಣವಲ್ಲ. ಕಮಿಟಿಯವರು, ಇಷ್ಟೊಂದು heavy earthwork ಮಾಡದೆ ಇದ್ದಿದ್ದರೆ ನಾಲ್ಕು ಲಕ್ಷ ರೂಪಾಯಿ ಉಳಿತಾಯವಾಗುತ್ತಿತ್ತು ಎಂದು ಹೇಳಿದ್ದಾರೆ. ಇದರಲ್ಲಿ ಸಂಪೂರ್ಣವಾಗಿ ಅರ್ಥವಿದೆ.

ಎಸ್ಟಿಮೇಟುಗಳ ವಿಚಾರದಲ್ಲಿ ಕಮಿಟಿಯವರು ಬಹಳ ದೀರ್ಘವಾಗಿ ಪ್ರಸ್ತಾಪಮಾಡಿದ್ದಾರೆ. ಕಮಿಟಿಯವರ ವರದಿಯನ್ನು ಮಾನ್ಯ ಸದಸ್ಯರು ಓದಿದರೆ ಉತ್ತಮ. ಅವರು ಅದರಲ್ಲಿ ಬಹಳ ಖಂಡಿತವಾಗಿ ಹೇಳಿದ್ದಾರೆ. ಇಂಥ ಸಾರ್ವಜನಿಕ ಕೆಲಸಗಳನ್ನು ಮಾಡುವಾಗ ಸರಿಯಾದ plans and estimates ಮತ್ತು detailed estimates ಇಲ್ಲದೆ ಮಾಡಿದ್ದು ಅಸಾಧು; ಅದರಿಂದ ಹಣ ಪೋಲಾಗುವುದಕ್ಕೆ ಅವಕಾಶವಾಗುತ್ತದೆ; misappropriation ಮತ್ತು corruption ಎರಡೂ ಬಂದರೂ ಬರಬಹುದು ಎಂದು ಹೇಳಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಇನ್ನೂ ಒಂದು ವಿಷಯ ಹೇಳಿದರು. ಲಕ್ಕವಳ್ಳಿ, ತುಂಗ, ಮುಂತಾದ ಭಾರಿ ಕೆಲಸಗಳಾಗಿರುವ ಕಡೆಯಲ್ಲ ಹೀಗೆಯೇ ಆಗಿದೆ ಎಂದು ಹೇಳಿದರು. ಅಲ್ಲಿ ತಪ್ಪು ಮಾಡಿದ್ದರೆ, ಕಮಿಟಿ ಮಾಡಿ, ಅವರನ್ನೂ ಬಲಿಹಾಕುತ್ತೇವೆ. ಆದರೆ ಇತರ ಕಡೆಗಳಲ್ಲಿ ಸಹ ನಡೆದಿದೆ ಎಂಬುವರಮೇಲೆ ತಾವು justify ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸುವುದು ಅಸಾಧು. ಲಕ್ಕವಳ್ಳಿ ಮತ್ತು ತುಂಗ ವಿಚಾರದಲ್ಲಿ ಸಹ ಆ ಕಮಿಟಿಯವರು ಪ್ರಸ್ತಾಪಮಾಡಿದ್ದಾರೆ. ಇಂಥ ಅಚಾತುರ್ಯ ನಡೆದಿರುವ ಕೆಲಸಗಳ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಟೀಕೆ ಮಾಡಿದ್ದಾರೆ. ಅದನ್ನು ಸರಿಮಾಡುವುದು ಸರ್ಕಾರದ ಕರ್ತವ್ಯ. ಬೇಲಿ ಎದ್ದು ಹೊಲ ಮೇದರೆ ಅದನ್ನು ಯಾರು ನೋಡುವುದಕ್ಕಾಗುತ್ತದೆ?

ಶ್ರೀಮಾನ್ ಹನುಮಂತಯ್ಯನವರು ಇನ್ನೊಂದು ಮಹಾಪರಾಧ ಮಾಡಿದ್ದಾರೆ. ಏನೆಂದರೆ, ಮುನಿಯಪ್ಪನವರಿಗೆ ಹೆಚ್ಚು ತಿಳುವಳಿಕೆ ಇಲ್ಲ, ಅವರು ಬರೀ Mechanical Engineer, ಅವರಿಗೆ ವಿಶೇಷವಾದ ಅನುಭವವಿಲ್ಲ ಎಂದು ಗೊತ್ತಾದಮೇಲೆ, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ದಕ್ಷರಾದವರು ಯಾರೂ ಇರಲಿಲ್ಲವೆ? ಅವರಿಗೆ favourite ಆಗಿದ್ದರೆ ಅವರನ್ನು ಇಟ್ಟುಕೊಳ್ಳಲಿ. ಆದರೆ ಅವರಮೇಲೆ ಸರಿಯಾದ ಇನ್ನೊಬ್ಬರನ್ನು ಈ ಕೆಲಸ ನೋಡಿಕೊಳ್ಳುವುದಕ್ಕೆ ಏಕೆ ಹಾಕಲಿಲ್ಲ? ಅಕೌಂಟೆಂಟ್ ಜನರಲ್‌ರವರು audit objections ಕೊಟ್ಟಮೇಲಾದರೂ ಇವರಿಗೆ ಎಚ್ಚರಿಕೆಯಾಗಬೇಕಾಗಿತ್ತೋ ಇಲ್ಲವೋ? ಇನ್ನೊಂದು ಹೆಜ್ಜೆ ಮುಂದೆ ಹೋಗಿ ಕೇಳುತ್ತೇನೆ. ಮುನಿಯಪ್ಪನವರನ್ನು ಅಕೌಂಟೆಂಟ್ ಜನರಲ್ ಆಫೀಸಿನ ಕಟ್ಟಡದ ಕೆಲಸದ ಸ್ಪೆಷಲ್ ಇಂಜಿನಿಯರ್ ಆಗಿ ಏಕೆ ಮಾಡಬೇಕಾಗಿತ್ತು? ಅಕೌಂಟೆಂಟ್ ಜನರಲ್ ಆಫೀಸಿನ ಕಂಟ್ರಾಕ್ಟರರಾದ Kempiah & Son ರವರಿಗೆ ವಿಧಾನ ಸೌಧಕ್ಕೂ ಸಾಮಾನುಗಳನ್ನು ಸರಬರಾಯಿ ಮಾಡುವುದಕ್ಕೆ ಏಕೆ ಅವಕಾಶ ಕೊಟ್ಟರು? ಇದರಲ್ಲಿ ಮುನಿಯಪ್ಪನವರನ್ನು ಆಕ್ಷೇಪಣೆ ಮಾಡುವ ಹಾಗಿಲ್ಲ. ಇದು ಉದ್ದೇಶಪೂರ್ವಕವಾಗಿ ನಡೆದ ಹಾಗೆ ಕಾಣುತ್ತದೆ. ಅಕೌಂಟೆಂಟ್ ಜನರಲ್ ಆಫೀಸಿಗೂ ಇವರೇ ಸ್ಪೆಷಲ್ ಇಂಜಿನಿಯರ್, ವಿಧಾನ ಸೌಧಕ್ಕೂ ಇವರೇ ಸ್ಪೆಷಲ್ ಇಂಜಿನಿಯರ್ ಆಗಿದ್ದರು. ಕಂಟ್ರಾಕ್ಟರೂ ಸಹ ಒಬ್ಬರೇ. ಸ್ಪೆಷಲ್ ಇಂಜಿನಿಯರ್ ಅವರು ಕಂಟ್ರಾಕ್ಟರಿಗೆ ಲಕ್ಷಗಟ್ಟಲೆ ಅಡ್ವಾನ್ಸುಗಳನ್ನು ಕೊಟ್ಟಿದ್ದಾರೆ, which is against the rules. ಈ ಕಂಟ್ರಾಕ್ಟರಿಗೆ ಸಿಮೆಂಟ್ ಚೀಲಗಳನ್ನು ಸಾಲಕೊಡುವುದು, ಚೀಫ್ ಇಂಜಿನಿಯರ್ ಅವರು ಬೇಡವೆಂದರೂ ಲಾರಿಗಳನ್ನು ಬಾಡಿಗೆಗೆ ಕೊಡುವುದು, ಪೆಟ್ರೋಲ್ ಬಂಕ್ ಸಹ ಇವರಿಗೇ ಕೊಡುವುದು ಹೀಗೆಲ್ಲ ಮಾಡುವುದು, ಇದೆಲ್ಲ ಏನು ತೋರಿಸುತ್ತದೆ ಸ್ವಾಮಿ?

ಸ್ವಾಮಿ, ಇದನ್ನು departmental ಆಗಿ construction ಮಾಡಿಸುವುದು ಬೇಡ, ಇದನ್ನು ಕಂಟ್ರಾಕ್ಟರುಗಳಿಗೆ ಕೊಡಬೇಕೆಂದು ಎಲ್ಲರ ಅಭಿಪ್ರಾಯವಾಗಿತ್ತು. ಇಲಾಖೆಯವರ ಅಭಿಪ್ರಾಯವೂ ಹಾಗೆಯೇ ಇದೆ. ಪಬ್ಲಿಕ್‌ವರ್ಕ್ಸ್ ಅಕೌಂಟ್ ಕೋಡಿನಲ್ಲಿಯೂ ಹಾಗೆಯೇ ಇದೆ. ಆದರೂ ಕೂಡ ಶ್ರೀಮಾನ್ ಹನುಮಂತಯ್ಯನವರು ಒಪ್ಪಲೇ ಇಲ್ಲ. Departmental ಆಗಿ ಮಾಡಿದರೆ ಬಹಳ economical ಆಗುತ್ತದೆ ಎಂದು ಹೇಳಿ ಅದನ್ನೇ ಪುಷ್ಟಿಮಾಡುವುದಕ್ಕೆ ಅವರು ಅನೇಕಸಾರಿ ಪ್ರಯತ್ನ ಮಾಡಿದ್ದಾರೆ. ಆದರೆ ಒಂದಂಶವನ್ನು ಅವರು ಕಮಿಟಿಯ ಮುಂದೆ ವಿಚಾರಣೆಯಾದಾಗ ಹೇಳಿದ್ದಾರೆ.

Page 24 Para 17.

"Shri K. Hanumanthaiya, who is evidently responsible for this Project stated that he had no idea of the probable cost of the building. He did not discuss with the Engineers the question of cost at any time. He did not care to examine the question of cost either when he ordered construction of the building or the addition of the third floor or any of the major deviations. In answer to a question whether he had any idea of the cost of the Project, say, in the middle of 1954, he stated:

> "Either on that date or subsequently or previously, I had not in my mind a fixed figure. The fourstoreyed building plan was there and whatever was required to complete that building had to be provided was my idea."

In fact Shri Hanumanthaiya never bothered himself about the question of cost at any stage. He got the plans of the building prepared, ordered execution of work departmentally, made various deviations as and when it struck him, and got a building of his choice constructed. The cost was to take care of itself. Estimates,

(ಶ್ರೀ ಟಿ. ಮರಿಯಪ್ಪ.)

administrative sanction and technical sanction were naturally an *anathema*. Execution of work under these conditions was evidently not possible by contactors. The inconsistency between his stand taken as Chairman of the Public Accounts Committee and his stand as the architect of the Vidhana Soudha cannot otherwise be explained."

ಇನ್ನೂ ಒಂದು extreme view ತೆಗೆದುಕೊಂಡಿದ್ದಾರೆ; ಶ್ರೀಮಾನ್ ಕೆ. ಹನುಮಂತಯ್ಯನವರು:

Para 18.

"Shri Hanumanthaiya has thus taken the strange view that no estimate is necessary if the work is to be executed departmentally, evidently, to justify his otherwise unjustifiable action."

25 ವರ್ಷ Government Serviceನಲ್ಲಿದ್ದು re-appoint ಆಗಿರುವ ಸ್ಪೆಷಲ್ ಇಂಜಿನಿಯರ್ ಇನ್ನೂ ಒಂದು peculiar view ತೆಗೆದುಕೊಂಡಿದ್ದಾರೆ.

Para 20.

"In deciding on departmental execution, *saving of money is a secondary consideration*. The main consideration is avoidance of trouble with the contractors in settling their claims".

ಹೀಗೆ ಇದು ಒಂದು strange combination. It was a strange combination of one gentleman disregarding cost and another gentleman saying that saving is of secondary importance. The main consideration was avoidance of trouble with the contractors in settling their claims.

The whole thing has been mismanaged and the State has today to bear this heavy loss.

Para 21.

"Shri Hanumanthaiya had to admit that for economical execution of work by departmental agency, it is necessary that it should be done by expert competent engineers who had experience of execution of such work and that they must act honestly and diligently. There must also be a proper organization for execution and for maintaining proper accounts. Last, but not of the least importance, is the preparation of the detailed estimates duly scrutinized and sanctioned by competent authority. This statement is inconsistent with the stand he has taken in the execution of the Vidhana Soudha."

ಇನ್ನೂ ಒಂದು ಮಾತು ಹೇಳಿದ್ದಾರೆ, 26ನೇ ಪೇಜಿನಲ್ಲಿ:

Page 26.

"Para 24. Under these circumstances, it would be permissible to come to the conclusion that all this was designedly made, to force the hands of Government to find whatever funds may be required for this huge scheme, conceived and designed to cost two crores or more"

ಆಮೇಲೆ Methods of executionನಲ್ಲಿರತಕ್ಕ ಅನೇಕ ನ್ಯೂನಾತಿರಿಕ್ತಗಳನ್ನು ಹೇಳಿದ್ದಾರೆ. ಎಲ್ಲಿ ರೇಟ್ಸ್ ಜಾಸ್ತಿ ಕೊಟ್ಟಿದ್ದಾರೆ, ಎಲ್ಲಿ ಮನಸ್ಸಿಗೆ ಬಂದ ಹಾಗೆ ರೇಟ್ಸ್ ಕೊಟ್ಟಿದ್ದಾರೆ ಎಂಬುದನ್ನೆಲ್ಲಾ ಒಂದೊಂದಾಗಿ ಹೇಳಿದ್ದಾರೆ. ಆ ವಿಷಯವನ್ನು ಪ್ರಸ್ತಾಪಮಾಡಿ ಈ ಸಭೆಯಲ್ಲಿ ತಮಗೆ ಬೇಜಾರು ಮಾಡುವುದಕ್ಕೆ ಇಷ್ಟಪಡುವುದಿಲ್ಲ. Most peculiar thing, ಅವರಿಗೂ ಮತ್ತು ಶ್ರೀ ಮುನಿಯಪ್ಪನವರಿಗೂ ಇದ್ದಂಥ ಸಂಬಂಧ 31ನೇ ಪುಟದಲ್ಲಿ ವ್ಯಕ್ತಪಡುತ್ತದೆ. ಮೆಕ್ಯಾನಿಕಲ್ ಇಂಜಿನಿಯರು, ಇದರಲ್ಲಿ ಅವರಿಗೆ ಅನುಭವವಿಲ್ಲ ಎಂದು ಗೊತ್ತಾಗಿಯೂ ಅವರನ್ನು ಇಟ್ಟರು. ಮುನಿಯಪ್ಪನವರು ಡೈರೆಕ್ಟಾಗಿ ಚೀಫ್ ಮಿನಿಸ್ಟರ್‌ರವರಿಂದ ಇನ್‌ಸ್ಟ್ರಕ್ಷನ್ ತೆಗೆದುಕೊಳ್ಳುತ್ತಾ ಇದ್ದರು.

"The evidence on record indicates that Sri Muniappa was not prepared to be guided by his superior officers and was not amenable to their control." (*Para 22—page 31*).

"23. As his evidence shows, Sri Muniappa had very little knowledge of accounts either before or after he became Special Engineer."

He stated:

'After I took charge I did not study the Accounts Code and the requirements of the proper maintenance of the accounts in the Division. I relied solely on my accounts Superintendent.' (*Page 31*)."

ಆದ್ದರಿಂದ ಹೀಗಿರುವಾಗ accounts ಅವ್ಯವಸ್ಥಿತ ಸ್ಥಿತಿಯಲ್ಲಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೀಗಿಯೆ ಹಣ ಹೇಗೆ ಹೇಗೆ ಖರ್ಚಾಗಿದೆಯೋ ದೇವರೊಬ್ಬನಿಗೇ ಗೊತ್ತಾಗಬೇಕು. ಎಸ್ಟಿಮೇಟ್ಸ್ ಕಮಿಟಿಯವರು ಬಹಳ

ಕಷ್ಟಪಟ್ಟು ನೋಡಿದ್ದರಿಂದ ಸ್ವಲ್ಪ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಯಾವಾಗ ಶ್ರೀ ಮುನಿಯಪ್ಪನವರಿಗೆ ಈ ರೀತಿ ಒಂದು ಭದ್ರವಾದ ಆಸರೆ ಸಿಕ್ಕಿತೋ ಇಲ್ಲವೋ ಅವರು ಅವರ ಸುಪೀರಿಯರ್ಸ್ ವಿಚಾರದಲ್ಲಿ ಅವಿಧೇಯರಾಗಿ ನಡೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಆಗ ವಿಧಿ ಇಲ್ಲದೆ ಬಾಕಿ ಆಫೀಸರುಗಳ ಕೆಲಸ ಮುಂದೆ ಸಾಗಲಿಲ್ಲ. ಅದನ್ನು ಕಮಿಟಿಯವರು ಹೇಳಿದ್ದಾರೆ:

"19. The Committee notes with very great regret that the Superintending Engineer and the Chief Engineer did not function at all. It is very likely that this omission to perform the essential duties of office was due to the assumption of over-all direction of the works by the Chief Minister and his dealings directly with the Special Engineer. That officer did not consequently hesitate to ignore his superior officers. He submitted to the Superintending Engineer the estimate of Rs. 50 lakhs which was designedly an under-estimate, and told that officer that if he sent up that estimate, he would get it sanctioned. The Superintending Engineer did not listen to this and returned the estimate to him with certain directions. But it was again submitted after about three months, as it was, without complying with those directions. The Superintending Engineer thereafter submitted it to the Chief Engineer for the approval of the Government though he knew that it was a gross under—estimate and unworkable. He did not scrutinise the estimate. The Special Engineer executed several works without submitting designs to the Superintending Engineer for approval. Though the latter noticed in practically all his inspections that more reinforcement than was required was being used, he did not take any steps to prevent it beyond orally telling the Special Engineer not to do it. He did not make any inspection of the Office of the Special Engineer."

"21. Sri K. S. Gangadhara, the then Chief Engineer, stated that the Special Engineer did not implement his instructions on several occasions and when the situation was getting out of control, he made a report to the Government. The situation, however, did not improve thereafter." (*Page 36, para 19*).

ಹೀಗೆಯೇ, ಎಸ್ಟಿಮೇಟ್‌ನಲ್ಲೂ ಕೂಡ ಬಹಳ ವ್ಯತ್ಯಾಸಗಳನ್ನು ಮಾಡಿದ್ದಾರೆ. ಒಂದು ವೇಳೆ ರಿವೈಸ್ ಮಾಡಿದರೆ ಅದರಲ್ಲಿ ಅರ್ಥವಿದೆ, ಸ್ವಾಮಿ. ಡೆಲಿಬರೇಟ್ ಆಗಿ ಅಂಡರ್ ಎಸ್ಟಿಮೇಟ್ ಮಾಡಿರುವುದನ್ನು ಈ ಕಮಿಟಿಯವರು ಸಾರ್ವಜನಿಕರ ಗಮನಕ್ಕೆ ತಂದಿದ್ದಾರೆ. This is in page 38; Chapter 10, para (2). ಎಂಬತ್ತು ಲಕ್ಷ ರೂಪಾಯಿ ಎಸ್ಟಿಮೇಟನ್ನು ಯಾವಾಗ ಶ್ರೀ ಕಡಿದಾಳ್ ಮಂಜಪ್ಪನವರು 50 ಲಕ್ಷ ರೂಪಾಯಿಗಳಿಗೆ ಲಿಮಿಟ್ ಮಾಡಬೇಕೆಂದು ಬಗಿಯಾದ ಆರ್ಡರ್ ಹೊರಡಿಸಿದರೋ, ಆಗ ಮುನಿಯಪ್ಪನವರು ಆಗಲಿ ಎಂದು ಹೇಳಿದರು, ಆಶ್ಚರ್ಯ ಸ್ವಾಮಿ:

"This was not enough to reduce the estimate to Rs. 50 lakhs. The Special Engineer therefore reduced the rates arbitrarily. He stated:

'Because the estimate had to be reduced to Rs. 50 lakhs, we must find out some means to reduce it and the only means that I found was by reducing rates. We did not resort to other method of reducing portions of the building.' (*Page 38, para 2*).

ಇದರಲ್ಲಿ ಎಲ್ಲ ಕ್ಯಾಮಾಫ್ಲೇಜ್ ಇದೆ; ಫ್ರಾಡ್ ಇದೆ ನೋಡಿ, ಸ್ವಾಮಿ.

"He further stated:

'Apart from the direction, there was no reason for reducing the Rs. 80-lakh estimate.'" (*Page 38*).

ಹೀಗೆಯೇ 50 ಲಕ್ಷ ರೂಪಾಯಿ ಎಸ್ಟಿಮೇಟು, 120 ಲಕ್ಷ ರೂಪಾಯಿ ಎಸ್ಟಿಮೇಟು, ಹೀಗೆಲ್ಲಾ ಅನೇಕ ಎಸ್ಟಿಮೇಟುಗಳಿವೆ. ಇದರಲ್ಲಿ ಕೆಲವು ಭಾಗ ಬಿಟ್ಟು ಬಿಟ್ಟು ನಾಮ್ಕೆವಾಸ್ತೆ ಕಳುಹಿಸಿದ್ದಾರೆ, ಕೆಲವು ಐಟಂಗಳಲ್ಲಿ ಕರ್ಫ್ಯೂಷನ್ ಇದೆ ಎಂದು ಹೇಳಿದ್ದಾರೆ:

"It was impossible to reduce the estimate to Rs. 50 lakhs without reducing the height of the supers ructure and altering the elevation to an austere and simple type. This should have been done by referring the plans back to the Government Architect; but he was not consulted." (*Page 38—39*)."

(ಶ್ರೀ ಟಿ. ಮರಿಯಪ್ಪ):

"There were several discrepancies in these estimates. The totals were not correct. It was therefore returned to the Special Engineer. He corrected the total of Rs. 102 lakhs to Rs. 107·5 lakhs and deleted the provision of Rs. 4 lakhs for 'providing art treatment to the Assembly and Council Halls and Rs. 1·50 lakhs for veneering for the Central Dome and gold plating at the top', and maintained the total of Rs. 130 lakhs. Instead of submitting the file through the Chief Engineer, he submitted it directly to Government." (*Pages 40-41*).

ಹೀಗೆ ಆ ಎಸ್ಟಿಮೇಟು ಕೂಡ ಇಷ್ಟೊಂದು ವ್ಯತ್ಯಾಸವಾಗಿ ಪದೇ ಪದೇ ಬದಲಾವಣೆಯಾಗಿದೆ. ರೇಟ್ಸನ್ನು ಆರ್ಬಿಟ್ರರಿ ಆಗಿ ಕಡಮೆ ಮಾಡುವುದು, ಅಥವಾ ಹೆಚ್ಚುಮಾಡುವುದು, ಸರ್ಕಾರಕ್ಕೆ ಕೊಡತಕ್ಕ ಎಸ್ಟಿಮೇಟಿನಲ್ಲಿ ಬೇರೆ ರೇಟ್ ಕೊಟ್ಟಿರುವುದು, ಇದೆಲ್ಲಾ ಬಹಳ ಅನುಮಾನಾಸ್ಪದವಾಗಿದೆ. ಇದರಲ್ಲಿ ಗೂಢವಾದ ಅರ್ಥ ಏನೋ ಇರಬೇಕು. ಹಾಗೆ ಇಲ್ಲದೇ ಇದ್ದರೆ ಕ್ಯಾಬಿನೆಟ್ ಮುಂದೆ ಇಟ್ಟು ಸರ್ಕಾರ ಈ ಸಭೆಯ ಮುಂದೆ ತರಬಹುದಾಗಿತ್ತು. ಮಧ್ಯೆ ಮಧ್ಯೆ ಏಕೆ ಈ ರೀತಿ ಬದಲಾವಣೆ ಮಾಡಿದರೋ ಅರ್ಥವಾಗುವುದಿಲ್ಲ. ಈ ವಿಷಯಗಳನ್ನು ಪರಿಶೀಲನೆ ಮಾಡಬೇಕಾದದ್ದು ಬಹಳ ಅಗತ್ಯ. ಕಮಿಟಿಯವರು ಈ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಿ, ಯಾವ ಯಾವ ಭಾಗದಲ್ಲಿ ಏನೇನು ಆಗಿದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ಒಳಹೊಕ್ಕು ನೋಡಿದ್ದಾರೆ. ಆಮೇಲೆ 50 ಲಕ್ಷದ ಎಸ್ಟಿಮೇಟಿಗೂ, 130 ಲಕ್ಷದ ಎಸ್ಟಿಮೇಟಿಗೂ ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ ಏನೋ ಉದ್ದೇಶಪೂರ್ವಕವಾಗಿ ಮೋಸ ಮಾಡಬೇಕೆಂಬ ಉದ್ದೇಶವಿರಬಹುದೋ ಏನೋ ಎಂಬ ಅಭಿಪ್ರಾಯ ವ್ಯಕ್ತಪಡುತ್ತದೆ ಎಂದು ಹೇಳಿದ್ದಾರೆ. ಕೆಲವು ಐಟಂಗಳಲ್ಲಿ ರೇಟ್ಸ್ ವ್ಯತ್ಯಾಸ ಇದೆ, ಆ ರೀತಿ ಮಾಡುವುದು ತಪ್ಪು ಎಂದೂ ಹೇಳಿದ್ದಾರೆ.

ಎಲೆಕ್ಟ್ರಿಕಲ್ ಎಸ್ಟಿಮೇಟ್ಸ್ ಬಂದಾಗ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನವರನ್ನು ಕನ್‌ಸಲ್ಟ್ ಮಾಡಬೇಕಾಗಿತ್ತು, ಒಬ್ಬರೂ ಕೂಡ ಒಪ್ಪದ ಮಾರ್ಗವನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ:

"15. The Committee is constrained to observe that in Vidhana Soudha works, the estimates were not being prepared according to requirements. They were not scrutinized by the authorities concerned and Government sanctions were accorded as a matter of form just to silence the Accountant-General. The estimates were also not adhered to. Changes were made from time to time, it is said, according to the instructions of the Chief Minister." (*Page 46.*)

ಇಷ್ಟು, ಎಸ್ಟಿಮೇಟ್ಸ್ ವಿಚಾರದಲ್ಲಿ ಹೇಳಿರತಕ್ಕ ತಿರುಳು. ಬಾಕಿಯುದು ಇದಕ್ಕೆ ಸಂಬಂಧಪಟ್ಟಂತೆ Vidhana Soudha Gardens, masonry tanks, water supply and sanitary fittings ವಿಚಾರ. ಇದೂ ಕೂಡ ಯಾವ ರೀತಿ ನ್ಯಾಯವಾಗಿ ಮಾಡಬೇಕಾಗಿತ್ತೋ ಆ ರೀತಿ ಮಾಡಿಲ್ಲ, ಅದು ತಪ್ಪು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಇನ್ನೊಂದು ವಿಚಿತ್ರ ಏನು ನಡೆದಿದೆ ಎಂದರೆ, ವಿಧಾನ ವೀಧಿಯನ್ನು ಸಿಮೆಂಟ್ ಕಾಂಕ್ರಿಟ್ ರೋಡ್ ಆಗಿ ಮಾಡಿದರು. ಈ ವರದಿಯನ್ನು ಮಾನ್ಯ ಸದಸ್ಯರೇ ಓದಬೇಕು. ಇದೂ ಕೂಡ ಪರಿಶೀಲನೆ ಮಾಡಬೇಕಾದ ಅಂಶ. ಇದೆಲ್ಲಕ್ಕಿಂತಲೂ ಸಾಮಾನುಗಳನ್ನು ಕೊಂಡುಕೊಳ್ಳುವುದರಲ್ಲಿ ವಿಧಾನ ಸೌಧ ಸಬ್ ಡಿವಿಜನ್‌ನವರು ಬಹಳ ಅದ್ವಿತೀಯವಾಗಿ ನಡೆದುಕೊಂಡಿದ್ದಾರೆ, ವಿಚಿತ್ರವಾಗಿ ನಡೆದುಕೊಂಡಿದ್ದಾರೆ. Page 58ರಲ್ಲಿ Tools and Plants ವಿಷಯ ಪ್ರಸ್ತಾಪ ಮಾಡುವಾಗ ಅವರು ಹೇಳಿದ್ದಾರೆ:

Page 58, para 91.

"The expenditure of Rs. 1,73,676-9-0 for the purchase of 12 second-hand Dodge vehicles is not included in this figure. The expenditure is debited to the different Divisions to whom the lorries have been transferred. This amount should also have been debited to Vidhana Soudha estimate because these vehicles were purchased for the Division and were palmed off to the other Divisions because, they were unserviceable."

ಮುಂದೆ ಈ ರೀತಿ ಹೇಳಿದೆ:

"One new T.D. 24 Tractor, one new H.D. 16 Tractor and two new big scrapers at a cost of Rs. 5,34,129 were obtained for the Vidhana Soudha Division through the Central Stores, Public Works Department. This amount should also have been debited to Vidhana Soudha under the Tools and Plant."

"Two scrapers and two tractors from Bangalore Division and two bulldozers from the Agricultural Department at a cost of Rs. 3,80,000 were obtained for Vidhana Soudha works."

ಎಲ್ಲೆಲ್ಲಿ ಖರ್ಚಾಗಿದೆಯೆಂಬುದನ್ನು ಪತ್ತೆಮಾಡುವುದು ಕಷ್ಟವಾಯಿತು. ಏಕೆ ಹೀಗೆ ಮಾಡಿದರು, ಇದರ ಉದ್ದೇಶವೇನು ಎಂಬುದು ಗೊತ್ತಿಲ್ಲ. ಹೇಗೆ ಮಾಡಿ

ದರೂ ಕೂಡ ಪ್ರಜಾಪ್ರತಿನಿಧಿಗಳಿಗೆ ಗೊತ್ತಾಗದೆ ಹೋಗಲಿಲ್ಲ. ಇಷ್ಟು ಲೋಪದೋಷಗಳನ್ನು ಮಾಡಿ ಏನೂ ತಿಳಿಯದವರಂತೆ ಹಗಲೂ ರಾತ್ರಿ ಕಷ್ಟಪಟ್ಟು ಈ ಕಟ್ಟಡ ಕಟ್ಟಿಸಿದೆ, ಯಾರೂ ನನ್ನನ್ನು ಹೊಗಳು ವುದಿಲ್ಲ ಎಂದು ಹೇಳಿದರೆ ಯಾರು ತಾನೆ ಹೊಗಳುವರು? ಇದು ಯಾರಿಗೆ ಸಂಬಂಧಪಟ್ಟ ವಿಷಯ? ಯುದ್ಧಮಾಡಿ ರಾಜ್ಯ ಸಂಪಾದಿಸಿದ ರಾಜಮಹಾರಾಜರುಗಳೇ ಹೇಗೋ ಇರುತ್ತಾರೆ. ಹಾಗಿರುವಾಗ ನಿನ್ನೆಮೊನ್ನೆ ಅಧಿಕಾರಕ್ಕೆ ಬಂದವರು ಸಾರ್ವಜನಿಕ ಹಣವನ್ನು ಈ ರೀತಿ ವಿನಿಯೋಗಿಸುವುದು ಸರಿಯೆ? ಇದರಿಂದ ಇಡೀ ಸಂಸ್ಥೆಗೇ ಕೆಟ್ಟಹೆಸರು. ಈ ರೀತಿ ಮಾಡಬಾರದು.

ಇನ್ನೊಂದು ಹೇಳಿದರು; ಕಾರುಗಳನ್ನು ನಿಲ್ಲಿಸುವುದಕ್ಕೆ ಗ್ಯಾರೇಜ್ ಮಾಡಿಸಿದ್ದು ತಪ್ಪು ಎಂದು ಹೇಳುತ್ತಾರೆ, ಇದು ಸರಿಯೆ ಎಂದು ಕೇಳಿದರು. ಆದರೆ ಮೊದಲು ಎಲ್ಲಿ ಮಾಡಿತ್ತು, ಆಮೇಲೆ ಹೇಗೆ ಮಾಡಿದರು ಎಂಬುದನ್ನು ಪರಿಶೀಲಿಸಬೇಕು. ಇದನ್ನು ಪರಿಶೀಲನೆ ಮಾಡಿ ಈ ಖರ್ಚು ಅಷ್ಟು ಸಾಧುವಾದುದಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಆಮೇಲೆ.—

Page 60, para 105.

"Other instances of extravagance: A few instances which are typical of the manner in which the works have been carried out in disregard of all rules of procedure and cost leading to extravagant expenditure are given below. It seems clear that the persons responsible did not bother about the financial or other implications of the various deviations made"

They are: Central Dome, Corner and Secondary Domes, Trusses and Ceiling for Assembly and Council Halls, Cutstone Pillars, etc.

ಪ್ರೊಸೀಜರ್ ಹೆಚ್ಚು ಕಡಮೆಯಾಗಿರಬಹುದು. ಹಣ ಉಳಿತಾಯವಾಗಿದ್ದರೆ ಪರವಾಗಿಲ್ಲ; ಉಳಿತಾಯವೂ ಇಲ್ಲ, ಏನೂ ಇಲ್ಲ. ಇದರಲ್ಲೆಲ್ಲಾ ಹಣ ಪೋಲಾಗಿದೆ, ಅನಾವಶ್ಯಕವಾಗಿ ಖರ್ಚಾಗಿದೆ ಎಂದು ಅಭಿಪ್ರಾಯ ಕೊಟ್ಟಿದ್ದಾರೆ. ಸೆಂಟ್ರಲ್ ಡೋಮ್ ಹಾಕುವಾಗ ತಳಹದಿ ಎಷ್ಟು ಹೊರಬಲ್ಲದೋ ಅಂಥ ಟವರ್ ಹಾಕಬೇಕು. ಶ್ರೀ ಹನುಮಂತಯ್ಯನವರು ಭಾವನಾಪರವಶರೆಂದು ಹೇಳಿದುದು ನಿಜ. ಆದರೆ 192 ಅಡಿ ಟವರ್ ಹಾಕಬೇಕಾದರೆ ಅದರ ಭಾರ ಹೊರುವ ಶಕ್ತಿಯಿರಬೇಕಲ್ಲ. ಇಂಜನಿಯರುಗಳೇನಿದ್ದಾರೋ ಅವರು ಈ ಸಂದರ್ಭದಲ್ಲಿ ಟವರ್ ಭಾರ ಹೊರಬೇಕಾದರೆ ಅಸ್ತಿಭಾರ ಬಲಪಡಿಸಬೇಕೆಂದು ಹೇಳಿದ್ದಾರೆ. ಟವರ್ ಕೆಲಸ ಆಗುವವೇಳೆಗೆ ಸಮಿತಿಯು ನೇಮಕವಾಗಿದ್ದುದರಿಂದ ಸಮಿತಿಯವರು ಪರಿಶೀಲಿಸಿ ಟವರ್ ವಿಚಾರದಲ್ಲಿ ಸ್ವಲ್ಪ ಬದಲಾವಣೆಯನ್ನು ಸೂಚಿಸಿ ಅದರಿಂದ ಸ್ವಲ್ಪ ಹಣ ಉಳಿತಾಯ ಮಾಡಿದ್ದಾರೆ. ಆಮೇಲೆ ಡೋಮ್ಸ್ ರೂಮು ಮಾಡಿಕೊಳ್ಳಬಹುದೆಂದು ಹೇಳಿದ್ದಾರೆ. ಇದು ಅಪದ್ಧಕ್ಕೆ ಅಪ್ಪಣೆ ಅಂದರೆ ಬಾಯಿಗೆ ಬಂದದ್ದೆ ಎಂದು ಹೇಳಿದ ಹಾಗಿದೆ. ಇದನ್ನು ಬೇರೆ ಕಡೆ ಕಟ್ಟಿದ್ದರೆ ಬೇಡವೆಂದು ಹೇಳುತ್ತಿದ್ದರೆ? ಈಗ ಶ್ರೀ ಚೆನ್ನಿಗರಾಮಯ್ಯನಂಥವರು ಲಿಫ್ಟಿನಲ್ಲಿ ಹೋಗುವುದು ಕಷ್ಟ. ನಾಲ್ಕು ದಿವಸಗಳಿಗೊಂದು ಸಲ ಲಿಫ್ಟ್ ಕೆಡುತ್ತದೆ. ಕೆಲವು ಸಂದರ್ಭಗಳಲ್ಲೆಲ್ಲಾ ಮಂಜೂರಾಗದೆ ಹಾಗೆಯೇ ಹಣ ಖರ್ಚುಮಾಡಿದ್ದಾರೆಂದು ಹೇಳಿದ್ದಾರೆ. ಬಾಕಿ ಅಕೌಂಟ್ಸ್ ವಿಚಾರ, ಮಿಸಲೇನಿಯಸ್ ಅಡ್ವಾನ್ಸ್ ವಿಚಾರ ಹೆಚ್ಚಾಗಿ ಪ್ರಸ್ತಾಪಮಾಡುವುದಿಲ್ಲ. ಅಕೌಂಟ್ ಅಂತೂ chaotic, ಜೊತೆಗೆ ಹೊಸದಾಗಿ ಬರೆದು ಅಂಟಿಸಿದ್ದಾರೆ, ಹೀಗೆಲ್ಲಾ ಇದೆ. ಇದನ್ನೆಲ್ಲಾ ನೋಡಿದರೆ ಮಾಡಬಾರದ್ದೇನು ನಡೆದಿದೆಯೋ ಅದನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಅರ್ಥವಾಗುತ್ತದೆ. "It is no wonder that the state of accounts is chaotic." ಎಂದು ವಿಶದವಾಗಿ ಹೇಳಿದ್ದಾರೆ. ಸ್ಟೋರ್ಸ್ ಅಕೌಂಟ್ ಬಹಳ irreconcilable ಎಂದು ಅಕೌಂಟೆಂಟ್ ಜನರಲ್ ರವರು ಮುಂತಾದವರು ವಿಪರೀತವಾಗಿ ಟೀಕೆ ಮಾಡಿದ್ದಾರೆ. Iron and steel rods ಮುಂತಾದ ಸಾಮಾನುಗಳು ಜನರಿಗೆ ಸಿಕ್ಕುವುದು ದುರ್ಲಭ. ಅಲ್ಲದೆ ಕಟ್‌ಪೀಸಸ್ ವಾಪಸು ಮಾಡುವುದರಲ್ಲಿ ಬಹಳ ಅವ್ಯವಸ್ಥೆಯಾಗಿದೆ ಎಂದು ಬರೆದಿದ್ದಾರೆ. ವರ್ಕ್ ಸ್ಲಿಪ್ ಸರಿಯಾಗಿ ಇಷ್ಯೂ ಮಾಡಿಲ್ಲ, ಚೆಕ್ ಮೆಷರ್‌ಮೆಂಟ್ ಸರಿಯಾಗಿಲ್ಲ ಎಂದು ಹೇಳಿದ್ದಾರೆ. 85ನೆಯ ಪುಟದಲ್ಲಿ ಕೆಲವು ಮುಖ್ಯವಾದ ಅಬ್ಸರ್‌ವೇಷನ್ಸ್ ಮಾಡಿದ್ದಾರೆ.

Para 54.

"Some measurement books show that payments were made on nominal rolls without entering even the previous measurements in the book. The position today is that there is no verification of the work paid for. The totals of the measurement books will have therefore to be made and verified with the actual work executed"

"We found that a few Nominal Rolls had been paid without being passed either by the Divisional Officer or by the Accountant. The Special Engineer admitted this in his evidence that: 'I see that a few Nominal Rolls have been passed, some without my signature and that of the Accountant'."

ಆಮೇಲೆ ಮಂಜೂರಾತಿಯಿಲ್ಲದೆಯೇ ಬಹಳ ಧೈರ್ಯವಾಗಿ ಸಾಮಾನುಗಳನ್ನು ಕೊಂಡಿದ್ದಾರೆ.—

Para 89.

"In many instances, there have been no sanctions and in a few, there was also no provision in the sanctioned estimate for the purchases. In spite of these, orders have been placed and commitments entered into and sanctions sought for thereafter. Perhaps the Superintending Engineer, when the Special Engineer was only an Executive

(ಶ್ರೀ ಟಿ. ಮರಿಯಪ್ಪ).

Engineer, and the Chief Engineer felt helpless as the Special Engineer was in direct contact with the Chief Minister."

ಹಣಕಾಸಿನ ವಿಚಾರ ಕೊನೆಯಲ್ಲಿ ಹೇಳುತ್ತೇನೆ, ಕೆಂಪಯ್ಯ ಅಂಡ್ ಸನ್ಸ್ ವಿಚಾರ ಹೇಳಿದ್ದಾರೆ, ಸೆಕೆಂಡ್ ಹ್ಯಾಂಡ್ ಸಾಮಾನು ತೆಗೆದುಕೊಂಡಿರುವುದನ್ನು ಪ್ರಸ್ತಾಪಮಾಡಿದ್ದಾರೆ. ಈ ವಿಷಯದಲ್ಲಿ ಮೇಲಿನ ವರೆಗೂ ದೂರುಹೋಗಿದೆ. ಅವರು ಪ್ರಸ್ತಾಪ ಮಾಡ ದಿದ್ದರೆ ನಾವೂ ಮಾಡುತ್ತಿರಲಿಲ್ಲ. ಎಷ್ಟೋ ಸುಲಭ ವಾಗಿ ನೀರು ಕುಡಿದಹಾಗೆ ಸುಳ್ಳುಹೇಳಿದರೂ ನಿಜದ ತಲೆ ಮೇಲೆ ಹೊಡೆದ ಹಾಗೆ ಹೇಳಿದರು. ಸರ್ಟಿಫಿಕೇಟ್ ಬಂದಿದೆ, ಸರ್ಕಾರಕ್ಕೆ ಉಳಿತಾಯವಾಗಿದೆ ಎಂದು ಹೇಳಿದರು. ಈ ಪಕ್ಷದ ಸದಸ್ಯರು ಎಷ್ಟೇ ಅನುಭವಸ್ಥರು ಗಳಾಗಿದ್ದರೂ ಅವರ ಬೇಳೆ ಬೇಯಲಿಲ್ಲ. ವೀರಣ್ಣ ಗೌಡರು ಡೆಲ್ಲಿಯವರೆಗೆ ದೂರು ತೆಗೆದುಕೊಂಡು ಹೋದರು. ಸಮಿತಿಯವರು ಕೂಲಂಕಷವಾಗಿ ಪರಿ ಶೀಲಿಸಿ ದೇಶಕ್ಕೆ ಬಹಳ ಅನ್ಯಾಯ, ಮೋಸ, ನಷ್ಟ ಆಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಯಾರು ಸರ್ಟಿಫಿಕೇಟ್ ಕೊಟ್ಟರೆಂಬುದು ವಿಶದವಾಗಿಲ್ಲ. ಹಾಗಿರುವಾಗ ಅವರು ಈ ಸಭೆಯ ಮುಂದೆ ಹೇಗೆ ಸಾಬೀತು ಮಾಡಿದರೋ ತಿಳಿಯದು. ಟ್ರಕ್ಸ್ ಯಾರ ಹತ್ತಿರ ಕೊಂಡಿರುವುದೆಂಬುದನ್ನು ನೋಡಬೇಕು. ಮೋಟಾರ್ ಡೀಲರ್ಸ್ ಅಲ್ಲದಿರುವವರಿಂದ ಕೊಂಡಿ ದ್ದಾರೆ. ಉಭಯಕರ್ ಬ್ರದರ್ಸ್ ಮೋಟಾರ್ ಡೀಲರ್ಸ್ ಅಲ್ಲ, ಅವರ ಹತ್ತಿರ ಸೆಕೆಂಡ್ ಹ್ಯಾಂಡ್ ಟ್ರಕ್ಸ್ ತೆಗೆದುಕೊಂಡಿದ್ದಾರೆ. ಜೊತೆಗೆ ಅವರು ಹನುಮಂತಯ್ಯನವರ ಮಿತ್ರರು, ಆಪ್ತ ಸ್ನೇಹಿತರು. ಮಂತ್ರಿಗಳಿಗೆ ಸ್ನೇಹಿತರಿದ್ದರೆ ಅವರ ಹತ್ತಿರ ತೆಗೆದು ಕೊಳ್ಳುವಾಗ ಬಹಳ ಹುಷಾರಾಗಿರಬೇಕು. ಸ್ನೇಹಿತರ ಹತ್ತಿರ ವ್ಯವಹಾರ ಮಾಡಬೇಕಾದರೆ ಬಹಳ ಎಚ್ಚರಿಕೆ ಯಿಂದಿರಬೇಕು. Cæsor's wife must be above suspicion, ಎನ್ನುವ ಹಾಗೆ ಸೆಕೆಂಡ್ ಹ್ಯಾಂಡ್ ವೆಹಿಕಲ್ಸ್ ತೆಗೆದುಕೊಂಡು ಬಂದು ವಿದ್ಯು ಚ್ಛಕ್ತಿ ಇಲಾಖೆಗೆ ಅವನ್ನು ವಹಿಸುವಾಗ ಬೇಡವೆಂದು ಪಬ್ಲಿಕ್‌ವರ್ಕ್ಸ್ ಇಲಾಖೆ ಅಸಿಸ್ಟೆಂಟ್ ಸೆಕ್ರೆಟರಿ ಫೋನ್ ಮಾಡಿದ್ದಾರೆ.

"It is also stated that the Assistant Secretary, P.W.D. and the Special Engineer, Vidhana Soudha had phoned for immediate action. They did not allow any grass to grow under their feet till these items were purchased."

ಆದರೆ ವಾಸ್ತವಾಂಶ ಹೇಗೆ ಗೊತ್ತಾಗಬೇಕು? ಸ್ಟೋರ್ಸ್ ಪರ್ಚೇಸ್ ಕಮಿಟಿ ಮೂಲಕ ಹೋದಹಾಗೆ ಮಾಡಿದ್ದಾರೆ. ಆ ಕಮಿಟಿಗೆ ಹನುಮಂತಯ್ಯನವರು ರಿಟೈರ್ಡ್ ಮಂತ್ರಿಗಳನ್ನು ಪ್ರೆಸಿಡೆಂಟ್ ಮಾಡಿದ್ದರು. ಚೆನ್ನಾಗಿದೆಯೇ ಎಂದು ಟೆಸ್ಟ್ ಮಾಡಿ ಪಾರ್ಟ್ಸ್ ಸರಿ ಯಾಗಿದ್ದು ಚೆನ್ನಾಗಿದ್ದರೆ ತೆಗೆದುಕೊಳ್ಳಿ ಎಂದು ಆ ಪ್ರೆಸಿಡೆಂಟರು ಬರೆಯುತ್ತಾರೆ. ಸಾಮಾನ್ಯವಾಗಿ ಕೊಳ್ಳುವಾಗ ಈ ಪದ ಉಪಯೋಗಿಸುವುದಿಲ್ಲ. ಮಂತ್ರಿ ಗಳು ಹುಷಾರಾಗಿ ನೋಡಿ, ಸರ್ವಿಸ್‌ಗೆ ಬರುವುದಾಗಿ ದ್ದರೆ ಕೊಂಡುಕೊಳ್ಳಬಹುದೆಂದು ಹೇಳಿದ್ದಾರೆ. ಸಂಬಂಧಪಟ್ಟ ಪ್ಯಾರಾ ಓದಬೇಕು, ಅದು ನನ್ನ ಕೈಗೆ ಸಿಕ್ಕಿಲ್ಲ, ಸಿಕ್ಕಿದ್ದರೆ ಓದುತ್ತಿದ್ದೆ.

3 P.M.

ಯಾವ ಕೆಲಸಕ್ಕೂ ಉಪಯೋಗ ಮಾಡಿಕೊಳ್ಳಲಿಕ್ಕೆ ಬಾರದಂಥ ಸೆಕೆಂಡ್‌ಹ್ಯಾಂಡ್ ವೆಹಿಕಲ್‌ಗಳನ್ನು ಸ್ನೇಹಿ ತರಾದವರಿಂದ ದಾಕ್ಷಿಣ್ಯಕ್ಕೆ ಒಳಗಾಗಿ ಕೊಂಡುಕೊಂಡಿ ದ್ದಾರೆ. ಇದರಲ್ಲಿ ಹೇಗೆ ಉಳಿತಾಯವಾಗಿದೆ ಎಂದು ಅನ್ನುವರೋ ತಿಳಿಯದು. ಈ ಟ್ರಕ್ಕುಗಳು ಮೂರು ತಿಂಗಳುಗಳವರೆಗೆ ಸಹ ಉಪಯೋಗವಾಗಲಿಲ್ಲ. ಅವನ್ನು ಕೊಳ್ಳುವಾಗ ಮೊದಲು ಏನಾದರೂ ಜಾಹೀ ರಾತು ಕೊಟ್ಟಿದ್ದರೇ? ಟೆಂಡರುಗಳನ್ನು ಏನಾದರೂ ತೆಗೆದುಕೊಂಡಿದ್ದಾರೆಯೇ? ಈ ವ್ಯವಹಾರದ ಬಗ್ಗೆ ಶ್ರೀ ನಾಗಯ್ಯರೆಡ್ಡಿಯವರು ಒಬ್ಬರು ಬಹಳ ನಿಷ್ಠುರ ವಾಗಿ interpellation ಹಾಕಿದ್ದಾರೆ ಜೇನುತುಪ್ಪ ವನ್ನು ನೆಕ್ಕಿ ಬಿಟ್ಟಹಾಗೆ ಇದು ಆಗಿದೆ. ಇರುವ ವೆಹಿ ಕಲ್‌ಗಳು ಸಾಕಾಗಿದ್ದವು. ವರದಿಯಲ್ಲಿ ಈ ರೀತಿಯಾಗಿ ಇದೆ :

Page 98. "Purchase of these secondhand vehicles from Sri Devarao Shivaram Ubhayakar is a criminal waste of public funds."

ಬಹುಶಃ ಇದು ಶಿವರಾಂ ದೇವರಾವ್ ಉಭಯಕರ್ ಎಂದಿರಬೇಕೆಂದು ಕಾಣುತ್ತದೆ.

ಶ್ರೀ ಕೆ. ಪ್ರಭಾಕರ (ನೆಲಮಂಗಲ ಅನುಸೂಚಿತ ಜಾತಿಗಳು).—ಹಾಗಲ್ಲ. ದೇವರಾವ್ ಶಿವರಾಂ ಉಭಯಕರ್ ಎಂಬುದು ಸರಿ.

ಶ್ರೀ ಟಿ. ಮರಿಯಪ್ಪ.—ಶ್ರೀ ಪ್ರಭಾಕರ್‌ರವರು ಹೇಳಿದ ಮೇಲೆ ಒಪ್ಪಿಕೊಂಡುಬಿಡುತ್ತೇನೆ.

ಅವಶ್ಯಕತೆ ಇಲ್ಲದಿದ್ದರೂ ಅವುಗಳನ್ನ ತೆಗೆದುಕೊಂ ಡದ್ದು ಯಾಕೆ? Still poor Muniappa was made to place orders. ಹೀಗೆ ಮಾಡಿದ್ದು criminal waste of money ಅಲ್ಲವೆ ? ಇದಕ್ಕೆ ಏನು ಸಮರ್ಥನೆ ಕೊಟ್ಟಿದ್ದಾರೆ? ಮತ್ತೆ ಮುಂದೆ ವರದಿಯಲ್ಲಿ ಹೀಗೆ ಇದೆ :

Chapter XV, para 1.

"The sole idea that obsessed everyone connected with this transaction seems to be to purchase them regardless of their need, their cost, their condition, or their performance. Though they were not fit to be purchased, these unfit vehicles were knowingly accepted by the Special Engineer and the Chief Engineer, and 90 per cent of the price was paid. Although the seller had committed breaches of the terms of the sale, and the Division had to receive damages and the sums spent by the Division on repairs, the balance of 10 per cent was paid without deducting any of these sums."

ಇದೊಂದು ದೊಡ್ಡ ಕಥೆ. ಸಮಿತಿಯವರು ವಿಮರ್ಶೆ ಮಾಡಿ ವರದಿಯಲ್ಲಿ ಬರೆದಿದ್ದಾರೆ. ಇವುಗಳನ್ನು ಪರೀಕ್ಷಿಸಿದ್ದು ಹೇಗೆ ಅಂದರೆ, ಎಂಜಿನಿಯರು ಒಂದು

ಟ್ರಕ್ ತೆಗೆದುಕೊಂಡು ಪೆಟ್ರೋಲ್ ಹಾಕಿ ಅದನ್ನು ನಡೆಸಿ ನೋಡಿದ್ದರೇ ಹೊರತು ಬೇರೆ ಏನೂ ಮಾಡಿಲ್ಲ. ಎಲ್ಲ ವೆಹಿಕಲ್ಸ್ ಸರಿಯಾಗಿ ಇವೆಯೋ ಎಂಬುದನ್ನು ನೋಡಲಿಲ್ಲ. ಅವುಗಳ ಸಲುವಾಗಿ ಕೂಡಲೆ ಟಯರ್ಸ್ ಟ್ಯೂಬ್ಸ್ ಕೊಂಡುಕೊಂಡರು. ಟ್ಯೂಬ್ಸ್ ಟಯರ್ಸ್ ಹೊಸದಾಗಿ ಹಾಕಬೇಕಾಗುವಂಥ ಸ್ಥಿತಿಯಲ್ಲಿ ಅವು ಇದ್ದವು. ಇದನ್ನು ಉದ್ದಕ್ಕೂ ವಿಸ್ತಾರವಾಗಿ ಎಲ್ಲವನ್ನೂ ವರದಿಯಲ್ಲಿ ಬರೆದಿದ್ದಾರೆ.

ಆ ಮೇಲೆ ಚೀಫ್ ಎಂಜಿನಿಯರರು ಶಿಫಾರಸು ಮಾಡಲು ಏನು ಮಾಡಿದ್ದಾರೆಯೋ ಅದರ ಬಗ್ಗೆ ಹೀಗೆ ವರದಿಯಲ್ಲಿ ಹೇಳಿದೆ :

"As the military trucks with Sri Devarao Shivaram Ubhayakar have been tested and found good, as they are ready for use with steel cabins and steel reinforced wooden bodies and as they cost only Rs. 13,825 each as against the cost of Rs. 14,038-8-0 per mere chassis to be supplied by Messrs. The Premier Automobiles, I request that sanction of Government to purchase 12 trucks directly without reference to Stores Purchase Committee, may kindly be communicated early, as they are urgently required for Vidhana Soudha Works."

ಇದನ್ನು ಬಹಳ ಚನ್ನಾಗಿ ಹೇಳಿದ್ದಾರೆ. ಮತ್ತೆ ಮುಂದೆ ಹೇಳಿದ್ದು ಈ ರೀತಿಯಾಗಿದೆ :

"As already pointed out, the Vidhana Soudha Division had 29 vehicles and there was no demand for any additional vehicle."

ಜೊತೆಗೆ ಸ್ಪೆಷಲ್ ಇಂಜನಿಯರು D. O. ಕಾಗದ ಬರೆದಿದ್ದಾರೆ:

"The Special Engineer wrote a D.O. to the Chief Engineer requesting him to address the Government for expeditious sanction to the purchase of 12 vehicles from Ubhayakar."

ಮತ್ತೆ ಮುಂದೆ ಹೀಗೆ ವರದಿಯಲ್ಲಿ ಬರೆದಿದ್ದಾರೆ :—

"The description of the trucks to be purchased given in the schedule is almost identical with the description given by Ubhayakar in his letter dated 2nd February 1954", Advertise ಮಾಡಿದರೇ ? Stores Purchase Committee ಯನ್ನು ವಿಚಾರಿಸಿದ್ದರೇ ?

Sri S. SRINIVASA IYENGAR.—That is the trick of the trade.

Sri T. MARIAPPA.—That is the trick of the trade ಎನ್ನುತ್ತಾರೆ. ಸ್ವಾಮಿ, ತಮಗೆ ಯಾವ ರೀತಿಯಾಗಿ ಬೇಕೋ ಹಾಗೆ ತಿದ್ದುಪಡಿ ಮಾಡಿ ಅನುಕೂಲವಾಡಿಕೊಂಡಿದ್ದಾರೆ.

"This amendment was designedly made with a view to purchase the second-hand vehicles of Ubhayakar."

The second thing is: "this amendment was made by the Stores Purchase Committee with the approval of the Secretary, Public Works Department. The dates of publication of the notification and the amendment in the Official Gazette are not on record."

Mr. SPEAKER.—How much more time does the Hon'ble Minister require?

Sri T. MARIAPPA.—About half an hour more, Sir.

Mr. SPEAKER.—The House now rises and will meet half an hour afterwards.

The House adjourned for Lunch at Eight Minutes past Three of the Clock and reassembled at Thirty-eight Minutes past Three of the Clock.

[MR. SPEAKER in the Chair.]

Sri J. MOHAMED IMAM.—Sir, may I know the future programme ?

Mr. SPEAKER.—As all Hon'ble Members know, we are discussing the Budget. It has to be finished to-day. Tomorrow at 8-30 A.M. we are meeting and finish the Appropriation Bill and then take up the Non-official Business. We are meeting in the afternoon and again take up the Non-official Business.

Sri J. MOHAMED IMAM.—I submitted in the beginning alone, Mr. Speaker, that it is desirable to extend the session by two days, *i.e.*, till 29th evening. Appropriation Bill has assumed certain amount of importance. I request one full day may be set apart for Appropriation Bill and one day for Non-official Business. Instead of meeting at 8-30 tomorrow, we may meet from 12 to 5 and deal with the Appropriation Bill because we do need a little more time.

Mr. SPEAKER.—Usually, very short speeches are being made on the Appropriation Bill. It simply reproduces the Budget and nothing more and when once

(MR. SPEAKER.)

the Budget has been discussed threadbare and so much time is taken, we should not take more time on the Appropria tion Bill. As things stand, we should not take more than half an hour or an hour on Appropriation Bill, because Appropriation Bill is a Bill which is not controversial. As the Budget has been discussed threadbare, the Appropriation Bill should not take more than an hour at the most. After that, we shall take up Non-Official Business in the morning and again in the evening. I will give five hours time for Non-Official Business. If we finish the Appropriation Bill in the morning taking one hour after question hour and sit till 12-30 we could have two hours. Again, we can meet at 3 P.M. and sit till 6 if Hon'ble Members are pleased. So, we will have five hours for Non-Official Business. Moreover, Appropriation Bill should not be controversial at all.

Sri J. MOHAMED IMAM.—It is a controversial Bill; we are definitely going to oppose that Bill.

Mr. SPEAKER.—The Hon'ble the Leader of the Opposition can oppose the Bill tooth and nail, but the thing is, long speeches repeating the whole argument on the Budget would not be proper. Let me understand from the Leader of the Opposition how much time he would require on the Appropriation Bill.

Sri J. MOHAMED IMAM.—I would like to take 45 minutes for the Appropriation Bill if the Chair kindly allows me.

Mr. SPEAKER.—I would not allow 45 minutes because there is not much to speak on the Appropriation Bill. I would not allow any Hon'ble Member to take so much of time. There is nothing new there.

Sri J. MOHAMED IMAM.—Everything that will come out will be new, Sir.

Mr. SPEAKER.—After all in every Assembly they will take not more than 15 minutes for the Appropriation Bill. In Andhra Assembly they will not take more than 15 minutes. In Madras also, I am told, they do not take more than 25 minutes.

Sri J. MOHAMED IMAM.—In Mysore, we have taken one day, Sir.

Mr. SPEAKER.—The old Assembly is not existing now. Last time I did not allow much time on the Appropriation Bill.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈಗ ಆಗುತ್ತಿರುವ ಬಡ್ಜೆಟ್ಟಿನ ಮೇಲಿನ ಚರ್ಚೆಯನ್ನು ನೋಡಿದರೆ ಮುಖ್ಯವಾಗಿ ವಿಧಾನ ಸೌಧದ ವಿಷಯವೇ ಚರ್ಚೆಯಾಗುತ್ತಿದೆ.

ಅಧ್ಯಕ್ಷರು.—ಹಾಗಲ್ಲ. ಸಭೆಯ ಮುಂದೆ ಚರ್ಚೆಗಾಗಿ ವಿಧಾನ ಸೌಧದ ವರದಿಯನ್ನಿಟ್ಟಿಲ್ಲ. ಇದರ ಜೊತೆಯಲ್ಲಿ ಬೇರೆ ಐಟಂಗಳೂ ಇವೆ. ಅವುಗಳ ಮೇಲೆ ಯಾರೂ ಮಾತನಾಡಲಿಲ್ಲ. ತಮಗೆ ಬೇಕಾದರೆ ಹತ್ತು ನಿಮಿಷ ಮತ್ತು ಚಿಕ್ಕಲಿಂಗಯ್ಯನವರಿಗೆ ಹದಿನೈದು ನಿಮಿಷಗಳು ಮಾತನಾಡಲು ನಾನು ಅವಕಾಶಕೊಡುತ್ತೇನೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ 1957-58, 1956-57 ಕೂಡ ಚರ್ಚೆಗಿತ್ತು. ಅದರ ಮೇಲೆ ಯಾರೂ ಮಾತನಾಡಲಿಲ್ಲ.

Sri K. PRABHAKAR.—With your kind permission, I would like to ask the Finance Minister as to why he said that 'if Prabhakar says that it is Deva Rao Shivaram Ubhaykar, I shall accept it.' I would like to ask his personal explanation in the matter, Sir.

Sri T. MARIAPPA.—Because I heard him Saying, very clearly and distinctly, that what was stated in the report was correct, I said so, Sir.

Sri K. PRABHAKAR.—I would like to ask him to repeat the answer.

ಶ್ರೀ ಟಿ. ಮರಿಯಪ್ಪ.—ಅವರು "ದೇವರಾವ್ ಶಿವರಾಮ್ ಉಭಯಕರ್" ಎಂದಿರುವುದು ಸರಿ ಎಂದು ಹೇಳಿದ್ದರ ಮೇರೆಗೆ ಒಪ್ಪಿಕೊಂಡೆ.

ಶ್ರೀ ಕೆ. ಪ್ರಭಾಕರ್.—ಆ ಅರ್ಥದಲ್ಲಿ ಹೇಳಿದ್ದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಅಧ್ಯಕ್ಷರೇ, ಈ ವಿಧಾನ ಸೌಧದ ಡಿವಿಷನ್ನಿಗೆ ಟ್ರಕ್‌ಗಳನ್ನು ಕೊಂಡುಕೊಂಡ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಹಾಗೆ ಎಷ್ಟೋ ವಿಷಯಗಳಿವೆ. ಅದರಲ್ಲಿ 12 ಸೆಕೆಂಡ್ ಹ್ಯಾಂಡ್ ಮಿಲಿಟರಿ ವೆಹಿಕಲ್ಸ್ ಕೊಂಡುಕೊಂಡಿದ್ದು ಬಹಳ ಅನ್ಯಾಯ. ಆ ಕಮಿಟಿಯವರೇ ಹೇಳಿದ ಹಾಗೆ, ಇವೆಲ್ಲ ಕ್ರಿಮಿನಲ್ ವೇಸ್ಟ್ ಆಫ್ ಮನಿ ಎಂದು ಹೇಳದೆ ವಿಧಿಯಿಲ್ಲ. ವಿಧಾನ ಸೌಧದಲ್ಲಿ ಕೆಲಸಮಾಡುವುದಕ್ಕೆ ಬೇಕಾದಷ್ಟು ಲಾರಿಗಳಿದ್ದವು ಅವುಗಳೇ ಕೆಲಸಕ್ಕೆ ಸಾಕಾಗುತ್ತಿದ್ದವು. ಹೀಗೆ ಅಲ್ಲಿರುವ ಲಾರಿಗಳಿಗೇ ಕೆಲಸವಿರಲಿಲ್ಲವೆಂದಮೇಲೆ ಈ ರೀತಿ ಟ್ರಕ್‌ಗಳನ್ನು ಕೊಂಡುಕೊಳ್ಳುವ ಅಗತ್ಯವಿರಲಿಲ್ಲ. ಸ್ಪೆಷಲ್ ಇಂಜನೀಯರು ಚೀಫ್ ಇಂಜನೀಯರಿಗೆ ಈ ರೀತಿ ಕೊಂಡುಕೊಳ್ಳುವುದನ್ನು ಜಾಗ್ರತೆ ಮಂಜೂರುಮಾಡಬೇಕೆಂದು 1954ನೇಇಸವಿ ಫೆಬ್ರವರಿ 4ರಲ್ಲಿ ಬರೆದಿದ್ದರು. ಸ್ಟೋರ್ಸ್ ಪರ್ಚೇಸ್ ಕಮಿಟಿ ಮುಖಾಂತರ 12 ವೆಹಿಕಲ್ಸನ್ನು ಕೊಂಡುಕೊಳ್ಳಬೇಕೆಂದು ಚೀಫ್ ಮಿನಿಸ್ಟರು ಆರ್ಡರ್ ಮಾಡಿದರೆಂದು ವರದಿಯಲ್ಲಿ ಬರೆದಿದ್ದಾರೆ. ಆಗ ಈ ವಿಧಾನ ಸೌಧದಲ್ಲಿ ಇದ್ದ ಲಾರಿಗಳಿಗೆ ಸರಿಯಾಗಿ ಕೆಲಸವಿಲ್ಲ

ಎಂದು ಕಮಿಟಿಯು ರಿಪೋರ್ಟಿನಲ್ಲಿರುವುದು ವಾಸ್ತವಾಂಶ. ಅದನ್ನು ಕೂಡ ಪರಿಶೀಲನೆ ಮಾಡಬೇಕು.

ಆಮೇಲೆ ಟೆಂಡರುಗಳನ್ನು ಕರೆದಾಗ ಅದರಲ್ಲಿ "Brand New Military" ಎಂದು ಅಡ್ವೈಟೈಸ್‌ಮೆಂಟಿನಲ್ಲಿದ್ದುದನ್ನು ರಿಕಾರ್ಡಿನಿಂದ ತೆಗೆದದ್ದನ್ನು ನಾನು ಒಪ್ಪುವುದಿಲ್ಲ. ಜೊತೆಗೆ ಈ ರೀತಿ ಅಮೆಂಡ್ ಮಾಡಿರುವುದು ಉದ್ದೇಶಪೂರ್ವಕವಾಗಿ ಎಂದು ಕಮಿಟಿಯವರು ಹೇಳಿರುವುದನ್ನು ನಾವು ಒಪ್ಪಬೇಕಾಗಿದೆ. ಅಲ್ಲದೆ ಕಮಿಟಿಯವರು ಸ್ಟೋರ್ಸ್ ಪರ್ಚೇಸ್ ಕಮಿಟಿ ರಿಪೋರ್ಟಿನ ನೋಟಿನ ಮೇಲೆ ಪ್ಯಾರಾ 16—ಪೇಜು 101 ರಲ್ಲಿ ಈ ರೀತಿ ಹೇಳಿದ್ದಾರೆ.

"................ In this note, it is stated that these vehicles may be purchased provided the department is satisfied that these vehicles are as good as new and capable of giving satisfactory service without any trouble for a normal period expected of such vehicles and that these vehicles though manufactured several years ago are suitable and in sound condition with all parts intact and they can serve for the normal period of life prescribed for new vehicles and there would be no difficulty whatsover in obtaining spare parts."

ಸ್ವಾಮಿ, ಈ ತರಹ ಇಲ್ಲವೆಂಬುದಕ್ಕೆ ಒಂದು ಉದಾಹರಣೆ ತೋರಿಸಲಿ ಅಷ್ಟೇ ಸಾಕು (ನಗು)

ಉಭಯಕರ್‌ರವರು ಮೋಟಾರ್ ಡೀಲರ್ ಎಂದ ಮೇಲೆ ಅವರಲ್ಲಿ ಬ್ರಾಂಡ್ ನ್ಯೂ ವೆಹಿಕಲ್ಸ್ ಇರಲಿಲ್ಲವೆ ? ಅಂತಹುದರಲ್ಲಿ ಈರೀತಿ ಸೆಕೆಂಡ್ ಹ್ಯಾಂಡ್ ವೆಹಿಕಲ್ಸ್‌ಗಳನ್ನು ಏಕೆ ಕೊಂಡುಕೊಳ್ಳಬೇಕಾಗಿತ್ತು ಈ ವಿಷಯದಲ್ಲಿ Committee ಯವರು ಹೀಗೆ ಹೇಳಿದ್ದಾರೆ

"........They were not examined as to their soundness. Even from this report it is manifest that the vehicles should not have been accepted, or at least should not have been accepted in the condition they have been accepted."

ಸರ್ಕಾರಕ್ಕೆ ಉಳಿತಾಯವಾಗುತ್ತದೆ ಮತ್ತು ಸರ್ಟಿಫಿಕೇಟು ಬೇರೆ ಇದೆ ಎಂದು ಈ ರೀತಿ 13 ಸಾವಿರ ಮತ್ತು 14 ಸಾವಿರ ರೂಪಾಯಿಗಳ ನಷ್ಟ ಸರ್ಕಾರಕ್ಕೆ ಮಾಡಬಹುದೆ? ಆಮೇಲೆ ಕಮಿಟಿಯವರು ಈ ರೀತಿ ಬರೆದಿದ್ದಾರೆ.

"18. The order for supply by the Stores Purchase Committee, required inspection and approval of the Chief Engineer. On 14th April 1954, he saw the vehicle and passed the following order :

'I have seen the vehicles. Sufficient amount for replacing damaged parts should be withheld and the bills passed for payment.'

ಇವುಗಳನ್ನು ಕೊಂಡುಕೊಂಡು damaged parts replace ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು withhold ಮಾಡಬೇಕು ಎಂದು ಚೀಫ್ ಇಂಜಿನಿಯರು ತಿಳಿಸಿದ್ದಾರೆ.

"......... This was not done. The Special Engineer spent Rs. 1,680 for effecting certain repairs. This was not deducted even from the final payment made on 8th July 1955."

"In making this purchase costing Rs. 1,74,000 the ordinary care to get these vehicles examined by an Automobile Engineer was not taken."

ಒಂದು ಲಕ್ಷ ಎಪ್ಪತ್ತನಾಲ್ಕು ಸಾವಿರ ರೂಪಾಯಿ ಸ್ವಲ್ಪ ಹಣವೇ ? ಸರಕಾರದ ಹಣವನ್ನು ಎಷ್ಟು ಎಚ್ಚರಿಕೆಯಿಂದ ಖರ್ಚು ಮಾಡಬೇಕು. ಹೀಗೆ ಉಪಯೋಗಕ್ಕೆ ಬಾರದೆ ಇರತಕ್ಕ ಈ ವಾಹನಗಳನ್ನು ಕೊಂಡುಕೊಂಡದ್ದು ಶುದ್ಧ ತಪ್ಪು. They were not even road-worthy.

"On 20th May 1954, the Special Engineer placed an order for purchase of 8 sets of tyres, tubes and flaps at a cost of Rs. 5, 295-6-0 for these vehicles on the ground that no tyres were provided for stepneys. The order was only for 8 sets, because 4 vehicles were already transferred to other Divisions. On 9th July 1955, Government sanctioned Rs. 33,000 for purchase of 50 sets of tyres, tubes and flaps for these military vehicles."

"On 8th June 1954, the Special Engineer informed Ubhayakar about the bad condition of the eight vehicles excluding those sent to Tumkur and Hassan Divisions........"

ವಿಧಾನ ಸೌಧದ ಕೆಲಸ ಬೇಗ ಆಗಲಿ ಎಂದು ಈ ವಾಹನಗಳನ್ನು ತೆಗೆದುಕೊಂಡು ತುಮಕೂರು ಮತ್ತು ಹಾಸನದ ಡಿವಿಷನ್‌ಗಳಿಗೆ ಕಳುಹಿಸಿದರು !

"........stating that it was noticed that milo-meters of all these 8 vehicles were not working, that they were consuming large quantities of engine oil, gear oil and differential oil, that four fan

(ಶ್ರೀ ಟಿ. ಮರಿಯಪ್ಪ.)

belts had snapped, that one dynamo and one petrol. tank sent to the firm for repairs were not returned, that the damaged tyres and tubes were not replaced though promised and that one more tyre had burst and was not replaced. In his letter dated 10th June 1954 he sent a further list of defects which remained unrectified. That list is not on record. *The subsequent correspondence with this firm shows that the vehicles purchased by the Division were unserviceable second-hand vehicles and required constant heavy repairs.*

New Desoto Vehicles ತರಿಸಿದ್ದು ನೆಪಮಾತ್ರಕ್ಕೆ.

"........It is also clear that the tyres were unserviceable from the very beginning. It was reported that the vehicles gave a mileage of 6 on load and 7 on no-load, per gallon. This is lower than the test got made by the Special Engineer. It is obvious that the vehicle tested was not included in the purchase or at least a perfunctory test was conducted."

"22. These vehicles were neither necessary nor useful and were not on the road in April 1954. The Special Engineer was therefore anxious to get rid of them as early as possible".

ನೋಡಿದರು, ಇನ್ನು ಎಲ್ಲಿ ತಲೆಗೆ ಬರುತ್ತದೆಯೋ ಎಂದು.

"He transferred two vehicles to Tumkur Division on 29th April 1954 and two to Hassan Division on 30th April 1954. The Executive Engineer, Tumkur Division complained that they were not giving good service though they were repaired often in the Division Workshop and at the suppliers' garage. By 26th August 1954, four tyres had already burst and the vehicles were stopped for want of tyres."

"23. The Special Engineer transferred six vehicles in August 1954, and the remaining two on 6th November 1954 to other Divisions. These vehicles had not done any haulage work for the Vidhada Soudha Division".

ಸ್ವಾಮಿ, ಆ ರೀತಿ ಮಾಡಿದರೆ ಪಬ್ಲಿಕ್ ಹಣ ಸರಿಯಾಗಿ ವಿನಿಯೋಗವಾಗಿದೆ ಎಂದು ಹೇಳುವುದಕ್ಕೆ ಸಾಧ್ಯವೇ? Ubhayakars—(I am using plural advisedly)—ಇವರಿಗೆ ಪರಮ ಮಿತ್ರರು. ಮಿತ್ರರ ಜೊತೆಯಲ್ಲಿ ವ್ಯವಹಾರ ಮಾಡಬೇಕಾದರೆ ಎಷ್ಟು ಎಚ್ಚರಿಕೆಯಿಂದ ಇರಬೇಕು. ನಾನು ಮೊದಲೇ ಮನವಿ ಮಾಡಿಕೊಂಡಹಾಗೆ, "Cæser's wife must be above suspicion" ಹಾಗಿಲ್ಲದೆ ಇಲ್ಲಿ ಒಂದು ಲಕ್ಷ ಎಪ್ಪತ್ತನಾಲ್ಕು ಸಾವಿರ ರೂಪಾಯಿಗಳಿಗೆ ಕೆಲಸಕ್ಕೆ ಬಾರದೆ ಇರುವ vehicles ತೆಗೆದುಕೊಂಡು ಸರ್ಕಾರಕ್ಕೆ ನಷ್ಟ ಮಾಡಿರುವ ವಿಷಯವನ್ನು ಯಾವ ಕಟುವಾದ ಶಬ್ದದಿಂದ ಟೀಕೆ ಮಾಡಿದರೂ ಸಲ್ಲುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಚೀಫ್ ಇಂಜಿನಿಯರು ಬಹಳ ದಿವಸಗಳ ಮೇಲೆ ಕಣ್ಣುಬಿಟ್ಟರು. ಮೊದಲು ಆಗಲಿ ಎಂದು ಹೇಳಿದರು. ಅನಂತರ

"I wonder why the Special Engineer was so eager to secure the equipment."

ಎಂದು remarks ಮಾಡಿದ್ದಾರೆ.

"25. On the letter of the Executive Engineer, Chitaldrug Division to Special Engineer for giving delivery of 2 of these vehicles copies, to him, the Chief Engineer remarked on 27th September 1954 :

'This Executive Engineer seems to be fond of these heavy trucks which are giving trouble and consume a lot of petrol'.

ಎಂದು ಬೇರೆ ಹೇಳಿದೆ.

"26. Having given the certificate as he did on 14th April 1954, these remarks are pointless. It is apparent that the Chief Engineer was atleast as eager to secure these vehicles as the Special Engineer. Both are equally responsible for this heavy loss to the State".

ಇನ್ನೊಂದು ವಿಚಾರ, ಇದೇ ಸಮಯದಲ್ಲಿ ತಿಳಿಸುತ್ತೇನೆ. ಮೊದಲ ಇದೇ ವಾಹನಗಳನ್ನು ಅದೇ ಉಭಯಕರ್ ಅವರು ವಿದ್ಯುಚ್ಛಕ್ತಿ ಇಲಾಖೆಗೆ ಕೊಡಬೇಕು ಎಂದರೆ ಆಗ ಸ್ಟೋರ್ಸ್ ಪರ್ಚೇಸ್ ಕಮಿಟಿಯವರು ಹುಷಾರಾಗಿದ್ದರು. Soundness ನೋಡಿ test ಮಾಡಿ ತೆಗೆದುಕೊಳ್ಳಿ ಎಂದು ಹೇಳಿದರು. ಅದೇ ಪ್ರಕಾರ test ಮಾಡಿ ಅದನ್ನು drop ಮಾಡಿದರು. ಈ ಅನುಭವವಿದ್ದರೂ ಎರಡನೆಯ ಬಾರಿ ಅದೇ ಗಾಡಿಗಳನ್ನು ಕೊಂಡುಕೊಳ್ಳತಕ್ಕದ್ದು, ಅದಕ್ಕೆ ನಡೆಸಿರತಕ್ಕ ತರದೂದು, ಮೇಲೆ ಒಳ್ಳೆಯ ಬಣ್ಣ ಕೊಟ್ಟಿದ್ದ ಅವನ್ನು ಕೊಂಡುಕೊಂಡಿರತಕ್ಕ ವಿಧಾನ, ಇವೆಲ್ಲ ಖಂಡಿತವಾಗಿಯೂ ಖಂಡನೀಯವಾದುವು.

"29. It appears that the Stores Purchase Committee also shared the anxiety of others to purchase the vehicles of Ubhayakar regardless of consequences. It must be noted that the orders for Vidhana Soudha Division and Bhadra Reservoir Works were placed on the same day, *i.e.*, 11th March 1954".

ಈ ಗಾಡಿಗಳನ್ನು ಕೊಂಡುಕೊಳ್ಳತಕ್ಕ ಅವಶ್ಯಕತೆಯೇ ಇರಲಿಲ್ಲ. ಇದ್ದಂಥ ಲಾರಿಗಳನ್ನು ಎಲ್ಲರಿಗೂ ಬಾಡಿಗೆಗೆ ಕೊಟ್ಟಿದ್ದರು. ಕೆಂಪಯ್ಯ ಅಂಡ್ ಸನ್ಸ್ ಅವರಿಗೂ ಕೂಡ ಬಾಡಿಗೆಗೆ ಕೊಟ್ಟಿದ್ದರು. ಇದು ಎಲ್ಲ ನಿಬಂಧನೆಗಳಿಗೂ ವಿರೋಧವಾದದ್ದು. ಆ ರೀತಿ ಮಾಡಬಾರದಾಗಿತ್ತು ಎಂದು ಹೇಳಿದ್ದಾರೆ.

"33. Under these circumstances, it is difficult to accept the correctness of the representations of the Special Engineer to the Chief Minister and the Chief Engineer about his need for 12 Dodge vehicles. His anxiety to purchase these vehicles cannot be reasonably explained on the ground of need. The Chief Engineer should not have moved the Government for sanction, merely because the Special Engineer and the Assistant Secretary, Public Works Department, were pressing him to do so. He should have scrutinised the need before sending the proposal. The facts, however, lead to the irresistible inference that he was as anxious as the others, if not more, to acquire these vehicles".

ಆಮೇಲೆ ಪ್ಯಾರ 35ರಲ್ಲಿ

"....*We have made this analysis for these nine months to demonstrate that the demands of the Special Engineer for more and more vehicles was not in the least justified; and that the Dodge vehicles should not have been purchased. This analysis further shows that apart from hiring of lorries to contractors, which should not have been done, the Department did not make adequate use of the vehicles used by it*".

ಎಂದು ಹೇಳಿದ್ದಾರೆ. ಈ ರೀತಿ ಕೊಂಡುಕೊಳ್ಳುವುದರಲ್ಲಿ ಆಗಿರತಕ್ಕ ಅಕ್ರಮ ಮತ್ತು ಆರೋಪಣೆಗಳನ್ನೆಲ್ಲ ಕಮಿಟಿಯವರು ಸಾಕ್ಷಿ, ಸಾಹಿತ್ಯದಿಂದ ತೋರಿಸಿಕೊಟ್ಟಿದ್ದಾರೆ. ಆ ಮೇಲೆ ಲಾರಿಗಳನ್ನು ಬಾಡಿಗೆಗೆ ಕೊಡತಕ್ಕ ವಿಚಾರದಲ್ಲಿ ಕೂಡ ಸರ್ಕಾರಕ್ಕೆ ನಷ್ಟವಾಗಿದೆ. ನ್ಯಾಯವಾಗಿ ಆರೀತಿ ಮಾಡಬಾರದಾಗಿತ್ತು. ಲಾರಿಗಳನ್ನು ಬಾಡಿಗೆಗೆ ಕೊಟ್ಟಿದ್ದರಿಂದ ವಿಪರೀತವಾಗಿ ಮೈಲೇಜ್ ಓಡಿಸಿದ್ದಾರೆ ಇದರಿಂದ ನಮಗೆ ನಷ್ಟವೇ ಹೊರತು ಆದಾಯವಿಲ್ಲವೆಂದು ಹೇಳಿದ್ದಾರೆ. ಮತ್ತು

"38. Instead of carrying out these orders, the Special Engineer pointed out that hiring of lorries was very necessary for the Vidhana Soudha Division and requested approval to continue hiring out of lorries. The Chief Engineer refused to convey approval for hiring of departmental lorries (letter No. 5417 dated 5th July 1954)".

"39. In spite of these prohibitory orders, the Special Engineer persisted in hiring out of lorries to contractors. The contractors have put the lorries to maximum use regardless of damage to the vehicles with the result that considerable sums had to be spent for repairs of these lorries".

"40. These vehicles were hired not only to the contractors supplying material for Vidhana Soudha Work but also to Messrs. Kempaih Sons and Co., who were the tendered contractors for the Accountant General's Office building."

ಅಲ್ಲೇ ಸ್ವಾಮಿ, significant ಆಗಿ ಇರುವುದು. ಆವೇಲೆ ಎರಡನೆಯದು ಬೋರಯ್ಯ ಬಸವಯ್ಯ ಅಂಡ್ ಕಂಪೆನಿಯವರಿಗೆ flooring contract ಕೊಟ್ಟಿರುವುದು. ಇದೂ ಅಷ್ಟೇ ಬಹಳ ತಪ್ಪು. ಸಾಮಾನ್ಯವಾಗಿ ಜನರು ಕಣ್ಣಿಗೆ ಅಂದವಾಗಿ ಕಂಡುಬಿಟ್ಟರೆ ಚೆನ್ನಾಗಿದೆ ಎಂದು ಒಪ್ಪಿಕೊಳ್ಳಬಲ್ಲರು. ಯಾರಾದರೂ ಪರಿಣತರು, experts, ನೋಡಿ ಸರಿಯಾಗಿದೆ ಎಂದು ಹೇಳಬೇಕೇ ಹೊರತು, ಬಣ್ಣ ಹಾಕಿರುವುದನ್ನು ನೋಡಿ ಚೆನ್ನಾಗಿದೆ ಎಂದು ಇತರರು ಹೇಳಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ಕೆಲಸವನ್ನು ಬೋರಯ್ಯ ಬಸವಯ್ಯ ಅಂಡ್ ಕಂಪನಿಯವರಿಗೆ ಕೊಟ್ಟಿರುವುದು ತಪ್ಪು. ಇವರು lowest tenders approve ಮಾಡಿದ್ದೇವೆಂದು ಹೇಳಬಹುದು. ಇದು ಸಾಮಾನ್ಯ ಜನರಿಗೆ ಸರಿ ಎಂದು ತೋರಬಹುದು, ಈ flooring ಕೆಲಸ ಮಾಡುತ್ತಿರುವವರು ಯಾರೆಂದರೆ, ಯಾರು ನಿಜವಾಗಿ tiles ತಯಾರು ಮಾಡುತ್ತಾರೋ, ಅವರು ಬೋರಯ್ಯ ಬಸವಯ್ಯ ಅಂಡ್ ಕಂಪನಿಯವರು ಬರೀ nominees. ಇವರ ಮೂಲಕ ಬೇರೆಯವರು sub-contractor ಆಗಿ ಕೆಲಸ ನಡೆಸುತ್ತಿದ್ದಾರೆ. ನಿಜವಾಗಿ ಕೆಲಸ ಮಾಡುವವರು ಈ ಕೆಲಸಕ್ಕೆ ಟೆಂಡರ್ ಕೊಟ್ಟಿದ್ದರೂ ಸಹ ಅವರನ್ನು ತಪ್ಪಿಸಿ ಈಗ ಬೋರಯ್ಯ ಬಸವಯ್ಯ ಅಂಡ್ ಕಂಪೆನಿಯವರಿಗೆ

(ಶ್ರೀ ಟಿ. ಮರಿಯಪ್ಪ.)

ಕೆಲಸ ವಹಿಸಿರುವುದನ್ನು ಪರಿಶೀಲನೆಮಾಡಿ, ಈ ರೀತಿ ಮಾಡಿರುವುದರಿಂದ ಇದರಲ್ಲಿ ಸರ್ಕಾರಕ್ಕೆ ನಷ್ಟವಾಗುತ್ತದೆ ಎಂದು ತೋರಿಸಿಕೊಟ್ಟಿದ್ದಾರೆ. ಮತ್ತು ಆಗಾಗ್ಗೆ ಸ್ಪೆಷಲ್ ಇಂಜಿನಿಯರು ಮುಖ್ಯ ಮಂತ್ರಿಗಳ ಸೂಚನೆಗಳ ಪ್ರಕಾರ ನಡೆದು ಬದಲಾವಣೆ ಮಾಡುತ್ತ ಇರತಕ್ಕದ್ದು ಮತ್ತು ಇದರಲ್ಲಿ ಎಷ್ಟರಮಟ್ಟಿಗೆ ನಷ್ಟವಾಗಿದೆ ಎಂಬ ವಿಷಯಗಳನ್ನೆಲ್ಲ 55, 56, 58, 59, ಪ್ಯಾರಾಗಳಲ್ಲಿ ವಿಶದವಾಗಿ ತಿಳಿಸಿದ್ದಾರೆ. 61ನೇ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ.

4 P.M.

"61. Evidently banking on the support of the Chief Minister, he had decided to give this work on contract to this firm. Therefore, instead of carrying out the direction, he complained to the Chief Minister that the tenders for flooring had not been approved. Thereupon, the Chief Minister asked the Chief Engineer to dispose of the matter early".

ಎಷ್ಟು ದೂರ ಹೋಗಿದ್ದಾರೆ ನೋಡಿ.

"Thereafter the Special Engineer returned the tenders and the comparative statement to the Chief Engineer on 1st December 1954 stating that 'the tender portion need not be discussed by the Committee'. He also stated that no portion of the flooring was proposed to be done departmentally as the department did not propose to instal machinery and manufacture tiles . . ."

ಆಮೇಲೆ ಪ್ಯಾರ 62ರಲ್ಲಿ ಇನ್ನೂ ಒಂದು ಬಹಳ ಸ್ವಾರಸ್ಯ ಇದೆ.—

"He, however, justified his action in not complying with the direction of the Chief Engineer to place the subject before the Technical Committee on the stock excuse of 'avoidance of delay'. He took 14 days to submit the tenders to the Chief Engineer. If avoidance of delay was the object, he should have promptly convened a meeting of the Technical Committee and after obtaining their decision, he should have submitted the tenders for approval . . ."

ಅವರಿಗೆ ವಹಿಸಿದ ಮೇಲೆ 14 ದಿವಸ ನಿಧಾನ ಮಾಡಿದ್ದಾರೆ. ಜೊತೆಗೆ ಫ್ಲೋರಿಂಗ್ ಕೆಲಸ ತೆಗೆದುಕೊಳ್ಳುವವರ ಅಭಾವ ಇರಲಿಲ್ಲ. ಅದನ್ನು ಚೆನ್ನಾಗಿ ಪರಿಶೀಲನೆ ಮಾಡಿ ಹೇಳಿದ್ದಾರೆ. ಅಂತೂ ಚೀಫ್ ಇಂಜನಿಯರೂ ಕೂಡ ತಮ್ಮ ಕರ್ತವ್ಯಲೋಪ ಮಾಡಿದ್ದಾರೆ.

"At the meeting held on 2nd December 1954, the Technical Committee merely elaborated on the details of the types of flooring work to be done. It should have asserted its rights and should have examined all these questions and should have required Special Engineer to submit the data statements to enable it to finally dispose of the matter satisfactorily. It failed. The Chief Engineer, who presided over the meeting, did not invite the Committee to decide these questions. The reason is obvious. He had already taken a decision at the behest of others."

ಇದು ಬಹಳ ಅನ್ಯಾಯ, ಇದರಲ್ಲಿ ಬಹಳ ಲುಕ್ಸಾನಾಗಿದೆ ಎಂದು ಹೇಳಿದ್ದಾರೆ. ರೇಟ್ಸ್ ವಿಚಾರದಲ್ಲೂ ಕೂಡ ಬಹಳ ಜಾಸ್ತಿ ಎಂದು ಹೇಳುತ್ತಾರೆ. ಮೊದಲು 3 ಲಕ್ಷ 21 ಸಾವಿರ ಇದ್ದದ್ದು 5,33,942 ಆಗಿದೆ. page 113 para 79ನಲ್ಲಿ

"The Committee has ascertained the rates at which flooring has been done for institutions, offices and industrial concerns in Bangalore and also at the power house control room of Jog. On a comparison of those rates with the rates paid or payable to the contractor, it will be noticed that the cost of this flooring work is Rs. 77,277 more than what it should be. If the Department had carefully prepared the data rates and the quantities of flooring to be done, had given wide publicity to the tender notification and entered into correspondence with the leading manufacturers of tiles and had not insisted on manufacture at site, the Committee feels that this amount could have been easily saved. As usual there was bad planning and the matter was unnecessarily rushed through. The facts and circumstances of the case warrant an inference that all this was done to favour the contractor."

ಪ್ಯಾರಾ 83 ರಲ್ಲಿ ವಿಧಾನಸೌಧ ಕಟ್ಟಡಕ್ಕೆ purchase of junglewood planks,

scantlings, and reepers ಮಾಡುವಾಗಲೂ ಕೂಡ ಬಹಳ ಅನ್ಯಾಯ ನಡೆದಿದೆ. ಕಡಿಮೆ ಟೆಂಡರ್ ಕೊಟ್ಟವರನ್ನು ಬಿಟ್ಟು ಬಿಟ್ಟು ಹೈಯರ್ ರೇಟ್ ಕೊಟ್ಟಿರತಕ್ಕ ಅನೇಕ ನಿದರ್ಶನಗಳಿವೆ. ಅದನ್ನು ಕೂಡ ಕಮಿಟಿಯವರು ವಿಶದವಾಗಿ ಪರಿಶೀಲನೆ ಮಾಡಿ ತಪ್ಪನ್ನೆಲ್ಲಾ ಎತ್ತಿತೋರಿಸಿದ್ದಾರೆ. ಏಕೆ ಹೀಗೆ ಮಾಡುತ್ತೀರಿ ಎಂದು ಚೀಫ್ ಇಂಜಿನಿಯರು ಕೇಳಿದ್ದಾರೆ. ಅದಕ್ಕೆ ಸ್ಪೆಷಲ್ ಇಂಜಿನಿಯರಿಂದ ಸಮಾಧಾನಕರವಾದ ಉತ್ತರವೇ ಇಲ್ಲ.

ಆ ಮೇಲೆ ಈ ವಿಧಾನ ಸೌಧದ ಒಳಗೆ ಹಾಕಿರತಕ್ಕ ಮರಕ್ಕೆ ಮಾತ್ರ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರನ್ನು ಕೇಳಿ, ಅವರಿಂದ ಬೇಕಾದಷ್ಟು ತೆಗೆದುಕೊಂಡಿದ್ದಾರೆ. ಆದರೆ ಹೊರಗಡೆಗೆ ಬೇಕಾದಂಥ ಸೆಂಟರಿಂಗ್ ಮೆಟೀರಿಯಲ್ಸ್, ಪೋಲ್ಸ್ ಮುಂತಾದುವಕ್ಕೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರ ತಂಟೆಗೆ ಹೋಗಿಲ್ಲ. ಎಲ್ಲಿ ಅನುಕೂಲ ಸಿಂಧು ಎಂದು ಕಂಡು ಬರುತ್ತದೆಯೋ ಅಲ್ಲಿ ಸುಮ್ಮನಿದ್ದುಬಿಡುವುದು. ಹೀಗೆ ಮಾಡಿದ್ದಾರೆ. 117ನೇ ಪೇಜು 104ನೇ ಪ್ಯಾರಾದಲ್ಲಿ.

> "As already pointed out, there is no correspondence with the Forest Department on this subject. No attempt was made to see if supplies could be obtained from the Forest Deparment on more favourable terms. The Special Engineer evaded to reply the question whether the material purchased from Kempiah Sons &Co. was secondhand. It is also not correct to state that all the formalities were observed before resorting to local purchase."

ನಾನು ಮೊದಲೇ ಮನವಿ ಮಾಡಿಕೊಂಡೆ, ಮೆಸರ್ಸ್ ಉಭಯಕರ್, ಬೋರಯ್ಯ ಬಸವಯ್ಯ ಅಂಡ್ ಸನ್ಸ್; ಕೆಂಪಯ್ಯ ಅಂಡ್ ಸನ್ಸ್ ಇವರೆಲ್ಲಾ, they have played a prominent role in the construction of this Vidhana Soudha.

ಅವರಿಗೆ ಫೇವರ್ಡ್ ಟ್ರೀಟ್‌ಮೆಂಟ್ ಅಷ್ಟೇ ಅಲ್ಲ, ಹೆಚ್ಚು ದುಡ್ಡಿನ ಸಹಾಯ ಮತ್ತು ಕೇಳಿದಂಥ ರೇಟ್ಸು ಇವನ್ನೆಲ್ಲ ಕೊಟ್ಟಿರುವುದನ್ನು ಸಮಿತಿಯವರು ರುಜುವಾತು ಮಾಡಿದ್ದಾರೆ. ಇನ್ನೂ ಹೆಚ್ಚಿಗೆ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸಂಕ್ಷಿಪ್ತವಾಗಿ ತಿಳಿಸುತ್ತೇನೆ.

Air conditioning plant ಕೊಂಡುಕೊಳ್ಳುವ ವಿಷಯದಲ್ಲೂ ಕೂಡ, ಕ್ರಮದಲ್ಲಿ ಲೋಪದೋಷ ಇದೆ.

> "Their quotation was definitely lower than that of Blue Star Engineering Company."

ಅದನ್ನು ಬಿಟ್ಟು ಬಿಟ್ಟು, higher rates ಕೊಟ್ಟಿರುವುದನ್ನು ಎತ್ತಿ ತೋರಿಸಿದ್ದಾರೆ. ಜೊತೆಗೆ ಬೆಂಗಳೂರಿಗೆ ಏರ್ ಕಂಡಿಷನಿಂಗ್ ಪ್ಲಾಂಟ್ ಬೇಕೆ ಎನ್ನುವ ಪ್ರಶ್ನೆ ಕೂಡ ಇದೆ. ಈ ಊರಿನಲ್ಲಿ ಫ್ಯಾನ್ಸ್ ಕೂಡ ಬೇಕಾಗುವುದಿಲ್ಲ. ಅಂಥಾದ್ದರಲ್ಲಿ ಅದು ನಿಜವಾಗಿಯೂ ಅನಾವಶ್ಯಕವಾಗಿತ್ತು. ಹಣ ದುರ್ವಿನಿಯೋಗ ಪಡಿಸಿದ್ದಾರೆ ಎನ್ನುವುದರಲ್ಲಿ ಏನೂ ಸಂಶಯವಿಲ್ಲ.

ಆಮೇಲೆ ಲಿಫ್ಟ್ಸ್ ಕೊಂಡುಕೊಳ್ಳುವುದರಲ್ಲೂ ಕೂಡ ಸ್ಪೆಷಲ್ ಎಂಜಿನಿಯುರಿಗೂ, ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನವರಿಗೂ tug of war. ಸಾಧಾರಣವಾಗಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನ ಅನುಮತಿ ಪಡೆದು ಸರಿಯೇ, ಅಲ್ಲವೇ ಎಂದು ತಿಳಿದುಕೊಂಡು ಅವರಿಂದ ಸ್ಕ್ರೂಟಿನೈಸ್ ಮಾಡಿಸಿ ಮಾಡುವುದಕ್ಕೆ ಬದಲಾಗಿ ಸ್ಪೆಷಲ್ ಇಂಜನಿಯರೇ, ಸರ್ವಜ್ಞ ಎಂದು ತಿಳಿದುಕೊಂಡು ಮಾಡಿರತಕ್ಕ ಕೆಲಸ ವಿಚಿತ್ರವಾಗಿದೆ. ಅದು ಸ್ವಲ್ಪ ಅರ್ಥಗರ್ಭಿತವಾಗಿಯೂ ಇದೆ.

Purhase of casuarina poles. ಇದರಲ್ಲೂ ಕೂಡ ಕ್ರೂಕೆಡ್‌ವೇ ಏಕೋ ಗೊತ್ತಾಗುವುದಿಲ್ಲ. Purchase of steel racks ವಿಷಯದಲ್ಲಿ ಹೀಗೆ ಹೇಳಿದ್ದಾರೆ.

> "The whole procedure was highly objectionable. Without arriving at definite specifications, tenders were invited. After specifications were changed and finalized, fresh tenders should have been called, giving sufficient time for the submission of tenders. This leads to the impression that this extraordinary procedure was followed to favour particular firms and to exclude large-scale manufacturers."

ಹೀಗಾಗಿ, ಒಳ್ಳೆಯ well known firms ಬಿಟ್ಟು ಬಿಟ್ಟರು.

> "In the aforesaid letter dated 28th May 1955, the Special Engineer has stated that he was entering into a contract with Messrs. Sri Rama Metal Works as instructed by the Chief Engineer in person. This appears to be incorrect. In his letter dated 28th June 1955, the Chief Engineer asked the Special Engineer to examine whether the higher rate was justified by the extra metal required. It was stated that it was better to do the work according to the orginally quoted rate or Rs. 1-8-0 adding that the increase of rate might at the most be 0-2-0 per cubic foot... In the meanwhile Sri Rama Metal Works had done the work to the extent of 10943 C. ft. The Special Engineer requested approval for payment at Rs. 2-2-0, for this work......"

ಈ ರೀತಿ ಬೇಕಾದಷ್ಟು ರಿವೈಸ್ ಮಾಡಿರುವುದನ್ನು ಕೂಡ ಸಮಿತಿಯವರು ಹೇಳಿದ್ದಾರೆ.

(ಶ್ರೀ ಟಿ. ಮರಿಯಪ್ಪ.)

ಸಿಮೆಂಟ್ ರಿಜಿಸ್ಟರ್ಸ್ ವಿಚಾರದಲ್ಲೂ ಕೂಡ—

"The Committee is of the view that the account of cement requires a detailed investigation. It will be necessary to determine the excess of cement issued to work over the actual requirement according to specifications. It will also be necessary to determine whether the whole or any part of the 3850 bags of cement was received back from M/S. Kempiah Sons and Company. The question of the loan of cement has been examined in detail."

ಇದೇರೀತಿ ಇನ್ನು ದೊಡ್ಡ ದೊಡ್ಡ ಇರ್ರೆಗ್ಯೂಲ್ಯಾರಿ ಟೀಸ್‌ನ್ನ 16 ನೇ ಚಾಪ್ಟರ್ ನಲ್ಲಿ ಬಹಳ ವಿಶದವಾಗಿ ಪರಿಶೀಲನೆ ಮಾಡಿದ್ದಾರೆ.

ಆಮೇಲೆ ಇಟ್ಟಿಗೆ ಕೊಂಡುಕೊಳ್ಳುವುದರಲ್ಲಿ ಬಹಳ ಅಕ್ರಮವಾದ ರೀತಿಯನ್ನು ಅನುಸರಿಸಿದ್ದಾರೆ.

ಇನ್ನೊಂದು Employment of convict labour. ಸಾರ್ವಜನಿಕರಿಗೆ ತಿಳಿಸುವಾಗ convict labourನ್ನು ಇಟ್ಟುಕೊಂಡರೆ ಬಹಳ ಹಣ ಉಳಿಯ ಬಹುದು ಎಂದು ಹೇಳಿದರು. ಸಮಿತಿಯವರು ಎಲ್ಲ ವನ್ನೂ ಪರಿಶೀಲನೆ ಮಾಡಿನೋಡಿ ಅವರನ್ನು ಸೂಪರ್ ವೈಸ್ ಮಾಡುವುದಕ್ಕೆ ರಿಝರ್ವ್ ಪೋಲಿಸ್ ಹಾಕಿದ್ದ ರಲ್ಲ ಅದಕ್ಕೆ ಹೆಚ್ಚು ಹಣ ಖರ್ಚಾಗಿ ನಷ್ಟವಾಗಿದೆ ಎಂದು ಬರೆದಿದ್ದಾರೆ.

ಆ ಮೇಲೆ Interior Decorations ವಿಷಯ ಹೇಳಿದ್ದಾರೆ. ಯಾವುದಾದರೂ ಒಂದು ನೀತಿ, ನಿಯಮ, ನಿಬಂಧನೆ ಯಾವುದನ್ನೂ ಅನುಸರಿಸದೇ ಮಾಡಿದ್ದೂ ಮಾಡಿದ್ದೇ. ವಿಧಾನ ಸೌಧದ ಡಾಕ್ಯುಮೆಂಟರಿ ಮಾಡಿದ್ದಾರೆ. It is also a poor show ಎಂದು ಹೇಳಿದ್ದಾರೆ.

ಚಾಪ್ಟರ್ 17ರಲ್ಲಿ Transactions with Messrs. Kempiah and Sons ವಿಚಾರ ಪ್ರಸ್ತಾಪ ಮಾಡಿದ್ದಾರೆ. ವಿಧಾನ ಸೌಧಕ್ಕೂ ಅವರಿಗೂ ಏನು ಸಂಬಂಧ ? ಅಕೌಂಟೆಂಟ್ ಜನರಲ್‌ರವರ ಆಫೀಸಿನ ಕಟ್ಟಡ ಕಟ್ಟಿದಾಗ ಅವರು ಕಂಟ್ರಾಕ್ಟರಾಗಿದ್ದರು. ಅವರಿಗೆ 1,86,500 ರೂಪಾಯಿಗಳ ಅಡ್ವಾನ್ಸನ್ನು ಯಾರ ಅನುಮತಿಯೂ ಇಲ್ಲದೆ ಹೇಗೆ ಕೊಟ್ಟರು ? ಅವರೇನು ಸ್ಪೆಷಲ್ ಇಂಜಿನಿಯರ ಚಿಕ್ಕಪ್ಪನ ಮಗನೇ? ಹೀಗೆ ಸರ್ಕಾರದ ಹಣವನ್ನು ಸ್ವಂತ ಹಣದ ಹಾಗೆ ಉಪಯೋಗ ಮಾಡಿರುತ್ತಾರೆ. ಯಾವ ಒಂದು ಮುಂದಾಲೋಚನೆಯೂ ಇಲ್ಲ. ಇದು ಸಾರ್ವಜನಿಕರ ಹಣ ಎನ್ನತಕ್ಕ ಒಂದು ವಿವೇಚನೆ ಇಲ್ಲದೆ ಮಾಡಿರ ತಕ್ಕದ್ದು ಬಹಳ ಅನ್ಯಾಯ. ಈ ರೀತಿ ಮಾಡಬಾರ ದಾಗಿತ್ತು.

ಇನ್ನೊಂದು ವಿವರಣೆ ಕೊಟ್ಟಿದ್ದಾರೆ. ಸ್ಪೆಷಲ್ ಇಂಜಿನಿಯರು ಬಹಳ ಬುದ್ಧಿವಂತರು. 'This advance cannot be secured as advance under the P. W. D. Code, they were against the P.W.D. Code' ಎಂದು ಹೇಳಿದ್ದಾರೆ.

ಆಮೇಲೆ ಸಿಮೆಂಟ್ ಅಕೌಂಟ್ ಪರಿಶೀಲನೆ ಇದೇ ರೀತಿ ಮಾಡಿದ್ದಾರೆ. ಪೆಟ್ರೋಲ್ ಬಂಕು ಹಾಕುವು ದಕ್ಕೆ ಪರ್ಮಿಷನ್ ಕೊಟ್ಟಿರುವುದು ಬಹಳ ಅನ್ಯಾಯ. ಕಂಟ್ರಾಕ್ಟರು ಬಂದು ಎಲ್ಲೋ ಬಂಕು ಹಾಕಿದರೆ ಕಾಯುವವರು, ನೋಡುವವರು ಯಾರು? ಲಾರಿ ಬಂದು ಸಾಮಾನು ತೆಗೆದುಕೊಂಡು ಹೋಗುವಾಗ ಯಾವುದಾದರೂ ಸಾಮಾನು ಹೋದರೆ ಗತಿ ಯೇನು? ಅಕೌಂಟ್ ಸರಿಯಾಗಿಲ್ಲ. ಮೆಟೀರಿಯಲ್ಸ್ ಅಕೌಂಟ್ ಇಡುವುದರಲ್ಲಿ ಸರಿಯಾದ ಗಮನ ಕೊಟ್ಟಿಲ್ಲ. ಇದರಿಂದ ಅನ್ಯಾಯವಾಗಿದೆ, ಒಂದಕ್ಕೊಂದು ಹೊಂದಿ ಕೊಳ್ಳುವಹಾಗೆ ಅವಕಾಶಕೊಡಲು ಹೀಗೆ ಮಾಡಿ ದ್ದಾರೆ ಅದೇ ಮೂಲಕಾರಣ ಎಂದು ಹೇಳದೆ ವಿಧಿಯಿಲ್ಲ.

ಸ್ವಾಮಿ, ಆಮೇಲೆ ಉಳಿತಾಯದ ವಿಚಾರದಲ್ಲೂ ಕೂಡ ಸಮಿತಿಯವರು ಅನೇಕ ವಿಧವಾದ ಶಿಫಾರ್ಸು ಮಾಡಿದ್ದಾರೆ. ಸರ್ಕಾರದವರಾಗಲೇ ಕೆಲವನ್ನು ಒಪ್ಪಿದ್ದಾರೆ. ನಾನು ಅದನ್ನು ವಿಶೇಷವಾಗಿ ಪ್ರಸ್ತಾಪ ಮಾಡುವುದಿಲ್ಲ. ಮುಖ್ಯವಾಗಿ ಒಂದನ್ನು ಹೇಳುತ್ತೇನೆ. ಈಗಿರುವ ಪ್ರೋಗ್ರೆಸ್ ಬಹಳ ಕಡಮೆ, ಕೆಲವು ರಸ್ತೆ ಗಳಲ್ಲಿ ಜಲ್ಲಿ ಕಲ್ಲು ಬಿದ್ದಿವೆ. ಯಾರದೋ ಹಣವನ್ನು ಯಾರೋ ಉಪಯೋಗಿಸಿ ಹೆಸರು ತೆಗೆದುಕೊಳ್ಳುವುದು ನ್ಯಾಯವಲ್ಲ. ಹಣವಿಲ್ಲದೆ ಅಂದಾಜಿಗೆ ಮೀರಿ ಕೆಲಸ ಮಾಡಿಸುವುದು ಸರಿಯೆ? ಸಮಿತಿಯವರು ಶಿಫಾರ್ಸು ಮಾಡಿರುವ ಹಾಗೆ ಉಳಿತಾಯ ದೃಷ್ಟಿಯಿರಬೇಕು, ಹೊಸ ಎಸ್ಟಿಮೇಟ್ ಕೊಡುವುದು ಸೂಕ್ತವೆ ಎಂಬು ದನ್ನು ಆಲೋಚಿಸಬೇಕು.

ಕೊನೆಯಲ್ಲಿ ಎರಡು ಮೂರು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ. ಈ ವರದಿಯನ್ನು ಮಿಸ್ ಮೇಯೋ ಬರೆದ ಮದರ್ ಇಂಡಿಯಾ ವರದಿಗೆ ಹೋಲಿಸಿದ್ದಾರೆ. ಹಾಗೆ ಹೋಲಿಸ ಬಹುದೆ ? ಅವರು ಡ್ರೈನ್ ಇನ್‌ಸ್ಪೆಕ್ಟರ ಕೆಲಸಮಾಡಿದ್ದಾರೆ. ಇದು ಸರಿ ಯಲ್ಲ. ರಿಟೈರ್ಡ್ ಹೈಕೋರ್ಟ್ ಜಡ್ಜ್ most unpleasant duty ಮಾಡಿರುವಾಗ ಈ ರೀತಿ ಹೋಲಿಸುವುದು ಸರಿಯಲ್ಲ. ಬೇಕಾದಷ್ಟು ಜನ ಸರ್ಟಿಫಿಕೇಟ್ ಕೊಟ್ಟು ಕಾಗದ ಬರೆದಿದ್ದಾರೆಂದು ಹೇಳಿದರು. ಇದು ಬಹಳ ಹಳೆಯ ಪದ್ಧತಿ. ಮುನಿಸಿಪಾಲಿಟಿಗಳಲ್ಲಿ ಅಡ್ರೆಸ್ ಕೊಟ್ಟಾಗ ಹೇಳಬಹುದು. ಸಾರ್ವಜನಿಕ ಅಭಿಪ್ರಾಯ ಹೇಗಿದೆಯೆ ಎಂಬುದು ಅವರಿಗೆಗೊತ್ತಾಗಿದೆ. ಯಾವುದಕ್ಕೂ ಸಂಬಂಧಪಡದಿರುವವರು, ಆಸಕ್ತಿಯಿಲ್ಲ ದಿರುವವರು ಕೊಟ್ಟಿರುವ ಅಭಿಪ್ರಾಯವನ್ನು ನೋಡು ವುದು ಅವಶ್ಯಕ. ಬಾಂಬೆ ಇಂಡಿಯನ್ ಬಿಲ್ಡರ್ ಮತ್ತು ಸ್ಟೇಟ್ಸ್‌ಮನ್ ಎಡಿಟೋರಿಯಲ್ ಓದಬೇಕು. 21-3-1957ನೆಯ ತಾರೀಖಿನ ಸ್ಟೇಟ್ಸ್‌ಮನ್ ಪತ್ರಿಕೆಯ ಎಡಿಟೋರಿಯಲ್‌ನಲ್ಲಿ ಹೀಗೆ ಹೇಳಿದೆ.

"An Expensive Folly. People who know and like Bangalore are unlikely to forgive Mysore's former Chief Minister, Mr. Hanumanthaiya, for one thing—foisting on that beautiful and well planned city a leviathan, in the shape of a fulsomely ornamental Vidhana Soudha completely out of character with the rest of Bangalore. Now it seems that building can be criticized on many other scores. The Report of the Inquiry Committee on the Soudha is startling

because it shows how financial checks and balances can be by-passed and the bureaucracy completely overruled by Ministerial high-handedness. The first estimate for the building considered by the Government was Rs. 23 lakhs. This was felt to be too much in relation to the resources of the State and Rs. 10 lakhs was thought a more appropriate figure. The total outlay on the Vidhana Soudha undertaken will be more than Rs. 180 lakhs and that after a saving of Rs. 20 lakhs effected through recommendations of the Committee.

How this was possible at a time when the State had to borrow to meet its normal expenditure makes a remarkable story. Unrealistic, 'unworkable abstract' estimates were prepared; major deviations from even those, the Committee says, were made by the Chief Minister 'without any sanction and regardless of cost'. Since it is not at all comforting to think that such reckless squandering of public money can go on despite post-audits and financial scrutiny, the recommendations of the Committee deserve consideration by all Governments, State and Central. Projects of such magnitude, it is advised, should never be undertaken departmentally but given on contract; stringent methods of financial control, supervision and keeping of accounts should be observed; and the arbitrary orders of individual Minister should never be taken to be the orders of a Government.

No democracy can function if the bureaucracy is not sufficiently strong and honest to stand up to Ministers and insist on correct practice and procedure. It is in some ways unfortunate that officers, weak though they were, will now have to answer for things they did at least in the partial belief that they were carrying out Governmental orders. Mr. Hanumanthaiya's preliminary reply is unconvincing and his accusation that the motive of publication of the Report now is political seems ill-considered, if only because publication before the election would have been much more damaging to the party and also to himself."

ಸ್ವಾಮಿ, ಮಾನ್ಯಮಿತ್ರರು "ಸಕಾಳ" ಎಂಬ ಮರಾಠಿ ಪತ್ರಿಕೆಯು ಸಮಿತಿಯು ಎತ್ತಿರುವ ಅಂಶಗಳನ್ನು ಸಮರ್ಥಿಸಿ ಲೇಖನ ಬರೆದಿದೆಯೆಂದು ಹೇಳಿದರು. ವಿಧಾನಸೌಧ ನಿರ್ಮಾಣವಾದ ಮೇಲೆ ಬೇಕಾದಷ್ಟು ಬಾಡಿಗೆ ಉಳಿಯುತೆಂದು ಹೇಳಿದ್ದಾರೆ; 50 ಸಾವಿರ ರೂಪಾಯಿಗಳು ಉಳಿಯಿತೆಂದು ನಾನೂ ಹೇಳಿದೆ. ಇದೇನೂ ಅಂಥ ದೊಡ್ಡವಾದವಲ್ಲ.

ಇನ್ನೊಂದು ವಿಚಾರ. ಇದು ನಾನ್-ಪ್ಲಾನ್ ಪ್ರಾಜೆಕ್ಟ್, ಮೊದಲನೆಯ ಅಥವಾ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಲ್ಲ. ಇದಕ್ಕೆ ಇಂಡಿಯಾ ಸರ್ಕಾರದವರು ಹಣಕೊಡುವುದಿಲ್ಲ. ಬ್ಲಾರೋಡ್ ಫಂಡ್ಸಿನಿಂದ ಈ ಕಟ್ಟಡ ಕಟ್ಟಿದೆ. ಈ ಸಂಬಂಧವಾದ ಸಾಹಿತ್ಯವೇನಿದೆಯೋ ಅದನ್ನು ನಾನು ಹಣಕಾಸಿನ ಮಂತ್ರಿಯಾದಾಗ ನೋಡಿದೆ. ಆ ಸಾಲ, ಈ ಸಾಲ ಎಂದು ತೆಗೆದುಕೊಂಡಿಲ್ಲ, ನಮ್ಮಲ್ಲಿದ್ದ ಇನ್ಷೂರೆನ್ಸ್ ಫಂಡ್‌ನಿಂದ ತೆಗೆದುಕೊಂಡಿದ್ದಾರೆ, ಡಿಪಾಜಿಟ್ಸ್, ಪಾರ್ಟಟರ್ಮ್ ಡಿಪಾಜಿಟ್ಸ್ ಈ ಹಣವನ್ನೆಲ್ಲಾ ಉಪಯೋಗಿಸಿದ್ದಾರೆ. ಆದರೂ ಇದು ಬ್ಲಾರೋಡ್ ಫಂಡ್ಸ್ ಎಂದು ನಾವು ಭಾವಿಸಿದ್ದೇವೆ.

Sri H. S. METGUD.—(Bail-Hongal) On a point of information, Sir. The whole discussion is going on about the Vidhana Soudha. The construction work of the Vidhana Soudha was going on for the last three or four years. May I know how the House then sitting accorded its sanction for the expenditure of this amount?

Sri T. MARIAPPA.—I have already answered that part of the question. Perhaps, the Hon'ble Member was not present in the House then.

Sri H. S. METGUD.—If the Hon'ble Finance Minister enlightens the House on that point, the House can follow the discussion more intelligibly.

ಶ್ರೀ ಟಿ. ಮರಿಯಪ್ಪ.—ನಾನು ಈಗಾಗಲೇ ಇದಕೆ ಉತ್ತರ ಹೇಳಿದ್ದೇನೆ. ಈ ಸಭೆಯಲ್ಲಿ ಆ ಡಿಮ್ಯಾಂಡ ಓಟಿಗೆ ಬಂದಾಗ ವಿರೋಧಿಸಿ ಟೀಕೆ ಮಾಡಿದ್ದೇವೆ ಆದರೆ ಕಾಂಗ್ರೆಸ್ ಪಕ್ಷದ ಶಿಸ್ತು ಸಂಪ್ರದಾಯಗಳಿಗೆ ಅನುಸಾರವಾಗಿ ಟೀಕೆಮಾಡಿಯೂ ಸಹ ಆ ಟೋಕನ್ ಗ್ರಾಂಟುಗಳಿಗೆ ಒಪ್ಪಿಗೆ ಈ ಸಭೆಯಲ್ಲಿ ಕೊಟ್ಟಿದೆ.

Sri H. S. METGUD.—If that is so, can this House again discuss the same thing which has already been voted upon once?

Sri T. MARIAPPA.—My Hon'ble Friend is entirely wrong in the assumption that he makes. We are not going to vote this amount again, but the question is how that money was spent, whether it was spent properly, whether there was any misappropriation or misapplication of the money, etc. All these points are relevant to the discussion now, because the Government is answerable to this House for this expenditure.

Sri H. S. METGUD.—When once the House voted the amount and accepted the expenditure, the whole question came to an end and so unless the House agrees to the reopening of the question, the question cannot come up before the House again.

Mr. SPEAKER.—I point out what exactly is the position. Certain amounts had been sanctioned by this House for building the Vidhana Soudha. So, how the money was spent, what was the nature of the expenditure, what was the nature of the appropriation or re-appropriation, etc., are all relevant to the discussion and they can be discussed here.

Sri H. S. METGUD.—The whole Vidhana Soudha Enquiry Gommittee Report is not before the House for discussion.

Mr. SPEAKER.—As I told the House earlier, the whole Report is not officially before the Assembly, but it has somehow crept in by the backdoor and it is before the House.

ಶ್ರೀ ಟಿ. ಮರಿಯಪ್ಪ.—ಸ್ವಾಮಿ, ಕೊನೆಯದಾಗಿ ಒಂದು ವಿಷಯವನ್ನು ಪ್ರಸ್ತಾಪಿಸಿ ಹೇಳುವದರ ಮೊದಲು, ಇಷ್ಟು ದೀರ್ಘವಾದ ಭಾಷಣ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮ್ಮ ಕ್ಷಮಾಪಣೆಯನ್ನು ಕೇಳುತ್ತೇನೆ. ಪ್ರಪಂಚದಲ್ಲಿಯ ಅನೇಕ ಸಭಾಭವನದ ಕಟ್ಟಡಗಳನ್ನು ನೋಡಿ ತಮ್ಮ ಮನಸ್ಸಿನಲ್ಲಿ ಉಂಟಾದ ಚಿತ್ರದಂತೆ ವಿಧಾನಸೌಧವನ್ನು ಕಟ್ಟಿಸಿರುವುದು ದುಂಬಿಯು ಪುಷ್ಪದಿಂದ ಪುಷ್ಪಕ್ಕೆ ಹೋಗಿ ಜೇನು ತುಪ್ಪವನ್ನು ಶೇಖರಿಸುವಂತೆ ಇದೆ ಎಂದು ಹೇಳಿದರು. ಇದನ್ನೆಲ್ಲಾ ಪರಿಶೀಲಿಸಿ ಈಚೆಗೆ ನಡೆದದ್ದನ್ನೆಲ್ಲಾ ನೋಡಿದರೆ, ದುಂಬಿ ಎಲ್ಲಾ ಹೂವುಗಳ ಮೇಲೆ ಕುಳಿತಿದ್ದುದು ಕಂಡಿದೆ. ಆದರೆ ಜೇನತುಪ್ಪವೆಲ್ಲವನ್ನೂ ಅವರೇ ಕುಡಿದುಬಿಟ್ಟಿದ್ದಾರೆ, ಬರೀ ಸಿಪ್ಪೆಯನ್ನು ಮಾತ್ರ ಬಿಟ್ಟುಹೋಗಿದ್ದಾರೆ ಎಂದು ಕಂಡುಬರುವುದು ಎಂಬುದನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

* ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಇಲಾಖೆಯ ಮಂತ್ರಿಗಳು).—ಸ್ವಾಮಿ, ಈ ವರ್ಷದ ನಾಲ್ಕು ತಿಂಗಳುಗಳ ಮಟ್ಟಿಗೆ ಸಂಬಂಧಿಸಿದ ಬಜೆಟ್ಟಿಗೆ ಮಂಜೂರು ಮಾಡಬೇಕಾಗಿದ್ದ ಚರ್ಚೆಯ ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅನೇಕ ಅಂಶಗಳನ್ನು ಚರ್ಚೆಮಾಡಿದ್ದಾರೆ. ಅವುಗಳ ಪೈಕಿ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ, ವಿಚಾರ ಕುರಿತು ಸರ್ಕಾರದ ಪರವಾಗಿ ಒಂದೆರಡು ಮಾತುಗಳನ್ನು ಆಡಲು ಅಪ್ಪಣೆ ಕೇಳಿಕೊಳ್ಳುತ್ತೇನೆ. ಸಾಮಾನ್ಯವಾಗಿ ಮಾನ್ಯ ಸದಸ್ಯರುಗಳು ಇನ್ನಿತರ ವಿಷಯಗಳ ಬಗ್ಗೆ ಏನೇನು ಸೂಚನೆಗಳನ್ನು ಮಾಡಿದ್ದಾರೆಯೋ ಏನೇನು ಆಕ್ಷೇಪಣೆಗಳನ್ನು ಎತ್ತಿದ್ದಾರೆಯೋ ಅವುಗಳಿಗೆಲ್ಲಾ ಸರ್ಕಾರದ ಅಭಿಪ್ರಾಯವನ್ನು ತಿಳಿಸಿ ಉತ್ತರ ಹೇಳುವದು ಅಗತ್ಯವಾಗಿದೆ ಎಂದು ಕಾಣುತ್ತದೆ.

ಮೊದಲನೆಯದಾಗಿ ಬೆಂಗಳೂರು ನಗರದಿಂದ ಬಂದ ಮಾನ್ಯಸದಸ್ಯರು ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಸರ್ಕಾರದವರು ಉದಾಸೀನ ಮಾಡಿದ್ದಾರೆ ಎಂದು ಆಕ್ಷೇಪಣೆ ಮಾಡಿದರು. ಹಾಗೆ ಏನೂ ಇಲ್ಲ. ನಲ್ಲಿಯಲ್ಲಿ ನೀರು ದೊರೆಯುವುದಿಲ್ಲ. ಓವರ್‌ಹೆಡ್ ಟ್ಯಾಂಕ್ ಮಾಡಬೇಕೆಂದು ಶ್ರೀ ಮಾಸ್ಕರ್‌ನಾಸ್‌ರವರು ಹೇಳಿದರು. ಈ ಕೆಲಸವನ್ನು ಶೀಘ್ರವಾಗಿ ಮಾಡಲಾಗುವದು.

ಇನ್ನು ಎರಡನೆಯ ವಿಷಯವನ್ನು ಹೇಳಿದವರು ಉತ್ತರ ಕರ್ನಾಟಕದಿಂದ ಬಂದಿರುವ ಸದಸ್ಯರು. ಅವರು ಹೇಳಿದ್ದು ಸಾಮಾನ್ಯವಾಗಿ ರಸ್ತೆ ಸೇತುವೆಗಳ ರಚನೆ, ನೀರಾವರಿ ಕಾಮಗಾರಿಗಳಿಗೆ ಗಮನ ಕೊಡಬೇಕು, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ವಿಚಾರದಲ್ಲಿ ಕೆಲಸ ನಡೆಯುತ್ತಿಲ್ಲ, ಅದನ್ನು ಮುಂದುವರಿಸಬೇಕೆಂದು ಹೇಳಿದರು. ಈ ಎಲ್ಲ ಕೆಲಸಗಳನ್ನೂ ಸರಿಯಾಗಿ ಮಾಡಲಾಗುವುದು ಎಂಬುದರಲ್ಲಿ ಎಳ್ಳಷ್ಟೂ ಸಂಶಯಪಡಕೂಡದೆಂದು ಅವರಿಗೆ ನಾನು ತಿಳಿಸಲು ಬಯಸುತ್ತೇನೆ.

ವಿಧಾನ ಸೌಧ ವಿಷಯದ ಚರ್ಚೆಯಲ್ಲಿ ಬಂದಿರುವ ಪ್ರತಿಯೊಂದು ಅಂಶಕ್ಕೂ ಶ್ರೀ ಮರಿಯಪ್ಪನವರು ಈಗಾಗಲೇ ಉತ್ತರಕೊಟ್ಟಿದ್ದಾರೆ. ಒಂದೆರಡು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಶ್ರೀ ಹನುಮಂತಯ್ಯನವರು ವಿಧಾನ ಸೌಧವನ್ನು ಕಟ್ಟಿಸಿ ಕೀರ್ತಿ ಪಡೆದುಕೊಂಡಿದ್ದೇನೆ ಎಂದು ತಿಳಿದುಕೊಂಡು ಈ ವಿಷಯವನ್ನು ಪ್ರಸ್ತಾಪಿಸಿ ವರದಿಗೆ ಉತ್ತರ ಹೇಳಿದರು. ಇದನ್ನು ಪ್ರಸ್ತಾಪಮಾಡುವ ಕಾರಣವಿದ್ದಿಲ್ಲ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ವಿಷಯದ ಬಗ್ಗೆ ನಾನು ಹೇಳುತ್ತೇನೆ. ವಿಧಾನ ಸೌಧ ವಿಚಾರಣಾ ಸಮಿತಿಯ ವರದಿಯು ಹಿತ್ತಲ ಬಾಗಿಲಿನ ಮೂಲಕ ಬಜೆಟ್ ಮೇಲಿನ ಚರ್ಚೆಗೆ ಬಂದು ಸೇರಿದುದು ವ್ಯಸನಕರ ಎಂದು ಹೇಳುತ್ತೇನೆ. ಎದುರುಪಕ್ಷದ ನಾಯಕರಾದ ಶ್ರೀ ಇಮಾಮ್ ಅವರು ಹಣಕಾಸಿನ ವಿಷಯದಲ್ಲಿ ಹತೋಟಿ ಇರಬೇಕು ಎಂಬ ವಿಷಯವನ್ನು ಪ್ರಸ್ತಾಪಮಾಡಿ ಏನು ಟೀಕೆ ಮಾಡಿದರೋ ಆ ಒಂದು ಅಂಶಕ್ಕೆ ಚರ್ಚೆಯಲ್ಲಿ ಉತ್ತರಕೊಟ್ಟಿದ್ದರೆ ಸಾಕಾಗಿತ್ತು. ಆದರೆ ಹನುಮಂತಯ್ಯನವರ ಉದ್ದೇಶ ಏನು ಇದೆಯೋ ಗೊತ್ತಾಗುವುದಿಲ್ಲ. ವರದಿಯು ಪ್ರಕಟವಾದ ಪ್ರಾರಂಭದಲ್ಲಿಯೇ ವಿವರವಾದ ಹೇಳಿಕೆ ಕೊಟ್ಟು, ನಾನು ಮಹಾಕಾರ್ಯ ಸಾಧಿಸಿದ್ದೇನೆ ಸಮಿತಿ ತಮ್ಮನ್ನು ಹೊಗಳಬೇಕಾಗಿತ್ತು ಆದರೆ ಬೈದಿದೆ ಎಂದು ತೋರಿಸಬೇಕು ಎಂಬ ಬುದ್ಧಿವಂತಿಕೆಯನ್ನು ಅವರು ಮಾಡಿದರು. ಆದರೆ ಅದು ನಡೆಯಲಿಲ್ಲ. ವರದಿಯು ಪ್ರಕಟವಾಗುವ ಹೊತ್ತಿಗೆ ತಮ್ಮ ಹೇಳಿಕೆ ಸಿದ್ಧಪಡಿಸುವುದು, ಭಾಷಣ ಮಾಡುವ ಮುಂಚೆ ಭಾಷಣ ಮಾಡುತ್ತೇನೆ ಎಂದು ಪತ್ರಿಕಾಪ್ರತಿನಿಧಿಗಳಿಗೆ ತಿಳಿವಳಿಕೆ ಕೊಡುವುದು, ವಿದ್ಯಾರ್ಥಿನಿಲಯದಿಂದ ಕೆಲವು ವಿದ್ಯಾರ್ಥಿಗಳನ್ನು

ಕರೆಸಿ ಕೂಡಿಸಿ ಭಾಷಣ ಮುಕ್ತಾಯವಾದ ನಂತರ ಚಪ್ಪಾಳೆ ಕುಟ್ಟಿಸಿ ಧೂಳೆಬ್ಬಿಸಲು ಪ್ರಯತ್ನಿಸಿದರು. ಟೀಕೆಮಾಡಿ ಬಾಯಿ ಮುಚ್ಚಿಸುವ ಹಾಗೆ ಮಾಡಬೇಕೆಂದು ಪ್ರಯತ್ನಿಸಿದರು.

4-30 P. M.

Sri B. P. KADAM (Ankola-Karwar).— On a point of order. Is making allegations and insinuations of this personal nature warranted, Sir ?

Mr. SPEAKER.—It is no point of order. At the most, it is a point of information.

Sri B. P. KADAM.—Insinuations ?

Mr. SPEAKER.—Sometimes insinuations are made ; it is unfortunate.

Sri K. HANUMANTHAIYA (Ramanagaram).—All that I can say is, he has the right to make allegations. This is not the first time ; I am accustomed to that. The debate is concluding. I may kindly be permitted to reply to these on the Appropriation Bill. I will not indulge myself in any allegations, but I will only meet some points.

Sri N. C. NAGAIAH REDDY (Gauribidanur).—As Chairman of the Estimates Committee, I may also be permitted to speak after Sri Hanumanthaiya speaks because he has made some personal allegations against the Committee.

Mr. SPEAKER.—Hon'ble Member may kindly resume his seat. I understand what he means. I am going to deal with the matter after the Budget is finished. I will deal about the scope of the debate on Appropriation Bill. Unless a new point is made out or it is a new argument, I cannot, under the rules, allow members to discuss the same points and advance the same arguments on the Appropriation Bill. I have just now received the necessary authorities and I am going to read before the House and inform it about the scope of the debate on the Appropriation Bill.

Sri N. C. NAGAIAH REDDY.—Anyhow, I may be permitted to speak after he (Sri K. Hanumanthaiya) speaks tomorrow.

(*Laughter*)

Sri J. MOHAMED IMAM.—In view of the importance that the debate has assumed, I wanted a day to be set apart to discuss about charges and counter-charges. If you permit me, I want to move a motion, 'that the Report may be taken into consideration.'

Mr. SPEAKER.—I am not free, as the Leader of the Opposition knows, in this respect. I am not free unless the Report is placed on the Table of the House and the Leader of the House allocates some time for discussion. Unless that is done, I am helpless. So, I cannot have any debate on the Report. I can only say that it has been sufficiently discussed and it will serve no useful purpose by discussing it over again.

*ಶ್ರೀ ಹೆಚ್. ಕೆ. ವೀರಣ್ಣಗೌಡ.—ನಾನು ಬಡ್ಜೆಟ್ಟಿನ ವಿಚಾರವಾಗಿ ಹೆಚ್ಚಿಗೆ ಏನನ್ನೂ ಹೇಳಬೇಕಾಗಿಲ್ಲ. ಈಗಾಗಲೇ ನನ್ನ ಮಿತ್ರರಾದ ಮರಿಯಪ್ಪನವರು ಹೇಳಿದ್ದಾರೆ. ಆದ್ದರಿಂದ ನಾನು ಈ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಎಸ್ಟಿಮೇಟ್ಸು ತಿದ್ದುಪಡಿ ಆಗಿರತಕ್ಕ ವಿಷಯಗಳಲ್ಲಿ ಶ್ರೀ ಹನುಮಂತಯ್ಯನವರು ಏನು ಹೇಳಿದ್ದಾರೋ ಅದಕ್ಕೆ ಸಂಬಂಧಪಟ್ಟಂತೆ ಈ ಅಂದಾಜುಗಳು ಏಕೆ ತಿದ್ದುಪಡಿಯಾದವು ಎಂಬುದಕ್ಕೆ ಕಾರಣವನ್ನು ತೋರಿಸುವುದೇ ನನ್ನ ಆಶಯವಾಗಿದೆ. ಅನೇಕ ಕಡೆಗಳಲ್ಲಿ ಯಾವ ಕಾಮಗಾರಿ ಮಾಡಬೇಕಾದರೂ ಅದಕ್ಕೆಲ್ಲ ಸರಿಯಾದ ಅಂದಾಜು ಇಟ್ಟು ಮಾಡುತ್ತಾರೆ. ಮೊದಲು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆದ ಮೇಲೆ ಅನಂತರ ಟೆಕ್ನಿಕಲ್ ಸ್ಯಾಂಕ್ಷನ್ ಆಗಿ ಕೆಲಸ ಆರಂಭಿಸಬೇಕು. ಯಾವುದಾದರೂ ಒಂದು ಅಂದಾಜನ್ನು ಮೂರು ಅಡಿಯಿಂದ ಆರು ಅಡಿಗೋ; ನಾಲ್ಕು ಅಡಿಯಿಂದ ಆರು ಅಡಿಗೋ ಅಥವಾ ಹತ್ತು ಅಡಿಗೋ ವ್ಯತ್ಯಾಸ ಮಾಡಬೇಕಾದರೆ ಎಸ್ಟಿಮೇಟು ರಿವೈಸು ಆಗುತ್ತದೆ. ಹಾಗೆಯೇ ಇವೊತ್ತು ಯಾವುದಾದರೂ 50 ಅಡಿ ಎತ್ತರವನ್ನು 40 ಅಡಿಗೆ ಕಡಿಮೆ ಮಾಡಬೇಕಾದರೆ, ವ್ಯತ್ಯಾಸ ಸುಮಾರು ಹತ್ತು ಅಡಿಯಾದರೂ ಕೂಡ ಆಗಲೂ ಹಿಂದಿನ ಎಸ್ಟಿಮೇಟು ಯಾವಾಗ ಆಯಿತು ಮುಂತಾದುವುಗಳನ್ನು ಸರಿಯಾಗಿ ನೋಡಿ ರಿವೈಸು ಮಾಡದಿದ್ದರೆ ಸಾಧ್ಯವೇ ಇಲ್ಲ. ಪರಿಸ್ಥಿತಿ ಹೀಗಿರುವಾಗ, ಇಲ್ಲಿ ಈ ಕಟ್ಟಡವನ್ನು ಮಾಡುವುದಕ್ಕೆ ಮೊದಲು ಸರಿಯಾದ ಅಂದಾಜೇ ಇರಲಿಲ್ಲ. ಮತ್ತು ಮೊದಲು ಈ ಕಟ್ಟಡ 23 ಲಕ್ಷದಲ್ಲಿ ಆಗಬೇಕೆಂದಿತ್ತು. ಆಮೇಲೆ ಕೆಲಸ ಆರಂಭವಾದ ಮೇಲೆ 50 ಲಕ್ಷ, 60 ಲಕ್ಷ, 70 ಲಕ್ಷ, 130 ಲಕ್ಷ ಹೀಗಾಗಿ ಈಗ 180 ಲಕ್ಷಕ್ಕೆ ಬಂದಿದೆ. ಹೀಗೆ ಕೆಲಸಗಳು ಆದಾದ ಹಾಗೆಲ್ಲ ಈ ರೀತಿ ಸರ್ಕಾರದ ಹಣ ವೆಚ್ಚ ಮಾಡಿದರೆ ಇವನ್ನು ಏನೆಂದು ಹೇಳಬೇಕೋ ನನಗೇನೂ ತೋಚುವುದಿಲ್ಲ. ಸರ್ಕಾರ ಯಾವುದಾದರೂ ದೊಡ್ಡ ಕಾಲುವೆಗಳನ್ನು ಮಾಡಲು ಕೆಲಸ ಆರಂಭ ಮಾಡಬೇಕಾದರೆ ಮೊದಲು ಹತ್ತು ಅಡಿ ಪಾಯ ತೆಗೆದು ಸರಿಯಾದ ನೆಲ ಸಿಕ್ಕದೆ ಇದ್ದರೆ ತಳಹದಿಯನ್ನು ಮತ್ತೆ ಎಂಟು ಅಡಿ ತೆಗೆಯಬೇಕಾದರೆ ಸರ್ಕಾರಕ್ಕೆ ಸರಿಯಾದ ರುಜುವಾತು ತೋರಿಸಿ ಅವರಿಂದ ಸ್ಯಾಂಕ್ಷನ್ ಪಡೆದು ಅನಂತರ ಕೆಲಸಕ್ಕೆ ಆರಂಭಿಸಬೇಕು. ಇಲ್ಲಿ ಏನಾಗಿದೆ ಎಂದರೆ ಅಂದಾಜುಗಳೇ ಇರಲಿಲ್ಲ. ಕಾರ್ಯ ಆರಂಭವಾದ ಒಂದು ಎರಡು ವರ್ಷಗಳ ನಂತರ 50 ಲಕ್ಷದಿಂದ

(ಶ್ರೀ ಎಚ್. ಕೆ. ವೀರಣ್ಣಗೌಡ.)

150 ಲಕ್ಷ ಈ ರೀತಿ ಊಹೆಯಾದಾಗಲೆಲ್ಲಾ ಅಂದಾಜನ್ನು ಬಡಾಯಿಸಿ ಕೆಲಸ ಮುಂದುವರಿದಹಾಗೆಲ್ಲ ಅಂದಾಜುಗಳನ್ನು ಪುನಃ ಪರಿಶೀಲಿಸಲಾಗಿದೆ. ಹೀಗೆ ಈ ರೀತಿಯಾದ ಪುನಃ ಪರಿಶೀಲನೆಗೂ ಸಕಾರಣಗಳನ್ನಿತ್ತು ಅಂದಾಜುಗಳ ಪುನಃ ಪರಿಶೀಲನೆಗೆ ಸರ್ಕಾರದ ಮಂಜೂರಾತಿ ದೊರಕಿದ ಮೇಲೆ ಕೆಲಸ ಮಾಡುವುದಕ್ಕೂ ವ್ಯತ್ಯಾಸವಿಲ್ಲವೇ ಎಂಬುದನ್ನು ತಿಳಿದುಕೊಳ್ಳದೆ ಈ ರೀತಿ ತಪ್ಪಾಗಿದೆ ಎಂದು ಹೇಳಿದ್ದಾರೆ.

ಎಂಜನೀಯರುಗಳಿಗೆ ಬೆನ್ನುತಟ್ಟಿ, ಸಮಿತಿಯವರು ತಮ್ಮ ಶತ್ರುಗಳೆಂದು ಹೇಳಿರುವುದನ್ನು ನೋಡಿದರೆ ಇದರಲ್ಲಿ "I smell the rat" ಎನ್ನುವಹಾಗೆ—ಕನ್ನಡದಲ್ಲಿ ಕೆಲವರು ಹೇಳುವಂತೆ "ವಡೇವಾಸನೆ" ಎಂದು - ಇದರಲ್ಲೇನೋ ಅನುಮಾನವಿದೆ ಎಂದು ತಿಳಿಯುತ್ತದೆ. ಅನಾವಶ್ಯಕವಾಗಿ ಏಕೆ ಇಷ್ಟು ಆತುರವಾಗಿ ಇಲ್ಲಿ ಈ ರೀತಿ ದ್ರವ್ಯವನ್ನು ಖರ್ಚು ಮಾಡಬೇಕಾಗಿತ್ತೋ ನನಗೆ ಅರ್ಥವಾಗುವುದಿಲ್ಲ. ಸಮಿತಿಯ ವರದಿ ಬಂದ ತತ್‌ಕ್ಷಣವೇ ಈ ರೀತಿ ಸಮರ್ಥನೆ ಮಾಡಿಕೊಂಡು ಅಧಿಕಾರಿಗಳನ್ನು ಹೊಗಳಿರುವುದನ್ನು ನೋಡಿದರೆ "ಎತ್ತು ಹಾರುವ ಮುನ್ನ ಗೋಣಿ ಹಾರಿತು" ಎನ್ನುವ ಹಾಗೆ ಆಗಿದೆ.

ಈಗಾಗಲೇ ಈ ವಿವರಗಳ ವಿಷಯದಲ್ಲಿ ಅನೇಕ ವಿವರಗಳನ್ನು ಕೊಟ್ಟು ಶ್ರೀ ಮರಿಯಪ್ಪನವರು ಸಾಕಾದಷ್ಟು ಈಗಾಗಲೇ ಹೇಳಿದ್ದಾರೆ. ಅಲ್ಲದೆ ಈ ಕಟ್ಟಡದ ಕೆಲಸವಾಗುತ್ತಿದ್ದಾಗ ಅಲ್ಲಿಯ ಆ ಇಂಜನೀಯರುಗಳು ಕೆಲಸ ಮಾಡುತ್ತಿದ್ದರೂ ಇವರೇಕೆ 24 ಗಂಟೆಗಳ ಕಾಲವೂ ಇಲ್ಲೇ ಕೆಲಸ ಮಾಡುತ್ತಿದ್ದು ಯದ್ವಾತದ್ವಾ ಬದಲಾವಣೆಗಳನ್ನುಮಾಡಿ ಈ ರೀತಿ ಚೀಫ್ ಮಿನಿಸ್ಟರೆಂಬ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ರೀತಿಯಾಗಿ ಅಧಿಕಾರಿಗಳು ಹೇಗೆ ಮಾಡಿದರೆಂಬುದರ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಸಿದ್ಧವಾಗಿದೆ. ಕಮಿಟಿಯವರು ಏನೋ ಒಂದು ಅಭಿಪ್ರಾಯಕ್ಕೆ ಬಂದಿರಬೇಕು ಮತ್ತು ಒಂದು ಪಕ್ಷಕ್ಕೆ ಸೇರಿದಂತೆ ಬರೆದಿದೆ ಎಂದು ಹೇಳುವುದು ಸರಿಯಲ್ಲ.

ವರದಿಯನ್ನು ಅನುಸರಿಸಿ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳ ಸಮಜಾಯಿಷಿ ಕೇಳಿರುವುದಾಗಿಯೂ, ತಪ್ಪು ಗಮನಕ್ಕೆ ಬಂದಲ್ಲಿ ಈ ಸಂಬಂಧದಲ್ಲಿ ಪೂರ್ತಿಯಾಗಿ ಸರ್ಕಾರ ಮುಂದುವರಿಯುವುದು ಎಂಬುದನ್ನು ಅಧಿಕಾರಿಗಳೂ ಶ್ರೀ ಹನುಮಂತಯ್ಯನವರೂ ತಿಳಿದುಕೊಳ್ಳಬೇಕು. ಇಷ್ಟೆಲ್ಲಾ ಮಾಡಿ ಈ ವರದಿಯವರು ಈ ಕಟ್ಟಡವನ್ನು ನೋಡಿ ಸಂತೋಷಪಡಲಿಲ್ಲವಲ್ಲ ಎಂದು ಹೇಳುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಈ ರೀತಿಯಾಗಿ ಹೊಗಳಿಕೆಯ ಮಾತುಗಳನ್ನು ಬರೆಯದೆ ಈ ರೀತಿ ಆರೋಪಣೆಗಳನ್ನು ಮಾಡಿದ್ದಾರೆಂದು ಸಣ್ಣಪುಟ್ಟ ಮಾತುಗಳನ್ನಾಡುವುದು ಸಾಧುವಾದುದಲ್ಲ. ಹನುಮಂತಯ್ಯನವರೇ ಹೇಳಿದ ಹಾಗೆ, ಒಳ್ಳೆಯ ವಿಷಯವನ್ನೇ ಸಮಿತಿಯವರು ಬರೆದಿದ್ದರೆ ಅವರೂ ಒಳ್ಳೆಯವರಾಗುತ್ತಿದ್ದರು. ಆದರೆ ಅವರು ಹಾಗೆ ಬರೆಯಲು ಹೋಗಲಿಲ್ಲ.

ಶ್ರೀ ಕೆ. ಹನುಮಂತಯ್ಯ.—ಹಾಗೆಹೇಳಲಿಲ್ಲವೆಂದು ಸಭೆಯವರಿಗೆ ಗೊತ್ತಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲಂಕಾರದ ವಿಷಯವಾಗಿ ಹೇಳುತ್ತಾ, ಕೆಲವು ಕೈಗಾರಿಕೆ ಸಂಸ್ಥೆಗಳಿಂದ ಸರ್ಕಾರಕ್ಕೆ ಹಣ ಬಂದಿದೆ, ಹಿಂದೆ ಈ ವಿಷಯವಾಗಿ ಕೈಗೊಂಡಿದ್ದ ಕ್ರಮಗಳು ಪೂರ್ತಿಗೊಂಡಿಲ್ಲವೆಂದು ಶ್ರೀ ಹನುಮಂತಯ್ಯನವರು ವ್ಯಥೆಯಿಂದ ತಿಳಿಸಿದರು. ಹಾಗಲ್ಲ, ಇನ್ನೂ ಆಗಬೇಕಾದ ವೆಚ್ಚಗಳು ಆಗಿವೆ ಎಂದು ಸಭೆಯ ಗಮನಕ್ಕೆ ತರಬೇಕಾಗಿದೆ. ಎಲ್ಲ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಬರೆಸಲು ಆಜ್ಞೆ ಮಾಡಿದ್ದಾರೆ. ಅದರಲ್ಲಿ ಗಾಂಧೀಜೀ, ನೆಹರು, ಪಟೇಲ್, ಹನುಮಂತಯ್ಯನವರು ಮತ್ತು ಇತರರು ಇದ್ದಾರೆ. ಯಾರ ಯಾರ ಭಾವಚಿತ್ರವನ್ನು ತಯಾರ್ಮಾಡಬೇಕು, ಯಾವ ಚಿತ್ರಕಲಾಕೋವಿದರಿಂದ ಬರೆಸಬೇಕು ಎಂದು ತೀರ್ಮಾನವಾಗಿತ್ತು. ಗಾಂಧಿ ಚಿತ್ರವನ್ನು ಇಂಥವರು ಬರೆಯಬೇಕು, ಸರದಾರ್ ವಲ್ಲಭಾಯಿ ಪಟೇಲರ ಚಿತ್ರವನ್ನು ಇಂಥವರು ಬರೆಯಬೇಕು, ಸರ್. ಎಂ. ವಿಶ್ವೇಶ್ವರಯ್ಯನವರ ಚಿತ್ರವನ್ನು ಇಂಥವರು ಬರೆಯಬೇಕು ಎಂಬುದಾಗಿ ತೀರ್ಮಾನವಾಗಿತ್ತು. ಯಾರ ಯಾರ ಚಿತ್ರಗಳನ್ನು ಬರೆಯಬೇಕು, ಯಾರು ಬರೆಯಬೇಕೆಂದು ತಯಾರು ಮಾಡಿದ್ದ ಪಟ್ಟಿ ಇದೆ. ಆದರೆ ಹನುಮಂತಯ್ಯನವರ ಚಿತ್ರವನ್ನು ಯಾರು ಬರೆಯಬೇಕೆಂದು ತೀರ್ಮಾನವಾಗಿಲ್ಲ. ಸಮಿತಿಯವರು ಇವೆಲ್ಲ ಅನಾವಶ್ಯಕವೆಂದು ಹೇಳಿರುವುದರಿಂದ ಇವುಗಳ ಕೆಲಸ ನಿಲ್ಲಿಸಲ್ಪಟ್ಟಿದೆ. ಆದುದರಿಂದ ಇದೂ ತಪ್ಪಿಹೋಯಿತು, ಇದು ನಿಜ. ಆದರೆ ಸಮಿತಿಯವರು ಹೇಳುವುದರೊಳಗಾಗಿ ಸರ್. ಎಂ. ವಿಶ್ವೇಶ್ವರಯ್ಯನವರ ಮತ್ತು ಸರದಾರ್ ವಲ್ಲಭಭಾಯಿ ಪಟೇಲ್‌ರ ಭಾವಚಿತ್ರಗಳು ಸಿದ್ಧವಾಗಿದ್ದುವು. ಈ ಚಿತ್ರಗಳನ್ನು ಯಾರೂ curtain ಆಗಿ ಉಪಯೋಗಿಸಿಲ್ಲ. ಚಿತ್ರಗಳನ್ನು ಚೆನ್ನಾಗಿ ಬರೆಸಿ ಒಳ್ಳೆಯ ಸ್ಥಳದಲ್ಲಿಡಿ ಎಂದು ಹೇಳಿದ್ದೇನೆ. ಇನ್ನೊಂದು ಆಕ್ಷೇಪಣೆ, ಏಳೆಂಟು ತಿಂಗಳಾದರೂ ಇನ್ನೂ ಮಣ್ಣು ವಗ್ಗೈರೆ ಎಲ್ಲ ಹಾಗೆಯೇ ಬಿದ್ದಿದೆ ಎಂದು ಹೇಳಿದರು. ಇದಕ್ಕೆ ಶ್ರೀ ಮರಿಯಪ್ಪನವರು ಒಂದು ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಮದುವೆ ಮನೆಯಲ್ಲಿ ಊಟಕ್ಕೆ ಇಡುವಂತೆ ಸರ್ಕಾರದ ಹಣ ಮನಸ್ಸಿಗೆ ಖರ್ಚು ಮಾಡಿ 'ಭೇಷ್ ಭೇಷ್' ಎಂದು ಚಪ್ಪಾಳೆ ಕುಟ್ಟಿಸಿಕೊಳ್ಳಬೇಕು ಎನ್ನುವ ಆಸೆ ಈಗಿನ ಸರ್ಕಾರಕ್ಕೆ ಇಲ್ಲ. ಜೊತೆಗೆ ಕಾರಣಗಳಿವೆ. ಅಠಾರ ಕಚೇರಿಯಿಂದ ಈ ಕಟ್ಟಡಕ್ಕೆ ಸಾಮಾನುಗಳೆಲ್ಲ ಬರಬೇಕಾದ್ದರಿಂದ ಕೆಲಸ ಕಾರ್ಯಗಳು ಸ್ವಲ್ಪ ನಿಧಾನವಾದವು. ಈಗ ಬಹುಭಾಗ ಕೆಲಸ ಮುಗಿದು ಹೋಗಿರುವುದರಿಂದ ಸಿಬ್ಬಂದಿಯನ್ನೂ ಕಡಮೆ ಮಾಡಲಾಗಿದೆ. ಉಳಿದ ಚಿಲ್ಲರೆ ಪಲ್ಲರೆ ಕೆಲಸಗಳು ಕಣ್ಣಿಗೆ ಕಾಣುವುದಿಲ್ಲ. ಇದರ ಜೊತೆಗೆ ಲೆಕ್ಕಪತ್ರಗಳು, ಸಾಮಾನು ದಾಸ್ತಾನು ಲೆಕ್ಕಗಳು, ಅಕೌಂಟ್ಸ್ ಇತ್ಯಾದಿಗಳಲ್ಲಿ ಎಷ್ಟು ಹೋಯಿತು, ಎಷ್ಟು ಉಳಿಯಿತು ಎಂದು ಸಮಜಾಯಿಷಿ ಕೊಡಬೇಕಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟ ಸಿಬ್ಬಂದಿಯವರು ಆ ಕೆಲಸದಲ್ಲಿ ತೊಡಗಿದ್ದಾರೆ. ಹೀಗೆ ನಾನಾ ಕಾರಣಗಳಿಂದ ಕೆಲಸ ನಿಧಾನವಾಗುತ್ತಿದೆ. Normal ಆಗಿ ಕಟ್ಟಡದ ಕೆಲಸವಾಗುತ್ತಿದೆ. ಕಟ್ಟಡದ ಮುಂದುಗಡೆ ಇರುವ ಮಣ್ಣುಗುಡ್ಡೆ (debris) ತೆಗೆಯಲಿಲ್ಲ, ಸುತ್ತಲೂ ರಸ್ತೆಗಳು ಆಗಿಲ್ಲ, ಇತ್ಯಾದಿ ಹೇಳಿದರು. ಇವುಗಳ ಖರ್ಚನ್ನು ಬೇರೆ ಇಲಾಖೆಗಳ ಮೇಲೆ ಹೊರಿಸಲಾಗಿತ್ತು. ಅರಣ್ಯ ಇಲಾಖೆಯಿಂದ ಘನ ಅಡಿಗೆ 18-20 ರೂಪಾಯಿ ಬೆಲೆ ಬಾಳುವ ಮರವನ್ನು ಹತ್ತು ರೂಪಾಯಿಗೆ ತೆಗೆದುಕೊಳ್ಳುವುದು, ರಸ್ತೆ ಕೆಲಸ ಟ್ರಸ್ಟ್ ಬೋರ್ಡಿನವರಿಗೆ ಹಾಕುವುದು ಅಥವಾ ಕಾರ್ಪೊರೇಷನ್ನಿಗೆ ಹಾಕುವುದು ಹೀಗೆಲ್ಲ ಮಾಡಲಾಗಿತ್ತು. ಶ್ರೀ ಮರಿಯಪ್ಪನವರು ಇದನ್ನೆಲ್ಲ

ವಿವರವಾಗಿ ಹೇಳಿದ್ದಾರೆ. 130 ಲಕ್ಷ ರೂಪಾಯಿ ಅಂದಾಜಿನಲ್ಲಿ ಇವುಗಳನ್ನು ಸೇರಿಸಿಲ್ಲ. ಈಗ ಈ ಕೆಲಸಗಳನ್ನೆಲ್ಲ ಸರ್ಕಾರದವರೇ ಮಾಡಿಸಬೇಕೆಂದು ತೀರ್ಮಾನವಾಗಿದೆ. ಅಂದಾಜುಗಳು ತಯಾರಾಗಿ ಅವು ಮಂಜೂರಾಗುವವರೆಗೂ ನಿಧಾನ ಮಾಡಬೇಕು, ಯಾವ ರೀತಿ ಮಾಡಬೇಕೆಂಬ ಜಿಜ್ಞಾಸೆ ಇತ್ತು. ಅಂದಾಜುಗಳು ಮಂಜೂರು ಆಗಿವೆ. ಹೀಗೆ ನಾನಾ ಕಾರಣಗಳಿಂದ ಕೆಲಸ ನಿಧಾನವಾಯಿತು. ಕೆಲಸ ನಿಧಾನವಾಗಿದ್ದರೂ ಅದರಿಂದ ಪ್ರಪಂಚ ಮುಳುಗಿ ಹೋಗುವುದಿಲ್ಲ. ಕೆರೆಗಳು ಒಡೆದು ಹೋಗಿ, ರೈತರಿಗೆ ವ್ಯವಸಾಯಕ್ಕೆ ನೀರಿಲ್ಲದೆ ಬೆಳೆಗೆ ತೊಂದರೆಯಾಗುವಂಥ ಸಂದರ್ಭವಲ್ಲ ಇದು. ಇದರ ಬಗ್ಗೆ ಮಾತನಾಡುವಾಗ ನಮ್ಮ ಹಿರಿಯರಾದ ಶ್ರೀಮಾನ್ ಪಿ. ಆರ್. ರಾಮಯ್ಯನವರು ಸರ್ಕಾರ ಇದೆಯೋ ಇಲ್ಲವೋ- ಎಂದು ಹೇಳಿದರು. ವಿಧಾನ ಸೌಧದ ಸುತ್ತಮುತ್ತಲೂ ರಸ್ತೆಗಳು ಚೆನ್ನಾಗಿಲ್ಲವೆಂದರು. ಈ ಸಂಬಂಧದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಕಪ್ಪೆ ಭಾವಿಯಲ್ಲಿ ಕುಳಿತುಕೊಂಡು ದೊಡ್ಡ ಕಪ್ಪೆಗೆ ಕೇಳಿತಂತೆ ಸಮುದ್ರ ಎಷ್ಟು ದೊಡ್ಡದು ಎಂದು. ಅದು ಇಲ್ಲಿಂದ ಅಲ್ಲಿಗೆ ಹಾರಿ ಇಷ್ಟು ದೊಡ್ಡದು ಎಂದು ಹೇಳಿತಂತೆ ಎಂದು ಒಂದು ಕಥೆ ಹೇಳುತ್ತದೆ. ಹೀಗೆ ಶ್ರೀಮಾನ್ ರಾಮಯ್ಯನವರ ಅಭಿಪ್ರಾಯದಲ್ಲಿ ಈ ವಿಧಾನ ಸೌಧದ ಸುತ್ತಮುತ್ತಲಿನ ವಾತಾವರಣ ಚೆನ್ನಾಗಿದ್ದರೆ ಸರ್ಕಾರ ನಡೆಯುತ್ತಿದೆ ಇಲ್ಲದಿದ್ದರೆ ಸರ್ಕಾರವೇ ಇಲ್ಲ ಎಂದು ಕಾಣುತ್ತದೆ. (ನಗು) ಬಹುಶಃ ಅವರ ವಯಸ್ಸಿನ ಕಾರಣ ಹಾಗೆ ಮಾತನಾಡಿದರೋ ಏನೋ ಗೊತ್ತಿಲ್ಲ. ಶ್ರೀಮಾನ್ ಕೆ. ಹನುಮಂತಯ್ಯನವರು ಸಮಿತಿಯ ಅಧ್ಯಕ್ಷರ ಬಗ್ಗೆ ಏನು ಹೇಳಿದರೋ ಆ ರೀತಿ ಇವರ ಬಗ್ಗೆ ಹೇಳಲು ನಾನು ಇಷ್ಟಪಡುವುದಿಲ್ಲ. ಸರ್ಕಾರವೇ ಇಲ್ಲವೆಂದು ಹೇಳಿದರಲ್ಲ, ಯಾವ ಉದ್ದೇಶದಿಂದ ಹೀಗೆ ಹೇಳಿದರು ಎಂದು ಸಂದೇಹವಿದ್ದೇ ಇದೆ.

ಇನ್ನೂ ಈ ಕಟ್ಟಡಕ್ಕೆ 150 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಇಟ್ಟುಕೊಂಡರೆ, ಶೇಕಡ ಸಾಲಿಯಾನ ಮೂರರಂತೆ ಬಡ್ಡಿ ಲೆಕ್ಕ ಹಾಕಿದರೂ ಸಹ 4 ಲಕ್ಷದ 50 ಸಾವಿರ ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ. 180 ಲಕ್ಷ ರೂಪಾಯಿ ಖರ್ಚಾಗುತ್ತದೆಂದರೆ ಆಗ 5 ಲಕ್ಷ 40 ಸಾವಿರ ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ. ಈ ಕಟ್ಟಡ ಕಟ್ಟಿದ್ದರಿಂದ ಬಾಡಿಗೆಗಳ ರೂಪದಲ್ಲಿ ಉಳಿತಾಯವಾಗಿರುವುದು ಎಷ್ಟೆಷ್ಟು ಎಂದರೆ ತಿಂಗಳಿಗೆ ಸುಮಾರು ಎರಡು ಸಾವಿರ ರೂಪಾಯಿ ಅಂದರೆ ವರ್ಷಕ್ಕೆ 24 ಸಾವಿರ ರೂಪಾಯಿ ಆಗುತ್ತದೆ. ಆದುದರಿಂದ ಅಠಾರ ಕಚೇರಿಯಲ್ಲಿದ್ದ ಆಫೀಸುಗಳನ್ನು ವಿಧಾನ ಸೌಧಕ್ಕೆ ಬದಲಾಯಿಸಿ, ನಗರದ ಬೇರೆ ಬೇರೆ ಭಾಗದಲ್ಲಿದ್ದ ಆಫೀಸುಗಳನ್ನೂ ಅಠಾರ ಕಚೇರಿಗೆ ಬದಲಾಯಿಸಿದ್ದರಿಂದ ಆಗಿರತಕ್ಕ ನಿವ್ವಳ ಉಳಿತಾಯ 24 ಸಾವಿರ ರೂಪಾಯಿ ಮಾತ್ರ. ಆದರೆ ನಾವು ಕೊಡಬೇಕಾದ ಬಡ್ಡಿ 4 ಲಕ್ಷ 50 ಸಾವಿರವೇ ಅಥವಾ 5 ಲಕ್ಷ 40 ಸಾವಿರವೇ ಎಂದು ನೋಡಿದರೆ ಅದು ಈ ಕಟ್ಟಡಕ್ಕೆ ತಗಲುವ ಖರ್ಚನ್ನು ಅವಲಂಬಿಸುತ್ತದೆ. ಈ ಕಟ್ಟಡಕ್ಕೆ ಆಗುವ ಖರ್ಚು 150 ಲಕ್ಷವಲ್ಲ, 180 ಲಕ್ಷವಲ್ಲ, 200 ಲಕ್ಷಕ್ಕೆ ಮೇಲ್ಪಟ್ಟು ಆಗುವುದರಿಂದ ನಾವು ಎಷ್ಟು ಬಡ್ಡಿಯನ್ನು ತೆರಬೇಕಾಗಿದೆ. ಎನ್ನುವುದನ್ನು ಮಾನ್ಯ ಸಭೆಯವರು ಊಹಿಸಿಕೊಳ್ಳಬೇಕಾಗಿದೆ.

ಶ್ರೀಮಾನ್ ಮರಿಯಪ್ಪನವರು ಸಮಿತಿಯ ಸದಸ್ಯರಿಗೂ ಮತ್ತು ಅಧ್ಯಕ್ಷರಿಗೂ ಕೊಟ್ಟಿರುವ ಸಂಭಾವನೆಯ ಬಗ್ಗೆ ಮತ್ತು ಮಾಡಿದ ಕೆಲಸದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಸರ್ಕಾರದ ರೂಲ್ಸ್ ಪ್ರಕಾರ ರಿಟೈರ್ ಆದ ಅಧಿಕಾರಿಗಳನ್ನು ಯಾವುದಾದರೂ ಕೆಲಸಕ್ಕೆ ನೇಮಿಸಿದರೆ ರಿಟೈರ್ ಆಗುವುದಕ್ಕೆ ಮುಂಚೆ ಆ ಅಧಿಕಾರಿಗಳಿಗೆ ಎಷ್ಟು ಸಂಬಳ ಬರುತ್ತಿತ್ತೋ ಅದರಲ್ಲಿ ಅವರಿಗೆ ಬರುತ್ತಿರುವ ಪೆನ್ಷನ್ ಕಳೆದು ಉಳಿದುದನ್ನು ಕೊಡಬೇಕು. ಈ ಸಮಿತಿಯ ಅಧ್ಯಕ್ಷರಿಗೆ ಕೊಟ್ಟಿರುವ ಸಂಭಾವನೆಯಾದರೂ ಅಷ್ಟೆ. ಇಬ್ಬರು ಸದಸ್ಯರಿಗೂ ಕೊಟ್ಟಿರುವ Lumpsum grant ಲೆಕ್ಕ ಹಾಕಿದರೆ ಅವರು ರಿಟೈರ್ ಆದ ದಿನ ಎಷ್ಟು ಸಂಬಳ ತೆಗೆದುಕೊಳ್ಳುತ್ತಿದ್ದರೋ ಅದರಲ್ಲಿ ಅವರ ಪೆನ್ಷನ್ ಕಳೆದು ಐದು ತಿಂಗಳಿಗೆ ಎಷ್ಟು ಆಯಿತು ಎಂದು ಲೆಕ್ಕ ಹಾಕಿದರೆ ನಾವು ಕೊಟ್ಟಿರುವುದು ಇದಕ್ಕಿಂತ ಜಾಸ್ತಿಯಾಗುವುದಿಲ್ಲ. ಇವರುಗಳು ದುಡ್ಡು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಂಡು ಹೋದರು ಎಂದು ಹೇಳುವುದು ಸಂಸ್ಥಾನದ ಘನತೆಗೂ ಸಂಸ್ಥಾನ ಸರ್ಕಾರದ ಘನತೆಗೂ ಯೋಗ್ಯವಾದ ಮಾತಲ್ಲವೆಂದು ಅಷ್ಟುಮಾತ್ರ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಕಟ್ಟಡಕ್ಕೆ ಬಹಳ ಹಣ ಖರ್ಚಾಗಲಿಲ್ಲ. ಇಷ್ಟೊಂದು ವಿಶಾಲವಾದ ಕಟ್ಟಡಕ್ಕೆ ಚದರ ಅಡಿಗೆ 24 ರೂಪಾಯಿಗಳೊಳಗೆ ಆಯಿತು, ಬೇರೆ ಕಡೆಗಳಲ್ಲಿ ಸಾಮಾನ್ಯ ಕಟ್ಟಡಗಳಿಗೆ 20 ರಿಂದ 25 ರೂಪಾಯಿಗಳವರೆಗೂ ಬಿದ್ದಿದೆ ಎಂದು ಹೇಳಿದ್ದಾರೆ. ನಿಜವಾಗಿ ನೋಡಿದರೆ ಇದಕ್ಕೆ ಆಗಿರುವ ಖರ್ಚನ್ನೆಲ್ಲ ಇದರಲ್ಲಿ ತೋರಿಸುತ್ತಿಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ಸೇರಿಸಿದ್ದಾರೆ. ಫಾರೆಸ್ಟ್ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ, ತೋಟಗಳ ಇಲಾಖೆ, ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟೋ ಹಣವನ್ನು ಒದಗಿಸುವುದಕ್ಕೆ ಪ್ರಯತ್ನಪಟ್ಟರೂ ಸಹ ಆಗಲಿಲ್ಲ. ಚದರ ಅಡಿಗೆ 24 ರೂಪಾಯಿಗಳಾಗಿರುವುದು ಹೆಚ್ಚಲ್ಲವೆಂದರೆ, 20 ರೂಪಾಯಿಗಳಲ್ಲಿ ಅದಕ್ಕಿಂತಲೂ ಕಡಮೆ ಖರ್ಚಿನಲ್ಲಿ ಮಾಡಬಹುದಾಗಿತ್ತು. ಈ ಕಟ್ಟಡಕ್ಕೆ ಅಲಂಕಾರಗಳು ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಮಾಡಿದ್ದರೆ 45 ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುತ್ತಿತ್ತು. ಈ ಹಣದಲ್ಲಿ ಮತ್ತೊಂದು ದೊಡ್ಡ ಕಟ್ಟಡವೇ ಆಗುತ್ತಿತ್ತು. ಅಲಂಕಾರದ ವಿಷಯದಲ್ಲಿ ಅಲ್ಲಿಂದ ಸ್ವಲ್ಪ, ಇಲ್ಲಿಂದ ಸ್ವಲ್ಪ, ಮತ್ತೊಂದು ಕಡೆಯಿಂದ ಸ್ವಲ್ಪ ಭಾಗವನ್ನು ಆರಿಸಿಕೊಂಡು, ದುಂಬಿ ಜೇನು ನಾನಾ ಪುಷ್ಪಗಳಿಂದ ಮಧುವನ್ನು ಆರಿಸಿಕೊಂಡು ಬಂದು ಒಂದು ಕಡೆ ಶೇಖರಿಸಿರುವಂತೆ, ತಾವೂ ಮಾಡಿರುವುದಾಗಿ ಹೇಳಿದರು. ಅವರ ಭಾಷಣ ಬಹಳ ಭಾವನಾಮಯವಾಗಿತ್ತು. ಇದನ್ನೆಲ್ಲ ನೋಡಿದರೆ ಇಂಗ್ಲೆಂಡಿನಲ್ಲಿರುವಂಥ ಕಟ್ಟಡದ ಒಂದು ಬಾಗಿಲು, ಇನ್ನೊಂದು ಊರಿನಲ್ಲಿನ ಕಟ್ಟಡದ ಒಂದು ಕಿಟಕಿ, ಮತ್ತೊಂದು ಕಡೆಯಿಂದ ಇನ್ನೊಂದು ಹೀಗೆ ಎಲ್ಲವನ್ನೂ ಕ್ರೋಡೀಕರಿಸಿದ್ದೇನೆಂದರು. ಇದು ಹಾಗಿದೆಯೆ ಎಂದು ಕೇಳಬೇಕಾಗಿದೆ. ತೆನಾಲಿ ರಾಮಕೃಷ್ಣನು ಒಂದು ಚಿತ್ರ ಬರೆಯುವುದಕ್ಕೆ ಪ್ರಯತ್ನಪಟ್ಟ, ಅದರಲ್ಲಿ ಮನುಷ್ಯನಿಗೆ ಬೇಕಾದ ಎಲ್ಲ ಅಂಗಗಳೂ ಇದ್ದರೂ ಸಹ ಅವು ಎಲ್ಲೆಲ್ಲಿರಬೇಕೋ ಅಲ್ಲಿ ಮಾತ್ರ ಇರಲಿಲ್ಲ. ಹಾಗೆ ಈ ಕಟ್ಟಡದ ಕೆಲಸವಾಗಿದೆ. ಇದೇನು ಛತ್ರವೇ, ಮಠವೇ, ದೇವಸ್ಥಾನವೇ, ಕಚೇರಿಯೇ ಎನ್ನುವುದು ಗೊತ್ತಾಗುವುದಿಲ್ಲ. ವಿನಾಯಕನನ್ನು ಮಾಡಬೇಕು ಎಂದರೆ ಅವರ ಅಪ್ಪನನ್ನು ಮಾಡಿದ ಹಾಗೆ (ನಗು) ಎಂದು ಹೇಳುವ ಪ್ರಕಾರ ಕೆಲಸಮಾಡಿ ಅದಕ್ಕೆ ಸಮಿತಿಯವರು ಹೊಗಳಲಿಲ್ಲ

(ಶ್ರೀ ಟಿ. ಮರಿಯಪ್ಪ)

ವೆಂದು ಗಲಾಟೆ ಮಾಡಿದರೆ ಹೇಗೆ? ಮಾಡುವ ಕೆಲಸವನ್ನು ಮಾಡಿದರೆ ಎಲ್ಲರೂ ಹೊಗಳುತ್ತಾರೆ. ಮನಸ್ಸಿಗೆ ಬಂದಹಾಗೆ ಕೆಲಸಮಾಡಿದರೆ ಯಾರು ಹೊಗಳುತ್ತಾರೆ? ಕಟ್ಟಡವನ್ನು ಕಟ್ಟಿಸಿದಾಗ ಮನಸ್ಸಿಗೆ ಬಂದಹಾಗೆ ಮಾಡಿದರು. ಕಟ್ಟಡದ ಒಳಗಡೆ ನಾವು ಅನೇಕ ಬದಲಾವಣೆಗಳನ್ನು ಮಾಡಬೇಕಾಯಿತು. ದೊಡ್ಡ ದೊಡ್ಡ ಕೊಠಡಿಗಳನ್ನು ಚಿಕ್ಕದು ಮಾಡಬೇಕಾಯಿತು, ಚಿಕ್ಕ ಕೊಠಡಿಗಳನ್ನು ದೊಡ್ಡದು ಮಾಡಬೇಕಾಯಿತು. ಕೆಲವಕ್ಕೆ ಬಾತ್ ರೂಂ ಇರಲಿಲ್ಲ. ಎಲ್ಲಿ ಅಗತ್ಯವಿಲ್ಲವೋ ಅಲ್ಲಿ ಅನಾವಶ್ಯಕವಾಗಿ ಮಾಡಿಸಲಾಗಿತ್ತು. ಬದಲಾವಣೆಗಳನ್ನು ಮಾಡಬೇಕಾದ್ದರಿಂದ ವಿಧಾನ ಸೌಧದ ಕೆಲಸ ಹೆಚ್ಚಾಯಿತು. ಹೀಗೆ ತಮ್ಮ ದೃಷ್ಟಿಯಿಂದ ತಮಗೆ ಮನಸ್ಸು ಬಂದಹಾಗೆ ಕೆಲಸ ಮಾಡಿ "ಅದನ್ನು ಯಾರೂ ಹೊಗಳುವುದಿಲ್ಲ, ಇವರಿಗೆ ಒಬ್ಬರಿಗೂ ಬುದ್ಧಿ ಇಲ್ಲ; ನನಗೆ ಮತ್ತು ನನ್ನ ಹಿಂಬಾಲಕರಿಗೆ ಯಾರಿಗೂ ತಲೆ ಇಲ್ಲವೆ" ಎಂದು ಹೇಳಿ ಗಲಭೆ ಮಾಡಿದರೆ ಏನುತಾನೇ ಹೇಳುವುದಕ್ಕಾಗುತ್ತದೆ?

ಇನ್ನು ಟ್ರಕ್ಕುಗಳನ್ನು ಕೊಂಡುಕೊಂಡದ್ದು ದೊಡ್ಡ ಕಥೆ. ಕಾಂಗ್ರೆಸ್ ಹೈ ಕಮ್ಯಾಂಡ್ ಕೂಡ ಈ ಬಗ್ಗೆ ಸರ್ಟಿಫಿಕೇಟು ಕೊಟ್ಟಿದೆ; ಚೀಫ್ ಇಂಜಿನಿಯರು 14 ಸಾವಿರ ರೂಪಾಯಿ ಬೆಲೆಬಾಳುವ ಟ್ರಕ್ಕುಗಳು 13 ಸಾವಿರ ರೂಪಾಯಿಗಳಿಗೆ ಬರುತ್ತದೆ, ಇದರಿಂದ ಸರಕಾರಕ್ಕೆ ಉಳಿತಾಯವಾಗುತ್ತದೆಂದು ಬರೆದಿರುವುದು ನನಗೂ ಸಹ ಗೊತ್ತಿದೆ. ನಾನು ಕಾಂಗ್ರೆಸ್ ಹೈ ಕಮ್ಯಾಂಡಿಗೆ ಒಂದು ಕಾಗದ ಬರೆದು ಅದರಲ್ಲಿ, ಅವರ ಮಿತ್ರರಿಗೆ ಈ ಟ್ರಕ್ಕುಗಳ ವ್ಯವಹಾರದಲ್ಲಿ ಅನುಕೂಲವಾಗುವಂತೆ ವರ್ತಿಸಿದ್ದಾರೆಂದು ತಿಳಿಸಿದೆ: ಅದಕ್ಕೆ "ನೀವು ಬಹಳ ನಿಷ್ಠುರವಾಗಿ ಕಾಗದ ಬರೆದಿದ್ದೀರಿ. ನಾನು ಖುದ್ದಾಗಿ ಫೈಲುಗಳನ್ನು ನೋಡಿದೆ. ಹದಿನಾಲ್ಕು ಸಾವಿರ ರೂಪಾಯಿ ಬೆಲೆ ಇರತಕ್ಕ ಟ್ರಕ್ಕುಗಳು ಹದಿಮೂರು ಸಾವಿರ ರೂಪಾಯಿ ಬೆಲೆಗೆ ದೊರೆತಿರುವುದರಿಂದ ಒಂದೊಂದು ಟ್ರಕ್ಕಿಗೂ ಒಂದು ಸಾವಿರ ರೂಪಾಯಿ ಉಳಿತಾಯವಾಗಿದೆ" ಎಂದು ಉತ್ತರ ಬಂತು. ಈ ವ್ಯವಹಾರದಲ್ಲಿ ದೊಡ್ಡವರಿಗೆ ಎಷ್ಟು ತೋರಿಸಬೇಕೋ ಅಷ್ಟು ತೋರಿಸಿ, ಅವರಿಂದ ಸರ್ಟಿಫಿಕೇಟ್ ತೆಗೆದುಕೊಂಡು ಅದರ ಮೇಲೆ ಯಾರೂ ಮಾತನಾಡಕೂಡದು ಎಂದು ಹೇಳಿದರೆ ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದ ಹಾಗೆ ಆಯಿತು ಎಂದು ಹೇಳಬೇಕಾಗಿದೆ. ಇಲ್ಲಿ ಏನು ವಿವರಗಳು ಇವೆಯೋ ಅವನ್ನು ಇಟ್ಟುಕೊಂಡು ನೋಡಿ ಮಾತನಾಡಬೇಕು, ತೀರ್ಮಾನ ಕೊಟ್ಟಿದ್ದನ್ನು ಒಪ್ಪಿಕೊಳ್ಳಬೇಕು. ಆದ್ದರಿಂದ ಶ್ರೀ ಹನುಮಂತಯ್ಯನವರು ಈ ವರದಿ ಪ್ರಕಟನೆಯಾಗುತ್ತದೆ ಎಂದು ತಿಳಿದೂ ತಾವು ಮಾಡಿದ್ದನ್ನು, ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ಏನು ಪ್ರಯತ್ನ ನಡೆಸಿದ್ದಾರೋ, ಅದು ಸರ್ವಥಾ ಸರಿಯಲ್ಲ. ಇದು ಹೊಸಮಾತೇನೂ ಅಲ್ಲ. ಈ ವಿಧಾನ ಸೌಧ ಕಟ್ಟಿಸುತ್ತಿದ್ದಾಗ ಮಹಮದ್‌ಬಿನ್ ತೊಗಲಕ್ ಮಾಡಿದ ರೀತಿಯಲ್ಲೇ ಮಾಡುತ್ತಾ ಇದ್ದಾರೆ ಎಂತಲೂ ಹೇಳಿದ್ದೆವು. ಈ ವರದಿಯನ್ನು ಆಮೂಲಾಗ್ರವಾಗಿ, ನಿಷ್ಪಕ್ಷಪಾತವಾಗಿ ಓದಿದರೆ, ಅವರು ಮಾಡಿರತಕ್ಕ ಕಾರ್ಯ ಮಹಮದ್‌ಬಿನ್ ತೊಗಲಕ್‌ಗಿಂತಲೂ ಯದ್ವಾತದ್ವಾ ಮಾಡಿದ್ದಾರೆ ಎಂದು ಎದ್ದು ಕಾಣುತ್ತದೆ. ಇದನ್ನು ನೋಡಿ ಬಾಕಿಯವರು ನೊಂದುಕೊಳ್ಳುತ್ತಾರೆ, ಎಂದರೆ ಅದು ಕಠಿಣವಾದ ಮಾತು ಆಗಲಾರದು. ಇಷ್ಟು ತೀಕ್ಷ್ಣವಾಗಿ ನಾವು ಗಮನಿಸಿರಲಿಲ್ಲ. ಕೋಟ್ಯಾಂತರ ರೂಪಾಯಿ ಆಡಳಿತ ಮಾಡತಕ್ಕ ಸರ್ಕಾರದ ಒಬ್ಬ ಮುಖ್ಯ ಮಂತ್ರಿಯಾಗಿ ಸರ್ಕಾರದ ದುಡ್ಡನ್ನು ಎಸ್ಟಿಮೇಟ್ ಇಲ್ಲದೆ, ಮಂಜೂರಾತಿ ಇಲ್ಲದೆ, ಇಲಾಖೆಯ ಮುಖ್ಯಾಧಿಕಾರಿಯ ಅನುಮತಿ ಕೇಳದೆ, ನಾನು ಹೇಳಿದಂತೆ ನೀನು ಮಾಡು ಎನ್ನುವಂತೆ ಕೆಲಸ ನಡೆಸಿರುವುದನ್ನು ನೋಡಿದರೆ, ಕೋಟ್ಯಾಂತರ ರೂಪಾಯಿಗಳ ಆಡಳಿತ ಸೂತ್ರ ಹಿಡಿದಿರತಕ್ಕ ವ್ಯಕ್ತಿ, ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಅಹಂನಿಂದ ತನ್ನ ಕೀರ್ತಿ ಪ್ರತಿಷ್ಠಾಪನೆ ಮಾಡಿಕೊಳ್ಳಲು ಪ್ರಯತ್ನಪಟ್ಟಿರುವುದನ್ನು ನೋಡಿ, ಅನ್ನುವರು ಅಂದುಕೊಳ್ಳಲಿ, ಅವರು ಸತ್ತುಹೋಗುತ್ತಾರೆ, ನನ್ನ ಹೆಸರು ಉಳಿಯುತ್ತದೆ ಎಂದು ಅವರ ಮನಸ್ಸಿನಲ್ಲಿ ಇದ್ದಿತೇನೋ ಎಂದು ನನಗೆ ಅನ್ನಿಸಿತು. ಮಾಡುವ ಕೆಲಸದಲ್ಲಿ ಪವಿತ್ರವಾದ ಉದ್ದೇಶವಿರಬೇಕು. ಗುರಿ ಮುಟ್ಟಬೇಕಾದ ದಾರಿಯೂ ಅಷ್ಟೇ ಪವಿತ್ರವಾಗಿರಬೇಕು. ಅದನ್ನು ಮಹಾತ್ಮ ಗಾಂಧಿಯವರು ಹೇಳಿಕೊಟ್ಟಿದ್ದಾರೆ. ನಾನು ಹಿಂದಿನ ಇದೇ ಶಾಸನ ಸಭೆಯಲ್ಲಿ ಹೇಳಿದ್ದೇನೆ. ಗಾಂಧಿಯವರು ಕೊಲೆಯಾಗುವುದಕ್ಕೆ 20 ದಿವಸಗಳ ಹಿಂದೆ, ಕಡೆಯದಾಗಿ ಅವರನ್ನು ಭೇಟಿಮಾಡಿದಾಗ ಮೈಸೂರಿನವರಿಗೆ ಒಂದು ಸಂದೇಶ ಕೊಡಿ ಎಂದು ಕೇಳಿದೆ. ಅದಕ್ಕೆ ಅವರು "ಕಾಂಗ್ರೆಸ್‌ನವರಿಗೆ ಅಧಿಕಾರ ಬರುತ್ತದೆ, ಕೋಟ್ಯಾಂತರ ರೂಪಾಯಿ ಆಡಳಿತ ನಡೆಸುತ್ತೀರಿ, ಒಂದೊಂದು ಕಾಸನ್ನೂ ಒಂದೊಂದು ರೂಪಾಯಿನ ಹಾಗೆ ಲೆಕ್ಕಹಾಕಿಕೊಂಡು ಖರ್ಚು ಮಾಡಿದ್ದೇ ಆದರೆ ನಿಮ್ಮ ಕರ್ತವ್ಯ ನೆರವೇರಿತು; ಇದೇ ಮೈಸೂರಿಗೆ ನನ್ನ ಸಂದೇಶ" ಎಂದು ನನ್ನ ಎದುರಿನಲ್ಲಿ ಹೇಳಿದರು. ಇವೊತ್ತು ನೋಡಿದರೆ ಒಂದೊಂದು ರೂಪಾಯಿ ಒಂದೊಂದು ಕಾಸಿನಹಾಗೆ ಖರ್ಚಾಗಿದೆ. ಇದನ್ನು ಯಾರು ಮೆಚ್ಚಿಕೊಳ್ಳಿರಿ ಎಂದು ಹೇಳುತ್ತಾ ಇದ್ದಾರೋ ಅವರಿಗೇ ಇದು ಬಹಳ ವ್ಯಸನಕರವಾದದ್ದು. ನನ್ನ ಹೆಸರು ಶಾಶ್ವತವಾಯಿತು, ಯಾರು ಏನಾದರೂ ಅಂದುಕೊಳ್ಳಲಿ ಎಂದು ಸುಮ್ಮನಾದರೆ ಅಷ್ಟಕ್ಕೇ ಮುಗಿಯಲಿಲ್ಲ. ಕಟ್ಟಡ ಕಟ್ಟಿಸುವುದಕ್ಕೆ ಅನುಸರಿಸಿದ ಮಾರ್ಗ, ಹೋಗಿರತಕ್ಕ ದಾರಿ, ನೀತಿ ಸರಿಯೇ, ನ್ಯಾಯವೇ ಎನ್ನುವುದನ್ನು ವಿಮರ್ಶೆ ಮಾಡಬೇಕು. ನೀವು ಧರ್ಮಛತ್ರ ಕಟ್ಟಿಸಿದ್ದರೆ, ನೀವು ಬಾಕಿಯವರಹಾಗೆ ಬಾಳಿದ್ದರೆ, ಬಾಕಿಯವರು ಸತ್ತುಹೋದರೂ ಅವರ ಹೆಸರು ಇನ್ನೂ ಉಳಿದಿರುವ ಹಾಗೆಯೇ ನಿಮ್ಮ ಹೆಸರೂ ಉಳಿಯುತ್ತದೆ. ಆದರೆ ಇದು ಧರ್ಮಛತ್ರ ಕಟ್ಟುವ ರೀತಿಯಲ್ಲಿ ಆಗಿದೆಯೇ? ಗಾಂಧಿಯವರ ಹೆಸರಿನ ಜೊತೆಗೆ ಗೋಡ್ಸೆಯ ಹೆಸರೂ ಇದ್ದೇ ಇರುತ್ತದೆ. ರಾಮನ ಹೆಸರಿನ ಹಿಂದೆ ರಾವಣನ ಹೆಸರೂ ಇದ್ದೇ ಇರುತ್ತದೆ. ಹನುಮಂತಯ್ಯನವರ ಹೆಸರು ಈ ಕಟ್ಟಡದ ಹಿಂದೆ ನಾವು ಹೊಗಳಿದರೂ ಇರುತ್ತದೆ, ಹೊಗಳದೇ ಇದ್ದರೂ ಇರುತ್ತದೆ. ಹೆಸರು ನಮಗೆ ಮುಖ್ಯವಾದದ್ದೇ, ಮಾರ್ಗವು ಮುಖ್ಯವೇ ಎನ್ನುವುದು ಹನುಮಂತಯ್ಯನವರ ಮನಸ್ಸಿಗೆ ಹೊಳೆಯಲಿಲ್ಲವಲ್ಲ ಎಂದು ವಿಷಾದಪಡಬೇಕಾಗುತ್ತದೆ, ಆಶ್ಚರ್ಯಪಡಬೇಕಾಗುತ್ತದೆ. ಅದು ಅಷ್ಟೇ ಅಲ್ಲ ಎಂದು ಕಾಣುತ್ತದೆ. ಅವರ ಸ್ವಭಾವವೂ ನನಗೆ ಗೊತ್ತಿದೆ. ಶ್ರೀ ಹನುಮಂತಯ್ಯನವರು ನಿರ್ಮಾಣಮಾಡಿರತಕ್ಕದ್ದು ಎಂದು ಹೇಳಿಕೊಳ್ಳುವ ಈ ಕಟ್ಟಡಕ್ಕೆ ಅವರು ಬಡ ಬೋರೇಗೌಡನ ದುಡ್ಡನ್ನು, ಸಾರ್ವಜನಿಕರ ದುಡ್ಡನ್ನು ತಂದುಹಾಕಿ ಯದ್ವಾತದ್ವಾ ಖರ್ಚುಮಾಡಿ, ರೂಲ್ಸ್ ರೆಗ್ಯುಲೇಷನ್ ಯಾವುದನ್ನೂ ನೋಡದೆ ಸರ್ಕಾರದ ಹಣವನ್ನು ಪೋಲುಮಾಡಿದ್ದಾರೆ. ದೊಡ್ಡ ಅಧಿಕಾರಸ್ಥಾನದಲ್ಲಿದ್ದ

ವರೇ ಹೀಗೆ ಮಾಡಿದರೆ ಏನು ಅರ್ಥ? ಕಾನೂನು ಕಟ್ಟಲೆ ಬರಿದೂಬೇಡ; ನಾನು ಹೇಳಿದಂತೆ ಕೇಳದಿದ್ದರೆ ಬಲಿ ಹಾಕುತ್ತೇನೆ ಎಂದು ಅವರು ಹೇಳುತ್ತ ಇದ್ದುದನ್ನು ನಾವು ಕೇಳಿದ್ದೇವೆ. ಇಲಾಖೆಯ ಅಧಿಕಾರಿಗಳು ಆಡಳಿತದಲ್ಲಿ ಅನುಭವಸ್ಥರಾಗಿ ಎಷ್ಟೋ ವರ್ಷಗಳ ಕಾಲ ಕೆಲಸಮಾಡಿರುತ್ತಾರೆ. ಅವರು ತಾನೆ ಏನುಮಾಡುತ್ತಾರೆ? ಮಂತ್ರಿಗಳೇ ನಿಂತುಕೊಂಡು ಹೇಳುತ್ತಿರುವಾಗ ಮಾಡದಿದ್ದರೆ ಹೇಗೋ ಏನೋ ಎಂದು ಹೆದರಿಕೊಂಡು ಅವರು ಹೇಳಿದ ಕೆಲಸವನ್ನು ಮಾಡಿದ್ದಾರೆ.

ಒಬ್ಬ ಸದಸ್ಯರು.—ನೀವೂ ಅದೇ ರೀತಿ ಮಾಡುತ್ತೀರಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ನನ್ನ ಕಾನ್‌ಸ್ಟಿಟ್ಯೂಯನ್ಸಿನಲ್ಲಿ ಹೋಗಿ ಕೇಳಿ ನಾನು ಯಾವರೀತಿ ಕೆಲಸ ಮಾಡಿದ್ದೇನೆ ಎಂದು. ನಾನು ಜನರ ವಿಶ್ವಾಸದಿಂದ ಓಟು ತೆಗೆದುಕೊಂಡು ಬಂದಿದ್ದೇನೆ. ನಿಮ್ಮ ಹಾಗೆ ಅಪಪ್ರಚಾರ ಮಾಡಿಕೊಂಡು ಬರಲಿಲ್ಲ. ಆ ಮಾತು ನನಗೆ ಹೇಳುವುದಲ್ಲ. ನಾನು ಎಷ್ಟು ನಿಯತ್ತಿನಿಂದ ಗೆದ್ದು ಬಂದಿದ್ದೇನೆ ಎನ್ನುವುದನ್ನು ಇಲ್ಲಿ ಅಲ್ಲ, ನನ್ನ ಕಾನ್‌ಸ್ಟಿಟ್ಯೂಯನ್ಸಿನಲ್ಲಿ ಕೇಳಿ.

ಅವರ ಮನೆಯ ಹತ್ತಿರ ಸಿ.ಐ.ಡಿ. ಗಳನ್ನು ಹಾಕಿದ್ದಾರೆ ಎಂದು ಹೇಳಿದರು. ಹೋಂ ಮಿನಿಸ್ಟರು, ಪೋಲೀಸ್ ಐ.ಜಿ.ಪಿ., ಯವರು ಆ ರೀತಿ ಹಾಕಿಲ್ಲ ಎಂದು ಹೇಳಿದ್ದಾರೆ. ಸಾಧಾರಣವಾಗಿ ಪೋಲೀಸ್‌ನವರು ಈ ರೀತಿ ಅಧಿಕಾರದಲ್ಲಿದ್ದವರನ್ನು ಎಲ್ಲಿ ನೋಡಿದರೂ ನಮಸ್ಕಾರಮಾಡುತ್ತಾರೆ, ಒಂದು ಭಕ್ತಿ ಇರುತ್ತದೆ, ನನ್ನನ್ನು ಕಂಡರೂ ಭಕ್ತಿ ಇದೆ. ಈ ಒಂದು ತರಹ ನಡೆದುಕೊಂಡು ಹೋಗುತ್ತ ಇರುತ್ತಾರೆ. ಆ ವಿಧವಾದ ಮಾತುಗಳಿಂದ ಈ ಸಭೆಯ ಸದಸ್ಯರು ಅಷ್ಟು ಸುಲಭವಾಗಿ ಮರುಳಾಗತಕ್ಕ ಜನ ಅಲ್ಲ ಎಂದು ಶ್ರೀ ಹನುಮಂತಯ್ಯನವರಿಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಹೆಚ್ಚು ಮಾತನಾಡಬೇಕಾಗಿಲ್ಲ. ಅರ್ಧ ಘಂಟೆಯೊಳಗೆ ಮುಗಿಸಬೇಕೆಂದು ಮನಸ್ಸುಮಾಡಿದ್ದೆ. ಅನೇಕ ಅಂಶಗಳನ್ನು ಮಾನ್ಯ ಮಂತ್ರಿಗಳಾದ ಮರಿಯಪ್ಪನವರು ಹೇಳಿದ್ದಾರೆ. ಮೊದಲೇ ಹೇಳಿದ ಹಾಗೆ ಈ ವರದಿಯಲ್ಲಿ ಹೇಳಿರುವುದನ್ನು ವಿಮರ್ಶೆಮಾಡಿ ತುಲನ ಮಾಡಬೇಕಾದ ಅಗತ್ಯವಿರಲಿಲ್ಲ. ಪ್ರಸ್ತಾಪತ್ವೇನ ಬಂದ ನಾಲ್ಕುಮಾತುಗಳನ್ನಾಡಿದ್ದೇನೆ. ಸರ್ಕಾರದ ಆಡಳಿತ ಸೂತ್ರವಹಿಸಿದವರಿಗೆ ಇದು ಒಂದು ಮಾದರಿಯಾಗಿದೆ ಎಂದ ಮಾತ್ರಕ್ಕೆ ಶ್ರೀ ಹನುಮಂತಯ್ಯನವರು ಮೆಚ್ಚಿಕೊಳ್ಳತಕ್ಕದ್ದಲ್ಲ. ಅವರು ಮಾಡಿರತಕ್ಕ ಕೆಲಸಕ್ಕೆ ಅವರನ್ನು ಎಷ್ಟು ತೀಕ್ಷ್ಣವಾಗಿ ಖಂಡಿಸಿದರೂ ಸಾಲದು ಎಂಬ ಅಭಿಪ್ರಾಯವನ್ನು ಮಾತ್ರ ವ್ಯಕ್ತಪಡಿಸಿ, ತಾವು ಈ ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸುತ್ತೇನೆ.

ಯಾಗಿ ನಡೆಸದೆ ಸಾಮಾನ್ಯ ಜನರ ಹಿತರಕ್ಷಣೆ ಮಾಡದೆ ಹೋಗಿದ್ದಾರೆ ಎಂದು ಹೇಳುತ್ತಿದ್ದಾರೆ. ಈಗ ಕೆಲವು ದಿವಸಗಳಿಂದ ಈ ಸಭೆಯಲ್ಲಾದ ಭಾಷಣಗಳು ಮತ್ತು ಆಕ್ರಿಮೋನಿಯಸ್ ಡಿಬೇಟ್ ಇವುಗಳನ್ನೆಲ್ಲ ನೋಡಿದರೆ ಅವರೇನು ಆರೋಪಣೆ ಮಾಡುತ್ತಿದ್ದಾರೋ ಆ ಆರೋಪಣೆಗಳು ನಿರಾಧಾರವಾದುವಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಜನತೆಯ ಹಿತರಕ್ಷಣೆಯಾಗಬೇಕಾದರೆ ಆಡಳಿತ ವರ್ಗದವರೂ ಎದುರು ಪಕ್ಷದವರೂ ಒಬ್ಬರೊಡನೊಬ್ಬರು ಸಹಕರಿಸಿ ಕೆಲಸ ಮಾಡಬೇಕು. ಅದು ಹೋಗಲಿ ವಿರೋಧಪಕ್ಷವಾದ್ದರಿಂದ ಆರೋಪ ಮಾಡುತ್ತಾರೆಂದು ಹೇಳಬಹುದು. ಆದರೆ ಆಡಳಿತ ಪಕ್ಷದವರೇ ಇಷ್ಟೊಂದು ವಿರೋಧ ತೋರಿಸಿ ಒಬ್ಬರೊಡನೊಬ್ಬರು ಕಾದಾಡಿದರೆ ಆಡಳಿತ ಎಷ್ಟು ಸುಗಮವಾಗಿ ನಡೆಯಬಹುದು, ಅದರಿಂದ ಸಾಮಾನ್ಯ ಪ್ರಜೆಗಳ ಹಿತರಕ್ಷಣೆ ಎಷ್ಟರ ಮಟ್ಟಿಗಾಗುತ್ತದೆ ಎಂಬುದನ್ನು ಸಭೆ ಗಮನಿಸಬೇಕು. ಈ ಸಂದರ್ಭದಲ್ಲಿ ರಾಜ್ಯಾಂಗ ರಚನಾ ಸಭೆಯಲ್ಲಿ ಕೊನೆಯ ದಿವಸ ಭಾರತದ ರಾಜ್ಯಾಂಗವನ್ನು ಸಭೆಯ ಮುಂದಿಟ್ಟು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದಾಗ ದಿವಂಗತ ಡಾ|| ಅಂಬೇಡ್ಕರ್ ಅವರು ಆ ದಿವಸದ ಭಾಷಣದಲ್ಲಿ ಅಪ್ಪಣೆ ಕೊಡಿಸಿದ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಅವರು ಹಿಂದೂದೇಶದ ಚರಿತ್ರೆಯನ್ನು ಪ್ರಸ್ತಾಪಿಸಿ ಹಿಂದೆ ಜಯಚಂದ್ರ ಮತ್ತು ಪೃಥ್ವಿರಾಜ ಇವರಿಬ್ಬರೂ ಕಾದಾಡುವಾಗ ಬೇರೆ ದೇಶದವರನ್ನು ಸಹಾಯಕ್ಕಾಗಿ ಹಿಂದೂಸ್ಥಾನಕ್ಕೆ ಆಹ್ವಾನಿಸಿದರು, ಆಗಿನಿಂದ ಹಿಂದೂಸ್ಥಾನದವರು ಬೇರೆಯವರ ಗುಲಾಮರಾಗಿರುವುದಕ್ಕೆ ಹೇಗೆ ಅವಕಾಶವಾಯಿತು ಎಂಬುದನ್ನು ತೋರಿಸಿ ಆ ರೀತಿ ಆಗಬಾರದು, ಈ ಹಿಂದೂಸ್ಥಾನದ ಪ್ರಜೆಗಳೆಲ್ಲರೂ ಒಬ್ಬರೊಡನೊಬ್ಬರು ಸಹಕರಿಸಿ ಕೆಲಸ ಮಾಡಿಕೊಂಡು ಹೋಗಬೇಕೆಂದು ಹೇಳಿರುವುದನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ಹಳ್ಳಿಗಾಡಿನಲ್ಲಿ ಜನಸಾಮಾನ್ಯರ ಸ್ಥಿತಿಗತಿ ನೋಡಿದರೆ ಅದು ಬಹಳ ಶೋಚನೀಯ ಎಂದು ತೋರುವುದು. ಸ್ವಾತಂತ್ರ್ಯ ಬಂದು ಹತ್ತು ವರ್ಷಕ್ಕೆ ಮೇಲ್ಪಟ್ಟರೂ, ಜನರ ಹಿತರಕ್ಷಣೆಯಾಗಬೇಕು, ಜೀವನ ಮಟ್ಟ ಏರಬೇಕು ಎಂದು ಅದಕ್ಕಾಗಿ ಪ್ರಯತ್ನಪಡುತ್ತಿದ್ದರೂ ಅದು ಒಂದಲ್ಲ ಒಂದು ಕಾರಣದಿಂದ ಸಾಧಿಸಲ್ಪಟ್ಟಿಲ್ಲ ಎಂಬುದನ್ನು ತಾವುಗಳೆಲ್ಲ ಗಮನಿಸಿ ಆಡಳಿತ ನಡೆಸುವಾಗ ಅವರ ಹಿತರಕ್ಷಣೆಯನ್ನು ಹೇಗೆ ಸಾಧಿಸಬೇಕು ಜನರ ಜೀವನಮಟ್ಟವನ್ನು ಏರಿಸುವುದಕ್ಕೆ ಯಾವ ಯಾವ ಕೆಲಸ ಕಾರ್ಯಗಳನ್ನು ಕೈಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಬೇಕಾದದ್ದು ಬಹಳ ಅವಶ್ಯಕ. ಜನಸಾಮಾನ್ಯರಿಗೆ ಹಳ್ಳಿಗಾಡಿನಲ್ಲಿ ಮುಖ್ಯವಾಗಿ ಬೇಕಾಗಿರುವುದು ವೈದ್ಯಕೀಯ ಸೌಕರ್ಯ.

ಅಧ್ಯಕ್ಷರು.—ನಾನು ಒಂದು ಮಾತು ಹೇಳಬೇಕೆಂದಿದ್ದೇನೆ. ಈ ವಿಷಯಗಳೆಲ್ಲಾ ಬಡ್ಜೆಟ್ ವಿಚಾರದಲ್ಲಿ ಮಾತನಾಡುವಾಗ ಬಂದೇ ಇವೆ. ಈ ಮಸೂದೆಯ ಕ್ಷೇತ್ರ ಬಹಳ ಚಿಕ್ಕದು. ಹಿಂದೆ ಹೇಳದೆ ಇರುವ ಹೊಸ ವಿಚಾರವೇನಾದರೂ ಇದ್ದರೆ ಈಗ ಹೇಳಬಹುದು. ವೋಟ್ ಆನ್ ಅಕೌಂಟ್‌ಗೂ ಅಪ್ರೊಪ್ರಿಯೇಷನ್ ಮಸೂದೆಗೂ ವ್ಯತ್ಯಾಸವಿದೆ. ಹೀಗಾಗಬಾರದಾಗಿತ್ತು ಎಂದು ಹೇಳಬಹುದೇ ಹೊರತು ಸಾಮಾನ್ಯವಾಗಿ ಮಾತನಾಡಿದರೆ ನನಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಎಲ್ಲರೂ ಹೀಗೆ ಮಾತನಾಡಿದರೆ ಅದು ಬಡ್ಜೆಟ್ ಚರ್ಚೆಯಾಗುತ್ತದೆ. ಆದಕಾರಣ ತಮಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಈಗ ಚರ್ಚೆಯಾಗುತ್ತಿರುವ ಮಸೂದೆಯ ಕ್ಷೇತ್ರ ಬಹಳ ಕಡಮೆಯಾಗಿರುವುದರಿಂದ ಎಷ್ಟು ಹೇಳಬೇಕೋ ಅಷ್ಟನ್ನು ಮಾತ್ರ ಹೇಳಬೇಕೆಂದು ಮತ್ತೆ ಅರಿಕೆಮಾಡಿಕೊಳ್ಳುತ್ತಿದ್ದೇನೆ.

*Sri J. MOHAMED IMAM.—(Jagalur) Both on the supplementary grants and on the additional demands for grants, the entire time was utilised by the Ministers and they indulged in speaking about the Vidhana Soudha Report. They were not charitable enough to allot certain time for the members of the Opposition Party to offer their remarks on the various demands. Consequently all the demands for grants were guillotined. So, we were precluded, for no fault of ours, from having an opportunity to speak. Throughout the session they were working under a great handicap. The Finance Minister took the entire time, and the ex-Chief Minister took a lot of time. In all fairness I would request the Chair kindly to give some latitude to the members to express their opinion.

Mr. SPEAKER.—The Hon'ble the Leader of the Opposition took a lot of time. I never restrained him.

Sri J. MOHAMED IMAM.—You were kind enough to allot me more time, but I did not take the entire time. I did not want to come in the way of others. This being the last session of the present Assembly I would request you to allow the members to express their opinion. Secondly, when we vote against a Bill, we will give out our reasons as we did in the past. We cannot say off-hand why we oppose the Bill. What my friend (Sri L Siddappa) is saying is this: on account of these reasons we cannot entrust such huge sums of money to the Ruling party.

The main idea of opposing this Bill is this : on account of the internal quarrels and bickerings in the Congress Government, we are not in a position to entrust this huge fund. Till now we had enjoyed all the privileges of advancing our arguments. Under the Rules of Procedure and Conduct of Business, one day has to be set apart for discussion on the Appropriation Bill. There are many reasons for us to advance in respect of the Appropriation Bill and

members may be allowed to give out their reasons for opposing the same.

Mr. SPEAKER.—I cannot agree with the Leader of the Opposition when he says that Opposition Members were not given sufficient time in regard to Vote on Account. They were given sufficient time and I think most of the Opposition Members took part in the debate. Those who wanted to take part in the debate really participated in it and they used their time to the best advantage of themselves and to the best advantage of the House. That being so, I cannot understand how it would be right on my part to give the members more time to plod through on the same grounds. If any new grounds are brought in, I have no objection to give some more time. But if any member go the same way as budget discussion, desires to it would certainly be wrong on my part to allow such discussion. I have been looking into the authorities since yesterday and I have found out that in most of the Assemblies like Lok Sabha and the House of Commons they are having Vote on Account Bills first and then the Appropriation Bills. They are discussing the budget estimates and then they are introducing the Appropriation Bill relating to the demands. The same is the case in the Lok Sabha also. Here, in fact, we are not having a Vote on Account. This is a peculiar feature, which occurs once in five years. In spite of this situation, I allowed a full-dress debate. I would not like to stifle the debate on the Appropriation Bill relating to the Vote on Account. But then, the scope is very limited. In the Lok Sabha,—I read yesterday the relevant rule—the rules permit discussion only on matters which are not advanced at the stage of the Vote on Account or at the stage of discussion on the Budget. It is also the case in Andhra. In Andhra, when the Vote on Account came up, there was absolutely no discussion. It was put forthwith and the Appropriation Bill was passed.

Sri J. MOHAMED IMAM.—Here, we used to have a full discussion.

Mr. SPEAKER.—That previous practice has nothing to do with this. Before making a decision, I always take the previous practices into consideration. In fact, the idea as expressed by both the Speaker of the Lok Sabha and the Presiding Officers Conference, was to have uniform procedure everywhere. With that end in view, I am now putting before the House that the Appropriation Bill, though it is in the nature of a Bill, is not really a Bill on which we can have a full-dress debate. I would therefore like Hon'ble Members to advance such of the arguments and to make out such of the points, which were not touched before, when we discussed the Vote on Account.

Sri L. SIDDAPPA.—I am under the impression that three opportunities are given to the House to make general observations. One is on the occasion of Motion of Thanks to the Governor for his Address to the House, the other during the budget discussion and the third when the Appropriation Bill is considered by the House. That was the practice before and I am not aware that it has changed.

Mr. SPEAKER.—I will not comment on the practice that was prevailing in the old Mysore Legislative Assembly. I agree with Sri Siddappa when he says that there are three opportunities when general discussion can take place. The first opportunity, as he just now said, is when we discuss matters on the Address of the Governor. The second occasion is, when we discuss the budget estimates. But the scope of the Appropriation Bill is not so wide. It might have been so in the old Mysore Legislative Assembly. But in other Assemblies and in the Parliament, the practice is not so. As I just now said, I am trying my level best to bring in uniform procedure so far as this House is concerned, on a level with the procedure in the Lok Sabha. That is more or less the recommendation of the Presiding Officers and also the wish of the Speaker of the Lok Sabha. I would therefore request once again that Hon'ble Members be as brief as possible and if they feel that they can make out new points or cover new grounds, I would certainly allow them to do so.

Sri L. SIDDAPPA.—I did not utilise the other two opportunities because I was under the impression that I would discuss the general points at the stage of the Appropriation Bill. As you were yourself pleased to make an observation that this is the last session of the old Legislative Assembly, you will relax some of the rules and permit more time. I would therefore request you, Sir, to give me some time to make some general observations.

Mr. SPEAKER.—In view of the request made by the Hon'ble Member, I will be a little lenient in his case, but I would not prefer to make myself so lenient in respect of other members.

ಶ್ರೀ ಎಲ್. ಸಿದ್ದಪ್ಪ.—ಸಾಮಾನ್ಯ ಜನರ ಹಿತರಕ್ಷಣೆ ಆಗುತ್ತಿಲ್ಲ. ಆಯವ್ಯಯದ ಮುಂಗಡ ಪತ್ರದ ಮೇಲೆ ಮಾತನಾಡುತ್ತ ನನ್ನ ಸ್ನೇಹಿತರಾದ ಶ್ರೀ ಬಿ. ಹುಚ್ಚೇಗೌಡರು ಹೇಳಿದರು, ಹಿಂದಿನ ಆಡಳಿತ ವರ್ಗದವರು ಕಾರಣಾಂತರದಿಂದ ಎಲಿಮೆಂಟರಿ ಪ್ರೈಮರಿ ಸ್ಕೂಲುಗಳನ್ನು ಎಷ್ಟು ಪ್ರಮಾಣದಲ್ಲಿ ಪ್ರಾರಂಭಿಸಬೇಕೆಂದು ಇಟ್ಟುಕೊಂಡಿದ್ದರೋ ಅಷ್ಟು ಪ್ರಮಾಣದಲ್ಲಿ ತೆರೆಯಲಿಲ್ಲ ಎಂದು ಆಕ್ಷೇಪಣೆ ಮಾಡಿದರು. ಅದಕ್ಕೆ ಉತ್ತರವನ್ನು ಮಂತ್ರಿಯವರು ಕೊಟ್ಟು ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಲಾಗಿದೆ ಎಂಬುದನ್ನು ಹೇಳಿದರು. ನಮ್ಮ ಆಕ್ಷೇಪಣೆ ಇಷ್ಟು; ಹಿಂದೆ ಎಲಿಮೆಂಟರಿ ಎಜ್ಯುಕೇಷನ್ ಜನರಲ್ಲಿ ಇತ್ತು. ಎಲಿಮೆಂಟರಿ ಎಜ್ಯುಕೇಷನ್ ಸ್ಟ್ಯಾಚುಟರಿ ಲಯಬಿಲಿಟಿ ಆಗಿತ್ತು. ಕಾಂಗ್ರೆಸ್ ಆಡಳಿತವು ಬಂದ ಕೂಡಲೇ ಸ್ಟ್ಯಾಚುಟರಿ ಆಬ್ಲಿಗೇಷನ್ ಇಲ್ಲ ಎಂದು ತಿಳಿದು ನಡೆಸಿಕೊಂಡು ಬರುತ್ತಿದ್ದಾರೆ. ಕಂಪಲ್ಸರೀ ಪ್ರೈಮರಿ ಎಜ್ಯುಕೇಷನ್ ಆಕ್ಟ್ ರಿಪೀಲ್ ಮಾಡಿದ್ದರೂ ಕೂಡ ಅದರಲ್ಲಿ ಅಡಕವಾಗಿರುವ ಅಂಶಗಳು ಬಹಳ ಇವೆ. ಗ್ರಾಮಾಂತರದಲ್ಲಿರುವ ಜನರಿಗೆ ಎಲಿಮೆಂಟರಿ ಎಜ್ಯುಕೇಷನ್ ಸಿಕ್ಕುತ್ತಿಲ್ಲ. ಜನಸಂಖ್ಯೆ ಬೆಳೆಯುತ್ತಾ ಇದೆ. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಇದೆ. ಆದರೆ ಹೊಸ ಶಾಲೆಗಳು ಆಗುತ್ತಿಲ್ಲ. ಪ್ರಾಥಮಿಕ ಶಾಲೆಗಳನ್ನು ಹೆಚ್ಚಿಸುವ ಅವಶ್ಯಕತೆ ಇದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಶಾಸನ ರಚನೆಯಾಗಬೇಕು.

ಇನ್ನು ಎರಡನೆಯ ವಿಷಯ. ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಸೌಕರ್ಯ ಇರಬೇಕು. ಮೊದಲನೆ ಪಂಚವಾರ್ಷಿಕ ಯೋಜನೆಯು ಮುಗಿದು ಈಗ ಎರಡನೆ ಪಂಚವಾರ್ಷಿಕ ಯೋಜನೆ ಬಂದಿದೆ. ಈಗ ಎನ್. ಈ. ಎಸ್. ಬಂದಿರುವುದರಿಂದ ಜನರಲ್ಲಿ ಪ್ರಗತಿ ಏನಾಗಿದೆಯೋ ನನಗೆ ತಿಳಿಯದು. ದೊರೆಯಬೇಕಾದ ಕೆಲವು ಸೌಲಭ್ಯಗಳು ದೊರೆತಿಲ್ಲ. ಮೈಸೂರು ಸರ್ಕಾರವು ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗದೆ ಹೋದರೆ ಅದಕ್ಕೆ ಬೇರೆ ಸಾಧನೆಗಳು ಇವೆ. ಬೇರೆ ಸಾಧನವನ್ನು ಉಪಯೋಗಿಸಿ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಲೋಕಲ್ ಡೆವಲಪ್‌ಮೆಂಟ್ ಸ್ಕೀಮಿನ ಬಗ್ಗೆ ಆಗುವ ಖರ್ಚಿನಲ್ಲಿ ಕೇಂದ್ರ ಸರ್ಕಾರದವರು ಶೇಕಡಾ 50 ರಷ್ಟು ಕೊಡುತ್ತಾರೆ. ಉಳಿದ 50 ಪರ್ಸೆಂಟಿನಲ್ಲಿ ಮೈಸೂರು ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳು ಹಣ ಹಾಕಿ ಎಲ್ಲ ಕೆಲಸ ಕಾರ್ಯಗಳನ್ನೂ ಒದಗಿಸಿಕೊಡಬೇಕು. ಈ ಸ್ಕೀಮಿನ ಸಲುವಾಗಿ ಕೇಂದ್ರ ಸರ್ಕಾರದವರು ಒದಗಿಸಿಕೊಟ್ಟ ಹಣವನ್ನು ಪೂರ್ತಿಯಾಗಿ ಉಪಯೋಗಿಸಿಲ್ಲ. ನೆರೆ ಪ್ರಾಂತವಾದ ಮದರಾಸಿನಲ್ಲಿ ಮಾಡಿದಂತೆ ಮಾಡಬೇಕು. ಕೇಂದ್ರ ಸರಕಾರದವರು ಕೊಡುವ ಗ್ರಾಂಟನ್ನು ಪೂರ್ಣವಾಗಿ ಉಪಯೋಗಿಸಿ ಅಭಿವೃದ್ಧಿ ಕಾರ್ಯಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಮಾಡಬೇಕು. ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಕುಡಿಯುವ ನೀರಿನ ಸೌಕರ್ಯ ಸ್ಯಾನಿಟೇಷನ್ ಸ್ಕೀಮು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನ ಕೊಡಬೇಕು.

ಈ ಯೋಜನೆಗಳನ್ನು ಮೂರು ಬ್ಯಾಚುಗಳಲ್ಲಿ ಕಳುಹಿಸಬೇಕಾಗಿದೆ. ಮೊದಲನೆಯ ಬ್ಯಾಚನ್ನು ಅಪ್ರೂವಲ್‌ಗೆ ಕಳುಹಿಸಿಕೊಟ್ಟಿದ್ದೇವೆ. ಇನ್ನು ಮೊದಲನೆ ಬ್ಯಾಚಿಗೆ ನಾವು ಪೂರ್ಣವಾಗಿ ಹಣ ಖರ್ಚು ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಏಕೆಂದರೆ ಈ ವ್ಯವಸ್ಥೆಗೆ ಇನ್ನೂ ಸ್ಯಾಂಕ್ಷನ್ ಬಂದಿಲ್ಲ. ಈ ರೀತಿ ಈಗ ಇರುವ ಹಣವನ್ನೇ ಉಪಯೋಗಿಸದೆ ಇರುವುದರಿಂದ ಜನಗಳಿಗೆ ಇದರ ಸೌಕರ್ಯ ಸಿಕ್ಕಿಲ್ಲ. ಕೊಡುವ ಗ್ರಾಂಟುಗಳು ಸಾಕಾಗದೆ, ಅದರಿಂದ ಜನರಿಗೆ ಹೆಚ್ಚಿಗೆ ಉಪಯೋಗವಾಗುತ್ತಿಲ್ಲ. ಆದುದರಿಂದ ಈ ಲೋಕಲ್ ಡೆವೆಲಪ್‌ಮೆಂಟ್ ಸ್ಕೀಮುಗಳಿಗೆ ಸರಿಯಾದ ಗ್ರಾಂಟುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ತಮ್ಮ ಅವಗಾಹನೆಗೆ ತರಬೇಕಾಗಿದೆ. ಹೊನ್ನೆಮರಡು ಹೈಡ್ರೋ ಎಲೆಕ್ಟ್ರಿಕ್ ಸ್ಕೀಮನ್ನು ತಾವು ಸ್ಯಾಂಕ್ಷನ್ ಮಾಡಿದ್ದೀರಿ. ಇದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅದಕ್ಕಿಂತ ಜಾಸ್ತಿ ಮಂಜೂರು ಮಾಡಿದ್ದೀರಿ. ಅಲ್ಲಿ ಹಾಲಿ ಕೆಲಸ ಮಾಡತಕ್ಕವರು ಹೆಚ್ಚಾಗಿದ್ದರೂ ಇನ್ನೂ ಸರ್ವೇ ಅಲೈನುಮೆಂಟು ಮಾಡಿಲ್ಲ. ಇಲ್ಲಿಗೆ ಒಬ್ಬರು ಸೂಪರಿಂಟೆಂಡಿಂಗ್ ಇಂಜನಿಯರು, ಮತ್ತು ಎರಡು ಮೂರು ಡಿವಿಜನ್ನುಗಳನ್ನು ಸ್ಯಾಂಕ್ಷನ್ ಮಾಡಿದ್ದೀರಿ ಮತ್ತು ಒಂದೊಂದು ಡಿವಿಜನ್ನಿಗೂ ಡಿವಿಜನ್ ಆಫೀಸರು, ಇಂಜನಿಯರಿಂಗ್ ಗ್ರಾಜ್ಯುಯೇಟುಗಳು, ಸರ್ವೇಯರುಗಳು ಕೆಲಸ ಮಾಡುತ್ತಿದ್ದಾರೆ ಮತ್ತು ಇದರ ಮೇಲೆ ಸಬಾರ್ಡಿನೇಟುಗಳು ಬೇರೆ ಇದ್ದಾರೆ. ಆದರೆ ಅವರಿಗೆಲ್ಲ ಮಾಡುವುದಕ್ಕೆ ಸಾಕಾದಷ್ಟು ಕೆಲಸವಿದೆಯೋ ಎಂಬುದನ್ನು ಯೋಚನೆ ಮಾಡಬೇಕು. 1955ನೇ ಅಕ್ಟೋಬರು ತಿಂಗಳಿನಲ್ಲಿ ಈ ಸಿಬ್ಬಂದಿಯನ್ನೆಲ್ಲಾ ಸ್ಯಾಂಕ್ಷನ್ ಮಾಡಿದ್ದೀರಿ. ಅಲ್ಲಿರುವ ಅಷ್ಟೊಂದು ಸಿಬ್ಬಂದಿಗೆ ಕೆಲಸವಿದೆಯೋ ಇಲ್ಲವೇ, ಅವರಿಗೆ ಖರ್ಚಾಗುತ್ತಿರುವುದು ಯುಕ್ತವಾಗಿದೆಯೋ ಎಂಬುದನ್ನೆಲ್ಲ ಪರಿಶೀಲನೆ ಮಾಡಬೇಕೆಂದು ವಿನಂತಿ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ ಇಲಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ನಾನು ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಅರಿಕೆ ಮಾಡಲು ಇಷ್ಟಪಡುತ್ತೇನೆ. ಅವರು ಹೇಳಿದಂತೆ ಈಚೆಗೆ ಸಿಬ್ಬಂದಿಯನ್ನು ಹೆಚ್ಚಿಗೆ ಮಂಜೂರು ಮಾಡಿದ್ದೇವೆ. ಆಗ ಹೆಚ್ಚಿಗೆ ಕೆಲಸ ಇರಲಿಲ್ಲ. ಈಗ ಅವರಿಗೆಲ್ಲ ಸಾಕಾದಷ್ಟು ಕೆಲಸವಿದೆ. ಬೇಗ ಈ ಕೆಲಸವನ್ನು ಮಾಡಲು ಹೀಗೆ ಮಾಡಿದ್ದೇವೆ ಅಷ್ಟೆ.

ಶ್ರೀ ಎಲ್. ಸಿದ್ದಪ್ಪ.—ಅಲೈನುಮೆಂಟು ಕೆಲಸದ ಎಕ್ಸಿಕ್ಯೂಷನ್ನೇ ಇನ್ನೂ ಆಗಿಲ್ಲ. ಒಂದು ಡಿವಿಜನ್ನಿಗೇನೋ ಕೆಲಸವಿದೆ. ಮೂರು ಡಿವಿಜನ್ನುಗಳು,

ಅಷ್ಟೊಂದು ಸಬ್‌ಡಿವಿಜನ್ನುಗಳಿಗೆ ಅಲ್ಲಿ ಈಗ ಆಷ್ಟೇನೂ ಕೆಲಸವಿಲ್ಲ. ಪುನಃ ಇದನ್ನು ಪರಿಶೀಲಿಸಬೇಕೆಂದು ತಮ್ಮ ಅವಗಾಹನೆಗೆ ಈ ವಿಷಯವನ್ನು ತರಬೇಕಾಗಿದೆ.

ಇನ್ನೊಂದು ವಿಷಯ ಮುಖ್ಯವಾದದ್ದು ಮರಾಮತ್ತು ಶಾಖಾ ಸಚಿವರ ಗಮನಕ್ಕೆ ತರಬೇಕಾಗಿದೆ. ಅದು ಭದ್ರಾರಿಸರ್ವಾಯರ್ ಪ್ರಾಜೆಕ್ಟಿನ ನಾಲಾ ಕೆಲಸಕ್ಕೆ ಸಂಬಂಧಪಟ್ಟದ್ದು. ಇಲ್ಲಿ ಕೂಲಿಗೆ ಖರ್ಚಾಗುತ್ತಿರುವ ಮೊಬಲಗನ್ನು ತಾವು ನೋಡಬೇಕು. ಒಂದು ಡಿವಿಜನ್ನಿನಲ್ಲಿ ರೇಟು ಬಹಳ ಜಾಸ್ತಿ. ಇನ್ನೊಂದು ಡಿವಿಜನ್ನಿನಲ್ಲಿ ರೇಟು ಬಹಳ ಕಡಮೆಯಿದೆ. ಬೇರೆ ಡಿವಿಜನ್ನಿನಲ್ಲಿ ಜಾಸ್ತಿ ಹಣ ತೆಗೆದುಕೊಂಡು ಕೆಲಸ ಮಾಡುತ್ತಿರುವ ಕೂಲಿಯವರಿಗೂ ಇಲ್ಲಿ ಕಡಮೆ ಹಣ ತೆಗೆದುಕೊಂಡು ಕೆಲಸ ಮಾಡುತ್ತಿರುವವರಿಗೂ ಸ್ವಲ್ಪ ಘರ್ಷಣೆಯಾಗುವ ಸಂಭವವಿದೆ. ಈ ರೀತಿಯಾಗಿ ಒಂದು ಡಿವಿಜನ್ನಿಗೆ ಒಂದು ರೇಟು ಮತ್ತೊಂದು ಡಿವಿಜನ್ನಿಗೆ ಮತ್ತೊಂದು ರೇಟು ಇರುವುದನ್ನು ಪುನರ್ವಿಮರ್ಶಿಸಿ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಭದ್ರಾರಿಸರ್ವಾಯರ್ ಎಂಟ್ಯೈರ್ ಸ್ಕೀಮಿನಲ್ಲಿ ಟನಲ್ಸ್ ಡಿವಿಜನ್ನಿನಲ್ಲಿ ಷೆಡ್ಯೂಲ್ ಆಫ್ ರೇಟ್ಸು ಪ್ರಕಾರ ಅಮಾನಿಯಾಗಿ ಕೆಲಸ ಮುಂದುವರಿದು ಬಹಳ ತೃಪ್ತಿಕರವಾಗಿ ನಡೆದಿದೆ. ಆರವಳ್ಳಿ ಬ್ರ್ಯಾಂಚಿನಲ್ಲಿ ಇದುವರೆಗೆ ಅಮಾನಿಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಅಮಾನಿ ಬ್ರ್ಯಾಂಚಿನಲ್ಲಿ ಟೆಂಡರ್ ಕಾಲ್‌ಫಾರ್ ಮಾಡಬೇಕು. ಇಂತಹ ಕೆಲಸಗಳಲ್ಲಿ, ಸರಕಾರಕ್ಕೂ ಕೂಡ ನಷ್ಟವಾಗುವ ಸಂಭವವಿದೆ. ಕಂಟ್ರಾಕ್ಟರುಗಳಿಗೂ ನಷ್ಟವಾಗುವ ಸಂಭವವಿದೆ. ಇಲ್ಲಿ ಪಿಟ್ಟುಗಳನ್ನು ತೆಗೆದು ನೋಡಿದರೆ ಕೆಲವಡೆ ಬಂಡೆಗಳು ಸಿಕ್ಕುತ್ತವೆ, ಕೆಲವಡೆ ಸಾಫ್ಟ್ ಸಾಯಿಲ್ ಸಿಕ್ಕುತ್ತದೆ, ಮತ್ತೆ ಕೆಲವೆಡೆ ಹಾರ್ಡ್ ಸಾಯಿಲ್ ಸಿಕ್ಕುತ್ತದೆ. ಹೀಗೆ ಸಾಫ್ಟ್ ಸಾಯಿಲ್ ಸಿಕ್ಕಿದರೆ ಸರ್ಕಾರಕ್ಕೆ ಲುಕ್ಸಾನಾಗುತ್ತದೆ. ಆದ್ದರಿಂದ ಈ Test Pits ಪದ್ಧತಿಯನ್ನು ಅನುಸರಿಸಿದರೆ ಹಾರ್ಡ್‌ಸಾಯಿಲ್ ಅಥವಾ ಸಾಫ್ಟ್‌ಸಾಯಿಲ್‌ಗಳಿರುವುದು ಗೊತ್ತಾಗಿ, ಕಂಟ್ರಾಕ್ಟರುಗಳು ಮಾಡುವ ಕೆಲಸಕ್ಕೆ ಅಡಚಣೆಯನ್ನುಂಟುಮಾಡದೆ, ನಮ್ಮ ಸರಕಾರಕ್ಕೆ ಲುಕ್ಸಾನು ಆಗದಂತೆ ಮಾಡಬಹುದು. ಹೀಗೆ ಮಾಡದೆ ಹೋದರೆ ಸುಮ್ಮನೆ ಕಂಟ್ರಾಕ್ಟರುಗಳು ಮಾಡಿದ ಕೆಲಸ ಸರಿಯಾಗಿಲ್ಲವೆಂದು ಅವರಿಗೆ ನೋಟೀಸು ಕೊಟ್ಟು ಅವರ ಕಂಟ್ರಾಕ್ಟನ್ನೂ ಕ್ಯಾನ್ಸಲ್ಲು ಮಾಡಬೇಕಾಗಿ ಬರುತ್ತದೆ.. ಅಲ್ಲದೆ Rainy seasonನಲ್ಲಿ ಇದರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಳೆ ಬರುವುದಕ್ಕೆ ಮುಂಚೆ ಈ ಕೆಲಸಗಳಾಗಬೇಕು. ಈಗ ಸುಮಾರು 25 ಮೈಲಿಯಿಂದ 30 ಮೈಲಿ 40ಮೈಲಿಗಳವರೆಗೆ ಚಾನಲ್ ಪ್ರೋಗ್ರೆಸ್ಸೇನೋ ಅದೇ ರೀತಿ ಮುಂದಕ್ಕೂ ಕೆಲಸಗಳನ್ನು ನಡೆಸಿಕೊಂಡು ಆಗಿದೆ. ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟು ವಿಷಯಗಳನ್ನು ಹೇಳಿ ನನಗೆ ಅಧ್ಯಕ್ಷರು ಇಷ್ಟು ಕಾಲಾವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ಅವರಿಗೆ ತುಂಬ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಅಪ್ರೋಪ್ರಿಯೇಷನ್ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಮುಖ್ಯವಾಗಿ ನಾವು ಈ ಸಭೆಯಲ್ಲಿ ಅನೇಕಪೇಳೆ ಸರಕಾರದ ದುಂದುವೆಚ್ಚಗಳನ್ನು ತಡೆಗಟ್ಟುವ ವಿಚಾರದಲ್ಲಿ ಸಲಹೆಗಳನ್ನು ಬಹಳ ಕಾತುರದಿಂದ ಮಾಡಿದ್ದೇವೆ. ಅದಕ್ಕೆ ಈವರೆಗೂ ಯಾವ ಬೆಲೆಯನ್ನೂ ಕೊಟ್ಟಿಲ್ಲ. ಉದಾಹರಣೆಗೆ ಈಗಾಗಲೆ ವಿಧಾನ ಸೌಧದ ವಿಚಾರವಾಗಿ ಅನೇಕರು ಮಾತನಾಡಿದ್ದಾರೆ. ಈ ಸರಕಾರ ಆಡಳಿತ ವಹಿಸಿದ ಮೇಲೆ ಈಚೆಗೆ ನಡೆಸಿರತಕ್ಕ ದುಂದು ವೆಚ್ಚದ ಬಗ್ಗೆ ವಿಚಾರಣೆ ಮಾಡಿ ಅದರಲ್ಲಿ ಯಾವುದು ಸರಿ, ಯಾವುದು ಪೋಲಾಗಿದೆ ಎನ್ನುವುದನ್ನು ತಿಳಿಸುವುದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿ ಎಂದು ಅನೇಕ ಸಾರಿ ನಿರ್ಣಯಗಳನ್ನು ಕಳುಹಿಸಿದ್ದೆವು. ಆದರೂ ಸರಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈಗ ಆ ರೀತಿಯ ಒಂದು ಕಮಿಟಿಯನ್ನು ಮಾಡಿ ಇಂಥ ಅಕ್ರಮ ಮತ್ತು ದುಂದು ವೆಚ್ಚಗಳ ಬಗ್ಗೆ ವಿಚಾರಮಾಡಿ ಎಂದು ನಾವೇ ಒತ್ತಾಯ ಮಾಡುತ್ತಿದ್ದೇವೆಂದು ಶ್ರೀ ಮರಿಯಪ್ಪ ನವರೇ ಹೇಳಿದ್ದಾರೆ. ಹಿಂದೆ ಎಲ್ಲ ನಾವು ಹೇಳಿದಾಗ ವಿರೋಧಪಕ್ಷದವರು ಬರೀ ವಿರೋಧಕ್ಕೋಸ್ಕರ ಈ ರೀತಿ ಹೇಳುತ್ತಿದ್ದಾರೆ, ಇದರಲ್ಲಿ ರಚನಾತ್ಮಕವಾದ ಸಲಹೆಗಳಿಲ್ಲ ಎಂದು ಹೇಳುತ್ತಿದ್ದವರು ಈಗ ಅದನ್ನು ಅವರೇ ಒಪ್ಪಿಕೊಂಡಿದ್ದಾರೆ. ದುಂದು ವೆಚ್ಚವಾಗುತ್ತಿದೆ, ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಮತ್ತು ಅಧಿಕಾರಿಗಳು ಮಂತ್ರಿಗಳ ಇಷ್ಟ ಪ್ರಕಾರ ನಡೆಯಬೇಕು ಇಲ್ಲದೆ ಇದ್ದರೆ ಅವರಿಗೆ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆಂದು ಬೆದರಿಕೆ ಹಾಕುತ್ತಾರೆ, ಎಂಬುದಾಗಿ ನಿನ್ನೆಯ ದಿನ ಮಾತನಾಡಿದ ಇಬ್ಬರು ಮಾನ್ಯ ಮಂತ್ರಿಗಳೂ ಹೇಳಿದ್ದಾರೆ. ನಾವು ಹಿಂದಿನಿಂದ ಯಾವ ಒಂದನ್ನು ವಿಚಾರವನ ಬಹಳ ಕಾತರತೆಯಿಂದ, ದೇಶದ ಹಿತದೃಷ್ಟಿಯಿಂದ, ಮತ್ತು ನ್ಯಾಯದೃಷ್ಟಿಯಿಂದ ಸತ್ಯದೃಷ್ಟಿಯಿಂದ ಹೇಳುತ್ತಿದ್ದೆವೋ ಅದಕ್ಕೆ ಮನ್ನಣೆ ಇವೊತ್ತು ದೊರಕಿದೆ ಎಂದು ಹೇಳಬಹುದು.

ಆಡಳಿತದಲ್ಲಿ, ಅದರಲ್ಲಿಯೂ ಕೂಡ ಈಗಿನ ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ ಇಲಾಖೆ ದಕ್ಷತೆಯಿಂದ ನಡೆಯಬೇಕು ಮತ್ತು ಆದಷ್ಟು ಜಾಗ್ರತೆ ನ್ಯಾಯವನ್ನು ದೊರಕಿಸಿ ಕೊಡಬೇಕು ಎನ್ನುವ ಉದ್ದೇಶದಿಂದ ನ್ಯಾಯಾಂಗವು ಸ್ವತಂತ್ರವಾಗಿರಬೇಕು ಎಂದು ನಮ್ಮ ರಾಜ್ಯಾಂಗದಲ್ಲಿ ಅಳವಡಿಸಿದ್ದಾರೆ. ಆದರೆ ಇವೊತ್ತು ಏನಾಗುತ್ತಿದೆ ಎಂದರೆ ನಮ್ಮ ಹಿಂದಿನ ಮೈಸೂರಿನಲ್ಲಿ, ಐದು ಜನ ಹೈಕೋರ್ಟು ಜಡ್ಜಿಗಳು ಇದ್ದರೂ ಸಹ; ಈಗಿನ ವಿಶಾಲ ಮೈಸೂರಿಗೆ ಕೇವಲ ಮೂರು ಜನ ಮಾತ್ರ ಹೈಕೋರ್ಟು ಜಡ್ಜಿಗಳಿದ್ದಾರೆ. ಅವರಲ್ಲಿಯೂ ಕೂಡ ಒಬ್ಬರು administration side ನೋಡಿಕೊಳ್ಳುತ್ತಾರೆ.

Mr. SPEAKER.—That point has already been considered. I think some Hon'ble Member has already spoken on this point. ತಾವು ಹೊಸ ವಿಷಯಗಳನ್ನು ಹೇಳುತ್ತಿಲ್ಲ. ಈ ಬಗ್ಗೆ ಈಗಾಗಲೇ ಕೆಲವು ಸದಸ್ಯರು ಮಾತನಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—Comparative ಆಗಿ ಹೇಳುತ್ತಿದ್ದೇನೆ. ಯಾವುದರಲ್ಲಿ ತಮಗೆ ಆಸಕ್ತಿ ಇದೆ; ತಮ್ಮ ಕಡೆಯವರು ಯಾರಿದ್ದಾರೆ ಎಂದು ನೋಡಿಕೊಂಡು ಕೆಲಸ ಮಾಡುತ್ತಾರೆ. ನ್ಯಾಯಾಂಗ ಶಾಖೆಯ ವಿಚಾರದಲ್ಲಿ ರಾಜ್ಯಾಂಗದ ಒಂದು ಮುಖ್ಯ ತತ್ವವನ್ನೇ ಕಡೆಗಣಿಸಿದ್ದಾರೆಂದು ಹೇಳುವುದು ನನ್ನ ಕರ್ತವ್ಯ. ಹತ್ತು ಜನ ನ್ಯಾಯಾಧಿಪತಿಗಳು ಇರಬೇಕೆಂದು ಮಾಡಿರುವಕಡೆ ಇಬ್ಬರು, ಮೂವರು ಮಾತ್ರ ಇದ್ದಾರೆಂದರೆ ಯಾರಿಗಾದರೂ ನ್ಯಾಯ ದೊರೆಯುತ್ತದೆಯೇ ಇಲ್ಲವೇ ಎನ್ನುವುದನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ಇವೊತ್ತಿನ ದಿವಸ writ petitions, stay orders, ಇವುಗಳನ್ನು ಪರಿಶೀಲನೆ ಮಾಡುವು

(ಶ್ರೀ ಬಿ. ಹುಚ್ಚೇಗೌಡ.)

ದಕ್ಕೇ ಅವರಿಗೆ ಅವಕಾಶವಿಲ್ಲದ ಹಾಗೆ ಆಗಿದೆ. Hearing date ಹಾಕಿ ಕೊಡುವುದಕ್ಕೇ ಅವಕಾಶ ವಿಲ್ಲವೆಂದು ಹೇಳುತ್ತಾರೆ. ಹಳೆಯ ಮೈಸೂರಿನ ಒಂಬತ್ತು ಜಿಲ್ಲೆಗಳಿಗೆ ಐದು ಜನ ನ್ಯಾಯಾಧಿಪತಿಗಳಿದ್ದರು. ವಿಶಾಲ ಮೈಸೂರಿನ ಹತ್ತೊಂಭತ್ತು ಜಿಲ್ಲೆಗಳಿಗೆ ಮೂರು ಜನ ಮಾತ್ರ ಇದ್ದಾರೆಂದರೆ, ಅಲ್ಲಿಯ ಕೆಲಸಕಾರ್ಯಗಳು ಯಾವ ರೀತಿ ನಡೆಯಬೇಕು, ಸಾಮಾನ್ಯವಾಗಿ ಜನಗಳಿಗೆ ಜಾಗ್ರತೆ ನ್ಯಾಯ ದೊರೆಯುತ್ತದೆಯೇ, ವರ್ಷಗಟ್ಟಲೆ ಯಾದರೂ ನ್ಯಾಯ ದೊರೆಯುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕಾದದ್ದು ಬಹಳ ಅವಶ್ಯಕ.

ಅಧ್ಯಕ್ಷರು.—ತಾವು ಅದೇ ವಿಷಯವನ್ನು ಹೇಳುತ್ತಿದ್ದೀರಿ. ಇದನ್ನು ಕೆಲವರು ಹಿಂದೆಯೇ ಹೇಳಿದ್ದಾರೆ. ಕಾಲ ಕಡಮೆ ಇರುವುದರಿಂದ ತಾವು ಬೇರೆವಿಷಯದ ಮೇಲೆ ಮಾತನಾಡುವುದಿದ್ದರೆ, ಅವುಗಳಮೇಲೆ ಮಾತನಾಡಿದರೆ ಒಳ್ಳೆಯದು. ಆಮೇಲೆ ಕಾಲ ಸಾಕಾಗದೆಂದು ನನ್ನಮೇಲೆ ತಾವು ಆಕ್ಷೇಪಣೆಮಾಡುವುದು ಬೇಡ.

ಶ್ರೀ ಬಿ. ಹುಚ್ಚೇಗೌಡ.—ಆದುದರಿಂದ ಈ ಸರಕಾರ ಸ್ವೇಚ್ಛೆಯಾಗಿ ನಡೆಯುತ್ತಿದೆ. ಯಾವುದು ಮುಖ್ಯವಾಗಿ ಅವಶ್ಯಕವಾಗಿದೆಯೋ ಅದಕ್ಕೆ ಗಮನ ಕೊಡುವುದಿಲ್ಲ. ಯಾವುದು ಅವಶ್ಯಕವಿಲ್ಲವೋ ಅದಕ್ಕೆ ಬೇಗ ಗಮನ ಕೊಟ್ಟು ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆನ್ನುವುದು ಇದರಿಂದ ಬಹಳ ಚೆನ್ನಾಗಿ ವ್ಯಕ್ತವಾಗುತ್ತದೆ.

ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಯಾವಾಗಲೂ ನಮ್ಮ ನಾಯಕರಾದ ಶ್ರೀ ಇಮಾಂರವರು ಹೇಳಿದ ಹಾಗೆ ದೊಡ್ಡ ಡಿಸ್ಟ್ರಿಕ್ಟ್ ಬೋರ್ಡ್ ಎನ್ನುವಹಾಗೆ ನಮ್ಮ ಮೈಸೂರು ಸಂಸ್ಥಾನವಿದೆ. ಯಾವ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕಾದರೂ ಕೂಡ ಕೇಂದ್ರಸರಕಾರದ ಸಹಾಯ ಬೇಕು. ಶಾಲಾ ಉಪಾಧ್ಯಾಯರುಗಳ ಸಂಬಳ ಸಾರಿಗೆ ಹೆಚ್ಚು ಮಾಡಬೇಕು ಎಂದರೆ, ಕೇಂದ್ರ ಸರಕಾರದವರು ಸಹಾಯ ಮಾಡಿದರೆ ಉಂಟು, ಇಲ್ಲದೆ ಇದ್ದರೆ ಇಲ್ಲ. ಇದೇ ರೀತಿಯಾಗಿ local development works ತೆಗೆದುಕೊಳ್ಳಬೇಕಾದರೂ ಕೂಡ ಕೇಂದ್ರದಿಂದ ಗ್ರ್ಯಾಂಟ್ ಬರಬೇಕು. ಈ ಪರಿಸ್ಥಿತಿ ಹೋಗಬೇಕು. ನಮ್ಮ ಸರಕಾರದವರು ವಿವೇಚನೆಯಿಂದ ನಡೆಯುತ್ತ ಅನುಕೂಲ ಪರಿಸ್ಥಿತಿ ಇರುವ ಹಾಗೆ ತಮ್ಮ ಆಡಳಿತದ ರೀತಿಯಲ್ಲಿ ಬದಲಾಣೆಗಳನ್ನು ಮಾಡಿದ ಹೊರತು ನಮ್ಮ ಸ್ಥಿತಿ ಬದಲಾಯಿಸುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ, ಈ ಸಾಲಿಗೆ ಸುಮಾರು 28 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದರಲ್ಲಿ ಹತ್ತೊಂಬತ್ತು ಲಕ್ಷ ರೂಪಾಯಿಗಳನ್ನು ಕೇಂದ್ರ ಸರಕಾರದಿಂದ ಸಾಲದ ರೂಪವಾಗಿ ಮತ್ತು ಸಹಾಯ ರೂಪವಾಗಿ ತೆಗೆದು ಕೊಳ್ಳುತ್ತಾರೆ. ಉಳಿದ ಹಣವನ್ನು ಯಾವರೀತಿ ಭರ್ತಿಮಾಡುತ್ತಾರೆ, ಸರಕಾರದವರು ಹಾಕಿಕೊಂಡಿರತಕ್ಕ ಯೋಜನೆಯನ್ನು ಯಾವ ರೀತಿ ಪರಿಪೂರ್ಣಗೊಳಿಸುತ್ತಾರೆ, ಎನ್ನುವುದಕ್ಕೆ ಒಂದು ಸಲಹೆಯೂ ಇದರಲ್ಲಿ ಕಾಣುತ್ತಿಲ್ಲ. ಮುಂದಿನ ಶಾಸನ ಸಭೆಯ ಅಧಿವೇಶನಕ್ಕೆ, ಮುಂದಿನ ಸರಕಾರಕ್ಕೆ ಇದನ್ನು ಬಿಟ್ಟಿದ್ದಾರೆಂದು ಇಟ್ಟುಕೊಳ್ಳೋಣ. ಇಲ್ಲಿಯವರೆಗೂ ಈ ಯೋಜನೆಗಳನ್ನು ಯಾವ ರೀತಿ ಕಾರ್ಯಗತಮಾಡಿದ್ದಾರೆ, ಯಾವ ಕಾರ್ಯವನ್ನಾದರೂ ಕೂಡ ಹೊಸದಾಗಿ ತೆಗೆದುಕೊಂಡು ಇವರು ಪೂರ್ಣಗೊಳಿಸಬೇಕಾಗಿದ್ದರೆ ಆಯಾ ವರ್ಷಕ್ಕೆ ಮಾತ್ರ ಗ್ರ್ಯಾಂಟ್ ತೆಗೆದುಕೊಂಡು ಅಲ್ಪಸ್ವಲ್ಪ ಕೆಲಸಮಾಡುವುದು, ದುಡ್ಡು ಇಲ್ಲದೆ ಹೋದರೆ ಆ ಕೆಲಸವನ್ನು ನಿಲ್ಲಿಸುವುದು ಎನ್ನುವ ಪರಿಸ್ಥಿತಿಯಾಗಿದೆ. ಸರಿಯಾದ ಅವಧಿಯಲ್ಲಿ ಕೆಲಸ ಮುಗಿಸುವುದಕ್ಕೆ ಬೇಕಾದಷ್ಟು ಸವಲತ್ತನ್ನು ಮಾಡಿಕೊಂಡಿದ್ದಾರೆಯೇ, ಅದಕ್ಕೆ ಬೇಕಾದ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಇದಕ್ಕೆ ನಮಗೆ ಯಾವ ಉತ್ತರವೂ ಬಂದಿಲ್ಲ.

ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ, ಈ ಸರಕಾರ ಯಾವ ರೀತಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆಂದರೆ, ಶ್ರೀ ಹನುಮಂತಯ್ಯ ಅವರ ಸರಕಾರವಾಗಲಿ, ಶ್ರೀ ನಿಜಲಿಂಗಪ್ಪ ಅವರ ಸರಕಾರವಾಗಲಿ, ಅಥವಾ ಇನ್ನೊಂದು ಸರಕಾರವೇ ಬರಲಿ ಸುಳ್ಳು ಹೇಳುವುದು ಎಂದರೆ ನೀರು ಕುಡಿದಹಾಗಾಗಿದೆ, ನಿಜದ ತಲೆಯಮೇಲೆ ಹೊಡೆದ ಹಾಗೆ ಸುಳ್ಳು ಹೇಳುತ್ತಾರೆ ಎಂದು ಹೇಳುತ್ತೇನೆ. ಇಲ್ಲಿಯವರೆಗೂ ಹಾಗೆಯೇ ನಡೆದುಕೊಂಡು ಬಂದಿದೆ.

ಶ್ರೀ ಟಿ. ಮರಿಯಪ್ಪ.—ಹಾಗೆ ಜನರಲ್ ಆಗಿ ಹೇಳಬೇಡಿ.

ಶ್ರೀ ಬಿ. ಹುಚ್ಚೇಗೌಡ.—ಶ್ರೀ ಮರಿಯಪ್ಪ ಅವರು ಮಂತ್ರಿಗಳಾಗಿದ್ದಾಗಲೂ ಕೂಡ ನಿಜದ ಅಪ್ಪನ ಹಾಗೆ ಹೇಳುತ್ತಿದ್ದರು. ಯಾವ ಸ್ಕೀಂ ಮಾಡಿದರೂ, ಅವರ ಕಾಲದಲ್ಲಿ ಕೂಡ ಅದನ್ನು ಕೊನೆ ಹತ್ತಿಸುತ್ತಿರಲಿಲ್ಲವೆಂದು ಅನೇಕ ಸಲ ಟೀಕೆ ಮಾಡಿದ್ದೇವೆ. ಇವರ ಕಾಲದಲ್ಲಿ ಕೋಆಪರೇಟಿವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದರು. ಅವುಗಳಲ್ಲಿ ಒಂದೂ ನಡೆಯುತ್ತಿಲ್ಲವೆಂದು ಹೇಳಬಹುದು. ಎಲ್ಲರೂ ದುಡ್ಡು ತಿಂದು ಹಾಕಿದ್ದಾರೆ. ಇಷ್ಟೇ ನಡೆಯುತ್ತಿರುವುದು. ಮಲ್ಟಿಪರ್ಪಸ್ ಸೊಸೈಟಿಗಳು ಯಾವ ರೀತಿ ನಡೆಯುತ್ತಿವೆ ಎಂಬುದನ್ನು ಕಾಲಾವಕಾಶವಿದ್ದರೆ ಹೇಳುತ್ತಿದ್ದೆ. ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೊಸಹೊಸ ಯೋಜನೆ ಹಾಕುತ್ತೇವೆಂದು ಹೇಳುತ್ತಾರೆ. ಆದರೆ ಒಂದನ್ನೂ ಕಾರ್ಯಗತಮಾಡಿಲ್ಲ. ಅದಕ್ಕೆ ಪ್ರತಿಯಾಗಿ ಪ್ರತಿಯೊಂದನ್ನೂ ತಿದ್ದುಪಡಿ ಮಾಡುವುದರಲ್ಲಿ, ಬದಲಾವಣೆ ಮಾಡುವುದರಲ್ಲಿ ಬುದ್ಧಿವಂತಿಕೆಯನ್ನು ಉಪಯೋಗಿಸುತ್ತಿದ್ದಾರೆ. ಕೆಲಸ ನಡೆಯುವುದಿರಲಿ, ಅದರಲ್ಲಿ ಏನಾದರೂ ನಿಜವಾಗಿ ಒಂದು ರಚನಾತ್ಮಕ ಸಲಹೆ ಬಂದರೆ ಅದನ್ನು ಸಾಧ್ಯವಾದ ಮಟ್ಟಿಗೆ ಜಾರಿಗೆ ತರಬೇಕು ಎನ್ನುವ ಅಭಿಪ್ರಾಯವಿಲ್ಲ. ಇದೇರೀತಿ ನಡೆಯುತ್ತಿರುವುದನ್ನು ಪ್ರತಿಯೊಂದು ಕೆಲಸದಲ್ಲಿಯೂ ಕೂಡ ನಾವು ನೋಡುತ್ತಿದ್ದೇವೆ. ಯಾವುದೂ ಕೂಡ.....

ಶ್ರೀ ಟಿ. ಮರಿಯಪ್ಪ.—ಸೊಸೈಟಿಗಳು ನಡೆಯುತ್ತಿವೆಯಲ್ಲ.

ಶ್ರೀ ಬಿ. ಹುಚ್ಚೇಗೌಡ.—ದುಡ್ಡು ತಿನ್ನುತ್ತಾ ಇದ್ದಾರೆ. ಹಾಗೆಯೇ ಗ್ರಾಮಾಭಿವೃದ್ಧಿಯೋಜನೆಯೂ ನಡೆಯುತ್ತಿದೆ.

ಶ್ರೀ ಟಿ. ಮರಿಯಪ್ಪ.—ಸೊಸೈಟಿಗಳಲ್ಲಿ ಏನು ತಪ್ಪಿದೆ ಎಂಬುದನ್ನು ತಿಳಿಸಿ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ದುಡ್ಡು ತಿಂದಿರುವುದೇ ತಪ್ಪು.

ಶ್ರೀ ಬಿ. ಹುಚ್ಚೇಗೌಡ.—ದಕ್ಷತೆ ಇಲ್ಲದೆ ಕೆಲಸಗಳು ನಡೆಯುತ್ತಿರುವುದೇ ತಪ್ಪು. ನಾನು ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಯಾವ ಸರಕಾರವೇ ಬರಲಿ, ಈ ಕಾಂಗ್ರೆಸ್ ಸರಕಾರದಲ್ಲಿ ಇದೇರೀತಿ ಕೆಲಸ ಕಾರ್ಯಗಳು ನಡೆಯುತ್ತವೆ. ಯಾವ ವಿಧಾನ ಸೌಧ ಸಮಿತಿಯ ವರದಿಯಲ್ಲಿ ಯಾವ ಟೀಕೆಗಳನ್ನು ನೋಡುತ್ತಿದ್ದೇವೆಯೋ, ಯಾವುದನ್ನು ಈಗ ಮಾನ್ಯಸಚಿವರು ಪ್ರತ್ಯಕ್ಷ

ವಾಗಿ ಒಪ್ಪಿಕೊಂಡರೋ ಅದು ಖಂಡಿತವಾಗಿಯೂ ವಾಸ್ತವವಾದದ್ದು. ಶ್ರೀ ವೀರಣ್ಣಗೌಡರು ಮಾತನಾಡುವಾಗ ತೊಗಲಕ್ ದರ್ಬಾರು ಎಂದು ಹೇಳಿದರು. ಆದರೆ ನಾವು ಡಿಮ್ಯಾಂಡು ಮನವಿಗಳು ಬಂದಾಗ ಅವನ್ನು ಪ್ರತಿಭಟಿಸಿದರೂ ಕೂಡ, ಇವರುಗಳು ಕೊಡಬೇಕು ಎಂದು ಅವಕ್ಕೆ ವೋಟುಮಾಡಿದರು. ಆ ರೀತಿ ವೋಟು ಮಾಡಿದಮೇಲೆ, ವ್ಯತ್ಯಾಸಗಳಾದರೆ ಸಾಧ್ಯವಾದ ಮಟ್ಟಿಗೂ ಅವರ ಮೇಲೆ ಸರ್‌ಚಾರ್ಜು ಮಾಡಬೇಕು. ಜಿಲ್ಲಾಬೋರ್ಡುಗಳಲ್ಲಿ ಮತ್ತು ಲೋಕಲ್ ಬೋರ್ಡುಗಳಲ್ಲಿ ಸರ್‌ಚಾರ್ಜ್ ಹಾಕುವುದಕ್ಕೆ ಅವಕಾಶವಿದೆ. ಅದೇರೀತಿ ಸರಕಾರದ ಆಡಳಿತದಲ್ಲಿಯೂ ಮಾಡುವ ಅವಕಾಶ ವಿರಬೇಕು. ಈಗ ನಾಲ್ಕು ವರ್ಷಗಳಿಂದಲೂ ವಿಧಾನ ಸಭೆಯ ಕಾಂಗ್ರೆಸ್ ಪಾರ್ಟಿಯವರು ಹಿಂದಿನ ಮುಖ್ಯಮಂತ್ರಿಗಳು ಮಾಡಿದುದಕ್ಕೆಲ್ಲ ವೋಟುಕೊಟ್ಟು, ಅವರು ಕೇಳಿದ್ದಕ್ಕೆಲ್ಲ ಹಣಕೊಟ್ಟು ಕೊನೆಯಲ್ಲಿ ಈ ರೀತಿ ಅವರ ಮೇಲೆ ಆಪಾದನೆಗಳನ್ನು ತಂದಿರುವುದು ತಮ್ಮ ಸ್ವಾರ್ಥದೃಷ್ಟಿಯಿಂದ ಎಂದು ಕಾಣುತ್ತದೆ. ಯಾರು ತಪ್ಪು ಮಾಡಿದ್ದಾರೋ ಅವರು ತಮ್ಮ ತಪ್ಪುಗಳಿಗೆಲ್ಲಾ ಜವಾಬ್ದಾರಿ ಹೊತ್ತು ತಮ್ಮ ಕೈಯಿಂದ ಸರ್‌ಚಾರ್ಜ್ ಹಣ ಕೊಡುವಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, ಈ ಬಿಲ್ಲನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ವಿರೋಧಿಸತಕ್ಕದ್ದೇ ಇವರದು ಒಂದು ಪದ್ಧತಿ ಎಂದು ಹೇಳುತ್ತಾರೆ. ಕಳೆದ 5 ವರ್ಷಗಳಿಂದಲೂ ಹಾಡಿದ ರಾಗವನ್ನೇ ಹಾಡುತ್ತಿದ್ದರೂ ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗುವ ದೃಷ್ಟಿಯಿಂದ ಎಷ್ಟೇ ರಚನಾತ್ಮಕ ಸಲಹೆಗಳನ್ನು ಕೊಟ್ಟರೂ, ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲದೆಯೋ ಅಥವಾ ಇನ್ನಾವ ಕಾರಣದಿಂದಲೋ ಯಾವ ಪರಿಣಾಮವೂ ಉಂಟಾಗದೆ, ಸರ್ಕಾರ ದಿನ ದಿನಕ್ಕೆ ಹೀನಸ್ಥಿತಿಗೆ ಬರುತ್ತಿದೆ. ಇದನ್ನು ಘಂಟಾಘೋಷವಾಗಿ ಐದು ವರ್ಷಗಳಿಂದಲೂ ಹೇಳುತ್ತಿದ್ದೇನೆ. ಇವೊತ್ತೂ ಅದೇ ಮಾತನ್ನು ಹೇಳುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಾದರೆ, ಕಳೆದ ಐದುವರ್ಷಗಳಿಂದ ಅಕ್ರಮವಾದ ಎಂದರೆ (irregular) ಅಡ್ಮಿನಿಸ್ಟ್ರೇಷನ್‌ನಿಂದ ಪ್ರತಿವರ್ಷವೂ ಆಡಳಿತದ ಕೈಬದಲಾವಣೆ ಆಗಿಯಾಗಿ ಆಡಳಿತ ನಡೆಸತಕ್ಕ ಅಧಿಕಾರಿಗಳಿಗೆ ಯಾವರೀತಿ ಕೇಸುಗಳನ್ನು ಡೀಲ್ ಮಾಡಬೇಕೆಂಬುದು ಅವರಿಗೇ ತಿಳಿಯದೆ ಕಣ್ಣು ಕತ್ತಲೆಯಾಗಿ ಇವೊತ್ತು ಯಾವ ಇಲಾಖೆಗೆ ಹೋದರೂ ಕೂಡ ಅವ್ಯವಸ್ಥೆ ತಲೆದೋರಿದೆ. ರೂರಲ್ ಡೆವಲಪ್‌ಮೆಂಟಾಗಲಿ, ಮತ್ತೊಂದಾಗಲಿ, ಕೆಲಸ ಕಾರ್ಯಗಳು ನಡೆದು ಅವಕ್ಕೆ ಪಾವತಿಮಾಡಬೇಕಾದ ಹಣ ಪಾವತಿಯಾಗದೆ ನಿಂತಿದೆ. ಇವೊತ್ತು ಮಾರ್ಚಿ 27ನೆಯ ತಾರೀಖಿನಲ್ಲಿ ಇದ್ದೇವೆ, ತಮ್ಮಲ್ಲಿ ದುಡ್ಡು ಇರಲಿಲ್ಲವೇ ಅಥವಾ ಸೆಂಟ್ರಲ್ ಗವರ್ನಮೆಂಟಿನವರು ಹಣಕೊಟ್ಟಿರಲಿಲ್ಲವೇ? ಕೆಲಸ ಕಾರ್ಯಗಳು ಸಕಾಲದಲ್ಲಿ ನಡೆಯಬೇಕು, ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗಬೇಕು, ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ನಿರ್ಮಾಣವಾಗಬೇಕು ಎಂದು ಹೇಳುತ್ತೀರಿ ಆದರೆ ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ತಮಗೆ ಯೋಗ್ಯತೆಯಾಗಲಿ, ದಕ್ಷತೆಯಾಗಲಿ ಇಲ್ಲ ಎಂದು ನಾನು ಹೇಳುತ್ತೇನೆ. ಏನೂ ಗೊತ್ತಿಲ್ಲದ ಮನುಷ್ಯನಿಗೂ, ಆಡಳಿತದ ವಿಷಯ ತಿಳಿದ ಮನುಷ್ಯನಿಗೂ ಬಹಳ ವ್ಯತ್ಯಾಸವಿದೆ. Laymen administration ಯಾವಾಗ ಕೈಗೆ ತೆಗೆದುಕೊಳ್ಳುತ್ತಾರೋ ಆಗ ಎಲ್ಲಿ ಲೋಪ ಇದೆ, ಎಲ್ಲಿ ಕುಂಠಿತವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಕಷ್ಟವಾಗಿ ಇಷ್ಟುತೊಂದರೆ ಬಂದಿದೆ. ಕೆಲಸಕಾರ್ಯಗಳು ನಿಧಾನವಾಗುವುದಕ್ಕೆ ಇದೇ ಕಾರಣ ಎಂದು ಹೇಳುತ್ತೇನೆ. ನಾನೂಕೂಡ ಈ ಮಂತ್ರಿಗಳಾಗಿರುವವರು ಮಾಡಿರುವ ಕೆಲಸವನ್ನೂ ನೋಡಿದ್ದೇನೆ, ಹಿಂದೆ ದಿವಾನರುಗಳಿದ್ದಾಗ ಅವರು ಮಾಡಿರುವ ಕೆಲಸವನ್ನೂ ನೋಡಿದ್ದೇನೆ. ಈಗ ಒಂದು ವಿಚಾರವನ್ನು particular ಆಗಿ ಹೇಳುತ್ತಾ ಇದ್ದೇನೆ. ತಾವು ಬಂದಲಾಗಾಯ್ತು ಇವೊತ್ತಿನವರೆಗೂ ಪಬ್ಲಿಕ್‌ಸರ್ವೀಸ್ ಕಮೀಷನ್ ರಿಪೋರ್ಟು ಬಂದಿಲ್ಲ. ಚೀಫ್ ಮಿನಿಸ್ಟರು ವಿಧಾನ ಪರಿಷತ್ತಿನಲ್ಲಿ ಏನು ಹೇಳಿದರೋ, ಅದು ಪೇಪರ್‌ನಲ್ಲಿ ಬಂದಿದೆ. ಅವರು ಕೊಡತಕ್ಕ ಉತ್ತರ, ಅವರ ಧೋರಣೆ ನನಗಂತೂ ಸರಿಹೋಗಲಿಲ್ಲ. ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಡಿಪ್ರೆಸ್ಡ್ ಕ್ಲಾಸ್ ರೆಪ್ರೆಸೆಂಟೇಷನ್ ಕೊಡುತ್ತೇವೆ, ಅವರನ್ನು ನೇಮಕ ಮಾಡುತ್ತೇವೆ ಎಂದು ಇಂದಿನ ಮತ್ತು ಹಿಂದಿನ ಸರ್ಕಾರದವರು ವಾಗ್ದಾನ ಮಾಡುತ್ತಲೇ ಬಂದಿದ್ದಾರೆ. 40 ಲಕ್ಷಜನ ಹರಿಜನರು ಇದ್ದಾರೆ. ಅವರುಗಳೆಲ್ಲಾ ವೋಟು ಮಾಡದೇ ಇದ್ದಿದ್ದರೆ, ಇವೊತ್ತಿನ ದಿನ ಕಾಂಗ್ರೆಸ್ ಮೆಂಬರುಗಳಾಗಲಿ, ಮಿನಿಸ್ಟರುಗಳಾಗಲಿ ಸರ್ಕಾರದಲ್ಲಿ ಇರುತ್ತಾ ಇರಲಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಹೀಗಿರುವಾಗ ಹರಿಜನರಿಗೆ ದಕ್ಷತೆ ಇಲ್ಲ ಎಂದು ಹೇಳುವ ಹಾಗಿಲ್ಲ. ದಕ್ಷತೆ ಇರುವವರು ಅನೇಕ ಜನರಿದ್ದಾರೆ. ದಕ್ಷತೆ, ಅರ್ಹತೆ ಇರುವವರು ಇಲ್ಲ, ಅರ್ಹತೆ ಇರುವವರು ಬಂದರೆ ಅಧಿಕಾರ ಸ್ಥಾನದಲ್ಲಿ ನೇಮಕ ಮಾಡುತ್ತೇವೆ ಎಂಬ ಮಾತನ್ನು ತಾವು ಎತ್ತುತ್ತೀರಿ. ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾವು ಅಪಾರ್ಥ ಮಾಡಿಕೊಂಡಿದ್ದೀರಿ. ಅವರು ಹರಿಜನರಲ್ಲಿ ದಕ್ಷರು ಯಾರೂ ಇಲ್ಲ ಎಂದು ಹೇಳಲಿಲ್ಲ. ದಕ್ಷತೆಯುಳ್ಳವರು ಸಿಕ್ಕರೆ ನೇಮಕ ಮಾಡುತ್ತೇವೆ ಎಂದು ಅವರು ಹೇಳಿದರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದು ಬರಿಯ ಕಾಗದದ ಮೇಲಿದೆ ಅಷ್ಟೆ. ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಕೆಲಸ ಮಾಡುವುದಕ್ಕೆ ದಕ್ಷತೆಯುಳ್ಳವರು ಇರಲಿಲ್ಲವೇ? ಕೋಮುವಾರು ಭಾವನೆ ಇಲ್ಲ ಎಂದು ಹೇಳಿದರು. ಸ್ವಾಮಿ, ಮಲ್ಲಿಕಾರ್ಜುನಪ್ಪ ಗೌಡರು ರಾಜೀನಾಮೆ ಕೊಟ್ಟರು, ಅವರ ಜಾಗದಲ್ಲಿ ಹರಿಜನರಲ್ಲಿ ಒಬ್ಬರನ್ನು ಏಕೆ ನೇಮಕ ಮಾಡಬಾರದಾಗಿತ್ತು? ಪಂಪನಗೌಡರನ್ನು ನೇಮಕ ಮಾಡುವುದಕ್ಕೆ ಕಾರಣವೇನು?

ಅಧ್ಯಕ್ಷರು.—ತಾವು ಪಬ್ಲಿಕ್ ಸರ್ವೀಸ್ ಕಮೀಷನ್ ವಿಷಯವಾಗಿ ಜನರಲ್ ಆಗಿ ಮಾತನಾಡಿದರೆ ಪರವಾಗಿಲ್ಲ. ಈ ವಿಷಯ ಈಗಾಗಲೇ ಚರ್ಚೆಯಾಗಿದೆ. ತಾವು ಮಾತನಾಡುವುಕ್ಕೆ ಅಡ್ಡಿಮಾಡಬೇಕೆಂಬ ಇಚ್ಛೆ ನನಗಿಲ್ಲ. ವ್ಯಕ್ತಿಶಃ ಮಾತನಾಡುವುದು ಒಳ್ಳೆಯದಲ್ಲ, ವ್ಯಕ್ತಿಶಃ ಮಾತನಾಡಿದರೆ ಅವರು ಈ ಸಭೆಗೆ ಬಂದು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಅವಕಾಶವಿಲ್ಲ. ಆದ್ದರಿಂದ ಆ ರೀತಿ ಮಾಡದೆ ಸಾಮಾನ್ಯವಾಗಿ ಮಾತನಾಡಿ; ಪಂಪನಗೌಡರ ವಿಷಯ ಹೇಳಬೇಡಿ.

ಶ್ರೀ ಎಂ. ಚಿಕ್ಕಲಿಂಗಯ್ಯ—ಪಂಪನಗೌಡರ ವಿಷಯದಲ್ಲಿ ನನಗೆ ಗೌರವವಿದೆ. ನಾನು ಹೇಳುವುದು ನಮ್ಮಲ್ಲಿ ದಕ್ಷರು ಇರಲಿಲ್ಲವೇ ಎಂದು. ಇದಕ್ಕೆ ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹರಿಜನರ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದವರು ಕಾನೂನುಗಳನ್ನು ಮಾಡಿದ್ದಾರೆ,ಸಹಾನುಭೂತಿಯನ್ನು ತೋರಿಸಿದ್ದಾರೆ. ಆದರೆ ಕಾರ್ಯತಃ ಯಾವಕಾರ್ಯವೂ

(ಶ್ರೀ ಎಂ. ಚಿಕ್ಕಲಿಂಗಯ್ಯ).

ಆದಂತೆ ಕಂಡು ಬರುತ್ತಾ ಇಲ್ಲ. ಇದೇ ರೀತಿ ಮುಂದುವರಿದರೆ ಐದು ಅಥವಾ ಹತ್ತು ವರ್ಷದ ಯೋಜನೆಯಾದರೂ ಕೂಡ ಸಾಲುವುದಿಲ್ಲ ಎಂದು ಕಾಣುತ್ತದೆ. ಯಾವ ನಿರ್ದಿಷ್ಟವಾದ ಯೋಜನೆ ಇದೆಯೋ ಗೊತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಬಹಳ ಉದಾಸೀನ ಮನೋಭಾವ ತೋರಿಸುತ್ತಿರುವುದು ಬಹಳ ವಿಷಾದಕರ. ಏಕೆಂದರೆ ಕಾಂಗ್ರೆಸ್ ಸರ್ಕಾರ ಈ ದಿವಸ ದೇಶದಲ್ಲಿರುವುದು ಆದಿಕರ್ಣಾಟಕರಿಂದ, ಹರಿಜನರಿಂದ, ಷೆಡ್ಯೂಲ್ಡ್ ಕ್ಯಾಸ್ಟಿನವರಿಂದ; ಓಟುದಾರರಲ್ಲಿ ಅವರೇ ಶೇಕಡ 90 ಮಂದಿ ಇದ್ದಾರೆ. ಬೇರೆಯವರು ಬಂದು ಅಷ್ಟಾಗಿ ವೋಟು ನೀಡುವುದಿಲ್ಲ. ಹರಿಜನರಲ್ಲಿ ಗಂಡಸರೂ ಹೆಂಗಸರೂ ಸಹ ಬಂದು ವೋಟನ್ನು ನೀಡುತ್ತಾರೆ. ಈ ಜನಗಳಿಗೆ ನೀವು ಕಾಂಗ್ರೆಸ್ಸಿಗೆ ವೋಟು ಕೊಡದಿದ್ದರೆ ನಿಮಗೆ ಕೊಟ್ಟಿರುವ ಹೆಂಚುಗಳು ಮುಂತಾದ್ದನ್ನೆಲ್ಲಾ ಕಿತ್ತುಕೊಳ್ಳುತ್ತೇವೆ, ಬಾವಿ ಸೌಕರ್ಯ ವಗೈರೆ ನಿಲ್ಲಿಸುತ್ತೇವೆ ಎಂದು ಕೂಡ ಹೆದರಿಸಿದ್ದಾರೆ. ಮದ್ದೂರು ತಾಲ್ಲೂಕಿನಲ್ಲಿ ಚಿಕ್ಕರಸಿನಕೆರೆ ಹೋಬಳಿ ಎಂಬ ಒಂದು ಹೋಬಳಿಯಿದೆ. ಚುನಾವಣೆಯಾದಮೇಲೆ ಎಂಟನೆಯ ತಾರೀಖು...

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಶೇಕಡ 99 ಮಂದಿ ಹರಿಜನರು ಕಾಂಗ್ರೆಸ್ಸಿಗೆ ವೋಟು ಕೊಟ್ಟಿದ್ದಾರೆಂದು ಒಂದುಕಡೆ ಹೇಳುವುದು, ಇನ್ನೊಂದು ಕಡೆ ಹರಿಜನರನ್ನು ಹೆದರಿಸಿ ಕಾಂಗ್ರೆಸ್ಸಿನವರು ಓಟು ತೆಗೆದುಕೊಂಡರೆಂದು ಹೇಳುವುದು ಅರ್ಥವಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ದಿವಸ ಗೃಹಸಚಿವರು ಹೋಗಿ ನೋಡಲಿ, ಹೆದರಿಸಿ ಪೂರ್ಣವಾಗಿ ಕೇರಿಯಿಂದ ಓಡಿಸಿದ್ದಾರೆ, ವೈಸ್ ಪ್ರೆಸಿಡೆಂಟ್ ಮನೆಯನ್ನು ಪೆಟ್ರೋಲು ಹಾಕಿ ಸುಟ್ಟಿದ್ದಾರೆ; ಇದರ ಮೇಲೆ ಕ್ರಮ ತೆಗೆದುಕೊಂಡಿಲ್ಲ. ದಬ್ಬಾಳಿಕೆಯನ್ನು ನಡೆಸಲು ಪ್ರಯತ್ನ ಜರುಗಿದೆ. ಸರ್ಕಾರದ ಪಕ್ಷಕ್ಕೆ ಬಹುಮತವಿದೆಯೆಂದು ಹೀಗೆಲ್ಲಾ ಆಗುತ್ತಿದೆ. ಇದೇರೀತಿ ಉದಾಸೀನ ಭಾವನೆಯನ್ನು ಮುಂದುವರಿಸಿದರೆ ಖಂಡಿತ ಕಾಂಗ್ರೆಸ್ ಸರ್ಕಾರ ಮುಂದುವರಿಯುವುದಿಲ್ಲ. ಕೇರಳದಲ್ಲೇನಾಗಿದೆ ಯೆಂಬುದನ್ನು ನೋಡಿದರೆ ಸರ್ಕಾರಕ್ಕೆ ಪರಿಣಾಮವೇನಾಗುತ್ತದೆಂಬುದು ಗೊತ್ತಾಗುತ್ತದೆ. ಮುಂದೆಯೂಕೂಡ ಕಾಂಗ್ರೆಸ್ ಸರ್ಕಾರ ತಮಗೆ ಹೆಚ್ಚು ಜನರ ಬೆಂಬಲವಿದೆ, ಅದರಿಂದ ಏನು ಬೇಕಾದರೂ ಮಾಡಬಹುದು, ಎದುರು ಪಕ್ಷ ಏನುಬೇಕಾದರೂ ಹೇಳಲಿ ಎಂದು ಉದಾಸೀನ ಮಾಡಿದರೆ ಖಂಡಿತ ಶ್ರೇಯಸ್ಸಾಗುವುದಿಲ್ಲ. ಒಂದು ವಿಷಯವನ್ನು ಹರಿಜನ ಸದಸ್ಯರಿಗೆ ಹೇಳುತ್ತೇನೆ. ಈಗ ಹರಿಜನ ಸದಸ್ಯರು 30 ಜನರಿದ್ದಾರೆ. ಸರ್ಕಾರ ಅನ್ಯಾಯ ಮಾಡುತ್ತಿದೆ. ಅದನ್ನು ತಡೆಗಟ್ಟಬೇಕು. ಷೆಡ್ಯೂಲ್ಡ್ ಕ್ಯಾಸ್ಟುಗಳಿಗೆ ಅನುಕೂಲಪಡಿಸಬೇಕೆಂಬ ಮನೋಭಾವವುಂಟಾಗುವಂತೆ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಸೂಚಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸನ್ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಾನ್ಯ ಸಚಿವರು ನಮ್ಮ ಸಭೆಯ ಮುಂದೆ ಮಂಡಿಸಿರುವ ಅಪ್ರೋಪ್ರಿಯೇಷನ್ ಮಸೂದೆಯನ್ನು ಸ್ವಾಗತಿಸುತ್ತ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸಂಸ್ಥಾನದಲ್ಲಿ ಅನೇಕ ತಾಲ್ಲೂಕು ಕಛೇರಿಗಳಲ್ಲಿ ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ಬಡವರು ಮತ್ತು ಇತರರಿಗೆ ಸಂಬಂಧಪಟ್ಟ ರಿಕಾರ್ಡುಗಳು ಮತ್ತು ಕಾಗದ ಪತ್ರಗಳ ವಿಲೇವಾರಿ ವರ್ಷ, ಎರಡು ವರ್ಷ, ಮೂರು ವರ್ಷ ಆದರೂ ಆಗುತ್ತಿಲ್ಲ. ಈ ಕಡೆಗೆ ಅನೇಕ ಸಾರಿ ಸಭೆಯ ಗಮನ ಸೆಳೆದರೂ ಪ್ರಜಾಪ್ರಭುತ್ವ ಹೆಚ್ಚು ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ.

ಸಂಸ್ಥಾನದಲ್ಲಿರುವ ಅರಣ್ಯಗಳಲ್ಲಿ ಗಿಡ, ಮರ ಬೆಳೆಯದೆ ಇರುವ ಜಮೀನು ಯಾವ ಯಾವ ತಾಲ್ಲೂಕುಗಳಲ್ಲಿದೆಯೆಂಬುದನ್ನು ಸರ್ವೆಮಾಡಿ ಆಯಾ ಪ್ರಾಂತಗಳಲ್ಲಿ ಜಮೀನಿಲ್ಲದಿರುವ ಮತ್ತು ಬಡತನದಲ್ಲಿರುವ ಎಲ್ಲಾ ಕೋಮುಗಳವರಿಗೂ ಈ ಜಮೀನು ಕೊಡುವುದಕ್ಕೆ ಪ್ರಯತ್ನಪಡಬೇಕು.

ತಾಲ್ಲೂಕಾಮಾಳೆ ಇರುವ ಅಮಲ್ದಾರರು ತಮ್ಮ ಪ್ರವಾಸ ಕಾಲದಲ್ಲಿ ಆಯಾ ಹಳ್ಳಿಗಳ ಸರಹದ್ದಿನಲ್ಲಿ ತಮಗೆ ಬಂದಿರುವ ಅರ್ಜಿಗಳನ್ನು ಸ್ಥಳದಲ್ಲೇ ಫೈಸಲು ಮಾಡುವಂತೆ ಸರ್ಕಾರದವರು ನಿಯಮವನ್ನು ಮಾಡಬೇಕು. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವ ಪ್ರಜೆಗಳ ಕೈಗೆ ಬಂದರೂ ಸರ್ಕಾರ ನೀಡುತ್ತಿರುವ ಸಹಾಯ ಪ್ರಜೆಗಳು ಪಡೆದಂತಾಗುವುದಿಲ್ಲ. ಇದನ್ನು ತೀವ್ರಾಸಕ್ತಿಯಿಂದ ಗಮನಿಸಬೇಕು.

ಮೈಸೂರು ಸಂಸ್ಥಾನದಲ್ಲಿ ಅನೇಕ ಕಡೆ ಈಗಾಗಲೆ ಜನರಲ್ ಹಾಸ್ಟೆಲುಗಳನ್ನು ಕೊಟ್ಟಿದ್ದಾರೆ. ಇನ್ನೂ ಅನೇಕ ಕಡೆ ಸರ್ಕಾರದ ಕೋಟಾ ಕಾಲು ಭಾಗ ಕೊಟ್ಟು ಹಾಸ್ಟೆಲುಗಳನ್ನು ತೆರೆದು ಬಡತನದಿಂದ ನರಳುವ ಮಕ್ಕಳು ವಿದ್ಯಾವಂತರಾಗಿ ಮುಂದುವರಿಯುವುದಕ್ಕೆ ಅವಕಾಶಮಾಡಬೇಕು.

ಸಂಸ್ಥಾನದಲ್ಲಿ ಕೋರ್ಟು, ಪಬ್ಲಿಕ್ ಸರ್ವಿಸ್ ಕಮಿಷನ್ ಮತ್ತು ಇನ್ನೂ ಅನೇಕ ವಿಧವಾದ ಇಲಾಖೆಗಳಿಗೆ ನೌಕರರನ್ನು ನೇಮಕ ಮಾಡುವಾಗ ಎಲ್ಲ ಮತದಾರರನ್ನೂ ಜ್ಞಾಪಕದಲ್ಲಿಟ್ಟು ದಕ್ಷರನ್ನು ನೇಮಿಸಬೇಕಾದದ್ದು ಪ್ರಜಾಪ್ರಭುತ್ವದಲ್ಲಿ ಅತ್ಯಗತ್ಯ. ಶ್ರೀ ಚಿಕ್ಕಲಿಂಗಯ್ಯನವರು ಎಲ್ಲ ಮಸೂದೆಗಳನ್ನೂ ವಿರೋಧಿಸುವ ಹಾಗೆ ಈ ಮಸೂದೆಯನ್ನೂ ವಿರೋಧಿಸಿದ್ದಾರೆ, ಇದು ಅವರ ಪದ್ಧತಿ, ಇದಕ್ಕಾಗಿ ಚಿಂತೆಪಟ್ಟುಕೊಳ್ಳಬೇಕಾಗಿಲ್ಲ. ಆದರೂ ಅವರು ಅನೇಕ ಸಾರಿ ಸಹಾಯ ಮಾಡಿದ್ದಾರೆ. ಅವರಿಗೆ ಒಳ್ಳೆಯ ಮನಸ್ಸಿದೆ. ಅವರು ಹೇಳಿರುವ ಉತ್ತಮ ಸಲಹೆಗಳನ್ನು ಗಮನಿಸಿ ತಕ್ಕ ಅನುಕೂಲ ಕಲ್ಪಿಸಿಕೊಡಲು ಪ್ರಯತ್ನ ಮಾಡಬೇಕು.

ಸಂಸ್ಥಾನಾಮಾಳೆ ಭಿಕ್ಷುಕರ ಕಾಲೋನಿ ವಗೈರೆ ಸಣ್ಣ ಸಂಸ್ಥೆಗಳು ಬಹಳವಾಗಿವೆ. ಸರ್ಕಾರದವರು ವಿಶಾಲ ಮನಸ್ಸಿನಿಂದ ಬಡವರು ಉದ್ಧಾರವಾಗಬೇಕು, ಭಿಕ್ಷೆ ಎತ್ತಬಾರದು ಎಂದು ಕಾಲೋನಿಯನ್ನೇರ್ಪಡಿಸಿ ಅಲ್ಲಿ ಅವರ ಜೀವನ ಮಟ್ಟ ಉತ್ತಮವಾಗಬೇಕು ಎಂದು ಒಂದು ಸದುದ್ದೇಶದಿಂದ ವ್ಯವಸ್ಥೆಮಾಡಿದ್ದಾರೆ. ಉದ್ದೇಶ ಸಾಧುವಾದುದಾದರೂ ಆ ಕಾರ್ಯಕ್ರಮ ಕೈಕೊಳ್ಳುವಾಗ ರೂಪರೇಷೆಗಳನ್ನು ನಿರ್ವಹಿಸುವಾಗ ಜವಾಬ್ದಾರಿಯನ್ನು ಹೊತ್ತಿರುವ ಅಧಿಕಾರವರ್ಗದವರು ಸರಿಯಾದ ವ್ಯವಸ್ಥೆ ಮಾಡಬೇಕು. ಈಗ ನಡೆಯುವ ರೀತಿಯಲ್ಲೇ ಕಾಲೋನಿ ವಗೈರೆ ನಡೆಯುವುದಾದರೆ ಸರ್ಕಾರದ ಹಣ ಪೋಲಾಗುವದೇ ವಿನಾ ಬೇರೆ ಗತ್ಯಂತರವಿಲ್ಲ ಎಂದು ಈ ಸಮಯದಲ್ಲಿ ತಿಳಿಸಬೇಕಾಗಿದೆ.

ಇನ್ನು ಸಹಕಾರದ ವಿಷಯ. ಇಡೀ ಸಂಸ್ಥಾನದಲ್ಲಿ ಈ ದಿವಸ ಸಹಕಾರ ತತ್ವದಿಂದ ಪ್ರಜಾಪ್ರಭುತ್ವ ನಡೆಯುವುದು ಎಲ್ಲರಿಗೂ ಗೊತ್ತಿರುವ ವಿಷಯ. ಸಹಕಾರದ ಜವಾಬ್ದಾರಿ ಹೊತ್ತಿರುವ ಮಾನ್ಯ ಮಂತ್ರಿಗಳಿಗೆ ಕೆಲವು ವಿಚಾರ ಹೇಳುತ್ತೇನೆ. ಎಲ್ಲೆಲ್ಲಿ ಸಹಕಾರತತ್ವದ ಮೇಲೆ ಏರ್ಪಾಡಾಗಿರುವ ಮಲ್ಟಿಪರ್ಪಸ್ ಸೊಸೈಟಿ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮುಂತಾದುವುಗಳ ಆಡಳಿತದಲ್ಲಿ ಅವ್ಯವಸ್ಥೆಯಾಗಿದೆಯೋ, ಇವುಗಳ ಲಾಭ ಪ್ರಜೆಗಳಿಗೆ ಎಲ್ಲಿ ದೊರಕಿಲ್ಲವೋ ಅವು

ಗಳನ್ನು ವಿಚಾರಮಾಡಿ ಸರ್ಕಾರದ ಮತ್ತು ರೈತರ ಹಣ ಪೋಲಾಗಿರುವ ಕಡೆ ತಕ್ಕ ಕ್ರಮ ಕೈಕೊಂಡು ಭದ್ರತೆಯುಂಟಾಗುವಂತೆ ಏರ್ಪಾಡುಮಾಡಬೇಕಾದದ್ದು ಅತ್ಯಗತ್ಯ. ಹೆತ್ತಮಕ್ಕಳನ್ನು ತಂದೆ ತಾಯಿಗಳು ಪೋಷಿಸುವ ಹಾಗೆ ಸರ್ಕಾರದ ಆಡಳಿತಕ್ಕೊಳಪಟ್ಟಿರುವ ಎಲ್ಲಾ ಇಲಾಖೆಗಳ ಕಡೆಗೂ ಸರ್ಕಾರ ಗಮನಕೊಟ್ಟು ಜನಸಾಮಾನ್ಯರಿಗೆ ಭರವಸೆ ಬರುವಂತೆಯೂ ಸಹಕಾರ ತತ್ವದ ಲಾಭ ದೊರೆಯುವಂತೆಯೂ ಏರ್ಪಾಡುಮಾಡಿ ಕೊಡಬೇಕು.

ಈ ಪ್ರಜಾಪ್ರಭುತ್ವದಲ್ಲಿ ಉತ್ತಮವಾದ ಮತ್ತು ಅಗತ್ಯವಾದ ಕೈಗಾರಿಕೆಗಳು ಸಾಕಷ್ಟಿವೆ. ಅವುಗಳಲ್ಲಿ ಉತ್ಪನ್ನನಾಗುವ ಎಲ್ಲ ಸಾಮಾನುಗಳನ್ನೂ ಅದರಲ್ಲೂ ಕಬ್ಬಿಣ, ಸಿಮೆಂಟು ವಗೈರೆ ಅತ್ಯುತ್ತಮವಾದ ಪದಾರ್ಥಗಳನ್ನು ವ್ಯಾಪಾರಸ್ಥರ ವಶಕ್ಕೆ ಕೊಡದೆ ಪ್ರಭುತ್ವದವರೇ ನೇರವಾಗಿ ಬಡ ಜನರಿಗೆ ಮಲ್ಟಿ ಪರ್ಪಸ್ ಸೊಸೈಟಿಗಳ ಮೂಲಕ ವಿನಿಯೋಗ ಮಾಡುವುದು ನನ್ನ ಅಭಿಪ್ರಾಯದಲ್ಲಿ ಬಹಳ ಸಾಧುವಾದುದು. ಎಷ್ಟು ಕೋಟಾ ಕಬ್ಬಿಣ ಸಂಸ್ಥಾನಕ್ಕೆ ಬರುತ್ತದೆಯೋ ಅದನ್ನು ಪೂರ್ತಿಯಾಗಿ ಮಲ್ಟಿಪರ್ಪಸ್ ಸೊಸೈಟಿಗಳಿಗೆ ಕೊಟ್ಟು ಆ ಮೂಲಕ ಬಡವರಿಗೆ ಹಳ್ಳಿಗಳಲ್ಲಿ ಸಿಕ್ಕುವ ಹಾಗೆ ಮತ್ತು ಪಟ್ಟಣಗಳವರಿಗೆ ಹೇಗೆ ದೊರೆಯಬೇಕೋ ಹಾಗೆ ಸೂಕ್ತಮಾರ್ಗವನ್ನನುಸರಿಸಬೇಕು. ಮೊದಲನಿಂದಲೂ ಅನಾದಿಯಾಗಿ ಪ್ರಜಾಪ್ರಭುತ್ವ ಜಾರಿಗೆ ಬರುವುದಕ್ಕೆ ಮುಂಚೆ ಲೈಸೆನ್ಸ್ ಪಡೆದಿರುವವರಿಗೆ ಕಬ್ಬಿಣ ಮತ್ತು ಸಿಮೆಂಟು ಕೊಟ್ಟು ಅವರ ಮೂಲಕ ಜನಸಾಮಾನ್ಯರಿಗೆ ಹಂಚುತ್ತಿದ್ದರು. ಆದರೆ, ಅದರಿಂದ ಜನಸಾಮಾನ್ಯರಿಗೆ ಎಷ್ಟು ಸಹಾಯವಾಗಬೇಕಾಗಿತ್ತೊ ಅಷ್ಟು ಆಗುತ್ತಿರಲಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ.

ಇನ್ನು ಮುಂದೆಯಾದರೂ ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಫಲಕಾರಿಯಾಗಿ ಇರುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಿ ಜನ ಸಾಮಾನ್ಯರಿಗೆ ಲಾಭವು ಸಿಕ್ಕುವಂತೆ ಗಮನದಲ್ಲಿಟ್ಟುಕೊಂಡು ವ್ಯವಸ್ಥೆಯನ್ನು ಮಾಡಬೇಕು. ಮೈಸೂರು ರಾಜ್ಯದಲ್ಲಿಯ ರೆವಿನ್ಯೂ ಸಬ್ ಡಿವಿಜನ್ ಕಚೇರಿಗಳನ್ನು ರದ್ದುಗೊಳಿಸಿ ಡಿಸ್ಟ್ರಿಕ್ಟಿನಲ್ಲಿ ದಕ್ಷ ಅಧಿಕಾರಿಗಳನ್ನು ನೇಮಿಸುವ ವ್ಯವಸ್ಥೆ ಮಾಡಬೇಕು. ಯಾವುದೇ ವಿಷಯದ ಕಾಗದ ಪತ್ರಗಳು ಸಬ್ ಡಿವಿಜನಿನ್ನಿಂದ ಡೆಪ್ಯೂಟಿ ಕಮೀಷನರ್ ಕಡೆಗೆ ಬರಬೇಕಾದರೆ ಆರು ತಿಂಗಳ ಕಾಲಬೇಕಾಗುತ್ತದೆ. ಹೀಗೆ ಕಾಲವಿಲಂಬ ಬಹಳ ಆಗುತ್ತದೆ. ನಾನು ಕೊಟ್ಟಿರುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿ ನನಗೆ ಹತ್ತು ನಿಮಿಷಮಾತ್ರ ನಾಡಲು ಅವಕಾಶಕೊಟ್ಟುದಕ್ಕಾಗಿ ಅಧ್ಯಕ್ಷರ ಆ ಭಾರ ಮನ್ನಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI B. S. KUSHALAPPA (Mercara Town).—Mr. Speaker, Sir, I am very grateful to you for having given me a chance of speaking. I should say, I have almost forgotten the habit of speaking. How I wish I had been a listener! But having got mixed up with these people who are very clever in speaking, I should say that I have also got the contagion. I assure you, Sir, I will not take much time of the House; neither do I indulge in any controversial matters. I know a lot of dust and mud has been raised and the pity is that we find all the mud and dust accumulated on the floor of this House; it is literally so. You see it all on the floor. This is the last occasion that I could speak and I am not hoping to come back at all nor have I planned to come back. Therefore I wish to place a few words before this House in respect of my own country.

In the year 1956 at the end of October when we resolved to have one State, there was a great feeling and apprehension amongst us, particularly in the people of Coorg. I would like to describe that feeling in a Kannada poem which runs thus. It was like the feeling of that Cow when it went to the Tiger entrusting its calf to the charge of its herd.

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯು ನೀ ಕರುವನು.

ಯಾವ ರೀತಿಯಾಗಿ ಗೋವು ಕೊಟ್ಟ ಭಾಷೆಗೆ ತಪ್ಪುವದಿಲ್ಲವೆಂದು ವ್ಯಾಘ್ರನಿಗೆ ಹೇಳಿ ಕರುವಿನ ಹತ್ತಿರ ಬಂದಾಗ ಭಾವನಾಪೂರಿತವಾಗಿ ಮಮತೆಯ ಮಾತುಗಳನ್ನು ಹೇಳಿರುವದೋ ಅದೇ ರೀತಿಯಾಗಿ ಕೊಡಗು ಮೈಸೂರಿನಲ್ಲಿ ಸೇರುವಾಗ ತಬ್ಬಲಿಯಾಗುವುದೆಂದು ಕೊಡಗಿನ ಜನತೆಯ ಅಂತಃಕರಣವು ಆಗಿತ್ತು. ಆದರೆ ನಿಜವಾಗಿ ವ್ಯಾಘ್ರ ಕಂಡುಬರಲಿಲ್ಲ. ಕೊಡಗು ತುಂಬ ಅಭಿವೃದ್ಧಿಯಾದ ಪ್ರದೇಶ. ನಮ್ಮ ಮುಂದಾಳುಗಳಾದ ಶ್ರೀ ಮರಿಯಪ್ಪ, ಶ್ರೀ ನಿಜಲಿಂಗಪ್ಪ ಇವರು ಕೊಡಗಿನ ಅಭಿವೃದ್ಧಿಯನ್ನು ನೋಡಿ ಬಹಳ ಹೊಗಳಿದ್ದಾರೆ. ಕೊಡಗಿನ ಅಭಿವೃದ್ಧಿಯನ್ನು ಮುಂದುವರಿಸಲಾಗುವುದಲ್ಲದೆ ತಡೆಗಟ್ಟುವುದಿಲ್ಲವೆಂದು ಭರವಸೆಯನ್ನಿತ್ತಿದ್ದಾರೆ. ಆ ಭರವಸೆಯನ್ನು ಹಾಗೆಯೇ ಇನ್ನು ಮುಂದಕ್ಕೂ ಇಟ್ಟುಕೊಳ್ಳಬೇಕು. ಇದುವರೆಗೂ ಕೊಡಗು ಒಂದು ಮಾದರಿ ಸಂಸ್ಥಾನವಾಗಿತ್ತು; ಇನ್ನು ಮುಂದೆಯಾದರೂ ಕೊಡಗು ಒಂದು ಮಾದರಿ ಡಿಸ್ಟ್ರಿಕ್ಟ್ ಆಗಿ ಇರುವಂತೆ ಮಾಡಬೇಕು. ಕೊಡಗಿನಲ್ಲಿಯ ಅಭಿವೃದ್ಧಿಗಳನ್ನು ಹೆಚ್ಚಿಸಬೇಕೇ ಹೊರತು ಹಿಂದಕ್ಕೆ ಹೋಗುವಂತೆ ಮಾಡಬಾರದು.

ಈ ಹೊಸ ರಾಜ್ಯದ ಹೆಸರು 'ಕರ್ನಾಟಕ' ಎಂದು ಇರಬೇಕೆಂದು ಕೆಲವರೂ 'ಮೈಸೂರು' ಎಂದು ಇರಬೇಕೆಂದು ಕೆಲವರೂ ಅಭಿಪ್ರಾಯಪಡುತ್ತಿದ್ದಾರೆ. ಇದು ನನಗೆ ಸಮಾಧಾನವನ್ನು ಉಂಟುಮಾಡಿಲ್ಲ. ಕನ್ನಡ ರಾಜ್ಯವಾಗಿರುವದರಿಂದ 'ಕರ್ನಾಟಕ' ಎಂಬ ಹೆಸರು ಬೇಕೆಂದು ಹಲವರು ಒತ್ತಾಯಪಡಿಸುತ್ತಿದ್ದಾರೆ. ಇದರಲ್ಲಿ ಭಾಷೆಯ ವಾಸನೆಯು ನನಗೆ ಬರುತ್ತಿದೆ. ಕನ್ನಡ ರಾಜ್ಯದಲ್ಲಿ ಕನ್ನಡ ಭಾಷೆಗೆ ಪ್ರಾಧಾನ್ಯವಿರಬೇಕಾದುದು ಉಚಿತ. ಆದರೆ ಈ ನಮ್ಮ ರಾಜ್ಯದಲ್ಲಿ ಬೇರೆ ಭಾಷೆಯವರೂ ಸಹ ಉಳಿದುಕೊಂಡಿದ್ದಾರೆ. ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡುವಂತೆ ಬೇರೆ

(SRI B. S. KUSHALAPPA)

ಭಾಷೆಯವರನ್ನು ಉಪೇಕ್ಷಿಸಬಾರದು. ಇತರ ಭಾಷೆಯವರಾದ ಮರಾಠಿ ಜನಗಳಿಗೆ ತಮಗೆ ಪ್ರೋತ್ಸಾಹ ದೊರೆಯುವುದಿಲ್ಲ ಎಂಬ ಪುಕಾರು ಆ ಸದಸ್ಯರಿಂದ ಬಂದಿದೆ. ಒಂದೇ ತಾಯಿಯ ಮಕ್ಕಳಂತೆ ಎಲ್ಲರನ್ನೂ ನೋಡಬೇಕು. ಅಲ್ಪಸಂಖ್ಯೆಯ ಭಾಷೆಯವರಿಗೆ ತಮ್ಮ ಬಾಳಿಗೆ ಅವಕಾಶವಿಲ್ಲ ಎಂಬ ಭಾವನೆ ಎಂದೂ ಬರಬಾರದು. ಆದಕಾರಣ ನಮ್ಮ ರಾಜ್ಯಕ್ಕೆ 'ಮಹಾ ಮೈಸೂರು ಎಂಬ ಹೆಸರಿನಿಂದ ಕರೆಯಬೇಕೆಂದು ನಾನು ಸೂಚಿಸುತ್ತೇನೆ. 'ಕರ್ನಾಟಕ' 'ಕನ್ನಡ' ಎಂಬ ಸಂಕುಚಿತ ಭಾವನೆ ಬರಬಾರದು. ಮೈಸೂರು ಎಂಬ ಹೆಸರು ಸರಿಯಲ್ಲ ಎಂದು ಕೆಲವರು ವಿಶಾಲ ಕರ್ನಾಟಕ, ಮಹಾಕರ್ನಾಟಕ ಎಂಬ ಹೆಸರು ಇರಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ಆದರೆ ಎಲ್ಲರೂ ಒಪ್ಪತಕ್ಕಂಥ ಹೆಸರು 'ಮಹಾ ಮೈಸೂರು' ಎಂದು ಇರಬೇಕೆಂದು ನಾನು ಸೂಚಿಸುತ್ತೇನೆ.

ಕೊಡಗಿನ ಬಗ್ಗೆ ಇನ್ನೊಂದು ಮುಖ್ಯವಾದ ವಿಷಯವನ್ನು ಹೇಳುತ್ತೇನೆ. ಕೊಡಗಿನಲ್ಲಿ ಆರು ತಿಂಗಳು ಮಳೆ ಬೀಳುತ್ತದೆ. ಮಳೆ ಬೀಳುವಾಗ ಮರಾಮತ್ ಇಲಾಖೆಯವರು ಯಾವ ಕೆಲಸವನ್ನೂ ಮಾಡಲು ಅನುಕೂಲವಾಗುವುದಿಲ್ಲ, ಉಳಿದ ಆರು ತಿಂಗಳಲ್ಲಿಯೇ ಎಲ್ಲ ಕೆಲಸಕಾರ್ಯಗಳನ್ನು ಮಾಡಿ ಮುಗಿಸಬೇಕಾಗುವುದು. ಬಯಲು ಸೀಮೆಯಂತೆ 12 ತಿಂಗಳುಗಳವರೆಗೆ ಕೊಡಗಿನಲ್ಲಿ ಕೆಲಸಮಾಡಲು ಬರುವದಿಲ್ಲ. ಆದಕಾರಣ ರಸ್ತೆಯ ರಚನೆ ಮತ್ತು ಉಳಿದ ಎಲ್ಲ ಕೆಲಸಗಳನ್ನೂ ಆರುತಿಂಗಳುಗಳಲ್ಲಿಯೇ ಮರಾಮತ್ ಇಲಾಖೆಯವರು ದಯವಿಟ್ಟು ಮಾಡಿ ಮುಗಿಸಬೇಕೆಂದು ಸೂಚಿಸುತ್ತೇನೆ.

ಕೊಡಗು ಮೈಸೂರಿಗೆ ಸೇರಿದ ನಂತರ ನಮ್ಮ ಯೂನಿವರ್ಸಿಟಿ ವಿದ್ಯಾಭ್ಯಾಸದ ಕ್ರಮಕ್ಕೂ ಮೈಸೂರ ಯೂನಿವರ್ಸಿಟಿ ವಿದ್ಯಾಭ್ಯಾಸದ ಕ್ರಮಕ್ಕೂ ವ್ಯತ್ಯಾಸ ಉಂಟಾಗಿ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗಿದೆ. ಮುಖ್ಯವಾಗಿ Pre-University course ಮತ್ತು Three-year degree course ಕೊಡಗಿನಲ್ಲಿ ಜಾರಿಗೆ ಬಂದಿದೆ, ಮೈಸೂರಿನ ಕ್ರಮ ಈಗ ಬೇರೆ. Pre-University courseನಲ್ಲಿ ಸೋತ ವಿದ್ಯಾರ್ಥಿಗಳು ಜೂನಿಯರ್ ಇಂಟರ್‌ಗೆ ಸೇರಿಕೊಳ್ಳಬಹುದು. ತೇರ್ಗಡೆಯಾದವರು ಸೀನಿಯರಿಗೆ ಸೇರಲು ಸಾಧ್ಯವಿಲ್ಲ. Pre-University course is complete by itself. Intermediate course is a continuous one in the two classes. ಈ ತೊಂದರೆಯನ್ನು ತಾವು ಬೇಗ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಸಭೆಯ ಹೆಚ್ಚಿನ ಸಮಯ ತೆಗೆದುಕೊಳ್ಳದೆ ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಶಂಕರಪ್ಪ ಶಿವಪುರಿ (ಚಿಂಚೋಳಿ).—ಅಧ್ಯಕ್ಷ ಮಹಾಶಯರೇ, ನಾನು ಈಗ ತಮ್ಮ ಮುಂದೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಕಾಂಗ್ರೆಸ್ ಪಕ್ಷವು ಆಡಳಿತವನ್ನು ವಹಿಸಿಕೊಂಡು ಈಗಾಗಲೇ ಐದು ವರ್ಷಗಳ ಮೇಲಾಯಿತು. ಆದರೆ ಈಗ ಯಾವ ಪ್ರಕಾರದಿಂದ ನಮ್ಮ ಕಾಂಗ್ರೆಸ್ಸಿನ ಸದಸ್ಯರು ಕೆಲಸ ಮಾಡಿದ್ದಾರೆಂಬುದನ್ನು ಈ ಕಳೆದ ಐದು ವರ್ಷಗಳಲ್ಲಿ ನೋಡಿದರೆ ಜನಗಳಿಗೆ ಅಷ್ಟೇನೂ ಅನುಕೂಲವಾಗಿಲ್ಲ. ಈ ವಿಚಾರದಲ್ಲಿ ನಮ್ಮ ಕಾಂಗ್ರೆಸ್ಸು ಪಕ್ಷದವರು ಮತ್ತು ಸರ್ಕಾರದವರು ಕಲೆತು ಜನಗಳಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಬೇಕು. ಈ ಸಂದರ್ಭದಲ್ಲಿ ಕೆಲವು ಮುಖ್ಯಾಂಶಗಳನ್ನು ತಮ್ಮ ಮುಂದೆ ಇಡಬೇಕೆಂದು ನಿಂತಿದ್ದೇನೆ. ನನಗೆ ಆಗಿರುವ ಅನುಭವದ ಮೇಲೆ ನಮ್ಮ ಕಾಂಗ್ರೆಸ್ ಸಂಸ್ಥೆಯನ್ನು ಸರಿಪಡಿಸಲು ಕೆಲವು ಸಲಹೆಗಳನ್ನು ಕೊಡುತ್ತೇನೆ. ಯಾವ ಪ್ರಕಾರವಾಗಿ ಕೆಲಸವು ಕಾಂಗ್ರೆಸ್ಸು ಆಡಳಿತದಿಂದ ಆಗಬೇಕಾಗಿತ್ತೋ ಆ ಪ್ರಕಾರ ಆಗಲಿಲ್ಲ. ಆದಕಾರಣ ಇನ್ನು ಮುಂದೆಯಾದರೂ ಬರುವ ಕಾಗ್ರೆಸ್ಸು ಆಡಳಿತವು ಜನರ ಮನಸ್ಸಿನಲ್ಲಿರುವ ಕುಂದು ಕೊರತೆಗಳನ್ನು ಪರಿಹರಿಸಲನುಕೂಲವಾಗುವಂತೆ ಪ್ರಯತ್ನಿಸಬೇಕು. ನಮ್ಮ ಪಕ್ಷವನ್ನು ಮುಂದಕ್ಕೆ ತರಬೇಕಾದರೆ ಜನೋಪಯೋಗಕಾರ್ಯಗಳನ್ನು ಮಾಡಿ ಹಿಂದುಳಿದವರನ್ನು ಮುಂದಕ್ಕೆ ತರುವುದಕ್ಕೋಸ್ಕರ ನಮ್ಮ ಕಾಲವನ್ನೆಲ್ಲಾ ವಿನಿಯೋಗಿಸಬೇಕು. ಮುಂದೆ ಬರುವ ಐದು ವರ್ಷಗಳಲ್ಲಾದರೂ ನಮ್ಮ ಆಡಳಿತವು ಈ ರೀತಿ ಮುಂದುವರಿದರೆ ಉತ್ತಮ. ಹಿಂದೆ ಮಾಡಿದಂತಹ ತಪ್ಪುಗಳನ್ನು ಇನ್ನು ಮುಂದೆಯಾದರೂ ಮಾಡದಂತೆ ನೋಡಿಕೊಳ್ಳಬೇಕಾದುದು ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ. ಇದು ವಿಚಾರಮಾಡಬೇಕಾದ ಮಾತು. ಈ ಐದು ವರ್ಷದ ಆಡಳಿತದಲ್ಲಿ ಸಣ್ಣ ಸಣ್ಣ ಹಳ್ಳಿಗಳಲ್ಲಿ ಯಾವ ಪ್ರಕಾರದಿಂದ ಅಭಿವೃದ್ಧಿಯಾಗಬೇಕಾಗಿತ್ತೋ ಆ ರೀತಿ ಆಗಲಿಲ್ಲ. ಇದರಿಂದ ಹಳ್ಳಿಯ ಜನಗಳಿಗೆ ಏನೂ ಉಪಯೋಗವಾಗಲಿಲ್ಲ. ನಮ್ಮ ಆಡಳಿತವನ್ನು ನಮ್ಮ ಜನರು ಉತ್ತಮ ರೀತಿಯಿಂದ ಮುಂದುವರಿಯಲು ಅನುಕೂಲವಾಗುವಂತೆ ನಡೆಸಬೇಕು. ಆದರೆ ಈಗ ಇಲ್ಲಿಯವರೆಗೆ ನಮ್ಮ ಈಗಿನ ಮಂತ್ರಿ ಮಂಡಲದಿಂದ ಏನು ಕಾರ್ಯ ನಡೆದಿದೆ ಎಂದು ನೋಡಿದರೆ ಬಹಳ ಶೋಚನೀಯವಾಗಿರುತ್ತದೆ. ಹಿಂದುಳಿದ ನಮ್ಮ ಹೈದರಾಬಾದು ಕರ್ನಾಟಕವನ್ನು ಮುಂದಕ್ಕೆ ತರಲು ಇಲ್ಲಿಯವರೆಗೂ ಕೈ ಹಾಕಿಲ್ಲ. ಆದ್ದರಿಂದ ಹಿಂದಿನ ಐದು ವರ್ಷಗಳಲ್ಲಿ ಆಗದಿದ್ದಂತಹ ಕೆಲಸಗಳನ್ನು ಮುಂದಿನ ಐದು ವರ್ಷಗಳಲ್ಲಿಯಾದರೂ ಕೈಗೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳಬೇಕಾಗಿದೆ. ಒಂದು ಸಣ್ಣ ಕೆಲಸವನ್ನು ಮಾಡಲು ಹಳ್ಳಿಗಳಿಂದ ಬಂದ ಅಹವಾಲುಗಳನ್ನು ಪರಿಶೀಲಿಸಲು ಡಿಪಾರ್ಟುಮೆಂಟ್ ವ್ಯವಸ್ಥೆಮಾಡಿ ಅನುಕೂಲ ಪಡಿಸಲು ಯತ್ನಿಸಬೇಕು. ನಮ್ಮ ಅಡ್ಮಿನಿಸ್ಟ್ರೇಷನ್ ಎಷ್ಟು ಚೆನ್ನಾಗಿ ಕೆಲಸ ಮಾಡಿದರೆ ಅಷ್ಟು ಒಳ್ಳೆಯದು. ಹಾಗೆ ಮಾಡುವುದರಿಂದ ನಮ್ಮ ಹಳ್ಳಿಯ ಜನಗಳಿಗೆ ಬಹುವಾದ ಸೌಕರ್ಯಗಳು ದೊರಕುತ್ತವೆ. ಆದಕಾರಣ ಈ ಕಡೆ ಆಡಳಿತದಲ್ಲಿರುವವರು ಹೆಚ್ಚು ಹೆಚ್ಚಾಗಿ ಗಮನ ಕೊಡುವರೆಂದು ನಾನು ನಂಬುತ್ತೇನೆ.

ಆದರೆ ಮೊನ್ನೆ ಮೊನ್ನೆ ನಮ್ಮ ಪ್ರಾಂತಕ್ಕೆ ಸೇರಿದ ಹೈದರಾಬಾದು ಕರ್ನಾಟಕದಿಂದ ಬಂದ ನೌಕರರುಗಳಿಗೆ ಸಾಕಷ್ಟು ಸೌಕರ್ಯಗಳನ್ನು ಒದಿಗಿಸಿಕೊಟ್ಟಿಲ್ಲವೆಂದು ನನಗೆ ತಿಳಿಯಿತು. ಮೂರು ನಾಲ್ಕು ವರ್ಷಗಳಿಂದಲೂ ಇವರುಗಳು ಅಧಿಕಾರಿಗಳಾಗಿ ಕೆಲಸ ಮಾಡಿದ್ದರೂ ಮತ್ತು ಸಾಕಷ್ಟು ಅನುಭವ ಇದ್ದರೂ ಕೂಡ, ಇವರುಗಳಿಗೆ ಬಡ್ತಿ ದೊರೆಯದಂತೆ ಬಹಳ ಅನ್ಯಾಯ ಮಾಡಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಡಿಪಾರ್ಟುಮೆಂಟು ಹೆಡ್ಡಿನವರು ಈ ವಿಷಯವನ್ನು ಸರಿಯಾಗಿ ವಿಮರ್ಶಿಸಿ ಹೀಗೆ ಕೆಳದರ್ಜೆಗೆ ಹೋಗಿರುವವರಿಗೆಲ್ಲ ತಕ್ಕ ಸೌಕರ್ಯಗಳನ್ನು ಕೊಡಿಸಿ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ. ನಮ್ಮ ಆಡಳಿತ ಸಂಸ್ಥೆಯವರು ಈಗ ಒಂದು ಕಮ್ಯುನಿಟಿ ಡೆವೆಲಪ್‌ಮೆಂಟು ಎಂಬ ಕೆಲಸವನ್ನು ಆರಂಭಿಸಿದ್ದಾರೆ. ಅದರ ಕೆಲಸ ಈಗ ಸರಿಯಾಗಿ ನಡೆಯುತ್ತಿಲ್ಲ, ಅದನ್ನು ಸರಿಪಡಿಸಬೇಕು. ನಾನೂ ರಿಟೈರ್ ಆಗುವವರಲ್ಲಿ ಒಬ್ಬ ಸದಸ್ಯನಾಗಿ

ದ್ದೇನೆ. ಆದುದರಿಂದ ನಮ್ಮ ಆಡಳಿತದ ಸಲುವಾಗಿ ನಾನು ಈಗಾಗಲೇ ಹೇಳಿದಂತೆ ನಮ್ಮ ಕಾಂಗ್ರೆಸ್ಸು ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕು. ಮುಂದೆ ಬರುವ ಮಂತ್ರಿಗಳು ಈ ವಿಚಾರಗಳೆಲ್ಲವನ್ನೂ ಪರಿಶೀಲನೆಮಾಡಿ ಕೆಲಸ ಮಾಡುವರೆಂಬ ನಂಬಿಕೆ ನನಗಿದೆ. ತಾವುಗಳೂ ಕೂಡ ಈ ವಿಷಯಗಳಲ್ಲಿ ಸರಿಯಾದ ದಾರಿ ತೋರಿಸಬೇಕೆಂದು ಹೇಳಿ ಈ ಸಭೆಯ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು ದಯೆಯಿಟ್ಟು ನನಗೆ ಮಾತನಾಡಲು ಮೂರು ನಾಲ್ಕು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮೀ, ಈ ದಿವಸ ಈ ಸಭೆಯ ಮುಂದಿರುವ ಬಿಲ್ಲನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಆಡುವುದು ಬಹಳ ಅಗತ್ಯ ಎಂದು ತಿಳಿದು ಈ ಸಭೆಯ ಮುಂದೆ ನಿಂತಿದ್ದೇನೆ.

ನಮ್ಮ ಈ ಕಾಂಗ್ರೆಸ್ಸು ಸರ್ಕಾರ ಬಂದು ಈಗಾಗಲೇ ಸುಮಾರು ಐದು ವರ್ಷಗಳು ಮುಗಿಯುತ್ತಾ ಬಂದವು. ಈ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ಸು ಸರ್ಕಾರ ಮುಖ್ಯವಾದಂತಹ ಕಾರ್ಯಗಳನ್ನು ಏನು ಮಾಡಿದೆ ಎಂಬುದನ್ನು ಸ್ವಲ್ಪ ನೋಡಬೇಕು. ಈಗಿನ ಸರ್ಕಾರ ಹಿಂದಿನ ಸರ್ಕಾರ ಮಾಡಿದ್ದ ಆರ್ಡರನ್ನು ಬದಲಾವಣೆ ಮಾಡುತ್ತಿರುವ ಬಗ್ಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಮೊದಲನೆಯದಾಗಿ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಹಿಂದಿನ ಮಂತ್ರಿ ಮಂಡಲದಲ್ಲಿದ್ದ ವ್ಯವಸಾಯದ ಮಂತ್ರಿಗಳು ಸುಮಾರು ಎಪ್ಪತ್ತು ಸಾವಿರ ಎಕರೆ ಜಮೀನುಗಳನ್ನು ಬಿಡುಗಡೆಮಾಡಿ ಜಮೀನಿಲ್ಲದವರಿಗೂ ರಾಜಕೀಯದಲ್ಲಿ ನೊಂದವರಿಗೂ ಕೊಡಬೇಕೆಂದು ನಿರ್ಧರಿಸಿದ್ದರು. ಈಗ ಪುನಃ ಬದಲಾವಣೆಯಾದ ಮಂತ್ರಿಮಂಡಲ ಬಂದಮೇಲೆ ಈ ವಿಚಾರವಾಗಿ ಏನೂ ಮಾಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ ಮೈಸೂರು ದೇಶದಲ್ಲಿ ಎಲ್ಲ ಪಂಗಡಕ್ಕೆ ಸೇರಿದವರು, ಕಾಂಗ್ರೆಸ್ಸೇ ಆಗಲೀ ಸೋಷಿಯಲಿಸ್ಟ್ ಪಕ್ಷವೇ ಆಗಲಿ ಅಥವಾ ಇನ್ನಾವುದೆ ಪಕ್ಷವಾಗಲಿ ಈ ಜಮೀನು ವಿಲೇವಾರಿ ವಿಷಯದಲ್ಲಿ ಸುಮಾರು ನಾಲ್ಕೈದು ವರ್ಷಗಳಿಂದಲೂ ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಈಗ ಸುಮಾರು ಐದು ವರ್ಷಗಳಿಂದಲೂ ಜಮೀನನ್ನು ಕೊಡಬೇಕೆಂದು ಹೇಳಿ ರಾಜಕೀಯದಲ್ಲಿ ನೊಂದವರಿಗೂ ಸರ್ಟಿಫಿಕೇಟ್ ಕೂಡ ಕೊಟ್ಟಿದ್ದರೂ ಜಮೀನನ್ನು ಏತಕ್ಕೋಸ್ಕರ ಕೊಡಲಿಲ್ಲ ಎಂಬ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕು. ಏಕೆಂದರೆ ಜಮೀನು ಬೇಕಾದಷ್ಟಿದೆ. ಸುಮಾರಾಗಿ ಮೂರು ಲಕ್ಷ ಎಕರೆ ಇದೆ. ಎಪ್ಪತ್ತು ಸಾವಿರ ಎಕರೆ ಬಿಡುಗಡೆ ಮಾಡಿರುವಾಗ ಇದನ್ನು ಜಮೀನಿಲ್ಲದ ಬಡ ರೈತರಿಗೂ ಮತ್ತು ರಾಜಕೀಯದಲ್ಲಿ ನೊಂದವರಿಗೂ ಏಕೆ ಕೊಡುವುದಕ್ಕಾಗುವುದಿಲ್ಲವೋ, ಇದು ಅರ್ಥವಿಲ್ಲದಂತೆ ಆಗಿದೆ. ಈ ಜಮೀನಿನ ಬೇಡಿಕೆಗಳು ಈಗ ಐದು ಆರು ತಿಂಗಳುಗಳಿಂದಲೂ ಬರುತ್ತಿವೆ. ಹಿಂದೆ ಶ್ರೀ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ, ನಮ್ಮ ಕಡೆಯಿಂದ ಸುಮಾರು ಇಪ್ಪತ್ತು ಮೂವತ್ತು ಜನ ಬಡ ರೈತರು ಬೆಂಗಳೂರಿಗೆ ಬಂದು ತಮ್ಮ ಕುಂದುಕೊರತೆಗಳನ್ನು ತಿಳಿಸಿದ್ದರೂ ಕೂಡ ಸರ್ಕಾರದವರು ಆಗಿನಿಂದಲೂ ಈ ವಿಚಾರದಲ್ಲಿ ಏನೊಂದು ನಿರ್ಧಾರವನ್ನೂ ಕೈಗೊಂಡಿಲ್ಲ. ನಾನು ಇಲ್ಲಿಗೆ ಹಳ್ಳಿಯ ರೈತರ ಪ್ರತಿನಿಧಿಯಾಗಿ ಸರ್ಕಾರದ ಮುಂದೆ ಈ ವಿಚಾರವನ್ನು ಹೇಳದಿದ್ದರೆ ಕರ್ತವ್ಯ ಲೋಪಮಾಡಿದಂತಾಗುತ್ತದೆ. ಕಾಂಗ್ರೆಸ್ಸಿನವರಾಗಿದ್ದುಕೊಂಡು ನಾವು ಏನೂ ಕೆಲಸ ಮಾಡಿಲ್ಲವೆಂದು ಜನರು ಹೇಳುತ್ತಾರೆ. ಆದ್ದರಿಂದ ಈ ವಿಷಯವನ್ನು ಸಹಾನುಭೂತಿಯಿಂದ ಜಾಗ್ರತೆ ಪರಿಶೀಲನೆ ಮಾಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅಮೃತಮಹಲ್ ಕಾವಲು ಬಿಡುಗಡೆ ಮಾಡಿಕೊಡಿ ಎಂದು ನಾವು ಈ ಸಭೆಯ ಸದಸ್ಯರಾಗಲಿ ಮತ್ತೊಬ್ಬರಾಗಲಿ ಹೋಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಅವರು ನಮಗೆ ಇನ್ನೂ ಆರ್ಡರ್ ಬಂದಿಲ್ಲವೆಂದು ಹೇಳುತ್ತಾರೆ. ಅಮೃತಮಹಲ್ ಕಾವಲಿಗೆ ಸಂಬಂಧಪಟ್ಟ ಜಮೀನಾಗಲಿ, ಬೇರೆ ಜಮೀನಾಗಲಿ, ಬಿಡುಗಡೆಯಾಗಿದ್ದರೂ ಕಾವಲಿಗೆ ಸಂಬಂಧಪಟ್ಟ ಅಧಿಕಾರಿಗಳು ಆ ರೀತಿ ಕೊಡುತ್ತಿಲ್ಲ. ಇದು ಏನು ಆರ್ಡರ್, ಸ್ವಾಮಿ? ಇಂಥವುಗಳನ್ನು ಮುಂದೆ ಸರಿಮಾಡಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೊನ್ನೆ ಒಂದು ಆರ್ಡರ್ ಮಾಡಿರುವುದರಲ್ಲಿ ಎಲ್ಲ ಜಮೀನ್ದಾರರೂ 15-20 ಎಕರೆ ಜಮೀನಿಗಿಂತ ಹೆಚ್ಚಿಗೆ ಹೊಂದಿರಬಾರದು ಎಂದು ತಿಳಿಸಿದ್ದಾರೆ. ಅಪ್ಪ, ಅಜ್ಜ, ಮುತ್ತಜ್ಜ ಇವರುಗಳ ಕಾಲದಿಂದ ಬಂದಂಥ ಜಮೀನನ್ನು ಕಷ್ಟಪಟ್ಟು ಸಂಪಾದನೆಮಾಡಿ ಹೆಂಡತಿಯ ಮೈಮೇಲೆ ಇರುವ ಒಡವೆಯನ್ನು ಮಾರಿ ಪಡೆದುಕೊಂಡಿರುವ ಜಮೀನನ್ನು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದಾರೆ. ಹಾಳುಬಿದ್ದಿರುವ ಜಮೀನನ್ನು ಕೊಡಿ ಎಂದರೆ ಇವರು ತಾತ್ಸಾರಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದು ಏಕೆ ಎಂಬುದು ನನಗೆ ಹೇಳುವುದಕ್ಕೆ ಸಾಧ್ಯವಿಲ್ಲದಾಗಿದೆ.

ಕಡೂರು ತಾಲ್ಲೂಕಿನಲ್ಲಿ 18 ಸಾವಿರ ಎಕರೆ ಜಮೀನು ಪೈಕಿ ಏಳು ಸಾವಿರ ಎಕರೆ ಜಮೀನನ್ನು ಬಿಡುಗಡೆ ಮಾಡಿದ್ದಾರೆ. ಹುರುಳಿ ಸಾಗುವಳಿಗೆ ಕೊಟ್ಟಿರುವ ಜಮೀನು ಇದರಲ್ಲಿ ಮಾಡಿರತಕ್ಕ ಅನ್ಯಾಯ ನಡೆದಿರತಕ್ಕ ಅನೀತಿ ಇವೆಲ್ಲವೂ ಹಿಂದೆ ವ್ಯವಸಾಯ ಮಂತ್ರಿಗಳಾಗಿದ್ದ ಶ್ರೀ ಎಚ್. ಎಂ. ಚನ್ನಬಸಪ್ಪನವರಿಗೆ ಗೊತ್ತಿದೆ. ಈಗಿನ ಸಚಿವರಾದ ಮಾನ್ಯ ಶ್ರೀ ಎಚ್. ಎಸ್. ರುದ್ರಪ್ಪನವರ ಗಮನಕ್ಕೂ ತಂದಿದ್ದೇನೆ. ಈ ಜಮೀನನ್ನು ಯಾರಿಗೆ ಕೊಟ್ಟಿದ್ದಾರೆಂದರೆ ಹೆಚ್ಚಿಗೆ ಜಮೀನು ಇರತಕ್ಕವರಿಗೇ ಕೊಟ್ಟಿದ್ದಾರೆ. ನಾವು ಎಷ್ಟೋಸಲ ಜಮೀನಿಲ್ಲದೆ ಇರುವ ರೈತರಿಗೆ ಈ ಜಮೀನನ್ನು ಕೊಡಿ ಎಂದು ಕೇಳಿದ್ದಾಗ್ಯೂ ಸರಕಾರದವರು ಇದಕ್ಕೆ ಗಮನ ಕೊಟ್ಟಿಲ್ಲ. ಇದರ ಬಗ್ಗೆ ನಾನು ಹಿಂದೆ ಇದೇ ಅಸೆಂಬ್ಲಿಯಲ್ಲಿ ಪ್ರಶ್ನೆಗಳನ್ನು ಕಳುಹಿಸಿದ್ದೆ. ಆದರೂ ಸಹ ರೈತನಿಗೆ ಮತ್ತು ಜಮೀನು ಇಲ್ಲದವನಿಗೆ ಅನುಕೂಲವಾಗಿಲ್ಲ. ಹುರುಳಿ ಸಾಗಿಗೆ ಕೊಟ್ಟಿರುವ ಜಮೀನು ಸಂಬಂಧದಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿ ಬಾಕಿ ಬರಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ವಲ್ಪ ಕೈಬೆಚ್ಚಗೆ ಮಾಡಿದರೆ ರೈತರನ್ನು ಬಾಕಿ ಇರುವ ಹಣದ ಬಗ್ಗೆ ಕೇಳುವುದಿಲ್ಲ. ಈ ರೀತಿ ನಡೆದುಕೊಂಡು ಬಂದಿದೆ. ಇದರಲ್ಲಿ ಅನುಮಾನವಿಲ್ಲ. ಇದನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಹೀಗೆ ನಡೆಯುತ್ತಿರುವದನ್ನು ತಪ್ಪಿಸಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಹುರುಳಿಸಾಗಿಗೆ ಕೊಟ್ಟಿರುವ ಜಮೀನನ್ನು ಜಮೀನಿಲ್ಲದ ರೈತರಿಗೆ ಕೊಡಿ ಎಂದರೆ ಅವರಿಗೆ ಕೊಡದೆ, ಈಗ ನಡೆದಿರುವುದನ್ನು ವಿಮರ್ಶೆ ಮಾಡದೆ ಇರುವುದು ನ್ಯಾಯವೇ ಎಂಬುದನ್ನು

(ಶ್ರೀ ವೈ. ಎಂ. ಚಂದ್ರಶೇಖರಯ್ಯ).

ಯೋಚನೆ ಮಾಡಬೇಕು. ನಮ್ಮ ಕಡೂರು ತಾಲ್ಲೂಕಿನಲ್ಲಿರುವ ರೈತರು ಬಹಳ ಯೋಗ್ಯರು. ಇದನ್ನು ಅನೇಕಸಲ ಹೇಳಿದ್ದೇನೆ. ಮಂತ್ರಿಗಳು ಜಮೀನನ್ನು ಬಿಡುಗಡೆ ಮಾಡಲು ಹೇಳಿದರೂ ಆರ್ಡರ್ ಮಾಡಿದರೂ ಅಧಿಕಾರಿಗಳು ಅದರಂತೆ ನಡೆಯುತ್ತಿಲ್ಲ. ಇವರುಗಳು ಲಂಚ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ವ್ಯವಸಾಯ ಮಂತ್ರಿಗಳಾದ ಶ್ರೀ ರುದ್ರಪ್ಪನವರು ಬಂದಕಾಲದಲ್ಲಿ ಹೇಳಿದ್ದೇನೆ. ಈ ರೀತಿ ಶಾಸನಸಭೆಯ ಸದಸ್ಯರಾಗಲಿ, ಅಥವಾ ಮುಖಂಡರಾಗಲೀ ಯಾರಾದರೂ ಇಂಥ ವಿಷಯಗಳನ್ನು ಹೇಳಿದರೆ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಂಡು ತಪ್ಪುಮಾಡಿರುವ ಸಂದರ್ಭಗಳಲ್ಲಿ ಅವರಿಗೆ ತಕ್ಕ ಶಿಕ್ಷೆಯನ್ನು ಕೊಡಬೇಕು. ಆದರೆ ಸರ್ಕಾರದ ಕೆಲಸಕಾರ್ಯಗಳನ್ನು ನೋಡಿದರೆ ಅಷ್ಟು ಬಿಗಿಯಾಗಿ ಆಡಳಿತ ನಡೆಯುತ್ತಿದೆಯೇ ಎನ್ನಿಸುತ್ತದೆ. ನಾವುಗಳು ಹೇಳಿದರೂ ಕೂಡ ಇಷ್ಟು ತಾತ್ಸಾರ ಮಾಡಿದ್ದಾರೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಕಡೂರು ತಾಲ್ಲೂಕಿನಲ್ಲಿ ಹುಡಗೆರೆ ಫಾರೆಸ್ಟ್ ಇದೆ. ಇದಕ್ಕೆ ಎಷ್ಟೋ ಹಣ ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಬಹಳ ಸಿಬ್ಬಂದಿ ಇದೆ. ಇದರಲ್ಲಿ ಬರತಕ್ಕ ಉತ್ಪತ್ತಿಗಿಂತ ಖರ್ಚು ಬಹಳ ಜಾಸ್ತಿಯಾಗಿದೆ. ಇಂಥ ಫಾರೆಸ್ಟನ್ನು ರಿಲೀಜುಮಾಡಿ ಜಮೀನಿಲ್ಲದ ರೈತರಿಗೆ ಕೊಡಿ ಎಂದು ಎಷ್ಟೋಸಲ ಹೇಳಿದ್ದೇವೆ. ಇದುವರೆಗೂ ಏನೂ ಅನುಕೂಲವಾಗಿಲ್ಲ. ಇಂಥ ಜಮೀನುಗಳು ಅನೇಕ ಇವೆ. ಆದುದರಿಂದ ಹಳ್ಳಿಯ ಜನರಿಗೆ ಸಹಾಯ ಮಾಡಲು ಮತ್ತು ಜಮೀನಿಲ್ಲದ ರೈತರಿಗೆ ಜಮೀನ ಕೊಡಲು ಒಂದು ಯೋಜನೆಯನ್ನು ತಯಾರು ಮಾಡಿಕೊಂಡು ಹಳ್ಳಿಯ ಜನರಿಗೆ ಜಮೀನು ದೊರೆಯುವ ಹಾಗೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಟೇಲ್ ಶ್ಯಾನುಭೋಗರ ವಿಚಾರ ಹೆಚ್ಚಾಗಿ ಹೇಳಬೇಕಾಗಿಲ್ಲ. ಸರ್ಕಾರಕ್ಕೆ ತಿಳಿದ ವಿಷಯ. ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ನಾನು ಒಂದೇ ಒಂದು ಸಂಗತಿಯನ್ನು ಈ ಮಾನ್ಯಸಭೆಯ ಗಮನಕ್ಕೆ ತರುತ್ತೇನೆ. ನಮ್ಮ ಊರಿಗೆ ಏಳೆಂಟು ಮೈಲಿ ದೂರದಲ್ಲಿ ಒಂದು ಹಳ್ಳಿ ಇದೆ. ಅಲ್ಲಿಯ ಪಟೇಲರಿಗೆ ಒಂಭತ್ತು ರೂಪಾಯಿ ಪೋಟಿಗೆ ಬರುತ್ತದೆ. ಆ ಊರಿಗೆ ಅಮಲ್ದಾರರು ಬರಲಿ, ಯಾರಾದರೂ ಬರಲಿ, ಪಟೇಲನು ಅವರ ಕೆಲಸಕಾರ್ಯಗಳಿಗೆ ಸಹಾಯಕನಾಗಿರಬೇಕು. ಈ ಪಟೇಲನು ಜೂರ್ ಆಫ್ಸರಿನಲ್ಲಿ ತಾಲ್ಲೂಕು ಆಫೀಸಿಗೆ ಹೋಗಿ ತನ್ನ ಒಂಭತ್ತು ರೂಪಾಯಿಗಳ ಪೋಟಿಗಿಯನ್ನು ತೆಗೆದುಕೊಂಡು ಬರಬೇಕಾದರೆ ಆಗ ಅಲ್ಲಿರತಕ್ಕ ಜವಾನನಿಗೆ ಒಂದು ರೂಪಾಯಿ, ಗುಮಾಸ್ತೆಗೆ ಒಂದು ರೂಪಾಯಿ, ಹಣ ಕೊಡುವ ಷರಾಫನಿಗೆ ಒಂದು ರೂಪಾಯಿ, ಶಿರಸ್ತೆದಾರರಿಗೆ ಎರಡು ರೂಪಾಯಿ ಹೀಗೆ ಕೊಟ್ಟಮೇಲೆ ತನ್ನಲ್ಲಿ ಉಳಿದ ನಾಲ್ಕು ರೂಪಾಯಿಗಳನ್ನು ತೆಗೆದುಕೊಂಡು ಅಮಲ್ದಾರರ ಬಳಿ ಹೋಗಿ ಅವರ ಮೇಜಿನ ಮೇಲಿಟ್ಟು ನಡೆದ ವಿಷಯಗಳನ್ನು ತಿಳಿಸಿ, ಉಳಿದಿರುವ ನಾಲ್ಕು ರೂಪಾಯಿಗಳನ್ನೂ ಅಮಲ್ದಾರರಿಗೆ ಕೊಡಬೇಕೆಂದು ಬಂದೆ ಎಂದು ಹೇಳಿದನಂತೆ. ಹೀಗೆ ಪಟೇಲ್ ಶ್ಯಾನುಭೋಗರಿಗೆ ಬಹಳ ಕಡಮೆ ಪೋಟಿಗಿ ಬಂದು, ಅದೂ ಸಹ ಪೂರ್ತಿಯಾಗಿ ಅವರ ಕೈ ಸೇರುತ್ತಿಲ್ಲ. ಆದುದರಿಂದ ಪಟೇಲ, ಶ್ಯಾನುಭೋಗರಿಗೆ ಕೊಡತಕ್ಕ ಪೋಟಿಗಿ ವಿಷಯದಲ್ಲಿ ಸಹಾನುಭೂತಿಯಿಂದ ಪರಿಶೀಲನೆಮಾಡಿ ಜಾಗ್ರತೆಯಾಗಿ ತೀರ್ಮಾನ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಹಳ್ಳಿಗಾಡಿನ ಕಡೆ ರಸ್ತೆಗಳಿಲ್ಲದೆ ಬಹಳ ತೊಂದರೆಯಾಗಿದೆ. ಈ ಬಾಬಿಗೆ ಹೆಚ್ಚು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಈ ಸಭೆಯಲ್ಲಿ ಮಾತನಾಡುವುದು ಪ್ರಕೃತ ಸಂದರ್ಭದಲ್ಲಿ ಇದು ಕಡೆಯ ಸಲ. ಹಿಂದಿನ ಅನುಭವಗಳಿಂದ ಹೇಳುವುದಾದರೆ, ಎಷ್ಟೋ ರೂಪದಲ್ಲಿ ನಾವು ಸರ್ಕಾರದ ಮುಂದೆ ಇಡತಕ್ಕ ವಿಚಾರಗಳನ್ನು ಕುರಿತು ಮಾತನಾಡುವಾಗ ವೈಯಕ್ತಿಕವಾಗಿ ನಮ್ಮೊಂದಿಗೆ ಬಹಳ ಮಂದಿ ಸ್ನೇಹಿತರು ಹೆಚ್ಚಿನ ಗೌರವ ತೋರಿಸಿ ಸಹಕರಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ನಮ್ರತೆಯಿಂದ ವಂದಿಸುತ್ತೇನೆ.

ಈ ಅಪ್ರೋಪ್ರಿಯೇಷನ್ ಮಸೂದೆಯ ಸಂದರ್ಭದಲ್ಲಿ ಮಾತನಾಡುವಾಗ ಸರ್ಕಾರದ ರೀತಿನೀತಿಗಳು ಮತ್ತು ಹಣಕಾಸು ಖರ್ಚಾಗತಕ್ಕ ಮಾರ್ಗ ಮತ್ತು ಆಡಳಿತ ವಿಚಾರ ಇವುಗಳನ್ನು ಕುರಿತು ಸ್ವಲ್ಪಮಟ್ಟಿಗೆ ಮಾತನಾಡತಕ್ಕದ್ದು ಸೂಕ್ತ.

ನಮ್ಮ ದೇಶದಲ್ಲಿ ಹುತಾತ್ಮರಾಗಿರತಕ್ಕ ಮಹಾ ವ್ಯಕ್ತಿಗಳ ತ್ಯಾಗ ಮತ್ತು ಬಲಿದಾನಗಳಿಂದ ನಮ್ಮ ದೇಶಕ್ಕೆ ಸ್ವರಾಜ್ಯ ಬಂದಿದೆ. ಸ್ವರಾಜ್ಯ ಬಂದ ಮೇಲೆ ನಮ್ಮ ಜನತೆಯ ಜೀವನ ಉತ್ತಮ ಪಡಬೇಕು ಎನ್ನತಕ್ಕ ದಾಹ ಮತ್ತು ಇಚ್ಛೆ ಎಲ್ಲ ಸರ್ಕಾರಗಳಿಗೂ ಕೂಡ ಇದೆ ಎಂಬುದು ಕಾಣುತ್ತದೆ. ಆದರೆ ಈ ಮಾರ್ಗದಲ್ಲಿ ಎಷ್ಟು ದೂರ ಸರ್ಕಾರಗಳು ಹೋಗಬಹುದೋ ಅಷ್ಟು ಮಟ್ಟಿಗೆ ಇನ್ನೂ ಕೂಡ ಹೋಗಿಲ್ಲ, ಅಷ್ಟು ಫಲ ದೊರೆತಿಲ್ಲ ಎನ್ನತಕ್ಕ ಶಂಕೆ ಬಂದಾಗಲೆಲ್ಲಾ, ಆಗಬೇಕಾದ್ದು ಆಗಲಿಲ್ಲ ಎನ್ನತಕ್ಕ ಭಾವನೆ ಉದ್ಭವಿಸತಕ್ಕದ್ದು ಸ್ವಾಭಾವಿಕ. ಅಸೆಂಬ್ಲಿ ಮೆಂಬರುಗಳಾಗಲಿ ಸ್ಥಳೀಯ ಮಹನೀಯರುಗಳಾಗಲಿ ದೇಶದಲ್ಲಿ ಉಂಟಾಗಬೇಕಾಗಿರತಕ್ಕ ಬದಲಾವಣೆಗಳೇನು, ಯಾವ ರೀತಿ ದೇಶ ಮಾರ್ಪಟ್ಟರೆ ಎಲ್ಲರೂ ಸುಖವಾಗಿ ಬಾಳಬಹುದು ಎಂಬುದಕ್ಕೆ ಹೆಚ್ಚು ಗಮನ ಕೊಟ್ಟು ಎಲ್ಲರೂ ಸಹಕರಿಸಿ ಹೊಂದಿಕೊಳ್ಳಬೇಕು ಎಂದು ಹೇಳುತ್ತಾ ಇರುವುದೇನೋ ಸರಿ. ಆದರೆ ಇವೊತ್ತಿನ ದಿವಸ ವೈಯಕ್ತಿಕವಾದ ಒಂದು ದೋಷ, ಒಂದು ತಪ್ಪು ಯಾರಲ್ಲೂ ಕಾಣದೇ ಇದ್ದರೂ ಕೂಡ, ಅನೂಚಾನವಾಗಿ ಸರ್ಕಾರಗಳು ನಡೆದುಕೊಂಡು ಬಂದಿರತಕ್ಕ ರೀತಿ ಹೇಗಿದೆಯೆಂದರೆ, ಡಾಕ್ಟರ್ ಹತ್ತಿರ ಔಷಧಿ ಕೊಡಿಸಬೇಕಾದರೂ, ಉಳುಮೆಗೆ ಜಮೀನು ಕೊಡಿಸಬೇಕಾದರೂ ಒಬ್ಬ ಅಸೆಂಬ್ಲಿ ಮೆಂಬರಾಗಲಿ, ಒಬ್ಬ ಸ್ಥಳೀಯ ಮುಖ್ಯ ವ್ಯಕ್ತಿಯಾಗಲಿ ಹೋಗಿ ಶಿಫಾರಸು ಮಾಡಿದ ಹೊರತು ಯಾವ ಕೆಲಸವೂ ಆಗುತ್ತಿಲ್ಲ. ಅಷ್ಟಾದರೂ ಜನರ ಕಷ್ಟ ನಿವಾರಣೆಯಾಗುತ್ತಾ ಇಲ್ಲ. ಇದು ನಿಜವಾಗಿಯೂ ಶೋಚನೀಯ ಪರಿಸ್ಥಿತಿ. ಯಾವ ಒಬ್ಬ ರೈತನಿಗಾಗಲಿ ಹಳ್ಳಿಗಾಡಿನವನಿಗಾಗಲಿ ಅಷ್ಟೇ ಏಕೆ ಪಟ್ಟಣದವನಿಗಾಗಲಿ, ಯಾವ ಕಾರ್ಯವಾಗಬೇಕಾಗಿದ್ದರೂ ಕೂಡ ಅವನು ನಿರ್ಭಯದಿಂದ ಒಂದು ಆಫೀಸಿಗೆ ಹೋದರೆ ನನ್ನ ಕೆಲಸವಾಗುತ್ತದೆ ಎನ್ನುವ ಮಟ್ಟಿಗೆ ಅಧಿಕಾರ ವರ್ಗದವರ ಮನೋಧರ್ಮ ಬದಲಾವಣೆಯಾಗಬೇಕು. ಎಂದಿನವರೆಗೆ ಈ ಶಿಫಾರಸಿನ ಪದ್ಧತಿ ಇರುತ್ತದೆಯೋ ಅಂದಿನವರೆಗೂ ರೈತನ ಕುಂದು ಕೊರತೆಗಳು, ಕಷ್ಟಗಳು ಸರಿಯಾದ ರೀತಿಯಲ್ಲಿ

ನಿವಾರಣೆಯಾಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಕಾನೂನು ರಕ್ಷಣೆ ಮಾಡತಕ್ಕ ಅಧಿಕಾರಿಗಳು ಯಾರು ಇರುತ್ತಾರೆಯೋ ಅವರು ಕಾರ್ಯ ಸಾಧಿಸಬೇಕಾದರೆ ಪ್ರಾಮಾಣಿಕರಾಗಿ ದಕ್ಷರಾಗಿ ಕೆಲಸ ಮಾಡಿದ್ದೇ ಆದರೆ ಅವರಿಗೆ ಮಾನ್ಯತೆ ದೊರೆಯುತ್ತದೆ. ಕಾಂಗ್ರೆಸ್ಸಿನ ಮೂಲಭೂತ ತತ್ವಗಳೇನಿವೆ. ಅವುಗಳಲ್ಲಿ ಇಡೀ ದೇಶ ಏಕೆ ಪ್ರಪಂಚದ ಮಾನವನ ಕಲ್ಯಾಣಕ್ಕೆ ಸಾಧನವಾಗತಕ್ಕ ಉದಾತ್ತವಾದ ಧ್ಯೇಯಗಳಿವೆ. ಅವನ್ನು ನಮ್ಮ ಜೀವನದಲ್ಲಿ ಆಚರಣೆಗೆ ತರುವಾಗ ಈ ಪಾರ್ಟಿ ಸರ್ಕಾರಗಳು ಆಡಳಿತ ನಡೆಸುವ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ನ್ಯೂನತೆಗಳುಂಟಾಗುತ್ತವೆ. ಈ ವಿಷಯದಲ್ಲಿ ಸ್ವಲ್ಪ ಹೆಚ್ಚಿನ ಶ್ರದ್ಧಾ ಸಕ್ತಿ ಉಂಟಾಗಬೇಕು. ಮೂಲಭೂತವಾದ ಹಕ್ಕುಗಳೇನಿವೆಯೋ ಅವನ್ನು ರೂಢಿಸದೇ ಹೋದ ಪಕ್ಷದಲ್ಲಿ ಜನರ ಉದ್ಧಾರವಾಗುವುದಿಲ್ಲ. ಯಾವ ಪಾರ್ಟಿ ಪಕ್ಷದವರೇ ಆಗಲಿ, ಮನುಷ್ಯನಿಗೆ ಬೇಕಾದ ವಾಸಕ್ಕೆ ಮನೆ, ಮೈಗೆ ಉಡುವುದಕ್ಕೆ ಬಟ್ಟೆ, ಕುಡಿಯುವುದಕ್ಕೆ ನೀರು ಮತ್ತು ವಿದ್ಯೆ ಇಷ್ಟನ್ನು ಒದಗಿಸಬೇಕು ಎಂದು ಏನು ಹೇಳುತ್ತಾರೋ. ಅದಕ್ಕೆ ತಕ್ಕ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಳ್ಳಬೇಕು. ಈಗ ಮೊದಲನೆ ಪಂಚವಾರ್ಷಿಕ ಯೋಜನೆ ಮುಗಿದು, ಎರಡನೆ ಪಂಚವಾರ್ಷಿಕ ಯೋಜನೆ ಷುರುವಾಗುವುದರಲ್ಲಿದೆ. ಇವೊತ್ತಿನ ದಿವಸ ಹಳ್ಳಿಗಾಡಿನಲ್ಲಿ ಹೋಗಿ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಒಂದು ಪಲ್ಲ ರಾಗಿ ಬೆಳೆಯುವವನಿಗೆ 2 ಪಲ್ಲ ರಾಗಿ ಬೆಳೆಯುವಷ್ಟು ಶಕ್ತಿ ಬಂದಿದೆಯೇ, ಅವನು ತನ್ನ ಸಾಲವನ್ನು ತೀರಿಸಿಕೊಂಡಿದ್ದಾನೆಯೇ, ಹಳ್ಳಿ ಗಾಡಿನ ಜನ ಸುಖವಾಗಿದ್ದಾರೆಯೇ ಎಂದರೆ ಬಹುಶಃ ಈ ರಾಜಕೀಯದ ಗಾಂಭೀರ್ಯವಾಗಲೀ ಮತ್ತು ಧ್ಯೇಯ ಧೋರಣೆಗಳಾಗಲಿ ಅನುಸರಿಸಿದುದರ ಫಲ ಯಾವುದೂ ಅವರಿಗೆ ದೊರೆತಿಲ್ಲ ಎಂದು ಹೇಳಬೇಕಾಗಿದೆ.

ಅಧ್ಯಕ್ಷರು.—ತಾವು ನಿರ್ದಿಷ್ಟವಾದ ಅಂಶವನ್ನು ಹೇಳಿ; ಜನರಲ್ ಆಗಿ ಮಾತನಾಡಿದರೆ ಉಪಯೋಗವಿಲ್ಲ.

ಶ್ರೀ ಕೆ. ಪ್ರಭಾಕರ್.—ಹೆಚ್ಚು ಹಣವನ್ನು ಸರ್ಕಾರ ಖರ್ಚು ಮಾಡಿರತಕ್ಕ ಸಂದರ್ಭದಲ್ಲಿ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ತರಲಾಗಿದೆ. ಬಡ್ಜೆಟ್ ಮಾಡುವಾಗಲೇ ಇವುಗಳನ್ನೆಲ್ಲಾ ಅಳವಡಿಸಿಕೊಂಡು ಮಾಡಬಹುದು. ಆದರೂ ಕೂಡ ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗಿ ಬರುತ್ತದೆ ಎಂದು ಸಮಜಾಯಿಷಿ ಕೊಡುತ್ತಾರೆ. ಇಂತಹ ಖರ್ಚುಗಳು ಆದಷ್ಟು ಹೆಚ್ಚಾಗದಂತೆ ಬಡ್ಜೆಟ್ಟಿನಲ್ಲೇ ಹಣವನ್ನೊದಗಿಸಬೇಕೆಂದು ಹೇಳುತ್ತೇನೆ. ಅಪ್ರೋಪ್ರಿಯೇಷನ್ ಬಿಲ್ ಮೇಲೆ ಓಟು ಮಾಡುವಾಗ ಅವರು ಸರಿಯಾಗಿದೆ ಎಂದು ಹೇಳುತ್ತಾರೆ. ನಾವು ಒಪ್ಪಿಕೊಳ್ಳುತ್ತೇವೆ ಎನ್ನುವುದರಲ್ಲಿ ಒಂದು ತಾರತಮ್ಯ ಮನೋಭಾವ ಇದೆ ಅದೇನೆಂದರೆ ಇದು age of science ಆದ್ದರಿಂದ ಇಂತಹ ವಿಚಾರಗಳಲ್ಲಿ ಸರ್ಕಾರದಲ್ಲೂ ಕೂಡ accuracy ಮತ್ತು precision ಇರಬೇಕು.

ಕಡೆಯದಾಗಿ, ಹರಿಜನರ ಅಭಿವೃದ್ಧಿ ವಿಚಾರ ಅನೇಕರು ಹೇಳಿರುತ್ತಾರೆ. ಎಷ್ಟು ಶ್ರದ್ಧಾಸಕ್ತಿಯಿಂದ ಈ ಕೆಲಸ ಆಗಬೇಕೋ ಅಷ್ಟು ಆಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಇದು ಈ ವಿಧಾನ ಸಭೆಯಲ್ಲಿ ನನ್ನ ಕೊನೆಯ ಭಾಷಣ. ಈ ದಿವಸ ಮಾತನಾಡುವುದಕ್ಕೆ ಅಷ್ಟು ಇಷ್ಟವಿಲ್ಲದೆ ಇದ್ದರೂ ಈ ಸಭೆಯ ಸದಸ್ಯರಿಗೂ ಮಾನ್ಯ ಅಧ್ಯಕ್ಷರಿಗೂ ನನ್ನ ವಂದನೆಗಳನ್ನರ್ಪಿಸುವುದಕ್ಕೆ ಈ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ನಿಂತಿದ್ದೇನೆ. ಈ ಅಪ್ರೋಪ್ರಿಯೇಷನ್ ಮಸೂದೆಯ ಮೇಲೆನನ್ನ ಮನಸ್ಸಿಗೆ ತೋರತಕ್ಕ, ನಾನು ಮುಖ್ಯ ಎಂದು ಭಾವಿಸಿರತಕ್ಕ ಒಂದೆರಡು ಅಭಿಪ್ರಾಯಗಳನ್ನು ಸಭೆಯ ಮುಂದೆ ಇಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಸ್ವಾಮಿ, ಈ 5 ವರ್ಷಗಳ ಅವಧಿಯಲ್ಲಿ ನಾನು ಈ ಸಭೆಯ ಸದಸ್ಯನಾಗಿದ್ದಂಥ ಕಾಲದಲ್ಲಿ ಪದೇಪದೇ ಪ್ರತಿವರ್ಷವೂ ಈ ಸಭೆಯ ಮುಂದೆ ಬರತಕ್ಕ ಬಡ್ಜೆಟ್‌ಗಳ ಮೇಲೆ ಮಾತನಾಡುವಾಗ ನಾನು ದೇಶದ ವ್ಯವಸಾಯಗಾರರು ಮತ್ತು ವ್ಯವಸಾಯದ ಕಸುಬಿಗೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತ ಬಂದಿದ್ದೇನೆ. ಆದರೆ ಪ್ರತಿ ವರ್ಷದ ಅಂತ್ಯದಲ್ಲಿ ಪ್ರಗತಿ ಎಷ್ಟುಮಟ್ಟಿಗೆ ನಡೆದಿದೆ ಎಂಬುದನ್ನು ವಿಮರ್ಶೆ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದ ಒಂದು ಉದ್ದೇಶ ಮತ್ತು ರೈತರ ಒಂದು ಆಶಯ ಏನಿದೆ ಅದನ್ನು ನೆರವೇರಿಸತಕ್ಕ ಒಂದು ಚಿಹ್ನೆಯೂ ಕಾಣುತ್ತ ಬರಲಿಲ್ಲ. ಈಗಲೂ ಕೂಡ ಪರಿಸ್ಥಿತಿ ಇದೇ ರೀತಿಯದೆ. ಈಗಿನ ಸನ್ನಿವೇಶದಲ್ಲಿ ಹಿಂದೆ ನಾವೇನು ಹೇಳುತ್ತಿದ್ದೆವೋ ಅದೇ ರೀತಿಯಲ್ಲಿ ನಡೆಯುತ್ತಿರುವುದನ್ನು ನೋಡಿ ಬಹಳ ವಿಷಾದವಾಗುತ್ತಿದೆ. ಈಗ ದೇಶದ ಪ್ರತಿಯೊಬ್ಬ ವಯಸ್ಸಾದ ಪ್ರಜೆಯೂ ಕೂಡ ಓಟನ್ನು ಕೊಡುವ ಅಧಿಕಾರ ಪಡೆದಿದ್ದಾನೆ. ಪ್ರತಿಯೊಬ್ಬ ರೈತನೂ ಓಟನ್ನು ಕೊಡುತ್ತಿದ್ದಾನೆ. ಅವರ ಓಟಿನ ಬಲದಿಂದ ಪ್ರಜಾ ಪ್ರತಿನಿಧಿಯಾಗಿ ಬಂದು ಈ ಮಾನ್ಯ ಸಭೆಯಲ್ಲಿ ಮಂತ್ರಿಗಳಾಗಿಯೂ ಮತ್ತು ಸದಸ್ಯರಾಗಿಯೂ ಕುಳಿತು ಕೆಲಸ ಮಾಡುತ್ತಿದ್ದಾರೆ. ಆದರೆ ರೈತರ ಸಮಸ್ಯೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ, ವೇಗದಲ್ಲಿ ಬಗೆಹರಿಯದೆ ಹಾಗೆಯೇ ಉಳಿದಿದೆ. ಇದು ಜನರ ದೌರ್ಭಾಗ್ಯ, ದೇಶದ ದೌರ್ಭಾಗ್ಯ, ಉದ್ಯೋಗದ ದೌರ್ಭಾಗ್ಯ ಎಂದು ವಿಷಾದದಿಂದ ಹೇಳಬೇಕಾಗಿದೆ. ಇನ್ನು ಮುಂದಾದರೂ ಈ ರೀತಿಯ ತೊಂದರೆ ತಪ್ಪಿ ಆದಷ್ಟು ಜಾಗ್ರತೆಯಾಗಿ ರೈತರ ಸಮಸ್ಯೆಯ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಅದನ್ನು ಪರಿಹಾರ ಮಾಡಲು ಆಸಕ್ತಿವಹಿಸುತ್ತಾರೆಂದು ನಂಬಿದ್ದೇನೆ. ಹಾಗೆಯೇ ಸಹಕಾರ ಸಮಸ್ಯೆಯೂ ಕೂಡ ಅಷ್ಟೇ ಮುಖ್ಯವಾದುದು. ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕಾದದ್ದು ಬಹಳ ಅಗತ್ಯವಾಗಿದೆ. ಈ ವಿಚಾರದಲ್ಲಿ ಎಷ್ಟು ಜಾಗ್ರತೆ ಪರಿಹಾರ ಒದಗಿಸಿದರೆ ಅಷ್ಟೂ ಒಳ್ಳೆಯದೆಂದು ಹೇಳುತ್ತೇನೆ.

ಕೊನೆಯದಾಗಿ ನಾನು ಈ ಐದು ವರ್ಷಗಳ ಅವಧಿಯಲ್ಲಿ ಈ ಸಭೆಯ ಸದಸ್ಯನಾಗಿದ್ದ ಕಾಲದಲ್ಲಿ ನನಗೆ ಮಾನ್ಯ ಸಭೆಯ ಎಲ್ಲ ಸದಸ್ಯರಿಂದಲೂ ಮತ್ತು ಮಾನ್ಯ ಅಧ್ಯಕ್ಷರಿಂದಲೂ ಸಹಕಾರ ಮತ್ತು ಮಾನ್ಯತೆ ದೊರೆತುದಕ್ಕಾಗಿ ನನ್ನ ತೃಪ್ತಿ ಮತ್ತು ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಅಧ್ಯಕ್ಷರಿಗೂ ಮತ್ತು ಎಲ್ಲ ಸದಸ್ಯರಿಗೂ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಪಿ. ಸಿ. ಉತ್ತಯ್ಯ (ವೀರರಾಜಪೇಟೆ ನಾಡ್).—ಮಾನ್ಯ ಅಧ್ಯಕ್ಷರೇ, ಕೊಡಗನ್ನು ಮೈಸೂರು ರಾಜ್ಯಕ್ಕೆ ಸೇರಿಸುವಾಗ ಅನೇಕರು ಬಹಳ ಸಂತೋಷಪಟ್ಟರು. ಆಗ ನಾವು ಹೋಗುವ ಸೀಮೆಯಲ್ಲಿ ಆದಾಯಕ್ಕಿಂತಖರ್ಚು ಹೆಚ್ಚು, ನಮ್ಮಲ್ಲಿ ಆದಾಯ ಖರ್ಚಿಗಿಂತ

(ಶ್ರೀ ಪಿ. ಸಿ. ಉತ್ತಯ್ಯ.)

ಹೆಚ್ಚಾಗಿದೆ ಎಂಬ ಭಾವನೆಯಿತ್ತು. ಆದರೂ ಕೂಡ ವಿಶಾಲ ದೃಷ್ಟಿಯಿಂದ ಮತ್ತು ಹಲವಾರು ಕಾರಣ ಗಳಿಂದ ಕೊಡಗನ್ನು ಮೈಸೂರು ರಾಜ್ಯಕ್ಕೆ ಸೇರಿಸಿದ ರೆಂದು ಕಾಣುತ್ತದೆ. ನಮ್ಮಲ್ಲಿ ಗ್ರಾಮಸ್ಥರಿಗಾಗಿ ಸಾಕಷ್ಟು ಖರ್ಚು ಮಾಡುತ್ತಿದ್ದೆವು, ದೇಶದಲ್ಲಿ ಅವಶ್ಯಕತೆಯಿರುವ ಕಡೆಗೆ ದೊಡ್ಡ ಕೆಲಸಗಳನ್ನು ಮಂಜೂರು ಮಾಡಿ ಆಮೇಲೆ ಸಣ್ಣ ಕೆಲಸಗಳನ್ನು ಬೇಕಾದ ಕಡೆಗೆ ಮಂಜೂರು ಮಾಡಿ ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿದರು. ಅದಕ್ಕೆ ದೇಶದ ಬಹು ಭಾಗದ ಹಣ ಖರ್ಚಾಯಿತು. ಇನ್ನೊಂದು ಭಾಗಕ್ಕೆ ಅಷ್ಟಾಗಿ ಖರ್ಚು ಮಾಡಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಭಾಗದಲ್ಲಿ ಮೊದಲು ಖರ್ಚು ಮಾಡಲಿಲ್ಲವೋ ಅಲ್ಲಿ ಖರ್ಚು ಮಾಡಲು ನಿರ್ಧಾರ ಮಾಡಿದ್ದೆವು. ಆದರೆ ಈಗ ಆ ಭಾಗಗಳೆಲ್ಲಾ ಮೈಸೂರು ರಾಜ್ಯಕ್ಕೆ ಸೇರಿವೆ. ಈ ಬಜೆಟ್ಟಿನಲ್ಲಿ ನೋಡಿದರೆ ಅನೇಕ ಕಾರ್ಯಗಳನ್ನು ಕೈಕೊಳ್ಳಲು ನಿರ್ಧಾರ ಮಾಡಿರುವಂತೆ ಕಾಣುವುದಿಲ್ಲ. ದೇಶದ ಉದ್ಯಮಗಳನ್ನು ಊರ್ಜಿತ ಗೊಳಿಸ ಬೇಕೆಂದಿತ್ತು. ಆದರೆ ಈ ಬಡ್ಜೆಟ್ಟಿನಲ್ಲಿ ಆ ವಿಚಾರದ ಬಗ್ಗೆ ಒಂದು ಮಾತೂ ಹೇಳಿಲ್ಲ. ವಿದ್ಯುಚ್ಛಕ್ತಿಯನ್ನು ನಾವು ಉತ್ಪಾದನೆ ಮಾಡಿದ್ದು ಸರ್ಕಾರದ ಆದಾಯ ಹೆಚ್ಚಿಸುವುದಕ್ಕಲ್ಲ, ವ್ಯವಸಾಯಕ್ಕೆ ಮತ್ತು ಅತ್ಯಾವಶ್ಯಕವಾಗಿರುವ ಕೈಗಾರಿಕೆಗಳಿಗೆ ಒದಗಿಸುವುದಕ್ಕೆ. ವ್ಯವಸಾಯಕ್ಕೆ ಎಂದರೆ ನೀರ ಹಾಯಿಸುವುದಕ್ಕೆ ವಿದ್ಯುಚ್ಛಕ್ತಿ ಬಹಳ ಅವಶ್ಯಕ. ಕೊಡಗಿನಲ್ಲಿ ಮಳೆ ಹೆಚ್ಚಾಗಿ ಬಂದರೂ ಕೂಡ ಮಳೆ ನೀರು ಹರಿದು ಹೋಗುತ್ತದೆ, ನಿಲ್ಲಲು ಅವಕಾಶವಿಲ್ಲ.

*Sri B. P. KADAM (Ankola—Karwar).—On a point of order, Sir. I have listened to a number of speakers and I feel that instead of speaking on the Appropriation Bill they are speaking on something else and misappropriating the time. The discussion appears to be of a very general nature and not connected with the subjects covered by the Appropriation Bill. I would, therefore, request the Chair in all humility that the Hon'ble Members speaking may be asked to come to the point.

Mr. SPEAKER.—The point of order has come too late. I have also observed that the members are not speaking to the point. It appears that the old habit still persists. Let us tolerate it for some time. I have given only five minutes to each member. Therefore, it would be better for all the Hon'ble Members who are going to take part in the debate to speak to the point contained in the Appropriation Bill itself. It is very hard for me to go on checking Hon'ble Members every time.

ಶ್ರೀ ಪಿ. ಸಿ. ಉತ್ತಯ್ಯ.—ಸ್ವಾಮಿ, ನಾನು ಬಜೆಟ್ಟಿನಲ್ಲಿರುವ ಯಾವ ವಿಷಯದ ವಿಚಾರವಾಗಿ ಮಾತನಾಡಬೇಕಾದದ್ದು ಅವಶ್ಯಕವೋ ಆ ವಿಚಾರ ವಾಗಿ ಮಾತ್ರ ಮಾತನಾಡುತ್ತಿದ್ದೇನೆ. ಅದರ ಪೈಕಿ ಎಕ್ಸೈಜ್ ಬಾಬು ಒಂದು. ಕೊಡಗಿನಲ್ಲೂ ಪಾನ ನಿರೋಧದ ಕಾನೂನು ಜಾರಿಯಲ್ಲಿದೆ. ಆದರೆ ಅದನ್ನು ಜಾರಿಗೆ ತರುವುದು ಬಹಳ ಕಷ್ಟ. ಜನರಿಗೂ ಕಷ್ಟ. ಏಕೆಂದರೆ ಕೊಡಗಿನ ಎಲ್ಲೆಯಲ್ಲಿ ಮತ್ತು ಮೈಸೂರಿನ ಎಲ್ಲೆಯಲ್ಲಿ ಪಾನನಿರೋಧ ಮಾಡಿಲ್ಲ, ಅಲ್ಲಿ ಕುಡಿಯುತ್ತಾರೆ. ನಿರೋಧವಿರುವ ಕಡೆ ಕುಡಿದವರಿಗೆ ಮೈಸೂರಿನಲ್ಲಿ ವಿಧಿಸುವ ಶಿಕ್ಷೆ ಬೇರೆ ಕಡೆಗಳಿಗಿಂತ ಬಹಳ ಹೆಚ್ಚಾಗಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಗೆ ಸಂಬಂಧ ಪಟ್ಟಂತೆ ನಮ್ಮಲ್ಲಿ ಎರಡು ಸ್ಥಳಗಳಲ್ಲಿ ಕೋಳಿಗಳನ್ನು ಸಾಕಲು ಯೋಜನೆ ಮಾಡಿದ್ದಾರೆ. ಆ ಎರಡು ಕೇಂದ್ರಗಳನ್ನು ಇಂಡಿಯಾ ಸರ್ಕಾರದವರು ಮಂಜೂರು ಮಾಡಿದರು. ಆದರೆ ಹೆಚ್ಚು ಉತ್ತಮವಾದ ಕೋಳಿಗಳು ಉತ್ಪತ್ತಿಯಾಗುತ್ತಿಲ್ಲ. ಸಾಧಾರಣವಾಗಿ ಶಾಸ್ತ್ರೀಯ ರೀತಿಯಲ್ಲಿ ಕೆಲಸ ನಡೆಸಿದರೆ ವರ್ಷಕ್ಕೆ 250 ಮೊಟ್ಟೆ ಹಾಕಬೇಕಾದದ್ದು ಅವಶ್ಯಕ ; ಈಗಿರುವ ಕೋಳಿಗಳಿಂದ ಕೇವಲ 160 ಮೊಟ್ಟೆಗಳು ಮಾತ್ರ ನೊರೆಯುತ್ತಿವೆ. ಇದು ಬಹಳ ಕಡಮೆ. ಇದರಿಂದ ಗಿಟ್ಟುವುದಿಲ್ಲ, ನಷ್ಟವಾಗುತ್ತದೆ. ಆದ್ದರಿಂದ ಆಸ್ಟ್ರೇಲಿಯಾದಿಂದ ಕೋಳಿಗಳನ್ನು ವಿಮಾನದ ಮೂಲಕ ತರಿಸಿ ಉತ್ತಮ ತಳಿ ಕೋಳಿಗಳನ್ನು ಆ ಕೇಂದ್ರಗಳಲ್ಲಿಟ್ಟು ಹೆಚ್ಚು ಮೊಟ್ಟೆಗಳನ್ನು ಉತ್ಪತ್ತಿ ಮಾಡಿ ಲಾಭಬರುವಂತೆ ಮಾಡಬೇಕಾದದ್ದು ಅವಶ್ಯಕ. ಈಗ ಸಮರ್ಪಕವಾದ ವ್ಯವಸ್ಥೆಯಿಲ್ಲ. ಸರ್ಕಾರದವರು ಈ ವಿಷಯದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ವಿದ್ಯಾಭ್ಯಾಸದ ಇಲಾಖೆಯ ವಿಚಾರದಲ್ಲಿ ಸ್ವಲ್ಪ ಕಷ್ಟವಿದೆ. ಹಿಂದೆ ನಾವು ಮದರಾಸಿಗೆ ಸೇರಿದ್ದೆವು. ಈಗಲೂ ಇನ್ನೂ ಮೈಸೂರು ಪದ್ಧತಿಗೆ ಹೊಂದಿ ಕೊಂಡಿಲ್ಲ. ಕೊಡಗಿನಲ್ಲೂ ಬೇಸಿಕ್ ವಿದ್ಯಾಭ್ಯಾಸ, ಪ್ರೈಮರಿ ವಿದ್ಯಾಭ್ಯಾಸ, ಸೆಕೆಂಡರಿ ವಿದ್ಯಾಭ್ಯಾಸ ಜಾರಿಯಲ್ಲಿದೆ. ಆದರೆ ಈಗ ಹುಡುಗರನ್ನು ಟೆಕ್ನಿಕಲ್ ಕೋರ್ಸುಗಳಿಗೆ ಕಳುಹಿಸಲು ಅವಕಾಶವಿಲ್ಲವಾಗಿದೆ. ಅವರಿಗೆ ಬಹಳ ತೊಂದರೆಯಾಗಿದೆ. ಇದನ್ನು ಹೇಳಿದರೆ ಕಾಲೇಜಿಗೆ ಸೇರಿಸಿ ಎಂದು ಹೇಳುತ್ತಾರೆ. ಅದು ಜವಾಬ್ದಾರಿಯ ಮಾತಲ್ಲ. ಕೊಡಗಿನವರು ಈಗ ಮೈಸೂರಿಗೆ ಸೇರಿರುವುದರಿಂದ ಮತ್ತು ಶಾಲೆಯಿಂದ ಹುಡುಗರು ಈಗ ಹೊರಗೆ ಬಂದಿರುವುದರಿಂದ ಈ ವಿಚಾರದಲ್ಲಿ ಜಾಗ್ರತೆ ಒಂದು ನಿರ್ಧಾರಕ್ಕೆ ಬಂದು ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಈಗ ಸಭೆಯ ಮುಂದಿರುವ ಅಪ್ರೊಪ್ರಿಯೇಷನ್ ಮಸೂದೆಯ ಮೇಲೆ ಮಾತನಾಡುತ್ತ ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ. ಭದ್ರಾ-ಹೊನ್ನೆಮರಡು ಯೋಜನೆಗಳಿಗೆ ಸಂಬಂಧಪಟ್ಟ ವಿಷಯವನ್ನು ಹೇಳುತ್ತೇನೆ. ಈ ಯೋಜನೆಗಳಲ್ಲಿ ಸರ್ಕಾರದವರು ನೀರು ಮುಳುಗಡೆ ಪ್ರದೇಶದಲ್ಲಿ ತರಿ ಮತ್ತು ಬಾಗಾಯಿತು ಜಮೀನು ತೆಗೆದುಕೊಂಡಿದ್ದಾರೆ. ಆದರೆ ಪರಿಹಾರದ ಹಣ ಜಮೀನುದಾರರಿಗೆ ಸೇರುತ್ತದೆ. ವ್ಯವಸಾಯ ಮಾಡುತ್ತಿದ್ದ ಗೇಣಿದಾರ ಮತ್ತು ಗುತ್ತಿಗೆದಾರನಿಗೆ ಏನೂ ಪರಿಹಾರ ದೊರೆಯುವುದಿಲ್ಲ. ಒಂದು ಜಮೀನು ಉತ್ತಮ ಆಗಬೇಕಾದರೆ ರೈತನು 20-30 ವರುಷ ದುಡಿದು ಶ್ರಮಪಡಬೇಕಾ

ಗುತ್ತದೆ. ಈ ರೀತಿಯಾಗಿ ದುಡಿದು ಶ್ರಮವಹಿಸಿ ತಯಾರುಮಾಡಿದ ಭೂಮಿಯನ್ನು ತೆಗೆದುಕೊಂಡರೆ ಅದಕ್ಕೆ ತಕ್ಕ ಪರಿಹಾರವನ್ನು ಗೇಣಿದಾರನಿಗೆ ಕೊಡ ಬೇಡವೇ? ಕೊಡಲ್ಪಡುವ ಪರಿಹಾರ ಹಣವು ಜಮೀನು ದಾರರಿಗೆ ದೊರೆಯುತ್ತದೆ. ಹತ್ತು-ಹದಿನೈದು ವರುಷ ಗಳಿಂದ ಗುತ್ತಿಗೆದಾರನಾಗಿ ವ್ಯವಸಾಯ ಮಾಡುತ್ತಿ ರುವ ಸಾಗುವಳಿದಾರನಿಗೆ ಪರಿಹಾರದ ಹಣದಲ್ಲಿ ಕಾಲು ಭಾಗವಾದರೂ ಹಣ ಬರುವಂತೆ ಕಾನೂನು ತಿದ್ದುಪಡಿ ಯಾಗಬೇಕು. ಜಮೀನುದಾರನಿಗೆ ಹಣ ದೊರೆಯು ತ್ತದೆ. ಜಮೀನು ದೊರೆಯುತ್ತದೆ ಮತ್ತು. ಬೇರೆ ಎಲ್ಲ ಸಹಾಯವೂ ದೊರೆಯುತ್ತದೆ. ಆದರೆ ಅದೇ ಜಮೀ ನನ್ನು ನೆಚ್ಚಿದ್ದ ಸಾಗುವಳಿದಾರನಿಗೆ ಏನೂ ಪರಿಹಾರ ದೊರೆಯುವುದಿಲ್ಲ. ಗೇಣಿದಾರನಿಗೂ ಪರಿಹಾರ ದೊರೆ ಯುವದು ಧರ್ಮಮಾರ್ಗ.

ನಮ್ಮ ಸರ್ಕಾರದವರು ಈಗಾಗಲೇ ಅನೇಕ ವರುಷ ಗಳಿಂದಲೂ ಅನೇಕ ರೀತಿಯ ಗ್ರಾಮಕೈಗಾರಿಕೆ ಗಳನ್ನು ಕೈಗೊಂಡಿರುತ್ತಾರೆ. ಗ್ರಾಮಾಂತರಗಳ ಲ್ಲಿಯ ಸಣ್ಣಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ಹೆಚ್ಚಾಗಿ ಕೊಡಬೇಕು. ಸರ್ಕಾರದವರು ಪ್ರತಿವರುಷ ಕೊಳ್ಳುತ್ತಿರುವುದು ಮೆಷಿನ್‌ನಿಂದ ತಯಾರಿಸಿದ ಸಾಮಾನುಗಳನ್ನೇ ಗ್ರಾಮಕೈಗಾರಿಕೆಗಳಿಂದ ತಯಾ ರಾದ ವಸ್ತುಗಳ ಬೆಲೆ 15% ಹೆಚ್ಚಾಗಿದ್ದರೂ ಸರಕಾರ ಅವುಗಳನ್ನು ಕೊಳ್ಳಬಹುದೆಂದು ಅವಕಾಶ ಮಾಡಿ ಕೊಟ್ಟಿದ್ದರೂ ಕೊಳ್ಳುವುದಿಲ್ಲ. ಸಮಯಕ್ಕೆ ಸರಿ ಯಾಗಿ ಆರ್ಡರ್ ಕೊಡುವುದಿಲ್ಲ. ಮಾರ್ಚಿ ತಿಂಗಳು ಮುಗಿಯುತ್ತದೆ ಸಾಮಾನು ಕೊಡಿ ಎಂದು ಕೇಳಿದರೆ, ಸಾಧ್ಯವೇ? ಆರು ತಿಂಗಳು ಮುಂಚಿತವಾಗಿ ಆರ್ಡರ್ ಕೊಟ್ಟು, ತಯಾರಿಸಲು ಅವಕಾಶ ಕೊಟ್ಟರೆ, ಗ್ರಾಮಕೈಗಾರಿಕೆಗಳಿಗೆ ಉತ್ತೇಜನ ಕೊಡಬಹುದು.

ಮನೆಗಳನ್ನು ಕಟ್ಟುವುದಕ್ಕೆ ಹರಿಜನರಿಗೆ ಗ್ರಾಂಟು ಕೊಡುತ್ತಿದ್ದಾರೆ. 300 ರೂಪಾಯಿ ಗ್ರಾಂಟಿನಲ್ಲಿ ಕೇವಲ 100-150 ರೂಪಾಯಿ ಮಾತ್ರ ಅವರಿಗೆ ಸಿಕ್ಕುತ್ತದೆ. ಉಳಿದ ಹಣ ಎಲ್ಲಿ ಹೋಯಿತೋ ಗೊತ್ತಾ ಗುವುದಿಲ್ಲ. ಬಾಕಿ ಹಣ ಹರಿಜನರಿಗೆ ಸಂದಾಯ ವಾಗುವದಿಲ್ಲ. ಗ್ರಾಂಟಿನ ಹಣ ಸಂದಾಯ ವಾಯಿತೋ ಇಲ್ಲವೋ ಎನ್ನುವುದು ತಿಳಿಯುವು ದಿಲ್ಲ. ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದರೆ ಹರಿಜನರ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ ಎಂದು ಎನ್ನು ವರು. ಹೀಗಾದರೆ ಹರಿಜನರ ಅಭಿವೃದ್ಧಿ ಕಾರ್ಯ ಗಳು ಎಷ್ಟರಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತಿವೆ ಎಂಬುದರ ಬಗ್ಗೆ ಅನುಮಾನ ಬರುತ್ತದೆ. ಆದುದ ರಿಂದ ಹರಿಜನರಿಗಾಗಿ ಮಂಜೂರು ಮಾಡಿದ ಹಣವನ್ನು ಬಹಿರಂಗವಾಗಿ ಸಾರ್ವಜನಿಕ ಸಭೆಯಲ್ಲಿ ಅವರಿಗೆ ಕೊಡುವಂತೆ ಏರ್ಪಾಡು ಮಾಡಬೇಕು. ಎಂದರೆ ಅವ ರಿಗೆ ಪೂರ್ತಿಯಾಗಿ ಹಣ ದೊರೆಯುವುದು.

ತುಂಗಾ ಮತ್ತು ಭದ್ರಾ ಯೋಜನೆಗಳಿಗೆ ಸೇರಿದ ಹಳ್ಳಿಗಳನ್ನು ಬದಲಾವಣೆ ಮಾಡತಕ್ಕ ಯೋಜನೆಯಲ್ಲಿ ಸ್ಥಳ ಬದಲಾವಣೆಗೆ ಮನೆ ಕಟ್ಟಿಕೊಂಡಿದ್ದವರು ಒಪ್ಪು ವುದಿಲ್ಲ. ಒಂದು ಹಳ್ಳಿಯಲ್ಲಿ 100ಕ್ಕೆ 75 ರಷ್ಟು ಜನರು ಸ್ಥಳ ಬದಲಾವಣೆಗೆ ಒಪ್ಪಿಗೆ ಕೊಟ್ಟರೆ ಹಾಗೆ ಮಾಡಬಹುದು. 100ಕ್ಕೆ 90ರಷ್ಟು ಜನರು ಗ್ರಾಮ ಬದಲಾವಣೆ ಆಗಬೇಕೆಂದರೆ, ಹತ್ತು ಜನ ಬೇಡ ಎಂದು ಹೇಳಿದರೆ ಬದಲಾವಣೆ ಮಾಡುವಂತಿಲ್ಲ. ಆದ್ದರಿಂದ ಸರ್ಕಾರ ಕಾನೂನು ಬದಲಾವಣೆ ಮಾಡ ಬೇಕು. ತುಂಗಭದ್ರಾ ಯೋಜನೆಯಲ್ಲಿ 60 ಹಳ್ಳಿಗಳ ಬದಲಾವಣೆಯಾಗಬೇಕಾಗಿದೆ. ಆದಕಾರಣ 100ಕ್ಕೆ 75 ರಷ್ಟು ಜನರ ಅಭಿಪ್ರಾಯವು ಬದಲಾವಣೆಗೆ ಅನು ಕೂಲವಾಗಿ ಇದ್ದರೆ ಸ್ಥಳ ಬದಲಾವಣೆ ಮಾಡತಕ್ಕಂಥ ಅಧಿಕಾರವನ್ನು ಡೆಪ್ಯುಟಿ ಕಮಿಷನ್‌ರವರಿಗೆ ಕೊಡ ಬೇಕು. ಇಷ್ಟು ಸೂಚನೆಗಳನ್ನು ಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನು ಸೂಚಿತ ಜಾತಿಗಳು).—ಸ್ವಾಮಿ, ಹರಿಜನರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಒಂದೆರಡು ವಿಷಯಗಳನ್ನು ತಿಳಿ ಸಬೇಕೆಂದಿರುವೆನು. ತುರುವೇಕೆರೆ ತಾಲ್ಲೂಕ್ ದಂಡಿನ ಶಿವರದ ಹೋಬಳಿ ಸಂಪಿಗಿ ಬಸವರಾಜ ಕಾವಲಿನಲ್ಲಿ 1200 ಎಕರೆ ಭೂಮಿಯು ರಿಲೀಜ್ ಆಗಿದೆ. ಭೂಮಿ ಯನ್ನು ಸರೆಂಡರ್ ಮಾಡಿದ್ದರೂ ಜನರಿಂದ ರೆವೆನ್ಯೂ ತೆಗೆದುಕೊಂಡಿದ್ದಾರೆ. ಇದರಲ್ಲಿ ಕಾಲನಿ ಮಾಡ ಬೇಕೆಂದು ಹರಿಜನರು 150 ಮನೆಗಳನ್ನು ಕೇಳುತ್ತಿ ದ್ದಾರೆ. ಆದರೆ ಟಾಂಗಾ ರೂಲ್ಸ್ ಪ್ರಕಾರ ಜಮೀನು ನಿರ್ದಿಷ್ಟಮಾಡಿ ವಶಮಾಡಿಕೊಂಡಿದ್ದಾರೆ. ಆದಕಾರಣ ಎವ್ವಿಕ್‌ಶನ್ ಆರ್ಡರ್ ಮಾಡಿಸಿ ಕೂಡಲೇ ಹರಿಜನರ ಕಾಲನಿ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಮಾಡಿ ಹರಿಜನರಿಗೆ ಜಮೀನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ದಕ್ಷತೆಯಿಂದ ಕೆಲಸ ಮಾಡುವದಕ್ಕೆ ಅಧಿಕಾರಿವರ್ಗದಲ್ಲಿ ನ್ಯಾಯವು ಇಲ್ಲ ಎಂಬುದಕ್ಕೆ ಉದಾಹರಣೆಯೊಂದನ್ನು ಹೇಳುತ್ತೇನೆ. ತುಮಕೂರು ತಾಲ್ಲೂಕಿನಲ್ಲಿ ಶರಾಫ್ ಹಾಲಪ್ಪ ಎಂಬ ವರು ಭೂಮಿಯಲ್ಲಿಯ ಕಲ್ಲುಬಾಂದ್‌ಗಳನ್ನು ಕಿತ್ತು ಹಾಕಿಸಿ ಅಕ್ರಮದಿಂದ ಒಬ್ಬರ ಜಮೀನನ್ನು ಮತ್ತೊ ಬ್ಬರಿಗೆ ಕೊಡಿಸಿದ್ದಾರೆ. ಇದರಿಂದ 40 ಜನರಿಗೆ ಅಲ್ಲಿ ನಷ್ಟವಾಗಿದೆ. ಇದೆಲ್ಲಾ ವಿಷಯವನ್ನೂ ಡೆಪ್ಯುಟಿ ಕಮಿಷನರ್, ಪೋಲೀಸ್ ಇನ್‌ಸ್ಪೆಕ್ಟರ್ ಹಾಗೂ ರೆವಿನ್ಯೂ ಮಂತ್ರಿಯವರಿಗೆ ತಿಳಿಸಲಾಗಿದೆ. ಅಕ್ರಮದಿಂದ ತೆಗೆ ದುಕೊಂಡಿದ್ದ ವಿಷಯದ ಬಗ್ಗೆ ಧೈರ್ಯದಿಂದ ವಿಚಾ ರಣೆ ಮಾಡಿಸಬೇಕು. ಎಂದರೆ ಎಲ್ಲ ವಿಷಯವೂ ತಿಳಿದುಬರುತ್ತದೆ. ಸರಕಾರದ ಹತ್ತಿರ ರಿಜರ್ವ್ ಫಂಡಿನಲ್ಲಿ 30 ಕೋಟಿ ರೂಪಾಯಿ ಹಣವು ಇತ್ತು. ಅದು ಖರ್ಚಾದಾಗ ಯಾರೂ ಕೇಳಲಿಲ್ಲ. ಈಗ ಒಂದು ಕೋಟಿ 80 ಲಕ್ಷ ಹಣ ಖರ್ಚಾದಾಗ ಮಾತ್ರ ಚಳುವಳಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಹೇಗೆ ಇದೆ ಎಂದರೆ ತಮ್ಮತಮ್ಮ ಜನರಿಗೆ ಸಹಾಯ ಮಾಡುತ್ತಾರೆ. ಕಾಗೆಗೆ ಒಂದು ತುತ್ತು ಅನ್ನ ಹಾಕಿದರೆ ಅದು ತನ್ನ ಬಂಧುಬಳಗದವರನ್ನು ಕಾಕಾ ಎಂದು ಒದರಿ ಕರೆದು ಕೊಂಡುಬಂದು ತಿನ್ನುವಂತಾಗಿದೆ. ತಮ್ಮತಮ್ಮಲ್ಲಿ ಕಚ್ಚಾಡಿ ತಿನ್ನುವುದೇ ಹೆಚ್ಚಾಗಿದೆ. ಹರಿಜನರ ಹಕ್ಕು ಗಳನ್ನು ಮೊಟಕು ಮಾಡಬಾರದಾಗಿ ಕೇಳಿಕೊಳ್ಳು ತ್ತೇನೆ. ಹರಿಜನರಿಗೆ ಭೂಮಿಯನ್ನು ಕೊಡಬೇಕು. ಹರಿಜನರ ಅಭಿವೃದ್ಧಿಗಾಗಿ ಹೆಚ್ಚುಹಣ ಖರ್ಚುಮಾಡ ಬೇಕು. ವಿದ್ಯಾಭ್ಯಾಸದ ವ್ಯವಸ್ಥೆಗಾಗಿ ಹೆಚ್ಚುಹಣ ಖರ್ಚುಮಾಡಿ ಎಲ್ಲ ಅನುಕೂಲತೆಗಳನ್ನೂ ಒದಗಿಸಿ ಕೊಡಬೇಕು. ಈಶಸೇವೆಯೇ ದೇಶಸೇವೆಯು, ಜನ ತೆಯ ಸೇವೆಯೇ ಜನಾರ್ಧನನ ಸೇವೆಯು ಎಂಬ ತತ್ವ ವನ್ನು ಇಟ್ಟುಕೊಂಡಿರುವ ಕಾಂಗ್ರೆಸ್‌ನವರು ಹಳ್ಳಿ ಗಳಲ್ಲಿ ಹೋಗಿ ರೈತರ ಕುಂದುಕೊರತೆಗಳು ಏನು ಇವೆ ಎಂಬುದನ್ನು ನೋಡಬೇಕು. ಹರಿಜನರಿಗೆ ಕುಡಿ ಯುವ ನೀರಿನ ಭಾವಿಯ ಅನುಕೂಲತೆ ಮಾಡಿಕೊಡ ಬೇಕು. ರಸ್ತೆಗಳ ರಚನೆಯಾಗಬೇಕು. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು. ಮುಖ್ಯ ವಾಗಿ ಹರಿಜನರ ತೊಂದರೆಗಳನ್ನು ನಿವಾರಣೆ ಮಾಡ ಬೇಕು. ಹರಿಜನರ ಹಕ್ಕುಬಾಧ್ಯತೆಗಳನ್ನು ಮೊಟಕು

(ಶ್ರೀ ಸಿ. ಟಿ. ಹನುಮಂತಯ್ಯ.)

ಮಾಡಬಾರದು. ಕಾಂಗ್ರೆಸ್ ತತ್ವ ಎಂದರೆ ಗಾಂಧೀಜೀಯವರ ತತ್ವವನ್ನು ಪಾಲಿಸಿದರೆ ಕಾಂಗ್ರೆಸ್ ಸರಕಾರ ಉಳಿಯುವದು. ಇಲ್ಲವಾದರೆ ಅಳಿಯುವದು. ಕಾಂಗ್ರೆಸ್ಸಿನ ಧ್ಯೇಯದಂತೆ ನಮ್ಮ ದೇಶದಲ್ಲಿ ರಾಮರಾಜ್ಯ ಆಗುವಂತೆ ಮಾಡಬೇಕು. ಈ ದಿವಸ ನಾನು ಈ ಸಭೆಯಲ್ಲಿ ಮಾತನಾಡುತ್ತಿರುವುದೇ ಕಡೆಯ ದಿವಸ. ನಾನು ಪುನಃ ಈ ಸಭೆಯಲ್ಲಿ ಬರುವುದಿಲ್ಲ. ನಾನು ಸೂಚನೆ ಮಾಡಿದ ವಿಷಯಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[Sri AMBADAS RAO (Yadgiri (Reserved)) spoke in Hindi and the gist in English as given by him is printed below.—

"To represent 40 lakhs Harijans, I request the Chief Minister to take a suitable Harijan on the Public Service Commission. I suggest that cash grants should not be given individually to Harijans but built houses should be provided as far as possible with all amenities. I request Government to provide living accommodation to all the gazetted and non-gazetted officials of Hyderabad allocated to Mysore because they are finding it difficult to get accommodation anywhere, even in public places like Choultries and Hotels.

I request the Chief Minister to take at least two Harijan Ministers in proportion to their population of 40 lakhs.

Mr. Chennigaramiah Seems to be a Minister for life as he is in office right since Congress took power in Mysore. Please, in the name of God take any suitable candidate other than Mr. Chennigaramiah.

Regarding the Vidhana Soudha, I would like to reserve my opinion.

I thank the Cabinet, the Press and my colleagues in the Assembly for their hearty co-operation during my membership.]

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಈ ಸಂದರ್ಭದಲ್ಲಿ ನಾನು ತಮ್ಮ ಮುಂದೆ ಒಂದೆರಡು ಮುಖ್ಯ, ಹಳ್ಳಿಗಳಲ್ಲಿ ನಡೆಯುತ್ತಿರುವ ವಿಷಯಗಳನ್ನು ಇಡಬೇಕೆಂದು ಇಚ್ಛೆಪಡುತ್ತೇನೆ.

ನಮ್ಮ ಹಳ್ಳಿಗಳಲ್ಲಿ ಈ ಜಮೀನಿನ ವಿಲೇವಾರಿ ವಿಷಯದಲ್ಲಿ ನನಗೆ ಬಹಳ ದೂರುಗಳು ಬರುತ್ತಿವೆ ಮತ್ತು ಮೋಸವೂ ಆಗುತ್ತಿದೆ ಎಂದು ಇಲ್ಲಿ ಅರಿಕೆ ಮಾಡಬೇಕಾಗಿದೆ. ಏಕೆಂದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಬಹಳ ಕಷ್ಟಗಳಿಗೆ ಸಿಕ್ಕಿ ನೊಂದವರಿಗಾಗಿ ಮತ್ತು ಇತರ ಬಡ ರೈತರಿಗೂ ಸರ್ಕಾರದವರು ಜಮೀನುಗಳನ್ನೇನೋ ಕೊಡುತ್ತಿದ್ದಾರೆ. ಆದರೆ ಇದರ ಹಂಚಿಕೆ ಸರಿಯಾಗಿ ನಡೆಯುತ್ತಿಲ್ಲ. ಕಾಂಗ್ರೆಸ್ಸಿನಲ್ಲಿರುವವರು ಎಂದು ಹೇಳಿಕೊಂಡು ಎಷ್ಟೋ ಜನರು ತಮ್ಮ ಕಡೆಯವರಿಗೆ ಸೇರಿದವರೆಂದು ಹೇಳಿ ಸುಮಾರು ಒಂದೆರಡು ಸಾವಿರ ಎಕರೆ ಜಮೀನನ್ನು ಸಂಪಾದಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನೂ ಕೂಡ ನಮ್ಮ ದಾವಣಗೆರೆಯ ಕಾಂಗ್ರೆಸ್ ಕಮಿಟಿ ಆಫೀಸಿಗೆ ಹೋಗಿ ಬಹಳವಾಗಿ ಈ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದವರ ಕುಟುಂಬದವರ ಸಹಾಯಕ್ಕಾಗಿ ಸ್ವಲ್ಪ ಎಂದರೆ ಸುಮಾರು ಹತ್ತೊ ಇಪ್ಪತ್ತೊ ಎಕರೆ ಜಮೀನು ಕೊಡಬೇಕೆಂದು ಮಾಡಿದ ಪ್ರಾರ್ಥನೆ ಇನ್ನೂ ಈಡೇರಿಲ್ಲ. ಗುಂಡು ಹಾರಿಸಿಕೊಂಡು ಹುತಾತ್ಮರಾದವರ ಕುಟುಂಬದವರಿಗೆ ಸಹಾಯ ಮಾಡುವುದಕ್ಕೋಸ್ಕರ ನಾನು ಈ ರೀತಿ ಹೋಗಿ ಕೇಳಬೇಕಾಯಿತು. ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರ ಬಳಿಗೂ ಒಂದೆರಡು ಸಾರಿ ಹೋಗಿದ್ದೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಈ ಸಂಬಂಧದಲ್ಲಿ ಒಂದು ಮೀಟಿಂಗನ್ನು ಕರೆದಿದ್ದರು. ಅದರಲ್ಲಿ ನಾನೂ ಕೂಡ ಇದ್ದೆ. ಆದರೆ ಏನೂ ಕೆಲಸವಾಗಲಿಲ್ಲ. ಜಮೀನುಗಳನ್ನು ರಿಲೀಸು ಮಾಡುತ್ತೇನೆಂದು ಹೇಳಿದರೂ ಕೂಡ ಇನ್ನೂ ಏನೂ ಮಾಡಲಿಲ್ಲ. ಹೀಗೆ ರಿಲೀಸು ಮಾಡಿದಂತಹ ಜಮೀನುಗಳನ್ನು ಸುಮಾರು ಹತ್ತಿಪ್ಪತ್ತು ಜನರಿಗಾದರೂ ಕೊಡಿಸಿ ಕೊಟ್ಟರೆ ನನ್ನ ಮನಸ್ಸಿಗೆ ಎಷ್ಟೋ ಸಂತೋಷವಾಗುತ್ತದೆಂದು ಯೋಚಿಸಿದರೆ, ಅದನ್ನು ಕೂಡ ಕೊಡಿಸಿ ಕೊಡಲಕ್ಕೆ ಆಗಲಿಲ್ಲ. ಜಮೀನುಗಳನ್ನು ಏಪ್ರಿಲ್‌ನಲ್ಲೇ ರಿಲೀಸಾಗಲು ಆರ್ಡರು ಮಾಡಿದ್ದೇನೆಂದು ಹೇಳಿದ್ದರೂ ಕೂಡ ಎರಡು ವರ್ಷಗಳಾದರೂ ಇನ್ನೂ ಜನರಿಗೆ ಈ ಜಮೀನುಗಳು ಸಿಕ್ಕಿಲ್ಲ. ಮತ್ತು ಈ ವಿಚಾರದಲ್ಲಿ ಏನು ಮಾಡಬೇಕೆಂದು ಸರ್ಕಾರದವರು ಮನಸ್ಸಿಗೂ ಹಚ್ಚಿಕೊಳ್ಳಲಿಲ್ಲ. ಆದುದರಿಂದ ಜನಗಳಿಗೆ ಆದರಲ್ಲೂ ನೊಂದ ಬಡ ಜನಗಳಿಗೆ ತುಂಬ ಅನ್ಯಾಯವಾಗುತ್ತದೆ. ಆದಕಾರಣ ಈ ವಿಷಯಗಳೆಲ್ಲವನ್ನೂ ಚೆನ್ನಾಗಿ ಪುನರ್ವಿಮರ್ಶೆ ಮಾಡಿ ಯೋಗ್ಯರಾದ ಬಡವರಿಗೆ ಜಮೀನನ್ನು ಕೊಡಬೇಕೆಂದು ನಾನು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ಅದು ದಾವಣಗೆರೆಯಲ್ಲಿರುವ ನೀರಿನ ಪ್ರಶ್ನೆ. ' ಈ ದಾವಣಗೆರೆ ಸಿಟಿಯಲ್ಲಿ ಬೆಳಗ್ಗೆ ಹತ್ತು ಗಂಟೆ ಯೊಳಗಾಗಿ ನಲ್ಲಿಯಲ್ಲಿ ನೀರು ನಿಲ್ಲುತ್ತದೆ. ಇದರಿಂದ ಊರಿನ ಜನಗಳಿಗೆ ತುಂಬ ತೊಂದರೆಯಾಗುತ್ತದೆ. ಈ ರೀತಿಯಾಗಲು ಕಾರಣ ವಿಚಾರಿಸಿದ್ದಲ್ಲಿ ಭದ್ರಾವತಿಯಿಂದ ಪೈಪುಗಳು ಬಂದಿಲ್ಲವೆಂದು ಹೇಳುತ್ತಿದ್ದಾರೆ. ಏಂತಹ ಪೈಪುಗಳನ್ನು ನಮ್ಮ ಐರನ್ ವರ್ಕ್ಸ್‌ನಲ್ಲಿ ತಯಾರು ಮಾಡುತ್ತಿದ್ದಾರೋ ನನಗೆ ಒಂದೂ ಅರ್ಥವಾಗುತ್ತಿಲ್ಲ. ಅಂತೂ ಇಲ್ಲಿ ನೀರಿನ ವ್ಯವಸ್ಥೆ ಮಾಡಬೇಕಾದದ್ದು ಅಗತ್ಯವಾಗಿದೆ.

ಮತ್ತೊಂದು ವಿಷಯ. ಈ ದಾವಣಗೆರೆಗೆ ಫಸ್ಟ್ ಗ್ರೇಡು ಕಾಲೇಜು ಆಗಬೇಕೆಂದು ಎಷ್ಟೋ ಸಾರಿ ಕೇಳುತ್ತಾ ಬಂದರೂ ಇನ್ನೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ನಾನು ಈ ವಿಷಯದಲ್ಲಿ ಸರ್ಕಾರವನ್ನು ಒತ್ತಾಯ ಪಡಿಸುತ್ತಲೇ ಇದ್ದೇನೆ. ಕೆಲವರೇನೋ ನಾನು ಈ ಸಭೆಯಿಂದ ನಿವೃತ್ತನಾಗುತ್ತೇನೆಂದು ತಿಳಿದಿರಬಹುದು. ಹಿಂದೆ ಇದ್ದ ಮಿನಿಸ್ಟರುಗಳು ನನಗೆ ಬಹಳ ಸಹಾಯವನ್ನು ಮಾಡಿದ್ದಾರೆ. ಮತ್ತು ಚೆನ್ನಾಗಿ ಕೆಲಸಮಾಡಿದ್ದಾರೆ. ನಾನು ಇಲ್ಲಿಲ್ಲದಿದ್ದರೂ ಈ ಸಭೆಯಿಂದ ಹೊರಗೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಶಕ್ತಿಯನ್ನು ದೇವರು ಕೊಟ್ಟಿದ್ದಾನೆ. ಈ ಕೆಲಸ

ವೇನಾದರೂ ಆಗದಿದ್ದರೆ. ನಾನು ಸತ್ಯಾಗ್ರಹ ಮಾಡಿಯಾದರೂ ನನ್ನ ಕೆಲಸವನ್ನು ಮಾಡಿಸಿಕೊಳ್ಳುವ ಶಕ್ತಿ ನನಗಿದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದೆ ಈ ವಿಷಯದಲ್ಲಿ ಸರ್ಕಾರವು ಜಾಗ್ರತೆ ಅನುಕೂಲ ಪಡಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳ ಬೇಕಾಗಿದೆ. ಈ ಕೆಲಸಗಳು ಈಗಾಗಲೇ ನಡೆಯ ಬೇಕಾಗಿತ್ತು. ಇನ್ನು ಮುಂದಿನ ಐದು ವರ್ಷಗಳ ಕಾಲ ಪಾರ್ಟಿ ಪಂಗಡಗಳಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಅವಕಾಶವನ್ನು ಸರ್ಕಾರದವರು ಕಲ್ಪಿಸಿ ಕೊಡುತ್ತಾರೆಂದು ಹಾರೈಸಿ, ನನಗೆ ಕೆಲವು ಮಾತುಗಳನ್ನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

(Sri V. R. Naidu rose.)

MR. SPEAKER.—If I give the Hon'ble Member some time to speak, the other Hon'ble Members just behind him will ask for time. We have to rise before 12-30 and this Appropriation Bill must go to the Upper House. I would request the Hon'ble Member to co-operate with me. If I give him time, I will have to give time to others also. But I cannot relax the time limit now. I would request all the Hon'ble Members to co-operate with me in passing this Bill as early as possible.

Now the Hon'ble Finance Minister will reply.

SRI T. MARIAPPA (Minister for Finance).—Mr. Speaker, Sir, some of the Hon'ble Members who have spoken on the Appropriation Bill have not raised any new points. These points have already been raised in a different form during the general discussion on the Budget. Nevertheless Sri L. Siddappa, Hon'ble Member for Chennagiri, was able to draw the attention of the Government to a few very important facts. It is true that we have not been able to make the fullest use of the grants given by the Central Government for the local development works, and I can assure him that the Government will take all possible steps to make the fullest use of the grants for the local development works. He has also drawn the attention of the Government to the need for economy whenever new works are undertaken. I think the Hon'ble Minister for Public Works will bear this in mind, as he was pleased to intervene in the debate and stated that of late, things had improved and there was enough work for the staff posted to Honnemaradu project.

Sri, Sri Siddappa incidentally referred to the split in the Ruling Party and consequent neglect of the interests of the common man. Sir, it is not correct, nor is it political sagacity to make political capital out of one or two incidents when there were differences of opinion in the Ruling Party.

Sir, my friend Sri Imam has changed his seat; he is now by the side of Sri Siddappa. It is good both of them are sitting side by side! I can assure both of them that the so called difference of opinion in the Ruling Party has never come in the way of either implementing the general policies of the Congress or in undertaking any work which was in the best interests of this country.

Sri Siddappa also impressed on the need for taking very early steps to make elementary education universal. As he is aware—he has been in this Legislature for 27 years; he came along with me in 1930—Government has taken steps from time to time to start more schools and make elementary education as universal as possible. He is also aware, Sir, that certain obstacles came in the way of introducing the compulsory system of education throughout the State. Nevertheless—if I could quote from my memory—the number of schools that were in existence when the Congress Government took over in 1947 was hardly nine thousand. The number now has increased to fourteen thousand. Therefore, I am sure it would be readily admitted that there has been a phenomenal increase in the number of schools. I concede that this is not going the whole length and the Government will certainly apply its mind to see that every village has a school and as far as possible the largest number of boys and girls are brought into the folds of education, This has also been the policy of the Government of India in recent years. They have taken all possible measures to bring in more and more children into the elementary schools.

Several Hon'ble Members have raised other questions. I have already

(SRI T. MARIAPPA)

answered them. My Hon'ble friend Sri Hutche Gowda—he is not here now —drew the attention of Government to the appointment of judges in the vacancies that now exist. That question was raised, though in a different form, by other members also. Sri Chikkalingiah drew the attention of the Government to the irregularities in administration and the working of the Rural Development department and also the need for appointing a Scheduled Caste Member to the Public Service Commission. He also wanted the Public Service Commission's report to be placed before this House. These points, I can assure him, will be attended to and there is no need for unnecessary alarm about the things which will certainly be looked into in the normal course of Government business. Sri Y. M. Chandrasekhariah wanted to ventilate the grievances regarding non-disposal of lands taken over by the Revenue Department. I believe the House fully knows the circumstances under which 70 to 80 thousand acres were taken over by the Revenue Department. The new Ministry had to look into each case because they were in the nature of complaints. It is not as if there were intentional delays. We wanted to avoid, as far as possible, any charge of partiality in the disposal of these lands. I can assure him that in all deserving cases, lands should be given, but the main point is that the land should be given to landless persons, to a person who is likely to be settled on land and not to one who merely looks on land as a sort of investment and who is likely to sell away the land for profit, as has been pointed out by the Hon'ble Srimati Siddamma.

The other points raised are of a routine nature and it is not necessary to answer each one of them. As you, Mr. Speaker, was pleased to remark the scope of debate with respect to the Appropriation Bill before the House is very limited and if the House has confined itself to the limited scope, the debate would not have been very long. Nevertheless, you have been very generous particularly because this happens to be the last session of the present Legislature. A lot of latitude has been given to the Hon'ble Members and on behalf of Government I welcome all the constructive criticisms. It would be very difficult for me to give a general assurance on the floor of this House because the new Ministry is at liberty to change anything they like. They would place the revised Budget before the new Legislature with a policy statement and then it would be appropriate for the new members to raise questions on merits. Suffice it for me to say that the Appropriation Bill as placed before the House may kindly be accepted by the House.

MR. SPEAKER.—The question is:

"That the Mysore Appropriation (Vote on Account) Bill, 1957 be taken into consideration."

The motion was adopted

MR. SPEAKER.—Clauses 1 to 3 and Schedule and Preamble. The question is:

"That Clauses 2, 3 and 1, the Schedule, the Title and the Preamble stand part of the Bill"

The motion was adopted.

Clauses 1 to 3 and the Schedule, the title and Preamble were added to the Bill.

Motion to pass.

SRI T. MARIAPPA.—I beg to move:

"That the Mysore Appropriation (Vote on Account) Bill, 1957 be passed."

MR. SPEAKER.—The question is:

"That the Mysore Appropriation (Vote on Account) Bill, 1957 be passed.

The motion was adopted.

THE MYSORE APPROPRIATION BILL, 1957.

Motion to consider.

Sri T. MARIAPPA (Minister for Finance).—I beg to move:

"That the Mysore Appropriation Bill, 1957 be taken into consideration."

Mr. SPEAKER.—The question is:

"That the Mysore Appropriation Bill, 1957, be taken into consideration."

The motion was adopted.

Mr. SPEAKER.—I shall put the clauses to vote, as there are no amendments.

Mr. SPEAKER.—The question is:

"That Clauses 2, 3, 1, the Schedule, the Title and the Preamble stand part of the Bill."

The Motion was adopted.

Clauses 2, 3 and 1, the Schedule, the Title and the Preamble were added to the Bill.

Motion to pass.

Sri T. MARIAPPA.—Sir, I beg to move:

"That the Mysore Appropriation Bill, 1957, be passed."

Mr. SPEAKER.—The question is:

"That the Mysore Appropriation Bill. 1957 be passed."

The motion was adopted.

NON-OFFICIAL BUSINESS.

Mr. SPEAKER.—Since there is still some time I want to take up non-official business. There is a Bill standing in the name of Sri S. R. Nagappa Setty.

Sri S. R. NAGAPPA SETTY (Shimoga).—I do not intend to introduce the Bill, Sir.

Mr. SPEAKER.—If the Hon'ble Member does not want to introduce the Bill, the matter ends. We will take up the resolutions now.

SOME MEMBERS.—We request you kindly to take up resolutions in the afternoon.

Mr. SPEAKER.—I am told that some of the Hon'ble Members want to have a sort of farewell speeches. I do not know whether it is the wish of all the members to set apart some time so that they can participate in bidding farewell to each other in this House.

Sri J. MOHAMED IMAM.—I would like you to set apart some time.

Mr. SPEAKER.—The House will now rise and meet at 3 o' clock.

The House adjourned at Twenty-five minutes past Twelve of the Clock and re-assembled at Three of the Clock.

(MR. DEPUTY SPEAKER in the Chair)

SHORT NOTICE QUESTION AND ANSWER

Q. No. 5. Sri SHANKARAGOWDA PATIL (Hipparigi-Bagewadi).—

Will the Government be pleased to State:—

(*a*) whether they are aware of the fact that crops have failed in Bijapur District on account of excess of rains;

(*b*) if so, the steps they propose to take to ensure adequate food supply to these areas;

(*c*) whether they would start distress relief work in the taluks affected;

(*d*) if they intend starting such works, the nature of the works they propose to undertake?

A—Sri M. P. PATIL (Minister for Revenue).—

(*a*) Crops have been affected by heavy rains.

(*b*) At present 28 Fair Price Depots are working in this area. Rice and wheat issued by the Government of India are being distributed to the public through these depots.

(SRI M. P. PATIL)

(*c*) and (*d*) Relief works will be started if sufficient labour is available. The particulars relating to the relief works started in this area are being obtained from the local officers.

ಶ್ರೀ ಎಸ್. ವೈ. ಪಾಟೀಲ್.—ಮಳೆಯಿಂದ ಸಿಂದಿಗಿ ಮತ್ತು ಇಂಡಿ ತಾಲ್ಲೂಕುಗಳಲ್ಲಿ ವಿಶೇಷ ನಷ್ಟವಾಗಿದೆಯೆಂಬುದು ಸರಕಾರಕ್ಕೆ ಗೊತ್ತಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಬಿಜಾಪುರ ಜಿಲ್ಲೆಯಲ್ಲಿ ಬಹಳ ಮಳೆಯಾಗಿರುವುದರಿಂದ ಲುಕ್ಸಾನಾಗಿದೆಯೆಂದು ಗೊತ್ತಾಗಿದೆ. ಯಾವಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಲುಕ್ಸಾನಾಗಿದೆಯೆಂಬುದರ ವರದಿ ಬಂದಿಲ್ಲ.

ಶ್ರೀ ಎಂ. ಆರ್. ಪಟ್ಟಣಶೆಟ್ಟಿ.—ಬರಗಾಲ ಬಂದಿರುವುದರಿಂದ ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಜನರಿಗೆ ಸಹಾಯ ನೀಡುವಂತೆ ಮನವಿ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಬಂದಿರಬಹುದು. ಬರಗಾಲದ ಕಾಂಗಾರಿಗಳನ್ನು ಕೈಕೊಳ್ಳಲು ಸಾಧ್ಯವಿರುವ ಕಡೆ ಪ್ರಾರಂಭಿಸಬೇಕೆಂದು ಕಲೆಕ್ಟರಿಗೆ ತಿಳಿಸಿದೆ.

Sri H. V. KOUJALGI.—Have any test works been started ?

ಶ್ರೀ ಎಂ. ಪಿ. ಪಾಟೀಲ್.—ಲೇಬರ್ ದೊರೆಯುವ ಕಡೆ ಪ್ರಾರಂಭಮಾಡುತ್ತಾರೆ.

Sri P. G. SIDHANTI.—Is the Government aware that sufficient food-grains are not available to the commit. tees or societies although they have represented to the Government ?

ಶ್ರೀ ಎಂ. ಪಿ. ಪಾಟೀಲ್.—ಅದು ನಮ್ಮ ಗಮನಕ್ಕೆ ಬಂದಿಲ್ಲ.

Sri P. G. SIDHANTI.—In that case will the Government be pleased to open a Government Central Grain Depot at Bijapur itself ?

Sri M. P. PATIL.—Sir, if the fact is brought to my notice, I shall make enquiries and see that foodgrains are sent to the depot.

Sri P. G. SIDHANTI.—Have the Government kept a list of works to be started in case there is need for starting such works ?

Sri M. P. PATIL.—Sir, it was the practice of the Bombay Government to keep a list of relief works in the scarcity areas. I do not know whether any works are kept ready there or not. But I have called for information regarding the particular works. The practice was to keep relief works ready as far as possible in the scarcity areas.

Sri P. G. SIDHANTI.—Will the Government give preference to bunding and tank works and repairs in preference to others ?

Sri M. P. PATIL.—It depends upon the work which the labour would like. As a matter of fact, the Government will undertake bunding work, tank repairs and road works.

ಶ್ರೀ ಎಸ್. ವೈ. ಪಾಟೀಲ್.—ಸಿಂದಗಿ, ಇಂಡಿ ತಾಲ್ಲೂಕುಗಳಲ್ಲಿ ಅತಿ ಮಳೆಯಿಂದ ಲುಕ್ಸಾನಾದುದು ಅಧಿಕಾರಿಗಳ ನಜರಿಗೆ ಬಾರದಿದ್ದರೆ ಅಥವಾ ರೈತರ ಅಜ್ಞಾನದ ಮೂಲಕ ಸರ್ಕಾರಕ್ಕೆ ತಿಳಿಸದಿದ್ದರೆ ಈಗ ತಕರಾರು ಬಂದರೆ ತಪಾಸು ಮಾಡಿ ನಿಜಸ್ಥಿತಿ ವರದಿ ಮಾಡಲು ಅಧಿಕಾರಿಗಳಿಗೆ ಆಜ್ಞೆ ಕೊಡುವಿರಾ ?

Sri M. P. PATIL.—I said the particulars have not come to the notice of the Government and the local officers ; for instance, the Collectors and Mamlatdars make enquiries into the particular matters and relief is given wherever relief is required.

ಶ್ರೀ ಎಸ್. ವೈ. ಪಾಟೀಲ್.—ಹಾಗಲ್ಲ, ಈಗ ಅತಿಯಾಗಿ ನಷ್ಟವಾಗಿರುವುದು ಅಧಿಕಾರಿಗಳ ಗಮನಕ್ಕೆ ಬಾರದಿದ್ದರೆ ಅಥವಾ ರೈತರು ಸರ್ಕಾರಕ್ಕೆ ತಿಳಿಸದೆಯಿದ್ದರೆ ಪುನಃ ತಕರಾರು ಮಾಡಿದರೆ ಪರಿಶೀಲಿಸುತ್ತೀರಾ?

Sri M. P. PATIL.—Yes, the raiyats complain to the Government and Government will ask the Collectors to make enquiries and take necessary steps also.

ಶ್ರೀ ಎಸ್. ವೈ. ಪಾಟೀಲ್.—ಮುಂದೆ ಈ ವಿಷಯದಲ್ಲಿ ಅರ್ಜಿ ಬಂದರೆ ಕಾಲ ಮೀರಿದೆಯೆಂದು ಹೇಳದೆ ಪರಿಶೀಲನೆ ಮಾಡುವಿರಾ ?

Sri M. P. PATIL.—There is no question of limitation in such cases.

ಶ್ರೀ ಎಸ್. ವೈ. ಪಾಟೀಲ್.—ಪ್ರತಿಯೊಂದು ಜಿಲ್ಲೆಗೂ ಆಗುವಷ್ಟು ಧಾನ್ಯವನ್ನು ದಾಸ್ತಾನು ಮಾಡಲು ವ್ಯವಸ್ಥೆ ಮಾಡಿದೆಯೇ?

ಶ್ರೀ ಎಂ. ಪಿ. ಪಾಟೀಲ್.—ದಾಸ್ತಾನುಮಾಡುವುದಕ್ಕೆ ವ್ಯವಸ್ಥೆ ನಡೆದಿದೆ. ಅದನ್ನು ಇಂಡಿಯಾ ಸರ್ಕಾರದವರು ಮಾಡುತ್ತಿದ್ದಾರೆ. ಪ್ರತಿಯೊಂದು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲೂ ಡಿಪೋ ತೆರೆಯಬೇಕೆಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ. ಅದರ ಬಗ್ಗೆ ಅವರು ವಿಚಾರ ಮಾಡುತ್ತಿದ್ದಾರೆ.

ಶ್ರೀ ಜೆ. ಎಲ್. ಕಾಬಾಡಿ.—ಇನ್ನೂ ಅವಶ್ಯಕವಿರುವ ಕಡೆ ಕೆಲಸಗಳನ್ನು ಪ್ರಾರಂಭಿಸುವಿರಾ ?

ಶ್ರೀ ಎಂ. ಪಿ. ಪಾಟೀಲ್.—ಅವಶ್ಯಕತೆಯಿರುವ ಕಡೆ ಕೆಲಸ ಷುರು ಮಾಡಲು ಕಲೆಕ್ಟರಿಗೆ ತಿಳಿಸಿದೆ. ಅವರು ಪ್ರಾರಂಭಿಸುತ್ತಾರೆ. ಅಂಥ ಪರಿಸ್ಥಿತಿಯಿರುವುದನ್ನು ಅಮಲ್ದಾರರಿಗೆ ಅಥವಾ ಸರ್ಕಾರಕ್ಕೆ ತಿಳಿಸಿದರೆ ವ್ಯವಸ್ಥೆ ಮಾಡಬಹುದು.

ಶ್ರೀ ಎಸ್. ವೈ. ಪಾಟೀಲ್.—ಇಂಡಿ ತಾಲ್ಲೂಕು ಪೈಕಿ ಅಥರ್ಗ, ಸಿಂದಿಗಿ ತಾಲ್ಲೂಕು ಪೈಕಿ ಸಿಂದಿಗಿ ಜನರು ಸರ್ಕಾರಕ್ಕೆ ಹಣ ಜಮಾಮಾಡಿ ಒಂದು ತಿಂಗಳಾದರೂ ಧಾನ್ಯ ಸಿಕ್ಕದಿದ್ದುದು ನಿಜವೇ ? ಮುಂದೆ ಈ ತರಹದ ಅಡಚಣೆಯಾಗದಂತೆ ಸರ್ಕಾರ ಏರ್ಪಾಡು ಮಾಡುವುದೆ ?

ಶ್ರೀ ಎಂ. ಪಿ. ಪಾಟೀಲ್.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಕಾರಣಾಂತರದಿಂದ ಆ ತರಹ ಆಗಿದ್ದರೆ ಅದನ್ನು ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಕೊಳ್ಳಬಹುದು

ಶ್ರೀ ಎಸ್. ವೈ. ಪಾಟೀಲ್.—ಟೆಸ್ಟ್ ವರ್ಕ್ಸ್ ಪ್ರಾರಂಭಿಸಿ ಎಷ್ಟು ಜನರು ಬರುವರೆಂಬುದನ್ನು ಸರ್ಕಾರದವರು ತಿಳಿದುಕೊಳ್ಳಲು ಯತ್ನಿಸುವರೇ ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದವರು ಕೆಲವು ಕೆಲಸಗಳನ್ನು ಪ್ರಾರಂಭಿಸಿ ಲೇಬರ್ ಸಿಕ್ಕಿದರೆ ಮುಂದುವರಿಸುತ್ತಾರೆ, ಲೇಬರ್ ಬಾರದಿದ್ದರೆ ಬಂದ್ ಆಗುತ್ತದೆ.

ಶ್ರೀ ಎಸ್. ವೈ. ಪಾಟೀಲ್.—ಟೆಸ್ಟ್ ವರ್ಕ್ಸ್ ಷುರು ಮಾಡುವುದಾದರೆ ಆ ಭಾಗದ ಜನರ ಸಲಹೆ ತೆಗೆದುಕೊಂಡು ಅವರಿಗೆ ಉಪಯೋಗವಾಗುವ ಕೆಲಸ ಪ್ರಾರಂಭಿಸಲು ಅಧಿಕಾರಿಗಳಿಗೆ ತಿಳಿಸಲಾಗುವುದೇ ?

ಶ್ರೀ ಎಂ. ಪಿ. ಪಾಟೀಲ್.—ಇದರಲ್ಲಿ ಸಲಹೆ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಆವಶ್ಯಕತೆ ಎಲ್ಲಿದೆಯೆಂಬುದು ಅಮಲ್ದಾರರಿಗೆ ಗೊತ್ತಾಗುತ್ತದೆ. ಅಲ್ಲಿ ಪ್ರಾರಂಭಿಸುತ್ತಾರೆ. ಅನಂತರ ಸಾಕಷ್ಟು ಕೂಲಿಗಾರರು ಬಂದರೆ ಕೆಲಸ ಮುಂದುವರಿಯುತ್ತದೆ. ಬಾರದಿದ್ದರೆ ಬಂದು ಮಾಡಬೇಕಾಗುತ್ತದೆ.

ಶ್ರೀ ಎಸ್. ವೈ. ಪಾಟೀಲ್.—ಹಿಂದಿನ ದುಷ್ಕರ ಕಾಲದಲ್ಲಿ ದುಷ್ಕಾಲ ಕಾರ್ಯಾರಂಭಿಸಿ ರಸ್ತೆ ವಗೈರೆ ಮಾಡಿಸಿದಾಗ ಜನರಿಗೆ ಉಪಯೋಗವಾಗದೆ ಹಣ ವ್ಯರ್ಥವಾಗಿರುವುದರಿಂದ ಈ ಸಲವಾದರೂ ಆ ಭಾಗದ ಜನರಿಗೆ ಉಪಯೋಗವಾಗುವಂಥ ಕೆಲಸಗಳ ಕಡೆಗೆ ಸರ್ಕಾರ ಲಕ್ಷ್ಯ ಕೊಡುವುದೇ ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಎಂ. ಆರ್. ಪಟ್ಟಣಶೆಟ್ಟಿ.—ಈಗಾಗಲೆ ತೆರೆದಿರುವ ಫೇರ್ ಪ್ರೈಸ್ ಷಾಪ್ಸ್ ಸಂಖ್ಯೆಯನ್ನು ಹೆಚ್ಚಿಸುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಅವಶ್ಯವೆನಿಸಿದರೆ ಹೆಚ್ಚಿಸಬಹುದು.

ಶ್ರೀ ಎಂ. ಆರ್. ಪಟ್ಟಣಶೆಟ್ಟಿ.—ಈಗ ಅನೇಕ ಸೊಸೈಟಿಗಳು ತಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಮುಂದೆ ಬರುತ್ತಿಲ್ಲ. ಆ ದೃಷ್ಟಿಯಿಂದ ಸರ್ಕಾರದವರೇ ಅಂಗಡಿಗಳನ್ನು ತೆರೆಯಬಹುದಲ್ಲವೆ ?

ಶ್ರೀ ಎಂ. ಪಿ. ಪಾಟೀಲ್.—ಸರ್ಕಾರದವರು ತೆರೆಯಲು ಸಾಧ್ಯವಿಲ್ಲ. ಅದರಿಂದ ತೊಂದರೆಯಿದೆ. ಸೊಸೈಟಿಗಳಿಗೆ ತೊಂದರೆ ಇದ್ದರೆ ಅದನ್ನು ದೂರ ಮಾಡುವುದಕ್ಕೆ ವ್ಯವಸ್ಥೆಯಿದೆ. ಉದಾಹರಣೆಗೆ ಸೊಸೈಟಿಗಳಲ್ಲಿ ಹಣವಿಲ್ಲದಿದ್ದರೆ ಸಾಲಕೊಡುವುದಕ್ಕೆ ಏರ್ಪಾಡು ಮಾಡಿದೆ. ಅದಕ್ಕಾಗಿ ಬಿಜಾಪುರ ಜಿಲ್ಲಾ ಕಲೆಕ್ಟರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

NON-OFFICIAL RESOLUTIONS

No 1. Conversion of Revenue and Corporation sites into appropriate lay-outs.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ನನ್ನ ನಿರ್ಣಯವನ್ನು ಮಂಡಿಸಿ ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ತಿಳಿಸುವುದಕ್ಕೆ ತಮ್ಮ ಅನುಮತಿಯನ್ನು ಬೇಡಿಕೊಳ್ಳುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಯುಗಾದಿ ಹಬ್ಬವು ಒಂದು ಪವಿತ್ರವಾದ ಹಬ್ಬವಾಗಿದೆ. ಈ ವರ್ಷ ಮಾರ್ಚ್ 30ನೇ ತಾರೀಖಿನಿಂದ ಏಪ್ರಿಲ್ 2ನೇ ತಾರೀಖಿನವರೆಗೆ ಎಲ್ಲಾ ಬ್ಯಾಂಕ್ ವ್ಯವಹಾರಕ್ಕೆ ರಜೆ ಇರುವದರ ದೆಸೆಯಿಂದ ಎಲ್ಲಾ ನಾನ್-ಗೆಜೆಟೆಡ್ ಆಫೀಸರುಗಳಿಗೆ ನಾಲ್ಕು ದಿವಸ ಹಬ್ಬದ ಮುಂದೆ ಸಂಬಳ ದೊರೆಯುವದಿಲ್ಲ. ಆದಕಾರಣ ಅವರಿಗೆ ಸಂಬಳವನ್ನು ಮುಂಚಿತವಾಗಿಯೇ ಈ ಸಾರೆ ಕೊಡುವಂತೆ ಏರ್ಪಾಡು ಮಾಡಬೇಕಾಗಿ ಸೂಚಿಸಬಯಸುತ್ತೇನೆ.

ಉಪಾಧ್ಯಕ್ಷರು.—ತಮ್ಮ ಮನವಿಯನ್ನು ಸರಕಾರದವರು ಕೇಳಿಕೊಂಡಿದ್ದಾರೆ ಮತ್ತು ಅದರ ಬಗ್ಗೆ ಆಲೋಚನೆ ಮಾಡುತ್ತಾರೆ. ಈಗ ನಿಮ್ಮ ನಿರ್ಣಯವನ್ನು ಮಂಡಿಸಬೇಕು.

Sri V. R. NAIDU.—Sir, I beg to move :

> "This Assembly is of the opinion that Revenue and Corporation sites in Bangalore City and around on which poor people have built their houses should be converted into appropriate lay-outs in order to allot the same to those inhabitants."

ಅಧ್ಯಕ್ಷ ಮಹಾಶಯರೇ, ನನ್ನದು ಇದು ಕೊನೆಯ ಭಾಷಣ. ತಾವೂ ಕೊನೆಯ ಅಧ್ಯಕ್ಷರಾಗಿದ್ದೀರಿ. ಇನ್ನು ನನ್ನ ನಿರ್ಣಯದ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕೆಂದು ಇರುವೆನು. ಇತ್ತೀಚೆಗೆ ಬೆಂಗಳೂರು ನಗರವು ಭರದಿಂದ ಬೆಳೆಯುತ್ತಿದೆ. ಮೊದಲು ಮೂರು ನಾಲ್ಕು ಲಕ್ಷ ಜನಸಂಖ್ಯೆ ಇದ್ದದ್ದು ಈಗ 12 ಲಕ್ಷಕ್ಕೂ ಮೀರಿಹೋಗಿದೆ. ಬೆಂಗಳೂರು ಕಾರ್ಪೊರೇಷನ್ನಿನ ಏರಿಯಾ ಇರಲಿ ಅಥವಾ ರೆವಿನ್ಯೂ ಲ್ಯಾಂಡ್ ಇರಲಿ ಜಮೀನು ಅಕ್ವಾಯರ್ ಮಾಡಿಕೊಂಡು ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿಕೊಂಡು ಎಂಟು-ಹತ್ತು ಸಾವಿರ ಜನರು ಅಂದರೆ ಬಡ ನೌಕರರು ವಾಸಿಸುತ್ತಿದ್ದಾರೆ. ಕೆಳದರ್ಜೆಯ ನಾನ್-ಗೆಜೆಟೆಡ್ ಆಫೀಸರ್ ಸಲುವಾಗಿ ಸೈಟುಗಳನ್ನು ಲೇಔಟ್ ಮಾಡಿಕೊಡುವ ಉದ್ದೇಶವನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಇಲಾಖೆಯವರು ಇಟ್ಟುಕೊಂಡಿದ್ದಾರೆ. ಆದರೆ ಇತ್ತೀಚಿನ ಅಂಕಿ ಸಂಖ್ಯೆಗಳನ್ನು ಪರಿಶೀಲನೆ ಮಾಡಿ ನೋಡಿದರೆ ಯಾವ ಬಡ ಎನ್.ಜಿ.ಓ. ಗಳಿಗೆ ಸರಕಾರದಿಂದ ಸಹಾಯ ದೊರೆಯಬೇಕಾಗಿತ್ತೋ ಅವರೆಲ್ಲರಿಗೂ ನಿರಾಶೆಯಾಗುತ್ತಾ ಇದೆ. ಟ್ರಸ್ಟ್ ಬೋರ್ಡಿನಿಂದ ಬಡವರಿಗೆ ಸಹಾಯ ದೊರೆಯುತ್ತಿಲ್ಲ. ಟ್ರಸ್ಟ್ ಬೋರ್ಡಿನಲ್ಲಿದ್ದವರು ತಮ್ಮ ತಮ್ಮ ಮನೆಯ ಜನಗಳ ಹೆಸರಿನಲ್ಲಿ ಉತ್ತಮವಾದ ನಾಲ್ಕು-ಐದು ಸೈಟುಗಳನ್ನು ಒಬ್ಬೊಬ್ಬರು ಪಡೆದುಕೊಂಡಿರತಕ್ಕಂಥ ಉದಾಹರಣೆಗಳು ಇವೆ. ಟ್ರಸ್ಟ್ ಬೋರ್ಡಿನಿಂದ ಬಡವರಿಗೆ ಉಪಕಾರವಾಗುವದೆಂದು ತಿಳಿದುಕೊಂಡವರಿಗೆಲ್ಲಾ ನಿರಾಶೆಯಾಗಿದೆ. ಬಡವರಿಗೆ ಸೈಟು ದೊರೆಯುತ್ತಿಲ್ಲ. ಕಂಟೋನ್‌ಮೆಂಟಿನ ಹತ್ತಿರ ಬಾಲಾಜಿ ನಗರದಲ್ಲಿ 300ಕ್ಕೆ ಮೇಲ್ಪಟ್ಟು ಎಕ್ಸ್-ಸರ್ವಿಸ್‌ಮೆನ್—ಮಾಜಿ ಸೈನಿಕರು—ಮನೆ ಕಟ್ಟಿಕೊಂಡಿದ್ದಾರೆ. ಟ್ರಸ್ಟ್ ಬೋರ್ಡಿನ ಅಧ್ಯಕ್ಷರು ಬೆಂಗಳೂರು ಕಾರ್ಪೊರೇಷನ್‌ನ ಮೇಯರ್ ಆಗಿದ್ದಾರೆ.

(SRI V. R. NAIDU)

ಹಿಂದಕ್ಕೆ ಸರ್ಕಾರದವರು ಪರಿಶೀಲನೆ ಮಾಡಿ ಜಾಗ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರು ಪತ್ರಿಕೆಯಾದ ''ಪ್ರಜಾವಾಣಿ'' ಯಲ್ಲಿ ಈ ವಿಷಯವನ್ನು ಅಂಕಿ ಸಂಖ್ಯೆಗಳನ್ನು ಕೊಟ್ಟು ವಿವರವಾಗಿ ತಿಳಿಸ ಲಾಗಿದೆ. ನಮ್ಮಲ್ಲಿ ಕೆಲವರು ಇನ್ನುಮುಂದೆ ಅಸೆಂಬ್ಲಿಗೆ ಬರದೆ ಹೊರಗೆ ಉಳಿಯುವ ಪರಿಸ್ಥಿತಿ ಬಂದಿದೆ. ನಾವು ಹೊರಗೆ ಉಳಿದರೂ ಜನ ಸಾಮಾನ್ಯರ ಹಿತರಕ್ಷಣೆಯ ವಿಷಯವಾಗಿ ಪ್ರಯತ್ನ ಮಾಡುತ್ತಲೇ ಇರುವೆವು. ಕಾಂಗ್ರೆಸ್ ಸರಕಾರ ಬಂದಿದೆ. ನಮ್ಮ ಸರಕಾರ, ನಮ್ಮ ನಾಯಕರು, ನಮ್ಮ ಮಂತ್ರಿಮಂಡಲ ಎಂದು ಕಾಂಗ್ರೆಸ್ ಪಕ್ಷದವರು ಹೆಮ್ಮೆಪಟ್ಟು ಹೇಳುತ್ತಿದ್ದಾರೆ. ಚುನಾ ವಣೆಯಲ್ಲಿ ಓಟು ಕೇಳಲಿಕ್ಕೆ ಹೋದಾಗ ಕಾಂಗ್ರೆಸ್ ಸರಕಾರವನ್ನು ಬಲಪಡಿಸುವ ಸಲುವಾಗಿ ಕಾಂಗ್ರೆ ಸ್ಸಿಗರಿಗೆ ನಿಮ್ಮ ಮತಕೊಡಿರಿ, ನಿಮಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಮಾಡಿಸಿ ಕೊಡು ತ್ತೇವೆಂದು ಆಶ್ವಾಸನ ಕೊಡುತ್ತಲೇ ಇದ್ದಾರೆ. ಜನರು ಇವರ ಆಶ್ವಾಸನ ಕೇಳಿ ಕೇಳಿ ಕೇಳಿ ಸಂತುಷ್ಟರಾಗಿ ಬಿಟ್ಟಿದ್ದಾರೆ. ಇನ್ನು ಐದು ವರ್ಷ ಕಾಲ ಕಾಂಗ್ರೆಸ್ ರಾಜ್ಯಾಡಳಿತ ನಮ್ಮ ಮೈಸೂರು ರಾಜ್ಯದಲ್ಲಿ ಉಳಿಯುವದು. ಇನ್ನು ಮುಂದೆಯಾದರೂ ಹಿಂದಿನಂತೆ ಮಾಡದೆ ಎಲ್ಲವನ್ನು ಚೆನ್ನಾಗಿ ಪರಿಶೀಲನೆ ಮಾಡಿ ಆಡಳಿತೆಯಲ್ಲಿ ಸುಧಾರಣೆಗಳನ್ನು ಮಾಡಿ ಯಾರಿಗೂ ನಿರಾಶೆಯನ್ನುಂಟುಮಾಡುವದಿಲ್ಲವೆಂದು ನಂಬುತ್ತೇನೆ. ಬಾಲಾಜಿ ನಗರದಲ್ಲಿ ಮಾಜಿ ಸೈನಿಕರು ಮನೆ ಕಟ್ಟಿಕೊಂಡು ಇರುವ ವಿಷಯವನ್ನು ಹೇಳು ತ್ತಿದ್ದೆನು. ಈ ಸೈನಿಕರು ದೇಶಾದ್ಯಂತ ಮೈಸೂರು ಇನ್‌ಫೆಂಟರಿ ಎಂದು ಪ್ರಸಿದ್ಧರಾಗಿ ಮೈಸೂರು ದೇಶಕ್ಕೆ ಕೀರ್ತಿಯನ್ನು ಸಂಪಾದಿಸಿದ್ದಾರೆ. ಅವರು ಈಗ ಮನೆ ಕಟ್ಟಿಕೊಂಡಿದ್ದಾರೆ. ಇಂದಿಗೂ ಅಲ್ಲಿ ಲೇಔಟ್ ಮುಂತಾದ್ದು ಆಗಿಲ್ಲ. ಅದರ ಬಗ್ಗೆ ಕಾರ್ಪೊರೇಷನ್‌ದಲ್ಲಿ ಯಾವುದೇ ನಮೂದು ಆಗಿಲ್ಲ. ಟ್ರಸ್ಟ್ ಬೋರ್ಡಿಗೆ ಹೇಳಿದರೆ ಈ ಮಾತನ್ನು ಅವರು ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. ಈ ವಿಷಯ ಟ್ರಸ್ಟ್ ಬೋರ್ಡ್, ಕಾರ್ಪೊರೇಷನ್ ಮತ್ತು ಸರಕಾರ ಮೂವರಲ್ಲಿ ಓಡಾಡುತ್ತಿದೆ.

ನಾನು ತಮ್ಮ ಮುಂದೆ ನಿರ್ಣಯ ಏನಿದೆಯೋ ಅದಕ್ಕೆ ಸಂಬಂಧಪಟ್ಟ ವಿಷಯವಾಗಿ ಹೇಳುತ್ತೇನೆ. ತಾವು ಕೇಳಬೇಕೆಂದು ನನ್ನ ಪ್ರಾರ್ಥನೆ. ಬೆಂಗಳೂರು ನಗ ರಕ್ಕೆ ಸಂಬಂಧಪಟ್ಟಹಾಗೆ ಯಾವಯಾವ ಕಾಲೊ ನಿಗಳು ಆಗಿವೆ ಎಂದರೆ, ರಂಗನಾಥಪುರ, ಸ್ವತಂತ್ರ ಪಾಳ್ಯ, ವೆಂಕಟರಂಗಪುರಂ, ಗಾಯತ್ರೀ ನಗರ, ಯೆರ್ರಪ್ಪ ಬ್ಲಾಕ್, ಮುಂತಾದವು. ಇವುಗಳಲ್ಲದೆ ಕಾರ್ಪೊರೇಷನ್ನಿಗೆ ಸೇರದೆ ಇರುವ ರೆವಿನ್ಯೂ ಜಮೀನು ಗಳಲ್ಲಿ ಸಾಧಾರಣವಾಗಿ ಸುಮಾರು ಇಪ್ಪತ್ತು ಸಾವಿ ರಕ್ಕೆ ಮೇಲ್ಪಟ್ಟು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದಕ್ಕೆ ಕಂದಾಯ ಬಹು ಕಡಿಮೆ ಇದೆ. ಆದರೆ ಈ ಮನೆಗಳಿಗೆ ಲೈಟಿಲ್ಲ, ನೀರಿನ ನಲ್ಲಿಗಳು ಇಲ್ಲ, ಕಂದಾಯ ವನ್ನೂ ಕೂಡ ಸರಿಯಾಗಿ ಕೊಡುತ್ತಿಲ್ಲ, ಇವರನ್ನು ಕೇಳುವವರೇ ಇಲ್ಲ ಎಂದು ವಿಷಾದದಿಂದ ಹೇಳಬೇಕಾ ಗಿದೆ. ಇವರುಗಳೆಲ್ಲ ಇಷ್ಟು ದಿವಸಗಳಿಂದಲೂ ಕಟ್ಟಿ ಕೊಂಡಿರುವ ಸುಮಾರು 15-20 ಸಾವಿರಕ್ಕೆ ಮೇಲ್ಪಟ್ಟಿರುವ ಮನೆಗಳಿಗೆ ಟ್ಯಾಕ್ಸ್ ಹಾಕಿದ್ದರೆ ಸರ್ಕಾರಕ್ಕೆ ಆದಾಯ ಬರುತ್ತಿತ್ತು. ಇವನ್ನು ಕಾರ್ಪೊರೇಷನ್ನಿಗೆ ಸೇರಿಸದಿರುವುದರಿಂದ ಸುಮಾರು ಏಳೆಂಟು ಲಕ್ಷ ರೂಪಾಯಿಗಳಷ್ಟು ತೆರಿಗೆ ಉತ್ಪತ್ತಿ ಕಾರ್ಪೊರೇಷನ್ನಿಗೆ ಇಲ್ಲದಂತಾಗಿದೆ. ಇನ್ನು ಕಂದಾಯವನ್ನು ತೆಗೆದುಕೊಳ್ಳಿ ಎಂದರೂ ತೆಗೆದು ಕೊಳ್ಳುವುದಿಲ್ಲ. ಅಲ್ಲಿಗೆ ದೀಪ ಕೊಡುವುದಿಲ್ಲ. ನಲ್ಲಿ ಮೊದಲೇ ಇಲ್ಲ. ಇಂತಹ ದೊಡ್ಡ ಸಮಸ್ಯೆಯ ವಿಷಯ ದಲ್ಲಿ ಏನು ಮಾಡಬೇಕೆಂದು ಸರಕಾರದವರೇ ಪರಿ ಶೀಲಿಸಬೇಕು. ಈಗ ತ್ಯಾಗರಾಜನಗರವೆಂಬ ಕಾಲೋನಿಯಿದೆ. ಇಲ್ಲಿ 60×40 ಸೈಟುಗಳನ್ನು ಮಾಡಿದ್ದಾರೆ. ಇವು ಮೊದಲು 500 ರೂಪಾಯಿಗಳ ಮೇಲೆ ಬಾಳುತ್ತಿರಲಿಲ್ಲ. ಅವನ್ನು ಟ್ರಸ್ಟ್ ಬೋರ್ಡಿ ನವರು ತೆಗೆದುಕೊಂಡ ಮೇಲೆ ಅವಕ್ಕೆ ಈಗ ಒಂದಕ್ಕೆರ ಡರಷ್ಟು ಬೆಲೆಯಾಗಿದೆ. ಹಾಗೆಯೇ ಈಗ ಜಯನಗರ ದಲ್ಲಿ ಕೆಲವು ಸೈಟುಗಳನ್ನು ಮಾಡಿ ಎಷ್ಟೋ ಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಇದೂ ಅಲ್ಲದೆ ರೆವಿನ್ಯೂಗೆ ಸೇರಿದ ಜಮೀನುಗಳಲ್ಲಿ ಎಷ್ಟೋ ಜನರು ಬಹಳ ಕಾಲದಿಂದಲೂ ಮನೆಗಳನ್ನು ಕಟ್ಟಿ ಈಗಲೂ ವಾಸಿಸುತ್ತಿದ್ದಾರೆ. ಮಾನ್ಯ ಸಚಿವರೇನೋ ಕಮಿಟಿ ಮಾಡಿದ್ದೇವೆಂದು ಹೇಳಿದರು. ಈ ಮನೆಗಳವರನ್ನು ಬಿಡಿಸಬೇಕಾದರೆ ಅಮಲ್ದಾರರು ನೋಟೀಸು ಕೊಟ್ಟು ನಂತರ ಜಫ್ತಿ ಆಗಬೇಕು. ಇದಾದ ಮೇಲೆ ಡೆಪ್ಯುಟೀ ಕಮಿಷನರವರಿಂದ ಸ್ಟೇ ಆರ್ಡರ್ ತರುವ ಎಷ್ಟೋ ನಿದರ್ಶನಗಳಿವೆ.

ಶ್ರೀ ಕಡಿದಾಳ್ ಮಂಜಪ್ಪ (ವಿದ್ಯಾ ಇಲಾಖೆಯ ಮಂತ್ರಿಗಳು).—ಸ್ಟೇ ಕೊಟ್ಟು ಇನ್‌ಸ್ಟ್ರಕ್ಷನ್ ಕೂಡ ಕೊಟ್ಟಿವೆಯಲ್ಲ.

ಶ್ರೀ ವಿ. ಆರ್. ನಾಯ್ಡು.—ಹೌದು, ಜನಾನು ರಾಗಿಗಳಾದಂತಹ ತಾವು ಸಚಿವರಾಗಿದ್ದುದರಿಂದ ತಾವು ಹಾಗೆ ಅನುಕೂಲ ಮಾಡಿಕೊಟ್ಟಿರಿ. ಜನಗಳಿಗೆ ಸುಮಾರು ನಲವತ್ತು ವರ್ಷಗಳಿಂದ ಈ ಸಂಕಟ ಬಂದಿದೆ. ಅನಂತರ, ಮಲ್ಲೇಶ್ವರದಲ್ಲಿ ಪಿಟ್ ಕಾಲೊನಿ ಎಂಬುದೊಂದಿದೆ. ಇಲ್ಲಿ 40 ವರ್ಷಗಳಿಂದ ತೀರ ಬಡವರಾಗಿರತಕ್ಕವರು ಮನೆಗಳನ್ನು ಮಾಡಿಕೊಂಡಿ ದ್ದಾರೆ. ಈ ಕಾಲೊನಿಯ ಲೇಔಟನ್ನು ಕೂಡ ಹಿಂದೆ ಒಪ್ಪಿದ್ದರು. ಈಗ ಒಂದೆರಡು ತಿಂಗಳಿಂದ ಇಲ್ಲಿರುವವ ರಿಗೆಲ್ಲ ಮನೆಯನ್ನು ಬಿಡಬೇಕೆಂದು ನೋಟೀಸು ಗಳನ್ನು ಕೊಟ್ಟಿದ್ದಾರೆ. ಇವನ್ನು ಒಡೆದು ಪಾರ್ಕು ಗಳನ್ನು ಮಾಡುವುದಕ್ಕೋಸ್ಕರ ಈ ಕ್ರಮ ತೆಗೆದು ಕೊಳ್ಳಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಇಲ್ಲಿ ರುವ ನೂರು ಬಡ ಸಂಸಾರದವರನ್ನೂ ಓಡಿಸಿ ಪಾರ್ಕುಮಾಡುವುದು ನ್ಯಾಯವೇ? ಕಾರ್ಪೊರೇಷನ್ನಿ ನವರು ಹೀಗೆ ಮಾಡುವುದರಿಂದ ಬಡ ಜನರಿಗೆ ತುಂಬ ತೊಂದರೆಯಾಗುತ್ತಿದೆ. ಅಷ್ಟೇ ಅಲ್ಲದೆ ಈಗ ಸುಮಾರು 40 ವರ್ಷಗಳಿಂದಲೂ ಬೇರೆ ಕಡೆ ರೆವಿನ್ಯೂ ಮತ್ತು ಇತರ ಜಮೀನುಗಳಲ್ಲಿ ಕಟ್ಟಿರುವ ಮನೆಗಳಿಂದ ಎಷ್ಟು ಕಂದಾಯ ಲುಕ್ಸಾನು ಆಗುತ್ತಿದೆ ಎಂದರೆ, ಸುಮಾರು 60 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಾಗುತ್ತಿದೆ. ಇದನ್ನು ಸರ್ಕಾರದವರು ಪರಿ ಶೀಲಿಸಬೇಕು. ಅಲ್ಲದೆ ಈಗ ರಾಮಚಂದ್ರಪುರ ಎಂಬ ಕಾಲೊನಿಯಿದೆ. ಇಲ್ಲಿ ಸುಮಾರು ಐದು ಸಾವಿರ ಕ್ಕಿಂತ ಮೇಲೆ ಬಡ ಕಾರ್ಮಿಕರು ಮನೆಗಳನ್ನು ಕಟ್ಟಿಸಿ ಕೊಂಡಿದ್ದಾರೆ. ಇಲ್ಲೆಲ್ಲಾ ಲೇಔಟ್ ಮಾಡಿ ಚದರ ಗಜಕ್ಕೆ ನಾಲ್ಕು ರೂಪಾಯಿಗಳಂತೆ ಕೊಡಬೇಕೆಂದು ಆಗಿದೆ. ಇಲ್ಲಿ ವಾಸಿಸುವವರು ಬಹುತೇಕ ಬಡ ನೌಕರರುಗಳೇ ಆಗಿರುವುದರಿಂದ ಅವರುಗಳು ಬಹಳ ಕಷ್ಟಪಟ್ಟು ಇಲ್ಲಿ ಸೈಟುಗಳನ್ನು ತೆಗೆದುಕೊಂಡಿ ದ್ದಾರೆ. ಆದರೆ ಈಗ ಲೇಔಟು ಮಾಡಿರುವ ಸೈಟು ಗಳಿಗೆ ಸುಮಾರು ಒಂದೂವರೆಸಾವಿರ ರೂಪಾಯಿಗಳ ಮೇಲಾಗುತ್ತದೆ. ಹಿಂದೆ ಇದೇ ಸೈಟಿಗೆ

500 ರೂಪಾಯಿಗಳಾಗುತ್ತಿತ್ತು. ಎನ್.ಜಿ.ಓ. ಗಳು ತಮಗೆ ಬರುವ ಸಂಬಳಸಾಲದೆ 50-60 ರೂಪಾಯಿ ಗಳ ಸಾಲ ಮಾಡಿಕೊಂಡು ಇರುವ ಸಂದರ್ಭವಿರು ವಾಗ ಈ ಲೇಔಟಿನಲ್ಲಿ ಸೈಟುಗಳನ್ನು 1,500 ಕೊಟ್ಟು ಕೊಳ್ಳಲು ಅಶಕ್ತರಾಗಿದ್ದಾರೆ. ಪ್ರಜಾ ಪ್ರಭುತ್ವ ಬರಬೇಕೆಂದು ಜನ ತವಕ ಪಡುತ್ತಿದ್ದದ್ದು ಏಕೆ ಎಂಬು ದನ್ನು ತೋರಿಸಲು ಇಲ್ಲಿ ಬಸವಣ್ಣನವರ ಒಂದು ವಚನವನ್ನು ಓದುತ್ತೇನೆ. ಅದು ಹೀಗಿವೆ :—

" ವೇಷಗಳ ಧರಿಸೇನು
ದೇಶಗಳ ತಿರಿಗೇನು
ದೋಷಗಳ ಹೇಳಿ ಫಲವೇನು
ಮನಸಿನಾ ಆಸೆ ಬಿಡದತನಕ ಬಸವಣ್ಣ "

ಕಾಂಗ್ರೆಸ್ಸು ಸರ್ಕಾರ, ಪ್ರಜಾಪ್ರಭುತ್ವವನ್ನು ಎಲ್ಲರೂ ಬೇಕು ಎಂದು ಹೇಳುತ್ತಿದ್ದುದು ಒಂದು ಪದವಿ ಸಿಕ್ಕು ವವರೆಗೆ ಮಾತ್ರ ಎಂದೆನ್ನಿಸುತ್ತದೆ. ಮುಂದೇನೋ ಹೊಸ ರೆಜಿಸ್ಲೇಚರು ಬರುತ್ತದೆ. ಆಗಲಾದರೂ ಇದ ನ್ನೆಲ್ಲಾ ಪರಿಶೀಲನೆ ಮಾಡಬೇಕೆಂದು ಕೇಳುತ್ತೇನೆ. ನಮ್ಮ ಪ್ರೀತಿಗೆ ಪಾತ್ರರಾದ ಸಚಿವ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮುಂದೆ ಬರುವವರಾಗಿ ದ್ದಾರೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈಗ ಲಕ್ಷಾಂತರ ರೂಪಾಯಿಗಳು ಒಂದುಕಡೆ ಕಾರ್ಪೊ ರೇಷನ್ನಿಗೆ ನಷ್ಟವಾಗುತ್ತಿದೆ. ಅದಲ್ಲದೆ ಸರಿಯಾದ ರಸ್ತೆ ಗಳಿಲ್ಲದೆ ಇರುವ ಪ್ರದೇಶಗಳಲ್ಲಿ ಲೇ ಔಟನ್ನು ಮಾಡಿ ಚದರ ಗಜಕ್ಕೆ ನಾಲ್ಕುರೂಪಾಯಿನಂತೆ ಕೊಡಿಸುವುದಕ್ಕೆ ಶಕ್ತಿ ಇಲ್ಲದಿದ್ದರೆ ಸರ್ಕಾರ ಸ್ವಲ್ಪ ಮಟ್ಟಿಗೆ ಹಣ ಕಡಿಮೆ ಮಾಡಿಕೊಂಡು ಲೇ ಔಟನ್ನು ಮಾಡಿ ಜನರಿಗೆ ಏತಕ್ಕೆ ಕೊಡಬಾರದು ? ದೇಶಕ್ಕೆ ಸ್ವಾತಂತ್ರ್ಯ ಬಂದರೂ ಕೂಡ ಜನ ಸಾಮಾನ್ಯರ ಕಷ್ಟವು ಪರಿಹಾರವಾಗಲಿಲ್ಲ. ಇದೊಂದು ಬೆಂಗಳೂರಿಗೆ ಸಂಬಂಧಪಟ್ಟ ಬಹಳ ಮುಖ್ಯವಾದ ಪ್ರಶ್ನೆ. ಅಲ್ಲದೆ ಈಗ ನಮ್ಮ ಮುಂದೆ ಈ ಎನ್.ಜಿ.ಓ. ಗಳ ಪ್ರಶ್ನೆ ಬೇರೆ ಬಂದಿದೆ. ಅವರುಗಳ ಪರಿಸ್ಥಿತಿ ಸ್ವಾತಂತ್ರ್ಯ ಬಂದಮೇಲೆ ಬಹಳ ಭಯಂಕರವಾಗಿದೆ. ಎಷ್ಟೋಬಾರಿ ಅವರುಗಳು ಮನವಿಯನ್ನು ಸಲ್ಲಿಸಿ ಬೇಡಿಕೆಗಳನ್ನು ಮುಂದಿಟ್ಟಿದ್ದರೂ ಕೂಡ ಅವರಿಗೆ ಇನ್ನೂ ತೃಪ್ತಿಕರವಾಗಿ ಏನೂ ಪರಿಹಾರ ದೊರೆತಿಲ್ಲ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಪರಿಹರಿಸಬೇಕೆಂದು ಅವರ ಪರವಾಗಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸರ್ಕಾರದವರು ಲೇಔಟುಗಳನ್ನು ಮಾಡಿಸಿ ಚದರ ಗಜಕ್ಕೆ ನಾಲ್ಕು ರೂಪಾಯಿನಂತೆ, ತೆಗೆದುಕೊಳ್ಳಲು ಶಕ್ತಿಯಿಲ್ಲದಿದ್ದರೂ ಕೂಡ ಅಂತಹವರಿಗೆ ವಸತಿಯ ಏರ್ಪಾಡುಮಾಡಿ ಕೊಡ ಬೇಕಾದುದು ಅಗತ್ಯವಾಗಿದೆ. ಈಗ ಹಣದ ಅಭಾವ ವಿದೆ. ಅದನ್ನು ನಾನು ತಿಳಿದುಕೊಂಡಿದ್ದೇನೆ. ಆದರೆ ಈಗ ರೆವೆನ್ಯೂ ಲ್ಯಾಂಡುಗಳಲ್ಲಿ ಕಟ್ಟಿರುವ ಕಟ್ಟಡಗಳನ್ನು ಕಾರ್ಪೊರೇಷನ್ ವಹಿಸಿಕೊಂಡರೆ ಹೆಚ್ಚಿಗೆ ಆದಾಯ ಬರಲನುಕೂಲವಾಗುತ್ತದೆ. ಈಗ ಟ್ರಸ್ಟ್‌ಬೋರ್ಡು ಎಂಬ ಬೋರ್ಡೊಂದು ಇದೆ. ಈ ಬೋರ್ಡಿನಿಂದ ಬಡವರಿಗೇನೂ ಉಪಯೋಗವಾಗುತ್ತಿಲ್ಲ. ಬೆಂಗ ಳೂರಿನಲ್ಲಿರುವ ಶ್ರೀಮಂತ ವರ್ಗಕ್ಕೆ ಮತ್ತು ಸಾವಿರ ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳಿಗೆ ಈ ಬೋರ್ಡಿನಿಂದ ಉಪಯೋಗವಾಗುತ್ತಿದೆ. ಆದಕಾರಣ ಇದನ್ನು ಸರಕಾರ ಸರಿಯಾಗಿ ಮಾರ್ಪಡಿಸಬೇಕೆಂದು ನನ್ನ ಅರಿಕೆ.

ಕೊನೆಯದಾಗಿ, ಕೆಲವು ವಿಷಯಗಳನ್ನು ಹೇಳ ಬೇಕಾಗಿದೆ. ಬಾಲಾಜಿ ನಗರದಲ್ಲಿ ಮುನ್ನೂರಕ್ಕೂ ಮೇಲ್ಪಟ್ಟು ಮಾಜಿ ಸೈನಿಕರು ಮನೆಗಳನ್ನು ಕಟ್ಟಿ ಕೊಂಡಿದ್ದಾರೆ. ಅದರೆ ಟ್ರಸ್ಟ್‌ಬೋರ್ಡಿನವರು ಈಗ ಈ ಭಾಗವನ್ನು ಅಕ್ವೈರುಮಾಡಿಕೊಂಡು ದೊಡ್ಡ ದೊಡ್ಡ ಸೈಟುಗಳನ್ನು ಮಾಡಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಕೊಡಬೇಕೆಂದಿದ್ದಾರೆ. ಆದರೆ ಬಡವರಿಗೆ ಅನುಕೂಲ ವಾಗುವಂತೆ ಸಣ್ಣ ಸಣ್ಣ ಸೈಟುಗಳು ಎಂದರೆ 30×40 ಅಡಿ ವಿಸ್ತೀರ್ಣದ ಸೈಟುಗಳನ್ನಾಗಿ ಮಾಡಿ ಬಡಸೈನಿಕ ರಿಗೆ ಏತಕ್ಕೆ ಕೊಡುವುದಿಲ್ಲ ? ಕಾಂಗ್ರೆಸ್ಸಿನವರ ಆಡಳಿತ ವಿರುವುದರಿಂದ ಬಡಜನರಿಗೆ ಸಹಾಯಮಾಡಲು ಅವ ಕಾಶವಿದೆ ಎಂದು ಜನಗಳು ನಂಬಿದ್ದಾರೆ. ಟ್ರಸ್ಟ್ ಬೋರ್ಡಿನಲ್ಲಿ ಯಾವುದಾದರೂ ದೊಡ್ಡ ಜಮೀನಿದ್ದು ಅದರಲ್ಲಿ ಸೈಟುಗಳಿದ್ದರೆ ಅದು ಬಡವರಿಗೆ ಸಿಕ್ಕುವುದಿಲ್ಲ. ಈ ಬೋರ್ಡಿಗೆ ಸೇರಿಲ್ಲದ ಕಡೆ ಇರುವ ಜಮೀನಿನಲ್ಲಿರುವ ಸೈಟುಗಳನ್ನು ತೆಗೆದುಕೊಂಡರೆ ಅಲ್ಲಿ ಲೇಔಟು ಆಗಿರುವುದಿಲ್ಲ, ಲೈಟು, ನಲ್ಲಿಗಳೇ ಇರುವುದಿಲ್ಲ. ಈ ರೀತಿ ಇರುವ ಕೆಲವು ಪ್ರದೇಶಗಳು ಎಂದರೆ, ಶ್ರೀರಾಮ ಪುರ, ಸ್ವತಂತ್ರಪಾಳ್ಯ, ದಯಾನಂದನಗರ, ಹರಿಜನರ ಕಾಲೋನಿ, ಕೋದಂಡರಾಮಪುರ, ಗಾಂಧಿಗ್ರಾಮ, ವೆಂಕಟರಂಗ ಪಾಳ್ಯಂ, ಕುರುಬರಗುಡಿಸಲು, ಗಾಯತ್ರಿ ನಗರ, ವಸಂತನಗರ, ಯಶವಂತಪುರ, ದಾಬರ್‌ಪೇಟೆ, ಯರ್ರಪ್ಪ ಬ್ಲಾಕು, ರಾಮಚಂದ್ರಪುರ. ಈ ರಾಮ ಚಂದ್ರಪುರದಲ್ಲಿ ಮೊದಲು 1,000 ಮನೆಗಳಿದ್ದುವು. ನಮ್ಮ ಮಾನ್ಯ ಸಚಿವರಾದ ಶ್ರೀ ಚೆನ್ನಿಗರಾಮಯ್ಯ ನವರೇ ಇದರ ಆರಂಭೋತ್ಸವ ನಡೆಸಿದ್ದರು. ಈಗ ಅಲ್ಲಿ ಸುಮಾರು 4,500 ಮನೆಗಳಾಗಿವೆ.

3-30 P.M.

ಶ್ರೀಮಾನ್ ಎಚ್. ಸಿ. ದಾಸಪ್ಪ ಅವರು ಫೈನಾನ್ಸ್ ಮಿನಿಸ್ಟರು ಆಗಿದ್ದರು. ಅವರು ಬಂದು ನೋಡಿ ಆಶೀರ್ವಾದಮಾಡಿದ್ದಾರೆ. ಅಲ್ಲಿ ಸಾಧಾರಣವಾಗಿ ಮೂರು ನಾಲ್ಕು ಸಾವಿರ ಬಡ ಕುಟುಂಬಗಳಿವೆ. ಅಲ್ಲಿಯೂ ಕೂಡ ಇದೇ ರೀತಿ ಲೇಔಟು ಇಲ್ಲ, ರಸ್ತೆ ಇಲ್ಲ. ಈಗ ಶ್ರೀರಾಮಪುರ ಮತ್ತು ಮಲ್ಲೇಶ್ವರದ ಸುತ್ತ ಮುತ್ತಲೂ, ಮತ್ತು ಬೆಂಗಳೂರು ನಗರಕ್ಕೆ ಸಂಬಂಧ ಪಟ್ಟ ಕಾರ್ಪೊರೇಷನ್ ಮತ್ತು ಟ್ರಸ್ಟ್‌ಬೋರ್ಡ್ ಪ್ರದೇಶದಲ್ಲಿ ರೆವೆನ್ಯೂ ಲ್ಯಾಂಡ್‌ನಲ್ಲಿ ತೀರ ಬಡವರು ಮನೆ ಕಟ್ಟಿಕೊಂಡಿದ್ದಾರೆ. ಆ ಜಮೀನು ಸರಕಾರಕ್ಕೆ ಸಂಬಂಧಪಟ್ಟದ್ದಾಗಿದ್ದರೆ ಅದನ್ನು ಉಚಿತವಾಗಿಯೇ ಕೊಡಬೇಕು. ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಜಮೀನಾದರೆ upset price ನಲ್ಲಿ ಕೊಡಿಸುವುದಕ್ಕೆ ಪ್ರಯತ್ನಮಾಡಬೇಕು. ರಾಮಚಂದ್ರಪುರ ಮತ್ತು ಇತರ ಕಡೆ unauthorised constructions ಆಗಿವೆ. ಅಲ್ಲಿ lay-outs ಮಾಡಿ ಸರಕಾರದವರು ಹೆಚ್ಚಿಗೆ lay-out charges ಹಾಕಿದ್ದಾರೆ. ಈ ಪ್ರದೇಶದಲ್ಲಿ ತೀರ ಬಡವರು ಮನೆಗಳನ್ನು ಹೊಂದಿರುವುದರಿಂದ lay-out charges ಕಡಮೆ ಮಾಡಬೇಕೆಂದು ಹೇಳುತ್ತೇನೆ. ನಾನು ಈ ವಿಷಯದ ಬಗ್ಗೆ ಐದು ವರ್ಷಗಳಿಂದಲೂ ಪ್ರಸ್ತಾಪಮಾಡುತ್ತಿದ್ದೇನೆ. ಆಗಿ ನಿಂದಲೂ ಏನೂ ಆಗಿಲ್ಲ. ದೇಶದಲ್ಲಿರುವಂಥ ಜನತೆ ಅದರಲ್ಲಿಯೂ ಮೈಸೂರು ದೇಶದಲ್ಲಿರುವ ಜನತೆ ಪ್ರಜಾಪ್ರಭುತ್ವಕ್ಕೋಸ್ಕರ ಏನು ಒಂದು ಹೋರಾಟ ನಡೆಸಿದರೋ ಆಗ ತಮಗೆ ಪ್ರಜಾಪ್ರಭುತ್ವ ಬಂದರೆ ತಮ್ಮ ಬಡತನ ನೀಗುತ್ತದೆ, ಸರಿಸಮಾನತ್ವ ಸಿಕ್ಕುತ್ತದೆ ಎಂಬ ಆಸೆ ಅವರಿಗಿತ್ತು. ಆ ಜನತೆ ಈಗ ಬಹುಮಟ್ಟಿಗೆ ನಿರಾಶರಾಗಬೇಕಾದ ಪರಿಸ್ಥಿತಿ ಬಂದಿದೆ. ಆದುದರಿಂದ

(ಶ್ರೀ ವಿ. ಆರ್. ನಾಯ್ಡು.)

ಸಾಧ್ಯವಾದಮಟ್ಟಿಗೂ ಸರಕಾರದವರು ಬಡನೌಕರರಿಗೆ, ಮೇಲ್ಕಂಡ ಪ್ರದೇಶಗಳಲ್ಲಿರುವವರಿಗೆಲ್ಲರಿಗೂ ರಿಯಾಯಿತಿ ದರದಲ್ಲಿ lay-outs ಮಾಡಿಸಿ ಸರಕಾರಕ್ಕೆ ಸಂಬಂಧಪಟ್ಟಂಥ ಜಮೀನುಗಳನ್ನು ಅವರಿಗೆ ಉಚಿತವಾಗಿ ಕೊಟ್ಟು ಕಾಪಾಡಬೇಕು ಎಂದು ಪ್ರಾರ್ಥಿಸುತ್ತೇನೆ. ಈ ನಿರ್ಣಯವನ್ನು ಮಂಡಿಸಿ ಮಾತನಾಡಲು ಕೆಲವು ನಿಮಿಷಗಳ ಅವಕಾಶವನ್ನು ಕೊಟ್ಟಿದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ. ಈ ವಿಷಯದ ಮೇಲೆ ಮಾತನಾಡಬೇಕಾದರೆ ಇಡೀ ದಿವಸವೆಲ್ಲ ಮಾತನಾಡಬೇಕೆಂಬ ಆಸಕ್ತಿ ಇದೆ. ಕೊನೆಯ ವಿಷಯ ಇಷ್ಟೇ, ಸರಕಾರದವರು ಈ ಪ್ರದೇಶಗಳಲ್ಲಿ ಲೇ ಔಟು ಮಾಡಿಸಿ, ಅಲ್ಲಿರುವ ಬಡಜನರ ಕಷ್ಟವನ್ನು ನೀಗಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—Motion moved.

"This Assembly is of the opinion that Revenue and Corporation sites in Bangalore City and around on which poor people have built their houses should be converted into appropriate lay-outs in order to allot the same to those inhabitants."

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ನಾಯ್ಡು ಅವರು ಮಂಡಿಸಿರತಕ್ಕ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಶ್ರೀಮಾನ್ ನಾಯ್ಡು ಅವರು ಹೇಳಿದ ಹಾಗೆ ರಾಜಾಜಿನಗರ, ಜಯನಗರ, ಯಶವಂತಪುರ, ಇಂಥ ಕಡೆಗಳಲ್ಲೆಲ್ಲ ಸುಮಾರು 40 ವರ್ಷಗಳಿಂದ ಅನೇಕರು ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಅದರಲ್ಲಿಯೂ ಮಧ್ಯಮ ವರ್ಗಕ್ಕಿಂತಲೂ ಕೆಳಮಟ್ಟಕ್ಕೆ ಬರುವ ಸಂಸಾರಗಳು ಹೆಚ್ಚಾಗಿವೆ. ಅಂಥವರನ್ನು ಈಗ ಬೇರೆ ಕಡೆ ಹೋಗಬೇಕು ಎಂದು ಅನೇಕ ಕಾಲೊನಿಗಳ ನಿವಾಸಿಗಳಿಗೆ ಟ್ರಸ್ಟ್‌ಬೋರ್ಡಿನವರು ನೋಟೀಸ್ ಜಾರಿ ಮಾಡಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಎಷ್ಟೋ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು, ಸಾಧ್ಯವಾದಮಟ್ಟಿಗೂ ಸುಖವಾಗಿದ್ದುಕೊಂಡು, ತಮಗೆ ಬರತಕ್ಕ ಸಣ್ಣ ಆದಾಯದಲ್ಲಿ ಸಂತೋಷಪಟ್ಟುಕೊಂಡು ಹೇಗೋ ಕಾಲ ತಳ್ಳಿಕೊಂಡಿರೋಣ ಎಂದರೆ ಆ ಸಂಸಾರಗಳನ್ನು ಈ ದಿವಸ ಮನೆಗಳನ್ನು ಬಿಟ್ಟು ಬೇರೆ ಕಡೆ ಕಟ್ಟಿಕೊಳ್ಳಿ, ನೀವು ಎಲ್ಲಿಯಾದರೂ ಹೋಗಿ, ಒಂದು ವಾರದಲ್ಲಿ ನೀವು ಆ ರೀತಿ ಮಾಡದಿದ್ದರೆ ನಿಮ್ಮಮೇಲೆ ಬಲಾತ್ಕಾರ ಮಾಡುತ್ತೇವೆ ಎನ್ನತಕ್ಕ ನೋಟೀಸ್‌ಗಳು ಜಾರಿಯಾಗಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಟ್ರಸ್ಟ್‌ಬೋರ್ಡಿನವರು ನ್ಯಾಯವಾಗಿ ರಿಯಾಯಿತಿಯನ್ನು ತೋರಿಸಬೇಕು. ಅಲ್ಲಿ ಕಟ್ಟಿಕೊಂಡಿರುವ ಮನೆಗಳಿಗೆ ಸ್ವಲ್ಪಮಟ್ಟಿಗೆ ರಸ್ತೆಗಳನ್ನು ಮಾಡಿಕೊಡುವ ಹಾಗೆ ಮಾಡಿ, ಮುನಿಸಿಪಾಲಿಟಿಯವರು ಅದನ್ನು ವಹಿಸಿಕೊಳ್ಳುವ ಹಾಗೆ ಮಾಡಿ, ರಸ್ತೆಗಳನ್ನು ಮಾಡುವುದು, ನೀರಿನ ಸೌಕರ್ಯ ಒದಗಿಸುವುದು, ಬೀದಿ ದೀಪಗಳನ್ನು ಕೊಡುವುದು ಮುಂತಾದ ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಅವಕಾಶವಿದೆ. ಟ್ರಸ್ಟ್ ಬೋರ್ಡಿನವರಿಗೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡು ಇರುವುದು, ಅರ್ಥವಾಗುವುದಿಲ್ಲ. ಸಾಧಾರಣವಾದ ಆದಾಯದಿಂದ ಜೀವನಮಾಡತಕ್ಕದ್ದು ಟ್ರಸ್ಟ್‌ಬೋರ್ಡಿನ ಛೇರ್ಮನ್‌ಗಾಗಲಿ, ಅಲ್ಲಿರುವ ದೊಡ್ಡ ದೊಡ್ಡ ಅಧಿಕಾರಿಗಳಿಗಾಗಲಿ, ಟ್ರಸ್ಟ್‌ಬೋರ್ಡಿನ ಸದಸ್ಯರಿಗಾಗಲಿ, ಯಾರಿಗೂ ಅದರ ಅನುಭವ ಇದ್ದ ಹಾಗೆ ಕಾಣುವುದಿಲ್ಲ. ಅದಕ್ಕೋಸ್ಕರ ಇಷ್ಟೊಂದು ಕ್ರೂರತನದಿಂದ ವರ್ತಿಸಿ ಜನಗಳನ್ನು ಪೀಡಿಸುತ್ತಿದ್ದಾರೆ. ಇದನ್ನು ಸರಕಾರದವರು ಖಂಡಿತವಾಗಿ ಗಮನಿಸಬೇಕು ಎಂದು ಬೇಡಿಕೊಳ್ಳುತ್ತೇನೆ. ಈ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರ ಅಲ್ಲಿಯೇ ಇರುವಂತೆ ಮಾಡಿ ಅವರಿಗೆ ರಸ್ತೆ, ನಲ್ಲಿ, ಬೀದಿ ದೀಪ ವಗೈರೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಬೇಕೆಂದು ಹೇಳುತ್ತೇನೆ.

ರಾಜಾಜಿನಗರವು, ಯಶವಂತಪುರದಿಂದ ಹಿಡಿದು ರೈಲ್ವೆ ಸ್ಟೇಷನ್ನಿನಿಂದ ಮೂರು ಮೈಲಿ ದೂರದವರೆಗೂ, ಸುಮಾರು ಏಳುಮೈಲಿಗಳಷ್ಟು ದೂರದ ಪ್ರದೇಶವನ್ನಾಕ್ರಮಿಸಿದೆ. ಎಷ್ಟೋ ಹಳ್ಳಿಗಳವರನ್ನು, ಬೆಂಗಳೂರು ಹುಟ್ಟುವುದಕ್ಕೆ ಮೊದಲಿನಿಂದಲೂ ಇದ್ದ ಹಳ್ಳಿಗಳವರನ್ನು ಅವರು ಇರುವ ಸ್ಥಳದಿಂದ ಬಿಟ್ಟು ಹೋಗಬೇಕೆಂದು ಹೇಳಿದ್ದಾರೆ. ಈ ಪ್ರದೇಶದಲ್ಲಿ ಇವರು ಕಾರ್ಖಾನೆಗಳನ್ನು ಕಟ್ಟಬೇಕು, ಮನೆಗಳನ್ನು ಕಟ್ಟಬೇಕು, ಹೊರಗಡೆಯಿಂದ ಬರತಕ್ಕವರಿಗೆ ಮನೆಗಳನ್ನು ಕಟ್ಟಬೇಕು, ಎಲ್ಲೋ ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಬೇಕು ಎಂದು ಉದ್ದೇಶಿಸಿ ಈ ಪ್ರದೇಶದಲ್ಲಿರುವ ಹಳ್ಳಿಗಳವರಿಗೆ ಎಲ್ಲಿಯಾದರೂ ಬೇರೆಕಡೆ ಹೋಗಿ ಎಂದು ನೋಟೀಸ್ ಕೊಟ್ಟಿದ್ದಾರೆ. ಇದು ಎಂಥ ನ್ಯಾಯ? ಎಷ್ಟೋ ವರ್ಷಗಳಿಂದ ಇದ್ದವರನ್ನು ಹೊರಟು ಹೋಗಿ ಎಂದು ಹೇಳುವುದು ಯಾವ ನ್ಯಾಯ? ಈ ರೀತಿ ಅವರನ್ನು ಎಲ್ಲಿಯಾದರೂ ಹೋಗಿ ಎಂದು ಹೇಳುವುದಕ್ಕೆ ಮೊದಲು ಅವರುಗಳಿಗೆ ಯಾವುದಾದರೂ ಒಂದು ಉದ್ಯೋಗವನ್ನು ಕೊಡುವುದು, ಅವರಿಂದ ಎಷ್ಟು ಭೂಮಿಯನ್ನು ತೆಗೆದುಕೊಂಡಿದ್ದಾರೋ ಅಷ್ಟನ್ನಾದರೂ ಇನ್ನೊಂದು ಕಡೆ ಕೊಡಿಸುವುದು, ಎಂಬ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳದೆ ಮತ್ತು ಆ ಬಗ್ಗೆ ಯೋಚನೆಮಾಡದೆ ಎಲ್ಲರೂ ಈ ಸ್ಥಳವನ್ನು ಬಿಟ್ಟು ಹೊರಟುಹೋಗಿ ಎಂದು ಹೇಳುವುದು ಮಾತ್ರ ಟ್ರಸ್ಟ್ ಬೋರ್ಡಿನವರಿಗೆ ತಿಳಿದಿರುವಹಾಗೆ ಕಾಣುತ್ತದೆ. ಅದಕ್ಕೋಸ್ಕರವಾಗಿ ಟ್ರಸ್ಟ್ ಬೋರ್ಡಿನವರಿಗೆ ಸರ್ಕಾರದವರು ಸರಿಯಾದ ಸೂಚನೆಯನ್ನು ಕೊಟ್ಟು ಈ ಸಂಸಾರಗಳವರಿಗೆ ಹಿಂಸೆ ಕೊಡಬಾರದು, ಅವರು ಅಲ್ಲಿಯೇ ಇರುವಹಾಗೆ ಮಾಡಿ ಅವರಿಗೆ ಅನುಕೂಲವಾದ ಏರ್ಪಾಡುಗಳನ್ನು ಮಾಡಿಕೊಡುವಂತೆ ಅಪ್ಪಣೆ ಮಾಡಬೇಕೆಂದು ಹೇಳುತ್ತೇನೆ.

ಈಗಿರತಕ್ಕ ಟ್ರಸ್ಟ್ ಬೋರ್ಡ್ ಸದಸ್ಯರಾಗಲಿ, ಛೇರ್‌ಮನ್ ಆಗಲಿ ಬಡತನದ ಜೀವನವನ್ನು ಕನಸಿನಲ್ಲಿಯೂ ಕಂಡವರಲ್ಲ. ಇವರಿಗೆ ಬಡತನವೆಂದರೆ ಏನೆಂಬುದೇ ಗೊತ್ತಿಲ್ಲ. ಇವರ ಮನೆಗಳಲ್ಲಿ, ಆಫೀಸುಗಳಲ್ಲಿ ಕೆಲಸಮಾಡತಕ್ಕ ಆಳುಗಳು ಬಡತನದಿಂದ ಹಾಗೆ ಕೆಲಸಮಾಡುತ್ತಾರೆ. ಇಂಥ ಆಳುಗಳನ್ನಾಗಲಿ ಅಥವಾ ಅವರಿಗೆ ಸಂಬಂಧಪಟ್ಟ ಬೇರೆ ವ್ಯಕ್ತಿಗಳನ್ನಾಗಲಿ ಸಮಾನತೆಯಿಂದ, ಪ್ರೀತಿಯಿಂದ ಕಂಡಂಥ ವ್ಯಕ್ತಿಗಳು ಒಬ್ಬರೂ ಇದರಲ್ಲಿಲ್ಲ. ಒಬ್ಬನು ದೊಡ್ಡ ಬಂಗಲೆಯಲ್ಲಿ ವಾಸಮಾಡಬಹುದು, ಐಶ್ವರ್ಯವಂತನಾಗಿರಬಹುದು. ಆದರೆ ಬಡವರನ್ನು ತಿರಸ್ಕಾರವಾಗಿ

ಕಾಣಬಾರದು, ಸಾಕಾದಷ್ಟು ಸಹಾನುಭೂತಿಯನ್ನು ತೋರಿಸಿ ಅವರನ್ನು ತನ್ನಷ್ಟೆ ಉತ್ತಮಸ್ಥಿತಿಗೆ ತರದೇ ಹೋದರೂ ತನ್ನಹಾಗೆಯೇ ಅವರೂ ಎಂದು ಅವರನ್ನು ನೋಡಬೇಕು. ಆದುದರಿಂದ ಈಗ ಟ್ರಸ್ಟ್ ಬೋರ್ಡ್ ಸಮಿತಿಯಲ್ಲಿರುವ ಸದಸ್ಯರನ್ನೂ, ಛೇರ್‌ಮನ್ನರನ್ನೂ ಮೊದಲು ತೆಗೆದುಹಾಕಿ ಬಡತನದಿಂದ ಬಂದಿರುವವರನ್ನೂ ಮತ್ತು lay-out ವಿಚಾರಗಳನ್ನೆಲ್ಲ ಸರಿಯಾಗಿ ಅರ್ಥಮಾಡಿಕೊಳ್ಳತಕ್ಕವರನ್ನೂ ಇದರ ಸದಸ್ಯ ಸ್ಥಾನಕ್ಕೆ ಮತ್ತು ಛೇರ್‌ಮನ್ ಸ್ಥಾನಕ್ಕೆ ನೇಮಿಸಬೇಕು. ಚಿಕ್ಕಂದಿನಿಂದಲೂ ಸಮಾಜ ಸೇವೆಯನ್ನು ಮಾಡಿರುವವರನ್ನೂ, ಬಡವರ ಕಷ್ಟಸುಖಗಳನ್ನು ತಿಳಿದಿರುವವರನ್ನೂ ಈ ಸ್ಥಾನಗಳಿಗೆ ನೇಮಿಸಿ ಬಡವರಿಗೆ ಅನುಕೂಲ ಮಾಡಿಕೊಟ್ಟು ಶ್ರೀಮಾನ್ ನಾಯ್ಡು ಅವರು ಹೇಳಿದಂಥ ಸ್ಥಳಗಳಲ್ಲಿಯೂ ನಾನು ಹೇಳಿದಂಥ ಸ್ಥಳಗಳಲ್ಲಿಯೂ lay-outs ಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಕಾರ್ಪೊರೇಷನ್ ಪ್ರದೇಶದಲ್ಲಿ ಇರತಕ್ಕ ಸೈಟುಗಳ lay-out ಆಗದೆ ಕರ್ತವ್ಯಲೋಪ ಮಾಡಿದ್ದರಿಂದ ಆ ಅಧಿಕಾರಿಗಳನ್ನೇ ಕೆಲಸದಿಂದ ತೆಗೆದುಹಾಕಬೇಕೆಂದು ಹೇಳುತ್ತೀರಾ ?

ಶ್ರೀ ಆರ್. ಮುನಿಸ್ವಾಮಯ್ಯ.—ಕಾರ್ಪೊರೇಷನ್ನಿಗೆ ಸೇರಿರತಕ್ಕ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿರತಕ್ಕವರ ಮೇಲೆ ಟ್ರಸ್ಟ್ ಬೋರ್ಡಿನವರು ನೋಟೀಸ್ ಜಾರಿಮಾಡಿದ್ದಾರೆ. ಟ್ರಸ್ಟ್ ಬೋರ್ಡಿನವರು ತಮ್ಮ ಭೂಮಿ ಯಾವುದು, ರೆವಿನ್ಯೂ ಭೂಮಿ ಯಾವುದು ಎಂದು ತಿಳಿದುಕೊಳ್ಳಲಿಲ್ಲ. ತಮ್ಮ ಆವರಣದೊಳಗೆ ಎಷ್ಟು ಭೂಮಿ ಸೇರುತ್ತದೆ ಎಂದು . . . .

ಉಪಾಧ್ಯಕ್ಷರು.—ಕಾರ್ಪೊರೇಷನ್ ಪ್ರದೇಶದಲ್ಲಿ ಕಾರ್ಪೊರೇಷನ್ನಿಗೆ ಸೇರಿರತಕ್ಕದ್ದು ಮತ್ತು ಅದಕ್ಕೆ ಸೇರದೆ ಇರುವ ರೆವೆನ್ಯೂ ಜಮೀನು ಇದೆ. ಮತ್ತು ಕಾರ್ಪೊರೇಷನ್ ಹೊರಗೆ ಗ್ರಾಮಾಂತರಗಳಿಗೆ ಸೇರಿ ಇನ್ನೂ ಕಾರ್ಪೊರೇಷನ್ ಆಡಳಿತಕ್ಕೆ ಬಾರದೇ ಇರತಕ್ಕ ಜಮೀನುಗಳಿವೆ. ಬೆಂಗಳೂರು ಎಲ್ಲೆಯಲ್ಲಿ ಕಟ್ಟಿರತಕ್ಕ ಮನೆಗಳಿವೆ. ತಾವು ಈ ಮನೆಗಳ ವಿಷಯವಾಗಿ ಹೇಳುತ್ತಿದ್ದೀರೋ ಅಥವಾ ಕಾರ್ಪೊರೇಷನ್ ಪ್ರದೇಶದಲ್ಲಿರುವ ರೆವೆನ್ಯೂ ಜಮೀನಿನಲ್ಲಿ ಬಡಜನರು ಮನೆ ಕಟ್ಟಿರುವುದರ lay-out ಆಗಬೇಕು ಎಂದು ಹೇಳುತ್ತಿದ್ದೀರೋ ?

ಶ್ರೀ ಆರ್. ಮುನಿಸ್ವಾಮಯ್ಯ.—ಕಾರ್ಪೊರೇಷನ್ ಪ್ರದೇಶದಲ್ಲಿರತಕ್ಕ ಸ್ಥಳಗಳಲ್ಲೂ ಸರ್ಕಾರಿ ಪ್ರದೇಶದಲ್ಲಿರತಕ್ಕ ರೆವಿನ್ಯೂ ಲ್ಯಾಂಡ್‌ನಲ್ಲೂ ಮತ್ತು ಕಾರ್ಪೊರೇಷನ್ ಸುತ್ತಮುತ್ತಲೂ ಇರತಕ್ಕ ಪ್ರದೇಶಗಳಲ್ಲೂ ಇರತಕ್ಕ ಪರಿಸ್ಥಿತಿಯನ್ನು ತಿಳಿಸುತ್ತಾ ಇದ್ದೇನೆ.

ಉಪಾಧ್ಯಕ್ಷರು.—ಟ್ರಸ್ಟ್ ಬೋರ್ಡಿಗೆ ಮೊದಲು ಸೇರದೇ ಇರತಕ್ಕ ಪ್ರದೇಶದಲ್ಲಿ ಬಡವರು ಮನೆಗಳನ್ನು ಕಟ್ಟಿದ್ದಾರೆ. ಅವರೂ ಕೂಡ ಮನೆಯನ್ನು ಬಿಟ್ಟುಬಿಡಬೇಕೆಂದು ಹೇಳಿ ಟ್ರಸ್ಟ್‌ಬೋರ್ಡಿನವರು ನೋಟೀಸ್ ಕೊಟ್ಟು ತೊಂದರೆಮಾಡುತ್ತಾ ಇದ್ದಾರೆ ಎಂದು ತಮ್ಮ ಅಪಾದನೆಯೇ ?

ಶ್ರೀ ಆರ್. ಮುನಿಸ್ವಾಮಯ್ಯ.—ಹೌದು, ಕೆಲವು ಕಡೆ ಟ್ರಸ್ಟ್‌ಬೋರ್ಡ್‌ನವರು ನೋಟೀಸ್ ಕೊಟ್ಟು ತೊಂದರೆಮಾಡುತ್ತಾ ಇದ್ದಾರೆ. ಇನ್ನೊಂದು ಕಡೆ ಕಾರ್ಪೊರೇಷನ್‌ನವರು ತೊಂದರೆಮಾಡುತ್ತಾಇದ್ದಾರೆ. ಎರಡುಕಡೆಯಿಂದಲೂ ತೊಂದರೆ ಬರುತ್ತಾ ಇದೆ. ಅವರ ಆಡಳಿತಕ್ಕೆ ಯಾವ ಪ್ರದೇಶ ಸೇರಿದೆ ಎಂದು ಅವರಿಗೆ ಖಚಿತವಾಗಿ ಗೊತ್ತಾದ ಹಾಗೆ ಕಾಣಲಿಲ್ಲ. ಅವರು ಕೊಟ್ಟಿರತಕ್ಕ ನೋಟೀಸ್‌ನಲ್ಲಿ ಅವರು ಕೊಟ್ಟಿರುವ ಕಾರಣಗಳನ್ನು ನೋಡಿದ್ದೇನೆ. ಇದೇ ರೀತಿ ಮೂರು ವರ್ಷಕ್ಕೆ ಹಿಂದೆ ಮುನಿಸಿಪಾಲಿಟಿಯವರು ನೋಟೀಸ್ ಕೊಟ್ಟಿದ್ದರು. ಅವರ ಕೈಕಾಲು ಹಿಡಿದುಕೊಂಡು ಇದ್ದಹಾಗೆ ಇರುವಂತೆ ಮಾಡಿಕೊಂಡರು. ಹೀಗೆ ಒಂದು ತರಹ ದ್ವಿಮುಖ ಸರ್ಕಾರ ನಡೆಯುತ್ತಿರುವ ಹಾಗೆ ಕಾಣುತ್ತದೆ. ಕಾರ್ಪೊರೇಷನ್ ಬಿಟ್ಟು ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನಲ್ಲಿ ಸರ್ಕಾರಕ್ಕೆ ಸೇರಿದ ರೆವಿನ್ಯೂ ಲ್ಯಾಂಡ್‌ನಲ್ಲಿ ಅನೇಕರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮತ್ತು ಕನ್‌ವರ್ಷನ್ ಫೈನ್ ಕೊಡುವುದಕ್ಕೆ ವ್ಯವಹಾರ-ನಡೆಸುತ್ತಾ ಇದ್ದಾರೆ. ಹೀಗಿರುವ ಕಾಲದಲ್ಲಿ ಆ ಭೂಮಿಯನ್ನು ಬಿಟ್ಟುಬಿಡಬೇಕೆಂದು ಟ್ರಸ್ಟ್‌ಬೋರ್ಡಿನವರು ನೋಟೀಸ್ ಕೊಟ್ಟು ಅವರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿರುವುದರಿಂದ, ಅವರು ಏನು ಮಾಡಬೇಕೆಂಬುದು ತಿಳಿಯದೇ ಬಹಳವಾಗಿ ಪೇಚಾಡುತ್ತಾ ಇದ್ದಾರೆ. ಅದಕ್ಕೇ ಮಾನ್ಯ ಮಂತ್ರಿಗಳು ಇದನ್ನು ಬಹಳ ತೀವ್ರವಾಗಿ ಮತ್ತು ಶೀಘ್ರವಾಗಿ ಆಲೋಚನೆಮಾಡಿ ಪರಿಹಾರ ಮಾಡುವುದಕ್ಕೆ ಒಂದು ಮಾರ್ಗ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ನಾಯ್ಡು ಅವರು ಬಡವರ ವಿಚಾರದಲ್ಲಿ, ಕೂಲಿ ಮಾಡತಕ್ಕವರ ಮತ್ತು ಕಡಿಮೆ ಸಂಬಳ ಬರತಕ್ಕವರ ವಿಚಾರದಲ್ಲಿ ಯಾವಾಗಲೂ ಸಹ ಬಹಳ ಸಹಾನುಭೂತಿಯಿಂದ ಇದ್ದಾರೆ. ಅದರಲ್ಲೂ ದಲಿತವರ್ಗದವರಿಗೆ ಅವರು ಬಹಳ ಪ್ರಿಯರಾಗಿದ್ದಾರೆ. ಅವರ ವಿಚಾರದಲ್ಲಿ ಯಾವಾಗಲೂ ಈ ಸಭೆಯ ಮುಂದೆ ಅನೇಕ ಸಂದರ್ಭಗಳಲ್ಲಿ ವಾದಮಾಡಿದ್ದಾರೆ. ಅವರಿಗೆ ಸಾಕಾದಷ್ಟು ಸೌಕರ್ಯ ಕಲ್ಪಿಸಿಕೊಡಬೇಕೆಂದು ಹೇಳಿ ಈ ದಿನ ಈ ಒಂದು ಠರಾವನ್ನು ಇಲ್ಲಿ ಮಂಡಿಸಿದ್ದಾರೆ. ಕಾರ್ಪೊರೇಷನ್ನಿಗೆ ಸೇರಿದ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸೇರಿದ ಜಮೀನುಗಳಲ್ಲಿ ವಾಸಮಾಡತಕ್ಕ ಜನರು ಹಕ್ಕು ಇಲ್ಲದೆ ಕಟ್ಟಿಕೊಂಡಿರತಕ್ಕ (Unauthorised constructions) ಮನೆಗಳಿಗೆ ಹಕ್ಕನ್ನುಂಟುಮಾಡಿ ಕೊಟ್ಟು ಅವರಿಗೆ lay-outs ಮುಂತಾದವನ್ನೆಲ್ಲಾ ಮುಫತ್ತಾಗಿ ಮಾಡಿಕೊಡಿ ಎಂದು ಹೇಳುತ್ತಾ ಇದ್ದಾರೆ.

ಶ್ರೀ ವಿ. ಆರ್. ನಾಯ್ಡು.—ತೀರ ಶಕ್ತಿ ಇಲ್ಲದೇ ಇರುವವರಿಗೆ ಸಾಧ್ಯವಾದರೆ ಮುಫತ್ತಾಗಿ ಮಾಡಿಕೊಡಿ. ಸ್ವಲ್ಪ ಅನುಕೂಲಸ್ಥರಿಗೆ ಸ್ವಲ್ಪ ಕನ್‌ಸೆಷನ್ ಕೊಡಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ಹೀಗೆ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಇದರಲ್ಲಿ ಸರ್ಕಾರಕ್ಕೂ ಅವರಿಗೂ ಏನೂ ವ್ಯತ್ಯಾಸವಿಲ್ಲ. ಅಂಥ ಬಡಜನರಿಗೆ ಸಾಕಾದಷ್ಟು ಸೌಕರ್ಯ ಕಲ್ಪಿಸಿಕೊಡಬೇಕೆಂಬ ಸದುದ್ದೇಶ ಸರ್ಕಾರದವರಿಗೆ ಇದೆ. ಈ ಸ್ಲಂ ಎಂದು ಏನುಹೇಳುತ್ತಾರೋ ಇದು ದೊಡ್ಡಸಮಸ್ಯೆ. ಬೆಂಗಳೂರು ನಗರದಲ್ಲಿ ಮತ್ತು ನಗರದ ಸುತ್ತಮುತ್ತಲೂ ಈ unauthorised construction ಒಂದು ದೊಡ್ಡ ಸಮಸ್ಯೆಯಾಗಿದೆ ; authorised construction ಏನಿದೆ ಅದು ಹೆಚ್ಚುಕಮ್ಮಿ 1/9 ಭಾಗ ಅಥವಾ 1/10 ಭಾಗ ಆಗುತ್ತಾ ಇದೆ. ಅವರು ಅಪ್ಪಣೆ ಕೊಡಿಸಿದ ಹಾಗೆ 20 ಸಾವಿರ ಮನೆಗಳಿಗೆ ಮೇಲ್ಪಟ್ಟು ಈ ರೀತಿ unauthorised constructions ಆಗಿವೆ ಎಂದು ಹೇಳಿದರು. ಇದು ಒಂದು ದೊಡ್ಡ ತತ್ತ್ವದ ವಿಚಾರ. ಅವರು ಬಂದು ಕಟ್ಟಿಕೊಂಡಿದ್ದರೆ, ಅವರಿಗೆ ಸೌಕರ್ಯ ಕಲ್ಪಿಸಿಕೊಡಬೇಕು, ಆ ಸ್ಥಳವನ್ನು ಬಿಡಿಸಬಾರದು. ಕನಿಕರ, ಕರುಣೆ ಇಡುವುದು ಒಂದು ದೃಷ್ಟಿ. ಮನುಷ್ಯನಿಗೆ ಸಾಮಾನ್ಯವಾಗಿ ಬಡತನ

(ಶ್ರೀ ಆರ್. ಚೆನ್ನಿಗರಾಮಯ್ಯ.)

ದಲ್ಲಿರುವವರು ಆ ಮನೆಗಳನ್ನು ಕಟ್ಟಿಕೊಂಡಿರುವುದನ್ನು ನೋಡಿದರೆ ಕರುಣೆ, ಕನಿಕರ ಬರುತ್ತದೆ. ಆದರೆ ಯಾವದೋ ಜಮೀನಿನಲ್ಲಿ. ಯಾರದೋ ಸ್ವತ್ತಿನಲ್ಲಿ ಬಡವರು ಎಂದು ಹೇಳಿ ಕಟ್ಟಿಕೊಂಡುಬಿಟ್ಟರೆ, ಅವರನ್ನು ಬಿಟ್ಟುಕೊಡು ಎಂದು ಕೇಳಬಾರದು ಎಂದು ಕಾನೂನು ಇದೆಯೇ? Unauthorised constructions ಹಾಕಿಸಿರುವವರ ಬಡವರಾಗಲಿ, ಯಾರಾದರೂ ಆಗಲಿ ಆ ರೀತಿ ಕೇಳಬಾರದೆಂದು ಬಂಧಿಸುತ್ತದೆಯೇ? Unauthorised construction ಯಾರು ಎಲ್ಲಾದರೂ ಕಟ್ಟಿಕೊಳ್ಳಬಹುದೆಂದು ಹೊಸದಾಗಿ ಕಾನೂನು ಮಾಡಬೇಕೇ ಎನ್ನತಕ್ಕ ಪ್ರಶ್ನೆ ಬರುತ್ತದೆ.

ಶ್ರೀ ಎ. ಆರ್. ನಾಯ್ಡು.—ಯಾರದೋ ಜಮೀನು ಎಂದು ಅಪ್ಪಣೆ ಕೊಡಿಸಿದಿರಿ; ಕ್ಷಮಿಸಬೇಕು. ಯಾರದೋ ಜಮೀನು ಅಲ್ಲ. ಸರ್ಕಾರದವರ ವಶದಲ್ಲಿರತಕ್ಕ ಜಮೀನಿನಲ್ಲಿ ಕಟ್ಟಿಕೊಂಡಿರುವವರಿಗೆ ಸಹಾಯಮಾಡಲು ಈಗ ತಮಗೆ ಒಂದು chance ಇದೆ. ಹಾಗೆ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾರದೋ ಜಮೀನು ಎಂದರೆ ಸರ್ಕಾರದ ಜಮೀನೂ ಸೇರಿಕೊಳ್ಳುತ್ತದೆ. ಅದೂಕೂಡ ಸರ್ಕಾರದ ಒಂದು ಆಸ್ತಿ, ದೇಶದ ಸ್ವತ್ತನ್ನು ನೋಡಿಕೊಳ್ಳತಕ್ಕ ಒಂದು ಜವಾಬ್ದಾರಿ ಅವರ ಮೇಲಿದೆ. ದೊಡ್ಡ ಪಟ್ಟಣಗಳಲ್ಲಿ, ಬೆಂಗಳೂರಿನಲ್ಲೂ ಸಹ ಈ ಒಂದು ದೊಡ್ಡ ಸಮಸ್ಯೆ ಇದೆ. Unauthorised construction ಮಾಡಿಕೊಂಡು ಆ ಸ್ಥಳವನ್ನು ಬಿಟ್ಟುಹೋಗಿ, ಬೇರೆಕಡೆ ಸ್ಥಳಕೊಡುತ್ತೇವೆ ಎಂದು ಹೇಳಿದರೂ ಸಹ ಹೋಗುವುದಿಲ್ಲ, ಅಲ್ಲೇ ಇರುತ್ತಾರೆ. ಜಯನಗರದಲ್ಲಿ ಬಹಳ ಕಮ್ಮಿದರದಲ್ಲಿ upset price ಗೆ ಸೈಟ್ಸ್ ವಿಂಗಡಿಸಿ ಸ್ಲಮ್‌ನಿಂದ ಹೊರಗೆ ಹೋಗತಕ್ಕವರಿಗೆ ಕೊಡುತ್ತೇವೆ ಎಂದು ಹೇಳಿದರೂ ಅನೇಕರು ಅಲ್ಲಿಗೆ ಹೋಗುವುದಿಲ್ಲ. ಇಲ್ಲಿ ಬಂದು ಕಟ್ಟಿಕೊಂಡಿದ್ದೇವೆ ಇಲ್ಲೇ ವಾಸಕ್ಕೆ ಅನುಕೂಲಮಾಡಿಕೊಡಿ ಎಂದು ಹೇಳುತ್ತಾರೆ. ಕಾರ್ಪೊರೇಷನ್ ಜಮೀನು ಎಂದು ಶ್ರೀ ನಾಯ್ಡುರವರು ಹೇಳಿದರು. ಕಾರ್ಪೊರೇಷನ್ ಜಮೀನಿನಲ್ಲಿ unauthorised construction ಯಾವುದೂ ಆಗಿಲ್ಲ. Unauthorised construction ಎಲ್ಲಿದ್ದರೂ ರೆವಿನ್ಯೂ ಲ್ಯಾಂಡ್‌ನಲ್ಲಿ ಆಗಿರುತ್ತದೆ, ಇಲ್ಲದೇ ಇದ್ದರೆ ಪ್ರೈವೇಟ್ ಲ್ಯಾಂಡ್‌ನಲ್ಲಿ ಆಗಿರುತ್ತದೆ. ಪ್ರೈವೇಟ್ ಲ್ಯಾಂಡ್‌ನಲ್ಲಿ ಇದ್ದರೆ ಕನ್ವರ್ಷನ್ ಫೈನ್ ಕೊಟ್ಟಿರುವುದಿಲ್ಲ. ಹೀಗೆಲ್ಲಾ ಆಗಿ ಸಾವಿರಾರು ಮನೆಗಳನ್ನು ಕಟ್ಟಿರುತ್ತಾರೆ, ಮಾನ್ಯ ಸದಸ್ಯರು ಸ್ವತಂತ್ರ ಪಾಳ್ಯದ ಹೆಸರು ಹೇಳಿದರು. ಅದು ಒಂದು ದೊಡ್ಡ ಕಥೆ. ಶ್ರೀಮಾನ್ ನಾಯ್ಡು ಅವರೇ ಆ ಬಡ ನೌಕರರಿಗೆಲ್ಲಾ ಸಹಾಯಮಾಡಿ ತಮ್ಮ ಸಹಾನುಭೂತಿಯನ್ನು ತೋರಿಸಿ, ಯಾರದೋ ಜಮೀನು ಕಟ್ಟಿಕೊಳ್ಳಿ ಎಂದು ಮನೆಗಳನ್ನು ಕಟ್ಟಲು ನೆರವಾದರು. ಆ ಜಮೀನು ರಾಜಾಮಿಲ್‌ನವರದು. ಅಲ್ಲಿ ನೂರಾರುಮನೆಗಳಾಗಿವೆ. ರಾಜಾಮಿಲ್ ನವರು ಆ ಜಮೀನನ್ನು ಪೊಸೆಷನ್‌ಗೆ ತೆಗೆದುಕೊಳ್ಳಬೇಕೆಂದು ಪ್ರಯತ್ನ ನಡೆಸಿ ತಕರಾರು ನಡೆಯುತ್ತಾ ಬಂದಿದೆ. ನಮ್ಮನ್ನು ಕರೆದುಕೊಂಡುಹೋಗಿ ಅಲ್ಲಿ ಶ್ರೀ ನಾಯ್ಡು ಅವರು ಬಹಳ ಚೆನ್ನಾಗಿ ಮರ್ಯಾದೆ ಮಾಡಿದರು. ಹೂವಿನಹಾರ ಹಾಕಿಸಿದರು. ಏನಪ್ಪ ಸ್ವತಂತ್ರ ಪಾಳ್ಯ ಎಂದರೆ, ಅದು ಒಂದು ದೊಡ್ಡ ಅತಂತ್ರ ಪಾಳ್ಯ. ಅಲ್ಲಿ ಕಟ್ಟಿಕೊಳ್ಳಲಿಕ್ಕೆ ಅವರಿಗೆ ಹಕ್ಕು ಇಲ್ಲ. ಇಂಥವು ಕಾರ್ಪೊರೇಷನ್ ಏರಿಯಾದಲ್ಲಿ ಅನೇಕವಿವೆ. ಈ ಒಂದು ದೊಡ್ಡ ಸಮಸ್ಯೆಯನ್ನು ಪರಿಹಾರ ಮಾಡಬೇಕಾಗಿದೆ. ಇದು ಒಂದು ತತ್ವದ ವಿಚಾರ. ಲಕ್ಷಾಂತರ ರೂಪಾಯಿಗಳನ್ನು ಇದಕ್ಕೆ ಪ್ರತ್ಯೇಕವಾಗಿ ಇಡಬೇಕಾಗುತ್ತದೆ. ಈ ತತ್ವವನ್ನು ನಾವು ಅನುಸರಿಸುವುದಾದರೆ ಇಡೀ ಮೈಸೂರು ದೇಶಕ್ಕೆ ಕೋಟ್ಯಾಂತರ ರೂಪಾಯಿಗಳು ಬೇಕಾಗಬಹುದು. ಕಾರ್ಪೊರೇಷನ್ ಏರಿಯಾದಲ್ಲಿ ಶ್ರೀಮಾನ್ ನಾಯ್ಡು ಅವರಿಗೆ ದಿನಂಪ್ರತಿ ಈ ಬಡಜನರ ಕಷ್ಟ ಕಾಣುತ್ತಿರಬಹುದು. ಇದೇರೀತಿ ದೇಶದ ಪ್ರತಿಯೊಂದು ಹಳ್ಳಿಯಲ್ಲೂ ಪರಿಸ್ಥಿತಿ ಇದೆ. ಒಂದೊಂದು ಪ್ರದೇಶದಲ್ಲೂ ಸರಿಯಾಗಿ ಸೈಟುಗಳನ್ನು ವಿಂಗಡಿಸಬೇಕು, ಲೇಔಟ್ ಮಾಡಬೇಕು, ಕಾನೂನು ಬದ್ಧವಾಗಿ ಮನೆ ಕಟ್ಟಬೇಕು. ಬಡವರು, ಬಲ್ಲಿದರು ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಹೆಚ್ಚು ಪ್ರಜಾಸಂಖ್ಯೆ ಇರತಕ್ಕ ಈ ಪ್ರದೇಶದಲ್ಲಿ ಏನು ಮಾಡುತ್ತಾರೆಂದರೆ, ಯಾವುದೋ ಊರಿನಿಂದ ಜನ ಬರುತ್ತಾರೆ, ಖಾಲಿ ಜಾಗದಲ್ಲಿ ಗುಡಿಸಲು ಕಟ್ಟಿಕೊಳ್ಳುತ್ತಾರೆ. ಕೆಲವು ವರ್ಷಗಳಾದ ಮೇಲೆ, ಬಹಳ ವರ್ಷಗಳಿಂದ ಇದ್ದೇನೆ, ಇಲ್ಲೇ ನಮಗೆ ಮನೆ ಕಟ್ಟಿಕೊಳ್ಳಲು ಅವಕಾಶಮಾಡಿಕೊಡಿ ಎಂದು ಪ್ರಾರಂಭಿಸುತ್ತಾರೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ, ಒಂದು ಕಮಿಟಿ ಮಾಡಬೇಕೆಂದು ಹೇಳಿದರು. ಅದು ಯಾವುದೋ ನನಗೆ ಗೊತ್ತಿಲ್ಲ, ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀಮಾನ್ ಮುನಿಸ್ವಾಮಪ್ಪ ಅವರು ಟ್ರಸ್ಟ್ ಬೋರ್ಡಿನವರು ನಿಷ್ಕರುಣಿಗಳು, ನಿರ್ದಾಕ್ಷಿಣ್ಯವಾಗಿ ಜನರನ್ನು ಹೊರಡಿಸುತ್ತಾರೆ ಎಂದು ಹೇಳಿದರು. ಸರ್ಕಾರದ ಅಧಿಕಾರಿಗಳು ಸರ್ಕಾರದ ಆಜ್ಞೆಯ ಪ್ರಕಾರ ಕೆಲಸ ಮಾಡತಕ್ಕವರು, ಅವರ ಮೇಲೆ ದೂಷಣೆಮಾಡಿ ಪ್ರಯೋಜನವಿಲ್ಲ. ಇಲ್ಲಿ ಈ ಸಭಿಕರೂ, ಸರ್ಕಾರದವರೂ ಯಾವ ತೀರ್ಮಾನವನ್ನು ಮಾಡುತ್ತಾರೋ ಅದನ್ನು ಪರಿಪಾಲನೆಮಾಡತಕ್ಕದ್ದು ಸರ್ಕಾರಿ ಅಧಿಕಾರಿಗಳ ಕರ್ತವ್ಯ. ಟ್ರಸ್ಟ್ ಬೋರ್ಡಿನವರು ಸೆಲ್ಫ್ ಸಪೋರ್ಟಿಂಗ್ ಬೇಸಿಸ್ ಮೇಲೆ ಸ್ಕೀಂ ಮಾಡಿ ಲೇಔಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ, ಅದರ ಪ್ರಕಾರ ಅಧಿಕಾರಿಗಳು ಕರ್ತವ್ಯ ಪರಿಪಾಲನೆ ಮಾಡಬೇಕಾಗುತ್ತದೆ. Unauthorised construction ಆದರೆ ಮನೆ ಕಟ್ಟುವುದಕ್ಕೆ ಹಕ್ಕಿಲ್ಲ ಎಂದು ನೋಟೀಸ್ ಕೊಡಬೇಕಾಗುತ್ತದೆ. ಕಾನೂನು ಬದ್ಧವಾಗಿ ನಡೆದುಕೊಂಡರೆ ಅದು ತಪ್ಪೆ? ನಿಷ್ಕರುಣಿಗಳು, ಕರುಣೆ ಇಲ್ಲ ಎಂದು ದೂಷಣೆ ಮಾಡಿದರೆ ಏನು ಪ್ರಯೋಜನವಾಗುತ್ತದೆ?

ಶ್ರೀ ಆರ್. ಮುನಿಸ್ವಾಮಯ್ಯ.—On a point of information, Sir. ಬೋರ್ಡಿನಲ್ಲಿ ಅಧಿಕಾರಿಗಳು ಮಾತ್ರ ಇಲ್ಲ, ನಾನ್-ಅಫಿಷಿಯಲ್ ಮೆಂಬರುಗಳೂ ಇದ್ದಾರೆ. ಇವರೆಲ್ಲ ಸೇರಿ ಒಂದು ನಿರ್ಣಯ ಮಾಡಿ ಅಧಿಕಾರಿಗಳ ಮೂಲಕ ಅದರಂತೆ ನಡೆಸುತ್ತಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ನನಗೂ ಗೊತ್ತಿದೆ. ಅಧಿಕಾರಿಗಳಲ್ಲ, ಸದಸ್ಯರೇ ಹೀಗೆ ಮಾಡುತ್ತಿರುವುದು. ಅವರನ್ನು ಬದಲಾಯಿಸಿ ಆ ಜಾಗದಲ್ಲಿ ಶ್ರೀ ಮುನಿಸ್ವಾಮಯ್ಯನವರನ್ನು ಕೊಡಿಸಿದರೂ ಅವರೂ ಸಹ ಸರಿಮಾಡುವುದಕ್ಕಾಗುವುದಿಲ್ಲ. ಈಗಿರುವ ಕಾನೂನು ಪ್ರಕಾರ ಸೆಲ್ಫ್-ಸಪೋರ್ಟಿಂಗ್ ಬೇಸಿಸ್ ಮೇಲೆ ಟ್ರಸ್ಟ್‌ಬೋರ್ಡ್ ಆಡಳಿತ ನಡೆಸಬೇಕೆಂದು ತೀರ್ಮಾನಮಾಡಿದಮೇಲೆ ಶ್ರೀ ಮುನಿಸ್ವಾಮಯ್ಯನವರೇ ಅಲ್ಲಿಹೋಗಿ ಕುಳಿತರೂ ನಾಲ್ಕಾಣೆ ಕಡಮೆ ಮಾಡಬಹುದು, ಬೇರೆಯವರಿಗೆ ಕೊಡಬಹುದು ಎಂದು ಹೇಳಬಹುದೇ ಹೊರತು ತತ್ತ್ವ ಬದ

ಲಾಯಿಸುವುದಕ್ಕೆ ಸಾಧ್ಯವಿಲ್ಲ. ಒಂದು ರೂಪಾಯಿ ಇರುವುದನ್ನು ಕಡಮೆಮಾಡಬಹುದು ಅಥವಾ ಜಾಸ್ತಿ ಮಾಡಬಹುದು. ಆದ್ದರಿಂದ ಸದಸ್ಯರನ್ನಾಗಲಿ ಟ್ರಸ್ಟ್ ಬೋರ್ಡುಗಳಲ್ಲಿರುವ ಅಧಿಕಾರಿಗಳನ್ನಾಗಲಿ ಅಥವಾ ಕಾರ್ಪೊರೇಷನ್ ಅಧಿಕಾರಿಗಳನ್ನಾಗಲಿ ದೂಷಣೆ ಮಾಡುವುದರಿಂದ ಬಡವರಿಗೆ ಅನುಕೂಲವಾಗುವುದಿಲ್ಲ. ಇದೊಂದು ದೊಡ್ಡ ತತ್ವ. ಈ ತತ್ವ ಬದಲಾಯಿಸಲು ಕೋಟ್ಯಾಂತರ ರೂಪಾಯಿ ಬೇಕು. ಈಗ ಕೇಂದ್ರ ಸರ್ಕಾರದವರು ಸ್ಲಮ್ ಕ್ಲೀಯರೆನ್ಸ್‌ಗೆ ಒಂದು ಯೋಜನೆ ತಯಾರಿಸಿದ್ದಾರೆ. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗಬೇಕಾಗಿದೆ. ಇದಕ್ಕಾಗಿ ಕಾರ್ಪೊರೇಷನ್, ಟೌನ್ ಮುನಿಸಿಪಾಲಿಟಿ, ಪಂಚಾಯಿತಿ ಇವುಗಳಿಗೆ ಎಲ್ಲಾ ಕಡೆಗಳಲ್ಲೂ ಕೇಂದ್ರ ಸರ್ಕಾರದ ಗ್ರ್ಯಾಂಟು ಕೊಡುವುದಕ್ಕೆ ಒಂದು ಯೋಜನೆಯಿದೆ. ನಮ್ಮ ದೇಶಕ್ಕೂ ಸಾಕಷ್ಟು ಸಹಾಯಮಾಡಬೇಕೆಂದು ಕೇಳಿದ್ದೇವೆ, ಕೇಂದ್ರ ಸರ್ಕಾರದವರು ಮಾಡುತ್ತಾರೆ. ಸಹಾಯ ದೊರೆತಮೇಲೆ ಕೆಲವು ಸ್ಲಂಪ್ರದೇಶಗಳನ್ನು ಉತ್ತಮಪಡಿಸಿ ಕಡಮೆ ದರಗಳಲ್ಲಿ ಸೈಟುಗಳನ್ನು ಮಾಡಿಕೊಡಬೇಕು, ಡ್ರೈನೇಜ್ ವಗೈರೆ ವಿಂಗಡಿಸಿ ಚೊಕ್ಕಟಮಾಡಬೇಕು ಎಂದು ಪ್ಲಾನ್‌ಮಾಡಿದೆ. ಈ ರೀತಿ ಮಾಡುವಾಗ ಒಂದೇ ದೃಷ್ಟಿಯಿಂದ ಇದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುವುದು ಬಹಳ ಕಷ್ಟವಾದ ಸಮಸ್ಯೆ. ಮಾನ್ಯ ಸದಸ್ಯರು ಹೇಳುವುದರಲ್ಲಿ ಖಂಡಿತ ಸಂಪೂರ್ಣ ಸಹಾನುಭೂತಿಯಿದೆ. ಅವರಿಗೆ ಪರಿಹಾರ ನೀಡಬೇಕು. ಆದರೆ ಅದು ದೊಡ್ಡ ಸಮಸ್ಯೆ. ರೆವಿನ್ಯೂ ಲ್ಯಾಂಡ್, ಪ್ರೈವೇಟ್ ಲ್ಯಾಂಡ್ ಇವೆಲ್ಲಾ ಇರುತ್ತವೆ. ಪ್ರೈವೇಟ್ ಲ್ಯಾಂಡ್ ಕಾರ್ಪೊರೇಷನ್ ಅಕ್ವೈರ್ ಮಾಡಿ ಸೈಟು ವಿಂಗಡಿಸಿದರೆ ಬೆಲೆ ಎಷ್ಟಾಗುತ್ತದೆಂಬುದು ಶ್ರೀ ನಾಯ್ಡು ಅವರಿಗೂ ಗೊತ್ತಿದೆ. ಬೇರೆ ಕಡೆ 500 ರೂಪಾಯಿಗಳ ಬೆಲೆಯಿದ್ದರೆ ಖುಷ್ಕಿ ಜಮೀನಿಗೆ ಐದುಸಾವಿರ ರೂಪಾಯಿ, ಕೆಲವು ಸಂದರ್ಭಗಳಲ್ಲಿ ಹತ್ತು ಸಾವಿರ ರೂಪಾಯಿ ಕೂಡ ಆಗುತ್ತದೆ. ಅದರ ಮೇಲೆ ಕನ್‌ವರ್ಷನ್ ಫೈನ್, ಲೇಔಟ್ ಛಾರ್ಜಸ್ ಲಕ್ಷಾಂತರ ರೂಪಾಯಿಗಳಾಗುತ್ತವೆ ; ಹೀಗೆ ಬೆಲೆ ಜಾಸ್ತಿಯಾಗುತ್ತದೆ. ಸಿಟಿಗಳಲ್ಲಿ ರಿಯಾಯಿತಿ ದರದಲ್ಲಿ ಬಡವರಿಗೆ ಕೊಡುವುದೇನೋ ನ್ಯಾಯವಾಗಿ ಕಾಣುತ್ತದೆ. ಅದನ್ನು ಪರ್ಯಾಲೋಚಿಸಬೇಕಾಗುತ್ತದೆ. ಇಂಥ ಸಮಸ್ಯೆಯನ್ನು ಯಾವಾಗಲಾದರೂ ಪರಿಹಾರ ಮಾಡಬೇಕು. ಆದಷ್ಟು ಬೇಗನೆ ಪರಿಹಾರಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರದವರು ಸಹಾಯಮಾಡುತ್ತಾರೆ. ಈಗ ತಂದಿರುವ ಠರಾವನ್ನು ಈಗಿರುವ ರೀತಿಯಲ್ಲಿ ಒಪ್ಪಿಕೊಳ್ಳುವುದು ಬಹಳ ಕಷ್ಟ, ಒಪ್ಪಿದರೆ ಕೋಟ್ಯಾಂತರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕಾಗುತ್ತದೆ. ಈ ದಿನ ಅಂಗೀಕಾರಮಾಡಿರುವ ಬಡ್ಜೆಟ್ಟಿನಲ್ಲಿ ಹಣ ಮೀಸಲಾಗಿಟ್ಟಿಲ್ಲ. ಆದ್ದರಿಂದ ಈ ಠರಾವನ್ನು ಒಪ್ಪಿಕೊಳ್ಳುವುದು ಕಷ್ಟ. ಮಾನ್ಯ ಸದಸ್ಯರು ಹೇಳಿರುವ ಪ್ರತಿಯೊಂದು ಅಂಶದ ವಿಷಯದಲ್ಲೂ ಸಂಪೂರ್ಣ ಸಹಾನುಭೂತಿಯಿದೆ. ಆದಷ್ಟು ಪರಿಹಾರಮಾಡುವುದಕ್ಕೆ ಎಲ್ಲಾ ಸೇರಿ ಪ್ರಯತ್ನಮಾಡೋಣ. ಶ್ರೀ ನಾಯ್ಡು ಅವರಿಗೆ ಸರ್ಕಾರದ ಉದ್ದೇಶ ಗೊತ್ತಿದೆ. ಅವರೂ ಕಾಂಗ್ರೆಸ್ಸಿನವರು, ಸಭಿಕರೆಲ್ಲರಿಗೂ ಬಡವರಿಗೆ ಸಾಕಷ್ಟು ನೆರವು ನೀಡಬೇಕೆಂದು ಮನಸ್ಸಿದೆ, ಪ್ರಯತ್ನಮಾಡೋಣ. ಈ ಠರಾವನ್ನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಿ. ಆರ್. ನಾಯ್ಡು.—ನನ್ನ ವಿಷಯದಲ್ಲಿ ತುಂಬ ಸಹಾನುಭೂತಿಯಿದೆಯೆಂದು ಹೇಳುತ್ತಿದ್ದಾರೆ. ಒಂದು ವಿಷಯ ಸರ್ಕಾರದ ಗಮನಕ್ಕೆತರಲು ಇಷ್ಟಪಡುತ್ತೇನೆ. ಕಾರ್ಪೊರೇಷನ್ ಪ್ರದೇಶದಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಾರೆ, ಕಾರ್ಪೊರೇಷನ್ ಪ್ರದೇಶದಲ್ಲಿ ಸಾವಿರಾರು ಮನೆ ಕಟ್ಟಿದ್ದಾರೆ. ಇದು ಅನೇಕರಿಗೆ ಗೊತ್ತಿರುವ ವಿಷಯ. ಎರಡನೆಯದು ಈ ಪ್ರಶ್ನೆಯನ್ನು ಸಾವಧಾನದಿಂದ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಇದ ತುಂಬ ಸಂತೋಷದ ವಿಚಾರ. ಮಾನ್ಯ ಸಚಿವರು ಸ್ವತಂತ್ರಪಾಳ್ಯವನ್ನು ಅಸ್ವತಂತ್ರಪಾಳ್ಯವೆಂದು ಹೇಳಿ ಆರು ವರ್ಷಗಳ ಹಿಂದೆ ಬಂದು ನೋಡಿದ ಒಂದು ವಿಚಾರದಲ್ಲಿ ಈಗಲೂ ಮಂತ್ರಿ ಮಂಡಲ ಬದಲಾವಣೆಯಾಗುತ್ತಿದ್ದರೂ ಸಹಾನು ಭೂತಿಯಿದೆಯೆಂದು ಹೇಳುತ್ತಿದ್ದಾರೆ. ಹೇಗೆ ಸಾಧ್ಯ? ಕೊನೆಯಲ್ಲಿ ಹಣದ ಕೊರತೆ ಎಂದು ಹೇಳುತ್ತಿದ್ದಾರೆ. ನಮ್ಮ ಕೆಲಸಗಳಿಗಾದರೆ ಹಣ ಬೇಕಾಗುತ್ತದೆ, ಅದೇ ದೊಡ್ಡ ಕಾರ್ಯಗಳಿಗೆ, ಶ್ರೀಮಂತರ ಕಾರ್ಯಗಳಿಗೆ ಹೇಗಾದರೂ ಹಣ ಒದಗುತ್ತದೆ. ಬಡವರ ಕೆಲಸಗಳಿಗೆ ಕಷ್ಟವಾಗುತ್ತದೆಂದು ಹೇಳಿದರೆ ಹೇಗೆ ? ನೆಹ್ರೂ ಅವರ ಸರ್ಕಾರದಲ್ಲಿ ನಿಯೋಗ ಹೋದರೆ ಹಣ ಕೊಡುತ್ತಾರೆ, ನಮಗೆ ಕಷ್ಟವಿಲ್ಲದಿದ್ದರೆ ಕೇಳುತ್ತಿರಲಿಲ್ಲ, ಅರ್‌ಅಥ ಗ್ರೈಸ್ಡ್ ಕಟ್ಟಡ ಕಟ್ಟಿದ್ದಾರೆ. ಪ್ರಜಾ ಪ್ರಭುತ್ವವಿರುವುದರಿಂದ ಅನುಕೂಲಪಡಿಸಬೇಕೆಂದು ಕೇಳುತ್ತಿದ್ದೇವೆ. ಇದಕ್ಕಾಗಿ ಯಾವ ಕಾನೂನು ಬೇಕಾದರೂ ಮಾಡಿ ಬಡವರಿಗೆ ಉಪಕಾರವಾಗುವ ಹಾಗೆ ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ. ಇರುವ ಕಷ್ಟವನ್ನು ಮನಃಪೂರ್ವಕವಾಗಿ ಸರ್ಕಾರಕ್ಕೆ ತಿಳಿಸಿದ್ದೇನೆ. ಅವರು ಅದನ್ನು ಒಪ್ಪಿದ್ದಾರೆಂದು ತಿಳಿದುಕೊಂಡಿದ್ದೇನೆ.

*Sri A. V. NARASIMHA REDDY (Bangalore-South).—I rise to a point of order. The procedure in this House so far as the discussion of non-official business was concerned, was that the mover of the resolution was permitted to move the Bill or resolution, and after he made his remarks the concerned Minister was requested by the Chair to reply. Thereafter the question remained only for the member or the House, either to accept or reject the resolution. But now we find that a different procedure is being followed here. The Hon'ble Member has moved the resolution and offered his remarks and the Minister has replied. The Chair has permitted the Hon'ble Member to further comment after the reply was given by the Minister.

4 P.M.

Mr. DEPUTY SPEAKER.—After the Government replies, the Hon'ble Member in whose name the resolution appears, has got a right of reply. The Chair also can permit any member to speak, and if the Chair feels that permission maybe given to the Hon'ble Member in whose name the resolution

(MR. DEPUTY SPEAKER)

appears he made do so. So, I have permitted the Hon'ble Member as a special case to offer his remarks.

ಶ್ರೀ ವಿ. ಆರ್. ನಾಯ್ಡು.—ನನ್ನ ನಿರ್ಣಯವನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ.

Mr. DEPUTY SPEAKER.—The Hon'ble Member is permitted to withdraw his resolution.

Sri S. SRINIVASA IYENGAR.—We have said that we will not permit, Sir.

Mr. DEPUTY SPEAKER.—The majority have permitted.

Sri S. SRINIVASA IYENGAR.—The rule is even if one member says 'no', it must be put to the House and disposed of. That is the procedure.

Mr. DEPUTY SPEAKER.—I am sorry it is too late. I ascertained the opinion of the Hon'ble Members by asking the Hon'ble Members to say either 'AYE' or 'NAY'. When I said 'Those who are in favour of the Resolution being withdrawn may say 'AYE,' the Hon'ble Members granted permission. Therefore permission to withdraw the resolution is granted.

The Resolution was, by leave, withdrawn.

RESOLUTION No. 2.

Re : Construction of Water Works at Virajpet, Coorg District.

Sri P. I. BELLIAPPA (Ammathi Nad).—Sir, I beg to move the following Resolution :

> "This Assembly is of the opinion that the construction of water works at Virajpet be taken up immediately."

ಸ್ವಾಮಿ, ವಿರಾಜಪೇಟೆಯಲ್ಲಿರುವ ನೀರಿನ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಬೇಕೆಂದು ಇರುವ ನನ್ನ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಕೊಡಗಿನಲ್ಲಿ ವಿರಾಜಪೇಟೆಯು ಎರಡನೆ ದೊಡ್ಡ ಪಟ್ಟಣವು. ಮಡಿಕೇರಿಯು ಒಂದನೆಯದು. ಎಲ್ಲ ಸರಕಾರಿ ಆಫೀಸುಗಳು ಮಡಿಕೇರಿಯಲ್ಲಿ ಇರುವದರಿಂದ ಅದು ಮೊದಲನೆ ಮುಖ್ಯಸ್ಥಳವಾಗಿದೆ. ವ್ಯಾಪಾರದ ದೃಷ್ಟಿಯಿಂದ ನೋಡಿದರೆ ವಿರಾಜಪೇಟೆಯು ಪ್ರಾಮುಖ್ಯವಾದ ಪಟ್ಟಣವಾಗಿದೆ. ಜನ ಸಂಖ್ಯೆಯು ಸುಮಾರು ಹತ್ತು ಸಾವಿರದವರೆಗೆ ಇದೆ. ಜನ ಸಂಖ್ಯೆಯ ದೃಷ್ಟಿಯಿಂದ ಬಹಳ ದೊಡ್ಡ ಪಟ್ಟಣವಾಗಿದೆ ಇದ್ದರೂ ವ್ಯಾಪಾರದ ದೃಷ್ಟಿಯಿಂದ ಮುಖ್ಯಪಟ್ಟಣವಾಗಿದೆ. ಒಂದು ವರ್ಷದಲ್ಲಿ ನೂರು ಇಂಚು ಮಳೆಯು ಈ ಪಟ್ಟಣದಲ್ಲಿ ಬೀಳುತ್ತದೆ. ಇಷ್ಟು ಮಳೆಯು ಆಗುತ್ತಿದ್ದರೂ ವಿರಾಜಪೇಟೆಯಲ್ಲಿಯ ಜನರು ಬೇಸಗೆಯಲ್ಲಿ ಕುಡಿಯಲಿಕ್ಕೆ ನೀರು ಇಲ್ಲದೆ ಕಷ್ಟ ಪಡುತ್ತಿದ್ದಾರೆ. ಈ ಕಷ್ಟವು ಇತ್ತೀಚೆಗೆ ಬಂದುದಲ್ಲ. ಸುಮಾರು 30 ವರ್ಷಗಳ ಹಿಂದೆಯೇ ಅಲ್ಲಿಯ ಒಬ್ಬ ಸಾಹುಕಾರರಾದ ಅಡಕೆ ನಂಜಪ್ಪನವರ ಹೆಸರಿನಲ್ಲಿ 25,000 ರೂಪಾಯಿಯನ್ನು ಈ ಕೆಲಸಕ್ಕಾಗಿ ಸರ್ಕಾರದಲ್ಲಿ ಡಿಪಾಜಿಟ್ಟು ಇಡಲಾಗಿತ್ತು. ಆದರೆ ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಲಿಲ್ಲ. ಏಳೆಂಟು ವರ್ಷಗಳನಂತರ ಟ್ಯೂಬ್‌ವೆಲ್—ಕೊಳಾಯಿ ಭಾವಿಗಳನ್ನು ತೆಗೆಸಿ ಪರೀಕ್ಷೆಮಾಡಿ ನೋಡಿದರು. ಸಾವಿರಾರು ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡಿದರು. ಆದರೆ ಪ್ರಯತ್ನಕ್ಕೆ ಫಲ ಬರಲಿಲ್ಲ. ಅನಂತರ ಸರ್ಕಾರದವರು ಒಂದು ಅಂದಾಜು ಪಟ್ಟಿಯನ್ನು ತಯಾರಿಸಿ ಈ ಕೆಲಸವನ್ನು ಒಬ್ಬ ಕಂಟ್ರಾಕ್ಟರನಿಗೆ ವಹಿಸಿಕೊಟ್ಟರು. ಆ ಸಮಯದಲ್ಲಿ ಈ ಯೋಜನೆಯ ಪ್ರಕಾರ ವಿರಾಜಪೇಟೆ ಪಟ್ಟಣದ ಹತ್ತಿರವಿರುವ ಚಿನ್ನಮ್ಮನ ಕೆರೆಯನ್ನು ಬಡಾಯಿಸಿ ನೀರು ಸರಬರಾಯಿ ಆಗುವಂತೆ ಏರ್ಪಾಡಿತ್ತು. ಕೆರೆಯ ಕೆಲಸ ನಡೆಯುತ್ತಾಬಂತು. ಆದರೆ ಜನಸಂಖ್ಯೆಯು ಮಾತ್ರ ಹೆಚ್ಚುತ್ತಬಂದುದರಿಂದ ಆ ಕೆರೆಯ ನೀರು ಆರು ತಿಂಗಳಿಗೂಕೂಡ ಸಾಕಷ್ಟು ಸರಬರಾಯಿ ಮಾಡಲಿಕ್ಕಿಲ್ಲವೆಂದು ತೋರಿಬಂತು. ಯುದ್ಧದ ದೆಸೆಯಿಂದ ಕಬ್ಬಿಣ ಸಾಮಾನುಗಳ ಬೆಲೆಯೂ ಏರುತ್ತ ಬಂದಿತು. ಮೊದಲಿನ ಅಂದಾಜಿಗಿಂತ ಎರಡು ಮೂರರಷ್ಟು ಹೆಚ್ಚು ಖರ್ಚು ಬರುವದೆಂದು ಕಂಡುಬಂದದ್ದರಿಂದ ಆ ಕೆಲಸವನ್ನು ಅಷ್ಟಕ್ಕೇ ಬಿಟ್ಟುಬಿಟ್ಟರು. ನೀರಿನ ಕೊರತೆಯು ಇನ್ನೂ ಹೆಚ್ಚಾಯಿತು. ಪ್ರಜಾ ಪ್ರಭುತ್ವ ಸರ್ಕಾರ ಬಂದಮೇಲೆ ಈ ವಿಷಯವನ್ನು ಪುನಃ ಸರ್ಕಾರದ ಮುಂದೆ ಮಂಡಿಸಲಾಯಿತು. ಕಳೆದ ನಾಲ್ಕೈದು ವರ್ಷಗಳಿಂದ ಅಲ್ಲಿಯ ಅಸೆಂಬ್ಲಿಯಲ್ಲಿ, ಮುನಸಿಪಾಲಿಟಿಯಲ್ಲಿ, ಸಾರ್ವಜನಿಕ ಸಭೆಯಲ್ಲಿ ಈ ವಿಷಯವನ್ನು ಒತ್ತಾಯಪೂರ್ವಕವಾಗಿ ಸೂಚಿಸುತ್ತಲೇ ಬಂದಿದ್ದೇವೆ ಮತ್ತು ಚರ್ಚೆಯೂ ಸಹ ಆಗಿದೆ. ಕಾರಣಾಂತರದಿಂದ ಈ ಕೆಲಸವು ಹಾಗೆಯೇ ಉಳಿದುಬಿಟ್ಟಿದೆ. ಒಂದು ಸಮಯದಲ್ಲಿ ನಾವು ಪ್ರಶ್ನೆಕೇಳಿದ ಕಾಲದಲ್ಲಿ ಈ ನೀರಿನ ವ್ಯವಸ್ಥೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಐದು ಲಕ್ಷರೂಪಾಯಿ ಸಾಲ ಪಡೆದುಕೊಂಡು ಈ ಕೆಲಸವನ್ನು ಮುನಿಸಿಪಾಲಿಟಿಯವರು ಮಾಡುವರೆಂದು ಹೇಳಿದ್ದಾರೆ. ಆದರೂ ಕೂಡ ಇನ್ನುವರೆಗೆ ಈ ಕೆಲಸವನ್ನು ಕೈಗೊಂಡಿಲ್ಲ, ಇದು ಜನರ ದುರದೃಷ್ಟವೆಂದು ಹೇಳಬಹುದು. ನೂರು ಇಂಚು ಮಳೆ ಆಗುತ್ತಿದ್ದರೂ ಜನರಿಗೆ ಕುಡಿಯುವ ನೀರು ದೊರೆಯುವುದಿಲ್ಲ. ಇಂಥ ಶೋಚನೀಯ ಪರಿಸ್ಥಿತಿಯನ್ನು ಜವಾಬ್ದಾರೀ ಸರ್ಕಾರದವರು ಖಂಡಿತವಾಗಿ ತೀವ್ರವಾಗಿ ನಿವಾರಿಸಬೇಕು. ಹಣದ ಕೊರತೆಯು ಇದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಈಗ ಕೊಡಗು ಹೊಸ ಮೈಸೂರು ರಾಜ್ಯಕ್ಕೆಸೇರಿದೆ. ಮೊದಲಿನ ಕೊಡಗಿನ ಲಕ್ಷಗಟ್ಟಲೆ ಉಳಿತಾಯದ ಹಣ ಇದೆ. ಈಗಿನ ಮೈಸೂರದ ಹಣಕಾಸಿನ-ಲೆಕ್ಕ ನೋಡಿದರೆ ಕೊರತೆಯ ಬಜೆಟ್ಟು ಇದೆ. ಆದರೆ ಕೊಡಗು ಅಂಥ ಪರಿಸ್ಥಿತಿಯಲ್ಲಿ ಇರಲಿಲ್ಲ. ಆ ದೃಷ್ಟಿಯಿಂದ ನಮ್ಮ ಜವಾಬ್ದಾರೀ ಸರ್ಕಾರವು ಈ ಕೆಲಸವನ್ನ ಆದಷ್ಟು ಮಟ್ಟಿಗೆ ತೀವ್ರವಾಗಿ ಕೈಕೊಳ್ಳಬೇಕು. ಸಾಲ ಕೊಟ್ಟರೆ ಮುನಸಿಪಾಲಿಟಿಯಿಂದ ಸಾಲ ಮರು ಪಾವತಿ ಮಾಡಲಿಕ್ಕೆ ಆಗಲಿಕ್ಕಿಲ್ಲ. ಮಡಿಕೇರಿ ಮತ್ತು ವಿರಾಜ

ಪೇಟೆ ಎರಡು ಮುನಿಸಿಪಾಲಿಟಿಗಳೂ ಸ್ವಲ್ಪಮಟ್ಟಿಗೆ ಒಂದೇರೀತಿಯದ್ದಾಗಿವೆ. ಈಗ ಇವೆರಡು ಮುನಿಸಿ ಪಾಲಿಟಿಗಳೂ ಆಕ್ಟ್ರಾಯಿ ತೆರಿಗೆಯಿಂದ ತಮ್ಮ ಕೆಲಸ ಕಾರ್ಯಗಳನ್ನು ನಡೆಸುತ್ತಿವೆ. ಮುಂದೆ ಮಾರಾಟ ತೆರಿಗೆ ಜಾರಿಗೆ ಬರುವಾಗ್ಗೆ ಆಕ್ಟ್ರಾಯಿ ತೆರಿಗೆ ನಿಲ್ಲ ಬೇಕಾಗುವುದು. ಆಗ್ಗೆ ಈ ಮುನಿಸಿಪಾಲಿಟಿಗಳ ಆದಾಯ ಕಡಮೆಯಾಗುವುದು. ಆ ಕಾರಣ ಸರ್ಕಾರ ದವರೇ ಈ ಕೆಲಸವನ್ನು ಕೈಕೊಳ್ಳಬೇಕಾಗಿ ನನ್ನ ಕೋರಿಕೆ.

Mr. DEPUTY SPEAKER.—Resolution moved:

"This Assembly is of the opinion that the construction of Water Works in Virajpet be taken up immediately."

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗತಾನೇ ಅಪ್ಪಣೆ ಕೊಡಿಸಿದ ಹಾಗೆ, ಕೊಡಗಿನ ಸರ್ಕಾರದವರು 1956ನೇ ಇಸವಿ ಅಕ್ಟೋಬರ್ ತಿಂಗಳಿನಲ್ಲಿಯೇ ಈ ಯೋಜನೆಗೆ ಸಹಾಯ ಮಾಡಿದ್ದಾರೆ. ಈ ಯೋಜನೆಗೆ ನಾಲ್ಕು ಲಕ್ಷ ರೂಪಾಯಿಗಳ ಸಾಲಕೊಡಬೇಕೆಂದು ಮುನಿಸಿಪಾಲಿಟಿಯವರು ಕೇಳಿದ್ದರು. ಅದಕ್ಕೆ ಕೊಡಗಿನ ಸರ್ಕಾರದವರು ಆಗಲೇ 50ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಅವರ ಬಗ್ಗೆ ಎಸ್ಟಿಮೇಟುಗಳು ಸಂಪೂರ್ಣವಾಗಿ ಸ್ಕ್ರುಟಿನೈಸ್ ಆಗಿ ಬಂದ ಕೂಡಲೇ ಈ ಕಾರ್ಯವನ್ನು ಮಾಡಲಾಗುತ್ತದೆ. ಆ ರಿಪೋರ್ಟಿನ ಮೇಲೆ ಈ ಕೆಲಸ ಅವಲಂಬಿಸಿದೆ. ಅಲ್ಲದೆ ಈಗ ಡೆಪ್ಯುಟಿ ಕಮಿಷನರವರು, ಈ ವಿಚಾರವನ್ನು ಪರಿಶೀಲನೆ ಮಾಡಿ, ಈ ಮುನಿಸಿಪಾಲಿಟಿಗೆ 50 ಲಕ್ಷ ರೂಪಾಯಿಗಳ ಮೇಲ್ಪಟ್ಟು ವರಮಾನವಿದೆ. ಮತ್ತು ಸಾಲವನ್ನು ತೀರಿಸುವುದಕ್ಕೆ ಸಾಕಾದಷ್ಟು ಶಕ್ತಿ ಇದೆ, ಮತ್ತು ಇದರ ಬಗ್ಗೆ ಸಹಾಯ ಮಾಡಬೇಕೆಂದು ಶಿಫಾರಸ್ಸನ್ನು ಕೂಡ ಕಳುಹಿಸಿದ್ದಾರೆ. ಅದಕ್ಕಾಗಿ ಇದರ ಇಂಜನೀಯರಿಂದ ಎಸ್ಟಿಮೇಟುಗಳನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಅದು ಬೇಗನೆ ಬರುವ ನಿರೀಕ್ಷೆಯಿದೆ. ಅದು ಬಂದ ಕೂಡಲೇ ಈ ಯೋಜನೆಯನ್ನು ಪೂರ್ತಿಗೊಳಿಸಿ ಈ ಕಾರ್ಯವನ್ನು ಕಾರ್ಯಗತ ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡುತ್ತೇನೆ. ಆದುದರಿಂದ ಮಾನ್ಯ ಸದಸ್ಯರು ಈಗ ತಂದಿರುವ ಠರಾವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಪಿ. ಐ. ಬೆಳ್ಳಿಯಪ್ಪ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ಕೆಲಸವನ್ನು ಅದಷ್ಟು ಶೀಘ್ರದಲ್ಲಿಯೇ ಕೈಗೊಳ್ಳುವ ಭರವಸೆಯನ್ನು ಕೊಟ್ಟಮೇರೆಗೆ ನನ್ನ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ.

The Resolution was, by leave, withdrawn.

Resolution No. 3. Disposal of records in Government Departments.

ಶ್ರೀ ಎಸ್. ಕರಿಯಪ್ಪ (ವಿರೂಪಾಕ್ಷಪುರ).—ಸ್ವಾಮಿ ಅಧ್ಯಕ್ಷರೆ, ನಾನು ಈ ಸಭೆಯ ಮುಂದೆ ಮಂಡಿಸುವ ನಿರ್ಣಯವು ಈ ರೀತಿಯಿದೆ:

"This Assembly is of the opinion that the inordinate delay in the disposal of records in various Government Departments should be put an end to early."

ಈಗ ಸರ್ಕಾರಕ್ಕೆ ಕೊಟ್ಟಿರುವ ಅರ್ಜಿಗಳು ರಿಕಾರ್ಡುಗಳ ಬಗ್ಗೆ ಫೈಸಲಾತಿ ವಿಷಯದಲ್ಲಿ ಈ ರೀತಿಯ ನಿರ್ಣಯವನ್ನು ತಂದಿದ್ದೇನೆ. ನಾವು ಈಗ ನೋಡುತ್ತಿದ್ದೇವೆ. ಒಂದೊಂದು ರಿಕಾರ್ಡು ಹಲವಾರು ತಿಂಗಳು, ಮತ್ತು ಹಲವು ವರ್ಷಗಳು ಮತ್ತು ಇನ್ನು ಕೆಲವೆಡೆ ಕಾಲು ಶತಮಾನದಷ್ಟು ಕಾಲ ಕೂಡ ನಿಧಾನವಾಗುತ್ತಿದೆ. ಮತ್ತು ಇದರಿಂದ ಏನೂ ಹೆಚ್ಚು ಅನುಕೂಲವಾಗುತ್ತಿಲ್ಲ. ರೈತನಿಗೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶವೇನೋ ತಮಗಿದೆ. ಇದಕ್ಕಾಗಿ ಅನೇಕ ಯೋಜನೆಗಳನ್ನು ತಯಾರುಮಾಡಿ ಸುಖೀರಾಜ್ಯ ಸ್ಥಾಪನೆ ಮಾಡಬೇಕೆಂದಿರುವುದು ಸಂತೋಷದ ಸಂಗತಿ. ಆದರೆ ಈ ಸುಖೀರಾಜ್ಯ ಸ್ಥಾಪನೆಯ ವಿಷಯದಲ್ಲಿ ಯಾವ ರೀತಿಯಾಗಿ ಹೊಸದಾಗಿ ಸ್ಥಾಪಿಸಿದ ಈ ಪ್ರಾಂತದಲ್ಲಿ ಕಾಣುತ್ತಿದ್ದೇವೆಂದರೆ, ಜನಗಳಿಗೆ, ಅದರಲ್ಲೂ ಬಡ ರೈತರಿಗೆ, ತುಂಬ ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಜನಸಾಮಾನ್ಯತೆಗೆ ಇರತಕ್ಕಂತಹ ಕಷ್ಟಗಳನ್ನು ತಪ್ಪಿಸಲು ರಿಕಾರ್ಡುಗಳನ್ನು ಫೈಸಲ್ ಮಾಡುವುದರಲ್ಲಿ ತಡವಾಗುತ್ತಿದೆ. ಈ ಕಷ್ಟವನ್ನು ನಿವಾರಣೆಮಾಡಿದರೆ ಜನತೆಗೆ ಒಂದು ಸೌಕರ್ಯವನ್ನು ಕಲ್ಪಿಸಿ ಕೊಟ್ಟಂತಾಗುತ್ತದೆ. ಇದು ಈಗ ನೂತನ ಪ್ರಾಂತವಾಗತಕ್ಕ ದಿನದಿಂದ ಅಥವಾ ನಿನ್ನೆ ಇವೊತ್ತಿನಿಂದ ಆಗಿರತಕ್ಕ ಒಂದು ಕೆಲಸವಲ್ಲ. ಹೀಗೆ ರಿಕಾರ್ಡುಗಳು ಫೈಸಲಾಗದೆ ಎಷ್ಟೋ ವರ್ಷಗಳವರೆಗೆ ತಳ್ಳುತ್ತಾ ಬರುತ್ತಾ ಇರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಎಷ್ಟೋ ಕಾಲದಿಂದಲೂ ಈ ಪದ್ಧತಿ ನಡೆದುಕೊಂಡು ಬರುತ್ತಿದೆ. ಇದನ್ನು ಸರಿಪಡಿಸುವ ಪ್ರಯತ್ನ ನಡೆದಿಲ್ಲ. ರಿಕಾರ್ಡುಗಳ ಫೈಸಲಾಗುತ್ತಿಲ್ಲ ಎಂಬ ವಿಷಯದಮೇಲೆ ಅನೇಕ ವಿಧವಾದ ಟೀಕೆಗಳೂ, ಪತ್ರಿಕಾ ಪ್ರಕಟಣೆಗಳೂ ಮತ್ತು ಆಕ್ಷೇಪಣೆಗಳೂ ಬಂದಿವೆ. ಎಷ್ಟೋ ಕಾನ್ಫರೆನ್ಸುಗಳಲ್ಲಿ ಕೂಡ ಈ ವಿಷಯದಲ್ಲಿ ರೆಸಲ್ಯೂಷನ್ನುಗಳನ್ನು ಮಾಡಿ ಎಷ್ಟೋಸಾರಿ ಸಲಹೆಗಳನ್ನು ಕೊಟ್ಟು ಆ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಇಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದರೂ ಕೂಡ ಬೇಗ ಬೇಗ ರಿಕಾರ್ಡುಗಳನ್ನು ಫೈಸಲು ಮಾಡುವ ಪ್ರಯತ್ನ ಏನೂ ಆಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೀಗೆ ಈ ಪ್ರಸಂಗವನ್ನು ನಿರ್ಧರಿಸದೆ ಬಿಡುವುದು ಸರಿಯಾದುದಲ್ಲ. ಜನಗಳ ಅನುಕೂಲಕ್ಕಾಗಿ ಇದನ್ನು ಬಗೆಹರಿಸಬೇಕೆಂದು ಜನತೆಯ ಪರವಾಗಿ ತಮ್ಮ ಮುಂದೆ ಬಿನ್ನಹವನ್ನಿಡಬೇಕಾಗಿದೆ. ಒಳ್ಳೆಯದಾದ ಕೆಲಸಕ್ಕೆ ಪ್ರೋತ್ಸಾಹಕೊಟ್ಟು ಸಹಾಯ ಮಾಡಬೇಕೆಂಬ ಮನಸ್ಸು ಸರ್ಕಾರಕ್ಕೇನೋ ಇದ್ದರೂ ಕಾರ್ಯತಃ ಜನತೆಗೆ ಇದರಿಂದೇನೂ ಉಪಯೋಗವಾಗಿಲ್ಲವೆಂದು ಹೇಳಬೇಕಾಗಿದೆ. ನಾವೇನೋ ಈ ರೀತಿ ಇಲ್ಲಿ ಹೇಳುತ್ತೇವೆ, ಭಾಷಣಗಳನ್ನು ಮಾಡಿತಿಳಿಸುತ್ತೇವೆ. ಪತ್ರಿಕೆಗಳಲ್ಲಿಯೂ ಬರೆಯುತ್ತಿದ್ದೇವೆ. ಇವೊತ್ತು ಜನಗಳಿಂದ ಜನಗಳಿಗಾಗಿ ನಡೆಯತಕ್ಕ ಸರ್ಕಾರ ಎಂದು ತಿಳಿದು ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡುತ್ತಿರುವ ಕಾಲದಲ್ಲಿ ಸರ್ಕಾರವು ಜನತೆಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಜನಗಳಿಗೆ ತಮ್ಮ ಅಭಿಮಾನವನ್ನು ತೋರಿಸಬೇಕು. ಈಗ ಜನಗಳಿಗೆ ನೇರವಾಗಿ ಕಾಣತಕ್ಕಂತಹ ಒಂದು ಅನುಭವ ಇದು. ಕಷ್ಟಗಳನ್ನು ಅರಿತು ಕಾರ್ಯನಡೆಸುವುದರಿಂದ ಸರಕಾರಕ್ಕೆ ಜನಗಳಿಂದ ಒಂದು ವಿಧವಾದ

(ಶ್ರೀ ಎಸ್. ಕರಿಯಪ್ಪ)
ಮಮತೆ ಮತ್ತು ಗೌರವ ಸ್ವಾಭಾವಿಕವಾಗಿ ಸಿಗುವುದು ಅಸಂಭವವೇನಿಲ್ಲ. ಆದಕಾರಣ ಸರ್ಕಾರದವರು ಈ ಅಂಶಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಬೇಗ ಬೇಗ ಈ ರಿಕಾರ್ಡುಗಳು ಫೈಸಲಾಗುವಂತೆ ಮಾಡಬೇಕೆಂದು ನನ್ನ ಬಿನ್ನಹ. ರಾಷ್ಟ್ರವೇನೋ ದೊಡ್ಡ ದೊಡ್ಡದಾಗಿ ವಿಶಾಲವಾಗುತ್ತ ಹೋಗುತ್ತಿದೆ. ಆದರೆ ಸರಕಾರ ಮಾತ್ರ ಹಾಗೆಯೇ ಇದೆ. ಜನಗಳೇ ತಮ್ಮ ತಮ್ಮ ಕಷ್ಟ ನಷ್ಟಗಳನ್ನು ತಾವೇ ಪರಿಹಾರ ಮಾಡಿಕೊಳ್ಳತ್ತಾರೆಂದಿರಬಹುದು. ಸರಕಾರದ ಯೋಚನೆ. ಇದು ಸರಿಯಲ್ಲ. ಸರ್ಕಾರದವರು ಈಗಲಾದರೂ ಈರೀತಿ ಜನರಿಗೆ ತೊಂದರೆಯಾಗದಂತಹ ಏರ್ಪಾಡುಗಳನ್ನು ಮಾಡಬೇಕು. ಈಗ ಮಲೇರಿಯಾರೋಗವನ್ನು ತಡಗಟ್ಟುವುದುಕ್ಕಾಗಿ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ. ಮೊದಲು ಈ ಮಲೇರಿಯಾರೋಗ ನಿವಾರಣೆಗಾಗಿ ಡಿ. ಡಿ. ಟಿ. ಯನ್ನು ಹೊಡೆಯಲು ಏರ್ಪಾಡು ಮಾಡಿದ್ದೀರಿ. ಈ ರೀತಿಯ ಕಾರ್ಯಗಳನ್ನು ಮಾಡಿ ಜನರಿಗೆ ಉಪಯೋಗವಾಗುತ್ತಿರುವುದು ಬರೀ ಪಟ್ಟಣಗಳಲ್ಲೇ ಆಗಿದೆ. ನಮ್ಮ ಹಳ್ಳಿಗಳಕಡೆ ಈ ರೀತಿಯಾಗಿ ಕೆಲಸವಾಗುತ್ತಿಲ್ಲ. ನಿಜವಾಗಿಯೂ ಸರ್ಕಾರವು ಹೀಗೆ ಈ ಮಲೇರಿಯಾ ರೋಗ ನಿವಾರಣೆಗೆ ಸಹಾಯ ಮಾಡುತ್ತಿದೆಯೇ ಎಂಬ ಅನುಮಾನವು ಜನತೆಗೆ ಬಂದಿದೆ. ಏಕೆಂದರೆ ಹಲವಾರು ವರ್ಷಗಳಿಂದಲೂ ಸರ್ಕಾರಕ್ಕೆ ಎಷ್ಟೋ ಮನವಿಗಳನ್ನು ಸಲ್ಲಿಸಿದಾಗ್ಯೂ ಏನೂ ಕೆಲಸವಾಗಿಲ್ಲ. ಆದಕಾರಣ ಈಗಲಾದರೂ ಸರ್ಕಾರದವರು ಗಮನಕೊಟ್ಟು ಈ ಕೆಲಸವನ್ನು ಮಾಡಬೇಕೆಂದು ನಾನು ಇಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ನಾನು ಈಗಾಗಲೇ ಹೇಳಿದ ಹಾಗೆ, ಕಾಲು ಶತಮಾನಗಳಿಂದಲೂ ಈ ರಿಕಾರ್ಡುಗಳು ಫೈಸಲಾಗುತ್ತಿಲ್ಲ. ಇದಕ್ಕೆ ಎಷ್ಟು ಬೇಕಾದರೂ ಉದಾಹರಣೆಗಳನ್ನು ಕೊಡಬಹುದು. ಒಂದೆರಡನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಕಾನಕಾನಹಳ್ಳಿ ತಾಲ್ಲೂಕಿನಲ್ಲಿ ಮರಳವಾಡಿ ಬಳಿಯಿರುವ ರಸ್ತೆಮಾಡುವುದಕ್ಕೆ, ಈ ರಸ್ತೆಗೆ ಜನಗಳ ಜಮೀನನ್ನು ಅಕ್ವೈರು ಮಾಡಿದ್ದಾರೆ. ಅಕ್ವೈರುಮಾಡಿ ಸುಮಾರು ಕಾಲು ಶತಮಾನವಾದರೂ ಹಾಗೆಯೇ ಇದೆ. ಜನತೆಗೆ ಪರಿಹಾರವನ್ನು ಕೊಟ್ಟಿಲ್ಲ. ಅನಂತರ ಸುವರ್ಣಮುಖಿ ಪ್ರಾಜೆಕ್ಟು ಏನಿದೆ ಅದನ್ನು 1951 ರಿಂದ ಮಾಡಿ ಸುತ್ತಿದೆ. ಆದರೆ ಈ ಪ್ರಾಜೆಕ್ಟಿನಿಂದ ಮುಳುಗಡೆ ಆಗುವ ಜಮೀನಿನವರಿಗೆ ಇನ್ನೂ ಪರಿಹಾರ ದೊರೆತಿಲ್ಲ. ಈ ವಿಚಾರವಾಗಿ ನಾನು ಎಷ್ಟೋಸಾರಿ ಪ್ರಶ್ನೆಗಳನ್ನು ಕೇಳುತ್ತಾ ಬಂದಿದ್ದೇನೆ. ಆದರೆ ಏನೂ ಫಲವಾಗಿಲ್ಲ. ಇಲ್ಲಿರುವ ರೈತರ ಜಮೀನುಗಳು ತೀರಾ ಕಮ್ಮಿ, ಎಂದರೆ ಒಬ್ಬೊಬ್ಬರಿಗೆ ಸುಮಾರು 5ಗುಂಟೆ, 10 ಗುಂಟೆ, 15ಗುಂಟೆ ಅಥವ ಅರ್ಧ ಎಕರೆಗಿಂತ ಜಾಸ್ತಿಯೇನಿಲ್ಲ. ಅಲ್ಲಿರುವ ಬಡವರಾದ 45 ಜನರ ಜಮೀನು ಮುಳುಗಡೆಯಾಗಿದೆ. ಇದ್ದ ಅತ್ಯಲ್ಪ ಜಮೀನನ್ನೂ ಸಹ ಕಳೆದುಕೊಂಡ ಇವರು ಬಹಳ ಕಷ್ಟಪಡುತ್ತಿದ್ದಾರೆ. ಹೀಗೆ ಈ ರಿಕಾರ್ಡುಗಳನ್ನು ಫೈಸಲು ಮಾಡತಕ್ಕ ಕಾರ್ಯವು ಬೇಗ ಬೇಗ ನಡೆಯದೆ ಕಾಲವು ಮೀರಿ ಹೋದರೆ ಜನಗಳಿಗೆ ಬಹಳ ಹಿಂಸೆಯಾಗುತ್ತದೆ. ಮತ್ತು ಸರ್ಕಾರವನ್ನು ನೋಡಿದರೆ ಬೇಜಾರು ಉಂಟಾಗುತ್ತದೆ. ಜನರಿಗೆ ಆಡಳಿತ ಯಂತ್ರದಿಂದ ಒಳ್ಳೆಯದಾಗುತ್ತದೆಂದು ತಿಳಿದುಕೊಂಡಿದ್ದೆ. ಹಾಗೆ ಒಳ್ಳೆಯದು ಆಗದೆ ಇರುವುದರಿಂದ ಜನಗಳಲ್ಲಿ ಒಂದು ರೀತಿಯಾದ ನಿರುತ್ಸಾಹ ಉದಾಸೀನ ಭಾವ ಬೇರೂರುವುದು. ಈ ಭಾವನೆಯ ಪರಿಣಾಮ ಬಹಳ ಕೆಟ್ಟದ್ದು, ಎಂದು ಇವೊತ್ತಿನ ದಿವಸ ಇಲ್ಲಿ ಸಂಕಟದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಹೀಗೆ ನಿಧಾನವಾಗುವುದರಿಂದ ಏನಾಗುತ್ತದೆ ಎನ್ನುವುದನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕಾಗಿದೆ. ಈಗ ಪೂಟ್‌ಲಾಯರುಗಳಿದ್ದಾರೆ. ಇವರನ್ನು ತಿಳುವಳಿಕೆ ಇಲ್ಲದೆ ಇರತಕ್ಕ ನಮ್ಮ ರೈತಾಪಿ ಜನರು ಆಶ್ರಯ ಮಾಡಬೇಕಾಗಿ ಬರುತ್ತದೆ, ಮತ್ತು ಅವರಿಗೆ ಏನಾದರೂ ಸಂಭಾವನೆ ಕೊಡಬೇಕಾಗಿ ಬರುತ್ತದೆ. ಹೀಗೆ ನಾವು ನಮ್ಮ ಜನರು ಈ ಪೂಟ್‌ಲಾಯರುಗಳ ಕೈಗೆಸಿಕ್ಕಿ ಅವರು ತಮ್ಮ ಕೈಯಲ್ಲಿರುವ ದುಡ್ಡನ್ನು ಇವರುಗಳಿಗೆ ಕೊಟ್ಟು ಹಣ ದುರ್ವ್ಯಯ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದು ಸರಿಯಾದದ್ದಲ್ಲ. ಈಚೆಗೆ ಯಾವುದಾದರೂ ಕಾಗದ ಪತ್ರಗಳನ್ನು ಮುಂದಕ್ಕೆ ಸಾಗಿಸಬೇಕಾದರೆ ಅದಕ್ಕೆ agencies ಇವೆ ಎಂದು ಯಾರೋ ನಮ್ಮ ಮಿತ್ರರು ಹೇಳಿದುದನ್ನು ಕೇಳಿದೆ. ಇವೊತ್ತು ಅಂಥ agencies ಕೆಲವಿವೆ. ಬಸ್ಸುಗಳ ಪರ್ಮಿಟ್‌ಗಳನ್ನು ಪಡೆಯಬೇಕಾದರೆ, timings ಬದಲಾವಣೆ ಮಾಡಬೇಕಾದರೆ, ಅಥವಾ, ಸೆನ್ಸುಗಳನ್ನು ಕಟ್ಟಬೇಕಾದರೆ ಇವಕ್ಕೆಲ್ಲ ಕೆಲವುಕಡೆ agencies ಇಟ್ಟುಕೊಂಡಿದ್ದಾರೆ, ಈ ರೀತಿ ಸರಕಾರದಲ್ಲಿ ಕೆಲಸಗಳನ್ನು ಬೇಗ ಬೇಗ ಮಾಡಿಸಿಕೊಳ್ಳುವುದಕ್ಕೆ ಇಂಥ ಏಜೆನ್ಸಿಗಳಿವೆ. ಎಲ್ಲ ಇಲಾಖೆಗಳಲ್ಲಿಯೂ ಎಲ್ಲ ಬಾಬುಗಳಲ್ಲಿಯೂ ಕೆಲಸಗಳನ್ನು ಮಾಡಿಸುವುದಕ್ಕೆ ಏಜೆನ್ಸಿಗಳು ಅಲ್ಲಲ್ಲೇ ಜನ್ಮ ಹೊಂದುತ್ತಿವೆ. ಹೀಗಾಗಲು ಸರಕಾರದವರು ಅವಕಾಶ ಕೊಡಬಾರದೆಂದು ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಸಾಮಾನ್ಯವಾಗಿ ಒಂದು ತಾಲ್ಲೂಕ್ ಆಫೀಸಿನಲ್ಲಿಯೇ ಆಗಲಿ, ಒಂದು ಸಬ್‌ಡಿವಿಷನ್ ಆಫೀಸಿನಲ್ಲಿಯೇ ಆಗಲಿ,ಒಂದು ಜಿಲ್ಲಾ ಕಚೇರಿಯಲ್ಲಿಯೇ ಆಗಲೀ,ಕಾಗದಪತ್ರಗಳು ವಿಲೇ ಆಗುವುದರಲ್ಲಿ ನಿಧಾನವಾದರೆ ಆಗ ಆ ಕಾಗದ ಪತ್ರಗಳಿಗೆ ಸಂಬಂಧಪಟ್ಟ ಜನರು ಅಲ್ಲಿಗೆ ಬರಬೇಕಾಗುತ್ತದೆ. ಒಂದುಸಲ, ಎರಡುಸಲ, ಮೂರುಸಲ, ಹೀಗೆ ಕೆಲವಾರು ಬಾರಿ ಹೋಗಿಬರುವುದಾದರೆ ಅವರಿಗೆ ಕಾಲ ದುರ್ವ್ಯಯವಾಗುವುದು ಅಷ್ಟೇ ಅಲ್ಲ, ಹಣದ ದುರ್ವ್ಯಯವೂ ಆಗುತ್ತದೆ. ಹೀಗೆ ಆ ಮನುಷ್ಯನು ಬಹಳ ದೂರದಿಂದ ಬಂದಿದ್ದಾನೆಂದೇನಾದರೂ ಸಂಬಂಧಪಟ್ಟ ಗುಮಾಸ್ತರಿಗೆ ಗೊತ್ತಾದರೆ ಆಗ ಅವರು ಮನುಷ್ಯನನ್ನು ಕುರಿತು ನಿನ್ನ ಕೆಲಸ ಇವೊತ್ತು ಆಗುವುದಿಲ್ಲ, ಇನ್ನೊಂದು ದಿನ ಬರಬೇಕು ಎಂದು ಹೇಳುತ್ತಾರೆ. ಆಗ ಈ ಮನುಷ್ಯನು ತನ್ನ ಹಣದ ಚೀಲವನ್ನು ವಿಧಿಯಿಲ್ಲದೆ ಬಿಚ್ಚಬೇಕಾಗಿ ಬರುತ್ತದೆ. ಹೀಗೆ ನಿಧಾನವಾಗತಕ್ಕದ್ದರ ಪರಿಣಾಮಗಳು ಅನೇಕವಿವೆ. ಇದರಲ್ಲಿ ಬಹಳ ಮುಖ್ಯವಾದದ್ದು ಎಂದರೆ ಲಂಚರುಷುವತ್ತು ಹೆಚ್ಚುತ್ತಾ ಹೋಗತಕ್ಕದ್ದು.

ಉಪಾಧ್ಯಕ್ಷರು.—ರಿಕಾರ್ಡ್‌ಗಳಲ್ಲಿ ನಿಧಾನವಾಗತಕ್ಕದ್ದು, inordinate delay ಎಂದು ಹೇಳುತ್ತೀರಲ್ಲ. ಅದರಲ್ಲಿ ಕಾರಣವಿಲ್ಲದೆ ಅನಾವಶ್ಯಕವಾಗಿ ನಿಧಾನವಾಗತಕ್ಕ ವಿಚಾರದಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟು ಹೇಳಿದರೆ ಸಹಾಯಕವಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಯಾವುದಾದರೂ ಒಂದು ಕಾಗದವನ್ನು ಬರೆದರೆ ಅದನ್ನು ಸುಮ್ಮನೆ forward ಮಾಡುವ ಕೆಲಸಕ್ಕೆ ಆರುತಿಂಗಳು ನಿಧಾನವಾಗಿರುವುದನ್ನು ನೋಡಿದ್ದೇನೆ. ಆರುತಿಂಗಳು ನಿಧಾನವಾದ ಮೇಲೆ ಕಾಗದ ಪತ್ರಗಳನ್ನು ಕಳುಹಿಸಿಕೊಟ್ಟು, ಸಂಬಂಧಪಟ್ಟವರಿಂದ ಒಂದು ರಿಮೈಂಡರ್

ಹೋದರೆ, ಆನಂತರ ಮೂರುತಿಂಗಳ ಮೇಲೆ ಕಾಗದ ಪತ್ರಗಳನ್ನು ಕಳುಹಿಸಿಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ನಾವು ರೂರಲ್ ಎಜ್ಯುಕೇಷನ್ ಸೊಸೈಟಿಗೆ ಎರಡು ಲಾರಿಗಳನ್ನು ಮಿಲಿಟರಿ ಡಿಸ್ಪೋಸಲ್ಸ್‌ನಿಂದ ಕೊಂಡುಕೊಂಡಿದ್ದೆವು. ಅವುಗಳನ್ನು ಬೇರೆಯವರಿಗೆ ಐದುವರ್ಷದ ಅವಧಿಯೊಳಗೆ ಮಾರಕೂಡದು ಎಂದು ನಿರ್ಬಂಧವಿತ್ತು. ಆ ಲಾರಿಗಳು ನಮ್ಮ ಕೆಲಸಕ್ಕೆ ಅನುಕೂಲವಾಗಲಿಲ್ಲವಾಗಿ ಅವುಗಳನ್ನು ಮಾರಬೇಕಾಗಿತ್ತು. ಆದುದರಿಂದ ಸದರಿ ಲಾರಿಗಳನ್ನು ಮಾರಲು ಅನುಮತಿ ಕೊಡಬೇಕು ಎಂದು ಕಾಗದವನ್ನು ನಮ್ಮ ಸರಕಾರಕ್ಕೆ ಬರೆದಿದ್ದಾಯಿತು. ಆ ಕಾಗದವನ್ನು ನಮ್ಮ ಸರಕಾರದವರು ಸುಮ್ಮನೆ forward ಮಾಡಬೇಕಾಗಿತ್ತು. ನಮ್ಮ ಸರಕಾರದವರು ಈ ಕಾಗದವನ್ನು ಕಳುಹಿಸಿರುತ್ತಾರೆಂದು ಭಾವಿಸಿದ್ದೆವು. ಇದಾದ ಬಹಳ ದಿನಗಳವರೆಗೂ ಉತ್ತರ ಬಾರದೆ ಇರಲು ನಾವು ಮಿಲಿಟರಿ ಡಿಸ್ಪೋಸಲ್ಸ್ ಅಧಿಕಾರಿಗಳಿಗೆ ಒಂದು ಕಾಗದವನ್ನು ಬರೆದು, ನಮ್ಮ ಸರಕಾರದಿಂದ ಲಾರಿಗಳನ್ನು ಮಾರತಕ್ಕ ಬಗ್ಗೆ ಒಂದು ಪತ್ರವ್ಯವಹಾರ ಬಂದಿರಬಹುದು, ಅದರ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದೀರೆಂದು ಕೇಳಿದರೆ ಅವರಿಂದ ನಿಮ್ಮ ಸಂಸ್ಥಾನ ಸರಕಾರದಿಂದ ಯಾವ ಕಾಗದ ಪತ್ರವೂ ಈ ಬಗ್ಗೆ ಬಂದಿಲ್ಲ ಎಂದು ಜವಾಬು ಬಂತು. ಇಷ್ಟರಲ್ಲಿ ಆರುತಿಂಗಳು ಕಾಲ ಕಳೆದು ಹೋಗಿತ್ತು. ಆಗ ನಾವು ಪುನಃ ನಮ್ಮ ಸರಕಾರಕ್ಕೆ ಅಲ್ಲಿಂದ ಬಂದಿದ್ದ ಕಾಗದದ ನಕಲನ್ನೂ ಹಾಕಿ ಪುನಃ ಬರೆದ ಮೇಲೆ ಮೂರು ತಿಂಗಳಕಾಲ ತೆಗೆದುಕೊಂಡು ತಮ್ಮ ಕಾಗದವನ್ನು ಇವೊತ್ತು ಕಳುಹಿಸಿದ್ದೇವೆಂದು ಉತ್ತರ ಕೊಟ್ಟರು. ಹೀಗೆ ಕೇವಲ ಒಂದು ಆಫೀಸಿನಿಂದ ಒಂದು ಆಫೀಸಿಗೆ ಸುಮ್ಮನೆ forward ಮಾಡತಕ್ಕ ಒಂದು ಚಿಕ್ಕ ಕೆಲಸಕ್ಕೆ ಇಷ್ಟೊಂದು ನಿಧಾನವಾದರೆ ಉಳಿದ ಕೆಲಸಗಳು ಹೇಗಾಗುತ್ತವೆ ಎಂದು ತಾವು ಯೋಚನೆ ಮಾಡಬಹುದು. ಇಂಥವುಗಳು ಅನೇಕ ಇವೆ.

ನಾನು ಮತ್ತೊಂದು ಉದಾಹರಣೆಯನ್ನು ಈ ಬಗ್ಗೆ ಕೊಡುತ್ತೇನೆ. ಇದೇ ರೂರಲ್ ಎಜ್ಯುಕೇಷನ್ ಸೊಸೈಟಿಗೆ ಇಂಡಿಯಾ ಸರಕಾರದಿಂದ ಸಾಲತೆಗೆದು ಕೊಳ್ಳುವುದಕ್ಕೆ ಅಪ್ಲಿಕೇಷನ್ ಕಳುಹಿಸಿ ಮೂರುವರ್ಷಗಳಾಗಿವೆ. ಸದರಿ ಅಪ್ಲಿಕೇಷನ್ ನಮ್ಮ ಸಂಸ್ಥಾನ ಸರಕಾರದ ಮೂಲಕ ಹೋಗ ಬೇಕು, ನಾವು ಅಪ್ಲಿಕೇಷನ್ ಕೊಟ್ಟ ನಂತರ ಆರು ತಿಂಗಳ ಮೇಲೆ, ಕೇಂದ್ರ ಸರಕಾರಕ್ಕೆ ಒಂದು ಕಾಗದ ಬರೆದೆವು. ಅದರಲ್ಲಿ ನಮ್ಮ ಸಂಸ್ಥಾನ ಸರಕಾರದ ಮೂಲಕ interest-free loan ಬೇಕೆಂದು ಒಂದು ಅಪ್ಲಿಕೇಷನ್ ಕಳುಹಿಸಿದ್ದೇವೆ, ಅದು ಬಹುಶ ಬಂದಿರಬಹುದು. ಅದನ್ನು ಜಾಗ್ರತೆ ಮಾಡಿ ಕಳುಹಿಸಿಕೊಡಿ ಎಂದು ಬರೆದೆವು. ಕೇಂದ್ರದವರಿಂದ "ನಿಮ್ಮ ಸರಕಾರದಿಂದ ಯಾವ ಶಿಫಾರ್ಸೂ ಬಂದಿಲ್ಲ" ವೆಂದು ಉತ್ತರ ಬಂತು. ಆಮೇಲೆ ನಾವು ನಮ್ಮ ಸಂಸ್ಥಾನ ಸರಕಾರದೊಂದಿಗೆ ಪತ್ರವ್ಯವಹಾರ ಮಾಡಿ, ಕೇಂದ್ರದಿಂದ ಈ ರೀತಿಯಾಗಿ ಉತ್ತರ ಬಂದಿದೆಯಾದ್ದರಿಂದ ದಯವಿಟ್ಟು ಬೇಗ ನಮ್ಮ ಅಪ್ಲಿಕೇಷನ್ ಕಳುಹಿಸಿಕೊಡಿ ಎಂದು ಬರೆದರೆ ಇವತ್ತಿನವರೆಗೂ ಕಳುಹಿಸಿಲ್ಲ. ಇನ್ನೂ ಅನೇಕ ದೃಷ್ಟಾಂತಗಳಿವೆ. ಅವುಗಳನ್ನೆಲ್ಲ ಹೇಳುತ್ತ ಹೋದರೆ ಬಹಳಕಾಲ ಬೇಕಾಗುತ್ತದೆ. ನನಗೆ ನೇರವಾಗಿ ಸಂಬಂಧಪಟ್ಟ ಸೊಸೈಟಿಯ ವಿಚಾರದಲ್ಲಿ ಕೂಡ ಇಂಥವು ಬೇಕಾದಷ್ಟಿವೆ. ಇಂಥವು ಆಗಬಾರದು. ಇಂಥವಕ್ಕೆ ಅವಕಾಶ ಕೊಟ್ಟರೆ, ರಿಕಾರ್ಡುಗಳನ್ನು ಕಳುಹಿಸುವುದರಲ್ಲಿ ನಿಧಾನ ಮಾಡಿದರೆ, ನಮ್ಮ ಸರಕಾರದಲ್ಲಿ ಎಷ್ಟೊಂದು ಪ್ರೀತಿ ವಿಶ್ವಾಸಗಳಿರಬೇಕೋ ಅಷ್ಟು ಇರುವುದು ಕಷ್ಟವಾಗುತ್ತದೆ. ಇಷ್ಟು ಮಾತ್ರಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—Resolution moved :

"That this Assembly is of the opinion that the inordinate delay in the disposal of records in various Government Departments should be put to an end early."

*ಶ್ರೀ ಎಂ. ಚಿಕ್ಕಲಿಂಗಯ್ಯ.—(ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಕರಿಯಪ್ಪ ಅವರು ತಂದಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

ಶ್ರೀ ಬಿ. ರಾಚಯ್ಯ.—(ಎಳಂದೂರು-ಅನುಸೂಚಿತ ಜಾತಿಗಳು).—ವಿರೋಧಿಸುವುದಿಲ್ಲವಲ್ಲ !

ಶ್ರೀ ಎಂ. ಚಿಕ್ಕಲಿಂಗಯ್ಯ.—ವಿರೋಧಿಸುವುದಿಲ್ಲ. ಇದನ್ನು ಅನುಮೋದಿಸುತ್ತ ಸರಕಾರದ ಆಡಳಿತದಲ್ಲಿರುವ ಲೋಪದೋಷಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ರಿಕಾರ್ಡುಗಳ delay ಮಾಡುವುದು, inordinate delay ಮಾಡುವುದು, ಇದನ್ನು ಕಡಿಮೆ ಮಾಡಬೇಕೆಂಬ ವಿಚಾರದಲ್ಲಿ ಅನೇಕ ಸಾರಿ ಈ ಸಭೆಯಲ್ಲಿ ಚರ್ಚೆ ಬಂದಿದ್ದಾಗ ಸರಕಾರದವರು ಅವರಿಗೆ ಸೂಕ್ತ ತೋರಿದ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಕೆಲವು ಮುಖ್ಯವಿಷಯಗಳಲ್ಲಿ ಸ್ವಲ್ಪ ನಿಧಾನವಾಗಬಹುದು. ಆದರೆ ದರಖಾಸ್ತು ರಿಕಾರ್ಡ್, ಕುಡಿಯುವ ನೀರಿನ ಭಾವಿಗಳು, ತಕರಾರು ತಃಖ್ತೆಗಳು ಮುಂತಾದುವುಗಳ ವಿಚಾರದಲ್ಲಿ ನಿಧಾನವಾಗಬಾರದು. ಇಂಥ ವಿಚಾರದಲ್ಲಿಯೂ ಸಹ ಬಹಳ ನಿಧಾನವಾಗುತ್ತದೆ. ಇದರಲ್ಲಿ ಸಾಮಾನ್ಯವಾಗಿ, ಶ್ರೀ ಕರಿಯಪ್ಪನವರು ಹೇಳಿದ ಹಾಗೆ, ದರಖಾಸ್ತು ಅರ್ಜಿಯನ್ನು ತಾಲ್ಲೂಕಾಫೀಸಿನಲ್ಲಿ ಕೊಟ್ಟರೆ ಅದು ಆಖೈರಾಗಿ ಇತ್ಯರ್ಥವಾಗಿ ಒಬ್ಬ ಬಡವನಿಗೆ ಎರಡು ಎಕರೆ ಜಮೀನು ಸಿಕ್ಕಬೇಕಾದರೆ ಎರಡು ವರ್ಷವಾಗುತ್ತದೆಯೋ, ಐದು ವರ್ಷವಾಗುತ್ತದೆಯೋ, ಹತ್ತು ವರ್ಷವಾಗುತ್ತದೆಯೋ ಹೇಳುವುದಕ್ಕೆ ಆಗುವುದಿಲ್ಲ. ಒಂದುವೇಳೆ ಅಕಸ್ಮಾತ್ತಾಗಿ ಆಫೀಸರುಗಳು ಬಡವ ಬದುಕಿಕೊಳ್ಳಲಿ ಎಂದು ಆರ್ಡರ್ ಮಾಡಿದರೆ ಅದರಮೇಲೆ ನೂರಿಪ್ಪತ್ತಾರು ಅಪೀಲುಗಳು ಬರುತ್ತವೆ. ಅಥವಾ ಈ ಎರಡು ಎಕರೆ ಜಮೀನಿಗೆ ಸಾಗುವಳಿ ಚೀಟಿ ಕೊಡುವುದರೊಳಗಾಗಿ ಸರಕಾರದಿಂದ stay order ಬರುತ್ತವೆ. ಏತಕ್ಕೋಸ್ಕರ ಈ ರೀತಿಯಾಗುತ್ತಿದೆ ಎಂದು ನೋಡಿದರೆ ಒಂದು ಕಡೆ ನಮಗೆ ತಿಳಿದ ಮಟ್ಟಿಗೆ ಇಂಥ routine matters ನಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಮಗಿರುವ ಅಧಿಕಾರವನ್ನು ಸಂಪೂರ್ಣವಾಗಿ ಚಲಾಯಿಸುವುದಕ್ಕೆ ಅವಕಾಶ ಕೊಡದೆ ಸರಕಾರದವರು ಮಧ್ಯೆ interfere ಮಾಡುವುದು ಒಂದನೆಯದು. ಎರಡನೆಯದು, ಶ್ರೀ ಕರಿಯಪ್ಪ ಅವರು ಹೇಳಿದ ಹಾಗೆ ಮಧ್ಯದಲ್ಲಿರುವ ಪುಡಾರಿಗಳು ಅಥವಾ ಪೊಟ್‌ಲಾಯರುಗಳಂಥವರು ಕೈಹಾಕಿ ಪ್ರತಿಯೊಂದು ಹಂತದಲ್ಲಿಯೂ ತಪ್ಪಿಸುವುದಕ್ಕೆ ಪ್ರಯತ್ನ ಪಡುವುದು. ಮೂರನೆಯದ್ದು ಏನೆಂದರೆ, decentralisation of powers ಇರಬೇಕು ಎಂದು ಕಳೆದ ಐದುವರ್ಷಗಳಿಂದಲೂ ಅನೇಕರು ಸರಕಾರದವರ

(ಶ್ರೀ ಎಂ. ಚಿಕ್ಕಲಿಂಗಯ್ಯ)

ಗಮನಕ್ಕೆ ತಂದಿದ್ದಾರೆ. Decentralisation of powers ಎನ್ನುವುದನ್ನು ಸರಕಾರದವರು ಅರ್ಥ ಮಾಡಿಕೊಂಡಿದ್ದಾರೆಯೋ ಅಥವಾ ಅವರಿಗೆ ಗೊತ್ತಿಲ್ಲವೋ ಎಂದು ನನಗೆ ಸಂಶಯವಾಗುತ್ತಿದೆ. Decentralisation of powers ಎಂದರೆ ಒಬ್ಬನಿಗೆ ಎರಡು ಎಕರೆ ಜಮೀನು ಕೊಡುವುದು ಇಂಥ ವಿಷಯಗಳಲ್ಲಾದರೂ ಅಧಿಕಾರಿಗಳಿಗೆ ಅಧಿಕಾರ ಕೊಡುವುದು. ಹೀಗೆ ಮಾಡಬೇಕೆಂದು ಅನೇಕ ಸಾರಿ ಹೇಳಿದ್ದೇವೆ. ಒಂದೊಂದು ಸಾರಿ ಹುಜೂರು ಜಮಾಬಂದಿ ಎಂದರೆ ಡೆಪ್ಯುಟಿ ಕಮಿಷನರು ಅಥವಾ ಸಬ್‌ಡಿವಿಜನ್ ಅಧಿಕಾರಿಗಳು ಬಂದು ಜಮಾಬಂದಿ ಮಾಡುತ್ತಾರೆ. ತಾಲ್ಲೂಕು ಜಮಾಬಂದಿಯನ್ನು ತಾಲ್ಲೂಕಿನ ಅಮಲ್ದಾರರು ಮಾಡುತ್ತಾರೆ. ಈ ಜಮಾಬಂದಿ ಕಾಲದಲ್ಲಿ ಆಯಾಗ್ರಾಮಗಳಲ್ಲಿ ಕುಳಿತುಕೊಂಡು ಅಲ್ಲಿಯೇ ಆಯಾ ಗ್ರಾಮಗಳವರ ಅರ್ಜಿಗಳನ್ನು ಫೈಸಲ್ಮಾಡುವ ಪದ್ಧತಿ ಇತ್ತು. ಈರೀತಿ ಹಿಂದಿನ ಕಾಲದಲ್ಲಿ ಜಮಾಬಂದಿ ಮಾಡುತ್ತಿದ್ದರು. ಪ್ರತಿಯೊಂದು ಗ್ರಾಮವನ್ನೂ Executive officer ಆಗಲಿ, ಜಮಾಬಂದಿ ನಡೆಸುವವರಾಗಲೀ ಹಿಂದೆ ಅಜಮಾಯಿಷಿಮಾಡಿ, ಇನ್ಸ್ಪೆಕ್ಷನ್ ಮಾಡಿದ ಹೊರತು ಜಮಾಬಂದಿಯನ್ನು ಗೊತ್ತು ಮಾಡುತ್ತಿರಲಿಲ್ಲ. ಹಿಂದೆ ಇಂಥ ಪದ್ಧತಿ ಇತ್ತು. ಆದರೆ ಈಗ ಹಾಗೆ ಮಾಡುವುದಿಲ್ಲ. ಜಮಾಬಂದಿ ಮಾಡಬೇಕಾದರೂ ಸಹ ಅದನ್ನು ಮಾಡಿದ ಹಾಗೆ ಮಾಡಿ ಮುಗಿಸುತ್ತಾರೆ.

4-30 P.M.

ಈಗ ಅದು ಸಾಧ್ಯವಾಗುವುದಿಲ್ಲ, ಅದಕ್ಕೆ ನಾನಾ ಕಾರಣಗಳಿವೆ, ಅದನ್ನೆಲ್ಲಾ ಇಲ್ಲಿ ಹೇಳಿ ಸರ್ಕಾರದವರನ್ನು ಬೇಸರಪಡಿಸುವುದಿಲ್ಲ. ಆದ್ದರಿಂದ ಆ ಜಮಾಬಂದಿ ಕಾಲದಲ್ಲಿ ಆಯಾಯ ಗ್ರಾಮದಲ್ಲಿರತಕ್ಕ ಆಕಾರ ಕಂಡ ಜಮೀನಿನಲ್ಲಿ ಯಾವ ಯಾವ ಜಮೀನನ್ನು ಸಾಗುವಳಿಗೆ ಕೊಡಬಹುದೂ ಎಂಬ ಪಟ್ಟಿಯನ್ನು ಇಡುತ್ತಾ ಇದ್ದರೂ ಅಲ್ಲದೆ ಆಯಾಯ ಗ್ರಾಮದಲ್ಲಿ ಬೋನಾಫೈಡಿ ಅಗ್ರಿಕಲ್‌ಚರಿಸ್ಟ್ ಯಾರುಯಾರು ಕಷ್ಟಪಟ್ಟು ವ್ಯವಸಾಯ ಮಾಡುತ್ತಾರೆ ಎನ್ನುವ ಪಟ್ಟಿಯನ್ನೂ ಸಹ ಜಮಾಬಂದಿ ಆಫೀಸರ ಮುಂದೆ ಇಡುತ್ತಾ ಇದ್ದರು. ಆ ಕಾಲದಲ್ಲಿ ಯಾರುಯಾರಿಗೆ ಜಮೀನಿಲ್ಲ, ಯಾರುಯಾರು ವ್ಯವಸಾಯ ಮಾಡುವುದಕ್ಕೆ ಲಾಯಕ್ಕಾಗಿದ್ದಾರೆ ಎಂಬ ಸಮಾಚಾರವನ್ನು ತರಿಸಿಕೊಂಡು ವ್ಯವಸಾಯ ಮಾಡಲು ಲಾಯಕ್ಕಾಗಿರತಕ್ಕ ಮನುಷ್ಯನಿಗೆ ಜಮೀನು ಕೊಟ್ಟರೆ ಅವನು ಜಮೀನು ಸಾಗುವಳಿಮಾಡಿ, ತನ್ನ ಜೀವನವನ್ನು ನಡೆಸಿಕೊಳ್ಳುತ್ತಾನೆ ಎನ್ನುವ ತತ್ವದ ಮೇಲೆ ಆತನಿಗೆ ಜಮೀನು ಕೊಡಬೇಕೆಂದು ಹಿಂದೆ ಇದ್ದ ಬ್ಯೂರೋಕ್ರಾಟಿಕ್ ಗವರ್ನ್ಮೆಂಟಿನವರು ರೂಲ್ಸ್, ರೆಗ್ಯುಲೇಷನ್ ಮಾಡಿದ್ದರು. ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಮಾಡಿ. ಅದರಿಂದ ಬಡಜನರಿಗೆ ನ್ಯಾಯ ದೊರಕುತ್ತದೆ ಎಂದು ಈ ಐದು ವರ್ಷದಿಂದ ಹೇಳಿ ಹೇಳಿ ಬೇಸತ್ತಾಯಿತು.

ಉಪಾಧ್ಯಕ್ಷರು.—ಇತ್ತೀಚೆಗೆ, ದರಖಾಸ್ತು ರೂಲ್ಸ್ ತಿದ್ದುಪಡಿ ಮಾಡಿ ಲೋಕಲ್ ಆಫೀಸರುಗಳಿಗೆ ಸ್ವಲ್ಪ ಹೆಚ್ಚಿನ ಅಧಿಕಾರ ಕೊಟ್ಟಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದರಲ್ಲಿ ಎರಡು ತರಹ ಇದೆ. ಸಬ್‌ಡಿವಿಜನ್ ಆಫೀಸರು 2 ಎಕರೆ, 4 ಎಕರೆ ಕೊಡಬಹುದೆಂದು ನಿಗದಿ ಮಾಡಿದ್ದಾರೆ. ಅದನ್ನು ನಾನು ಹೇಳುವುದಿಲ್ಲ. ವಿಲೆ ಮಾಡುವಾಗ ದರಖಾಸ್ತು ರೆಕಾರ್ಡ್ ಬಿಲ್ಡ್‌ಅಪ್ ಮಾಡುವುದರಲ್ಲಿ ನಿಧಾನವಾಗುತ್ತಿದೆ. ಒಂದು ವಿಷಯ ತಮ್ಮ ಗಮನಕ್ಕೆ ತರುವುದಾದರೆ ಒಬ್ಬ ಬಡ ಮನುಷ್ಯ ಒಂದು ಜಮೀನಿಗೆ ಅರ್ಜಿಕೊಟ್ಟರೆ ಆ ಅರ್ಜಿ ಶೇಕದಾರರ ಹತ್ತಿರ ಹೋಗುತ್ತದೆ. ಅವರು ಗ್ರಾಮಾಂತರದಲ್ಲಿ ಹೋಗಿ ಅವರನ್ನು ಕಂಡು, ನಿನ್ನ ಅರ್ಜಿ ಬಂದಿದೆ, ನೀನು ಕೇಳಿದ ಜಮೀನನ್ನು ಸರಕಾರದವರು ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ ಎಂದು ಹೇಳಿ ಬಂದಿರುತ್ತಾರೆ. ಅನಂತರ ಗ್ರಾಮದಲ್ಲಿ ಅದಕ್ಕೆ ಯಾರದಾದರೂ ತಕರಾರು ಇದೆಯೋ ಎಂದು ಹತ್ತಾರು ಜನರನ್ನು ಕೇಳುವಾಗ, ಬೊಮ್ಮಯ್ಯ ಅಬ್ಜೆಕ್ಷನ್ ಹಾಕಿದ್ದಾನೆ, ರೆಕಾರ್ಡ್ ಬಿಲ್ಡ್‌ಅಪ್ ಮಾಡಿ ಎಂದು ಹೇಳಿದ್ದಾರೆ, ಬೊಮ್ಮಯ್ಯನಿಗೆ 4 ಎಕರೆ ಜಮೀನು ಮಂಜೂರಾಗಿದೆ, ಇದನ್ನು ಕೊಡಬಹುದೆ ಎಂದು ಕೇಳುತ್ತಾರೆ. ಆಗ ಯಾರಾದರೂ ಒಬ್ಬರು, ಎಲ್ಲಾದರೂ ಉಂಟೇ, ಸ್ವಾಮಿ, ಆಮೇಲೆ ನಮ್ಮ ಜಮೀನು ಉಳುವವರು ಯಾರು ? ಎಂದು ಹೇಳಿ ಕೊಕ್ಕೆ ಹಾಕಿದರೆ ಮುಗಿಯಿತು. ಆ ಜಮೀನು ಕೊಡುವುದಕ್ಕಾಗುವುದಿಲ್ಲ, ಬೇರೆ ಜಮೀನು ನೋಡಿ ಅರ್ಜಿ ಹಾಕು, ಕೊಡುತ್ತೇವೆ ಎಂದು ಹೇಳಿ ಬಿಡುತ್ತಾರೆ. ಮೊದಲು ಕೊಡುತ್ತೇವೆ ಎಂದು ಹೇಳಿ ಆಮೇಲೆ ಕೊಡುವುದಿಲ್ಲ ಎಂದು ಹೇಳಿದರೆ ಎಷ್ಟು ನಿರಾಶೆ ಯಾಗುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಅಂಥ ಸಂದರ್ಭದಲ್ಲಿ ಜಿಜ್ಞಾಸೆಗೆ ಅವಕಾಶ ಕೊಡದಂತೆ ವಿಲೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಅದಕ್ಕೆ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಆಗಬೇಕು. ಹಾಗಾದರೆ ಬಡಜನರಿಗೆ ನ್ಯಾಯ ದೊರಕುತ್ತದೆ. ವಿಲೇ ಆಗುವುದು ನಿಧಾನ ವಾಗುತ್ತದೆ, ಅದನ್ನು ತಪ್ಪಿಸಬೇಕು ಎಂದು ಹೇಳಿ ಅದನ್ನು ಇಲ್ಲಿಗೇ ಬಿಡುತ್ತೇನೆ.

ಎರಡನೆಯದು ಅಕ್ವಿಸಿಷನ್ ಕೇಸಿನ ವಿಚಾರ. ಅದು ತಮಗೆ ಗೊತ್ತಿದೆ. ಗ್ರಾಮ ಬಡಾವಣೆ ಕೇಸುಗಳು 15–20–25 ವರ್ಷದಿಂದ ಪೆಂಡಿಂಗ್ ಇದೆ. ಇದಕ್ಕೆ ಕಾರಣ ಏನು ಎನ್ನುವುದು ತಮಗೆಲ್ಲಾ ಅರ್ಥವಾಗಿದೆ. ಒಂದುಸಾರಿ ಒಂದು ಗ್ರಾಮದ ಬಡಾವಣೆ ಆಗಬೇಕಾಗಿದ್ದರೆ ಅದಕ್ಕೆ ಅರ್ಜಿ ಹಾಕಿ, ರೆಕಾರ್ಡ್ ಬಿಲ್ಡ್‌ಅಪ್ ಆಗಿ, ವ್ಯಾಲ್ಯುಯೇಷನ್ ಪ್ರಕಾರ ಹಣ ಕಟ್ಟಿರುತ್ತಾರೆ. ಗೆಜೆಟ್ ನೋಟಿಫಿಕೇಷನ್ ಆಗಿ ಸೈಟ್ ಅಲಾಟ್ ಮಾಡಬಹುದು ಎಂದ ಮೇಲೆ, ಯಾರೋ ಆ ಜಮೀನಿನಲ್ಲಿ ಆಸಕ್ತಿ ಇರುವವರು ಆ ರೀತಿ ಆಗ ಕೂಡದು ಎಂದು ಹೇಳಿ ಸ್ಟೇಆರ್ಡರ್ ತರುತ್ತಾರೆ. ರೆಕಾರ್ಡ್ ಬಿಲ್ಡ್‌ಅಪ್ ಆಗಿ, ಡಿ. ಸಿ. ಯವರ ಶಿಫಾರಿಸಿನ ಮೇಲೆ ಸರ್ಕಾರದ ಮಂಜೂರಾತಿ ಪಡೆದಿರತಕ್ಕ ಅಕ್ವಿಸಿಷನ್ ಕೇಸಿನಮೇಲೆ ಮತ್ತೆ ಸರ್ಕಾರದವರೇ ಸ್ಟೇಆರ್ಡರ್ ಕೊಡುವುದು ಎಂದರೆ ಏನು ಸ್ವಾಮಿ ? ಈ ರೀತಿ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸ್ಟೇಆರ್ಡರ್ ಕೊಟ್ಟಿರುವ ಕೇಸುಗಳು ಎಷ್ಟು ಇವೆ ಎಂಬುದನ್ನು ತಾವು ದಯೆಯಿಟ್ಟು ನೋಡಿ.

ಮೂರನೆಯದು ಒಂದು ಕುಡಿಯುವ ನೀರಿನ ಬಾವಿಗೆ ಮಂಜೂರಾತಿ ಕೊಟ್ಟಿರುತ್ತಾರೆ. ಅದನ್ನು ಎಲ್ಲಿ ತೆಗೆಸಬೇಕು ಎನ್ನುವುದೇ ಒಂದು ದೊಡ್ಡ ಕಷ್ಟ. ಒಂದು ಉದಾಹರಣೆ ಹೇಳುತ್ತೇನೆ. ಮೈಸೂರು ತಾಲ್ಲೂಕಿನಲ್ಲಿ ಒಂದು ಗ್ರಾಮಕ್ಕೆ ಎರಡು ಬಾವಿ ಮಂಜೂರು ಮಾಡಿದರು, ಒಂದು ಬಾವಿ ತೆಗೆದರು ಅದರಲ್ಲಿ ಉಪ್ಪುನೀರು. ಅದು ಸವರ್ಣೀಗಳು ಇದ್ದ ಜಾಗ. ಆದಿಕರ್ನಾಟಕರಿದ್ದ ಜಾಗದಲ್ಲಿ ಇನ್ನೊಂದು ಬಾವಿ ತೆಗೆದರು, ಅದರಲ್ಲಿ ಸಿಹಿನೀರು ಬಂತು. ಅದೇ ನಮಗೆ ಬೇಕು ಎಂದು ಕೇಳಿದರೆ ಆಗುತ್ತದೆಯೋ ?

ನಿಮ್ಮ ದುರದೃಷ್ಟ ಎಂದು ತೀರ್ಮಾನ ಮಾಡಬೇಕಾಯಿತು. ಸ್ಥಳ ನಿಗದಿ ಮಾಡಬೇಕಾದರೆ ಎಷ್ಟೋ ದಿವಸ ತೆಗೆದುಕೊಳ್ಳುತ್ತದೆ.

ಇನ್ನು ತಕರಾರು ತಖ್ತೆ ವಿಚಾರ ಹಿಂದೆ ಎಷ್ಟೋ ಸಾರಿ ಹೇಳಿದ್ದೇನೆ. ತಕರಾರು ತಖ್ತೆ ಪ್ರತಿಯೊಂದು ತಾಲ್ಲೂಕಿನಲ್ಲೂ ಎಷ್ಟು ಪೆಂಡಿಂಗ್ ಇದೆ ಎಂಬುದನ್ನು ತಾವು ನೋಡೋಣವಾಗಲಿ. ಇದರಿಂದ ಒತ್ತುವರಿ ಮಾಡಿಕೊಳ್ಳುವುದು ಹೆಚ್ಚಾಗಿದೆ. ನಾಲ್ಕು ಎಕರೆ ಜಮೀನು ಮಂಜೂರು ಮಾಡಿದ್ದರೆ 25 ಎಕರೆ ಒತ್ತುವರಿ ಮಾಡಿಕೊಂಡಿರುತ್ತಾನೆ. ಇಂಥ ನಿದರ್ಶನ ಎಷ್ಟೋ ಇವೆ. ಉದಾಹರಣೆ ಹೇಳುವುದಾದರೆ ನಾನೇ ಖುದ್ದು ನೋಡಿದ್ದೇನೆ. ಮದ್ದೂರು ತಾಲ್ಲೂಕು ನಿಡಘಟ್ಟ ಗ್ರಾಮದಲ್ಲಿ ಈ ರೀತಿ ಆಗಿದೆ. ಏಳು ವರ್ಷ ಆಯಿತು. ಇಷ್ಟು ನಿಧಾನವಾಗುವುದಕ್ಕೆ ಕಾರಣ ವೇನು ? ಸರ್ಕಾರವೇ ಕಾರಣ ಎಂದು ಹೇಳುತ್ತೇನೆ. ಬಾಕಿ ಅಧಿಕಾರಿಗಳು ಕಾರಣರಲ್ಲ. ಏಕೆಂದರೆ ಯಾವುದೋ ಒಂದು ಸ್ಟೇಜಿನಲ್ಲಿ ಸರ್ಕಾರದವರೇ ದಾಕ್ಷಿಣ್ಯಕ್ಕೆ ಒಳಗಾಗುತ್ತಾರೆ. ಇದರಿಂದ, ದೇಶದಲ್ಲಿ ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆ, ಬಡವರನ್ನು ಕಾಪಾಡುತ್ತೇವೆ ಎಂದು ಹೇಳಿ ಏನು ಆಶ್ವಾಸನೆ ಕೊಡುತ್ತೀರೋ ಅದನ್ನು ಪೂರೈಸುವುದಕ್ಕೆ ತಮ್ಮಿಂದ ಸಾಧ್ಯವಾಗುವುದಿಲ್ಲ. ಜನ ನಿರಾಶರಾಗುತ್ತಾರೆ. ಡಿ. ಸಿ. ಯವರು, ಸಬ್ ಡಿವಿಜನ್ ಆಫೀಸರು ಏನು ಮಾಡುತ್ತಾರೋ ಅದರಲ್ಲಿ ವಿನಾಕಾರಣ ಸರ್ಕಾರದವರು ಕೈ ಹಾಕಬಾರದು ಎಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

*Sri S. SRINIVASA IYENGAR (T.-Narasipur).—I consider this resolution to be very important. This resolution gives a lot of scope to discuss the policy of Government. It is a fact that there has been inordinate delay in the disposal of records. The cause of such inordinate delay has to be analysed. I have gone into this question deeply. To my mind, the causes are as follows.

One is that the records in respect of any case are not built properly in the originating office. For the disposal of any record, it is the originating office that is most important. The originating offices do not build these records properly because those offices are not staffed properly. The staff that are employed in the originating offices have no training. Raw recruits are posted to these offices and records are built up by these raw people. Those records are sent to the highest level and returned once again for completion of records. So much so, these questions will not be disposed of promptly. It is very necessary to see that the originating offices, in all departments, are staffed properly and the staff employed there are trained properly.

Secondly, there are intermediate offices in every department. To illustrate, I would like to quote the land revenue department. The intermediate office is the sub-divisional office between the taluk and the district. Many papers have to pass through the sub-division and the observations made by the Deputy Commissioner have to pass once again through the taluk office to the sub-division office. This intermediate passage takes a lot of time. It is very necessary to see whether the Government could avoid the intermediate stations by enlarging the powers of the originating offices and giving some assistance in the district offices to cope with the volume of correspondence between the taluk and the district. This would be very essential.

The third point I have observed, is, that officers are unwilling to exercise the power already given to them. In more than one case, I have seen that even though the disposal of the record was within the competence of a certain official, he would not do it. He would send it to the higher authorities, soliciting orders. It is because there is an influence. Somebody wants the paper to be submitted to the higher authority, so that it will be returned to the lower authority with an observation or possibly a recommendation. I can give a good number of instances. The Amildar, for example, is competent to dispose of a certain thing, but he will not do it. He wants to shove the responsibility on somebody higher than him. The Sub-Divisional Officer does not do it, because statutorily he has no powers. The Deputy Commissioner is the only authority to deal with the subject. But the volume of correspondence is so big and the staff so little, that he does not function properly. He cannot function properly. The number of working days will be so little, what with tours of Ministers and various other activities. Therefore disposal is delayed.

I can illustrate this point further by taking the P.W.D. The Sub-Divisional Officers in the P.W.D. are empowered to sanction estimates and incur expenditure upto a particular limit. No Sub-Divisional Officer in the P. W. D. is

(SRI S. SRINIVASA IYENGAR.)
exercising that authority. Even for annual repairs, for which he has powers to incur expenditure, he would not do it. His claim is: 'I have no Accounts assistants'. There is nobody to maintain accounts. Such is the case in many other departments. Therefore this question must be examined in detail in every department. I will just quote an example in respect of the Police Department. Now, there is a taluk station, the station house. There is an Inspector, who is in charge of the station house. There is an Inspector in every taluk. The Sub-Inspector deals with a subject, forwards it to the Inspector, who submits it to the Assistant Superintendent of Police, who in turn submits it to the District Superintendent of Police and once again the case goes back for supplying some information which the D. S. P. wants. There is duplication and delay because the organisation itself is defective. I could definitely say that the Office of the Assistant Superintedent of District Police is a superfluity. It is very necessary for the Government to examine every department and see how best it can be re-organised and staffed and how best the powers can be decentralised. Of course, I admit there is danger in decentralisation, but some such step is possible and the question of decentralisation should be gone into.

Again, there is very little co-ordination between departments. The Revenue Department appropriates to itself the feeling that it is the boss of the State. They seem to consider that every other department is simply a part of the Revenue Department. The Revenue Department seems to feel that it is greatly responsible for the administration of the State. That was the case previously. Under the principal heads of revenue, land revenue formed a major portion. Today it is not so—it is relegated to a secondary place. The revenue from other taxes is higher. However, in the days when the British Government were administering the Mysore State, they empowered the Commissioners. The Deputy of the Commissioner was a Deputy Commissioner. That heading is anomalous today; there is neither a Commissioner nor a Deputy Commissioner. When there is no Commissioner, where can there be a Deputy Commissioner ?

AN HON'BLE MEMBER.—There is a Divisional Commissioner.

Sri S. SRINIVASA IYENGAR.—But the Deputy Commissioner is not the deputy of the Divisional Commissioner. This tendency must go. Every department should feel that it is responsible for its job. There cannot be separatist and inferiority complexes between departments. They should feel that they have co-operation among themselves. They must co-ordinate. For everything, the Hon'ble Minister is referred to. The Deputy Commissioner does not take cognizance of cases which are under his purview. Such cases would have to be looked into. A regular research has to be conductedto see how best every department can be made completely self-sufficient and how best it could be impressed on every department that they alone are responsible for the job entrusted to them. It is the departmental head that presents the demands to Government. It is the Government that places the demands before the Legislature. It is the Legislature that approves the demands. Every departmental head must therefore see that the expenditure does not exceed the demand granted by the Legislature. That is the way in which we can avoid placing supplementary demands. I know definitely well that every department does not maintain accounts nor does the accounts maintained tally with the Accountant General's. Therefore there is a tendency to delay.

There is another department, the Land Acquisition Department. Can you imagine that even after 25 years of completion of the K.R.S. Works the Land Acquisition Officer pertaining to the disposal of lands still exists ? Even after 25 years of completion of the Dam many cases still remain undisposed of in the Land Acquisition offices pertaining to K.R.S. I have only quoted just to suggest that land acquisition cases must be dealt with

promptly and disposed of quickly. The owner loses the land and therefore he must be given compensation as quickly as possible. This idea does not seem to impress the Government. There has been inordinate delay. The Land Acquisition Act itself will have to be amended. The Government can certainly do it. These are the factors that contribute to the delay. The wishes of the elected Ministers are being carried to the Originating Officers or to the persons concerned. The Officers seem to believe that, they just exist to earn the favour of the concerned man.

AN HON'BLE MEMBER.—Is it an insinuation ?

Sri S. SRINIVASA IYENGAR.—It is an observation. My only plea is this. Every Officer of the State should realise that he is paid from the public funds; every officer should feel that he is responsible for the action he does. Interference must be minimum; no doubt interference might be necessary in certain cases but it must be minimum.

Lastly, Sri Chickalingiah has already pointed out the custom of having jamabandhi in every taluk. I think this system has been in existence ever since the time of Tippu Sultan. He has issued a Revenue Code. He has laid down certain principles on which the revenue administration of the State should be conducted. But now the jamabandhi is conducted as a mere show. At present the revenue officers go to a village, hold out their books ready for signature, show the place where to sign and put initials. Can we ever imagine such a thing being done ? These are being done because they are more particular of satisfying the requirements of law than justiying the existence of law. I have witnessed about half a dozen jamabandhis. The work is not completed as laid down under the law. It will be completed in form ; books will have the signatures of jamabandhi officers ; but details will not be there. I know a case in 1946 where jamabandhi was completed in half a day and in four or five days the jamabandhi of a whole district was completed. Such a thing must be put an end to. Questions must be faced by the officers competent to do the job in the places where they originate. Then only they can impress on the people that services are responsible to the people.

*Sri M. PALANIYAPPAN (Ulsoor).—Sir, this is a very important resolution which covers almost all the departments and speaks about the efficiency of the administration. There are three kinds of delay as I can see in the disposal of cases. One is at the district level, another in the Offices of the Heads of Departments and the third is at ministerial level. I am not going to speak about the delay at the district level because it has already been referred to by my Hon'ble friends. But I will be failing in my duty if I do not mention that the delay is caused mostly at the level of the Heads of Departments and also at ministerial levels. Sir, nobody in this House should think that I am making any allegations against the Ministry or against Heads of Departments. I am only saying things which we notice today. Starting from the Chief Minister down to the Taluk Office we see there is inordinate delay of work. Records do not move ; works are pending. If an Officer does not like a certain work to be executed, he has got a very clever method of putting some queries which will have no meaning at all. Once they are moved from the Revenue Inspector to the Minister's table, nothing can be done. If the Minister thinks that a particular item of work should be done he will just ask for further report in the matter. The Secretary refers it to the Head of Department, the paper then goes to the Deputy Commissioner, Sub-Division Officer, Amildar and then to the Revenue Inspector. By the time the paper comes again to the Ministers the party would have died or there would be no necessity for the work at all. This is the kind of thing that we are coming across today.

Sir, I would just give an example so far as the lower level is concerned. As you are aware, if we have to use a loud speaker for some function, the permission from the District Superintendent of Police is necessary. If we

(SRI M. PALANIYAPPAN).

apply for licence to-day we will get permission a day after the affair. When a person applies for a licence and goes to the concerned police officers several times, he comes back disappointed with the remarks by the police officers to the effect that either the paper is not found or traced, with the result that the person has to use the loud speaker stealthily and finish the function.

Sri R. MUNISWAMIAH.—On a point of information. How can anybody use loud speaker stealthily?

Sri M. PALANIYAPPAN.—Stealthily means without permission and trying to make the jurisdictional police officers deaf.'

Sir, once a friend of mine wanted to have a religious function at Ebrahim Street. He applied for a licence 15 days earlier but till today he has not been given permission. But any way the function went on well but still the licence is on the way to come. This is the kind of administration that we are experiencing today.

I could give some more examples. There are many schemes that the Corporation wants to execute. The then Government constituted a committee under the chairmanship of Sri N. Madhava Rao, for drawing up schemes for a greater Bangalore. The committee under the able guidance of its Chairman has drafted a beautiful report for the expansion of this beautiful city. The Government seem to have just shelved the entire report and no action seems to have been taken on that. Sir, there is a Slum Clearance Scheme which the Corporation has sent to the Government and even that has not seen the light of day.

5 P.M.

Another pressing problem is, we have been urging the Government to see that supply of water in Bangalore is improved and that reports are examined immediately. But I do not know whether delay is involved in corresponding with the Central Government or whether there is sufficient emphasis lacking on the part of the Government in order to expedite this. The matter has been pending for the past five or six years. The Government say that they should get a loan of one crore of rupees from the Central Government and they direct these people to the Central Government.

Another thing that has been pointed out by Sri V. R. Naidu in his resolution is that unauthorised constructions have come up in large numbers in the Bangalore Corporation area. The Government constituted a committee to go into that matter and find out how much of revenue could be got. I do not know whether the committee has given its report and what action Government has taken. The matter was referred to the Special Amildar, who in turn inspected certain localities and had notices issued; and when eight annas or one rupee was paid by them as revenue, he does not go to the man for another year. There is therefore a lot of delay in disposing of these matters once for all and efficiency is impaired. The Government is not taking interest in these matters.

As my Hon'ble friend Sri Srinivasa Iyengar said, land acquisition records are pending for years. Government does not seem to take any notice of it. There is a lot to be said with respect to the disposal of cases by the Public Service Commission. I am not making any personal allegation. But the mode of disposal of files in that Commission, I would like to bring to the notice of the House. There are many cases pertaining to the disciplinary action in respect of some officers which have been referred to this Public Service Commission. The Anti-corruption Department, after enquiry, frame charges and afterwards the papers are sent to the Public Service Commission for their opinion. There are instances Sir, of such kinds of papers pending with the Public Service Commission for years together. There are some instances where files are referred back to the Government after the retirement of officers. Government does not seem to take any notice about such kind of delay in these things.

I do not know whether I am competent to speak about the disposal of cases in the High Court. As it has

been pointed out in answer to an interpellation, ten Judges should have been appointed, but the Government has completely ignored the appointment of Judges to this High Court. Thereby, there is a lot of delay caused in disposing of cases.

In so many other Departments, we can say records are pending for so many years and thereby a lot of suffering is inflicted on the people. As the mover of this resolution said, the intermediary people or middlemen as they are called who have got a little influence over some officers, have their way in these matters. They make a living out of this. This kind of a thing will definitely speak ill of the administration of the Government. If the Government is to be really effective and efficient in their work, it is for the Chief Minister and other Ministers to take immediate notice of this.

[MR. SPEAKER in the Chair.]

Sir, I would like to point out a few instances of this kind, specially in the Public Works Department. I know that it takes ages for the estimates to be passed in that Department, and by the time the work is actually executed, it takes some more time and finally, the worst part of it is, there is delay in paying the bills to the contractors. Sir, I feel I will not be mistaken if I say that these bills of the contractors are not paid even if they complete their work. It is only on influence that the contractors have to get their payment immediately and not on routine bills.

With these remarks, I wholeheartedly support this Resolution and I thank the Chair for the opportunity given to me.

MR. SPEAKER.—We have to finish this item of business at five o'clock and go to the other item. I therefore request other Hon'ble Members not to take part in this debate and to co-operate with me. I now call upon the Chief Minister to reply.

*SRI S. NIJALINGAPPA (Chief Minister).—Mr. Speaker Sir, I have heard with great interest the various speeches made by the mover and the friends who spoke after him. As I listened to those speeches, I thought it was an attempt to convert the faithful. I entirely agree with the spirit of the resolution, namely, that there is really delay in the disposal of records. So far as the present Government is concerned, it has very little to answer for, because it has been functioning for a very short time. But even during that time, my experience has been that there is inordinate delay and that the delay is due not only to the want of co-operation by the public, but also to a set of circumstances long existing which have contributed to this delay. Therefore, it is, I feel, very necessary for Government to take notice of the existing facts and to find out very early methods of procedure and execution of these things; and unless we review the entire law and procedure and put in more energy into the staff and working machinery, it would be very difficult to avoid delay. I could say that.

Certain remarks were also made by the Hon'ble mover and by Sri M. Chikkalingiah and Sri Srienivasa Iyengar. Sri Chikkalingiah referred particularly to darkhasts and village extensions and *takrar taktes*. I agree with him that there is delay. Specially in regard to village extension, I myself had to complain quite a number of times, when I toured my district as a Member of Parliament; and several cases have been pending for years together. We have been thinking whether it is not possible at all to evolve a method by which these village extensions should be done as early as possible, because just as cities grow, villages also are growing. We are producing population and villages produce as quickly, possibly more quickly than towns, because of poverty and probably because the poor man has no other pleasure or relief than that. So villages are expanding more rapidly and more space is needed for villages than for towns. I have been very seriously considering this matter.

AN HON'BLE MEMBER.—Especially pension papers are delayed very much.

Sri S. NIJALINGAPPA.—It has become very necessary to see that each village gets a particular area set apart and all possible technical delays are avoided. We are very seriously considering this problem and the sooner it is resolved, the better it is. Similarly regarding darkhasts.

Sri Srinivasa Iyengar referred to want of co-ordination. There seems to be certain amount of want of co-ordination between the various departments. It is true. I agree with most of what he said on this aspect, except his statement that tours of Ministers are contributing to the delay. Possibly, he felt that he must say it. Sir, during the last five months, I am sure that in no way has our tour interfered with the work of the officers. In fact, we have made it a rule that whenever we tour, we do so with a specific purpose and we see to it that it does not interfere with the routine work of the officers. We want only the specific officer concerned with the subject to be with us. He also said that—I do not know what his own experience is—that the originating officers looked to the Ministers for inspiration. It is a very sad state of affairs, if it is true. I do not believe it to be true.

